ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಾಮಾನ್ಯ ಮನುಷ್ಯ

(ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ವಿಜಯಶ್ರೀ ಇಟ್ಟಣ್ಣವರ

ಮಾರ್ಗದರ್ಶಕರು
ಡಾ. ವಿಜಯಕುಮಾರ ಕಟಗಿಹಳ್ಳಿಮಠ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩೨೭೬

ಮಾನ್ಯತಾ ಸಂಸ್ಥೆ
ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ
ಸಂಶೋಧನಾ ಕೇಂದ್ರ ಬಾಗಲಕೋಟ - ೫೮೭೧೦೧

753

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಾಮಾನ್ಯ ಮನುಷ್ಯ

(ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ವಿಜಯಶ್ರೀ ಇಟ್ಟಣ್ಣವರ

ಮಾರ್ಗದರ್ಶಕರು
ಡಾ. ವಿಜಯಕುಮಾರ ಕಟಗಿಹಳ್ಳಿಮಠ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583276.

ಮಾನ್ಯತಾ ಸಂಸ್ಥೆ
ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ
ಸಂಶೋಧನಾ ಕೇಂದ್ರ ಬಾಗಲಕೋಟ.

ಪ್ರಮಾಣ ಪತ್ರ

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಾಮಾನ್ಯ ಮನುಷ್ಯ ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ **ಡಾ. ವಿಜಯಕುಮಾರ ಕಟಗಿಹಳ್ಳಿಮಠ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ಸಾಹಿತ್ಯ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಶ್ರೀಮತಿ ವಿಜಯಶ್ರೀ ಇಟ್ಟಣ್ಣವರ
ಸಂಶೋಧಕರು, ಕನ್ನಡ ಸಾಹಿತ್ಯ ವಿಭಾಗ
ಬ.ವಿ.ವ. ಸಂಘದ ಸಂಶೋಧನಾ ಕೇಂದ್ರ
ಬಾಗಲಕೋಟ.
ಮಾನ್ಯತೆ: ಕನ್ನಡ ವಿಶ್ವವಿದ್ಯಾಲಯ ಹಂಪಿ.

ಸ್ಥಳ: ಬಾಗಲಕೋಟ
ದಿನಾಂಕ: ೧೮-೦೧-೨೦೧೨

ಮಾರ್ಗದರ್ಶಕರ ದೃಢೀಕರಣ ಪತ್ರ

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಾಮಾನ್ಯ ಮನುಷ್ಯ ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ಕನ್ನಡ ಸಾಹಿತ್ಯ ವಿಭಾಗ, ಬ.ವೀ.ವಿ.ಸಂಘದ ಸಂಶೋಧನಾ ಕೇಂದ್ರ ಬಾಗಲಕೋಟ, ಮಾನ್ಯತಾ ಸಂಸ್ಥೆ ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ಮೂಲಕ **ಶ್ರೀಮತಿ ವಿಜಯಶ್ರೀ ಇಟ್ಟಣ್ಣವರ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ|| ವಿ. ಎಸ್. ಕಟಗಿಹಳ್ಳಿಮಠ

ಡಾ. ವಿಜಯಕುಮಾರ ಕಟ್ಟಗಿಹಳ್ಳಿಮಠ

ಮಾರ್ಗದರ್ಶಕರು,

ಶ್ರೀ ಬಿ.ವಿ.ವಿ. ಸಂಘದ ... ಸಂಶೋಧನಾ ಕೇಂದ್ರ, ಬಾಗಲಕೋಟ

ಮಾನ್ಯತೆ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ

ಬಾಗಲಕೋಟ.

ಸ್ಥಳ: ಬಾಗಲಕೋಟ

ದಿನಾಂಕ: ೧೮-೦೧-೨೦೧೨

ಮಾನ್ಯತೆ: ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ – ವ್ಯಾಪ್ತಿ – ಮಹತ್ವ

ಅಧ್ಯಯನದ ಉದ್ದೇಶ – ವ್ಯಾಪ್ತಿ – ಮಹತ್ವ

ಪೀಠಿಕೆ:

ಕನ್ನಡ ಬದುಕಿಗೆ ಕನ್ನಡ ಸಂಸ್ಕೃತಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಮತ, ಧರ್ಮ, ಸಮಾಜ, ರಾಜಕೀಯ, ಕಲೆ – ಸಾಹಿತ್ಯ ಮುಂತಾದವುಗಳೆಲ್ಲ ಸಂಸ್ಕೃತಿಯ ಅಂಗವಿಷಯಗಳಾಗಿವೆ. ಈ ಎಲ್ಲವುಗಳನ್ನು ಒಳಗೊಂಡ ಕನ್ನಡ ಸಂಸ್ಕೃತಿಯ ಹರಹು ಆದಿ ಮಾನವನಿಂದ ಹಿಡಿದು ಯಂತ್ರ ಯುಗದ ಮಾನವನವರೆಗೆ ಅಗಾಧವಾಗಿ ವಿಸ್ತರಿಸಿಕೊಂಡಿದೆ. ಕನ್ನಡ ಬದುಕಿಗೆ ಪ್ರಾಗೈತಿಕ ನೆಲೆಯಿಂದಲೂ ಚರಿತ್ರೆಯಿದೆ. ಆದರೆ ದಾಖಲಾತ್ಮಕ ಸಾಹಿತ್ಯ ಅನುಲಕ್ಷಿಸಿದರೆ ಕನ್ನಡ ಸಾಹಿತ್ಯಕ್ಕೆ ಸರಿಸುಮಾರು ಒಂದೂವರೆ ಸಾವಿರ ವರ್ಷಗಳ ಚರಿತ್ರೆ ಇದೆ. ಉಪಲಬ್ಧ ಲಿಖಿತ ಸಾಹಿತ್ಯದ ಆರಂಭದಿಂದ ಅಂದರೆ ಕ್ರಿ. ಶ. ೪೫೦ ರಿಂದ ಇಲ್ಲಿಯವರೆಗಿನ ಕನ್ನಡ ಸಾಹಿತ್ಯದ ಆಂತರ್ಯದಲ್ಲಿ ಹುದುಗಿರುವದೆಲ್ಲ ಕನ್ನಡಿಗರು ಬದುಕಿ ಬಾಳಿದ ಸಂಸ್ಕೃತಿಯೇ. ಕನ್ನಡ ಸಾಹಿತ್ಯಕ್ಕಷ್ಟೇ ಅಲ್ಲ ಎಲ್ಲ ಭಾಷೆಗಳಲ್ಲೂ ಸಾಹಿತ್ಯ ಬದುಕಿನ ಪ್ರತಿಬಿಂಬವೇ ಆಗಿರುತ್ತದೆ. ಅಂತೆಯೇ ಸಂಸ್ಕೃತಿ ಅಧ್ಯಯನದಲ್ಲಿ ಸಾಹಿತ್ಯದ ಅಧ್ಯಯನ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಸಾಹಿತ್ಯ, ಸಂಸ್ಕೃತಿಗಳೆಲ್ಲ ರೂಪು ಪಡೆಯುವದು ಸಮಾಜದಲ್ಲಿನ ಬಹುಸಂಖ್ಯಾತ ವರ್ಗವಾದ ಸಾಮಾನ್ಯನಿಂದಲೇ. ಈ ಸಾಮಾನ್ಯ ವರ್ಗ ಪ್ರಾಚೀನ ಸಾಹಿತ್ಯದ ಕಾಲದಲ್ಲಿ ಮುಂಚೂಣಿಯಲ್ಲಿ ಕಾಣಿಸಿಕೊಳ್ಳಲಿಲ್ಲವಾದರೂ ವಿರಳವಾಗಿ ಶಾಸನ, ಕೃತಿಗಳಲ್ಲಿ ಪ್ರಮುಖ ಅಥವಾ ಗೌಣವಾಗಿ ಕಾಣಿಸಿಕೊಳ್ಳುತ್ತದೆ.

ಶಾಸನಗಳಲ್ಲಿ ಕಂಡುಬರುವ ಜೋಳವಾಳಿ, ವೇಳೆವಾಳಿ, ಲೆಂಕವಾಳಿ, ವೀರಗಲ್ಲಿನ ವೀರರು ಇವರೆಲ್ಲ ಸಾಮಾನ್ಯರೇ. ಇಂಥ ವೀರರ, ತ್ಯಾಗಿಗಳ, ನಿಷ್ಠರ ಅಸ್ಥಿಪಂಜರದ ಮೇಲೆಯೇ ಪ್ರಭುತ್ವ ಗದ್ದುಗೆಯೇರುತ್ತದೆ. ಆದರೆ ಇಂಥ ಸಾಮಾನ್ಯರ ಕುರಿತಾಗಿ ಪ್ರಭುತ್ವಕ್ಕೆ ಕೃತಜ್ಞತೆಯೆಂಬುದಿಲ್ಲ. ಜೊತೆಗೆ ತಮ್ಮ ಶಕ್ತಿಯೇ ಪ್ರಭುತ್ವಕ್ಕೆ ಬುನಾದಿ ಎಂಬ ಪ್ರಜ್ಞೆ ಸಾಮಾನ್ಯನಲ್ಲೂ ಇಲ್ಲದ ಕಾರಣಕ್ಕಾಗಿಯೇ ಇಂಥವರೆಲ್ಲ ಚರಿತ್ರೆಯಲ್ಲಿ ಅಜ್ಞಾತರಾಗಿದ್ದಾರೆ. ಇವರಂತೆಯೇ ಶಾಸನಗಳಲ್ಲಿ ಕಂಡುಬರುವ ಮಾಸ್ತಿಕಲ್ಲಿನ ಮಹಾಸಾಧ್ವಿಯರೂ ಸಾಮಾನ್ಯರೇ. ವೀರರು ರಾಜನಿಗೆ ನಿಷ್ಠರಾಗಿ ಹೋರಾಡಿ ವೀರ ಮರಣವನ್ನಪ್ಪಿದರೆ, ಅವರ ಹೆಂಡತಿಯರು ಪತಿ ನಿಷ್ಠೆಯಲ್ಲಿ ಅವರ ಮರಣದಲ್ಲಿ ಚಿತೆಯನ್ನು ಹಂಚಿಕೊಳ್ಳುವರು. ವೀರರಿಗೆ ರಾಜನಿಷ್ಠೆ ಧರ್ಮವಾದರೆ ಮಹಾಸತಿಯರಿಗೆ ಪತಿನಿಷ್ಠೆಯೇ ಧರ್ಮವಾಗಿದೆ. ಸಾಮಾನ್ಯರ ಮಧ್ಯದಲ್ಲಿನ ಇಂಥ ವ್ಯಕ್ತಿಗಳು ತಮ್ಮ ತ್ಯಾಗ, ಬಲಿದಾನಗಳ ಮೂಲಕ ಸಮಾಜದಲ್ಲಿ ಅಸಾಮಾನ್ಯ ವ್ಯಕ್ತಿತ್ವದ ಪ್ರತೀಕವಾಗಿ ಮಾಸ್ತಿಕಲ್ಲು, ವೀರಗಲ್ಲಾಗಿ ನಿಲ್ಲುವರು.

ಶಾಸನಗಳಲ್ಲಿ ಉಲ್ಲೇಖಗೊಳ್ಳುವ 'ಅಯ್ಯಾವಳಿಯ ಐನೂರ್ವರ್'ಎಂಬ ವರ್ತಕರ ಸಂಘ, ತೆಲ್ಲಿಗರ್, ಕುರುಬರರೊಕ್ಕಲು ಇವೆಲ್ಲ ಜನಸಾಮಾನ್ಯರ ಸಂಘಟನೆಗಳೇ. ಸಾಮಾನ್ಯನು ವ್ಯಷ್ಟಿಸಾಮರ್ಥ್ಯಕ್ಕಿಂತ ಸಮಷ್ಟಿ ಸಾಮರ್ಥ್ಯದಲ್ಲೇ ನಂಬಿಕೆಯುಳ್ಳವನು. ಹಾಗಾಗಿಯೇ ಇವರು ಯಾವಾಗಲೂ ಸಂಘಪ್ರಿಯರು. ಸಾಮಾನ್ಯನ ವ್ಯಕ್ತಿಸಾಮರ್ಥ್ಯ ಪ್ರಭುತ್ವ, ಧರ್ಮ, ಸಮಾಜಯಾವುವೂ ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂಬುದು ಎಷ್ಟು ಸತ್ಯವೋ, ಸ್ವತಃ ಸಾಮಾನ್ಯನಿಗೆ ತನ್ನ ಶಕ್ತಿಯ ಮೇಲೆ ನಂಬಿಕೆಯಿರುವುದಿಲ್ಲ ಎನ್ನುವುದೂ ಅಷ್ಟೇ ಸತ್ಯ.

ಶಾಸನಗಳಲ್ಲಿ ಸಾಮಾನ್ಯರಿಂದಲೇ ಕೂಡಿದ 'ಅಷ್ಟಾದಶ ಪ್ರಜೆ' ಎಂಬ ನ್ಯಾಯಪಂಚಾಯಿತಿಯೂ ಕರ್ನಾಟಕದಲ್ಲಿ ರೂಢಿಯಲ್ಲಿದ್ದುದನ್ನು ಶಾಸನಗಳು ಉಲ್ಲೇಖಿಸುತ್ತವೆ. ಸಾಮಾನ್ಯ ಮನುಷ್ಯರನ್ನೇ

ಒಳಗೊಂಡ ಬೇರೆ ಬೇರೆ ದುಡಿಯುವ ವರ್ಗಗಳನ್ನು ಇಟ್ಟುಕೊಂಡು ಎಲ್ಲರೂ ಸೇರಿ ನ್ಯಾಯ ತೀರ್ಮಾನಿಸುವ ಪದ್ಧತಿಯಿದ್ದುದು ಪ್ರಭುತ್ವ ಕಾಲದಲ್ಲಿ ಅಪರೂಪಕ್ಕೊಮ್ಮೆಯಾದರೂ ಸಾಮಾನ್ಯನ ಕೈಗೊಂದಿಷ್ಟು ನ್ಯಾಯ ತೀರ್ಮಾನಿಸುವ ಅಧಿಕಾರ ದಕ್ಕಿದುದು ಆಶ್ಚರ್ಯದ ಜೊತೆಗೆ ಸಂತೋಷದ ಸಂಗತಿ.

ಶಾಸನಗಳಲ್ಲಿಯಂತೆ ಪ್ರಾಚೀನ ಕೃತಿಗಳಲ್ಲಿಯೂ ಸಹ ಅಲ್ಲೊಮ್ಮೆ ಇಲ್ಲೊಮ್ಮೆ ಸಾಮಾನ್ಯ ಮನುಷ್ಯ ಹಣಕಿ ಹಾಕಿದ್ದಾನೆ. ಪಂಪನ ಲೌಕಿಕ ಕಾವ್ಯವಾದ 'ವಿಕ್ರಮಾರ್ಜುನ ವಿಜಯ'ದಲ್ಲಿ ಕುರುಕ್ಷೇತ್ರ ಯುದ್ಧದ ಹಿಂದಿನ ದಿನ ಯೋಧರ ಮನೆಗಳಲ್ಲಿ ಗಂಡ-ಹೆಂಡಿರ, ನಲ್ಲ ನಲ್ಲೆಯರ ಸಂವಾದಗಳನ್ನು, ಅವರಲ್ಲಿರುವ ಯುದ್ಧದ ಕುರಿತಾಗಿರುವ ಭಯ-ದುಗುಡ, ಒಬ್ಬರಿಗೊಬ್ಬರು ಹೇಳುವ ಧೈರ್ಯ-ಅವರಲ್ಲಿರುವ ಆತ್ಮಸ್ಥೈರ್ಯ ಎಲ್ಲವನ್ನೂ ಪಂಪ ಅತ್ಯಂತ ಮನೋಜ್ಞವಾಗಿ ಒಡಮೂಡಿಸಿದ್ದಾನೆ. ಇಷ್ಟೇ ಅಲ್ಲದೇ ಪಂಪಭಾರತದಲ್ಲಿ ಅನೇಕ ದಾಸಿಯರು, ಶೂದ್ರರು ಮುಂತಾದವರ ಉಲ್ಲೇಖಗಳು-ಕರ್ಣ, ಏಕಲವ್ಯನಂಥ ಪಾತ್ರಗಳು ಸಾಮಾನ್ಯ ಮನುಷ್ಯನ ವಿವಿಧ ಮುಖಗಳನ್ನು ಅನಾವರಣಗೊಳಿಸುತ್ತವೆ.

ಕೆಲವೊಮ್ಮೆ ಒಂದೊಂದು ಸಾಮಾನ್ಯ ಪಾತ್ರಗಳು ಇಡೀ ಕಥೆಗೆ ತಿರುವನ್ನು ಕೊಡುತ್ತವೆ. ರಾಮಾಯಣದಲ್ಲಿನ ಮಂಥರೆ, ಅಗಸರಂಥ ಪಾತ್ರಗಳು ಕಥೆಯ ಬೆಳವಣಿಗೆಗೆ ಕಾರಣವಾಗುವ ಅಷ್ಟಾವಂಕನಂಥ ಪಾತ್ರಗಳು ಕಾವ್ಯದ ಓಟಕ್ಕೆ ಕಾರಣವಾಗುತ್ತವೆ. 'ಭರತೇಶ ವೈಭವ'ದಲ್ಲಿನ ಪ್ರಸಂಗವೊಂದು ಸಾಮಾನ್ಯ ಮತ್ತು ಪ್ರಭುತ್ವ – ಎರಡರ ಮಧ್ಯದ ನಾ ಹೆಚ್ಚು ನೀ ಹೆಚ್ಚು ಎನ್ನುವ ತಿಕ್ಕಾಟವಿರುವುದನ್ನು ಓದುಗನಿಗೆ ತಲುಪಿಸುತ್ತದೆ. 'ಭರತೇಶ ವೈಭವ'ದಲ್ಲಿ ಯುದ್ಧದ ಸಂದರ್ಭದಲ್ಲಿ ರಾತ್ರಿ ರಾಜನ ಬಿಡಾರ ಕಾಯುವ ಕಾವಲುಗಾರರು ರಾಜನಿರುವುದು ನಮ್ಮಿಂದಲೇ. ನಾವಿಲ್ಲದೇ ರಾಜನಿಗೆ ಯಾವುದೇ ಬಲವಿಲ್ಲ ಎಂದು ಮಾತನಾಡಿಕೊಳ್ಳುತ್ತಿರುವುದನ್ನು ಕೇಳಿಸಿಕೊಂಡ ಭರತೇಶ ಯಾವ ಸೈನ್ಯವಿಲ್ಲದಿದ್ದರೂ ಇಡೀ ಭೂಮಂಡಲವನ್ನು ಗೆದೆಯುವ ಶಕ್ತಿ ನನ್ನ ಕಿರುಬೆರಳಿನಲ್ಲಿಯೇ ಇದೆ ಎಂದು ತನ್ನ ಶಕ್ತಿ ಪ್ರದರ್ಶಿಸುವನು. ರಾಜನಾದ ಭರತೇಶ ಸಾಮಾನ್ಯರ ಶಕ್ತಿಯಲ್ಲಿ ಬಲವಿದೆ ಎಂಬ ಸತ್ಯವನ್ನು ನಿರಾಕರಿಸುವುದು, ತನ್ನ ಸಾಮರ್ಥ್ಯದಿಂದಲೇ ರಾಜ್ಯವೆಂದು ಪ್ರತಿಷ್ಠಾಪಿಸುವುದು ಇದೆಲ್ಲ ಪ್ರಭುತ್ವ, ಧರ್ಮ, ಸಮಾಜಗಳು ಸಾಮಾನ್ಯನನ್ನು ನೋಡುವ ದೃಷ್ಟಿಕೋನವನ್ನು ಬಿಂಬಿಸುತ್ತದೆ.

'ಹರಿಹರನ ರಗಳೆ'ಗಳು, 'ರಾಜಶೇಖರ ವಿಳಾಸ'ದಲ್ಲಿನ ತಿರುಕೊಳ ವಿನಾಚಿಯ ಪ್ರಸಂಗ ವಚನಕಾರರ ಸುತ್ತಲಿನ ಕಥೆಗಳು ಮುಂತಾದವುಗಳಲ್ಲಿ ಸಾಮಾನ್ಯ ಮನುಷ್ಯ ಮೇಲುಗೈ ಸಾಧಿಸಿದ್ದನ್ನು ನೋಡುತ್ತೇವೆ. ಕಾರಣ ನಡುಗನ್ನಡ ಸಾಹಿತ್ಯದಲ್ಲಿ ಪ್ರಭುತ್ವ, ಧರ್ಮ ಹಿಂದೆ ಸರಿದು ಜನಸಾಮಾನ್ಯ ಮುಖ್ಯವಾಹಿನಿಗೆ ಬರುತ್ತಾನೆ. ಉದಾಹರಣೆಗೆ ಕೆಂಭಾವಿ ಭೋಗಣ್ಣ ಪ್ರಸಂಗವೊಂದು ಹೀಗಿದೆ. ಒಂದು ದಿನ ಕೆಂಭಾವಿ ಭೋಗಣ್ಣನಿಗೂ ರಾಜನಿಗೂ ತಿಕ್ಕಾಟ ನಡೆಯುತ್ತದೆ. ಕೆಂಭಾವಿ ಭೋಗಣ್ಣ ದುಡಿಯುವ ವರ್ಗವನ್ನೆಲ್ಲ ಸೇರಿಸಿಕೊಂಡು ಊರುಬಿಡುವನು. ಹೀಗೆ ದುಡಿಯುವ ವರ್ಗದ ಜನರೆಲ್ಲ ಊರುಬಿಟ್ಟಾಗ ಆ ಊರು ಅವ್ಯವಸ್ಥೆಯ ಆಗರವಾಗುತ್ತದೆ. ಆಗ ರಾಜನಿಗೆ ಬದುಕಿಗೆ ದುಡಿಯುವ ವರ್ಗಗಳ ಅಗತ್ಯತೆಯ ಅರಿವಾಗಿ ಸಾಮಾನ್ಯರಿಗೆ ಪ್ರಾಶಸ್ತ್ಯ ದೊರೆಯುತ್ತದೆ. ಹೀಗೆ ಪ್ರಾಚೀನ ಕನ್ನಡ ಸಾಹಿತ್ಯದ ಉದ್ದಕ್ಕೂ ವಿರಳವಾದರೂ ಅಲ್ಲಲ್ಲಿ ಸಾಮಾನ್ಯ ಮನುಷ್ಯರ ಉಲ್ಲೇಖಗಳು ಕಾಲದಿಂದ ಕಾಲಕ್ಕೆ ಸಾಮಾನ್ಯರ ಕುರಿತಾಗಿ ಬದಲಾದ ದೃಷ್ಟಿಕೋನ ಮುಂತಾದವು ಕಾಣದೊರೆಯುತ್ತವೆ.

ಉದ್ದೇಶ:

ಆಧುನಿಕ ಪೂರ್ವದ ಕನ್ನಡ ಸಾಹಿತ್ಯವನ್ನು ರೂಪಿಸಿದ ಎರಡು ಬಹುದೊಡ್ಡ ಶಕ್ತಿಗಳೆಂದರೆ ಧರ್ಮ ಮತ್ತು ಪ್ರಭುತ್ವ. ಆರಂಭದಲ್ಲಿ ಪಂಪ, ರನ್ನರಂತಹ ಕವಿಗಳು ತಾವು ಹೇಳಹೊರಟಿರುವದನ್ನು ಲೌಕಿಕ, ಆಗಮಿಕ ಎಂದು ಹೇಳಿಕೊಂಡೇ ಹೊರಟರೆ ನಂತರದ ಕವಿಗಳು ಪ್ರತ್ಯಕ್ಷವಾಗಿ ಹೇಳದಿದ್ದರೂ ತಮ್ಮ ಸಾಹಿತ್ಯದಲ್ಲಿ ಧರ್ಮ ಮತ್ತು ಪ್ರಭುತ್ವವನ್ನೇ ಬಿಂಬಿಸಿದ್ದಾರೆ. ಹಳಗನ್ನಡ ಸಾಹಿತ್ಯದಲ್ಲಿ ಧರ್ಮ ಮತ್ತು ಪ್ರಭುತ್ವಗಳೆರಡೂ ಇನ್ನಿಲ್ಲವೆಂಬಂತೆ ವಿಜೃಂಭಿಸಿದವು. ನಡುಗನ್ನಡ ಸಾಹಿತ್ಯದಲ್ಲಿಯಾದರೂ ಪ್ರಧಾನವಾಗಿದ್ದದ್ದು ಧರ್ಮವೇ. ಜೊತೆಗೆ ಪ್ರಭುತ್ವ ಹಿಂದೆ ಸರಿದು ಸಮಾಜ ಮುಂಚೂಣಿಗೆ ಬಂದದ್ದು ಇಲ್ಲಿಯೇ. ಹೀಗೆ ಇಡೀ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಧರ್ಮ, ಪ್ರಭುತ್ವ, ಸಮಾಜಗಳಲ್ಲೆಲ್ಲ ಕಾಣಸಿಗುವದು ಯಾವುದೋ ಒಂದು ಪ್ರತಿಷ್ಠಿತ ವರ್ಗವೇ. ಅಲ್ಲೆಲ್ಲೂ ನಮಗೆ ಸಾಮಾನ್ಯ ಮನುಷ್ಯ ಕಾಣಿಸುವದೇ ಇಲ್ಲ.

ನಮ್ಮಿಡೀ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ರಾಜ, ರಾಣಿ, ಮಂತ್ರಿ, ಗುರು ಮುಂತಾಗಿ ಸಾಮಾಜಿಕವಾಗಿ ಯಾವುದಾದರೊಂದು ಉನ್ನತ ಸ್ಥಾನದಲ್ಲಿರುವವರು ಮಾತ್ರ ಕಥಾನಾಯಕರಾಗಿದ್ದಾರೆಯೇ ಹೊರತು ಸಾಮಾನ್ಯ ಮನುಷ್ಯನೆಲ್ಲಿಯೂ ಕಥಾ ನಾಯಕನಾಗಿ ಕಾಣದೊರೆಯುವುದಿಲ್ಲ. ಆದರೆ ಕಥೆ – ಕಥಾ ನಾಯಕನಿಗೆ ಪೂರಕವಾಗಿ ಅಥವಾ ಆಸುಪಾಸಿನಲ್ಲಿ ಸುಳಿದಾಡುವ ಸಾಮಾನ್ಯ ಮನುಷ್ಯರೇ ನಮ್ಮ ಅಧ್ಯಯನಕ್ಕೆ ಪ್ರಮುಖರಾಗುತ್ತಾರೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿನ ಇಂಥ ಸಾಮಾನ್ಯ ಮನುಷ್ಯನನ್ನು ಗುರುತಿಸಿ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅವನಿಗೊಂದು ಅಸ್ಮಿತತೆಯನ್ನು ಕಂಡುಕೊಳ್ಳುವದೇ ಈ ಅಧ್ಯಯನದ ಪ್ರಮುಖ ಉದ್ದೇಶ.

ವ್ಯಾಪ್ತಿ:

ಸಾಹಿತ್ಯ ಅಧ್ಯಯನದಲ್ಲಿ ಪ್ರತಿಯೊಂದು ಕಾಲಘಟ್ಟಕ್ಕೂ ತನ್ನದೇ ಆದ ಮಹತ್ವವಿರುತ್ತದೆ. ಪ್ರತಿ ಸಾಹಿತ್ಯ ಕೃತಿಯೂ ತಾನು ನಿರ್ಮಾಣಗೊಂಡ ಕಾಲದ ಸಾಮಾಜಿಕ ಸಂದರ್ಭವನ್ನು ಗರ್ಭೀಕರಿಸಿಕೊಂಡಿರುತ್ತದೆ. ಪ್ರಸ್ತುತ ಅಧ್ಯಯನ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿನ ಸಾಮಾನ್ಯ ಮನುಷ್ಯನನ್ನು ಹುಡುಕಾಡುವದಾಗಿದೆ. ಈ ಮೊದಲೇ ನೋಡಿದಂತೆ ಅಧ್ಯಯನದ ಉದ್ದೇಶ ಸಾಮಾನ್ಯನಿಗೆ ನಿಷ್ಠವಾಗಿ ಸಂಸ್ಕೃತಿಯನ್ನು ಸಾಹಿತ್ಯದ ಮುಖೇನ ಮನರಾಲೋಚಿಸುವಂತೆ ಮಾಡುವದಾಗಿದೆ. ಹೀಗೆಂದಾಗ ಹಿಂದಿನ ಯಾವುದೋ ಒಂದು ರಚನೆಯನ್ನು ಇವೊತ್ತಿನ ಸಂದರ್ಭಕ್ಕನುಗುಣವಾಗಿ ಮರಳಿ ಕಟ್ಟುವದೇ ಆಗಿದೆ. ಇಂದಿನ ಸಾಮಾನ್ಯ ಮನುಷ್ಯನಿಗೆ ಬುನಾದಿಯಾದ ಹಿಂದಿನ ಕಾಲದ ಸಾಮಾನ್ಯ ಮನುಷ್ಯ ಈ ಕಾರಣಕ್ಕಾಗಿಯೇ ಮುಖ್ಯನಾಗುತ್ತಾನೆ. ಇಂಥ ಮನುಷ್ಯ ಮಾದರಿಗಳು ನಮಗೆ ದೊರೆಯುವದು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿಯೇ.

ಪ್ರಾಚೀನ ಕನ್ನಡ ಸಾಹಿತ್ಯವೆಂದರೆ ಆಧುನಿಕ ಪೂರ್ವದ ಒಟ್ಟು ಕನ್ನಡ ಸಾಹಿತ್ಯವೆಂದೇ ಇಲ್ಲಿ ಪರಿಗಣಿಸುತ್ತೇನೆ. ಪ್ರಾಚೀನ ಕನ್ನಡ ಸಾಹಿತ್ಯವನ್ನು ಮತಾನುಸಾರ ಮತ್ತು ಭಾಷಿಕ ನೆಲೆಗಳಲ್ಲಿ ವರ್ಗೀಕರಿಸಿ ವಿಭಾಗ ಮಾಡಿಕೊಳ್ಳಲಾಗಿದೆ. ಮತಾನುಸಾರ ಮಾಡಿಕೊಂಡಿರುವ ವರ್ಗೀಕರಣದಲ್ಲಿ ಪ್ರಭಾವಿ ಮತ್ತು ಪ್ರಾತಿನಿಧಿಕವೆನ್ನಿಸುವ ಒಬ್ಬೊಬ್ಬ ಕವಿಯನ್ನು ತೆಗೆದುಕೊಂಡು ವಿಭಾಗಿಸಲಾಯಿತು. ಆದರೆ ಜೈನ ಪರಂಪರೆಯ ಪಂಪ ಯುಗದಲ್ಲಿ ನಾಗವರ್ಮ, ಚಾವುಂಡರಾಯ, ದುರ್ಗಸಿಂಹನಂಥ ಬ್ರಾಹ್ಮಣ

ಕವಿಗಳಿದ್ದಾರೆ. ವೀರಶೈವ ಪರಂಪರೆಯ ಬಸವಯುಗದಲ್ಲಿ ವಿರೂಪಾಕ್ಷ ಪಂಡಿತ, ಷಡಕ್ಷರದೇವನಂಥ ವೀರಶೈವ ಕವಿಗಳಿದ್ದಾರೆ.

ಭಾಷಾದೃಷ್ಟಿಯಿಂದಲೂ ಅಷ್ಟೇ, ವಚನ ಸಾಹಿತ್ಯದಂಥ ಸುಲಭ ಸಾಹಿತ್ಯ ಹುಟ್ಟಿದ ಬಸವಯುಗದಲ್ಲೇ ಜಗನ್ನಾಥ ವಿಜಯ (ರುದ್ರಭಟ್ಟ), ಗಿರಿಜಾ ಕಲ್ಯಾಣ(ಹರಿಹರ) ದಂಥ ಚಂಪೂ ಕಾವ್ಯಗಳು ಹುಟ್ಟಿಕೊಂಡವು. ಪುರಂದರ ದಾಸ, ಕನಕದಾಸರ ದಾಸ ಸಾಹಿತ್ಯದ ಆಸುಪಾಸಿನಲ್ಲೇ ರಾಜಶೇಖರ ವಿಳಾಸ(ಷಡಕ್ಷರದೇವ)ದಂಥ ಚಂಪೂ ಕಾವ್ಯ ನಿರ್ಮಾಣಗೊಂಡಿದೆ.

ಹೀಗೆ ಕನ್ನಡ ಸಾಹಿತ್ಯ ನಿರ್ಮಿತಿಯಲ್ಲಿ ಸುಮಾರು ಅರ್ಧದಷ್ಟು ಕವಿಗಳು ತಮ್ಮ ತಮ್ಮ ಯುಗದ ಧೋರಣೆಗೆ ಬದ್ಧರಿರುವಂತೆ ತೋರಿದರೂ ಇನ್ನು ಅರ್ಧದಷ್ಟು ಜನ ಆ ಯಾವ ಪ್ರವಾಹಕ್ಕೂ ಸಿಲುಕಿಕೊಳ್ಳದೆ ಸ್ವತಂತ್ರ ರೀತಿಯಲ್ಲಿಯೇ ಪ್ರವಹಿಸಿದ್ದಾರೆ.

ವಸ್ತುವಿನ ಆಯ್ಕೆಯಲ್ಲೂ ಎಲ್ಲಾ ಯುಗದ ಕವಿಗಳು ಒಂದೇ ಧೋರಣೆಯನ್ನು ಅನುಸರಿಸಲಿಲ್ಲ. ಇವರಲ್ಲಿ ಕೆಲವರಿಗೆ ಲೋಕ ದೃಷ್ಟಿ ಮುಖ್ಯವಾದರೆ ಇನ್ನು ಕೆಲವರಿಗೆ ಪುರಾಣ ದೃಷ್ಟಿಯೇ ಮುಖ್ಯವಾಯಿತು. ಆಧುನಿಕ ಪೂರ್ವದ ಲೋಕನಿಷ್ಠ ಕೃತಿಗಳಲ್ಲಿ ಸಮಯ ಪರೀಕ್ಷೆ, ವಚನ ಸಾಹಿತ್ಯ, ದಾಸ ಸಾಹಿತ್ಯ, ಸರ್ವಜ್ಞನ ವಚನಗಳು ಎಂಬಿವು ಪ್ರಮುಖವಾಗಿ ಸೇರಿಕೊಳ್ಳುತ್ತವೆ. ಇವುಗಳಲ್ಲಿ ಸಾಮಾನ್ಯ ಜನ ಜೀವನದ ಪ್ರತಿನಿಧಿಯೆನಿಸುವ ಸಾಮಾನ್ಯ ಮನುಷ್ಯನ ಆಂಶಿಕ ಪರಿಚಲನೆಗಳು ಮಿಳಿತಗೊಂಡಿವೆ. ಸಾಮಾನ್ಯವಾಗಿ ಅಂದಿನವರ ಮತಾಚರಣೆ, ಮೌಢ್ಯಗಳು ಇಂಥಲ್ಲಿ ದೊರೆಯುವದು ಹೆಚ್ಚು. ಇವುಗಳ ಬಗೆಗೆ, ಅಲ್ಲಿಯ ಸಾಮಾನ್ಯರ ತಿಳುವಳಿಕೆ, ಸಂಪ್ರದಾಯಗಳ ಬಗೆಗೆ ಬೇಕಾದಷ್ಟು ಬರಹಗಳು ಈಗಾಗಲೇ ಬಂದಿವೆ. ಆದರೆ ೮೦–೯೦ ಶತಾಂಶದಷ್ಟಿರುವ ಕಥಾ ಮೂಲವಾದ ಪ್ರಾಚೀನ ಕನ್ನಡ ಕೃತಿಗಳಲ್ಲಿ ಸಾಮಾನ್ಯ ಮನುಷ್ಯ ಮುಖ್ಯವಾಹಿನಿಯಲ್ಲಿ ಕಾಣಸಿಗುವುದಿಲ್ಲ. ಇಷ್ಟೊಂದು ದೊಡ್ಡದಾದ ಸಾಹಿತ್ಯದಲ್ಲಿ ನೇಪಥ್ಯಕ್ಕೆ ಸರಿಸಲ್ಪಟ್ಟಿರುವ ಇವರ ಬದುಕು ಯಾವ ಪ್ರಮಾಣದಲ್ಲಿದೆ, ಯಾವ ಸ್ವರೂಪದಲ್ಲಿದೆ ಎಂಬುದನ್ನು ಗುರುತಿಸುವುದಾಗಬೇಕೆಂಬ ಉದ್ದೇಶವಿಲ್ಲಿದೆ.

ಇಡೀ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕಾಣಸಿಗುವ ಸಾಮಾನ್ಯ ಮನುಷ್ಯನ ಅಸ್ತಿತ್ವದ ಸಿಂಹಾವಲೋಕನ ಮಾಡುವದು ಅಧ್ಯಯನದ ಉದ್ದೇಶವಾದರೂ ಇದರ ವ್ಯಾಪ್ತಿ ತುಂಬ ವಿಶಾಲವಾಗುವದರಿಂದ ವಿಷಯಕ್ಕೊಂದು ತಾತ್ವಿಕತೆಯನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಈ ಅಧ್ಯಯನಕ್ಕೆ ಪ್ರಾತಿನಿಧಿಕವಾಗಿ ನಾಲ್ಕು ಕೃತಿಗಳನ್ನು ಮಾತ್ರ ಆಯ್ದುಕೊಳ್ಳಲಾಗಿದೆ.

೧. ವಡ್ಡಾರಾಧನೆ – ಶಿವಕೋಟ್ಯಾಚಾರ್ಯ – ಜೈನ

೨. ಧರ್ಮಾಮೃತ – ನಯಸೇನ – ಜೈನ

೩. ಹರಿಶ್ಚಂದ್ರಕಾವ್ಯ – ರಾಘವಾಂಕ – ವೀರಶೈವ

೪. ಕುಮಾರವ್ಯಾಸಭಾರತ – ಕುಮಾರವ್ಯಾಸ – ವೈಷ್ಣವ

ಹೀಗೆ ಬೇರೆ ಬೇರೆ ಕವಿಗಳ ವಿಭಿನ್ನ ಕಾಲದ ಭಿನ್ನ ಧರ್ಮದ ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಏಕೆಂದರೆ ಬೇರೆ ಬೇರೆ ಧರ್ಮ, ಕಾಲದ ಕೃತಿಗಳು ಆಯಾ ಕಾಲ ಧರ್ಮಗಳು ಸಾಮಾನ್ಯ ಮನುಷ್ಯನನ್ನು ನೋಡಿದ ಪರಿಯನ್ನು ನಿರೂಪಿಸುತ್ತವೆ. ಜೊತೆಗೆ ಇನ್ನೊಂದು ಕಾರಣವೆಂದರೆ ಈ ಕೃತಿಗಳ ಮೂಲ ಆಶಯ ಏನೇ ಆಗಿದ್ದರೂ ಆ ಆಶಯದ ಒಳಗಡೆ ಪ್ರಜ್ಞಾಪೂರ್ವಕವಾಗಿಯೋ

ಅಪ್ರಜ್ಞಾಪೂರ್ವಕವಾಗಿಯೋ ಸಾಮಾನ್ಯ ಮನುಷ್ಯನನ್ನು ಚರ್ಚಿಸುತ್ತವೆ. ಇದೇ ನಾನು ಚರ್ಚಿಸಬೇಕೆಂದಿರುವ ಮುಖ್ಯ ವಿಷಯ.

೧. **ವಡ್ಡಾರಾಧನೆ:** ಪ್ರಧಾನವಾಗಿ ಜೈನ ಧರ್ಮದ ತತ್ವಾದರ್ಶಗಳನ್ನು ಹೇಳುವುದೇ ಈ ಕೃತಿಯ ಆಶಯವಾಗಿದೆ. ಆದರೆ ಈ ಕೃತಿ ಆ ಕಾಲದ ಅತ್ಯಂತ ಸಾಮಾನ್ಯ ಮನುಷ್ಯನಿಂದ ತುಂಬಿದೆ. ಇಲ್ಲಿ ಕಳ್ಳರು, ಸುಳ್ಳರು, ಪಾಪಿಗಳು, ವ್ಯಭಿಚಾರಿಗಳು ಹೀಗೆ ಅತ್ಯಂತ ಸಾಮಾನ್ಯ ಪಾತ್ರಗಳು ಕೃತಿಯ ಉದ್ದಕ್ಕೂ ಇವೆ. ಇಲ್ಲಿಯ ಕಥೆಗಳೆಲ್ಲ ಸಾಮಾನ್ಯ ಮನುಷ್ಯನೊಬ್ಬ ಧರ್ಮ ಮತ್ತು ಮನೋಸ್ಥೈರ್ಯದಿಂದ ಹೇಗೆ ಅಸಾಮಾನ್ಯ ವ್ಯಕ್ತಿಯಾಗುತ್ತಾನೆಂಬುದನ್ನು ಅತ್ಯಂತ ಸಹಜವಾಗಿ ಚಿತ್ರಿಸುತ್ತವೆ.

೨. **ಧರ್ಮಾಮೃತ:** ಇದು ಕೂಡ ಒಂದು ಧಾರ್ಮಿಕ ಕಾವ್ಯವೇ. ಕಾವ್ಯಮುಖೇನವಾಗಿ ಧರ್ಮವನ್ನು ಜನಸಾಮಾನ್ಯರತ್ತ ಕೊಂಡೊಯ್ಯುವ ಪ್ರಯತ್ನವಿಲ್ಲಿದೆ. ಇಲ್ಲಿಯ ಕಥೆಗಳೆಲ್ಲ ಸಾಮಾನ್ಯ ಮನುಷ್ಯನಿಂದಲೇ ತುಂಬಿವೆ. ಧರ್ಮದ ಮೂಲಕವಾಗಿ ಸಾಮಾನ್ಯ ಮನುಷ್ಯನನ್ನು ತನ್ಮೂಲಕ ಸಮಾಜವನ್ನು ಆಕರ್ಷಿಸುವ ತಂತ್ರಗಾರಿಕೆಗೆ ಧರ್ಮಗಳು ಸಾಹಿತ್ಯವನ್ನು ಹೇಗೆ ಬಳಸಿಕೊಳ್ಳುತ್ತಿದ್ದವು ಎನ್ನುವದಕ್ಕೆ ಧರ್ಮಾಮೃತದಂತಹ ಕೃತಿಗಳು ಸಾಕ್ಷಿಯಾಗಿವೆ. ಜೊತೆಗೆ ಧರ್ಮ ತನ್ನ ಅಸ್ತಿತ್ವಕ್ಕಾಗಿ ತನ್ನ ಮೂಲ ನೆಲೆಯಾದ ಸಾಮಾನ್ಯರನ್ನು ಆಶ್ರಯಿಸಿಕೊಂಡೇ ಉಳಿಯುತ್ತವೆ ಮತ್ತು ಬೆಳೆಯುತ್ತವೆ ಎನ್ನುವದು ಸರ್ವವಿದಿತ.

೩. **ಹರಿಶ್ಚಂದ್ರ ಕಾವ್ಯ:** ಇಲ್ಲಿ ಕೇವಲ ರಾಜಾ ಹರಿಶ್ಚಂದ್ರನ ಕಥೆಯಿಲ್ಲ. ರಾಜನಾದ ವ್ಯಕ್ತಿ ದೈವ ವೈಪರೀತ್ಯದಿಂದ ಸಾಮಾನ್ಯನಾಗುತ್ತಾನೆ. ಆದರೆ ತನ್ನ ಮನೋಬಲದಿಂದ, ಸತ್ಯ, ನಿಷ್ಠೆಯಿಂದ ಮತ್ತೆ ಅಸಾಮಾನ್ಯ ವ್ಯಕ್ತಿಯಾಗುತ್ತಾನೆ. ರಾಜನಾಗಿಯೂ ಹರಿಶ್ಚಂದ್ರ, ರಾಣಿಯಾಗಿಯೂ ಚಂದ್ರಮತಿ ಸ್ವೀಕರಿಸುವ ಸಾಮಾನ್ಯತ್ವ ಬಹುಮುಖ್ಯವಾಗುತ್ತದೆ. ಇಲ್ಲಿಯೇ ಬರುವ ಹೊಲತಿಯರ ವಾದದ ಪ್ರಸಂಗದಲ್ಲಿ ಸಾಮಾಜಿಕರು ಅನುಸರಿಸಿಕೊಂಡು ಬಂದ ಮತನಿಷ್ಠ ಮೂಲವಾದ ತರತಮ ಭಾವವನ್ನು ಹೊಲತಿಯರು ಪ್ರಶ್ನಿಸುತ್ತಾರೆ. ಕಾಲಚಕ್ರದಲ್ಲಿ ಸಾಮಾನ್ಯ ಅಸಾಮಾನ್ಯರ ತಿಕ್ಕಾಟದಲ್ಲಿ ಮನುಷ್ಯ ಅನುಭವಿಸುವ ತಲ್ಲಣಗಳ ಮನೋಭೂಮಿಕೆಯಾಗಿ ಈ ಕಾವ್ಯವಿದೆ. ಸತ್ಯ ನ್ಯಾಯವೆನ್ನುವದು ಸಾಮಾನ್ಯನಲ್ಲಿದೆ ಹೊರತು ರಾಜನಲ್ಲ. ಸಾಮಾನ್ಯನನ್ನು ಮುನ್ನೆಲೆಗೆ ತಂದು ಸತ್ಯವನ್ನು ಸಾಮಾನ್ಯನ ಮೂಲಕ ಪ್ರತಿಷ್ಠಾಪಿಸುತ್ತಾನೆ ರಾಘವಾಂಕ.

೪. **ಕುಮಾರವ್ಯಾಸ ಭಾರತ:** ಪ್ರಧಾನವಾಗಿ ಧರ್ಮ ಮತ್ತು ರಾಜನೀತಿಯನ್ನು ಸಾರುವಂತೆ ತೋರುವ ಈ ಕೃತಿ ತನ್ನೊಡಲಲ್ಲಿ ಮನುಷ್ಯ ಧರ್ಮವನ್ನು ಸಾರುತ್ತದೆ. ಈ ಕಾರಣಕ್ಕಾಗಿಯೇ ನಾನಾ ತೆರನಾದ ಮನುಷ್ಯ ಪಾತ್ರಗಳನ್ನು ಈ ಕೃತಿಯಲ್ಲಿ ಕಾಣುತ್ತೇವೆ. ಇಲ್ಲಿ ಎರಡು ತೆರನಾದ ಸಾಮಾನ್ಯ ಮನುಷ್ಯರನ್ನು ಗುರುತಿಸಬಹುದು.

ಗೋಗ್ರಹಣದ ಗೋಪಾಲಕರಂಥವರು, ಸೈನಿಕರು, ಸಾರಥಿಗಳು ಇವರೆಲ್ಲ ಸಾಮಾನ್ಯ ಮನುಷ್ಯರಾದರೂ ಯುಗ ಧರ್ಮಕ್ಕನುಗುಣವಾಗಿ ಮಾಡುವ ತ್ಯಾಗ, ಬಲಿದಾನಗಳಂಥ ಕ್ರಿಯೆಗಳಿಂದಲೇ ಅಸಾಮಾನ್ಯರಾಗುತ್ತಾರೆ. ಈ ಕಾವ್ಯದಲ್ಲಿ ಬರುವ ವಿದುರನ ಪಾತ್ರ ಮತ್ತು ಅವನು ಹೇಳುವ ವಿದುರ ನೀತಿ ನಿರಂತರ ಸಾಮಾನ್ಯನ ಪ್ರತಿನಿಧಿಯಾಗಿವೆ. ಹೀಗೆ ಕುಮಾರವ್ಯಾಸ ಭಾರತ ಸಾಮಾನ್ಯನ ಅನೇಕ ಮುಖಗಳನ್ನು ವೈವಿಧ್ಯಮಯವಾಗಿ ಚಿತ್ರಿಸುತ್ತದೆ.

ಈ ತೆರನಾಗಿ ನಾಲ್ಕೂ ಕೃತಿಗಳು ಸಾಮಾನ್ಯ ಮನುಷ್ಯನ ಅಧ್ಯಯನದ ಉದ್ದೇಶ ಈಡೇರಿಕೆಯಲ್ಲಿ ಮಹತ್ವದ ಕೃತಿಗಳಾಗಿವೆ. ಸಾಮಾನ್ಯ ಮನುಷ್ಯನ ಪರಿಕಲ್ಪನೆಯನ್ನು ಆಧಾರವಾಗಿಟ್ಟುಕೊಂಡು ಕನ್ನಡದ ಪ್ರಾಚೀನ ಕೃತಿಗಳ ಅಧ್ಯಯನ ಮಾಡುವದರ ಮೂಲಕ ೧೫೦೦ ವರ್ಷಗಳ ಸಾಮಾನ್ಯ ಬದುಕನ್ನು ಕಟ್ಟಿ ಕೊಡುವ ಪ್ರಯತ್ನವಿದಾಗಿದೆ.

ಈ ನಾಲ್ಕು ಪ್ರಾತಿನಿಧಿಕ ಕೃತಿಗಳಲ್ಲಿ ತೋರುವ ಸಾಮಾನ್ಯ ಮನುಷ್ಯನನ್ನು ನಾಲ್ಕು ನೆಲೆಗಳಲ್ಲಿ ಗುರುತಿಸಲಾಗಿದೆ.

ರಾಜಪ್ರಭುತ್ವ ನೆಲೆ: ಪ್ರಾಚೀನ ಕಾಲದಿಂದಲೂ ಕನ್ನಡ ಸಾಹಿತ್ಯಕ್ಕೂ ಮತ್ತು ಪ್ರಭುತ್ವಕ್ಕೂ ಬಿಡಿಸಲಾಗದ ಸಂಬಂಧವಿದೆ. ಬಹುಪಾಲು ಪ್ರಾಚೀನ ಕನ್ನಡ ಸಾಹಿತ್ಯ ರೂಪುಗೊಂಡಿದ್ದು ಪ್ರಭುತ್ವದ ಆಶ್ರಯದಲ್ಲೇ. ಹಾಗೆಂದ ಮಾತ್ರಕ್ಕೆ ಕನ್ನಡ ಸಾಹಿತ್ಯ ಪ್ರಭುತ್ವದ ಅಡಿಯಾಳಾಗಿತ್ತೆಂದಲ್ಲ; ಆಶ್ರಿತವಾಗಿದೆ. ಈ ಕಾರಣಕ್ಕಾಗಿಯೇ ನಮ್ಮ ಸಾಹಿತ್ಯದ ಆಶಯಗಳು ಕಾಲದಿಂದ ಕಾಲಕ್ಕೆ ಬದಲಾಗಿವೆ. ಪ್ರಭುತ್ವವೆನ್ನುವದು ಜನರಿಂದಲೇ ರೂಪಗೊಂಡಿದ್ದು. ಆದರೆ ಪ್ರಭುತ್ವ ಪ್ರತಿಷ್ಠಾಪಿತಗೊಂಡ ನಂತರ ಜನರನ್ನು ಪರಿಗಣಿಸದೇ ಅವರನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಸದಾ ಪ್ರಯತ್ನಿಸುತ್ತಿರುತ್ತದೆ. ಸಾಮಾನ್ಯರೇ ಪ್ರಭುತ್ವದ ಶಕ್ತಿಯಾಗಿದ್ದರೂ ಅವರನ್ನು ಕಡೆಗಣಿಸಲಾಗುತ್ತದೆ. ಸಾಮಾನ್ಯರ ಆಶೋತ್ತರಗಳಿಗೆ ಪ್ರಭುತ್ವದ ಸ್ಪಂದನೆ ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಪ್ರಭುತ್ವವಿರುವದೇ ಸಾಮಾನ್ಯರಿಗೋಸ್ಕರ, ಸಾಮಾನ್ಯರಿದ್ದಾಗಲೇ ಅದರ ಅಸ್ತಿತ್ವಕ್ಕೊಂದು ನೆಲೆ, ಬೆಲೆ.

ಧಾರ್ಮಿಕ ನೆಲೆ: ಯಾವುದೇ ಧರ್ಮ ಸಾಮಾನ್ಯನ ಮನ್ನಣೆಯಿಂದಲೇ ಅಸ್ತಿತ್ವ ಪಡೆಯುತ್ತದೆ. ಆದರೆ ಧರ್ಮ ಬಲಗೊಳ್ಳುತ್ತಲೇ ಅದು ಸಾಮಾನ್ಯನನ್ನು ನಿಯಂತ್ರಿಸಲಾರಂಭಿಸುತ್ತದೆ. ಮನುಷ್ಯಬದುಕನ್ನು ಉದ್ಧರಿಸುವದು ಧರ್ಮದ ಪ್ರಧಾನ ಗುರಿ. ಆದರೆ ಯಾವುದೇ ಧರ್ಮ ಬಲಗೊಂಡಷ್ಟು ಸಮಾಜ, ಸಾಮಾನ್ಯರ ಮೇಲಿನ ಹಿಡಿತ ಬಿಗಿಗೊಳ್ಳುತ್ತ ಸಾಗುತ್ತದೆ. ಯಾವುದೇ ಧರ್ಮ ಮೇಲ್ನೋಟಕ್ಕೆ ಸಾರ್ವತ್ರಿಕವಾಗಿ ಕಂಡುಬಂದರೂ ಪ್ರತಿಯೊಂದು ಧರ್ಮ ತನ್ನದೇ ಆದ ಜನವರ್ಗವನ್ನು ಹೊಂದಿರುತ್ತದೆ. ಆ ವರ್ಗಕ್ಕೆ ಬೇಕಾದ ರೀತಿಯಲ್ಲಿ ಧರ್ಮವನ್ನು ರೂಪಿಸುತ್ತಿರುತ್ತದೆ.

ಧರ್ಮ ಯಾವಾಗಲೂ ಆಳುವ ವರ್ಗದ ಹಿತಾಸಕ್ತಿಗಳನ್ನು ಕಾಪಾಡುವ ನಿಟ್ಟಿನಲ್ಲೇ ಪ್ರತಿಷ್ಠಾಪಿತಗೊಂಡಿರುತ್ತದೆ. ಜೊತೆಗೆ ಧಾರ್ಮಿಕ ನಿಯಂತ್ರಣ ಯಾವತ್ತೂ ಆಳುವ ವರ್ಗದ ಹಿಡಿತದಲ್ಲೇ ಇರುತ್ತದೆ. ಆದರೆ ಮೂಲತಃ ಧರ್ಮದ ಬೇರುಗಳು ಗಟ್ಟಿಗೊಳ್ಳುವದು ದುಡಿಯುವ ವರ್ಗದ ಜನರಲ್ಲಿ. ಇದರ ಕಲ್ಪನೆಯೇ ಇಲ್ಲದ ಕೆಳ ಸಮುದಾಯಗಳಿಗೆ ಎಲ್ಲ ಧರ್ಮಗಳೂ ಅವರ ಪರವಾಗಿದ್ದಂತೆ ಭ್ರಮೆಯನ್ನು ಹುಟ್ಟಿಸುತ್ತವೆ. ಆ ಭ್ರಮೆಯ ಕಾರಣಕ್ಕಾಗಿಯೇ ದುಡಿಯುವ ವರ್ಗದ ಕೆಳಸಮುದಾಯಗಳೇ ಧರ್ಮದ ಶಕ್ತಿಕೇಂದ್ರಗಳಾಗಿದ್ದರೂ ತಮ್ಮ ಶಕ್ತಿಯ ನಿಯಂತ್ರಣವನ್ನು ತಮಗರಿವಿಲ್ಲದಂತೆ ಮೇಲ್ವರ್ಗಕ್ಕೆ ರವಾನೆ ಮಾಡಿವೆ.

ಸಾಮಾಜಿಕ ನೆಲೆ: ಸಾಮಾನ್ಯ ಮನುಷ್ಯನ ಕೇಂದ್ರ ಕ್ಷೇತ್ರವೇ ಸಮಾಜ. ಸಾಮಾನ್ಯನೊಬ್ಬನ ಬದುಕನ್ನು ಸಮಾಜವೇ ನಿರ್ಧರಿಸುತ್ತದೆ ಮತ್ತು ನಿಯಂತ್ರಿಸುತ್ತದೆ. ಪ್ರಭುತ್ವವಾಗಲೀ, ಧರ್ಮವಾಗಲೀ ಸಾಮಾನ್ಯನಿಗೆ ಸಾಮಾಜಿಕ ವ್ಯವಸ್ಥೆಯ ಭಾಗವಾಗಿಯೇ ಅವನ ಬದುಕನ್ನು ಆವರಿಸುತ್ತವೆ. ಸಾಮಾನ್ಯ ಮನುಷ್ಯವರ್ಗವೇ ಸಮಾಜದ ಬಹುಮುಖವಾದ ಅಂಗ. ಪ್ರಭುತ್ವ, ಧರ್ಮ, ಜಾತಿಯಂತಹ ಯಾವುದೇ ಸಾಮಾಜಿಕ ವ್ಯವಸ್ಥೆ ರೂಪುಗೊಳ್ಳುವದು ಸಾಮಾನ್ಯ ಮನುಷ್ಯನನ್ನು ಕೇಂದ್ರೀಕರಿಸಿಕೊಂಡೇ. ಸಾಮಾನ್ಯನಿಲ್ಲದ ಯಾವುದೇ

ಸಾಮಾಜಿಕ ವ್ಯವಸ್ಥೆಗೆ ಅಸ್ತಿತ್ವವಿರುವದಿಲ್ಲ. ಸಾಮಾನ್ಯ ಮನುಷ್ಯನೇ ಸಮಾಜದ ಶಕ್ತಿ ಕೇಂದ್ರ. ಸಾಮಾಜಿಕ ನೆಲೆಯಲ್ಲಿ ನಾವು ಕಂಡುಕೊಳ್ಳುವ ಸಾಮಾನ್ಯರೆಲ್ಲರ ರೀತಿ–ನೀತಿ, ಆಚಾರ–ವಿಚಾರಗಳಂತಹ ಅನೇಕ ವಿಷಯಗಳು ಆಯಾ ಕಾಲದ, ಆಯಾ ಸಮಾಜದ ಪ್ರತಿಬಿಂಬವಾಗೇ ಇರುತ್ತವೆ. ಇಂತಹ ಸಾಮಾಜಿಕ ವಿಷಯಗಳ ಹಲವು ಮುಖಗಳನ್ನು ಸಾಮಾಜಿಕ ವಲಯದಲ್ಲಿನ ಸಾಮಾನ್ಯ ಮನುಷ್ಯನಲ್ಲಿ ಕಂಡುಕೊಳ್ಳಬಹುದು.

ಸಾಂಸ್ಕೃತಿಕ ನೆಲೆ: ಸಾಂಸ್ಕೃತಿಕ ನೆಲೆಯಲ್ಲಿ ಜನಸಮುದಾಯದ ಒಟ್ಟು ಬದುಕು ಕಟ್ಟಿಕೊಳ್ಳುತ್ತದೆ. ಸಂಸ್ಕೃತಿಯ ಪ್ರಧಾನಾಂಶಗಳಲ್ಲಿ ಜನಸಾಮಾನ್ಯರೇ ಪ್ರಮುಖ ಪಾತ್ರಧಾರಿಗಳು. ಜನಸಾಮಾನ್ಯರೇ ಸಂಸ್ಕೃತಿಯ ರೂವಾರಿಗಳು. ವೃತ್ತಿ, ಕಲೆ, ಕ್ರೀಡೆ, ಸಂಪ್ರದಾಯ ಆಚರಣೆಗಳೆಲ್ಲ ಕುಟುಂಬದ ಒಳಗೂ ಹೊರಗೂ ನಡೆಯುವ ವಿದ್ಯಾಮಾನಗಳು. ಯುದ್ಧದಂಥ ವಿಷಯವೂ ಕೂಡ ಸಾಂಸ್ಕೃತಿಕ ನೆಲೆಯಲ್ಲಿ ತೋರುವಂತಹದು. ಯುದ್ಧತೀರ್ಮಾನ ಅರಸರದು ಎನ್ನುವುದನ್ನು ಬಿಟ್ಟರೆ ರಣಭೂಮಿಯಲ್ಲಿಯ ಹೋರಾಟ, ಯುದ್ಧದ ಸೋಲು ಗೆಲವು ಎಲ್ಲವೂ ಸಾಮಾನ್ಯ ವರ್ಗದಿಂದ ಬಂದ ಸೈನಿಕರಿಗೇ ಸಂಬಂಧಪಟ್ಟುದು. ಬಹಳವಾದರೆ ರಾಜನೋ ದಂಡಾಧೀಶರಂಥ ಅಧಿಕಾರಿಗಳೋ ಉಸ್ತುವಾರಿಯನ್ನು ಮಾಡಬಹುದು. ಜನರ ಜೀವನ ವಿಧಾನ ಮತ್ತು ಭಾವನಾತ್ಮಕವೆನಿಸುವ ಸಂಪ್ರದಾಯ – ಆಚರಣೆಗಳು ತಮ್ಮಷ್ಟಕ್ಕೆ ತಾವು ಮುಂದುವರಿಯುವ ಅಂಶಗಳು.

ವಿಧಾನ:

ಇದುವರೆಗಿನ ನಮ್ಮ ಸಾಹಿತ್ಯ ಅಧ್ಯಯನಕಾರರು ನಡೆಸಿದ ಅಧ್ಯಯನದಲ್ಲಿ ಅಲಕ್ಷಿತವಾದ ಸಾಮಾನ್ಯನನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾಹಿತ್ಯ ಚರಿತ್ರೆಯನ್ನಿನ್ನು ಹೊಸದಾಗಿ ಕಟ್ಟಿಕೊಡಬೇಕಾಗಿದೆ. ಈ ದಿಸೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ವಿಶ್ಲೇಷಣಾ ಮಾದರಿಯ ವಿಧಾನವೇ ಸೂಕ್ತವೆಂದುಕೊಳ್ಳಲಾಗಿದೆ.

ಮಹತ್ವ:

ಸಂಸ್ಕೃತಿಯೆಂಬುದು ಬದುಕಿನ ಗತಿಯನ್ನು ಹೇಳುತ್ತದೆ. ಇದು ಎಂದೋ ಒಂದು ದಿನ ಒಮ್ಮಿಂದೊಮ್ಮೆಲೇ ನಿರ್ಮಾಣಗೊಂಡದ್ದಲ್ಲ. ಪ್ರತಿಯೊಂದು ಸಂಸ್ಕೃತಿ ಕಾಲಾಂತರದಲ್ಲಿ ಬೆಳೆಯುತ್ತಲೋ ಬದಲಾಗುತ್ತಲೋ ಚಲನಶೀಲ ಗತಿಯಲ್ಲೇ ಇರುತ್ತದೆ. ಯಾವ ಸಂಸ್ಕೃತಿಯೂ ತನ್ನಷ್ಟಕ್ಕೆ ತಾನು ಪರಿಪೂರ್ಣವಲ್ಲ, ಆದರೆ ಅದನ್ನು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ದೃಷ್ಟಿಕೋನಗಳಿಂದ ನೋಡುವ, ಅರ್ಥೈಸುವ ಮೂಲಕವಾಗಿ ಅದಕ್ಕೊಂದು ಪೂರ್ಣತೆಯನ್ನು, ಒಟ್ಟಂದತೆಯನ್ನು ತರಲು ಸಾಧ್ಯವಾಗುತ್ತದೆ. ನಮ್ಮ ಇದುವರೆಗಿನ ಸಂಸ್ಕೃತಿ ಅಧ್ಯಯನಗಳು ಪ್ರಭುತ್ವ, ಧರ್ಮ, ವರ್ಗ ಹೀಗೆ ಯಾವುದಾದರೊಂದಕ್ಕೆ ನಿಷ್ಠವಾಗಿಯೇ ಪ್ರಾಚೀನ ಸಂಸ್ಕೃತಿಯನ್ನು ತನ್ಮೂಲಕ ಸಮಾಜವನ್ನು ನೋಡುತ್ತ ಬಂದಿವೆ.

ಬರಗೂರರು ಹೇಳುವಂತೆ ಸಂಶೋಧನೆಯೆಂಬುದು 'ಪ್ರಧಾನವಾಗಿ ಕಟ್ಟುವ ಕೆಲಸ' ನಿಜ. ಕಲೆ, ಸಾಹಿತ್ಯ, ಸಂಶೋಧನೆಗಳ ಮುಖಾಂತರ ಕಾಲದಿಂದ ಕಾಲಕ್ಕೆ ಸಂಸ್ಕೃತಿಯನ್ನು ಕಟ್ಟಿಕೊಳ್ಳುತ್ತಲೇ ಬಂದಿದ್ದೇವೆ. ಸಂಸ್ಕೃತಿಯೊಂದನ್ನು ಕಟ್ಟಿಕೊಳ್ಳುವಾಗ ಒಂದು ಬಾರಿ ರಾಜನಿಷ್ಠವಾಗಿ ಮತ್ತೊಂದು ಬಾರಿ ಧರ್ಮನಿಷ್ಠವಾಗಿ ಕಟ್ಟಿಕೊಂಡಿದ್ದೇವೆ. ಹೀಗೆ ಪ್ರತಿಸಾರಿಯೂ ಸಂಸ್ಕೃತಿ ಪುನರ್‌ಮೌಲೀಕರಣಕ್ಕೆ ಒಳಪಡುತ್ತಲೇ ಇರುತ್ತದೆ.

ಧರ್ಮ, ಪ್ರಭುತ್ವ, ಸಮಾಜಗಳಿಗೆ ಹಿಂದೆ ಇದ್ದ ಪ್ರಾಮುಖ್ಯತೆ ಇಂದಿಲ್ಲ. ಇವತ್ತಿನ ಸಮಾಜ ಸಂದರ್ಭಗಳೆರಡೂ ವ್ಯಕ್ತಿ ನಿಷ್ಠವಾದವುಗಳು ಹಾಗಾಗಿಯೇ Every individual has his own individuality and identity ಎನ್ನುವ ಕಾಲ ಇಂದಿನದು. ಅಂತೆಯೇ ಸಂಸ್ಕೃತಿಯ ಮೂಲ ಬೇರಾದ ಸಾಮಾನ್ಯ ಮನುಷ್ಯ ಸಂಸ್ಕೃತಿ ಪುನಾರಚನೆಯಲ್ಲಿ ಇಂದು ಮುಖ್ಯನಾಗುತ್ತಾನೆ.

ಬುದ್ಧ, ಬಸವ, ಗಾಂಧಿ, ಅಂಬೇಡ್ಕರರಂಥವರೆಲ್ಲ ಮಾತನಾಡಿದ, ಕಟ್ಟಬಯಸಿದ ಮಾನವಧರ್ಮ ಅಪ್ಪಟ ಸಾಮಾನ್ಯ ಮನುಷ್ಯನಿಂದ ಕೂಡಿದ್ದು. ಸಾಮಾನ್ಯನಿಗೆ-ಸಾಮಾನ್ಯನಿಂದಲೇ ನಿರ್ಮಾಣಗೊಳ್ಳುವ ಸಮಾಜವೇ ಇವರೆಲ್ಲರ ಕನಸು, ಈ ಒತ್ತಾಸೆಯೇ ಆಧುನಿಕ ಕಾಲದಲ್ಲಿ ಪ್ರಜಾಪ್ರಭುತ್ವವಾಗಿ ರೂಪು ಪಡೆಯಿತು. ಪ್ರಜಾಪ್ರಭುತ್ವದಲ್ಲಿ ಅಧಿಕಾರ ವಿಕೇಂದ್ರೀಕರಣ ಮತ್ತು ಮೀಸಲಾತಿ ಪದ್ಧತಿಗಳು ಜಾರಿಗೆ ಬಂದದ್ದರ ಮೂಲ ಆಶಯ ಸಮಾಜದ ಕಟ್ಟಕಡೆಯ ಸಾಮಾನ್ಯನನ್ನು ತಲುಪುವದೇ ಆಗಿದೆ. ಈ ಕಾರಣಕ್ಕಾಗಿಯೇ ಆಧುನಿಕ ಸಂದರ್ಭದಲ್ಲಿ ಸಾಮಾನ್ಯ ಮನುಷ್ಯ ಸಮಾಜ ಮತ್ತು ಸಾಹಿತ್ಯದಲ್ಲಿ ಅಸ್ತಿತ್ವವನ್ನು ಪಡೆದ.

ಸಾಹಿತ್ಯವೆನ್ನುವದು ಮನುಷ್ಯ ಬದುಕಿನ ವಿವಿಧ ಆಯಾಮಗಳ ಸಮಷ್ಠಿರೂಪ. ಅಂದಾಗ ಮನುಷ್ಯ ಬದುಕಿಗೆ ಧರ್ಮ, ವರ್ಗ, ವರ್ಣ ಇವು ಯಾವುವೂ ಮುಖ್ಯವಾಗುವದಿಲ್ಲ. ಇವೆಲ್ಲವುಗಳು ಮನುಷ್ಯ ಬದುಕಿಗೆ ಪೂರಕ ಅಂಶಗಳೇ ಹೊರತಾಗಿ ಅವೇ ಮುಖ್ಯವಾದವುಗಳಲ್ಲ; ಮುಖ್ಯನಾಗುವವನು ಮನುಷ್ಯ ಮಾತ್ರ. ಮನುಷ್ಯನೆಂದರೆ ಮನುಷ್ಯನಷ್ಟೇ. ಧರ್ಮ, ವರ್ಗ, ಜಾತಿ, ಲಿಂಗಗಳೆಲ್ಲದರ ಆವರಣ ಕಟ್ಟಿಕೊಳ್ಳುತ್ತಲೇ ಅಂತರಂಗದಲ್ಲಿ ಹುದುಗಿರುವ ರಾಗ-ದ್ವೇಷ ಸಹಿತನಾದ ಸಾಮಾನ್ಯನೇ ಸಾಮಾನ್ಯ ಮನುಷ್ಯ. ಇಂತಹ ಸಾಮಾನ್ಯನೇ ಸಾಹಿತ್ಯದ ಜೀವಾಳ.

ಸಾಮಾನ್ಯ ಮನುಷ್ಯ ಪರಿಕಲ್ಪನೆ:

ನಮ್ಮ ಇದುವರೆಗಿನ ತಿಳುವಳಿಕೆಯ ಪ್ರಕಾರ ಸಾಮಾನ್ಯ ಮನುಷ್ಯನಿಗೆ ಯಾವುದೇ ತೆರನಾದ ಅಧಿಕಾರ, ಅಂತಸ್ತುಗಳು ಇರುವುದಿಲ್ಲ. ತನ್ನತನವಿಲ್ಲದ, ತನ್ನತನವಲ್ಲದ ಮನುಷ್ಯನನ್ನೇ ಸಾಮಾನ್ಯ ಮನುಷ್ಯನನ್ನಾಗಿ ಬಿಂಬಿಸಲಾಗಿದೆ. ಅಷ್ಟೇ ಅಲ್ಲ ಅವನ ಅಸ್ತಿತ್ವದ ಇರುವನ್ನೇ ಕಡೆಗಣಿಸಲಾಗಿದೆ. ಸಾಮಾನ್ಯ ಮನುಷ್ಯನೆಂದರೆ ಸಮಾಜದ ಕಟ್ಟ ಕಡೆಯ ಮನುಷ್ಯನೆಂದು ಮಾತ್ರ ಭಾವಿಸಲಾಗಿದೆ. ಯಾವುದೇ ಭೌತಿಕ ಸವಲತ್ತುಗಳಿಲ್ಲದ ಯಾವಾಗಲೂ ಇನ್ನೊಬ್ಬರ ಅಡಿಯಾಳಾಗಿ ಗುರುತಿಸಿಕೊಳ್ಳುವ ರಾಗ-ದ್ವೇಷ-ವಿಷಯಾಸಕ್ತಿಗಳಿಂದಲೇ ತುಂಬಿಕೊಂಡಿರುವ ಮನುಷ್ಯನನ್ನು ಸಾಮಾನ್ಯನೆಂದು ಪರಿಗಣಿಸಲಾಗಿದೆ.ಈ ಅಭಿಪ್ರಾಯಗಳಿಗೆ ಹೊರತಾಗಿಯೂ ಸಾಮಾನ್ಯನಿಗೆ ತನ್ನದೇ ಆದ ಆಸ್ತಿತ್ವವಿದೆ. ಯಾವುದೇ ಅಧಿಕಾರ, ಅಂತಸ್ತುಗಳಿಲ್ಲದಿದ್ದರೂ ಅವನು ತನ್ನಷ್ಟಕ್ಕೆ ತಾನೇ ತನ್ನ ವ್ಯಕ್ತಿತ್ವವನ್ನು ಕಟ್ಟಿಕೊಳ್ಳುತ್ತಾನೆ. ಮೇಲ್ವರ್ಗ-ಮೇಲ್ಜಾತಿಯವರಿಗೆ ಮೇಲ್ನೋಟಕ್ಕೆ ಭೌತಿಕವಾಗಿ ಅಡಿಯಾಳಾಗಿದ್ದಂತೆ ಕಂಡು ಬಂದರೂ ಮಾನಸಿಕ ಪಾತಳಿಯಲ್ಲಿ ಅವನು ಸ್ವತಂತ್ರನಾಗಿರುತ್ತಾನೆ. ತನ್ನ ಶಕ್ತಿ, ಸಾಮರ್ಥ್ಯ, ಸ್ಥಿತಿಗತಿಗಳಿಗನುಗುಣವಾಗಿ ಭಿನ್ನ ವ್ಯಕ್ತಿತ್ವವನ್ನು ಬೆಳೆಸಿಕೊಂಡು ತನ್ನತನವನ್ನು ಕಾಪಾಡಿಕೊಳ್ಳುವನು. ತನ್ನ ಇತಿಮಿತಿಯೊಳಗೆ ಎಲ್ಲರೊಳಗೊಂದಾಗಿ ಬದುಕುವ ಹಂಬಲವನ್ನು ಹೊಂದಿರುತ್ತಾನೆ. ಅಂದರೆ ಅವನಿಗೆ ಏಕಾಂಗಿಯಾಗಿ ಬದುಕಲಾಗುವುದಿಲ್ಲ ಎಂಬರ್ಥವಲ್ಲ. ಇವನು ವ್ಯಷ್ಟಿಗಿಂತ ಸಮಷ್ಟಿ ಪ್ರಜ್ಞೆಯಲ್ಲೇ ಹೆಚ್ಚು ಸುರಕ್ಷಿತತೆ ಅನುಭವಿಸುತ್ತಾನೆ. ಸಾಮಾನ್ಯ ಮನುಷ್ಯ ಯಾವಾಗಲೂ ಸಮಾಜ ಕೇಂದ್ರಿತ ವ್ಯಕ್ತಿಯಾಗಿ ಬದುಕಲಿಚ್ಛಿಸುತ್ತಾನಾದ್ದರಿಂದ ಸದಾ ಪ್ರವಾಹದೋಪಾದಿಯಲ್ಲಿ ಸಾಗಲು ಇಷ್ಟಪಡುತ್ತಾನೆ. ಪ್ರವಾಹದ ವಿರುದ್ಧವಾಗಿ ಈಜುವ ಮನೋಧರ್ಮ ಇವನದಲ್ಲವಾದರೂ ಪ್ರಸಂಗಾವಧಾನವಾಗಿ ಪ್ರವಾಹದ ವಿರುದ್ಧ

ಈಜುವ ಧೈರ್ಯವನ್ನೂ ಯಾವಾಗಲಾದರೊಮ್ಮೊಮ್ಮೆಪ್ರದರ್ಶಿಸುವನು. ಇಂಥ ಸಾಮಾನ್ಯರಲ್ಲಿ ಪ್ರವಾಹದ ವಿರುದ್ಧ ಈಜಿದವರನ್ನು ಬಂಡಾಯವೆದ್ದವರನ್ನು ಅಸಾಮಾನ್ಯ, ವಿಶೇಷ, ಬಂಡಾಯಗಾರರನ್ನಾಗಿ ಸಮಾಜ ಗುರುತಿಸುತ್ತದೆ.

ಸಾಮಾನ್ಯ ಮನುಷ್ಯನನ್ನು ಇವನೇ ಎಂದು ವ್ಯಾಖ್ಯಾನಿಸುವುದು ಕಷ್ಟ. ಆದರೂ ಹಲ ಕೆಲವರು ಸಾಮಾನ್ಯ ಮನುಷ್ಯನನ್ನು ವ್ಯಾಖ್ಯಾನಿಸಿದ್ದಾರೆ. ಅವರವರ ದೃಷ್ಟಿಕೋನಕ್ಕೆ ತಕ್ಕಂತೆ ಸಾಮಾನ್ಯನನ್ನು ಗುರುತಿಸಿದ್ದಾರೆ. ಆ ವ್ಯಾಖ್ಯಾನಗಳು ಈ ಮುಂದಿನಂತಿವೆ:

ಸಾಮಾನ್ಯ ಮನುಷ್ಯ ಎಂದರೆ "ಸಾಮಾಜಿಕ ಶ್ರೇಣೀಕರಣದ ಕೆಳಹಂತಕ್ಕೆ ಸೇರಿದವನು" ಎಂದು ಡಿ.ಆರ್.ನಾಗರಾಜರು ಅರ್ಥೈಸಿದ್ದಾರೆ.

ಸಾಮಾನ್ಯ ಮನುಷ್ಯ ಎಂದರೆ "ಓದು-ಬರಹ ಬಾರದವನು. ದುಡಿಮೆಗಾರ, ಕೀಳೆನಿಸಿಕೊಂಡವನು, ಅಸ್ಥಾನದಲ್ಲಿ ಜಾಗವಿಲ್ಲದವನು, ಪಂಡಿತನಲ್ಲದವನು" ಎಂದು ಪ್ರೊ. ಸಿದ್ಧಲಿಂಗಯ್ಯನವರು ಹೇಳುತ್ತಾರೆ.

ನಿಜವಾಗಲೂ ವಿವರಿಸಲಾಗದಿರುವ ಪದ ಎಂದರೆ ಸಾಮಾನ್ಯ ಮನುಷ್ಯ ಎಂದು ಹೇಳುತ್ತಲೇ ಸಿ.ವೀರಣ್ಣನವರು "ತಾನು ದುಡಿದು ಉತ್ಪಾದಿಸಿದ ವಸ್ತುಗಳ ಯಜಮಾನಿಕೆಯಿಂದ ದೂರವಾಗಿ ಸಮಾಜದ ಎಲ್ಲ ಸವಲತ್ತುಗಳಿಂದ ದೂರವಾಗಿ ಧರ್ಮದ ಶೋಷಣೆಗೂ ಸಿಕ್ಕಿರುವ ಬಹುಪಾಲು ಜನರೇ ಈ ಸಾಮಾನ್ಯ ಮನುಷ್ಯರು". ಅಲ್ಲದೇ ದುಡಿಯುವವರನ್ನು ಅಂಕೆಯಲ್ಲಿಡಲು ಧರ್ಮವನ್ನು ಆಯುಧವನ್ನಾಗಿ ಮಾಡಿಕೊಂಡಿರುವ ದುಡಿಯದವರನ್ನು ಬಿಟ್ಟು ಉಳಿದವರೆಲ್ಲರೂ ಸಾಮಾನ್ಯರೇ ಎಂದು ವಿಶ್ಲೇಷಿಸುತ್ತಾರೆ.

ಇದುವರೆಗಿನ ವ್ಯಾಖ್ಯಾನಗಳನ್ನು ನೋಡಿದಾಗ ಸಮಾಜ, ಪ್ರಭುತ್ವ, ಧರ್ಮ ಮುಂತಾದವುಗಳ ಹಿನ್ನೆಲೆಯಲ್ಲಿ ಸಾಮಾನ್ಯ ಮನುಷ್ಯನನ್ನು ವ್ಯಾಖ್ಯಾನಿಸಿದ್ದಾರೆ. ಇಲ್ಲಿಯವರೆಗೆ ಸಾಮಾನ್ಯ ಮನುಷ್ಯನನ್ನು ಅರ್ಥೈಸುವಿಕೆಯ ರೀತಿ ಇದೇ ಅಗಿದೆ. ಸಮಾಜ, ಪ್ರಭುತ್ವ, ಧರ್ಮಗಳಿಗೆ ಹೊರತಾಗಿಯೂ ತನ್ನೆಲ್ಲ ಇತಿಮಿತಿಗಳ ಮಧ್ಯದಲ್ಲಿಯೂ ಸಾಮಾನ್ಯ ಮನುಷ್ಯನನ್ನು ಮನುಷ್ಯ ಮಾತ್ರನಾಗಿ ನೋಡುವ ಪರಿಕಲ್ಪನೆ ಇಂದಿಗೆ ಆರಂಭಗೊಳ್ಳಬೇಕಿದೆ.

ಮೇಲಿನ ಎಲ್ಲ ವ್ಯಾಖ್ಯಾನ-ವಿವರಣೆಗಳನ್ನು ಪರಿಭಾವಿಸುತ್ತ ನನ್ನದೇ ಆದ ವ್ಯಾಖ್ಯಾನವನ್ನು ಹೀಗೆ ನಿರ್ವಚಿಸಿಕೊಂಡಿದ್ದೇನೆ. ಧರ್ಮ, ವರ್ಗ, ವರ್ಣ, ಜಾತಿ, ಲಿಂಗ ಎಲ್ಲದರೊಳಗೆ ಒಂದಾಗಿದ್ದು, ಸಾಮಾಜಿಕ ನಿರ್ಲಕ್ಷ್ಯಕ್ಕೊಳಗಾಗಿ ಯಾವ ಆದರ್ಶ ಕಲ್ಪನೆಯೂ ಇಲ್ಲದೆ ಸಹಜ ಬದುಕನ್ನು ರೂಢಿಸಿಕೊಂಡವನೇ ಸಾಮಾನ್ಯ ಮನುಷ್ಯ. ಆದಾಗ್ಯೂ ಸಾಮಾನ್ಯ-ಅಸಾಮಾನ್ಯ, ಅಸಾಮಾನ್ಯ-ಸಾಮಾನ್ಯನಾಗುವ ಪ್ರಕ್ರಿಯೇ ಘಟಿಸುತ್ತಲೇ ಇರುತ್ತದೆ. ಈ ಸ್ಥಿತ್ಯಂತರ ರಾಜಕೀಯ, ಸಾಮಾಜಿಕ, ಪ್ರಾಕೃತಿಕ ಚಲನೆಗಳಿಗನುಗುಣವಾಗಿ ಬದಲಾವಣೆಗೊಳಗಾಗುತ್ತಿರುತ್ತದೆ. ಅಂತೆಯೇ ಸಾಮಾನ್ಯ ಮನುಷ್ಯ ಪರಿಕಲ್ಪನೆಯೂ ಸ್ಥಿರವಾಗಿರದೆ ನಿರಂತರ ಚಲನಶೀಲವಾಗಿರುತ್ತದೆ.

ನನ್ನ ಅಧ್ಯಯನದಲ್ಲಿ ರಾಜ, ರಾಣಿ, ಮಂತ್ರಿ ರಾಜಕುಮಾರ ಹೀಗೆ ರಾಜನ ಅತಿ ನಿಕಟ ಸಂಪರ್ಕದಲ್ಲಿರುವ ವ್ಯಕ್ತಿಗಳನ್ನು ಹೊರತು ಪಡಿಸಿ ಉಳಿದವರೆಲ್ಲರನ್ನೂ ಸಾಮಾನ್ಯರೆಂದು ಪರಿಗಣಿಸಲಾಗಿದೆ. ಧರ್ಮದ ಅಂಗವಾದ ಮುನಿಗಳನ್ನೂ ಸಹ ಇಲ್ಲಿ ಸಾಮಾನ್ಯರೆಂದೇ ಪರಿಗಣಿಸಲಾಗಿದೆ. ಮುನಿಗಳಿಗೆ ಯಾವ ಅಧಿಕಾರವಾಗಲಿ, ಅಂತಸ್ತಾಗಲೀ ಇರುವದಿಲ್ಲ ಎಂಬ ಕಾರಣಕ್ಕಾಗಿ ಅವರನ್ನು

ಸಾಮಾನ್ಯರ ಸಾಲಿನಲ್ಲೇ ಸೇರಿಸಿಕೊಳ್ಳಲಾಗಿದೆ. ಉಳಿದಂತೆ ಸಮಾಜದ ಎಲ್ಲ ಜಾತಿಯ ಎಲ್ಲ ದುಡಿಯುವ ವರ್ಗಗಳ ಜನರನ್ನು ಹೆಣ್ಣು, ಗಂಡೆಂಬ ಲಿಂಗಬೇಧ ರಹಿತವಾಗಿ ಬಡವ-ಬಲ್ಲಿದ ಎಂಬ ತಾರತಮ್ಯ ರಹಿತವಾಗಿ ಎಲ್ಲರನ್ನೂ ಸಾಮಾನ್ಯ ಮನುಷ್ಯನ ಪರಿಧಿಯೊಳಗೆ ತೆಗೆದುಕೊಳ್ಳಲಾಗಿದೆ.

ಸಾಮಾನ್ಯ ಮನುಷ್ಯನೆಂದರೆ ಇವನೇ ಎಂದು ಇದಮಿತ್ಥಂ ಎಂಬರ್ಥದಲ್ಲಿ ವ್ಯಾಖ್ಯಾನಿಸಲಾಗುವುದಿಲ್ಲ. ಭೌತಿಕ ಅನಾನುಕೂಲತೆಗಳೇ ಸಾಮಾನ್ಯನನ್ನು ಸೃಷ್ಟಿಸುವದಿಲ್ಲ. ಮನುಷ್ಯ ಸೌಲಭ್ಯಗಳ ಸಾಗರದಲ್ಲಿದ್ದೂ ಹಲವಾರು ಬಾರಿ ಸಾಮಾನ್ಯತ್ವವನ್ನು ಪ್ರದರ್ಶಿಸುವದನ್ನು ನೋಡಿದಾಗ ಸಾಮಾನ್ಯತ್ವವೆನ್ನುವದು ಯಾವುದೋ ಒಂದು ವರ್ಗಕ್ಕೆ ಸೀಮಿತವೆನ್ನಲಾಗುವದಿಲ್ಲ. ಎಲ್ಲ ವರ್ಗದಲ್ಲೂ ಸಾಮಾನ್ಯರು ಇದ್ದೇ ಇರುವರು. ರಾಗ-ದ್ವೇಷ, ವಿನಯ-ವಂಚನೆ, ಪ್ರಾಮಾಣಿಕತೆ-ಅಪ್ರಾಮಾಣಿಕತೆ, ದಾನ-ಧರ್ಮ, ಕೊಲೆ-ಸುಲಿಗೆ, ಕಳ್ಳತನ, ಧೂರ್ತತನ, ಅಪನಂಬಿಕೆ, ಅಸೂಯೆ, ಸ್ವಾತಂತ್ರ್ಯ-ಸ್ವೇಚ್ಛಾಚಾರ ಹೀಗೆ ಮನುಷ್ಯನ ಅತ್ಯಂತ ಸಹಜ ಗುಣಗಳೆಲ್ಲವೂ ಸಾಮಾನ್ಯನಲ್ಲಿ ಅಡಕವಾಗಿರುತ್ತವೆ. ಹೀಗೆಂದಾಗ ಇವು ಸಾಮಾನ್ಯನ ಗುಣಗಳಷ್ಟೇ ಎಂಬರ್ಥವಲ್ಲ. ಈ ಗುಣಗಳೊಂದಿಗೆ ಭೌತಿಕವಾದ ವೇಷ-ಭೂಷಣ,ಆಹಾರ ಇರುವಿಕೆ ಮಾತ್ರದಿಂದಲೇ ಸಾಮಾನ್ಯನೆಂಬುವನನ್ನು ನಿರ್ಧರಿಸಲಾಗುವದಿಲ್ಲ. ಮನುಷ್ಯನೆಂದರೆ ಮನುಷ್ಯನಷ್ಟೇ ಎಂಬರ್ಥದಲ್ಲಿ ಸಾಮಾನ್ಯನನ್ನು ಗ್ರಹಿಸುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗುವದು.

ಈ ಕಾರಣಕ್ಕಾಗಿಯೇ ಇಂದು ಸಾಮಾನ್ಯನಿಗೆ ನಿಷ್ಠನಾಗಿ ಸಾಹಿತ್ಯ ಮತ್ತು ಸಮಾಜವನ್ನು ನೋಡುವ, ಅರ್ಥೈಸುವ, ಅಗತ್ಯತೆಯಿದೆ. ಈ ದೆಸೆಯಲ್ಲಿಯೇ ಸಾಹಿತ್ಯದ ಮುಖೇನವಾಗಿ ಮಾನವ ಚರಿತ್ರೆಯೊಂದನ್ನು ಕಟ್ಟುವ ಪ್ರಯತ್ನ ಪ್ರಾರಂಭಗೊಳ್ಳಬೇಕಿದೆ. ಇದು ಕಾಲಮಾನದ ಒತ್ತಡವೂ ಹೌದು. ಮಹತ್ವವೂ ಹೌದು. ಇವೊತ್ತಿನ ಸಂದರ್ಭದಲ್ಲಿ ನಿಂತು ರಾಜಪ್ರಭುತ್ವ ಕಾಲದ ಸಾಮಾನ್ಯ ಮನುಷ್ಯನನ್ನು ಪ್ರಜಾಪ್ರಭುತ್ವದೊಂದಿಗೆ ಮುಖಾಮುಖಿ ಮಾಡಿದಾಗಲೇ ಸಂಸ್ಕೃತಿಯೊಂದರ ನಿಜದ ನೆಲೆಯನ್ನು ತಲುಪಿದಂತಾಗುತ್ತದೆ. ಕನ್ನಡ ಜನಸಾಮಾನ್ಯರ ಬದುಕು ಅಖಂಡವಾಗಿ ರೂಪುಗೊಂಡು ಸದೃಢ, ಸಶಕ್ತ, ಸಮಾನತೆಯ ಬದುಕೊಂದು ಕಟ್ಟಿಕೊಳ್ಳಬೇಕೆನ್ನುವುದೇ ಈ ಸಂಶೋಧನೆಯ ಆಶಯ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಾಮಾನ್ಯ ಮನುಷ್ಯ ಎಂಬ ಈ ಅಧ್ಯಯನದಲ್ಲಿ ಸಾಮಾನ್ಯ ಮನುಷ್ಯನೆಂಬ ಇವತ್ತಿನ ಪರಿಕಲ್ಪನೆಯನ್ನು ಇಟ್ಟುಕೊಳ್ಳಲಾಗಿದೆ. ಒಟ್ಟಾರೆಯಾಗಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಸಾಮಾನ್ಯನಿಗೆ ನಿಷ್ಠವಾಗಿ ಪುನರಾಲೋಚನೆಗೆ ಹಚ್ಚುವ ದಿಕ್ಕಿನೆಡೆಗೆ ಸಾಗುವ ಅಧ್ಯಯನವಿದೆಂದು ಪರಿಭಾವಿಸಲಾಗಿದೆ.

ಅಧ್ಯಾಯ - ೨

ಇದುವರೆಗಿನ ಅಧ್ಯಯನಗಳ ತಾತ್ವಿಕ ಸಮೀಕ್ಷೆ

ಇದುವರೆಗಿನ ಅಧ್ಯಯನಗಳ ತಾತ್ವಿಕ ಸಮೀಕ್ಷೆ

ಸಾಮಾನ್ಯ ಮನುಷ್ಯ ವರ್ಗವೇ ಸಮಾಜದ ಬಹುಸಂಖ್ಯಾತ ವರ್ಗ. ಇವನೇ ಸಮಾಜ, ಧರ್ಮ, ಪ್ರಭುತ್ವ, ಜಾತಿ-ಮತ ಎಲ್ಲವುಗಳ ಶಕ್ತಿ ಕೇಂದ್ರ. ಇವೆಲ್ಲವುಗಳ ಹಿಡಿತ ಮಾತ್ರ ಮೇಲ್ವರ್ಗದ ಸೊತ್ತಾಗಿದೆ. ಮೇಲ್ವರ್ಗದ ಅಧೀನಕ್ಕೊಳಗಾದ ಸಾಮಾನ್ಯ ಮನುಷ್ಯನ ಬದುಕನ್ನು ಶತ-ಶತಮಾನಗಳಿಂದ ನಿರ್ಲಕ್ಷಿಸುತ್ತಲೇ ಬಂದಾಗಿದೆ. ಅವನ ಬದುಕು, ಭಾವಗಳಾವವೂ ಮೇಲ್ವವರ್ಗವನ್ನು ಬಹುವಾಗಿ ತಟ್ಟಲೇ ಇಲ್ಲ.

ಸಾಹಿತ್ಯ ಬದುಕಿನ ಪ್ರತಿಬಿಂಬ ಎನ್ನುವುದು ಸರ್ವೇಸಾಮಾನ್ಯ ಮಾತು. ಆದರೆ ನಮ್ಮ ಪ್ರಾಚೀನ ಕನ್ನಡ ಸಾಹಿತ್ಯದ ಮುಖ್ಯ ಭಾಗವಾಗಿರುವುದು ಮೇಲ್ವರ್ಗ ಮಾತ್ರವೇ. ಅಲ್ಲೆಲ್ಲೂ ಸಾಮಾನ್ಯನ ಬದುಕನ್ನು ಪ್ರಮುಖವಾಗಿ ಕಾಣಿಸುವ ಪ್ರಯತ್ನ ನಡೆಯಲೇ ಇಲ್ಲ. ಆದರೂ ಅನಿವಾರ್ಯವಾಗಿ ಒಮ್ಮೊಮ್ಮೆ ಸಾಮಾನ್ಯ ಮನುಷ್ಯ ಸಾಹಿತ್ಯದಲ್ಲಿ ಆನುಷಂಗಿಕವಾಗಿ ತೆರೆದುಕೊಳ್ಳುತ್ತಾನೆ. ಪ್ರಭುವಿಗೆ ಪರಿಚಾರಕನಾಗಿ, ಪರಿವಾರವಾಗಿ, ಧರ್ಮದ ಅನುಯಾಯಿಯಾಗಿ ಕಾಣಿಸಿಕೊಂಡಿದ್ದಾನೆ.

ಪ್ರಾಚೀನ ಸಾಹಿತ್ಯದ ಆವರಣದಲ್ಲಿ ಸಾಮಾಜಿಕ ವಲಯದಲ್ಲಿಯ ಕಳ್ಳ, ಸುಳ್ಳ, ವ್ಯಭಿಚಾರಿ, ಜಾಣ-ಜಾಣೆಯರು, ಮೋಸಗಾರರು, ಸತ್ಯನಿಷ್ಠರು ಶ್ರಮ ಜೀವಿಗಳು - ಹೀಗೆ ಸಾಕಷ್ಟು ಬಗೆಯ ಸಾಮಾನ್ಯರನ್ನು ಆನುಷಂಗಿಕವಾಗಿ ಮೇಲ್ವರ್ಗದವರ ಪಾತ್ರಪೋಷಣೆಗೆ ಪೂರಕವಾಗಿ ಅನಾವರಣಗೊಳಿಸಲಾಗಿದೆ.

ಒಟ್ಟಾರೆಯಾಗಿ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಇದುವರೆಗಿನ ಅಧ್ಯಯನಗಳಲ್ಲಿ ಸಾಮಾನ್ಯ ಮನುಷ್ಯ ನಿರ್ಲಕ್ಷ್ಯಕ್ಕೊಳಗಾಗಿದ್ದಾನೆ. ಅತೀ ವಿರಳ ಎನ್ನುವಷ್ಟು ನಡೆದ ಅಧ್ಯಯನಗಳಲ್ಲಿಯೂ ಸಾಮಾನ್ಯ ಮನುಷ್ಯನನ್ನು ಬೇರೆಬೇರೆಯವರು ಬೇರೆ ಬೇರೆ ದೃಷ್ಟಿಕೋನಗಳಿಂದ ನೋಡಿದ್ದಾರೆಯೇ ಹೊರತಾಗಿ ಒಟ್ಟು ಸಾಮಾನ್ಯ ಮನುಷ್ಯನ ಚರಿತ್ರೆಯನ್ನು ಕಟ್ಟಿಕೊಡುವ ಪೂರ್ಣಪ್ರಮಾಣದ ಕೆಲಸ ಇದುವರೆಗೂ ನಡೆದಿಲ್ಲ. ಈ ಕೊರತೆಯನ್ನು ತುಂಬಿಕೊಡಲು ಸಾಮಾನ್ಯ ಮನುಷ್ಯನನ್ನು ಅಧ್ಯಯನಕ್ಕೊಳಪಡಿಸಿ ಹೊಸದೊಂದು ನೆಲೆಯಿಂದ ಸಾಮಾನ್ಯನನ್ನು ಅರ್ಥೈಸುವುದೇ ನನ್ನ ಅಧ್ಯಯನ.

ನನ್ನ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ದೊರೆತ ಕೆಲವು ಕೃತಿಗಳನ್ನು ಪೂರಕವಾಗಿ ಬಳಸಿಕೊಂಡು ಅಧ್ಯಯನಗಳ ತಾತ್ವಿಕ ಸಮೀಕ್ಷೆಯನ್ನು ಈ ಮುಂದೆ ಸಾದರಪಡಿಸುತ್ತಿದ್ದೇನೆ.

ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ: ಸಂ.ಡಾ.ಜಿ.ಎಸ್.ಶಿವರುದ್ರಪ್ಪ.

೧೯೭೭ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವು ಏರ್ಪಡಿಸಿದ ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ ಎಂಬ ವಿಚಾರ ಸಂಕಿರ್ಣದಲ್ಲಿ ಮಂಡಿತವಾದ ಎಂಟು ಪ್ರಬಂಧಗಳು ಮತ್ತು ಟಿಪ್ಪಣಿ, ಪ್ರಶ್ನೋತ್ತರಗಳನ್ನೊಳಗೊಂಡ ಸಂಕಲನವಿದು.

ಈ ಸಂಕಲನಕ್ಕೆ ಮುನ್ನುಡಿ ಬರೆಯುತ್ತ ಜಿ.ಎಸ್.ಶಿವರುದ್ರಪ್ಪನವರು ಸಾಮಾನ್ಯ ಮನುಷ್ಯ ಎಂದರೆ "ಸಮಾಜದ ಆಶೋತ್ತರಗಳ ಪ್ರತಿನಿಧಿ ಎಂದು ಹೇಳಲಾದ ಸಾಹಿತಿಗೂ ಅವನು ಪ್ರತಿನಿಧಿಸುವನೆಂದು ತಿಳಿಯಲಾದ ಸಮಾಜದ ಬಹುಸಂಖ್ಯಾತರಿಗೂ-ಇವರನ್ನೇ ಸಾಮಾನ್ಯಮನುಷ್ಯ ಎಂದು ಕರೆಯಲಾಗಿದೆ" ಎಂದು ವ್ಯಾಖ್ಯಾನಿಸುತ್ತಾರೆ. ಮುಂದುವರಿದು ಈ ವಿಚಾರ ಸಂಕೀರ್ಣದ ಉದ್ದೇಶ ಈ ಹೊತ್ತಿನಲ್ಲಿ

ಸಾಹಿತ್ಯಕ್ಕೂ ಮತ್ತು ಸಾಮಾನ್ಯ ಮನುಷ್ಯನಿಗೂ ಸಂಪರ್ಕವನ್ನು ಸಾಧಿಸುವುದು ಸಾಂಸ್ಕೃತಿಕವಾದ ಒಂದು ಅವಶ್ಯಕತೆಯೇ ಎಂಬ ಕುರಿತಾದ ಚರ್ಚೆಯನ್ನು ಸಾಧ್ಯಗೊಳಿಸುವುದು.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮುಖ್ಯವಾಗಿ ರಾಜನಿಷ್ಠೆ, ಮತನಿಷ್ಠೆ ಮತ್ತು ಸಮಾಜನಿಷ್ಠೆ ಎಂಬ ಪರಂಪರೆಯನ್ನು ಚರಿತ್ರೆಯುದ್ದಕ್ಕೂ ಕಾಣುತ್ತೇವೆ. ಇವು ಕಾಲದಿಂದ ಕಾಲಕ್ಕೆ ಕವಿ/ಲೇಖಕನ ಪ್ರಜ್ಞೆಯನ್ನು ನಿಯಂತ್ರಿಸುತ್ತ ಬಂದಿವೆ. ಯಾವ ನಿಷ್ಠೆಯ ಕಾರಣಕ್ಕಾಗಿ ಕವಿಗೂ ಆತನ ಸಮಾಜಕ್ಕೂ ಸಾಮಾನ್ಯನಿಗೂ ಸಂಬಂಧ ಏರ್ಪಡಲು ಸಾಧ್ಯವಾಯಿತು ಅಥವಾ ಕಂದಕ ನಿರ್ಮಾಣವಾಯಿತು ಎಂಬ ಎರಡೂ ಅಂಶಗಳನ್ನು ಇಲ್ಲಿಯ ಲೇಖಕರೆಲ್ಲ ತಮ್ಮದೇ ಆದ ದೃಷ್ಟಿಕೋನಗಳಿಂದ ಚರ್ಚಿಸಿದ್ದಾರೆ.

ಇದರ ನಂತರ ಜಿ.ಎಸ್.ಶಿವರುದ್ರಪ್ಪನವರು ಸಾಮಾನ್ಯ ಮನುಷ್ಯ ಎಂದರೆ ಯಾರು ಎಂಬುದನ್ನು ಸಾಹಿತ್ಯದ ಸಂದರ್ಭವನ್ನು ಹಿನ್ನಲೆಯಾಗಿಟ್ಟುಕೊಂಡು ವ್ಯಾಖ್ಯಾನಿಸುತ್ತಾರೆ. ಸಾಹಿತಿ ಯಾವ ಸಮಾಜದಲ್ಲಿ ನಿಂತು ಬರೆಯುತ್ತಾನೋ ಆ ಸಮಾಜದ ಬಹುಸಂಖ್ಯಾತ ಮೂಕವರ್ಗವೇ ಅವರು ಎಂದು ಸಾಮಾನ್ಯ ಮನುಷ್ಯನನ್ನು ವ್ಯಾಖ್ಯಾನಿಸುತ್ತಾರೆ. ಒಂದು ಕಾಲಕ್ಕೆ ತಮ್ಮ ಕಾವ್ಯಕ್ಕೆ ವಸ್ತುವಾಗಲು ತಕ್ಕವರಲ್ಲವೆಂಬಂತೆ ಮತ್ತು ಶ್ರೋತೃಗಳಾಗಲು ತಕ್ಕವರಲ್ಲವೆಂಬಂತೆ ಕವಿಗಳಿಂದ ನಿರ್ಲಕ್ಷಕ್ಕೆ ಗುರಿಯಾದ ಬಹುಸಂಖ್ಯಾತರಿವರು. ಇಂಥ ಜನ ವಿರೋಧಿ ಧೋರಣೆಗಳು ಏರ್ಪಡಲು ಅಂದಂದಿನ ಕವಿಗಳ ರಾಜನಿಷ್ಠೆಯೋ – ರಾಜಾಸ್ಥಾನದ ವಿದ್ವತ್ ವರ್ಗ ನಿಷ್ಠೆಯೋ, ಮತನಿಷ್ಠೆಯ ಪರಿಣಾಮವಾದ ಉನ್ನತ ಧ್ಯೇಯಾದರ್ಶ ಪ್ರಸರಣ ಪ್ರವೃತ್ತಿಯೋ ಕಾರಣವಾಗಿರಬಹುದು ಎಂದು ಜಿ.ಎಸ್.ಶಿವರುದ್ರಪ್ಪನವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಆದರೆ ಕನ್ನಡ ಸಾಹಿತ್ಯದಲ್ಲಿ ಕ್ರಮಕ್ರಮೇಣ ಸಾಹಿತಿಯು 'ಸಮಾಜನಿಷ್ಠೆ' ದೃಷ್ಟಿಯನ್ನು ಬೆಳೆಯಿಸಿಕೊಂಡಂತೆ, ಸಾಹಿತ್ಯ ತನ್ನ ಸುತ್ತಣ ಜನಸಾಮಾನ್ಯರೊಂದಿಗೆ ಸಂಬಂಧವನ್ನು ಸ್ಥಾಪಿಸಿಕೊಂಡ ಪ್ರಯತ್ನಗಳೂ ಐತಿಹಾಸಿಕವಾಗಿ ಗುರುತಿಸುವಷ್ಟಿವೆ.

ಮುನ್ನುಡಿಯ ಕೊನೆಯಲ್ಲಿ 'ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ' ಎಂಬ ವಿಚಾರ ಸಂಕಿರ್ಣದ ಒಟ್ಟು ತೀರ್ಮಾನವನ್ನು ಹೀಗೆ ಕ್ರೋಢೀಕರಿಸುತ್ತಾರೆ: ಸಾಮಾನ್ಯ ಮನುಷ್ಯನೊಂದಿಗೆ ಸಂಪರ್ಕವನ್ನು ಹೊಂದುವ ಸಾಹಿತ್ಯವೇ ಉತ್ತಮ ಸಾಹಿತ್ಯ. ಅಂತಹ ಸಾಹಿತಿಯೇ ಉತ್ತಮ ಸಾಹಿತಿ ಎಂಬುದಲ್ಲ. ಸಾಹಿತ್ಯದ ಉತ್ತಮಿಕೆಯನ್ನು ಯಾವುದೋ ಒಂದು ಮಾನದಂಡದಿಂದ ನಿರ್ಣಯಿಸುವುದು ಸರಿಯಲ್ಲ. ಸಮಗ್ರ ಬದುಕನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವದು ಸಾಹಿತ್ಯದ ಉದ್ದೇಶವೆಂದು ಒಪ್ಪುವುದಾದರೆ ಸಾಹಿತ್ಯ ಏಕೆ ಬೇರೆ ಬೇರೆ ಕಾಲಗಳಲ್ಲಿ ಸೀಮಿತ ಉದ್ದೇಶಗಳಿಗೆ ಬದ್ಧವಾಯಿತು ಎಂಬುದನ್ನು ಐತಿಹಾಸಿಕವಾಗಿ ಗುರುತಿಸುವುದು ಮತ್ತು ಅದರಿಂದ ಪಾಠ ಕಲಿಯುವುದು ವಿಮರ್ಶೆಯ ಕರ್ತವ್ಯಗಳಲ್ಲಿ ಬಹು ಮುಖ್ಯವಾದುದು ಎಂದು ಜಿ.ಎಸ್.ಎಸ್. ಸಾಹಿತ್ಯದಲ್ಲಿ ಸಾಮಾನ್ಯ ಮನುಷ್ಯನ ಗೌಣಗೊಳ್ಳುವಿಕೆ ಮತ್ತು ಇರುವಿಕೆಯನ್ನು ವಿಶ್ಲೇಷಿಸುತ್ತಾರೆ. ಈ ವಿಶ್ಲೇಷಣೆ ನನ್ನ ಅಧ್ಯಯನಕ್ಕೆ ಪ್ರವೇಶಿಕೆಯನ್ನು ಒದಗಿಸುತ್ತದೆ.

ಮುಂದೆ ಈ ವಿಚಾರ ಸಂಕೀರ್ಣದಲ್ಲಿ ಮಂಡಿತವಾದ ಲೇಖನಗಳು, ಭಾಷಣಗಳು ಮತ್ತು ಪ್ರಶ್ನೋತ್ತರಗಳಿವೆ. ಅವು –

೧. ಕಿ.ರಂ. ನಾಗರಾಜರವರ ರಾಜನಿಷ್ಠ ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ

೨. ಸಿ.ವೀರಣ್ಣ ಅವರ ಮತನಿಷ್ಠ ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ

೩. ಎಸ್.ಎಸ್.ರಾಮಪ್ರಸಾದ ಅವರ ಸಮಾಜನಿಷ್ಠ ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ.

೪. ಡಿ.ಆರ್.ನಾಗರಾಜ ಅವರ ಆಧುನಿಕ ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ.

೫. ಸಿದ್ಧಲಿಂಗಯ್ಯನವರ ಸಾಹಿತ್ಯಾಭಿವ್ಯಕ್ತಿಯಲ್ಲಿ ಸಾಮಾನ್ಯ ಮನುಷ್ಯ.

೬. ಬಿ.ವಿ.ವೈಕುಂಠರಾಜುರವರ ಸಾಹಿತ್ಯ ಸಂಪರ್ಕ, ಮಾಧ್ಯಮ ಮತ್ತು ಸಾಮಾನ್ಯ ಮನುಷ್ಯ.

೭. ಕೆ.ನಾರಾಯಣಸ್ವಾಮಿಯವರ ಕನ್ನಡದಲ್ಲಿ ದಲಿತಸಾಹಿತ್ಯ.

೮. ವ್ಹಿ.ಟಿ.ರಾಜಶೇಖರ ಶೆಟ್ಟಿ ಅವರ ಭಾರತೀಯ ಭಾಷೆಗಳಲ್ಲಿ ದಲಿತ ಸಾಹಿತ್ಯ.

– ಈ ಎಲ್ಲ ಲೇಖನಗಳಲ್ಲಿ ಈ ಕೃತಿಯಲ್ಲಿ ನನ್ನ ಅಧ್ಯಯನಕ್ಕೆ ಪೂರಕವಾದವು ಮುಖ್ಯವಾಗಿ ಮೊದಲೆರಡು ಲೇಖನಗಳು ಮಾತ್ರ.

ಕಿ.ರಂ.ನಾಗರಾಜರು ತಮ್ಮ 'ರಾಜನಿಷ್ಠ ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ' ಎಂಬ ಲೇಖನದಲ್ಲಿ ಕರ್ನಾಟಕದ ಸಂದರ್ಭದಲ್ಲಿನ ರಾಜತ್ವವನ್ನು ವಿವರಿಸುವಾಗ ಧರ್ಮವನ್ನು ಬೇರ್ಪಡಿಸುವುದು ಸಾಧ್ಯವಿಲ್ಲ ಎನ್ನುತ್ತಾರೆ. ಪ್ರಭುತ್ವ ಮತ್ತು ಧರ್ಮಗಳು ಮೇಲುನೋಟಕ್ಕೆ ಬೇರೆ ಬೇರೆಯಾಗಿ ಕಂಡರೂ ಕೂಡ ಕ್ರಿಯಾವರ್ತನೆಯಲ್ಲಿ ಎರಡೂ ಒಂದೇ. ೧೦ನೆಯ ಶತಮಾನದಲ್ಲಿ ಕಾಣಿಸಿಕೊಂಡ ಧರ್ಮಶ್ರದ್ಧೆಯ ಅಂತರ್ಯದಲ್ಲಿ ಜಾತಿ, ರಾಜಕಾರಣ ಬೆರೆತುಕೊಂಡಿವೆ. ಜನರಿಂದ ಅಧಿಕಾರವನ್ನು ಸ್ವಘೋಷಿತವಾಗಿ ಕಸಿದುಕೊಂಡ ರಾಜತ್ವವು ಜನತೆಗೆ ತಮ್ಮ ಶಕ್ತಿಯ ಮೂಲಕ ಹೊಸ ವ್ಯವಸ್ಥೆಯನ್ನು ಪಡೆದುಕೊಳ್ಳಲು ಯಾವ ಅವಕಾಶವನ್ನೂ ಕೊಡಲಿಲ್ಲ.

ಕಿ.ರಂ. ನಾಗರಾಜರು ತಮ್ಮ ಲೇಖನದ ಮೊದಲ ಭಾಗದಲ್ಲಿ ರಾಜತ್ವ – ಧರ್ಮ – ಸಾಮಾನ್ಯತ್ವ ಈ ೩ ಅಂಶಗಳನ್ನಿಟ್ಟುಕೊಂಡು ತಾತ್ವಿಕ ಚರ್ಚೆ ನಡೆಸುತ್ತಾರೆ. ಎರಡನೆಯ ಭಾಗದಲ್ಲಿ ೧೦–೧೨ನೆಯ ಶತಮಾನದಲ್ಲಿ ಸಾಹಿತ್ಯದ ಆಶಯ ಬದಲಾದ ಪರಿಯನ್ನು ವಿವರಿಸುತ್ತಾರೆ.

ಈ ಲೇಖನದಲ್ಲಿ ಕಿ.ರಂ.ಅವರು ರಾಜನಿಷ್ಠೆ ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯನನ್ನು ವಿಶ್ಲೇಷಿಸಲು ಪಂಪನೊಬ್ಬನನ್ನು ಬಿಟ್ಟು ಬೇರೆ ಯಾರನ್ನೂ ಉಲ್ಲೇಖಿಸುವುದಿಲ್ಲ. ಜೊತೆಗೆ ರಾಜನಿಷ್ಠ ಸಾಹಿತ್ಯದಲ್ಲಿ ಸಾಮಾನ್ಯ ಮನುಷ್ಯ ಗೌಣಗೊಂಡಿದ್ದಕ್ಕೆ ಯಾವುದೇ ಚಾರಿತ್ರಿಕ – ಸಾಮಾಜಿಕ – ಧಾರ್ಮಿಕ ಕಾರಣಗಳನ್ನು ನೀಡುವುದಿಲ್ಲ.

'ಮತನಿಷ್ಠ ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ' ಲೇಖನ ಬರೆಯುತ್ತ ಸಿ. ವೀರಣ್ಣನವರು ಮತನಿಷ್ಠ ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ ಎಂಬುದನ್ನು ಕುರಿತು ತಿಳಿದುಕೊಳ್ಳುವ ಮೊದಲು ಮತಕ್ಕೂ ಸಾಮಾನ್ಯ ಮನುಷ್ಯನಿಗೂ ಇರುವ ಸಂಬಂಧವನ್ನು ತಿಳಿದುಕೊಂಡರೆ ಮತದ ಆಶಯಗಳಿಗೆ ನಿಷ್ಠವಾದ ಸಾಹಿತ್ಯ ಸಾಮಾನ್ಯನಿಗೆ ಏನು ಕೊಟ್ಟಿತು ಎನ್ನುವುದನ್ನು ತಿಳಿದಂತಾಗುತ್ತದೆ ಎನ್ನುತ್ತಾರೆ.

ಮುಂದುವರಿದು ತಾನು ದುಡಿದು ಉತ್ಪಾದಿಸಿರುವ ವಸ್ತುಗಳ ಯಜಮಾನಿಕೆಯಿಂದ ದೂರವಾಗಿ ಸಮಾಜದ ಎಲ್ಲ ಸವಲತ್ತುಗಳಿಂದ ದೂರವಾಗಿ ಧರ್ಮದ ಶೋಷಣೆಗೂ ಸಿಕ್ಕಿರುವ ಬಹುಪಾಲು ಜನರೇ ಈ 'ಸಾಮಾನ್ಯ ಮನುಷ್ಯ'ರು ಎಂದು ಸಾಮಾನ್ಯ ಮನುಷ್ಯನನ್ನು ಆರ್ಥಿಕತೆಯ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸುತ್ತಾರೆ. ಜೊತೆಗೇ ದುಡಿಯುವವರನ್ನು ಅಂಕೆಯಲ್ಲಿಡಲು ಧರ್ಮವನ್ನು ಆಯುಧವನ್ನಾಗಿ ಮಾಡಿಕೊಂಡಿರುವ ದುಡಿಯದವರನ್ನು ಬಿಟ್ಟು ಉಳಿದವರೆಲ್ಲರೂ ಸಾಮಾನ್ಯರೇ ಎಂದು ತಮ್ಮ ವ್ಯಾಖ್ಯಾನವನ್ನು ಮತ್ತಷ್ಟು ವಿಸ್ತರಿಸುತ್ತಾರೆ. ಮುಂದೆ ಧರ್ಮ ಹುಟ್ಟಿದ ಬಗೆಯನ್ನು ಬದಲಾದ ಆರ್ಥಿಕ ವ್ಯವಸ್ಥೆಗಳಲ್ಲಿ ಅದು ಬೆಳೆದು ಬಂದಿರುವ ರೀತಿಯನ್ನು ಒಂದು ಕಥೆಯ ದೃಷ್ಟಾಂತದ ಮೂಲಕ

ವಿವರಿಸುತ್ತಾರೆ. ಸಮಾಜ ಅನಾಗರಿಕ ಜೀವನ, ದಾಸ್ಯ ಪದ್ಧತಿ, ಪಾಳೇಗಾರಿಕೆ, ಬಂಡವಾಳಶಾಹಿ ವ್ಯವಸ್ಥೆಗಳತ್ತ ಹಾದುಬರುವಾಗ ಧರ್ಮ ಆಳುವ ವರ್ಗದ ಕೈಯಲ್ಲಿ ಆಯುಧವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಮುಂದುವರಿಯಿತೆಂದು ಹೇಳುತ್ತಾರೆ.

ಬಂಡವಾಳಶಾಹಿ ತಾನು ಸಾಯುತ್ತಿದ್ದೇನೆನ್ನುವ ಸಂದರ್ಭದಲ್ಲಿ ಮತ ಧರ್ಮಗಳನ್ನು ಪುನರುಜ್ಜೀವನಗೊಳಿಸುವುದರಿಂದಲೇ ಜನತೆಯನ್ನು ಸರ್ವನಾಶದಿಂದ ರಕ್ಷಿಸಿಕೊಳ್ಳಲು ಸಾಧ್ಯವಾಗುತ್ತದೆಂಬುದನ್ನು ಹೇಳುತ್ತಾರೆ. ಮತ ಧರ್ಮ ಸಾಮಾನ್ಯ ಜನತೆಯ ಮೇಲೆ ಶೋಷಕರು ಹೇರಿರುವ ಹೊರೆಗಳಲ್ಲಿ ಒಂದೆಂದು ವಿವರಿಸುತ್ತಾರೆ.

ಮತನಿಷ್ಠ ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯನನ್ನು ಪಂಪ, ನಯಸೇನ, ವಚನಕಾರರು, ರಾಘವಾಂಕ, ಕುಮಾರವ್ಯಾಸ ಹರಿದಾಸರು ಮುಂತಾದವರ ಸಾಹಿತ್ಯದ ಮೂಲಕ ನಿರೂಪಿಸುತ್ತಾರೆ. ಅದರ ಫಲವಾಗಿ ಕನ್ನಡದಲ್ಲಿ ಬಂದಿರುವ ಬಹುಪಾಲು ಬರವಣಿಗೆಯೆಲ್ಲ ಒಂದು ವರ್ಗದ ಹಿತವನ್ನು ಗಮನದಲ್ಲಿರಿಸಿಕೊಂಡದ್ದು. ಮತಕ್ಕೆ ನೇರವಾಗಿ ನಿಷ್ಠರಾದ ಕವಿಗಳು ಜನತೆಯ ಕೆಲವು ನೋವುಗಳಿಗೆ ತಮ್ಮ ಸಹಾನುಭೂತಿಪರವಾದ 'ಅಭಿವ್ಯಕ್ತಿ ಸಾಂತ್ವನ'ವನ್ನು ನೀಡಿದರು ಎಂಬುದನ್ನು ಹೇಳುತ್ತಾರೆ.

ಎನ್.ಎಸ್.ರಾಮಪ್ರಸಾದ ಅವರು 'ಸಮಾಜ ನಿಷ್ಠ ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ' ಎಂಬ ಲೇಖನದಲ್ಲಿ ಅಸಾಮಾನ್ಯವಾದ ಅಂಶಗಳನ್ನು ಪ್ರಯತ್ನಪೂರ್ವಕವಾಗಿ ತಿಳಿಯುವ ಮೂಲಕ ಸಾಮಾನ್ಯನೂ ಅಸಮಾನ್ಯನೇ ಆಗುತ್ತಾನೆ ಎಂದು ಸಾಮಾನ್ಯರ ಅಸಮಾನ್ಯತ್ವದ ಬಗ್ಗೆ ಮಾತನಾಡುತ್ತಾರೆ. ಅದರ ಜೊತೆಗೆ ಬರಹಗಾರ ತನ್ನ ವೈಯಕ್ತಿಕ ಅನುಭವಗಳನ್ನೇ ವಿಶಾಲಗೊಳಿಸಿ ಎಲ್ಲರಿಗೂ ಅನ್ವಯಿಸುವಂತೆ ಬರೆದಾಗ ಅದು ಸಮಾಜ ನಿಷ್ಠವೂ ಆಗುತ್ತದೆ ಎನ್ನುತ್ತಾರೆ.

ಇವರು 'ಸಮಾಜನಿಷ್ಠ ಸಾಹಿತ್ಯ ಮತ್ತು ಸಾಮಾನ್ಯನ ಪ್ರತಿಪಾದನೆಗೆ ಸರ್ವಜ್ಞನನ್ನು ಮಾತ್ರ ಬಳಸಿಕೊಂಡು ಕೊನೆಗೆ ಕೀರ್ತನಕಾರರನ್ನು ಸ್ವಲ್ಪ ವಿಶ್ಲೇಷಿಸಿ ಮುಗಿಸುತ್ತಾರೆ. ಸಾಮಾನ್ಯನೆಂದರೆ ಅಧಿಕಾರವಿಲ್ಲದವನು ಆದರೆ ಕಡು ದಾರಿದ್ರ್ಯದವನು ಎಂದೇನೂ ಅಲ್ಲ ಎಂಬ ತಾತ್ಪರ್ಯ ಇವರ ಅಭಿಪ್ರಾಯದ್ದು.

ಡಿ.ಆರ್.ನಾಗರಾಜರ 'ಆಧುನಿಕ ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ' ಎಂಬ ಲೇಖನ ಈ ಕೃತಿಯಲ್ಲಿದೆ. ಡಿ.ಆರ್.ಅವರು ಸಾಮಾನ್ಯನೆಂದರೆ ಯಾರು? ಎಂಬ ಪ್ರಶ್ನೆಗೆ ಉತ್ತರವನ್ನು ಕೊಡುವ ಮೂಲಕ ಲೇಖನ ಪ್ರಾರಂಭಿಸುತ್ತಾರೆ. ಇವರ ಪ್ರಕಾರ ಸಾಮಾನ್ಯ ಮನುಷ್ಯನೆಂದರೆ ಸಾಮಾಜಿಕ ಶ್ರೇಣೀಕರಣದ ಕೆಳ ಹಂತಕ್ಕೆ ಸೇರಿದ ವ್ಯಕ್ತಿ; ಕಿತ್ತು ತಿನ್ನುವ ದಟ್ಟ ದಾರಿದ್ರ್ಯ ಈ ಸಾಮಾನ್ಯ ಮನುಷ್ಯನ ಲಾಂಛನ ಎನ್ನುತ್ತಾರೆ. ಮುಂದೆ ತಮ್ಮ ಲೇಖನದ ಉದ್ದೇಶ ಸಾಮಾನ್ಯ ಮನುಷ್ಯ ಆಧುನಿಕ ಸಾಹಿತ್ಯದಲ್ಲಿ ಎಲ್ಲೆಲ್ಲಿ ವಸ್ತುವಾಗಿ ಬರುತ್ತಾನೆನ್ನುವುದನ್ನು ಗುರುತಿಸುವುದಲ್ಲ; ಸಾಮಾನ್ಯ ಮನುಷ್ಯನೆಂಬ ಸಮಷ್ಟಿಯ ಜೀವನ ಕ್ರಮವನ್ನು ಇವರು ಅರ್ಥಮಾಡಿಕೊಂಡ ನೆಲೆ, ಪ್ರತಿಕ್ರಯಿಸಿದ ರೀತಿ– ಎಂದು ಹೇಳಿಕೊಳ್ಳುತ್ತಾರೆ.

ಸಾಹಿತ್ಯ ನಿರ್ದೇಶಿಸುವ ಮೌಲ್ಯಗಳು, ಪ್ರಕಟಿಸುವ ಸಾಮಾಜಿಕ ನಿಲುವುಗಳು ಪ್ರಮುಖ ಸಂಸ್ಥೆಗಳ ಮೂಲಕ ಸಾಮಾನ್ಯ ಮನುಷ್ಯನ ಜೀವನ ದೃಷ್ಟಿಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದವು. ಅಂದರೆ ಹಳಗನ್ನಡ ಸಾಹಿತ್ಯದಲ್ಲಿ ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯರ ನಡುವಿನ ಸಂಬಂಧ ಏಕಮುಖವಾಗಿತ್ತು. ಸಾಮಾನ್ಯ ಮನುಷ್ಯನಿಗೆ ಸಾಹಿತ್ಯವೆಂಬ ಸಾಮಾಜಿಕ ಸಂಸ್ಥೆಯ ಮೇಲೆ ಯಾವುದೇ ತರಹದ ಹತೋಟಿಯಿರಲಿಲ್ಲ. ಈತ ರಿಸೀವರ್ ಮಾತ್ರ ಆಗಿದ್ದ. ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯನ

ನಡುವೆ ಅರ್ಥಪೂರ್ಣ ಸಂವಾದ, ಕೊಡಕೊಳ್ಳುವಿಕೆ ನಡೆದದ್ದು ವಚನ ಸಾಹಿತ್ಯದಲ್ಲೇ. ಸಾಮಾನ್ಯನೊಡನೆ ಸಂವಾದ ಸಾಧಿಸಲೆಂದೇ ಹುಟ್ಟಿದ ಪ್ರಕಾರ ವಚನ ಸಾಹಿತ್ಯ.

ಆಧುನಿಕ ಕನ್ನಡ ಸಾಹಿತ್ಯದ ನವೋದಯ, ಪ್ರಗತಿಶೀಲ ನವ್ಯ, ಬಂಡಾಯ, ದಲಿತ – ಎಲ್ಲ ಘಟ್ಟಗಳೂ ಸಾಮಾನ್ಯ ಮನುಷ್ಯನಿಗೆ ಸಂಬಂಧಪಟ್ಟ ರೀತಿಯನ್ನು ಡಿ.ಆರ್.ವಿವರಿಸುತ್ತಾರೆ. ಅದರಲ್ಲಿ ಒಂದೊಂದು ಘಟ್ಟದಲ್ಲಿ ಹೇಗೆ ಒಬ್ಬರು – ಇಬ್ಬರು ಆಶಯಕ್ಕೆ ಪ್ರತಿಯಾಗಿ ನಿಲ್ಲುತ್ತಾರೆ ಎಂಬುದನ್ನು ವಿವರಿಸಿದ್ದಾರೆ.

'ಸಾಹಿತ್ಯಾಭಿವ್ಯಕ್ತಿಯಲ್ಲಿ ಸಾಮಾನ್ಯ ಮನುಷ್ಯ' ಎಂಬ ಸಿದ್ಧಲಿಂಗಯ್ಯನವರ ಲೇಖನದಲ್ಲಿ ಅವರು ಸಾಮಾನ್ಯ ಮನುಷ್ಯ ಎಂದರೆ ನನ್ನ ಮನಸ್ಸಿನಲ್ಲಿರುವುದು ಓದು-ಬರಹ ಬರದವನು, ದುಡಿಮೆಗಾರ, ಕೀಳೆನಿಸಿಕೊಂಡವನು, ಆಸ್ಥಾನದಲ್ಲಿ ಜಾಗವಿಲ್ಲದವನು, ಪಂಡಿತನಲ್ಲದವನು ಎಂದು ಅರ್ಥೈಸುತ್ತಾರೆ. ಸಾಮಾನ್ಯನ ಇಡೀ ಬದುಕು ಹಿಂಸೆಯ ವಾತಾವರಣದಲ್ಲಿ ನಡೆಯಿತು. ಶೋಷಣೆ, ದೇವರ ಹೆಸರಿನಲ್ಲಿ ನಡೆದಿದ್ದರಿಂದ ಪ್ರಶ್ನೆ, ಅನುಮಾನಗಳು ಏಳಲಿಲ್ಲ. ಪ್ರಭುವಿನ ಯುದ್ಧ, ಖುಷಿ ಇತ್ಯಾದಿಗಳನ್ನು ಅಟ್ಟಕ್ಕೇರಿಸಿ ವ್ಯವಸ್ಥೆಯನ್ನು ಪೋಷಿಸಿಕೊಂಡು ಬರುವ ಸಾಹಿತ್ಯ ಸೃಷ್ಟಿಯಾಯಿತು.

ಉದ್ದೇಶ ಪೂರ್ವಕವಾಗಿ ಸಮಾಜದ ದೊಡ್ಡ ಪಾಲನ್ನು ಕತ್ತಲೆಯಲ್ಲಿಟ್ಟು ಅವರ ರಕ್ತ-ಮಾಂಸವನ್ನುಂಡು ಕೊಬ್ಬಿದ ಮೇಲು ವರ್ಗ ತನ್ನ ಧೋರಣೆಗಳನ್ನು ಸಾಹಿತ್ಯದಲ್ಲಿ ಆನಿಸಿತು. ಸಾಮಾನ್ಯರಿಂದ ಕ್ರಾಂತಿಕಾರಿಗಳಂತೆ ಸಿಡಿದು ಬಂದವರನ್ನು ತನ್ನೊಳಗೆ ಸೇರಿಸಿಕೊಂಡು ಅವರನ್ನೂ ತನ್ನವರಲ್ಲಿ ಒಬ್ಬನನ್ನಾಗಿಸಿತು. ಆದ್ದರಿಂದಲೇ ಈ ದೇಶದಲ್ಲಿ ಸಾಮಾನ್ಯನ ದನಿ ಸತ್ತು ಹೋದದ್ದು; ಅದು ಆಚೆಗೆ ಬರುವಾಗ ಪಾಲಿಶ್ ಆಗಿ ಬಂದದ್ದು ಎಂದು ಸಾಹಿತ್ಯಾಭಿವ್ಯಕ್ತಿಯಲ್ಲಿ ಸಾಮಾನ್ಯನ ಕುರಿತು ಮಾತನಾಡುತ್ತಾರೆ ಸಿದ್ಧಲಿಂಗಯ್ಯನವರು.

ಹೀಗೆ 'ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ' ಕೃತಿ ಶತಮಾನಗಳಿಂದ ಸಾಮಾನ್ಯ ಮನುಷ್ಯ ಹೇಗೆ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡಿದ್ದಾನೆ ಎಂಬುದನ್ನು ತೋರಿಸಿಕೊಡುತ್ತದೆ. ಇಲ್ಲಿ ಸಾಮಾನ್ಯ ಮನುಷ್ಯ ಪ್ರತಿಯೊಬ್ಬರಿಗೂ ಅವರವರದೇ ರೀತಿಯಲ್ಲಿ ಭಿನ್ನವಾಗಿ ಕಂಡಿದ್ದಾನೆ.

ಕನ್ನಡ ಸಾಹಿತ್ಯ ಮತ್ತು ಮನುಷ್ಯ ಪರಿಕಲ್ಪನೆ: ಪ್ರ.ಸಂ.ಬರಗೂರು ರಾಮಚಂದ್ರಪ್ಪ.

ಈ ಕೃತಿಗೆ ಬರಗೂರ ಅವರು ಪ್ರಸ್ತಾವನೆ ಬರೆಯುತ್ತ ಕನ್ನಡ ಸಾಹಿತ್ಯದಲ್ಲಿ ಕಾಣುವ ಒಂದು ಮುಖ್ಯ ಗುಣಲಕ್ಷಣವೆಂದರೆ ವಿವಿಧ ಕಾಲಘಟ್ಟಗಳಲ್ಲಿ ಕವಿಗಳು ಕಂಡ ಮನುಷ್ಯನ ಕಲ್ಪನೆ. ಇದು ಶಾಸನ ಸಾಹಿತ್ಯದಿಂದ ಹಿಡಿದು ಚಂಪೂ, ವಚನ, ರಗಳೆ, ಷಟ್ಪದಿ, ಸಾಂಗತ್ಯ – ಇತ್ಯಾದಿಗಳಲ್ಲಿ ಹಾದು ಆಧುನಿಕ ಸಾಹಿತ್ಯದಲ್ಲಿ ಮೂಡಿದೆ ಎನ್ನುತ್ತಾರೆ.

ಏಳನೆಯ ಶತಮಾನದ ಬಾದಾಮಿಯ ಶಾಸನವನ್ನು ಉಲ್ಲೇಖಿಸಿ ಈ ಶಾಸನ ರಾಜನ ವ್ಯಕ್ತಿತ್ವವನ್ನು ಹೊಗಳಿದ್ದರೂ ಅದೇ ಆ ಕಾಲದ ಆದರ್ಶ ಮನುಷ್ಯನ ಕಲ್ಪನೆಯೆಂದು ಅಭಿಪ್ರಾಯಪಡುತ್ತಾರೆ. ಯಾಕೆಂದರೆ ಊಳಿಗಮಾನ್ಯ ಪ್ರಭುತ್ವದಲ್ಲಿ ಪ್ರಜೆಗಳಿಗೆ ಪ್ರಭುವೇ ಅಂತಿಮ ಆದರ್ಶ.

ಪಂಪ ಹೇಳುವ 'ಜಾಗದ ಭೋಗದಕ್ಕರದ ಗೇಯದಗೊಟ್ಟಿಯಲಂಪಿನಿಂಪುಗಳ್ಗಾಗರಮಾದ ಮಾನಿಸರೇ ಮಾನಿಸರ್' ಎಂಬ ಆದರ್ಶ ಮಾನವನ ಕಲ್ಪನೆಯನ್ನು ಸಾದರಪಡಿಸಿಯೂ ಆತ ಎಲ್ಲ

ಗುಣಗಳನ್ನೂ ಒಬ್ಬನಲ್ಲಿಯೇ ಕಾಣುವುದಿಲ್ಲ. ಹೀಗೆ ಹೇಳುವಾಗ ಪಂಪನ 'ಮನುಷ್ಯ' ಹಿಂದಿನ ಮನುಷ್ಯನಲ್ಲ; ಹಿಂದಿನ ಕಾಲಘಟ್ಟಕ್ಕೆ ಹೋಲಿಸಿದಾಗ ಪುನರ್‌ಮೌಲೀಕರಣ ಪ್ರಕ್ರಿಯೆಗೆ ಒಳಗಾಗಿ ಹೊರಬಂದ ಮನುಷ್ಯನಾಗಿದ್ದಾನೆ. ಹರಿಹರನ ರಗಳೆಯಲ್ಲಿ ಶಿವಭಕ್ತ ಸಾಮಾನ್ಯರೂ ನಾಯಕರಾದರು. ರಾಘವಾಂಕನ ಹರಿಶ್ಚಂದ್ರ ರಾಜನಾದರೂ ಕಟ್ಟಕಡೆಗೆ ವೀರಬಾಹುಕನ ಆಳಾಗಿ ಸ್ಮಶಾನದಲ್ಲಿ ಶಿವಸಾಕ್ಷಾತ್ಕಾರ ಪಡೆಯುವ ಪ್ರಸಂಗ ಸಾಂಕೇತಿಕವಾಗಿ ಅರ್ಥಪೂರ್ಣವಾದುದು.

ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಈ ವಿವರಣೆ ಪ್ರತಿಯೊಂದು ಕಾಲ ಘಟ್ಟದ ಬದುಕು, ಹಿಂದಿನ ಕಾಲಘಟ್ಟದ ಪುನರ್ ಸಂಯೋಜನೆಯಾಗುವುದನ್ನು ಮತ್ತು ಹೊಸ ಕಾಲಘಟ್ಟದ ಸಾಹಿತ್ಯ ಸೃಷ್ಟಿ ಪುನರ್ ಮೌಲೀಕರಣದ ಒಂದು ಅಂಗವಾಗುವುದನ್ನು ತಿಳಿಯಪಡಿಸಿದೆ.

ಮನುಷ್ಯನೇ ಸಾಹಿತ್ಯದ ಕೇಂದ್ರ ಬಿಂದು. ಆದರೆ ಈ ಮನುಷ್ಯ ಎಲ್ಲ ಕಾಲಕ್ಕೂ ಒಂದೇ ರೀತಿಯಲ್ಲಿರುವುದಿಲ್ಲ. ಮನುಷ್ಯನ ಸ್ವಭಾವಕ್ಕೂ ಸಾಮಾಜಿಕ ಸಂದರ್ಭಕ್ಕೂ ಸಂಬಂಧವಿರುತ್ತದೆ. ಒಂದೊಂದು ಕಾಲಘಟ್ಟದಲ್ಲೂ ಆದರ್ಶ ಮನುಷ್ಯನ ಪರಿಕಲ್ಪನೆಯೊಂದು ಕೆಲಸ ಮಾಡುತ್ತಿರುತ್ತದೆ. ಪ್ರಾಚೀನ ಸಾಹಿತ್ಯದಲ್ಲಿ ಕಂಡುಬರುವ ಮನುಷ್ಯನ ಪರಿಕಲ್ಪನೆ ವಚನಗಳಲ್ಲಿ ಬದಲಾಗಿರುತ್ತದೆ. ಈ ಬದಲಾವಣೆಯ ಪ್ರಕ್ರಿಯೆ ಪ್ರಾಚೀನ ಸಾಹಿತ್ಯದ ಕಾಲದಲ್ಲೇ ಪ್ರಾರಂಭವಾಗಿರುತ್ತದೆ. ಆಧುನಿಕ ಸಂದರ್ಭಕ್ಕೆ ಬಂದರೆ ನವೋದಯದ ಮನುಷ್ಯ ನವ್ಯದಲ್ಲಿ ಬೇರೆಯಾಗಿರುತ್ತಾನೆ; ದಲಿತ – ಬಂಡಾಯದಲ್ಲಿ ಬದಲಾಗಿರುತ್ತಾನೆ.

ಈ ಕೃತಿಯು ಒಟ್ಟು ೯ ಲೇಖನಗಳನ್ನು ಒಳಗೊಂಡಿದೆ.

೧. ಡಾ. ಬಸವರಾಜ ಕಲ್ಗುಡಿಯವರ ಆಶಯ ಲೇಖನ.

೨. ಡಾ.ಎಚ್.ಎಸ್.ಗೋಪಾಲರಾವ್ ಅವರ ಶಾಸನಗಳಲ್ಲಿ ವ್ಯವಸ್ಥೆ ಮತ್ತು ಮನುಷ್ಯ ಪರಿಕಲ್ಪನೆ.

೩. ಆರ್.ಲಕ್ಷ್ಮೀನಾರಾಯಣರ ಪ್ರಾಚೀನ ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡ ಆದರ್ಶ ಮನುಷ್ಯ.

೪. ಜಿ.ಆರ್.ತಿಪ್ಪೇಸ್ವಾಮಿಯವರ ಮಧ್ಯಕಾಲೀನ ಸಾಹಿತ್ಯದಲ್ಲಿ ಬದಲಾದ ಮನುಷ್ಯ ಪರಿಕಲ್ಪನೆ.

೫. ನೋ.ಸಂ.ತಿಮ್ಮೇಗೌಡರ: ನವೋದಯ ಸಾಹಿತ್ಯದಲ್ಲಿ ಹೊಸ ಮನುಷ್ಯನ ಹುಡುಕಾಟ

೬. ಅಮರೇಶ ನುಗಡೋಣಿರವರ: ನವ್ಯಸಾಹಿತ್ಯದಲ್ಲಿ ಆಧುನಿಕ ಮನುಷ್ಯನ ಸ್ವರೂಪ

೭. ಕುಂ. ವೀರಭದ್ರಪ್ಪನವರ ಪ್ರಗತಿಶೀಲ ಸಾಹಿತ್ಯದಲ್ಲಿ ಪ್ರಗತಿಪರ ಮನುಷ್ಯನ ಕಲ್ಪನೆ.

೮. ಎಂ.ಡಿ.ಒಕ್ಕುಂದರ ದಲಿತ – ಬಂಡಾಯ ಸಾಹಿತ್ಯದಲ್ಲಿ ಸಾಮಾಜಿಕ ಮನುಷ್ಯ.

೯. ಡಾ. ಬಸವರಾಜ ಮಲಶೆಟ್ಟಿಯವರ ಕನ್ನಡ ಜನಪದ ಸಾಹಿತ್ಯದಲ್ಲಿ ಮನುಷ್ಯ ಪರಿಕಲ್ಪನೆ.

ಡಾ. ಬಸವರಾಜ ಕಲ್ಗುಡಿಯವರು ಆಶಯ ಲೇಖನದಲ್ಲಿ ಯಾವುದೇ ಶ್ರೇಷ್ಠ ಸಾಹಿತ್ಯದ ಮೂಲಭೂತವಾದ ಹುಡುಕಾಟ ಮನುಷ್ಯನ ಅಸ್ತಿತ್ವಕ್ಕೆ ಸಂಬಂಧಪಟ್ಟಿದ್ದೇ ಆಗಿರುತ್ತದೆ; ಚರಿತ್ರೆಯನ್ನು ಮನುಷ್ಯ ರೂಪಿಸಿದನೆನ್ನುವುದು ನಿಜ. ಆದರೆ ಮನುಷ್ಯ ಸಂಬಂಧಗಳ ಅರ್ಥಪೂರ್ಣ ನೆಲೆಗಳ ಶೋಧನೆಯನ್ನೂ ಸಾಹಿತ್ಯವು ಗಾಢ ಶೋಧನೆಗೆ ಗುರಿಪಡಿಸುತ್ತದೆ ಎನ್ನುತ್ತಾರೆ.

ಕನ್ನಡ ಸಾಹಿತ್ಯವು ೧೦ನೆಯ ಶತಮಾನದಿಂದ ಹಿಡಿದು ಆಧುನಿಕ ಕಾಲದವರೆಗಿನ ಬದಲಾದ ಸಾಂಸ್ಕೃತಿಕ ಪಲ್ಲಟಗಳನ್ನು ಹಿಡಿದಿಟ್ಟಿರುವುದಷ್ಟೇ ಅಲ್ಲ, ಇದಕ್ಕೆ ಮೂಲ ಕಾರಣವಾದ ಮನುಷ್ಯನ ಅಸ್ತಿತ್ವದ ಸ್ವರೂಪಗಳನ್ನು ದಾಖಲಿಸಿದೆ. ಮನುಷ್ಯ ಪರಿಕಲ್ಪನೆಯ ಸ್ವರೂಪದ ಹುಟುಕಾಟ ಈ ಎರಡರಲ್ಲಿಯೂ

ಭೌತ ಪ್ರಪಂಚದ ಮಿತಿಯನ್ನು ವಿವರಿಸುವುದಷ್ಟೇ ಅಲ್ಲ; ಅದನ್ನು ಮೀರಿ ಬೆಳೆಯಬೇಕೆನ್ನುವ ಆಧ್ಯಾತ್ಮದ ನೆಲೆಗಳ ಹುಡುಕಾಟವೇ ಆಗಿದೆ.

ಆಳುವ ವರ್ಗವು ದೇಹದ ತೀವ್ರಭೋಗಕ್ಕೆ ಗಮನಕೊಟ್ಟು ತನ್ನ ಧರ್ಮವನ್ನು ಮರೆತರೆ, ಸಾಮಾನ್ಯ ಪ್ರಜೆಯು ದೇಹವನ್ನೇ ಗೌಣವಾಗಿ ಕಾಣಬೇಕೆನ್ನುವ ಆರೋಪಿತ ಆಶಯಗಳು ಮನುಷ್ಯನ ಅಸ್ತಿತ್ವವನ್ನು ಕುರಿತಂತೆ ರಾಜ್ಯಶಾಹಿ ವರ್ಗವು ತಳೆದ ನಿಲುವುಗಳನ್ನು ಸ್ಪಷ್ಟವಾಗಿ ನಿರೂಪಿಸುತ್ತದೆ.

೧೧ನೆಯ ಶತಮಾನದ ನಂತರದ ಸಾಮಾಜಿಕ ಮನುಷ್ಯನ ಪರಿಕಲ್ಪನೆಯ ಮುಖ್ಯ ಸ್ವರೂಪವೆಂದರೆ ಹೊಸ ಸಾಮಾಜಿಕ, ಸಾಂಸ್ಕೃತಿಕ ಗುಣದ ಮನುಷ್ಯ ಸೃಷ್ಟಿಯೇ ಆಗಿದೆ. ನಂತರದಲ್ಲಿ ಕಲ್ಗುಡಿಯವರು ಆಧುನಿಕ ಸಾಹಿತ್ಯದ ಘಟ್ಟಗಳಾದ ನವೋದಯ, ನವ್ಯ, ದಲಿತ – ಬಂಡಾಯಗಳು ಹೇಗೆ ಮನುಷ್ಯನ ಅಂತಃಸತ್ವವನ್ನು ಕುರಿತಂತೆ ಹೊಸ ಅರಿವನ್ನು ಮೂಡಿಸುವಂಥವುಗಳಾಗಿವೆ ಎಂಬುದನ್ನು ವಿಸ್ತೃತವಾಗಿ ಚರ್ಚಿಸುತ್ತಾರೆ.

ಸಾಹಿತ್ಯದ ಕೆಲಸ ಮನುಷ್ಯನ ಚರಿತ್ರೆಯನ್ನು ಹಿಡಿಯುವುದು ಮಾತ್ರವಲ್ಲ, ಅದನ್ನು ಕಟ್ಟುವುದಾಗಿದೆ. ಅಂಥ 'ಮನುಷ್ಯ ಚೈತನ್ಯ'ವನ್ನು ಅರಸಿ ಕಟ್ಟುವ ಕೆಲಸವನ್ನು ಮತ್ತೆ ಸಾಹಿತ್ಯ ಮಾಡಬೇಕಾಗಿದೆ ಎಂಬುದು ಬಸವರಾಜ ಕಲ್ಗುಡಿಯವರ ಆಶಯ.

ಮುಂದಿನ ೮ ಲೇಖನಗಳಲ್ಲಿ ಸಾಹಿತ್ಯದಲ್ಲಿ ಮನುಷ್ಯನ ಹುಡುಕಾಟ ಕಾಲದಿಂದ ಕಾಲಕ್ಕೆ ಬದಲಾದ ಸಾಹಿತ್ಯದ ಘಟ್ಟ – ಸ್ವರೂಪಗಳ ಆಶಯಕ್ಕೆ ಸಂಬಂಧಿಸಿದ್ದಾಗಿದೆ. ಇಲ್ಲಿ ಮನುಷ್ಯ ಎಂದರೆ ಸಾಮಾನ್ಯ ಮನುಷ್ಯ ಅಥವಾ ಮನುಷ್ಯನಷ್ಟೇ ಅಲ್ಲ; ಅವನು ಆದರ್ಶ ಮನುಷ್ಯ, ಆಧುನಿಕ ಮನುಷ್ಯ, ಪ್ರಗತಿಪರ ಮನುಷ್ಯ, ಸಾಮಾಜಿಕ ಮನುಷ್ಯ, ಬದಲಾದ ಮನುಷ್ಯ ಮುಂತಾದ ಆಯಾಮಗಳಲ್ಲಿ ಮನುಷ್ಯ ಪರಿಕಲ್ಪನೆಯನ್ನು ವಿಭಿನ್ನ ದೃಷ್ಟಿಕೋನಗಳಿಂದ ಕಟ್ಟಿಕೊಡುವ ಕೆಲಸವನ್ನು ಮುಂದಿನ ಎಲ್ಲ ಲೇಖನಗಳೂ ಮಾಡುತ್ತವೆ. ಈ ಕೃತಿಯ ಆಶಯ ನನ್ನ ಅಧ್ಯಯನದ ಪರಿಕಲ್ಪನೆಗೆ ಹತ್ತಿರವಿದ್ದರೂ ಇಲ್ಲಿಯ ಲೇಖಕರೆಲ್ಲ ನೋಡುವ ಬೇರೆ ಬೇರೆ ದೃಷ್ಟಿಕೋನಗಳ ಕಾರಣಕ್ಕಾಗಿ ನನ್ನ ಪರಿಕಲ್ಪನೆಯನ್ನು ಕಟ್ಟಿಕೊಳ್ಳುವಲ್ಲಿ 'ಸಾಮಾನ್ಯ ಮನುಷ್ಯ' ಎಂಬುದಕ್ಕೆ ಬೇರೆ ಬೇರೆ ರೀತಿಯ ಆಯಾಮಗಳು ಇಲ್ಲಿ ಒದಗುತ್ತವೆ.

ವೇದಗಳಲ್ಲಿ ಜನಸಾಮಾನ್ಯರು: ಬಿ. ವ್ಹಿ. ವೀರಭದ್ರಪ್ಪ

ವೇದಗಳು ಹಿಂದೂಗಳಿಗೆ ಪವಿತ್ರ ಗ್ರಂಥಗಳಾಗಿವೆ. ವೇದಗಳು ಸಾಮಾನ್ಯವಾಗಿ ಪಾರಲೌಕಿಕ ಸಾಧಕರು, ಆಧ್ಯಾತ್ಮಿಕ ಚಿಂತಕರೂ ಆದ ಋಷಿ ಮುನಿಗಳಿಂದ ರಚನೆಗೊಂಡವುಗಳಾಗಿವೆ. ಹೀಗಾಗಿ ವೇದಗಳಿಗೂ ಜನಸಾಮಾನ್ಯರಿಗೂ ಯಾವುದೇ ರೀತಿಯ ಸಂಬಂಧದ ಸಾಧ್ಯತೆಗಳನ್ನು ನಮ್ಮ ಇದುವರೆಗಿನ ಅಧ್ಯಯನಕಾರರು ನಿರಾಕರಿಸುತ್ತಲೇ ಬಂದಿದ್ದಾರೆ. ಆದರೆ ವೇದಗಳು ಸಹ ಅಂದಿನ ಜನ ಜೀವನದ ಕುರಿತಾಗಿ ಬರೆದ ಕೃತಿಗಳಾದುದರಿಂದ ಅಂದಿನ ಜನಪದ ಸಂಸ್ಕೃತಿಯ ವಕ್ತಾರರಾಗಿ ವೇದಗಳು ಕಾಣಿಸಿಕೊಳ್ಳುತ್ತವೆ. ಅಂತೆಯೇ ಈ ಕೃತಿಯ ಮುಖ್ಯ ಉದ್ದೇಶ ವೇದಕಾಲದ ಜನಸಾಮಾನ್ಯರ ಬದುಕು ಮೂಡಿ ಬಂದ ಬಗೆಯನ್ನು ಅಧ್ಯಯನಕ್ಕೆ ಒಳಪಡಿಸುವುದಾಗಿದೆ. ಮೊದಲು ಆರ್ಯ, ಅನಾರ್ಯರ ಕುರಿತಾಗಿ ಅವರಿಬ್ಬರ ನಡುವಿನ ಸಂಘರ್ಷ, ಕೊಡುಕೊಳ್ಳುವಿಕೆಗಳ ಮೂಲಕ ಅವರಿಬ್ಬರ ಮಧ್ಯ ಬೆಸೆದ ಬಾಂಧವ್ಯದ ರೀತಿ ಎಲ್ಲವನ್ನೂ ವಿವರಿಸುತ್ತಾರೆ. ನಂತರದ ಅಧ್ಯಯನವನ್ನು ಎರಡು ಅಧ್ಯಾಯಗಳಾಗಿ ವಿಂಗಡಿಸಿದ್ದಾರೆ. ಮೊದಲ ಭಾಗದಲ್ಲಿ ಜಾನಪದ, ಕಸಬುಗಳು, ವಿನೋದಗಳು, ಅನೈತಿಕತೆ,

ಮೂಢನಂಬಿಕೆಗಳು ಎಂದು ೫ ವಿಭಾಗಗಳಲ್ಲಿ ವೇದ ಕಾಲದ ಜನರ ಲೌಕಿಕ ಬದುಕಿಗೆ ಸಂಬಂಧಿಸಿದ ಋಗ್ವೇದ, ಅಥರ್ವಣವೇದಗಳಲ್ಲಿನ ಅನೇಕ ಅಂಶಗಳನ್ನು ಚರ್ಚಿಸಲಾಗಿದೆ.

ಎರಡನೆಯ ಭಾಗದಲ್ಲಿ

೧. ವೈದಿಕ ಋಷಿಗಳ ಲೌಕಿಕ ಬಯಕೆಗಳು.

೨. ಮಾನವ ದೇವರುಗಳು.

೩. ನಿತ್ಯೋಪಯೋಗಿ ದೇವರುಗಳು.

೪. ಮಹಿಳೆಯರ ಸ್ಥಿತಿಗತಿಗಳು.

೫. ಪುರುಷ ಸೂಕ್ತ ಮತ್ತು ಶೂದ್ರರು.

೬. ವೇದಗಳಲ್ಲಿ ವಿಜ್ಞಾನ.

ಈ ಮೇಲಿನ ವಿಷಯಗಳ ಕುರಿತು ಲೇಖಕರು ಕೃತಿಯಲ್ಲಿ ವಿಸ್ತೃತವಾಗಿ ವಿಶ್ಲೇಷಿಸಿದ್ದಾರೆ. ಇಷ್ಟು ಅಂಶಗಳನ್ನು ಒಳಗೊಂಡಿರುವ ಈ ಕೃತಿ ಸಾಮಾನ್ಯ ಮನುಷ್ಯನ ಕುರಿತಾದ ನನ್ನ ಅಧ್ಯಯನದ ವಿಷಯಕ್ಕೆ ಅಗತ್ಯ ಮಾಹಿತಿಗಳನ್ನು ಒದಗಿಸುವಲ್ಲಿ ಸಹಕಾರಿಯಾಗಿದೆ. ವೇದಕಾಲದ ಸಾಮಾನ್ಯ ಜನರ ಸ್ಥಿತಿಯನ್ನು ಅರ್ಥೈಸಿಕೊಳ್ಳುವುದು ಮತ್ತು ಪ್ರಾಚೀನ ಕಾಲದ ಸಾಮಾನ್ಯ ಮನುಷ್ಯನೊಂದಿಗೆ ವೇದ ಕಾಲದ ಸಾಮಾನ್ಯ ಮನುಷ್ಯನನ್ನು ತೌಲನಿಕವಾಗಿ ನೋಡುವಂತೆ ಈ ಕೃತಿ ಪ್ರೇರೇಪಿಸುತ್ತದೆ. ಸಾಮಾನ್ಯ ಮನುಷ್ಯನ ಕುರಿತಾದ ನನ್ನ ಅಧ್ಯಯನದ ನಿರ್ವಚನೆಗೆ 'ವೇದಗಳಲ್ಲಿ ಜನಸಾಮಾನ್ಯರು' ಕೃತಿ ಹೊಸದಾದ ಹೊಳಹುಗಳನ್ನು ಕೊಡುತ್ತದೆ.

ಕನ್ನಡ ಕಾವ್ಯ ಪರಂಪರೆಯಲ್ಲಿ ಜಾನಪದ ಪ್ರಜ್ಞೆ: ಸಂ.ಡಾ.ಎಂ.ಎಸ್.ಶೇಖರ

ಇದೊಂದು ಸಂಪಾದನಾ ಕೃತಿ. ಇದರಲ್ಲಿ ಒಟ್ಟು ೧೪ ಲೇಖನಗಳಿವೆ. ಜಾನಪದ ಪ್ರಜ್ಞೆಯಿಟ್ಟುಕೊಂಡು ಕಾವ್ಯ ರಚಿಸಿದ ಕವಿಗಳನ್ನು ಆಧಾರವಾಗಿಟ್ಟುಕೊಂಡು ತಮ್ಮ ಕೃತಿಯಲ್ಲಿ ಹೇಗೆ ಜಾನಪದೀಯ ಅಂಶಗಳನ್ನು ಗ್ರಹಿಸಿದ್ದಾರೆನ್ನುವುದನ್ನು ತೋರಿಸಿಕೊಡುವ ಪ್ರಯತ್ನ ಈ ಕೃತಿಯಲ್ಲಿ ನಡೆದಿದೆ. ಉದಾ: ಹರಿಹರ, ರಾಘವಾಂಕ ಎಂಬ ಡಾ.ಲಿಂಗಣ್ಣ ಗೋನಾಳ ಅವರ ಲೇಖನದಲ್ಲಿ ಬುಡಕಟ್ಟುಗಳ ಚಿತ್ರಣ, ವೀರಬಾಹುಕನ ಚಿತ್ರಣ ಮುಂತಾದ ಕಡೆಗಳಲ್ಲಿ ಲೇಖಕರು ಜನಸಾಮಾನ್ಯ ಬದುಕಿನ ಚಿತ್ರಣವನ್ನು ತುಂಬ ಮಾರ್ಮಿಕವಾಗಿ ತೋರಿಸಿದ್ದಾರೆ.

ಇನ್ನೊಂದು ಲೇಖನದ ಉದಾಹರಣೆಯನ್ನು ನೋಡುವುದಾದರೆ ಕುಮಾರವ್ಯಾಸ, ಲಕ್ಷ್ಮೀಶ ಎಂಬ ಡಾ. ನಾಗಾಬಾಯಿ ಬುಳ್ಳಾ ಅವರ ಲೇಖನದಲ್ಲಿ ಕುಮಾರವ್ಯಾಸ ಮತ್ತು ಲಕ್ಷ್ಮೀಶ ಇವರಿಬ್ಬರ ಕೃತಿಗಳಲ್ಲಿ ಮೂಡಿಬಂದ, ಜನಸಾಮಾನ್ಯರ ಬದುಕಿನಲ್ಲಿ ಹಾಸುಹೊಕ್ಕಾಗಿದ್ದ ನಂಬಿಕೆಗಳು, ಪವಾಡಗಳು, ವೇಷಭೂಷಣಗಳು, ಉಡುಗೆ-ತೊಡುಗೆಗಳು ಮುಂತಾದವುಗಳ ಕುರಿತಾದ ಅನೇಕ ಮಹತ್ವದ ಮಾಹಿತಿಗಳನ್ನು ಕಲೆ ಹಾಕಲಾಗಿದೆ.

ಒಟ್ಟಾರೆ ಈ ಕೃತಿಯಲ್ಲಿ ಜನಪದವೆಂದರೆ ಜನಸಾಮಾನ್ಯನ ಬದುಕು, ಜನಸಾಮಾನ್ಯನೇ ಜಾನಪದದ ಜೀವಾಳ ಎಂಬುದನ್ನು ಕೇಂದ್ರೀಕರಿಸಿಕೊಂಡು ಎಲ್ಲಾ ಲೇಖನಗಳನ್ನು ಕಟ್ಟಿಕೊಳ್ಳಲಾಗಿದೆ. ವಡ್ಡಾರಾಧನೆಕಾರ, ಹರಿಹರ, ರಾಘವಾಂಕ, ಕುಮಾರವ್ಯಾಸ, ನಯಸೇನ ಮುಂತಾದ ಕವಿಗಳು ತಮ್ಮ ಸಾಹಿತ್ಯದ ಮುಖೇನ ಜನಸಾಮಾನ್ಯನ ಬದುಕನ್ನು ಕಟ್ಟಿಕೊಟ್ಟ ಪರಿಯನ್ನು ಈ ಲೇಖನಗಳಲ್ಲಿ

ಸಂಗ್ರಹಿಸಲಾಗಿದೆ. ಈ ಕಾರಣಕ್ಕಾಗಿಯೇ ನನ್ನ ಅಧ್ಯಯನಕ್ಕೆ 'ಕನ್ನಡ ಕಾವ್ಯ ಪರಂಪರೆಯಲ್ಲಿ ಜಾನಪದ ಪ್ರಜ್ಞೆ' ಕೃತಿ ಪ್ರಸ್ತುತಗೊಳ್ಳುತ್ತದೆ.

ನಯಸೇನ ಮತ್ತು ಅವನ ಕೃತಿಗಳು: ಡಾ. ಬಿ. ವ್ಹಿ. ಮಲ್ಲಾಪುರ

'ನಯಸೇನ ಮತ್ತು ಅವನ ಕೃತಿಗಳು' ಇದು ಡಾ.ಬಿ.ವ್ಹಿ. ಮಲ್ಲಾಪೂರ ಅವರ ಪಿಎಚ್.ಡಿ ಮಹಾಪ್ರಬಂಧ. ಈ ಕೃತಿಗೆ ಅರಿಕೆಯನ್ನು ಬರೆಯುತ್ತ ಡಾ. ಮಲ್ಲಾಪೂರ ಅವರು "ಧರ್ಮಾಮೃತ ಜಾನಪದ ಸತ್ವವನ್ನೊಳಗೊಂಡ ಅಪೂರ್ವ ಕೃತಿ. ಲೋಕ ಜೀವನವನ್ನು ಪ್ರತಿಬಿಂಬಿಸುವ ಕೃತಿ. ಅಲ್ಲದೇ ಅದು ಜನಸಮ್ಮುಖವೂ ಆಗಿದೆ. ತತ್ಕಾಲೀನ ಜನಜೀವನ, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳ ಅಭ್ಯಾಸಕ್ಕೆ ಅವನ ಕೃತಿ ವಿಪುಲ ಸಾಮಗ್ರಿಯನ್ನೊದಗಿಸುತ್ತದೆ" ಎಂದು ಹೇಳುತ್ತಾರೆ.

ಇವರ ಮಹಾಪ್ರಬಂಧ ನನ್ನ ಅಧ್ಯಯನದ ಮುಖ್ಯ ಪಠ್ಯಗಳಲ್ಲಿ ಒಂದಾದ ಧರ್ಮಾಮೃತ, ಅದರ ಕರ್ತೃ ನಯಸೇನ ಮತ್ತು ಅವನ ಕೃತಿಗಳು ಎಂಬುದಾದ್ದರಿಂದ ನನ್ನ ಅಧ್ಯಯನದ ವಿಷಯ ಗ್ರಹಿಕೆಗೆ ಈ ಕೃತಿ ಅತ್ಯಂತ ಮಹತ್ವದ್ದಾಗುತ್ತದೆ. ಅದರಲ್ಲೂ ಸಮಾಜದರ್ಶನವೆಂಬ ಈ ಮಹಾಪ್ರಬಂಧದ ಏಳನೆಯ ಅಧ್ಯಾಯ ನನಗೆ ಅನೇಕ ಮಾಹಿತಿಗಳನ್ನು ಒದಗಿಸುತ್ತದೆ. ಡಾ. ಮಲ್ಲಾಪೂರ ಅವರು ಸಮಾಜದರ್ಶನ ಅಧ್ಯಾಯವನ್ನು ಬರೆಯುತ್ತ ಡಾ. ಚಿದಾನಂದ ಮೂರ್ತಿಯವರು "ಒಂದು ಕಾಲದ ಜನಜೀವನ ಇಷ್ಟರ ಮಟ್ಟಿಗೆ ಒಂದು ಕೃತಿಯಲ್ಲಿ ಅಭಿವ್ಯಕ್ತಗೊಂಡಿರುವುದು ಕನ್ನಡದಲ್ಲಿ ಅತ್ಯಪೂರ್ವ" ಎಂದು ಹೇಳಿದ ಮಾತನ್ನು ಉಲ್ಲೇಖಿಸುತ್ತಾರೆ. ನಯಸೇನನ ಧರ್ಮಾಮೃತ ಜನಜೀವನದ ಕಥಾಕೋಶವಾಗಿದೆ. ನಯಸೇನ ಚಿತ್ರಿಸಿರುವ ಧರ್ಮಾಮೃತದಲ್ಲಿ ಪರದ-ಪಾಮರ, ಸೂಳೆ-ಗರತಿ, ರಾಜ-ರಂಕ, ತುಂಟ-ಬಂಟ, ಕಳ್ಳ-ಸುಳ್ಳ, ವಿಟ-ದಿಟ, ಸಾಹುಕಾರ-ಸಾಲಗಾರ, ಕುಲಜ-ಹೊಲೆಯ, ತಳವಾರ-ಒಕ್ಕಲಿಗ, ಗಾವುಂಡ-ಶ್ಯಾನುಭೋಗ - ಹೀಗೆ ಎಲ್ಲ ವೃತ್ತಿಯ ಎಲ್ಲ ವರ್ಗದ ಜನರನ್ನು ಚಿತ್ರಿಸಿದ್ದಾರೆ. ನಯಸೇನ ಚಿತ್ರಿಸಿರುವುದು ಸಮಾಜದಲ್ಲಿನ ಅತ್ಯಂತ ಸಾಮಾನ್ಯ ಮನುಷ್ಯನನ್ನು. ಅದುವರೆಗೆ ಯಾರೂ ಸಾಮಾನ್ಯರಿಗೆ ಸಾಹಿತ್ಯದಲ್ಲಿ ಈ ಮಟ್ಟದ ಪ್ರವೇಶಿಕೆಯನ್ನು ಕೊಟ್ಟಿರಲೇ ಇಲ್ಲ. ಸಮಾಜದರ್ಶನ ಅಧ್ಯಾಯದ ಸಾಂಸಾರಿಕ ಚಿತ್ರಣ ಎಂಬ ಉಪ ಶೀರ್ಷಿಕೆಯಲ್ಲಿ ನಯಸೇನ ತಂದ ಜನಸಾಮಾನ್ಯರನ್ನು ಮಲ್ಲಾಪೂರ ಅವರು ವಿವರಿಸುತ್ತಾರೆ.

ಶ್ರೀಮಂತರ ಮನೆಗಳಲ್ಲಿ ಕೂಸುಗಳನ್ನು ಸಾಕಲು ದಾದಿಯರನ್ನು ನೇಮಿಸಲಾಗುತ್ತಿತ್ತು. ಹೆಂಡತಿಯ ಮೇಲಿನ ಸಿಟ್ಟನ್ನು ಮಕ್ಕಳ ಮೇಲೆ ಹಾಕಿ ಹೊಡೆಯುವ ತಂದೆ, ವಯಸ್ಸಿಗೆ ಬಂದ ಮಕ್ಕಳನ್ನು ಮಾರಿ ಹೊಸ ಮದುವೆ ಮಾಡಿಕೊಳ್ಳುವ ಉಲ್ಲೇಖವನ್ನು ಹೇಳುತ್ತಾರೆ. ತಂದೆ-ತಾಯಿಗಳನ್ನು ಮಮ್ಮಲ ಮರುಗಿಸುವ, ಕೇವಲ ಹೊನ್ನಿಗೆ ಅಳಿಪುವ ಮಕ್ಕಳೂ ಇದ್ದರು. ಜಗಳಗಂಟ ಹೆಂಡತಿಯಿಂದಾಗಿ ಮಿಡುಮಿಡುಕುವ, ಒಲ್ಲದ ಹೆಂಡತಿ ಗಂಟುಬಿದ್ದು ಒಂದೇ ಸವನೇ ಬಿಸುಸುಯ್ಯುವ, ಇಬ್ಬರು - ಮೂವರನ್ನು ಮದುವೆಯಾಗಿ ಪರಸ್ಪರ ಪುರುಡಿಸುವ, ಸವತಿಯರ ಮಧ್ಯ ಸಿಕ್ಕು ಗೋಳಾಡುವ ದುರ್ದೈವಿ ಗಂಡಂದಿರೂ ಇದ್ದರು. ಗಂಡನಿದ್ದರೂ ಹಾದರದಲ್ಲಿ ತೊಡಗಿದ, ಪೆರರ್ಗೆ ಕೂರ್ಪ ಪೆಸರ್ ಪೋದ ಹೆಂಡಂದಿರಿಗೆ ಸಮಾಜದಲ್ಲಿ ಗೌರವವಿರಲಿಲ್ಲ. ಅಂತಹವರು ಲೋಕಕ್ಕೆ, ಗಂಡಂದಿರಿಗೆ ಅಂಜುತ್ತಿದ್ದರೂ ತಮ್ಮ ದುಷ್ಕೃತ್ಯಗಳನ್ನು ಬಿಡುತ್ತಿರಲಿಲ್ಲ. ಗಂಡನ ಮನೆಯಲ್ಲಿ ಕಳುವು ಮಾಡಿ ತಮ್ಮವರ್ಗೆ ಈವ ಹೆಣ್ಣು ಮಕ್ಕಳೂ ಇದ್ದರು. ಹೆಂಡತಿಯನ್ನೇ ಮಾರಿ ಮಾನ್ಯಂಬಡೆವ ಗಂಡುಗಳೂ ಇದ್ದವು. ಬಾಡಿಗೆ ಮನೆಯಲ್ಲಿ ವಾಸಿಸುವ ಸಂಸಾರಗಳಿದ್ದವು. ಬಾಲ್ಯದಲ್ಲಿ ವಿವಾಹವಾಗಿ ಕಿರಿಯಂದೇ ರಂಡೆಯಾದವರೂ ಇದ್ದರು. ಹೀಗೆ

ಸಾಂಸಾರಿಕ ಚಿತ್ರಣದಲ್ಲಿನ ಅನೇಕ ತೆರನಾದ ಸಾಮಾನ್ಯ ಮನುಷ್ಯರ ವಿನ್ಯಾಸಗಳು ಧರ್ಮಾಮೃತದಲ್ಲಿ ದೊರೆಯುವುದನ್ನು ಇಲ್ಲಿ ವಿವರಿಸಲಾಗಿದೆ.

ಅರಸು–ಅರಸತ್ವ–ಅರಸು ಪರಿವಾರ ಎಂಬ ಉಪ ಅಧ್ಯಾಯದಲ್ಲಿ ಅರಸರಿಗೂ ಮತ್ತು ಸಾಮಾನ್ಯರಿಗೂ ಇರುವ ಸಂಬಂಧಗಳನ್ನು ವಿವರಿಸಿದ್ದಾರೆ. ಚಕ್ರವರ್ತಿಗಳನ್ನು ಗೌಡರು, ದೊಡ್ಡ ದೊಡ್ಡ ಒಕ್ಕಲಿಗರು ಮಾತ್ರ ಅರಿತಿರುತ್ತಿದ್ದರು. ಉಳಿದಂತೆ ಸಾಮಾನ್ಯರಿಗೆ ಅವರ ಬಗ್ಗೆ ಅರಿವಿರಲಿಲ್ಲ. ತುಳಿಲಾಳ್ಗಳು ತಮ್ಮನ್ನು ಮನ್ನಿಸದ ರಾಜನನ್ನು ಬಿಟ್ಟು ಹೋಗುತ್ತಿದ್ದರು. ಅರಸಾಳ್ಗಳು ಮತ್ತೊಬ್ಬರನ್ನು ನೋಯಿಸಿ ಉಣ್ಣುತ್ತಿದ್ದರು. ರಾಜಕನ್ಯೆಯರನ್ನು ನೃಪಕಾಂತೆಯರನ್ನು ಕಾಮಿಸಬಯಸುವ ಸಾಮಾನ್ಯರು ಶಿಕ್ಷೆಗೊಳಗಾಗುತ್ತಿದ್ದರು. ಸಂಬಳವಿಲ್ಲದೇ ದಂಡಿನಾಳ್ಗಳು ದೂರುತ್ತಿದ್ದುದೂ ಉಂಟು. ಬಿಟ್ಟೀಕೆಲಸಗಳನ್ನು ಅರಸರು ಜನರಿಂದ ಮಾಡಿಸುತ್ತಿದ್ದರು. ಹೀಗೆ ಆಳುವ – ಆಳಿಸಿಕೊಳ್ಳುವ ಜನರ ಮಧ್ಯದ ವೈವಿಧ್ಯಮಯ ಸಂಬಂಧಗಳನ್ನು, ಪ್ರಭುತ್ವದ ಬಗೆಗೆ ಸಾಮಾನ್ಯರಲ್ಲಿರುವ ಗೌರವ, ಭಯ, ನಿರ್ಲಕ್ಷ, ದೂಷಣೆಗಳನ್ನು ಕಾಣುತ್ತೇವೆ. ಅಂತೆಯೇ ರಾಜರಲ್ಲಿ ಸಾಮಾನ್ಯರ ಕುರಿತಾಗಿನ ದರ್ಪ, ಶೋಷಣೆ, ಸುರಕ್ಷಿತ ರಾಜ್ಯ ಭಾರಗಳೆಲ್ಲವನ್ನೂ ಕಾಣುತ್ತೇವೆ.

ಹೊಲೆಯರ ಬಗ್ಗೆ ಅಂದಿನ ಸಮಾಜದಲ್ಲಿ ಇದ್ದ ಸ್ಥಿತಿಗತಿಗಳ ಬಗ್ಗೆ ಕೂಡ ನಯಸೇನ ಮಾತನಾಡುತ್ತಾನೆ. ಹೊಲೆಯರ ಕೇರಿಗಳು ಮೂಳೆಮಯವಾಗಿರುತ್ತಿದ್ದವು. ಅವರ ಮನೆಗಳು ಅಶುಚಿಯಾಗಿರುತ್ತಿದ್ದವು. ಹೊಲೆಯರು ವರ್ಣಕ್ಕೆ ಸಲ್ಲದವರು. ಕುಲಜರನ್ನು ಅವರು ಪೊರ್ದುತ್ತಿರಲಿಲ್ಲ ಎನ್ನುತ್ತಾನೆ. ಪೊಲೆಯರ ಮನೆಯ ಕೂಳುಂಬಾಡುಂ ಪೊಲ್ಲದಾಗಿತ್ತು. ಅವರ ಆರ್ಥಿಕ ಸ್ಥಿತಿ ಚೆನ್ನಾಗಿರಲಿಲ್ಲ. ಊರಲ್ಲಿನ ಸತ್ತದನಗಳನ್ನು ಹೊತ್ತು ತಂದು ಊರ ಜನರಿಗೆ ಬೇಕಾಗುವ ತೊಗಲಿನ ಮಿಣಿ ಮೊದಲಾದ ವಸ್ತುಗಳನ್ನು ಮಾಡಿಕೊಡುತ್ತಿದ್ದರು. ಕೊಲೆಯಾದವನನ್ನು ಎಳೆದು ಹಾಕುವ ಕೆಲಸವೂ ಇವರದೇ ಆಗಿತ್ತು. ಹೊಲೆಯರು ದುಷ್ಟಜರಾದರೂ ಶ್ರದ್ಧಾಚಾರದವರಾಗಿದ್ದಾರೆ. ಧರೆ ಅವರನ್ನು ಹೊಗಳುತ್ತಿದ್ದುದೂ ಉಂಟು. ಹಣ ಪಡೆದು ಕೂಸುಗಳನ್ನು ಕೊಂದು ಬರುವ ಕೆಲಸವನ್ನು ಅವರು ಮಾಡುತ್ತಿದ್ದುದಾಗಿ ಉಲ್ಲೇಖಿಸುತ್ತಾರೆ. ಹೊಲೆಯರಂತೆ ಮಾದಿಗರೂ ಚರ್ಮದ ಕೆಲಸಗಳನ್ನು ಮಾಡುವವರೇ. ಅವರು ತೊಗಲನ್ನು ಹದ ಮಾಡುವುದರಿಂದ ತೊಗಲಿನ ಬಾರುಗಳನ್ನು ಸಿದ್ಧಪಡಿಸುವ ಕೆಲಸ ಮಾಡುತ್ತಿದ್ದರೆಂದು ವ್ಯಕ್ತವಾಗುತ್ತದೆ. ಹೀಗೆ ನಯಸೇನ ಸಮಾಜದ ಹಲವು ಮುಖಗಳನ್ನು ವೈವಿಧ್ಯಮಯವಾಗಿ ಚಿತ್ರಿಸಿದ್ದಾನೆ.

ನಯಸೇನ ಚಿತ್ರಿಸಿದ ಆ ಕಾಲದ ಸಾಮಾಜಿಕ ಜನಜೀವನದಲ್ಲಿನ ಜನಸಾಮಾನ್ಯರ ಚಿತ್ರಣ ನನ್ನ ಅಧ್ಯಯನದ ವಸ್ತು. ಡಾ.ಬಿ.ವ್ಹಿ. ಮಲ್ಲಾಪೂರ ಅವರು 'ನಯಸೇನ ಮತ್ತು ಅವನ ಕೃತಿಗಳು' ಎಂಬ ತಮ್ಮ ಮಹಾಪ್ರಬಂಧದಲ್ಲಿ ಆಂಶಿಕವಾಗಿ ಸಮಾಜ ದರ್ಶನ ಎಂಬ ಅಧ್ಯಾಯದಲ್ಲಿ ವಿಸ್ತೃತವಾಗಿ ಚರ್ಚೆಗೊಳಪಡಿಸಿದ್ದಾರೆ. ಇದರಿಂದ ನನಗೆ 'ಧರ್ಮಾಮೃತ' ದ ಸಾಮಾನ್ಯ ಮನುಷ್ಯನ ವಿವಿಧ ಮುಖಗಳನ್ನು ಅರಿತುಕೊಳ್ಳುವಲ್ಲಿ ಮತ್ತು ಬೇರೆ ಬೇರೆ ಆಯಾಮಗಳಲ್ಲಿ ಸಾಮಾನ್ಯನನ್ನು ಅಧ್ಯಯನಕ್ಕೊಳಪಡಿಸುವ ನಿಟ್ಟಿನಲ್ಲಿ ಸಹಕಾರಿಯಾಗಿದೆ.

ಜಿ.ಎಸ್.ಶಿವರುದ್ರಪ್ಪ ಸಂಪಾದಿತ 'ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ', ಬರಗೂರು ರಾಮಚಂದ್ರಪ್ಪ ಸಂಪಾದಿತ 'ಕನ್ನಡ ಸಾಹಿತ್ಯ ಮತ್ತು ಮನುಷ್ಯ ಪರಿಕಲ್ಪನೆ. ಜಿ.ವ್ಹಿ. ವೀರಭದ್ರಪ್ಪನವರ 'ವೇದಗಳಲ್ಲಿ ಜನಸಾಮಾನ್ಯರು', ಎಂ.ಎಸ್.ಶೇಖರ್ ಅವರ 'ಕನ್ನಡ ಕಾವ್ಯ ಪರಂಪರೆಯಲ್ಲಿ ಜಾನಪದ

ಪ್ರಜ್ಞೆ', ಬಿ.ವ್ಹಿ. ಮಲ್ಲಾಪುರ ಅವರ ಪಿಎಚ್.ಡಿ ಮಹಾಪ್ರಬಂಧ 'ನಯಸೇನ ಮತ್ತು ಅವನ ಕೃತಿಗಳು' – ಹೀಗೆ ಈ ೫ ಕೃತಿಗಳನ್ನಿಟ್ಟುಕೊಂಡು ನನ್ನ ಅಧ್ಯಯನಕ್ಕೆ ಸಂಬಂಧಿಸಿದಂತೆ ಇದುವರೆಗಿನ ಅಧ್ಯಯನಗಳ ತಾತ್ವಿಕ ಸಮೀಕ್ಷೆಯನ್ನು ಕೈಗೊಂಡಿದ್ದೇನೆ.

ಅಧ್ಯಾಯ – ೩

ರಾಜಪ್ರಭುತ್ವ ನೆಲೆ : ಸಾಮಾನ್ಯ ಮನುಷ್ಯ

ರಾಜಪ್ರಭುತ್ವ ನೆಲೆ : ಸಾಮಾನ್ಯ ಮನುಷ್ಯ

ಪ್ರವೇಶ:

ದೇಶ, ಭಾಷೆಗಳನ್ನು ಹೊಂದಿದ ಯಾವುದೇ ಜನ ಸಮುದಾಯ ಪ್ರಾಕೃತಿಕವಾಗಿ ಎಷ್ಟೇ ಸಮೃದ್ಧಿಯನ್ನು ಪಡೆದಿದ್ದರೂ ಯಾಂತ್ರಿಕವಾಗಿ ಎಷ್ಟೇ ಅಭಿವೃದ್ಧಿಯನ್ನು ಪಡೆದಿದ್ದರೂ ಅದಕ್ಕೆ ತನ್ನದೇ ಆದ ಆಡಳಿತಾತ್ಮಕ ವ್ಯವಸ್ಥೆಯೊಂದರ ಅವಶ್ಯಕತೆ ಇದ್ದೇ ಇರುತ್ತದೆ. ಜನರ ಸ್ವಚ್ಛಂದವಾದ ಬದುಕು ಸಮುದಾಯವನ್ನು ಸುಖವಾಗಿಡಲಾರದು. ಆಡಳಿತಾತ್ಮಕ ಅಂಕೆಗೆ ಒಳಪಡುವ ಜನ ಪ್ರಜ್ಞಾಪೂರ್ವಕವಾಗಿಯೇ ಆಗಲಿ ಒತ್ತಾಯಪೂರ್ವಕವೇ ಆಗಲಿ ಒಂದು ನಿಯಂತ್ರಣಕ್ಕೆ ಒಳಪಟ್ಟರೆ ಐಕ್ಯತೆ ಸಾಧ್ಯವಾಗುತ್ತದೆ. ಇಂತಹ ನಿಯಂತ್ರಣ ಜನರನ್ನು ಭೌತಿಕವಾಗಿ ಭಾವನಾತ್ಮಕವಾಗಿ ಒಂದುಗೂಡಿಸುತ್ತದೆ. ಸುಗಮ ಬದುಕಿಗೆ ಇದು ಅನಿವಾರ್ಯ. ಆಡಳಿತವೊಂದನ್ನು ಒಪ್ಪಿಕೊಂಡು ಬಾಳುವ ಜನಸಮುದಾಯ ಹಲವು ಬಗೆಯ ಸಾಂಸ್ಕೃತಿಕ ಆಕೃತಿಗಳನ್ನು ತನ್ನ ಒಡಲಲ್ಲಿ ತುಂಬಿಕೊಳ್ಳುತ್ತದೆ.

ಇಂದು ಪ್ರಜಾಪ್ರಭುತ್ವವನ್ನು ರೂಢಿಸಿಕೊಂಡಿರುವ ನಮ್ಮ ದೇಶ ಹಿಂದೆಲ್ಲ ರಾಜಪ್ರಭುತ್ವವನ್ನು ಹೊಂದಿತ್ತು. ಸಾಮಾನ್ಯವಾಗಿ ವಂಶವಾಹಿನಿಯಾಗಿ ಮುಂದುವರೆಯುವ ರಾಜಪ್ರಭುತ್ವ ಪ್ರಜೆಗಳಿಗೊಂದು ಆರೋಗ್ಯಪೂರ್ಣ ಜೀವನವನ್ನು ಕಟ್ಟಿಕೊಡುವ ಧ್ಯೇಯವನ್ನು ಹೊಂದಿರಬೇಕಾಗುತ್ತದೆ – ಇದು ರಾಜನಾದವನ ಆದರ್ಶವಾಗಬೇಕು. ಆದರಿದು ರಾಜನಾದವನ ಗುಣಸ್ವಭಾವವನ್ನು ಅವಲಂಬಿಸಿರುತ್ತದೆ. ನಮ್ಮ ದೇಶದ ರಾಜಪ್ರಭುತ್ವದ ಪರಂಪರೆಯನ್ನು ಅವಲೋಕಿಸಿದರೆ ಸನ್ನಡತೆಯ, ದುರ್ನಡತೆಯ ರಾಜರಿಬ್ಬರೂ ದೊರೆಯುತ್ತಾರೆ. ಹೀಗಾಗಿ ರಾಜರೆನ್ನಿಸಿಕೊಂಡವರ ಗುಣಾವ ಗುಣಗಳನ್ನವಲಂಬಿಸಿಕೊಂಡು ಕಾಲದಿಂದ ಕಾಲಕ್ಕೆ ಸಾಂಸ್ಕೃತಿಕ ಏರುಪೇರುಗಳು ತುಂಬ ಸಹಜವಾಗಿ ನಡೆದು ಹೋಗುತ್ತವೆ.

ರಾಜ ಒಳ್ಳೆಯವನಿರಲಿ, ದುಷ್ಟನೇ ಆಗಿರಲಿ ರಾಜಪ್ರಭುತ್ವಕ್ಕೊಂದು ವರ್ಚಸ್ಸಿರುತ್ತದೆ. ರಾಜನಾದವನ ಮಂತ್ರಿಮಂಡಲ, ಸೈನ್ಯವ್ಯವಸ್ಥೆ, ಸದಾ ಸಿದ್ಧರಾಗಿರುವ ದಾಸ ದಾಸಿಯರು, ಹೋದಲ್ಲೆಲ್ಲ ಬೆನ್ನು ಹತ್ತುವ ಪರಾಕಿನವರು, ಆನೆ, ಕುದುರೆ, ವಸ್ತ್ರ-ವೈಢೂರ್ಯ ಎಲ್ಲವೂ ಸೇರಿ ಆಕರ್ಷಕವೆನಿಸುತ್ತವೆ. ಆದರೆ ಈ ಒಟ್ಟು ವ್ಯವಸ್ಥೆಯಲ್ಲಿ ಜನಸಾಮಾನ್ಯರ ಬದುಕಿನ ಅಸ್ತಿತ್ವವನ್ನು ಕುರಿತು ಯೋಚಿಸಿದರೆ ನಿರಾಶೆಯೇ ಉಂಟಾಗುತ್ತದೆ. ಪ್ರಭುತ್ವ ಅಸ್ತಿತ್ವ ಪಡೆದುಕೊಳ್ಳುವುದೇ ಜನ ಸಾಮಾನ್ಯರಿಂದ. ಪ್ರಭುತ್ವದ ಸಂಪತ್ತು, ವೈಭವ ಏನೆಲ್ಲ ಸಾಧ್ಯವಾಗಿರುವುದು ಜನ ಸಾಮಾನ್ಯರಿಂದ. ವಸ್ತುಸ್ಥಿತಿ ಹೀಗಿರುವುದರಿಂದ ಪ್ರಜೆಗಳನ್ನು ರಕ್ಷಿಸುವುದು, ಅವರನ್ನು ಸುಖವಾಗಿಡುವುದು ರಾಜನಾದವನ ಆಧ್ಯ ಕರ್ತವ್ಯವಾಗಬೇಕು. ಆದರೆ ಬಹಳಷ್ಟು ಸಲ ಹೀಗಾಗದೆ ಪ್ರಜೆ ನೇಪಥ್ಯಕ್ಕೆ ಸರಿದುಬಿಡುತ್ತಾನೆ. ರಾಜ ದುಷ್ಟನಾದರಂತೂ ಅವನ ಸ್ಥಿತಿ ಇನ್ನೂ ದಯನೀಯವಾಗುತ್ತದೆ; ಪ್ರಜೆಗಳ ಗುಣ ಸ್ವಭಾವದಲ್ಲಿ ಏರುಪೇರುಂಟಾಗಿ ವ್ಯವಸ್ಥೆಯೇ ಅಸ್ಥಿರಗೊಳುತ್ತದೆ. ವಡ್ಡಾರಾಧನೆಯ ಭದ್ರಬಾಹು ಭಟಾರರ ಕಥೆ ಇದನ್ನೇ ಹೇಳುತ್ತದೆ: ರಾಜಕೆಟ್ಟವನಾದರೆ ಜನರಲ್ಲಿ ಸುಳ್ಳು ಹೇಳುವ ಪ್ರವೃತ್ತಿ ಬೆಳೆಯುತ್ತದೆ, ದುರ್ಜನರು ತಾವು ಪಂಡಿತರೆಂಬಂತೆ ನಟನೆ ಮಾಡುತ್ತಾರೆ, ದುಷ್ಟರೂ ಮರ್ಯಾದೆಯ ನಟನೆ ಮಾಡುತ್ತಾರೆ. ಒಳ್ಳೆಯ ಚಾರಿತ್ರ್ಯವನ್ನು ಹೊಂದಿದವರಲ್ಲಿಯೂ ವೈರತ್ವದ ಭಾವನೆ ಬೆಳೆಯುತ್ತದೆ. ಯತಿಗಳ ಮಾತು ಕಠೋರವಾಗುತ್ತದೆ. ಅಂದರೆ ರಾಜನಾದವನ ವ್ಯಕ್ತಿತ್ವಹೀನತೆ ತನ್ನನ್ನು ಮಾತ್ರ ಕೆಡಿಸುವುದಿಲ್ಲ. ತನ್ನ ಪ್ರಜೆಗಳನ್ನೂ ಕೆಡಿಸುತ್ತದೆ. ಇದು ಆದೇಶದ ಸಂಸ್ಕೃತಿಯನ್ನೇ ಅಧೋಗತಿಗೆ ತಂದು ನಿಲ್ಲಿಸುತ್ತದೆ.

ರಾಜ ಕೆಟ್ಟವನಾದರೆ ಆಗುವ ಪರಿಣಾಮಗಳನ್ನು ಧರ್ಮಾಮೃತವೂ ಇನ್ನೊಂದು ರೀತಿಯಲ್ಲಿ ಹೇಳುತ್ತದೆ: ಅರಸನ ದುರ್ಗುಣಗಳಿಂದ ಲೋಕವೆಲ್ಲ ಕೆಟ್ಟುಹೋಗುತ್ತದೆ ಎಂದು ಜನರು ನಂಬಿದ್ದರು. ನ್ಯಾಯವೊದಗಿಸದ ರಾಜನ ಊರಲ್ಲಿರುವುದು ಅವಮಾನ ಎಂದು ಭಾವಿಸಿ ಅಂಥ ರಾಜ್ಯದಲ್ಲಿ ಇರಲು ಪ್ರಜೆಗಳು ಬಯಸುತ್ತಿರಲಿಲ್ಲ. ಆದರೆ ರಾಜ ಕೆಟ್ಟವನಾಗಲು ಪ್ರಾಜ್ಞರು ಅವಕಾಶ ಕೊಡುತ್ತಿರಲಿಲ್ಲ. ಕುಮಾರವ್ಯಾಸ ಭಾರತದಲ್ಲಿ ನಾರದನು ಧರ್ಮರಾಯನಿಗೆ ಹೇಳುವ ಅನೇಕ ಉಪದೇಶಪರ ಮಾತುಗಳು ರಾಜನನ್ನು ಸತ್ಪಥದಲ್ಲಿ ಒಯ್ಯಲು ಪ್ರಚೋದಿಸುತ್ತವೆ. ಹಾಗೆಯೇ ವಿದುರ, ಕೃಷ್ಣದ್ವೈಪಾಯನರಂಥ ಪ್ರಾಜ್ಞರು ಹೇಳುವ ಮಾತುಗಳೂ ರಾಜನನ್ನು ಪ್ರಜಾಹಿತರಕ್ಷಕನನ್ನಾಗಿ ಬೆಳೆಯಿಸಲು ಪ್ರಚೋದನಕಾರಿಯಾಗಿವೆ. ಆದರೆ ಪ್ರಭುತ್ವದ ನಡೆಯೇ ಕಠೋರವಾದುದು. ಯಾರು ಏನೇ ಹೇಳಿದರೂ ಎಷ್ಟೇ ಪರಿಣಾಮಕಾರಿಯಾಗಿ ಹೇಳಿದರೂ ಅದು ತನ್ನ ಬಿಗುಮಾನವನ್ನು ಬಿಟ್ಟುಕೊಡುವುದಿಲ್ಲ. ಅದು ತನ್ನ ಆಕ್ರಮಣಕಾರಿ ಧೋರಣೆಗಳ ಸಂಗಡವೇ ಬಹಳಷ್ಟು ಸಲ ಕ್ರಮಿಸಿ ಜನಸಾಮಾನ್ಯರ ಬದುಕನ್ನು ಅಯೋಮಯ ಸ್ಥಿತಿಗೆ ತಳ್ಳುತ್ತದೆ. ಅದರಲ್ಲೂ ಯುದ್ಧದಂತಹ ವಿನಾಶಕಾರಿ ಘಟನೆಗಳು ಜನಸಾಮಾನ್ಯರ ಬದುಕನ್ನು ದುಸ್ತರಗೊಳಿಸುತ್ತವೆ. ಯುದ್ಧಕ್ಕೆ ಬಲಿಯಾಗುವ ಸೈನಿಕರ ಎಣಿಕೆಗೆ ಅಂಕಿ ಸಂಖ್ಯೆಗಳೇ ಇರುವುದಿಲ್ಲ. ಇಂಥ ಸೈನಿಕರ ಬಗೆಗೆ ಪ್ರಭುತ್ವದ ಕೃತಜ್ಞತೆ ಹೋಗಲಿ, ಅವರ ಬಗೆಗೆ ಯಾವುದೇ ಭಾವಸ್ಪಂದನೆಗಳನ್ನೂ ತೋರುವುದಿಲ್ಲ. ಒಟ್ಟಾರೆ ತಮಗೊಂದು ಸುಖಾಚ್ಛಾದಿತ ಬದುಕು ನಿರ್ಮಿಸಿಕೊಟ್ಟ ಪ್ರಜೆಗಳ ಬಗೆಗೆ ಯಾವ ಭಾವನೆಗಳೂ ಅರಸರಾದವರಿಗೆ ಇರುವುದಿಲ್ಲ. ರಾಜರಿಗೆಲ್ಲ ಮುಖ್ಯವೆನಿಸುವುದು ತಮ್ಮ ತಮ್ಮ ಮೇಲಾಟ ಮಾತ್ರ. ನಮ್ಮ ಶ್ರೇಯಸ್ಸನ್ನು ಮಾತ್ರ ಬದುಕಿನ ಗುರಿಯಾಗಿರಿಸಿಕೊಂಡಿರುವ ನಿನ್ನ ಕುಟುಂಬವೆಂಥದು? ನಿನ್ನ ಕುಟುಂಬದ ಸಮಸ್ಯೆಗಳೇನು? ಎಂದು ಸೈನಿಕ ಅಥವಾ ಸಾಮಾನ್ಯ ಪ್ರಜೆಯೊಬ್ಬನ ಹೆಗಲ ಮೇಲೆ ಕೈಹಾಕಿ ಸ್ಪುರಿಸಿದ ಆಪ್ತತೆ ಎಲ್ಲೂ ಕಾಣದೊರೆಯುವದಿಲ್ಲ.

ಪ್ರಭುತ್ವದ ಉಪೇಕ್ಷೆ ಏನೇ ಇದ್ದರೂ ಅರಸರ ವಿಷಯದಲ್ಲಿ ಪ್ರಜೆಗಳು ತೋರುವ ಪ್ರೀತಿ–ಅಂತಃಕರಣ ಅನನ್ಯವಾದವುಗಳು. ಅವರ ಮದುವೆ, ಮಂಗಲೋತ್ಸವ ಕಾರ್ಯ ಕ್ರಮಗಳಲ್ಲಿ ಶ್ರಮಪಡುತ್ತಾರೆ, ಸಂತೋಷ ತಾಳುತ್ತಾರೆ. ಅವರ ಮಕ್ಕಳಾಟಗಳಿಗೆ ಸಂಭ್ರಮಿಸುತ್ತಾರೆ. ವಿಶೇಷ ಸಂದರ್ಭಗಳಲ್ಲಿ ರಾಜನಲ್ಲಿಗೆ ಹೋದಾಗ ಇವರು ಹಲವು ಬಗೆಯ ಕಾಣಿಕೆಗಳನ್ನು ಸಮರ್ಪಿಸುತ್ತಾರೆ. ರಾಜನಿಗೆ ರಾಜಕುಟುಂಬಕ್ಕೆ ಸ್ವಲ್ಪ ತೊಂದರೆಯಾದರೂ ಇವರು ದುಃಖತಪ್ತರಾಗುತ್ತಾರೆ. ಸತ್ಯವಾಕ್ಯ ಪರಿಪಾಲನೆಗಾಗಿ ಹರಿಶ್ಚಂದ್ರ ವಿಶ್ವಾಮಿತ್ರನಿಗೆ ರಾಜ್ಯವನ್ನೆಲ್ಲ ಸಮರ್ಪಿಸಿ ಅರಮನೆ ಬಿಟ್ಟು ಹೊರನಡೆದರೆ ಪ್ರಜೆಗಳ ಗೋಳು ಮುಗಿಲುಮುಟ್ಟುತ್ತದೆ. ಪಾಂಡವರು ಜೂಜಿನಲ್ಲಿ ಸೋತು ಅಡವಿಗೆ ನಡೆದರೆ ಪ್ರಜೆಗಳ ದುಃಖ ಮೇರೆದಪ್ಪುತ್ತದೆ. ಸಾಮಾನ್ಯ ಮನುಷ್ಯರ ಬದುಕು ಸ್ವಂತದ ಪರಿಧಿದಾಟಿ ಪ್ರಭುತ್ವ ಸುಖಕ್ಕಾಗಿ ದುಡಿಯುವ, ಮಿಡಿಯುವ ರೀತಿ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕಡಿಮೆಯೆಂದರೂ ಪರಿಣಾಮಕಾರಿಯಾಗಿ ತುಂಬಿಕೊಂಡಿದೆ.

ವಡ್ಡಾರಾಧನೆ

ರಾಜ ಪರಂಪರೆ ಮತ್ತು ವಿವಾಹ:

ವಡ್ಡಾರಾಧನೆಯ ಸುಕೌಶಳ ಸ್ವಾಮಿಯ ಕತೆಯಲ್ಲಿ ಗಂಧಭಾಜನ ಎಂಬ ದೊರೆ ಒಂದು ದಿನ ಸಹಸ್ರಕೂಟ ಚೈತ್ಯಾಲಯಕ್ಕೆ ಹೋಗಿರುತ್ತಾನೆ. ಅಪ್ಸರೆಯಂತಿದ್ದ ಸುಕೇಶಿನಿ ಎಂಬ ಹುಡುಗಿಯು ಬಂದಿರುತ್ತಾಳೆ. ರಾಜನೂ ಅಲ್ಲಿಗೆ ಬಂದಿದ್ದನ್ನು ನೋಡಿ ಸುಕೇಶಿನಿ ನಾಚಿಕೆಯಿಂದ ಗೋಡೆಯ ತುದಿಗೆ ಹೋಗಿ ಬಂಗಾರದ ಕಳಶವನ್ನು ಹಿಡಿದುಕೊಂಡು ನಿಂತಿರುತ್ತಾಳೆ. ಆ ಭಂಗಿಯಲ್ಲಿ ಸುಕೇಶಿನಿಯನ್ನು

ನೋಡಿದ ರಾಜ ಅವಳನ್ನು ವಿಗ್ರಹವೆಂದು ತಪ್ಪಾಗಿ ಭಾವಿಸಿ ತುಂಬ ಹೊಗಳಲಾರಂಭಿಸುತ್ತಾನೆ. ರಾಜನ ಜೊತೆ ಇದ್ದವರು ಅದು ವಿಗ್ರಹವಲ್ಲ ನಿಜವಾದ ಕನ್ಯೆ ಎಂದು ಹೇಳುತ್ತಾರೆ. ರಾಜ ಅವಳು ಯಾರೆಂದು ವಿಚಾರಿಸಿಕೊಂಡು ಅರಮನೆಗೆ ಹೋಗಿ ಸುಕೇಶಿನಿಯ ತಾಯಿ ಸುರೂಪೆಯನ್ನು ಕರೆಸಿಕೊಂಡು, "ಕೂಸನಾರ್ಗೆಕೊಟ್ಟಪಿರ್"(ವಡ್ಡಾರಾಧನೆ ಪು-೨೨)ಎಂದು ಕೇಳುತ್ತಾನೆ. ಅದಕ್ಕೆ ಸುರೂಪೆ "ಎನ್ನ ತಮ್ಮಂ ವರಾಂಗನೆಂಬೊನಾತನ ಮಗಂ ಜಿತರಂಗನೆಂಬೊನೆನ್ನ ಸೋದರಳಿಯನಾತಂಗೆ ಕೊಟ್ಟಪೆನ್"(ವಡ್ಡಾರಾಧನೆ ಪು-೨೨)ಎಂದು ಹೇಳುತ್ತಾಳೆ. ತಕ್ಷಣವೇ ಅರಸ ತನ್ನ ಹೆಗ್ಗಡೆಗಳಿಗೆ ಸುಕೇಶಿಯ ಮನೆಗೆ ಹೆಣ್ಣು ಬೇಡಲು ಕಳುಹಿಸುತ್ತಾನೆ. ಸಮಾಧಾನವಾಗದೇ ಅವರ ಹಿಂದೆಯೇ ತಾನೂ ಸುಕೇಶಿನಿಯ ತಂದೆಯ ಮನೆಗೆಹೋಗಿ ಕನ್ಯೆ ಬೇಡುತ್ತಾನೆ. ಸುಕೇಶಿನಿಯ ತಂದೆ ತಾಯಿ ಒಪ್ಪಿ ಗಂಧಭಾಜನ ರಾಜನೊಂದಿಗೆ ಸುಕೇಶಿನಿಯ ಮದುವೆಯಾಗುತ್ತದೆ.

ಇಷ್ಟೂ ಕಥೆಯನ್ನು ನೋಡಿದಾಗ ಗಂಧಭಾಜ ದೊರೆ ತಾನು ಅರಸ ಅವರು ತನ್ನ ಆಳ್ವಿಕೆಯ ಅಧೀನದಲ್ಲಿನ ಸಾಮಾನ್ಯರು ಎಂಬ ಯಾವ ಅಹಂಭಾವವೂ ಇಲ್ಲದೆ ಸ್ವತಃ ತಾನೇ ನಾಗದತ್ತಸೆಟ್ಟಿ ಮತ್ತು ಸುರೂಪೆಯರ ಮನೆಗೆ ಹೋಗಿ ಕನ್ಯೆ ಬೇಡಿ ಮದುವೆಯಾಗುತ್ತಾನೆ.

ಇಲ್ಲಿ ಎರಡು ಅಂಶಗಳು ಮುಖ್ಯವಾಗುತ್ತವೆ ೧ ಗಂಧಭಾಜನ ರಾಜನಿಗೆ ಹೆಣ್ಣಿನ ಬಗ್ಗೆ ಇರುವ ಗೌರವ. ೨. ಸಾಮಾಜಿಕ ರೀತಿಗಳನ್ನು ರಾಜನಾಗಿಯೂ ಪಾಲಿಸುವುದು.

ಗಂಧಭಾಜನ ದೊರೆ ಸುಕೇಶಿನಿಯನ್ನು ನೋಡಿ ಮನಸೋತ ತಕ್ಷಣ ತಾನು ಅರಸನೆಂಬ ದರ್ಪದಿಂದ ಒತ್ತಾಯಪೂರ್ವಕವಾಗಿ ಸುಕೇಶಿನಿಯನ್ನು ಮದುವೆಯಾಗಬಹುದಿತ್ತು. ಆದರೆ ರಾಜನಿಗೆ ಹೆಣ್ಣಿನ ಬಗ್ಗೆ ಇರುವ ಗೌರವ ಮತ್ತು ಸಂಸ್ಕಾರದಿಂದಾಗಿ ಹಾಗೆ ಮಾಡದೇ ಮೊದಲು ಅವಳ ತಾಯಿಯನ್ನು ವಿಚಾರಿಸಿ ನಂತರ ಕನ್ಯೆ ಕೇಳುವದಕ್ಕಾಗಿ ಸ್ವತಃ ರಾಜನೇ ಅವರ ಮನೆಗೆ ಹೋಗುತ್ತಾನೆ.

ಎರಡನೆಯದು ರಾಜನಾಗಿಯೂ ಸಹ ಸಾಮಾಜಿಕ ರೀತಿ ನೀತಿಗಳನ್ನು ಪಾಲಿಸುವ ಔದಾರ್ಯ ಗಂಧಭಾಜನ ರಾಜನಲ್ಲಿದೆ. ವ್ಯಕ್ತಿ ಎತ್ತರಕ್ಕೇರಿದಂತೆ ಸಾಮಾಜಿಕ ರೀತಿ ನೀತಿಗಳನ್ನು ಗಾಳಿಗೆ ತೂರಿ ಗರ್ವದಿಂದ ಬೀಗುವವರೇ ಹೆಚ್ಚು. ಈ ತೆರನಾದ ರಾಜರುಗಳು ಅಪರೂಪರಾಗುತ್ತಾರೆ. ಕನ್ಯೆ ಬೇಡಲು ಹುಡುಗಿಯ ಮನೆಗೇ ಹೋಗುವ ಪದ್ಧತಿಯನ್ನು ತಾನು ರಾಜ ಅವರು ಸಾಮಾನ್ಯರಿದ್ದಾಗ್ಯೂ ಪಾಲಿಸುತ್ತಾನೆ. ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ರಾಜ ಕನ್ಯೆಯನ್ನು ಯಾರಿಗೆ ಕೊಡಬೇಕೆಂದುಕೊಂಡಿದ್ದೀರಿ ಎಂದು ಹುಡುಗಿಯ ತಾಯಿಯನ್ನು ಮೊದಲು ವಿಚಾರಿಸುತ್ತಾನೆ. ಇದು ಅವತ್ತಿನ ಕಾಲಸಂದರ್ಭದಲ್ಲಿ ತಾಯಿಯ ಅಭಿಪ್ರಾಯಕ್ಕೆ ಕೊಡುವ ಪ್ರಾಶಸ್ತ್ಯ ಮತ್ತು ಮನ್ನಣೆಯಾಗಿತ್ತು. ಅದನ್ನು ರಾಜನೂ ಸಹ ಪರಿಪಾಲಿಸುವದು ಬಹು ಮುಖ್ಯ ಸಂಗತಿ. ರಾಜನಾದವರು ರಾಜಪರಂಪರೆಯಿಂದ ಬಂದ ಹುಡುಗಿಯನ್ನೇ ಮದುವೆಯಾಗಬೇಕೆಂಬ ರೂಢಿಯನ್ನು ಮೀರಿ ಸಾಮಾನ್ಯಳನ್ನು ಮದುವೆಯಾಗುವದು ಅಪರೂಪದ ಸಂಗತಿ . ಇದಕ್ಕೆ ತದ್ವಿರುದ್ಧವಾಗಿ ಸಾಮಾನ್ಯನು ರಾಜಕುವರಿಯನ್ನು ಮದುವೆಯಾಗಲು ಸಾಧ್ಯವಿಲ್ಲ ಎಂಬ ಸಂಗತಿಯನ್ನು ಇದೇ ಸುಕೌಶಳ ಸ್ವಾಮಿ ಕಥೆಯ ಇನ್ನೊಂದು ಸಂದರ್ಭ ವಿವರಿಸುತ್ತದೆ;

ಇಷ್ಟು ದಿನ ಹುಚ್ಚನಂತೆ ಅಲೆಯುತ್ತಿದ್ದ ಕುಬೇರಕಾಂತ ಒಮ್ಮೆಲೆ ಸಾಮಾನ್ಯನಾಗಿ ಎಲ್ಲರಂತೆ ವರ್ತಿಸತೊಡಗಿದ್ದರಿಂದ ಅವನ ತಂದೆ ಈ ಪರಿವರ್ತನೆಗೆ ಕಾರಣ ಕೇಳುತ್ತಾನೆ. ಅದಕ್ಕೆ ಕುಬೇರಕಾಂತ "ನನ್ನ ಹಿಂದಿನ ಜನ್ಮದ ಹೆಂಡತಿಯನ್ನು ಹುಡಕಲು ಇಷ್ಟುದಿವಸ ಹುಚ್ಚನಾಗಿದ್ದೆ. ಅವಳು ಸಿಕ್ಕಿದಳು ಹುಚ್ಚು

ಹೋಯಿತು. ನನ್ನ ಹಿಂದಿನ ಜನ್ಮದ ಹೆಂಡತಿ ಈಗ ಊರಿನ ಅರಸನ ಮಗಳು" ಎಂದು ಹೇಳುತ್ತಾನೆ. ಅದಕ್ಕೆ ಅವನ ತಂದೆ "ಮಗನೇ ನಿನ್ನ ಮನ್ನಿನ ಪೆಂಡತಿಯೆಂದಜೆದೆಯಪ್ಪಡಮೀಗಳಾಕೆಯರಸನ ಮಗಳಾಗಿರ್ಪುದಜಿಂ ನಿನಗತಿ ದುರ್ಲಭೆ ಭಾಗ್ಯಮಿಲ್ಲದುದಂ ಪೆರಲಾಗ ನಿನಗಾಕೆಯೊಳಪ್ಪ ಬೇಂಟಮನುಜಿವುದು" ಎಂದು ತಿಳಿಹೇಳುತ್ತಾನೆ (ವಡ್ಡಾರಾಧನೆ ಪು-೪೦).

ಈ ಎರಡೂ ಸಂದರ್ಭಗಳನ್ನು ಗಮನಿಸಿದಾಗ ರಾಜ ಸಾಮಾನ್ಯಳನ್ನು ಮದುವೆಯಾಗಬಹುದು; ಆದರೆ ಸಾಮಾನ್ಯ, ರಾಜಕುವರಿಯನ್ನು ಮದುವೆಯಾಗುವಂತಿಲ್ಲ ಇದು ಸಾಮಾಜಿಕ ವ್ಯವಸ್ಥೆ. ವಿವಾಹ ಸಂಸ್ಥೆಯಲ್ಲಿ ಯಾವಾಗಲೂ ಗಂಡು ಸಾಮಾಜಿಕ ಏಣಿಶ್ರೇಣಿಯಲ್ಲಿ ಎತ್ತರದಲ್ಲಿರಬೇಕು ಹೆಣ್ಣು ಶ್ರೇಷ್ಠಕುಲ ವರ್ಗದವಳಾಗಿದ್ದು ಗಂಡು ಕೆಳಗಿನವನಾಗಿದ್ದರೆ ಅಂಥ ಮದುವೆ ಒಪ್ಪಿತವಾಗುತ್ತಿದ್ದಿಲ್ಲ. ಹಾಗಾದರೆ ಕುಲದ ಶ್ರೇಷ್ಠತೆ ಕೆಡುತ್ತದೆ ಎಂಬ ಪೂರ್ವಗ್ರಹೀತ ತಿಳುವಳಿಕೆ ಸಮಾಜದಲ್ಲಿದೆ.

ರಾಜನ ಪಟ್ಟದರಸಿಯಾಗುವವಳು ಯಾವಾಗಲೂ ರಾಜ ಪರಂಪರೆಯಿಂದಲೇ ಬಂದಿರಬೇಕೆಂಬ ನಿಯಮವಿದೆ. ಈ ನಿಯಮಾನುಸಾರ ರಾಜನಿಗೆ ಎಷ್ಟೇ ಹೆಂಡತಿಯರಿದ್ದರೂ ಪಟ್ಟ ದೊರೆಯುವದು ರಾಜಪರಂಪರೆಯಿಂದ ಬಂದವಳಿಗೆ ಮಾತ್ರ. ರಾಜ ಎಷ್ಟೋ ಮಹಿಳೆಯರ ಮೋಹಕ್ಕೊಳಗಾಗಿ ಸಾಮಾನ್ಯಳನ್ನು ಮದುವೆಯಾಗಿ ಬಂದರೂ ಅವಳಿಗೆ ಪ್ರೀತಿ ಸಿಗುತ್ತಿತ್ತೇ ಹೊರತಾಗಿ ಪಟ್ಟವಲ್ಲ.

ಪ್ರದ್ಯೋತನೆಂಬ ಅರಸ ಕಾಡಾನೆಯನ್ನು ಹಿಡಿಯಲು ಹೋಗಿ ಕಾಡಲ್ಲಿ ಓಡಿ ಓಡಿ ದಾರಿಯಲ್ಲಿ ಆಯಾಸವಾಗಿ ಕುಳಿತುಕೊಳ್ಳುವನು. ಆ ಊರಿನ ಗೌಡ ಜಿನವಾದಿಕ. ಅವನ ಹೆಂಡತಿ ಜಿನಮತಿ. ಇವರಿಬ್ಬರ ಮಗಳು ಜಿನದತ್ತೆ. ಅತ್ಯಂತ ಸುಂದರಳಾಗಿದ್ದು ನೀರು ತರಲು ಬಾವಿಗೆ ಹೋಗಲು ಅಲ್ಲಿಯೇ ಕುಳಿತಿದ್ದ ಅರಸ ಕುಡಿಯಲು ನೀರು ಕೇಳುತ್ತಾನೆ. ಅವಳು ಕುಡಿಯಲು ನೀರೆರೆಯುವಾಗ ಜಿನದತ್ತೆಯ ಅಂದಕ್ಕೆ ಮನಸೋತು ಜಿನದತ್ತೆ ರಾಜನಿಗೆ ನೀರು ಕೊಟ್ಟು ಮನೆಗೆ ಹೋಗಿ ಊರಹೊರಗೆ ಯಾರೋ ಮಹಾಪುರುಷರು ಬಂದಿದ್ದಾರೆ. ಅವರನ್ನು ಮನೆಗೆ ಕರೆದುಕೊಂಡು ಬನ್ನಿ ಎಂದು ಅಪ್ಪನಿಗೆ ಹೇಳುತ್ತಾಳೆ. ಜಿನವಾದಿಕ ಹೋಗಿ ಪ್ರದ್ಯೋತನನ್ನು ಕರೆದುಕೊಂಡು ಪುಷ್ಕಳ ಭೋಜನ ಮಾಡಿಸುತ್ತಾನೆ. ರಾಜ ಅರಮನೆಗೆ ಮರಳಿದ ನಂತರ ಹೆಗ್ಗಡೆಗಳ ಮೂಲಕ ಜಿನವಾದಿಕನಿಗೆ ಅವನ ಮಗಳನ್ನು ಬೇಡಿ ಇಬ್ಬರೂ ಒಪ್ಪಿ ಮದುವೆಯಾಗುತ್ತದೆ. ಸಾಮಾನ್ಯ ಜಿನದತ್ತೆ ಪ್ರದ್ಯೋತ ರಾಜನ ರಾಣಿಯಾಗುತ್ತಾಳೆ.

ಒಂದು ದಿನ ಜಿನದತ್ತೆ ಅಲಂಕಾರ ಮಾಡಿಕೊಳ್ಳುತ್ತಿರುವಾಗ ರಾಜ ಸೊಕ್ಕಿದಾನೆಯನ್ನು ಹಿಡಿದು ಕಟ್ಟಲು ಅವಸರದಿಂದ ಜಿನದತ್ತೆಯನ್ನು ಬಿಟ್ಟು ಹೋಗುತ್ತಾನೆ. ಆಗ ಜಿನದತ್ತೆ ಸಿಟ್ಟಿನಿಂದ ಕೂಗಾಡುತ್ತಿರುವಾಗ ಅದನ್ನು ಕೇಳಿಸಿಕೊಂಡ ರಾಜನ ಮಿಕ್ಕ ರಾಣಿಯರು ಸಂತೋಷದಿಂದ ಇನ್ನೆ ಮಮರಸಂ ಸೂಱುಂ ಪಾಟಿಯುಮನೀಗುಮ್"(ವಡ್ಡಾರಾಧನೆ ಪು-೧೧೧)ಎಂದು ಪ್ರೀತಿಯಿಂದ ಮಾತನಾಡಿದ್ದನ್ನು ಕೇಳಿ ಇನ್ನು ನನಗೆ ಅರಸನೊಂದಿಗೆ ಬಾಳ್ವೆಬೇಡ ಎಂದು ನಿರ್ಧರಿಸಿ ಆಗಲೇ ಅವನ ಮನೆಯನ್ನು ಬಿಟ್ಟು ಬೇರೊಂದು ಮನೆಮಾಡಿಕೊಂಡು ಇರತೊಡಗಿದಳು.

ಇಲ್ಲಿ ಗಂಡ ರಾಜನಿದ್ದಾಗ್ಯೂ ಸಾಮಾನ್ಯ ಹೆಣ್ಣು ತನ್ನ ಗಂಡನ ಪ್ರತಿ ತೋರಿಸುವ ಸಿಟ್ಟು ಒಡಮೂಡಿದೆ. ಇದೇ ಜಿನದತ್ತೆ ರಾಜಪರಿವಾರದವಳಾಗಿದ್ದರೆ ರಾಜನ ಆದ್ಯತೆಗಳು ಗೊತ್ತಿರುತ್ತಿದ್ದವು. ಆದರೆ ಜಿನದತ್ತೆ ಸಾಮಾನ್ಯ ಕುಟುಂಬದಿಂದ ಬಂದ ಹೆಣ್ಣಾಗಿದ್ದರಿಂದ ಅವಳಿಗೆ ರಾಜನ ಜವಾಬ್ದಾರಿಯ ಅರಿವಿರುವದಿಲ್ಲ. ಹಾಗಾಗಿ ಜಿನದತ್ತೆ ಪ್ರದ್ಯೋತ ಮಹಾರಾಜ ತನಗಿಂತ ನಾಡಿನ ಹಿತರಕ್ಷಣೆಗೆ ಮುಂದಾದಾಗ ಅವಳಿಗೆ ಕೋಪ ಬರುತ್ತದೆ. ಹೀಗೆ ಕೋಪ ಬಂದಾಗ ಅವಳು ರಾಜನನ್ನು ಬಿಟ್ಟು ದೂರ

ಹೋಗಲು ನಿರ್ಧರಿಸುತ್ತಾಳೆ. ರಾಜನನ್ನು ಬಿಟ್ಟು ಹೋದರೆ ಈಗಿರುವ ಎಲ್ಲ ವೈಭವಗಳನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಅರಿವಿದ್ದಾಗ್ಯೂ ಅವಳು ಬೇರೆ ಹೋಗುತ್ತಾಳೆ. ಜಿನದತ್ತೆಗೆ ತನ್ನ ಆತ್ಮಸಮ್ಮಾನವೇ ಮುಖ್ಯವೆನಿಸುತ್ತದೆ. ಜನಸಾಮಾನ್ಯನಿಗೆ ಯಾವತ್ತೂ ವೈಭವ ಐಶ್ವರ್ಯಕ್ಕಿಂತ ಆತ್ಮಗೌರವ ಮುಖ್ಯ ಎನಿಸುತ್ತದೆ.

ರಾಜ ಹಿಂತಿರುಗಿ ಬಂದಾಗ ಜಿನದತ್ತೆ ಮನೆಯಲ್ಲಿ ಇಲ್ಲದಾದಾಗ ಅಲ್ಲಿದ್ದವರು ರಾಜ ಜೊತೆಯಲ್ಲಿ ಕರೆದುಕೊಂಡು ಹೋಗದ್ದರಿಂದ ಕೋಪಗೊಂಡು ಬ್ರಹ್ಮಚರ್ಯ ವ್ರತ ಕೈಗೊಂಡು ತಪಸ್ವಿಯಾಗಿ ಬೇರೆ ಮನೆಯ ಮಾಡಿಕೊಂಡಿದ್ದಾಳೆಂದು ಹೇಳುವರು. ಅದಕ್ಕೆ ರಾಜ ಕೋಪಗೊಂಡು "ವ್ರತಮಂ ತಪಮುಮೆನ್ನಲ್ಲಿ ಕೂಡದೆಂದು ನುಡಿದಾಕೆಯಂ ಬೆಳ್ಕಾಡೊಳ್ ಮಸಣದೊಳ್ ಕೊಂಡುಪೋಗಿಕ್ಕಿ"(ವಡ್ಡಾರಾಧನೆ ಪು-೧೧೨)ಎಂದು ಆದೇಶ ಮಾಡುತ್ತಾನೆ. ಹಾಗೇ ಆಗಲಿ ಎಂದು ಅವರು ಸರಿ ತಪ್ಪೆಂದು ಏನೊಂದು ವಿಚಾರಿಸದೇ ರಾಜನ ಆಜ್ಞೆಯಂತೆ ಒಂಭತ್ತು ತಿಂಗಳ ಗರ್ಭಿಣಿ ಜಿನದತ್ತೆಯನ್ನು ಹೊತ್ತುಕೊಂಡು ಹೋಗಿ ಸ್ಮಶಾನದಲ್ಲಿರಿಸಿ "ಅಬ್ಬಾ ಎಮಗೇನುಂ ದೋಷಮುಂ ಪಾಪಮುಮಿಲ್ಲ ಕ್ಷಮಿಯಿಸಿಮರಸನ ಬೆಸದೊಳ್ ತಂದಿಕ್ಕಿದೆಮ್"(ವಡ್ಡಾರಾಧನೆ ಪು-೧೧೨)ಎಂದು ಅವಳನ್ನು ಅಲ್ಲೇ ಬಿಟ್ಟು ಹೋಗುತ್ತಾರೆ.

ರಾಜ ಎಷ್ಟೇ ಪ್ರೀತಿಯಿಂದ ನೋಡಿಕೊಂಡರೂ ರಾಣಿ ತನ್ನನ್ನು ಧಿಕ್ಕರಿಸಿ ಹೋಗಿ ಬೇರೆ ಮನೆಮಾಡಿ ಬ್ರಹ್ಮಚರ್ಯ ವ್ರತ ಕೈಗೊಂಡಿದ್ದು ರಾಜನಿಗೆ ಕೋಪ ತರುತ್ತದೆ. ಅವಳ ಪ್ರತಿಭಟನೆಗೆ ರಾಜ ತನ್ನ ಅಧಿಕಾರದ ದರ್ಪ ತೋರಿಸಲು ರಾಣಿಯನ್ನು ಸ್ಮಶಾನಕ್ಕಟ್ಟುತ್ತಾನೆ. ಆ ಮೂಲಕ ತನ್ನನ್ನು ತಿರಸ್ಕರಿಸಿ ಬಾಳುವದು ರಾಣಿಗೇ ಆದರೂ ಸುಲಭಸಾಧ್ಯವಾದುದಲ್ಲ ಎಂಬ ಸಂದೇಶವನ್ನು ಜನತೆಗೆ ಮುಟ್ಟಿಸುತ್ತಾನೆ. ತಾನು ಅಷ್ಟು ಪ್ರೀತಿಯಿಂದ ಮದುವೆಯಾದ ರಾಣಿಯನ್ನು ಸ್ಮಶಾನಕ್ಕೆ ಅಟ್ಟಿಸುವಂತಹ ಕಠಿಣ ನಿರ್ಧಾರವನ್ನು ರಾಜ ತೆಗೆದುಕೊಳ್ಳುವದು ರಾಜನ ಅಧಿಕಾರ ದರ್ಪ ಮತ್ತು ಅಹಂನ್ನು ತೋರಿಸುತ್ತದೆ.

ಇನ್ನೊಂದು ಮುಖ್ಯ ಅಂಶವೆಂದರೆ ಒಳ್ಳೆಯದು-ಕೆಟ್ಟದ್ದು, ಸರಿ-ತಪ್ಪು ಯಾವುದನ್ನೂ ಯೋಚಿಸದೇ ರಾಜ ಹೇಳಿದ್ದನ್ನು ಅಕ್ಷರಶಃ ಪಾಲಿಸುವ ಆಜ್ಞಾಪಾಲಕರು ಇರುವದು. ರಾಜ ಸಿಟ್ಟಿನಲ್ಲಿ ರಾಣಿಯನ್ನು ಸ್ಮಶಾನದಲ್ಲಿ ಬಿಟ್ಟು ಬನ್ನಿ ಎಂದ ತಕ್ಷಣ ನವಮಾಸ ತುಂಬಿದ ತುಂಬು ಗರ್ಭಿಣಿ ಜಿನದತ್ತೆಗೆ "ನಮ್ಮದೇನು ತಪ್ಪಿಲ್ಲ ಅರಸನ ಆಜ್ಞೆಯಂತೆ ನಡೆದಿದ್ದೇವೆ ಕ್ಷಮಿಸಿ" ಎಂದು ಕೇಳಿಕೊಳ್ಳುವಲ್ಲಿ ಅವರಿಗೆ ತಾವು ಮಾಡುತ್ತಿರುವ ಕೆಲಸವಾಗಲಿ ರಾಜನ ಆಜ್ಞೆಯಾಗಲಿ ತಪ್ಪೆನ್ನುವದು ಗೊತ್ತಿದೆ. ಅದಕ್ಕೆ ಅವರು ರಾಣಿಯನ್ನು ಕ್ಷಮಿಸಲು ಹೇಳುವರು. ಆದರೆ ಅದನ್ನು ವಿರೋಧಿಸುವ ಧೈರ್ಯ ಸಾಮಾನ್ಯನಲ್ಲಿಲ್ಲ.

ಅದೇ ದಿನ ರಾತ್ರಿ ಜಿನದತ್ತೆಗೆ ಪ್ರಸವವಾಗಿ ಗಂಡು ಮಗುವಾಗುತ್ತದೆ. ಇತ್ತ ಅರಸನಿಗೊಂದು ಕನಸು ಬೀಳಲು ಮಂತ್ರಿಯನ್ನು ಆ ಕನಸಿನ ಅರ್ಥ ಕೇಳಲು ಪುತ್ರಲಾಭವಾಗಿದೆಯೆಂದು ಹೇಳುತ್ತಾನೆ. ರಾಣಿವಾಸಕ್ಕೆ ಹೋಗಿ ಯಾರಿಗಾದರೂ ಹೆರಿಗೆ ಆಗಿದೆಯೇ ಎಂದು ವಿಚಾರಿಸಲಾಗಿ ರಾಣಿಯರು "ಎಮಗೆ ಸೌಭಾಗ್ಯಮಿಲ್ಲದವರ್ಗೆ ಭರ್ತಾರನ ದೆಸೆಯಿಂದಪ್ಪ ಸೂಱುಂ ಪಾಟಿಯುಮಿಲ್ಲದೋರ್ಗೆ ಬಸಿಱುಂ ಮಗನುಮೆಂತಕ್ಕುಂ ನೀಮಾರಾನುಂ ಸೌಭಾಗ್ಯಮುಳ್ಳೋರಲ್ಲಿ ಬಸಿರಂ ಮಗನುಮನಾರಯ್ವಿಮೆಮ್ಮಲ್ಲಿ ಏನನಾರಯ್ವಿರ್"(ವಡ್ಡಾರಾಧನೆ ಪು-೧೧೨)ಎಂದು ಕೇಳುವರು. ಅವರಾರಿಗೂ ಪುತ್ರಲಾಭವಾಗದ್ದನ್ನು ಅರಿತ ಮೇಲೆ ಜಿನದತ್ತೆಯನ್ನು ಹೋಗಿ ನೋಡಲಾಗಿ ಅವಳಿಗೆ ಬೇನೆಯಾಗಿ ಗಂಡು ಮಗುವಾಗಿರುತ್ತದೆ. ಅದನ್ನು ಅರಸನಿಗೆ ತಿಳಿಸಲಾಗಿ ರಾಜ ಮಗು ಮತ್ತು ರಾಣಿಯನ್ನು ಕರೆಯಿಸಿಕೊಂಡು ಮೊದಲಿನಂತೆ ಪ್ರೀತಿಯಿಂದಲೇ ಇರಿಸಿಕೊಂಡ.

ಇಲ್ಲಿ ಗಮನಿಸಬೇಕಾದ ಎರಡು ಮುಖ್ಯ ಅಂಶಗಳು-ಒಂದನೆಯದು ಉಳಿದ ರಾಣಿಯರ ಹತಾಶೆ. ಜಿನದತ್ತೆಯನ್ನು ಹೊರತುಪಡಿಸಿ ಎಲ್ಲ ರಾಣಿಯರೂ ರಾಜನ ಪ್ರೀತಿ ಪಾಳಿಗಾಗಿ ಹಂಬಲಿಸುವದು ವಿಷಾದನೀಯ. ರಾಜನ ಪ್ರೀತಿ ಸಾಮೀಪ್ಯಕ್ಕಾಗಿ ಹಪಹಪಿಸುವ ರಾಣಿಯರು 'ಗಂಡನ ಪ್ರೀತಿಯೇ ಇಲ್ಲದ ನಮಗೆ ಮಗನ ಸೌಭಾಗ್ಯವೆಲ್ಲಿ?' ಎಂದು ಕೇಳುವಲ್ಲಿ ರಾಜನ ಬೇಜವಾಬ್ದಾರಿತನ ಎದ್ದು ಕಾಣುತ್ತದೆ. ಮತ್ತು ಈ ರಾಣಿಯರ ಇಂಥ ಯಾವ ಭಾವನೆಗಳೂ ರಾಜನಿಗೆ ಮುಟ್ಟುವದಿಲ್ಲ; ಅವನ ಮನಸ್ಸನ್ನು ತಟ್ಟುವದಿಲ್ಲ. ಬಹುಪತ್ನಿತ್ವದ ಬಹುದೊಡ್ಡ ದೋಷವಿದು. ಇಲ್ಲಿ ಹೆಣ್ಣಿಗೆ ಆಯ್ಕೆ ಇಲ್ಲ. ಗಂಡಿನ ಆಯ್ಕೆಗೆ ಪ್ರಶ್ನೆಗಳಿಲ್ಲ. ಅಂತೆಯೇ ಇಲ್ಲಿ ದುಃಖಕ್ಕೀಡಾಗುವವರು ಹೆಣ್ಣುಗಳೇ.

ಎರಡನೆಯ ಅಂಶ ರಾಜನ ಪುತ್ರವ್ಯಾಮೋಹ ಮತ್ತು ಜಿನದತ್ತೆಯ ಮೌನ. ಸಾಮಾನ್ಯಳಾದ ಜಿನದತ್ತೆ ರಾಣಿಯಾಗಿ ರಾಜನನ್ನು ಧಿಕ್ಕರಿಸಿ ಅರಮನೆ ಬಿಟ್ಟು ಹೋದದ್ದು ಮತ್ತು ರಾಜ ತನ್ನ ಅಧಿಕಾರ ದರ್ಪದಿಂದ ತುಂಬು ಗರ್ಭಿಣಿ ರಾಣಿಯನ್ನು ಸ್ಮಶಾನಕ್ಕೆ ನೂಕಿಸುವದು ಎಲ್ಲವೂ ಗಂಡು ಮಗುವಿನ ಹುಟ್ಟಿನೊಂದಿಗೆ ಪರಿಸಮಾಪ್ತಿಗೊಳ್ಳುತ್ತದೆ. ಹೆಣ್ಣು ಮಗುವಿನ ಭವಿಷ್ಯ ಕಾರಣಕ್ಕಾಗಿ ಮೌನ ತಾಳಿದರೆ, ಗಂಡು ಪುತ್ರ ವ್ಯಾಮೋಹಕ್ಕೊಳಗಾಗಿ ತನ್ನ ದರ್ಪ ಕೋಪ ಎಲ್ಲವನ್ನು ಮರೆತು 'ಮುನ್ನಿನಂದೊಳ್ ಇರಿಸಿಕೊಂಡಿದ್ದ' ಎಂದು ಹೇಳುವಲ್ಲಿ ರಾಜ ಮತ್ತು ಜಿನದತ್ತೆ ಮಗುವಿಗಾಗಿ ಮತ್ತೆ ಒಂದಾಗಿ ಅದೇ ಪ್ರೀತಿಯಿಂದಿದ್ದರು ಎಂಬುದನ್ನು ಹೇಳುತ್ತದೆ.

ವಡ್ಡಾರಾಧನೆಕಾರ ಗುರುದತ್ತ ಭಟಾರರ ಕತೆಯಲ್ಲಿ ಬರುವ ಉಪರಿಚರ ಈ ಅರಸನಿಗೆ ಅಪ್ಸರೆಯರನ್ನು ಮೀರಿಸುವ ೪ ಜನ ಪಟ್ಟದ ಅರಸಿಯರು ೫೦೦ ಜನ ಮಿಕ್ಕ ಹೆಂಡಿರು ಇದ್ದರೆಂದು ಹೇಳುತ್ತಾನೆ. ಸನತ್ಕುಮಾರ ಕಥೆಯಲ್ಲಿ ಸನತ್ಕುಮಾರ ರಾಜನಿಗೆ ಎಂಟು ಸಾವಿರ ಜನ ರಾಣಿಯರಿದ್ದ ಬಗ್ಗೆಯೂ ಹೇಳುತ್ತಾನೆ. ಹೀಗೆ ಬಹುತೇಕ ಎಲ್ಲ ಅರಸರಿಗೂ ಪಟ್ಟದರಸಿಯರ ಜೊತೆ ಮಿಕ್ಕ ಹೆಂಡಂದಿರು ಇದ್ದೇ ಇರುತ್ತಿದ್ದರು. ಈ ಮಿಕ್ಕ ಹೆಂಡತಿಯರೆಲ್ಲ ಸಾಮಾನ್ಯರೇ. ರಾಜನ ಹೆಂಡಿರ ಸಂಖ್ಯಾಬಲದ ಹೆಚ್ಚಳದ ಮೇಲೆ ರಾಜನ ಸಾಮರ್ಥ್ಯ, ಪ್ರತಿಷ್ಠೆ ನಿರ್ಧರಿತವಾಗುವ ಕಾಲ ಅದಾಗಿತ್ತು. ರಾಣಿಯರು ರಾಜನ ಪ್ರೀತಿ ಪಾಳಿಗಾಗಿ ಕಾಯುವ ದಯನೀಯ ಸಂದರ್ಭವನ್ನು ಈ ಬಹುಪತ್ನಿತ್ವ ಸೃಷ್ಟಿ ಮಾಡುತ್ತದೆ.

ಪ್ರಭುತ್ವ ಮತ್ತು ಬೇಜವಾಬ್ದಾರಿತನ:

ಗಜಕುಮಾರನ ಕಥೆಯ ನಾಯಕ. ಗಜಕುಮಾರ ಒಬ್ಬ ಸಾಮಾನ್ಯ ಮನುಷ್ಯ. ಇವನು ರಾಜನ ಘೋಷಣೆಗೆ ಅನುಗುಣವಾಗಿ ಪೌದನಪುರದ ರಾಜ ಅಪರಾಜಿತನನ್ನು ಯುದ್ಧದಲ್ಲಿ ಗೆದ್ದು ಸೆರೆತಂದು ತನ್ನ ರಾಜ ಅರ್ಧಚಕ್ರವರ್ತಿ ವಿಷ್ಣುಗೆ ಒಪ್ಪಿಸುತ್ತಾನೆ. ರಾಜ ತನ್ನ ಘೋಷಣೆಯಂತೆ ಗೆದ್ದು ತಂದವನಿಗೆ "ನಿನಗೇನು ಬೇಕೋ ಕೇಳಿಕೋ" ಎನ್ನುವನು. ಆಗ ಗಜಕುಮಾರ "ಪೆರತೇನುಮನೊಲ್ಲೆನ್ ನಿಮ್ಮ ಪ್ರಸಾದದಿಂದೆನಗೆಲ್ಲಮುಂಟು ಒಂದಂಬೇಟ್ಪೆಂ ನಿಮ್ಮಂತಃಪುರಮುಬಿಯೇ ಪೊಟಿಲೊಳಗೆನ್ನ ಮೆಚ್ಚಿದ ಪೆಂಡಿರನೆ ಕೊಂಡೆನ್ನಿಚ್ಚೆಯೊಳ್ ಮೆಚ್ಚಿದಂತೆ ಬಾಳ್ವೆನೀದಾಯಮಂ ಬೇಡಿರ್ದೆನಿದನೆನಗೆ ದಯಗೆಯ್ದು ಸಲಿಸುವುದು(ವಡ್ಡಾರಾಧನೆ ಪು-೫೧) ಎಂದು ತನ್ನ ಇಚ್ಛೆ ವ್ಯಕ್ತಪಡಿಸುತ್ತಾನೆ. ಗಜಕುಮಾರನ ಈ ಬೇಡಿಕೆಗೆ ರಾಜ ತಕ್ಷಣವೇ ಅಂತೆಗೆಯ್ಯೆಂದು ಬೇಡಿದ್ದಕ್ಕೆ ಸಮ್ಮತಿಸುವನು.

ಇಂಥದೇ ಬೇಡಿಕೆಯನ್ನು ಚಿಲಾತಪುತ್ರ ಕಥೆ ಎಂಬ ಇನ್ನೊಂದು ಕಥೆಯಲ್ಲೂ ಕಾಣುತ್ತೇವೆ.

ಪ್ರದ್ಯೋತನೆಂಬ ಮಹಾಸಾಮಂತನು ವೈರತ್ವದಿಂದಾಗಿ ನಾಡನ್ನು ಸುಡುತ್ತಾ ಸೂರೆಗೊಳ್ಳುತ್ತಾ ಕೆಡಸುತ್ತಾ ಬರುತ್ತಿರುತ್ತಾನೆ. ಅದಕ್ಕಾಗಿ ಉಪಶ್ರೇಣಿಕನು ಯಾರು ಪ್ರದ್ಯೋತನನ್ನು ಸೆರೆಹಿಡಿದು ತರುತ್ತಾರೋ

ಅವರಿಗೆ ಕೇಳಿದ ಇಷ್ಟವನ್ನು ಸಲ್ಲಿಸುತ್ತೇನೆ ಎಂದು ಊರಿನಲ್ಲೆಲ್ಲ ಡಂಗುರ ಹೊಡೆಸುತ್ತಾನೆ. ಇದನ್ನು ಕೇಳಿದ ಚಿಲಾತಪುತ್ರನೆಂಬುವನು ಅರಸನ ಅನುಮತಿ ಪಡೆದು ಸೈನ್ಯ ಸಮೇತ ಹೋಗಿ ಜಲಕ್ರೀಡೆಯಾಡುತ್ತಿದ್ದ ಪ್ರದ್ಯೋತನನ್ನು ಸೆರೆಹಿಡಿದು ತಂದು ಉಪಶ್ರೇಣಿಕನಿಗೆ ಒಪ್ಪಿಸುತ್ತಾನೆ. ಇದರಿಂದ ಸಂತೋಷಗೊಂಡ ಉಪಶ್ರೇಣಿಕನು ಚಿತಾತಪುತ್ರನಿಗೆ ನಿನಗೇನು ಬೇಕು ಕೇಳು ಕೊಡುತ್ತೇನೆ" ಎನ್ನುವನು. ಅದಕ್ಕೆ ಚಿಲಾತಪುತ್ರ "ನಿಮ್ಮ ಪ್ರಸಾದದಿಂದೆನಗೆಲ್ಲಮುಂಟು ಒಂದಂ ಬೇಡುವೆಂ ನಿಮ್ಮಂತಃಪುರಮುಟಿಯೆ ಪೆನ್ನೆರಡುವರ್ಷಂಬರೆಗಂ ಪೆಂಡಿರ್ಕಳೊಳೆಲ್ಲ ಮೆನ್ನ ಮೆಚ್ಚಿದಂತೆ ಸಯ್ದಂ ಬಾಟ್ವೆನಿದಂ ಬೇಡಿದೆನಿದನೆನಗೆ ದಯಗೆಯ್ದು ಸಲಿಸುವುದು" ಎಂಬ ಬೇಡಿಕೆ ಇಡುತ್ತಾನೆ. ಅದಕ್ಕೆ ರಾಜ ಅಂತೆಗೆಯ್ ಎಂದು ಸಮ್ಮತಿ ಸೂಚಿಸುತ್ತಾನೆ(ವಡ್ಡಾರಾಧನೆ ಪು–೧೬೬).

ಈ ಮೇಲಿನ ಎರಡೂ ಕತೆಗಳಲ್ಲಿನ ಗಜಕುಮಾರ ಮತ್ತು ಚಿಲಾತಪುತ್ರನ ಬೇಡಿಕೆಗಳಿಂದ ಸಾಮಾಜಿಕ ವ್ಯವಸ್ಥೆಯ ದಾರುಣಚಿತ್ರವೊಂದು ಕಣ್ಮುಂದೆ ಕಟ್ಟುತ್ತದೆ. ವ್ಯಕ್ತಿಯೊಬ್ಬನ ಇಂತಹ ಆಘಾತಕಾರಿ ಬೇಡಿಕೆಯನ್ನು ಪ್ರಭುತ್ವ ಮನ್ನಿಸುವದು, ಒಪ್ಪಗೆ ಸೂಚಿಸುವದು ದುರಾದೃಷ್ಟದ ಸಂಗತಿ. ಪ್ರಜೆಗಳಿಗಾಗೇ ಪ್ರಭುವಾಗಿರುವಾಗ ಎಲ್ಲರನ್ನೂ ಸರಿಸಮಾನವಾಗಿ ನೋಡುವದು ಮತ್ತು ಸರ್ವರನ್ನೂ ಕಾಪಾಡುವದು ರಾಜನೊಬ್ಬನ ಕರ್ತವ್ಯ. ಈ ಕಥೆಗಳಲ್ಲಿ ರಾಜನಿಗೆ ಅಂತಹ ಬೇಡಿಕೆಗಳ ಬಗೆಗೆ ಯಾವುದೇ ಆತಂಕವಿಲ್ಲದೆ ಅತ್ಯಂತ ಸಹಜವೆಂಬಂತೆ ಒಪ್ಪಿಗೆ ಸೂಚಿಸುವದು ರಾಜನ ಸ್ವಾರ್ಥ ಸಾಧನೆ ಮತ್ತು ಸ್ವಹಿತಾಸಕ್ತಿಯನ್ನು ಎತ್ತಿ ತೋರಿಸುತ್ತದೆ.

ರಾಜನೆದುರಿಗೆ ಇಂತಹ ಬೇಡಿಕೆಗಳನ್ನಿಡುವವರಿಬ್ಬರೂ ಸಾಮಾನ್ಯರೇ. ಆದರೆ ಅವರ ಬೇಡಿಕೆಯಡಿಯಲ್ಲಿ ಜಾಣ್ಮೆಯನ್ನು ಕಾಣುತ್ತೇವೆ. ಗಜಕುಮಾರ ಮತ್ತು ಚಿಲಾತಪುತ್ರರಿಬ್ಬರ ಬೇಡಿಕೆ ರಾಜನ ಸ್ವಂತ ಅಧಿಕಾರ ವ್ಯಾಪ್ತಿಯಿಂದ ಹೊರತಾದ ಅಂದರೆ ಅಂತಃಪುರ ಸ್ತ್ರೀಯರನ್ನು ಹೊರತುಪಡಿಸಿ ಹೊರಗಿನ ಸಮಾಜದ ಸ್ತ್ರೀಯರು ಎಂದು ಅವರಿಬ್ಬರೂ ಮೊದಲೇ ಸ್ಪಷ್ಟಪಡಿಸುವರು. ಹಾಗಾಗಿ ರಾಜ ಅತ್ಯಂತ ಸಲೀಸಾಗಿ ಒಪ್ಪಿಗೆ ಸೂಚಿಸುವನು.

ಈ ಎರಡೂ ಕಥೆಗಳಲ್ಲಿ ಸಾಮಾನ್ಯರ ಉದ್ಧಟತನ ಮತ್ತು ರಾಜರ ಬೇಜವಾಬ್ದಾರಿತನವನ್ನು ಕಾಣುತ್ತೇವೆ. ಈ ಕಥೆಗಳಲ್ಲಿ ಇಂತಹ ಸಂಗತಿಗಳು ಚಿತ್ರಣಗೊಂಡಿವೆ ಎಂದರೆ ಈ ಕೃತಿ ಹುಟ್ಟಿದ ಕಾಲಕ್ಕೆ ಸಮಾಜದಲ್ಲಿ ಇಂತಹ ನಡೆ ರೂಢಿಯಲ್ಲಿತ್ತೆಂದು ತೋರುತ್ತದೆ. ಇಂತಹ ಸಂದರ್ಭದಲ್ಲಿ ಹಿಂಸೆಗೆ ಒಳಗಾಗುವವರು ರಾಜರೂ ಅಲ್ಲ. ಗಜಕುಮಾರ ಚಿಲಾತಪುತ್ರರಂಥವರೂ ಅಲ್ಲ; ಸಮಾಜದಲ್ಲಿನ ಸಾಮಾನ್ಯ ಹೆಣ್ಣುಮಕ್ಕಳು. ಇಂಥಲ್ಲಿ ಹೆಣ್ಣು ಮಕ್ಕಳ ಸ್ಥಿತಿ ಶೋಚನಿಯವಾಗುತ್ತದೆ. ಯಾವುದೇ ಕಾಲ ಸಂದರ್ಭಗಳಿಗೂ ಇಂತಹ ಸಂಗತಿಗಳು ದಾರುಣ ಸ್ಥಿತಿಯನ್ನು ಸೃಷ್ಟಿಸುತ್ತವೆ.

ರಾಜ ಮತ್ತು ಕಾಮಾಂಧತೆ:

ವಡ್ಡಾರಾಧನೆಯ ಸನತ್ಕುಮಾರ ಚಕ್ರವತಿಯ ಕಥೆಯಲ್ಲಿ ಪ್ರತಿಮುಖನೆಂಬ ಅರಸು, ಅವನು ಎಂಟು ನೂರು ಅಂತಃಪುರಗಳಿಗೆ ಒಡೆಯ. ಅದೇ ಊರಿನ ನಾಗಚಂದ್ರನೆಂಬ ಸೆಟ್ಟಿಯ ಹೆಂಡತಿ ವಿಷ್ಣುಶ್ರೀ. ಒಂದುದಿನ ರಾಜ ಉಪ್ಪರಿಗೆಯ ಮೇಲಿದ್ದ ಅತಿ ಸುಂದರಳಾದ ವಿಷ್ಣುಶ್ರೀಯನ್ನು ನೋಡಿದ ತಕ್ಷಣ ಅವಳಿಗೆ ಮೋಹಿತನಾಗಿ ಮಂತ್ರಪ್ರಯೋಗದಿಂದ ಅವಳನ್ನು ವಶಪಡಿಸಿಕೊಳ್ಳುತ್ತಾನೆ. ವಶಪಡಿಸಿಕೊಂಡು ತನ್ನ ಅಗ್ರವಲ್ಲಭೆಯನ್ನಾಗಿ ಮಾಡಿಕೊಂಡನು.

ಇಲ್ಲಿ ರಾಜನ ಅಧಿಕಾರದ ದರ್ಪವಿದೆ. ರಾಜ ಏನು ಮಾಡಿದರೂ ನಡೆಯುತ್ತದೆ ಎನ್ನುವ ಮತ್ತು ತನ್ನ ಅಧಿಕಾರವ್ಯಾಪ್ತಿಯಲ್ಲಿ ತಾ ಮಾಡಿದ್ದೆಲ್ಲವೂ ಸರಿ ಎನ್ನುವ ಅಹಂಭಾವವಿದೆ. ರಾಜನಾಗಿ ನಾಡಿನ ಜನಕ್ಕೆ ಬುದ್ಧಿಹೇಳಬೇಕಾದ ವ್ಯಕ್ತಿಯೇ ಪರಸ್ತ್ರೀಗೆ ಆಸೆಪಡುವಂಥವನಾಗಿದ್ದಾನೆಂದರೆ ಇನ್ನು ಆ ನಾಡಿನ ಹೆಣ್ಣುಮಕ್ಕಳ ಕರುಣಾಜನಕ ಸ್ಥಿತಿ ಕಣ್ಮುಂದೆಕಟ್ಟುತ್ತದೆ. ರಾಜ ತನ್ನನ್ನು ತನ್ನ ಗಂಡನ ಮನೆಯಿಂದ ಅಪಹರಿಸಿ ವಶಪಡಿಸಿಕೊಂಡು ಹೋದರೂ ಅಲ್ಲೆಲ್ಲೂ ವಿಷ್ಣುಶ್ರೀಯ ವಿರೋಧವಾಗಲಿ ಸಮ್ಮತಿಯಾಗಲಿ ಏನೊಂದೂ ಕಂಡುಬರುವದಿಲ್ಲ.

ರಾಜಾಜ್ಞೆ ಮತ್ತು ಭಯ:

ರಾಜ ಅಶೋಕನಿಗೆ ಕುಣಾಳನೆಂಬ ಮಗನಿರುತ್ತಾನೆ. ಒಮ್ಮೆ ಯುದ್ಧಕ್ಕೆ ಹೋದ ಅಶೋಕ ಅಲ್ಲಿಂದಲೇ ಮಂತ್ರಿ, ಪುರೋಹಿತ, ತಳವಾರರಿಗೆ ಒಂದು ಪತ್ರ ಬರೆದು ಕಳಿಸುತ್ತಾನೆ.

ಆ ಪತ್ರದಲ್ಲಿ "ಉಪಾಧ್ಯಾಯಂಗೆ ಕಟಿಮೆಯಕೂಟುಂಮಿಂತುಪ್ಪಮಂ ತೊವೆಯುಮನುಣಲ್ಕೊಟ್ಟು ಕುಮಾರನನೋದಿಸು"(ವಡ್ಡಾರಾಧನೆ ಪು-೭೫)ಎಂದು ಬರೆದಿರುತ್ತದೆ. ರಾಜ ಕಳಿಸಿದ ಓಲೆಯನ್ನು ಓದುವ ವಾಚಕನು ಆ ಓಲೆಯನ್ನು ವಿಪರೀತ ಅರ್ಥಬರುವಂತೆ ತಪ್ಪಾಗಿ ಓದುತ್ತಾನೆ. ವಾಚಕ ಆ ಪತ್ರ ಓದಿದ ರೀತಿ ಹೀಗಿದೆ: "ಉಪಾಧ್ಯಾಯಂ ಶಾಲಿಂ ಕೂರಂಚ ಮಶಿಂ ಘೃತಂ ದತ್ತಾ ಕುಮಾರಮಂಧಾಪಯೇತ್" ಎಂದು ಓದುತ್ತಾನೆ. ಇದನ್ನು ಕೇಳಿದವರೆಲ್ಲ ಆಶ್ಚರ್ಯ ಚಕಿತರಾಗುತ್ತಾರೆ. ಆದರದು ರಾಜಾಜ್ಞೆ, ಎರಡನೆಯ ಮಾತೆ ಇಲ್ಲದೇ ಪಾಲಿಸಲೇಬೇಕಾದ್ದು ರಾಜಾಜ್ಞೆ ಮೀರುವಂತಿಲ್ಲ. ಹಾಗಾಗಿ ವಾಚಕನು ತಪ್ಪಾಗಿ ಓದಿದಂತೆ ಉಪಾಧ್ಯಾಯನಿಗೆ ಶಾಲ್ಯಾನ್ನನ್ನೂ ಮಸಿಯನ್ನೂ ತುಪ್ಪವನ್ನೂ ಉಣ್ಣಲು ಕೊಟ್ಟು ರಾಜಕುಮಾರ ಕುಣಾಳನ ಎರಡೂ ಕಣ್ಣುಗಳನ್ನು ಒಡೆದು ಅವನನ್ನು ಕುರುಡನನ್ನಾಗಿಸುತ್ತಾರೆ. ಎಷ್ಟೋ ದಿನಗಳ ನಂತರ ಯುದ್ಧ ಮುಗಿಸಿ ತಿರುಗಿ ಬಂದ ಅಶೋಕ, ಮಗ ಕುರುಡನಾಗಿದ್ದನ್ನು ನೋಡಿ ದುಃಖಿಸುತ್ತಾನೆ.

ವಾಚಕನೊಬ್ಬ ಓಲೆಯನ್ನು ತಪ್ಪಾಗಿ ಓದಿದ್ದಕ್ಕಾಗಿ ರಾಜಕುಮಾರ ತನ್ನ ದೃಷ್ಟಿಯನ್ನೇ ಕಳೆದುಕೊಳ್ಳುವ ಪ್ರಸಂಗ ಬರುತ್ತದೆ. ಹೀಗೆ ತಪ್ಪಾಗಿ ಓದಿದ್ದಕ್ಕಾಗಿ ವಾಚಕನನ್ನು ಪ್ರಭುತ್ವ ಹೇಗೆ ಬೇಕಾದರೂ ದಂಡಿಸಬಹುದಾಗಿತ್ತು, ಶಿಕ್ಷಿಸಬಹುದಾಗಿತ್ತು. ಆದರೆ ಕಥೆಯಲ್ಲೆಲ್ಲೂ ವಾಚಕನ ತಪ್ಪಿನ ಬಗ್ಗೆ ಪ್ರಸ್ತಾಪವೇ ಬರದೇ ಕಥೆ ಹಾಗೆ ಮುಂದುವರೆಯುತ್ತದೆ. ಹೀಗೆ ಎಷ್ಟೋಬಾರಿ ಸಾಮಾನ್ಯರ ತಪ್ಪಿನಿಂದಾಗಿ ಪ್ರಭುತ್ವಕ್ಕೂ ನಷ್ಟ ಸಂಭವಿಸುತ್ತಿರುತ್ತದೆ. ಆದರೆ ಈ ಇಡೀ ಪ್ರಕರಣ ಗಮನಿಸಿದಾಗ ರಾಜಾಜ್ಞೆಯ ಬಗ್ಗೆ ಜನರಿಗಿರುವ ಭಯ-ಒಳಿತು ಕೆಡಕು ಏನೂ ಯೋಚಿಸದೇ ವಿವೇಚನಾ ರಹಿತವಾಗಿ ರಾಜಾಜ್ಞೆ ಪಾಲಿಸುವದೊಂದೇ ತಮ್ಮ ಕರ್ತವ್ಯವೆಂದು ಭಾವಿಸಲಾಗಿತ್ತು.

ಪ್ರಭುತ್ವ ಮತ್ತು ಧರ್ಮ:

ವಜ್ರಪಾಳನೆಂಬ ಅರಸ. ಅವನ ಹೆಂಡತಿ ಸ್ವಾಮಿನಿ. ಅವಳು ತಮ್ಮ ನಾಡಿನಲ್ಲಿದ್ದ ಅರ್ಧಗಪ್ಪಡ ಸಂಪ್ರದಾಯದ ತಪಸ್ವಿಗಳ ಭಕ್ತೆ. ಒಂದು ದಿನ ಅರ್ಧಗಪ್ಪಡ ಸಂಪ್ರದಾಯದ ಮುನಿಗಳು ಅರಮನೆಗೆ ಬರುತ್ತಾರೆ. ಆಗ ರಾಜ, ರಾಣಿಗೆ "ದೇವಿ ಈ ನಿನ್ನ ಅರ್ಧಗಪ್ಪಡದ ಯತಿಯರ ಧರ್ಮಮೊಳ್ಳಿತಲ್ತಿ ವರುಟ್ಟರುಮಲ್ಲರ್ ಬತ್ತಲೆಗರುಮಲ್ಲ"(ವಡ್ಡಾರಾಧನೆ ಪು-೯೩)ಎನ್ನುವನು. ಮುಂದೊಂದು ದಿನ ಅರಸ ಅರ್ಧಗಪ್ಪಡದ ಸಂಘದವರನ್ನು ಕರೆಯಿಸಿ ಅವರಿಗೆ "ನೀವು ಅರ್ಧಗಪ್ಪಡವನ್ನು ಬಿಸುಟು ದಿಗಂಬರರಾಗಿ ತಪಸ್ಸು ಮಾಡಿ" ಎಂದನು. ಅದಕ್ಕೆ ಋಷಿಗಳು ಒಪ್ಪದಿದ್ದಾಗ "ಹಾಗಾದರೆ ನಿರ್ಗ್ರಂಥಮಪ್ಪ ರೂಪಂ

ಕೈಕೊಳಲೊಲ್ಲಿರಪ್ಪೊಡರ್ಧಗಪ್ಪಡಮಂ ಬಿಸುಟ್ಟು ಪಟಿಯಂ ಸಯ್ಯುಟ್ಟುಕೊಂಡಿರಿ"(ವಡ್ಡಾರಾಧನೆ ಪು-೯೩)ಎಂದ ತಕ್ಷಣ ಆಗಲಿ ಎಂದ ಮುನಿಗಳು ಅಲ್ಲಿಂದ ಅರ್ಧಗಪ್ಪಡ ಬಿಟ್ಟು ಕಚ್ಚೆಗಟ್ಟದೆ ಹಾಗೇ ಸುತ್ತಿ ಉಟ್ಟುಕೊಂಡು ಮೇಲೊಂದು ಕಿರುವಸ್ತ್ರವನ್ನು ಹೊದೆಯತೊಡಗಿದರು. ಅವರೇ ಕಂಬಳತೀರ್ಥ, ಶ್ವೇತಪಟರು ಎಂದು ಹೆಸರಾದರು.

ಹೀಗೆ ಧರ್ಮವೊಂದು ಅಧಿಕೃತವಾಗಿ ಎರಡು ಕವಲಾಗುವಂತೆ ಪ್ರೇರೇಪಿಸಿದ್ದು ಪ್ರಭುತ್ವ. ಪ್ರಭುತ್ವ ಯಾವಾಗಲೂ ತನ್ನ ಅಧಿಕಾರ ಕಾರಣದಿಂದಾಗಿ ಸಮಾಜ, ಧರ್ಮ ಎಲ್ಲದರ ಮೇಲೆ ನಿಯಂತ್ರಣ ಸಾಧಿಸಲು ಪ್ರಯತ್ನಿಸುತ್ತಿರುತ್ತದೆ.

ರಾಜ್ಯ ಮತ್ತು ದಾದಿಯ ಮಧ್ಯದ ಅನ್ಯೋನ್ಯ ಸಂಬಂಧ:

ಜಿತಶತ್ರು ಎಂಬ ರಾಜ. ಅವನ ದಾದಿ ವಿನಯಮತಿ. ಈ ನಾಡಿನಲ್ಲಿ ಫಾಲ್ಗುಣ ಮಾಸದಲ್ಲಿ ನಂದೀಶ್ವರ ಉತ್ಸವ ನಡೆಯುತ್ತಿರುತ್ತದೆ. ಊರಲ್ಲಿ ಎಂಟು ದಿನಗಳ ಕಾಲ ತೀರ್ಥಂಕರರ ಸೇವೆಗಳನ್ನು ವೈಭವದಿಂದ ಮಾಡಲಾಯಿತು. ಜಿತಶತ್ರುವಿನ ದಾದಿ ವಿನಯಮತಿ ಗುಜ್ಜೆ, ವಿರಳದಂತೆ, ವಿರೂಪೆ, ನೋಡಿದವರಿಗೆ ಭಯ, ಜಿಗುಪ್ಸೆ, ಉಂಟಾಗುವಂತಿದ್ದಳು. ಊರಲ್ಲಿ ನಡೆಯುವ ಜಿನೋತ್ಸವವನ್ನು ನೋಡಲು ದಾದಿಯೂ ಹೊರಡಲನುವಾಗುತ್ತಾಳೆ. ಅದಕ್ಕೆ ರಾಜ "ನೀವು ಉತ್ಸವಕ್ಕೆ ಬರುವದು ಬೇಡ, ನಿಮ್ಮನ್ನು ಕಂಡು ಉತ್ಸವಕ್ಕೆ ನೆರೆದ ಜನ ಜಿಗುಪ್ಸೆ ಪಟ್ಟು ಹೇಸುತ್ತಾರೆ ಅಮಂಗಳವನ್ನಾಡುತ್ತಾರೆ. ನೀವು ಮನೆಯಲ್ಲೇ ಇರಿ" ಎಂದು ತಾನು ಉತ್ಸವಕ್ಕೆ ಹೋಗುತ್ತಾನೆ.

ಇತ್ತ ದಾದಿಯು ಮಗನು ಮಾಡುವ ಉತ್ಸವವನ್ನು ನೋಡಲಾಗದಿದ್ದುದಕ್ಕೆ ತನ್ನನ್ನು ತಾನು ಹಳಿದುಕೊಂಡು ದುಃಖಪಡುತ್ತಾಳೆ. ಎಂಟು ದಿನಗಳ ಕಾಲ ನಂದೀಶ್ವರನ ಉತ್ಸವ ನಡೆಯುವವರೆಗೂ ದೇವರಿಗೆ ಅರ್ಚನೆ ಅಭಿಷೇಕ ಮಾಡುತ್ತ ಉಪವಾಸ ಮಾಡಿ ದೇವರನ್ನು ಧ್ಯಾನಿಸುತ್ತ ಪೂಜಿಸುತ್ತ ಇರುತ್ತಾಳೆ.

ಎಂಟು ದಿನಗಳ ಬಳಿಕ ರಾಜ ದಾದಿಯನ್ನು ಇಷ್ಟೇಕೆ ಸೊರಗಿದ್ದೀರಿ ಎಂದು ಕೇಳುತ್ತಾನೆ. ಅದಕ್ಕೆ ದಾದಿ "ಮಗನೆ ಎಂಟು ದಿವಸಮುಪವಾಸಂಗೆಯ್ದು ಮನೆಯೊಳ್ ದೇವರ್ಗ್ಗಭಿಷೇಕಮುಂ ಪೂಜೆಯುಮಂ ಮಾಡಿಸುತ್ತಿರ್ದೆನ್"(ವಡ್ಡಾರಾಧನೆ ಪು-೧೦೭)ಎಂದಾಗ ರಾಜನು ಸಂತೋಷವಾಗಿ "ಏನು ಬೇಕೋ ಕೇಳಿ" ಅನ್ನುವನು. ಅದಕ್ಕೆ ದಾದಿ "ಮಗನೇ ನೀನೆನಗೊಸೆದೆಯಪ್ಪೊಡೆನಗೆಂದು ಮತ್ತಮೆಂಟು ದಿವಸಂ ದೇವರ್ಗೆ ಮಹಾಮಹಿಮೆಯಂ ಮಾಡ್"(ವಡ್ಡಾರಾಧನೆ ಪು-೧೦೭)ಎಂದು ಹೇಳಿದಾಗ ರಾಜ ಹಾಗೆ ಆಗಲೆಂದು ದಾದಿಗೋಸ್ಕರವಾಗಿ ಮತ್ತೆ ಎಂಟು ದಿನ ಜಿನೋತ್ಸವವನ್ನು ಏರ್ಪಡಿಸುತ್ತಾನೆ. ಆ ದಾದಿ ತನಗೋಸ್ಕರ ಉತ್ಸವ ನಡೆಯುತ್ತಿದೆ ಎಂದು ಮತ್ತೆಂಟು ದಿವಸ ಉಪವಾಸ ಕೂಡುತ್ತಾಳೆ. ದಾದಿಯ ಶ್ರಮ ಬಳಲಿಕೆಯನ್ನು ನೋಡಿದ ಶ್ರೀಯಾದೇವಿ ತನ್ನ ಪರಿವಾರ ಸಮೇತ ಬಂದು ದಾದಿಯನ್ನು ಚಿನ್ನದ ಪೀಠದ ಮೇಲೆ ಕುಳ್ಳಿರಿಸಿ ಅಭಿಷೇಕಮಾಡಿ ಪೂಜಿಸಿದರು.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದು ರಾಜನೊಬ್ಬ ದಾದಿಯೊಬ್ಬಳನ್ನು ತಾಯಿಯ ಸಮಾನವಾಗಿ ಕಾಣುವದು. ಅವಳ ಮನಸ್ಸಿಗೆ ನೋವುಂಟಾಗಿದ್ದನ್ನು ತಿಳಿದು ದಾದಿಗೋಸ್ಕರವಾಗಿ ಮತ್ತೊಮ್ಮೆ ಎಂಟು ದಿನಗಳ ಕಾಲ ಜಿನೋತ್ಸವ ನಡೆಸುತ್ತಾನೆ. ಪ್ರಭುತ್ವದಲ್ಲಿ ಮಕ್ಕಳನ್ನು ಸಾಕಿ ಬೆಳೆಸುವಲ್ಲಿ ದಾದಿಯರ ಪಾತ್ರ ಮಹತ್ವದ್ದಾಗಿರುತ್ತದೆ. ಅಂತೆಯೇ ಯಾವಾಗಲೂ ರಾಜಮಕ್ಕಳು ಮತ್ತು ದಾದಿಯರ ಮಧ್ಯದ ಸಂಬಂಧ ತುಂಬ ಅನ್ಯೋನ್ಯವಾಗಿರುತ್ತದೆ. ರಾಜ ಆ ದಾದಿಗೆ ಕೊಡುವ ಗೌರವ

ಗಮನಿಸುವಂಥದ್ದು. ಕಥೆಯಲ್ಲಿ ರಾಜ ದಾದಿಗೆ ಅಪ್ಪತಪ್ಪಿಯೂ ಎಲ್ಲೂ ಏಕವಚನ ಸಂಭೋಧಿಸದೆ ಬಹುವಚನದಲ್ಲೇ ಸಂಬೋಧಿಸುವದು ಗಮನಿಸಬೇಕಾದ ಅಂಶ. ಈ ಕಾರಣಕ್ಕಾಗಿ ರಾಜ ಜನಸಾಮಾನ್ಯರ ಕಣ್ಣಲ್ಲಿ ಎತ್ತರಕ್ಕೇರುತ್ತಾನೆ. ಇಲ್ಲಿ ರಾಜ–ದಾದಿ ಇಬ್ಬರನ್ನೂ ಅಂತಃಕರಣದ ಬೆಸುಗೆ ಬೆಸೆದಿದೆ.

ರಾಜ ಮತ್ತು ಸ್ವಾರ್ಥ:

ಅಗ್ನಿರಾಜನೆಂಬ ಅರಸ. ಅವನ ಹೆಂಡತಿ ವೀರಮತಿ. ಅವರಿಗೆ ಆರು ಜನ ಹೆಣ್ಣುಮಕ್ಕಳು. ಅವರಲ್ಲಿ ಕೊನೆಯ ಮಗಳು ಕೃತ್ತಿಕೆ ಅರಸ ತನ್ನ ಮಗಳಾದ ಕೃತ್ತಿಕೆಯ ರೂಪ ಕಂಡು ಅನುರಕ್ತನಾಗಿ ಮಗಳನ್ನೇ ಬಯಸುವನು. ಆ ಕೂಡಲೇ ರಾಣಿ ವೀರಮತಿ, ಸಾಮಂತ ಮಹಾ ಸಾಮಂತ ಎಲ್ಲರನ್ನು ಕರೆಸಿದನು. ಎಲ್ಲರನ್ನು ಕರೆಸಿ "ಎನ್ನಾಳ್ವ ಮಂಡಳಂಗಳೊಳ್ ಪುಟ್ಟಿದ ಲೇಸಪ್ಪ ವಸ್ತುವಾರ್ಗಕ್ಕುಂ" (ವಡ್ಡಾರಾಧನೆ ಪು–೧೧೫) ಎಂದು ಕೇಳುತ್ತಾನೆ. ಅವರೆಲ್ಲ "ಒಳಿತ್ತಪ್ಪಾನೆಯುಂ ಕುದುರೆಯುಂ ಮುತ್ತುಂ ಮಾಣಿಕಮುಂ ಸ್ತ್ರೀರತ್ನಮುಂ ಮೊದಲಾಗೊಳ್ಳಿತಪ್ಪಗ್ಗಳ ವಸ್ತುವೆಲ್ಲಂ ಪೃಥ್ವಿಯ ನಾಳ್ವೊಂಗಕ್ಕೂಂ"(ವಡ್ಡಾರಾಧನೆ ಪು–೧೧೬)ಎನ್ನುವರು. ರಾಜ, ಸಾಮಂತ, ಮಹಾ ಸಾಮಂತರಿಗೆ ಕೇಳಿದ ಪ್ರಶ್ನೆಯನ್ನೇ ಋಷಿಗಳಿಗೂ ಕೇಳುತ್ತಾನೆ. ಅದಕ್ಕೆ ಋಷಿಗಳು "ಆವ ವಸ್ತುಂ ಪೇಟಿಂ ಪೇಟ್ಗೊಡೆ ತಕ್ಕುದು ತಗದುದು ಮನರಿಯಲಕ್ಕುಂ"(ವಡ್ಡಾರಾಧನೆ ಪು–೧೧೬)ಎಂದ ತಕ್ಷಣ ಅರಸನಿಗೆ ಕೋಪ ಬಂದು "ಇವರೆಲ್ಲರ ಪೇಳ್ವಂತು ಪೇಟ್ವೆರಲ್ಲರೊಡಂಬಡುವರಲ್ಲರ್ ಬಹು ಪ್ರಳಾಪಿಗಳಿವರಂ ಪೊಟಲಿಂದಟ್ಟಿ"(ವಡ್ಡಾರಾಧನೆ ಪು–೧೧೬)ಎಂದು ಆಜ್ಞೆಮಾಡುತ್ತಾನೆ. ಉಳಿದವರಿಗೂ "ಒಳ್ಳಿತ್ತಪ್ಪ ವಸ್ತು ನಿನಗಕ್ಕುಮ್"(ವಡ್ಡಾರಾಧನೆ ಪು–೧೧೬)ಎನ್ನುವರು. ರಾಜ ಸಂತೋಷಗೊಂಡು ಅವರಿಂದ ಮೂರು ಸಾರಿ 'ಬಲಮ್' ಎಂದು ಹೇಳಿಸಿಕೊಂಡು ತನ್ನ ಹೆಂಡತಿ ವೀರಮತಿ ಮಹಾದೇವಿಯನ್ನು ಬೇಡಿ ಮಗಳಾದ ಕೃತ್ತಿಕೆಯನ್ನು ಮದುವೆಯಾಗುತ್ತಾನೆ.

ಮೇಲಿನ ಕಥೆಯ ಘಟನೆಯಲ್ಲಿ ಬರುವ ಋಷಿ ಪಾತ್ರಗಳನ್ನು ಹೊರತುಪಡಿಸಿ ಉಳಿದವರೆಲ್ಲ ಅಸಾಮಾನ್ಯ ಪಾತ್ರಗಳೇ ಎನ್ನಿಸಿದರೂ ಮಾನಸಿಕ ಪಾತಳಿಯಲ್ಲಿ ಅತ್ಯಂತ ಸಾಮಾನ್ಯ ಪಾತ್ರಗಳೇ ಆಗಿವೆ. ಇಲ್ಲಿ ಬರುವ ರಾಜನಂತೂ ಧರ್ಮಾಧರ್ಮಗಳ ವಿವೇಚನೆಗೆ ಹೋಗುವದಿಲ್ಲ. ನಾಡಿನಲ್ಲಿನ ಒಳ್ಳೆಯದೆಲ್ಲವೂ ಯಾರಿಗೆ ಸೇರಬೇಕೆಂಬ ರಾಜನ ಪ್ರಶ್ನೆಯೇ ಅವನ ಮನೋಭಾವವನ್ನು ಸೂಚಿಸುತ್ತದೆ. ಮಗಳನ್ನೇ ಬಯಸುವ ತಂದೆ ಲೋಕದ ಹಿತವನ್ನೆಂತು ಕಾಯಬಲ್ಲನೆಂಬ ವಿರೋಧ ಯಾರೊಬ್ಬರಿಂದಲೂ ವ್ಯಕ್ತವಾಗದುದು ಪ್ರಭುತ್ವದ ವಿಪರ್ಯಾಸ. ತನಗೆ ವಿರುದ್ಧವಾಗಿ ಮಾತನಾಡಿದ ಋಷಿಗಳನ್ನು ಊರಿಂದ ಹೊರಗಟ್ಟಿದ. ಋಷಿಗಳು ತನಗೆ ಬೇಕಾದಂತೆ ಉತ್ತರವನ್ನು ಕೊಡದಿದ್ದಕ್ಕೆ ಋಷಿಗಳನ್ನು ನಗರದಿಂದ ಆಚೆ ತಳ್ಳುವಂತೆ ಆಜ್ಞೆ ಮಾಡುತ್ತಾನೆ. ಏಕೆಂದರೆ ಪ್ರಭುತ್ವ ಯಾವಾಗಲೂ ತನ್ನ ಪರವಾದ ಉತ್ತರವನ್ನು ನಿರೀಕ್ಷಿಸುತ್ತದೆಯೇ ಹೊರತಾಗಿ ವಿರೋಧವನ್ನು ತಿರಸ್ಕರಿಸುತ್ತದೆ. ತನ್ನ ಮಗಳನ್ನು ಮದುವೆಯಾಗಲು ಹೆಂಡತಿಯಿಂದಲೇ ಮಗಳನ್ನು ಬೇಡುವ ರಾಜ; ರಾಣಿಯಾಗಿಯೂ ರಾಜನನ್ನು ವಿರೋಧಿಸಲಾಗದ ರಾಣಿ ವೀರಮತಿ ಮಗಳನ್ನು ರಾಜನಿಗೆ ಮದುವೆ ಮಾಡಿ ಬ್ರಹ್ಮಚರ್ಯ ವ್ರತವನ್ನು ಕೈಕೊಳ್ಳುವದೇ ರಾಣಿ ವೀರಮತಿ ರಾಜನಿಗೆ ತೋರುವ ವಿರೋಧ, ತಿರಸ್ಕಾರ. ಇನ್ನು ಮಗಳಾದ ಕೃತ್ತಿಕೆಯ ಅಭಿಪ್ರಾಯವನ್ನಂತೂ ಕೇಳುವವರೇ ಇಲ್ಲ. ಇಂಥ ರಾಜನಿರುವ ನಾಡಲ್ಲಿ ರಾಜ ಪರಿವಾರದ ಸ್ತ್ರೀಯರ ಸ್ಥಿತಿಯೇ ಹೀಗಿದ್ದಾಗ ಸಾಮಾನ್ಯ ಹೆಣ್ಣುಗಳ ಬದುಕನ್ನು ಊಹಿಸಲೂ ಸಾಧ್ಯವಾಗದ ದಯನೀಯ ಸ್ಥಿತಿ ಇರುತ್ತದೆ. ಹೀಗೆ ತನ್ನ ಮಗಳನ್ನೇ ಮದುವೆಯಾದ ಅಗ್ನಿರಾಜನನ್ನು ನೋಡಿ ಅಲ್ಲಿಯ ಜನ 'ಯಥಾ ರಾಜಾ ತಥಾ ಪ್ರಜಾ' ಎಂದು ನೀತಿ ನಿಯಮ ಬಿಟ್ಟು ನಡೆಯತೊಡಗಿದರು. ಹಾಗಾಗಿ ಆ ಊರಿಗೆ

‘ಭೋಗಂಕಾರೋಹಣ’ ಎಂಬ ಹೆಸರೇ ರೂಢಿಯಾಯಿತು ಎಂದು ವಡ್ಡಾರಾಧನೆಕಾರ ಹೇಳುವ ಮಾತು ಸಹಜವಾಗಿದೆ.

ರಾಜ ಮತ್ತು ಅನುಮಾನ:

ಒಂದು ದಿನ ರಾಜ ಮಧ್ಯಾಹ್ನ ರಾಣಿಯ ತೊಡೆಯ ಮೇಲೆ ತಲೆಯಿಟ್ಟು ಮಲಗಿದ್ದ. ಆಗ ರಾಣಿ ವೀರಶ್ರೀಯ ಅಣ್ಣ ಕಾರ್ತಿಕ ಸ್ವಾಮಿ ಋಷಿಯು ಭಿಕ್ಷೆಗೆಂದು ಊರಿನಲ್ಲಿ ಮನೆಮನೆಗೆ ಅಡ್ಡಾಡುತ್ತ ಅರಮನೆಯನ್ನು ಪ್ರವೇಶಿಸಿದನು. ಉಪ್ಪರಿಗೆಯ ಮೇಲಿದ್ದ ವೀರಶ್ರೀ ಅಲ್ಲಿಂದಲೇ ಅಣ್ಣನನ್ನು ನೋಡಿ ತೊಡೆಯ ಮೇಲೆ ನಿದ್ದೆ ಹೋಗಿದ್ದ ಅರಸನ ತಲೆಗೊಂದು ಆಧಾರವಿಟ್ಟು ಋಷಿಗಳನ್ನು ಭಿಕ್ಷೆಗೆ ನಿಲ್ಲಿಸಿಕೊಳ್ಳಲು ಹೋಗುತ್ತಾಳೆ. ಅಷ್ಟರಲ್ಲಿ ಕಾರ್ತಿಕ ಸ್ವಾಮಿ ಋಷಿಗಳು ಅರಮನೆಯೊಳಗಿಂದ ಹಿಂತಿರುಗಿ ಬಾಗಿಲವರೆಗೆ ಬಂದು ಬಿಟ್ಟಿದ್ದರು. ಅರಸಿ ಋಷಿಗಳನ್ನು ಅಡ್ಡಗಟ್ಟಿ ಕೈಮುಗಿದು ಭಿಕ್ಷೆಗೆ ನಿಲ್ಲಬೇಕೆಂದು ಬೇಡಿಕೊಳ್ಳುತ್ತಾಳೆ. ಆದರೆ ಋಷಿಗಳು “ಅಬ್ಬಾ ಮನೆಯಂ ಪೊಕ್ಕುಂ ಬಂದೊಮಿನ್ನೆಮಗೆ ನಿಲ್ಲಲಾಗದು”(ವಡ್ಡಾರಾಧನೆ ಪು-೧೧೭)ಎಂದರು. ಅದಕ್ಕೆ ವೀರಶ್ರೀ ದಯವಿಟ್ಟು ಭಿಕ್ಷೆಗೆ ನಿಂತು ದಯೆತೋರಬೇಕೆಂದು ಋಷಿಗಳ ಕಾಲಮೇಲೆ ಬಿದ್ದು ಹೊರಳಾಡುತ್ತಾಳೆ. ಅಷ್ಟರಲ್ಲಿ ಅರಸನಿಗೆ ಎಚ್ಚರವಾಗಿ ಎಲ್ಲಾ ಕಡೆಗೆ ನೋಡಿದರೂ ರಾಣಿ ಇಲ್ಲದ್ದನ್ನು ನೋಡಿ ಅಲ್ಲಿದ್ದವರನ್ನು ಕೇಳುತ್ತಾನೆ. ಅವರು “ಸವಣಂ ಬಂದೊಡಾತನಂ ಕಂಡು ಕರುಮಾಡದಿಂದಿೞಿದು ಪರಿದು ಬೞಿಯಂ ತಗುಳ್ದು ಬಾಗಿಲ ಮಾಡದಲ್ಲಿ ಸವಣನೊಡನಾ ಪೋರುತ್ತಿರ್ಪೋಳ ನೋಡಿಮ್” (ವಡ್ಡಾರಾಧನೆ ಪು-೧೧೭)ಎಂದು ಅರಸನಿಗೆ ತೋರಿಸುತ್ತಾನೆ. ಆಗ ರಾಜ ಕೋಪಗೊಂಡು ಹಾಗಾದರೆ ದಿನವೂ ಇವಳು ನನ್ನನ್ನು ಬಿಟ್ಟು ಸವಣನಲ್ಲಿಗೆ ಹೋಗುತ್ತಿದ್ದಾಳೆ ಎಂದು ತಿಳಿದು ಅವಸರದಿಂದ ಉಪ್ಪರಿಗೆಯನ್ನಿಳಿದು ಋಷಿಗಳಿದ್ದಲ್ಲಿಗೆ ಹೋಗಿ ಶಕ್ತಿ ಎಂಬ ಆಯುಧದಿಂದ ಅವನ ಎದೆಯನ್ನು ಸೀಳಿ ತನ್ನರಸಿಯ ತಲೆಗೂದಲನ್ನಿಡಿದು ದರದನೆ ಅರಮನೆಗೆ ಎಳೆದುಕೊಂಡು ಬರುತ್ತಾನೆ.

ಇಲ್ಲಿ ಅನ್ಯೋನ್ಯವಾಗಿದ್ದ ಹೆಂಡತಿಯ ಮೇಲೆ ರಾಜ ವಿಚಾರಹೀನನಾಗಿ ಅನುಮಾನ ಪಡುವದು ಅಷ್ಟೇ ಅಲ್ಲ ಏನೂ ತಪ್ಪು ಮಾಡದ ಋಷಿಯನ್ನು ನಿರ್ದಾಕ್ಷಿಣ್ಯವಾಗಿ ರಾಜ ಕೊಲೆ ಮಾಡುವದು ಮತ್ತು ತನ್ನ ರಾಣಿಯನ್ನು ಹಿಂಸಿಸುವದು, ಇದೆಲ್ಲ ರಾಜನ ವಿಚಾರಶೂನ್ಯತೆಗೆ ಸಾಕ್ಷಿ. ರಾಜ ಅನುಮಾನ ಪಡುವದು ರಾಣಿಯ ಮೇಲೆ. ಆದರೆ ಕೊಲೆ ಮಾಡುವದು ಋಷಿಯನ್ನು. ಸಾಮಾನ್ಯನಾದ ಋಷಿಯನ್ನು ರಾಜನೇ ಕೊಂದರೆ ಯಾರು ತನ್ನನ್ನು ಕೇಳುವರೆಂಬ ಅಧಿಕಾರದ ಮದ ರಾಜನಿಂದ ಈ ಕೃತ್ಯ ಮಾಡಿಸುತ್ತದೆ. ಗಂಡು-ಹೆಣ್ಣಿನ ಮಧ್ಯದ ಯಾವ ಸಂಬಂಧವರಿಯದೇ ಅನುಮಾನಿಸುವದು ಪರಂಪರೆಯುದ್ದಕ್ಕೂ ಕಂಡು ಬರುವ ಪಿಡುಗು. ನಿಜ ಸಂಸಾರದಲ್ಲಿನ ಅನುಮಾನ ನಿತ್ಯವೂ ಎಷ್ಟೋ ಜೀವಗಳನ್ನು ಬಲಿ ತೆಗೆದುಕೊಳ್ಳುತ್ತ ಬಂದಿದೆ. ಇದು ಉದಾಹರಣೆ ಮಾತ್ರ. ರಾಜನಾದಿಯಾಗಿ ಅನೇಕ ಸಾಮಾನ್ಯರಲ್ಲಿ ಪಸರಿಸುವ ಅನುಮಾನವೆಂಬ ಈ ರೋಗ ವ್ಯಕ್ತಿಯನ್ನು ಮತಿಹೀನನ್ನಾಗಿ ಮಾಡಿ ಅಪರಾಧ ಹಿಂಸೆ ಮುಂತಾದವುಗಳನ್ನು ಮಾಡಲು ಪ್ರೇರೇಪಿಸುತ್ತದೆ.

ಪ್ರಭುತ್ವ ಮತ್ತು ಬೇಟೆ:

ಒಬ್ಬ ಬೆಸ್ತನು ನಾಲ್ಕು ಕಾಲು ಕಟ್ಟಿ ನೇತಾಡುವಂತೆ ಕೊರಳಲ್ಲಿ ಆಮೆಯನ್ನು ಕಟ್ಟಿಕೊಂಡು ಬರುತ್ತಿದ್ದನು. ಅದೇ ದಾರಿಯಲ್ಲಿ ಸಂಚರಿಸುತ್ತಿದ್ದ ಅಭಯಘೋಷ ರಾಜ ಜನರಿಗೆ ತನ್ನ ಬೇಟೆ

ಕೌಶಲ್ಯವನ್ನು ತೋರಿಸಲು ಬೆಸ್ತ ಹಿಡಿದ ಆಮೆಗೆ ಚಕ್ರದಿಂದ ಹೊಡೆದು ಆಮೆಯ ನಾಲ್ಕೂ ಕಾಲುಗಳನ್ನು ಕತ್ತರಿಸಿದನು. ಅರ್ಧಮರ್ಧ ಜೀವ ಉಳಿದ ಆಮೆಯನ್ನು ಬೆಸ್ತ ಮನೆಗೆ ತೆಗೆದುಕೊಂಡು ಹೋದನು.

ಪ್ರಾಣಿಯನ್ನು ಹೊಡೆದುರುಳಿಸುವದರಲ್ಲಿ ಪರಾಕ್ರಮವನ್ನು ತೋರುವದು ಪ್ರಭುತ್ವಕ್ಕೆ ಪ್ರತಿಷ್ಠೆ. ಆದರೆ ತಾನು ತಂದ ಆಮೆಯನ್ನು ರಾಜ ಕೊಂದರೂ ರಾಜನಿಗೆ ಏನೊಂದೂ ಮರುಮಾತನಾಡದೇ ಗಾಯಗೊಂಡ ಆಮೆಯನ್ನು ಸುಮ್ಮನೆ ಮನೆಗೊಯ್ಯುವಲ್ಲಿ ಬೆಸ್ತನ ಅಸಹಾಯಕತೆಯನ್ನು ಕಾಣುತ್ತೇವೆ.

ಅಭಯಘೋಷ ರಾಜನಿಂದ ಗಾಯಗೊಂಡು ಸತ್ತ ಆಮೆ ಮುಂದಿನ ಜನ್ಮದಲ್ಲಿ ಅದೇ ಅಭಯಘೋಷ ರಾಜ ಮತ್ತು ಅಭಯಮತಿ ರಾಣಿಯರ ಮಗ ಚಂಡವೇಗನಾಗಿ ಹುಟ್ಟುತ್ತದೆ. ಮುಂದೊಂದು ದಿನ ಚಂದ್ರಗ್ರಹಣ ನೋಡಿ ವೈರಾಗ್ಯವಾಗಿ ತಪಸ್ಸಿಗೆ ನಿಲ್ಲುವನು. ಹಾಗೇ ಒಂದುದಿನ ಉದ್ಯಾನವನದಲ್ಲಿ ವೀರಾಸನದಲ್ಲಿ ತಪಸ್ಸಿಗೆ ನಿಂತಾಗ ಹಿಂದಿನ ಜನ್ಮದ ಆಮೆ; ಈ ಜನ್ಮದ ಮಗನಾದ ಚಂಡವೇಗ ದೂರದಿಂದ ಚಕ್ರವನ್ನು ಬೀಸಿ ತಂದೆ ಅಭಯಘೋಷ ಋಷಿಯ ಎರಡು ಕೈಕಾಲುಗಳನ್ನು ಕತ್ತರಿಸಿದನು.

ವೈರತ್ವ ಜನ್ಮಾಂತರದಲ್ಲೂ ಮುಂದುವರೆಯುವದು ಎಂಬುದು ಜನಪದ ನಂಬಿಕೆ. ಹಿಂದಿನ ಜನ್ಮದ ವೈರಕಾರಣವಾಗಿ ಈ ಜನ್ಮದಲ್ಲಿ ತಂದೆ ಮಗನಾದಾಗ್ಯೂ ವೈರವನ್ನು ಸಾಧಿಸಿ ಮಗನೇ ತಂದೆಯನ್ನು ಕೊಲ್ಲುವದು ಇದು ಜೈನರ ಪುನರ್‌ಜನ್ಮ, ಜನ್ಮಾಂತರಗಳಿಗೂ ವೈಷಮ್ಯ ಮುಂದುವರೆಯುವುದು ಎಂಬ ನಂಬಿಕೆಗೆ ಸಾಕ್ಷಿಯಾಗಿದೆ.

ಪ್ರಭುತ್ವ ಮತ್ತು ತಳವಾರ:

ತಳವಾರ ಯಾವತ್ತೂ ಪ್ರಭುತ್ವದ ಅಡಿಯಾಳಾಗೇ ಕೆಲಸ ಮಾಡುವವನು. ತನ್ನ ತಳವಾರಿಕೆಯ ವೃತ್ತಿಯೊಂದಿಗೆ ರಾಜನ ಆಜ್ಞೆ ಪರಿಪಾಲಿಸಿ ರಾಜ ಹೇಳಿದ ವಿಶೇಷ ಕಾರ್ಯವನ್ನು ತಳವಾರ ಮಾಡಬೇಕಿತ್ತು. ವಡ್ಡಾರಾಧನೆಯ ಬಹುತೇಕ ಎಲ್ಲ ಕಥೆಗಳಲ್ಲಿ ತಳವಾರರು ಬಂದೇ ಬರುವದು ವಿಶೇಷ.

ಊರಲ್ಲಿ ವಿದ್ಯುಚ್ಚೋರನೆಂಬ ಕಳ್ಳನ ಹಾವಳಿಯಿಂದ ಆ ಊರಿನ ಬಚ್ಚರು, ದೂಸಿಗರು, ನಿಯೋಗಿಗಳು, ಸೂಳೆಯರು, ಸಾಮಂತರೆಲ್ಲ ಚಿನ್ನಾಭರಣ ಕಳೆದುಕೊಂಡು ರಾಜನಿಗೆ ದೂರು ಕೊಡುತ್ತಾರೆ. ಅದೇ ವಿದ್ಯುಚ್ಚೋರ ಒಂದು ರಾತ್ರಿ ಅರಮನೆಯಲ್ಲಿದ್ದ ರಾಜನ ಸರ್ವರುಜಾಪಹಾರವೆಂಬ ಹಾರ ಕದಿಯುತ್ತಾನೆ. ಅಲ್ಲಿಯವರೆಗೂ ಯಾರು ಕಳ್ಳನ ಮೇಲೆ ದೂರು ಕೊಟ್ಟರೂ ಕ್ರಮ ಕೈಕೊಳ್ಳದೇ ನಿರ್ಲಕ್ಷ್ಯತಾಳಿದ್ದ ರಾಜ, ತನ್ನ ಅರಮನೆಯ ಹಾರ ಕಳುವಾದ ತಕ್ಷಣ ಎಚ್ಚೆತ್ತು ತಳವಾರನನ್ನು ಕರೆಯಿಸಿ "ಎಲವೋ ಯಮದಂಡಾ ಪೊಟಲ ಪಾರ್ವರ ಪರದರ ಸೂಳೆಯರ ಒಕ್ಕಲಮಕ್ಕಳ ಕಸವರಮೆಲ್ಲಮಂ ಕಳ್ದೊಡಮಾರಯ್ಯದೆ ಕೆಮ್ಮಗಿರ್ಪೆಯಲ್ಲದೆಯುಮೆಮ್ಮ ಸಜ್ಜೆಯೊವರಿಯಂ ಕಳ್ಳಂ ಪೊಕ್ಕು ಪುಡಿಕೆಯಂ ತೆಱೆದಚ್ಯುತೇಂದ್ರನಿತ್ತ ಕುಲಧನಮಪ್ಪ ಹಾರಮಂ ಕೊಂಡು ಪೋದಂ ಬೇಗಂಕಳ್ಳನನಾರಯ್ದು ಹಾರವಂ ಕೊಂಡು ಬಾ ಅಲ್ಲದಾಗಳ್ ಕಳ್ಳಂಗೆ ತಕ್ಕ ನಿಗ್ರಹಮಂ ನಿನಗೆ ಮಾಡಿದಪ್ಪೆನ್"(ವಡ್ಡಾರಾಧನೆ ಪು-೧೨೩)ಎಂದು ರಾಜ ಆಜ್ಞೆ ಮಾಡುತ್ತಾನೆ. ರಾಜ ತನ್ನ ವಸ್ತು ಕಳೆದುಕೊಂಡಾಗ ಅದನ್ನು ಪಡೆಯಲು ಸಾಮಾನ್ಯನನ್ನು ಅನಾವಶ್ಯಕವಾಗಿ ಶಿಕ್ಷಿಸಲೂ ಹಿಂಜರಿಯುವದಿಲ್ಲ. ತಳವಾರ ತನ್ನ ಕೆಲಸ ಸಮರ್ಥವಾಗಿ ನಿಭಾಯಿಸದಿದ್ದರೆ ಕಳ್ಳನಿಗೆ ಕೊಡುವ ಶಿಕ್ಷೆಯನ್ನು ತಳವಾರನಿಗೆ ಕೊಡುತ್ತೇನೆಂದು ಹೇಳುವಲ್ಲಿ ರಾಜನ ಚಾಣಾಕ್ಷತೆಯನ್ನು ಕಾಣುತ್ತೇವೆ. ಕಳ್ಳನನ್ನು ಹಿಡಿಯದಿದ್ದರೆ ಕಳ್ಳನ ಶಿಕ್ಷೆ ತನಗೆ ದೊರೆಯುವದೆಂಬ

ಹೆದರಿಕೆಯಿಂದ ತಳವಾರ ಕಳ್ಳನನ್ನು ಹಿಡಿಯುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವನು ಎಂಬ ತಿಳುವಳಿಕೆ ಇಲ್ಲಿದೆ.

ಪ್ರಭುತ್ವ ಮತ್ತು ಯುದ್ಧ:

ಇಡೀ ವಡ್ಡಾರಾಧನೆ ಕೃತಿಯಲ್ಲಿ ಯುದ್ಧದ ಉಲ್ಲೇಖ ಬರುವದು ಒಂದೇ ಕಡೆಗೆ. ರಾಜ ಗುರುದತ್ತ ಕುಮಾರ ಮತ್ತು ಧಾತ್ರಿವಾಹನ ಇಬ್ಬರೂ ಯುದ್ಧ ಸಾರುತ್ತಾರೆ. ಆನೆ, ಕುದುರೆ, ರಥ, ಪದಾತಿಗಳೆಲ್ಲ ಸೇರಿ ಹಲವು ದಿನ ಭಯಂಕರವಾಗಿ ಯುದ್ಧ ನಡೆಯುತ್ತದೆ. ಯುದ್ಧ ನಡೆದದ್ದು ಧಾತ್ರಿವಾಹನನ ಮಗಳಿಗೋಸ್ಕರವಾಗಿ. ಆ ಮಗಳು ತಾನು ಗುರುದತ್ತ ಅರಸನನ್ನೇ ಮದುವೆಯಾಗುವದಾಗಿ ತಾನೇ ಹೇಳುತ್ತಾಳೆ. ಹಾಗಾಗಿ ಯುದ್ಧ ಅಷ್ಟಕ್ಕೇ ನಿಲ್ಲುತ್ತದೆ. ಎರಡೂ ಕಡೆಯ ಯುದ್ಧದಲ್ಲಿ ಸತ್ತವರಿಗೆ ನೊಂದವರಿಗೆ ಉಚಿತ ಪರಿಹಾರಗಳನ್ನು ಕೊಡಲಾಯಿತು. ಯುದ್ಧದಲ್ಲಿ ಸತ್ತವರಿಗೆ ನೊಂದವರಿಗೆ ಪರಿಹಾರ ಕೊಡುವ ರೂಢಿ ಪ್ರಭುತ್ವದಲ್ಲೂ ಇತ್ತು. ಇಂದಿನ ಪ್ರಜಾಪ್ರಭುತ್ವದಲ್ಲೂ ಇದೆ. ಇಂಥ ಕಾರ್ಯಗಳು ಮಾನವೀಯ ಮಿಡಿತಕ್ಕೆ ಸಾಕ್ಷಿಯಾಗುತ್ತವೆ.

ಪ್ರಭುತ್ವ ಮತ್ತು ಅಮಾನವೀಯತೆ:

ಅನೇಕ ಸಲ ಪ್ರಭುತ್ವ ತನ್ನ ಅಧಿಕಾರ ಮದದಿಂದ ಮಾನವೀಯತೆಯೇ ಇಲ್ಲದಂತಹ ಅಮಾನವೀಯ ಕೆಲಸಗಳನ್ನು ಮಾಡುತ್ತಿರುತ್ತದೆ. ಅಂತಹದೇ ಸಂದರ್ಭವನ್ನು ವಡ್ಡಾರಾಧನೆಕಾರ ದಂಡಕರಿಸಿಯ ಕಥೆಯಲ್ಲಿ ಹೇಳುತ್ತಾನೆ.

ಅಶೋಕನೆಂಬ ಅರಸನ ಮಹಾಸಾಮಂತ ಸುಧಾಮಕನೆಂಬುವನು ಅತಿಯಾದ ಲೋಭ ಉಳ್ಳವನು. ಅವನು ತನ್ನ ಬೇಸಾಯದ ಹೊಲಗದ್ದೆಗಳನ್ನು ಊಳುವ ಎತ್ತುಗಳ ಬಾಯನ್ನು ಭದ್ರವಾಗಿ ಕಟ್ಟಿಸುತ್ತಿದ್ದನು. ಅಡುಗೆ ಮಾಡುವ, ಬಡಿಸುವ, ಸೇವೆ ಮಾಡುವ ಹೆಂಡಿರ ಮೊಲೆಗಳಿಗೆ ಭದ್ರವಾಗಿ ಬಟ್ಟೆ ಕಟ್ಟಿಸಿ ಮಕ್ಕಳು ಹಾಲು ಕುಡಿಯದ ಹಾಗೆ ಮಾಡುತ್ತಿದ್ದನು.

ಇದು ಪ್ರಭುತ್ವ ಸಾಮಾನ್ಯನನ್ನು ಎಷ್ಟು ನಿರ್ದಯವಾಗಿ ನಡೆಸಿಕೊಳ್ಳುತ್ತದೆ ಎನ್ನುವದಕ್ಕೆ ಉದಾಹರಣೆ. ಎತ್ತು, ಮಕ್ಕಳಂತಹ ಮುಗ್ಧ ಜೀವಿಗಳಿಗೆ ಆಹಾರ ಸಿಗದಂತಹ ನಿರ್ದಯತೆಯನ್ನು ಸೃಷ್ಟಿ ಮಾಡುವ ಮೂಲಕ ಒಕ್ಕಲು ಮಕ್ಕಳಲ್ಲಿ ಮತ್ತು ತಾಯಂದಿರಲ್ಲಿ ಭಯವನ್ನುಂಟು ಮಾಡುವದು ಪ್ರಭುತ್ವದ ಉದ್ದೇಶ. ಈ ಭಯವನ್ನು ಮೂಲವಾಗಿಟ್ಟು ಸಮಾಜವನ್ನು ತನ್ನ ಅಂಕೆಯಲ್ಲಿಟ್ಟುಕೊಳ್ಳುತ್ತದೆ.

ಪ್ರಭುತ್ವ-ಸತ್ಯ ಮತ್ತು ಭಯ:

ಕಾಪಿ ಎಂಬ ಮಂತ್ರಿಯು ಮಹಾರಾಣಿ ಸುಂದರಿಗೆ ಮೋಹಿತನಾದನು. ಅರಸನನ್ನು ಕೊಂದರೆ ಅರಸಿಯೊಂದಿಗೆ ಬಾಳಬಹುದು ಎಂದುಕೊಂಡು ರಾಜನಿಗೆ ಹಣ ಬಚ್ಚಿಡಲು ಸೂಕ್ತ ಸ್ಥಳ ತೋರಿಸುತ್ತೇನೆ ಎಂದು ನಸುಕಿನಲ್ಲಿ ಊರಿನಿಂದ ದೂರ ಒಂದು ಹಾಳು ಬಾವಿಯ ಹತ್ತಿರ ಕರೆದುಕೊಂಡು ಹೋಗುವನು. ಬಾವಿಯ ಹತ್ತಿರ ರಾಜನನ್ನು ಇರಿದು ಕೊಂದು ಕೆಸರು ತುಂಬಿದ ಬಾವಿಗೆ ಅರಸನನ್ನು ನೂಕಿ ಏನೂ ಅರಿಯದವನಂತೆ ಮನೆಗೆ ಹೋಗುತ್ತಾನೆ.

ಇದೆಲ್ಲವನ್ನು ಮರದ ಮೇಲೆ ಕೂತು ಹೂ ಹರಿಯುತ್ತಿದ್ದ ಮಾಲೆಗಾರ ನೋಡಿ ಹೆದರಿ ಓಡಿ ಹೋಗುತ್ತಾನೆ. ಮುಂದೊಂದು ದಿನ ತೀರಿಕೊಂಡ ಪದ್ಮರಾಜನ ಮಗ ಮಹಾಪದ್ಮ ತನ್ನ ತಂದೆ ಸತ್ತ ರೀತಿಯನ್ನು ಯಾರಾದರೂ ತಿಳಿದೇ ಇರುತ್ತಾರೆಂದು ರಾತ್ರಿಯಲ್ಲಿ ಮನೆಮನೆ ಹತ್ತಿರ ನಿಂದು ಮನೆಯವರ

ಮಾತು ಆಲಿಸತೊಡಗಿದ. ಹಾಗೆ ರಾಜ ಹೋಗುತ್ತಿರುವಾಗ ವಸಂತಕನೆಂಬ ಮಾಲೆಗಾರ ರಾಜನ ಸಾವಿನ ಬಗ್ಗೆ ಗೂಡಾರ್ಥದಲ್ಲಿ ತನಗೆ ತಾನೇ ಮಾತಾಡಿಕೊಳ್ಳುತ್ತಿದ್ದುದನ್ನು ಕೇಳಿಸಿಕೊಂಡ. ಮಹಾಪದ್ಮ ಇವನಿಗೆ ಸತ್ಯ ತಿಳಿದಿದೆ ಎಂದರಿತು ಅರಮನೆಗೆ ಹೋಗುತ್ತಾನೆ.

ಮರುದಿನ ಮಾಲೆಗಾರ ವಸಂತಕನನ್ನು ಅರಮನೆಗೆ ಹಿಡಿದು ತರಿಸುತ್ತಾನೆ. ಅರಸ ಸತ್ತ ರೀತಿ ನಿನಗೆ ಗೊತ್ತಿದೆ, ಅಂಜದೆ ನಿಜ ಹೇಳು ಇಲ್ಲದಿದ್ದರೆ ಕೊಲ್ಲಿಸುತ್ತೇನೆ ಎಂದು ರಾಜ ಹೆದರಿಸುತ್ತಾನೆ. ಅದಕ್ಕೆ ವಸಂತಕ ಭಯದಿಂದ "ದೇವಾ ಬಯ್ಗಿರುಳಿನ ಜಾವದಾಗಳ್ ವಿಶ್ವಸೇನನೆಂಬ ಮಂತ್ರಿಯರಸನುದ್ಯಾನವನಕ್ಕೊಡಗೊಂಡು ಪೋಗಿ ಬಾವಿಯ ತಡಿಯೊಳಿರ್ದಿಜೆದು ಕೊಂದು ಬಾವಿಯೊಳ್ ನೂಂಕುವದುಂ ಮರನನೇಜಿ ಪೂಗೊಯ್ಯುತ್ತಿರ್ದಾಂ ಕಂಡೆತ್ತಾನುಮೆನ್ನುಮಂ ಕೊಲ್ಗುಮೆಂದು ಭಯದಿಂ ಪಾಯ್ದೋಡಿ ಕೆಟ್ಟೆನಿದೆನ್ನಕಂಡ ವೃತ್ತಾಂತಮ್"(ವಡ್ಡಾರಾಧನೆ ಪು-೧೮೨) ಎಂದು ಹೇಳುತ್ತಾನೆ.

ಪ್ರಭುತ್ವದ ಯಾವ ವಿಷಯಗಳಿಗೂ ಸಾಮಾನ್ಯ ತಲೆಹಾಕಬಯಸುವದಿಲ್ಲ. ಎಂಥ ಸತ್ಯವನ್ನೇ ಆದರೂ ಪ್ರಭುತ್ವದೆದುರು ಹೇಳಲು ಭಯಬೀಳುತ್ತಾನೆ; ಹಿಂಜರಿಯುತ್ತಾನೆ. ರಾಜ ತಾನಾಗೆ ಹೆದರಿಸಿ ಕೇಳಿದನೆಂದು ಮಾತ್ರ ಮಾಲೆಗಾರ ತಾನು ನೋಡಿದ್ದನ್ನು ಹೇಳುತ್ತಾನೆ. ಅವನೊಂದಿಗೆ ಅವತ್ತಿಗಷ್ಟೇ ಅಲ್ಲ; ಇವತ್ತಿಗೂ ಸಾಮಾನ್ಯರು ದೊಡ್ಡವರ ಸತ್ಯದ ಬಗ್ಗೆ ಮಾತನಾಡುವದಿಲ್ಲ.

ಸಾಮಾನ್ಯನ ಸಾಮೂಹಿಕ ಪ್ರತಿಭಟನೆ-ಹಟ:

ನಂದಮಹಾರಾಜನ ಕಾಲದಿಂದ ಒಂಭತ್ತು ತಲೆಮಾರುಗಳವರೆಗೆ ಅಗ್ರಹಾರ, ಅಗ್ರಾಸನವನ್ನು ಅನುಭವಿಸುತ್ತಿದ್ದ ಬ್ರಾಹ್ಮಣರನ್ನು ತೆಗೆದು ಆ ಪದವಿಯನ್ನು ಮತ್ತೊಬ್ಬ ಬ್ರಾಹ್ಮಣನಾದ ಚಾಣಕ್ಯನಿಗೆ ಆ ಅಧಿಕಾರವನ್ನು ಕೊಟ್ಟಿರುತ್ತಾರೆ. ರಾಜನ ಈ ನಿರ್ಧಾರವನ್ನು ಬ್ರಾಹ್ಮಣರೆಲ್ಲ ಒಟ್ಟಾಗಿ ಸೇರಿ ಪ್ರಶ್ನಿಸುತ್ತಾರೆ. ಆಗ ಅಲ್ಲೇ ಇದ್ದ ಸುಬಂಧು, ವಂಶಪಾರಂಪರ್ಯವಾಗಿ ಬಂದದ್ದನ್ನು ಕ್ಷತ್ರಿಯರಾದವರು ಕಿತ್ತುಕೊಳ್ಳಬಾರದು ಎಂಬ ಸಲಹೆಯನ್ನು ರಾಜನಿಗೆ ನೀಡುತ್ತಾನೆ. ಅದಕ್ಕೆ ರಾಜ ಹಾಗಾದರೆ ಚಾಣಕ್ಯನನ್ನು ಅಗ್ರಾಸನದಿಂದ ಕೆಳಗಿಳಿಸು ಎನ್ನುವನು. ಆ ಕೂಡಲೇ ಸುಬಂಧು ಅಗ್ರಾಸನದ ಮೇಲೆ ಕುಳಿತು ಉಣ್ಣಬೇಕೆಂದ ಚಾಣಕ್ಯನಿಗೆ "ನಿಮಗಾದಮಾನುಂ ಮುಳಿದರಸನಿಂತೆಂದಂ ಕೂಡಿಸಿರಿ. ಮದವಿಹ್ವಳೆಯರಪ್ಪ ವೇಶ್ಯಾಂಗನಾಸಕ್ತ ವಿಟ ಜನನಿವಾಸಿ ಎನ್ನ ಗ್ರಾಸನಮನುಣಲ್ಕೆಯೋಗ್ಯನಲ್ಲನದರೆಂದಾತನನಟ್ಟಿ ಕಳೆಯಿಮೆಂದಟ್ಟಿದನ್"(ವಡ್ಡಾರಾಧನೆ ಪು-೧೮೬) ಎಂದು ಚಾಣಕ್ಯನನ್ನು ಬಾಗಿಲು ಕಾಯುವವರಿಂದ ನೂಕಿಸಿ ಅರಮನೆಯಿಂದ ಹೊರಹಾಕಿದನು.

ಇಷ್ಟೆಲ್ಲ ಸಾಧ್ಯವಾದದ್ದು ಬ್ರಾಹ್ಮಣರ ಸಾಮೂಹಿಕ ಪ್ರಯತ್ನದ ಫಲವಾಗಿ. ಯಾವುದೇ ಅಧಿಕಾರವನ್ನು ಏಕಾಂಗಿಯಾಗಿ ಪ್ರಶ್ನಿಸುವದಕ್ಕಿಂತ ಸಾಮೂಹಿಕವಾಗಿ ಕೇಳಿದಾಗ ಯಶಸ್ಸು ಸಾಧ್ಯವಾಗುತ್ತದೆ. ಅದು ಈ ಬ್ರಾಹ್ಮಣರಲ್ಲಿ ಕಾಣಬರುತ್ತದೆ. ಇನ್ನೂ ಮುಖ್ಯ ಅಂಶವೆಂದರೆ ಪ್ರಭುತ್ವಕ್ಕೆ ತನಗೆ ಬೇಕಾದ ಹಾಗೆ ಸಾಮಾನ್ಯರಿಗೆ ಅಧಿಕಾರ ಕೊಡುವ, ಕಿತ್ತುಕೊಳ್ಳುವ ಎರಡೂ ಅಧಿಕಾರಗಳಿರುತ್ತವೆ.

ಈ ಮೇಲಿನ ಸಂದರ್ಭವೇ ಮುಂದುವರಿದು ಅವಮಾನಿತನಾದ ಚಾಣಕ್ಯ ಅಷ್ಟಕ್ಕೇ ಸುಮ್ಮನಾಗದೆ ನಂದನನ್ನು ಅನಂದನನ್ನಾಗಿ ಸುಬಂಧುವನ್ನು ಅಬಂಧುವಾಗಿ ಮಾಡುವ ಪಣ ತೊಡುತ್ತಾನೆ. ಅಷ್ಟೇಅಲ್ಲ "ಪೊೞಲಿಂ ಪೊರಮಟ್ಟು ಪೋಗಿ ಪನ್ನೆರಡು ವರುಷದೊಳಗೆ ಮಹಾಪದ್ಮನಂ ಕಿಡಿಸಿದಲ್ಲದೇ ಕಾಸೆಗಳಂ ಕಳೆಯೆನ್"(ವಡ್ಡಾರಾಧನೆ ಪು-೧೮೬)ಎಂದು ಪ್ರತಿಜ್ಞೆ ಮಾಡುತ್ತಾನೆ. ಅದನ್ನು ಸಾಧಿಸಿಯೂ ಬಿಡುತ್ತಾನೆ.

ಇದು ಸಾಮಾನ್ಯನೊಬ್ಬನ ಆತ್ಮಾಭಿಮಾನ ಕೆಣಕಿದ ಪ್ರತಿಯಾಗಿ ಪ್ರಭುತ್ವಕ್ಕೆ ದೊರೆತ ಪಾಠವಾಗಿ ಚರಿತ್ರೆಯಲ್ಲಿ ಅಜರಾಮರವಾಗಿದೆ. ಇದು ಸಾಮಾನ್ಯನ ಶಕ್ತಿಯ ಪ್ರತೀಕವಾಗಿದೆ.

ಧರ್ಮಾಮೃತ

ರಾಜಕುಮಾರ ಮತ್ತು ವ್ಯಕ್ತಿತ್ವದ ಅಧಃಪತನ:

ಲಲಿತಾಂಗನ ಕಥೆಯಲ್ಲಿ ಬರುವ ಲಲಿತಾಂಗ ಒಬ್ಬ ರಾಜಕುಮಾರ. ಪ್ರಭುತ್ವ ಕೇಂದ್ರಿತ ವ್ಯಕ್ತಿಯಾಗಿ ಜನಸಾಮಾನ್ಯರನ್ನು ರಕ್ಷಿಸಬೇಕಾದವನೇ ಉಪಟಳವನ್ನು ನೀಡಿ ಸಾಮಾನ್ಯರ ಬದುಕನ್ನೇ ದುಸ್ತರಗೊಳಿಸಿದ. ಭಿಕ್ಷೆಯೆತ್ತಿ ಬದುಕುವ ಭಿಕ್ಷುಕರಿಗೂ ಸಹ ಸುಂಕಕಟ್ಟಿ ಎಂದು ಪೀಡಿಸುತ್ತಿದ್ದನು. ಗಾಣಿಗರಿಂದ ಎಣ್ಣೆಕದ್ದು ಯಕ್ಷಿಯ ದೇವಾಲಯದಲ್ಲಿ ಬೆಳಗಿನವರೆಗೆ ದೀಪ ಉರಿಸುತ್ತಿದ್ದನು. ಹೂವಿನ ಸಂತೆಯನ್ನು ಹೊಕ್ಕು ಹೂಗಾರರಿಂದ ಎಲ್ಲ ತೆರನಾದ ಹೂಗಳನ್ನು ಲೂಟಿ ಮಾಡಿ ತಾನು ತನ್ನೊಂದಿಗಿನ ಧೂರ್ತ ಜನಸಮೂಹವೂ ಆ ಹೂಗಳನ್ನು ಮುಡಿದುಕೊಂಡು ಕರುಳು ಬಗೆಯುವವರೆಗೂ ನಗುತ್ತಿದ್ದರು. ಕಂಚುಗಾರರ ಮನೆಯಿಂದ ಪಾತ್ರೆ ಪಗಡೆಗಳನ್ನು ಕದ್ದು ತನ್ನೊಂದಿಗೆ ಇದ್ದ ಜನರಿಗೆ ಅವನ್ನು ಕೊಡುತ್ತಿದ್ದನು. ಈಡಿಗರ ಕೇರಿಯನ್ನು ಹೊಕ್ಕು ಹೆಂಡವನ್ನೆಲ್ಲ ಎಳತರಿಸಿ ಕಳ್ಳರಿಗೂ ಧೂರ್ತರಿಗೂ ಭಿಲ್ಲರಿಗೂ ಸೂರೆಗೊಳಿಸುವನು. ದುರ್ಜನರನ್ನು ಕೂಡಿಸಿಕೊಂಡು ದಾಸಿಯರ ಗುಂಪಿಗೆ ಬೆಲೆಬಾಳುವ ಆಭರಣಗಳನ್ನು ಕೊಟ್ಟು ಒತ್ತಾಯಪೂರ್ವಕವಾಗಿ ಅವರನ್ನು ಹಿಂಸಿಸುವನು. ಉತ್ತಮ ಸ್ತ್ರೀಯರನ್ನಟ್ಟಿಕೊಂಡು ಹೋಗಿ ಅವರ ಕೈಲಿ ನೀರು ಹೊರಿಸುವನು. ವರ್ತಕರನ್ನು ಹೆದರಿಸಿ ಅವರ ಅಂಗಡಿಗಳನ್ನು ಲೂಟಿ ಮಾಡುತ್ತಿದ್ದನು. ಅಷ್ಟೇ ಅಲ್ಲದೇ ವರ್ತಕರ ಅಂಗಡಿಗಳಿಂದ ಹಣವನ್ನೂ ಲೂಟಿ ಮಾಡುತ್ತಿದ್ದನು. ಮಣಿಗಾರರಿಂದ ಮಣಿಗಳನ್ನು, ಅಗಸರಿಂದ ಒಗೆದಿಟ್ಟಿದ್ದ ಬಟ್ಟೆಗಳನ್ನೂ ಕದಿಯುತ್ತಿದ್ದ. ವೇಶ್ಯೆಯರನ್ನೂ ವಿಟರನ್ನೂ ಹಿಂಸಿಸುತ್ತಿದ್ದ. ಸೂಳೆಯರನ್ನು ಬಲವಂತದಿಂದ ಹಿಡಿದು ಕ್ರೂರವಾಗಿ ಅವರೊಡನೆ ಕೂಡುತ್ತಿದ್ದನು, ವೇಶ್ಯೆಯರು ಬಯಸದ ವಿಟರೊಡನೆ ಬಲವಂತದಿಂದ ನೆರೆಯುವಂತೆ ಮಾಡಿ ತಾನು ಖುಷಿ ಪಡುತ್ತಿದ್ದನು. ಆ ಬೀದಿಯ ಸೂಳೆಯರೊಡನೆ ಈ ಬೀದಿಯ ಜನರೂ, ಈ ಬೀದಿಯ ಜನರೊಡನೆ ಆ ಬೀದಿಯ ಸೂಳೆಯರು ನಿರ್ಬಂಧದಿಂದ ಸೇರುವಂತೆ ಮಾಡುತ್ತಿದ್ದನು. ವಿಟ ಸಮೂಹಕ್ಕೆ ಅವರವರಲ್ಲೇ ಜಗಳ ಹಚ್ಚಿ ಇರಿದಾಡುವಂತೆ ಮಾಡುತ್ತಿದ್ದನು. ಇನ್ನೂ ನಾನಾ ತೆರನಾಗಿ ಜನ ಸಾಮಾನ್ಯರನ್ನು ಲಲಿತಾಂಗ ಬಿಡದೆ ಕಾಡುತ್ತಿದ್ದ.

ಲಲಿತಾಂಗ ಊರಿನವರಿಗೆ ನಾನಾ ರೀತಿಯಲ್ಲಿ ಕಾಡಿಸುತ್ತಿದ್ದರೂ ಜನಸಾಮಾನ್ಯರಲ್ಲಿ ಅವನಿಗೆ ಪಾಠ ಕಲಿಸುವ ತಾಕತ್ತಿರಲಿಲ್ಲ. ಏಕೆಂದರೆ ಲಲಿತಾಂಗ ಒಬ್ಬ ರಾಜಕುಮಾರ. ಅವನು ತಮ್ಮನ್ನೆಲ್ಲ ಅಷ್ಟು ಪೀಡಿಸುತ್ತಿದ್ದರೂ ಅವನಿಗೆ ಬುದ್ಧಿ ಕಲಿಸಲಾಗದಿದ್ದುದಕ್ಕೆ ಜನ ತಮ್ಮ ತಮ್ಮಲ್ಲಿ ಮಾತನಾಡುವದನ್ನು ನಯಸೇನ ಹೀಗೆ ಹೇಳುತ್ತಾನೆ.

ಸುತನೆಂದು ಮನ್ನಿಪಂ ಕ್ಷಿತಿ
ಪತಿ ತುಪ್ಪದ ಕೊಡನಮೇಗಣಿಲಿಯಾತಂ ಗ
ರ್ವಿತನಾದನೆಂದೊಡವನು
ದ್ಧತಿಯಿಂದೀ ಮಹಿಯೊಳಂಜದಿರ್ಪವನಾವಂ (ಪು-೪೧, ಪ-೩೮)

ಮಗನೆಂದುಕೊಂಡು ರಾಜನು ಲಲಿತಾಂಗನನ್ನು ಮನ್ನಿಸುತ್ತಿದ್ದಾನೆ. ಅದಕ್ಕಾಗಿಯೇ ಅವನು ಇಷ್ಟು ಸೊಕ್ಕೇರಿದ್ದಾನೆ. ಅವನ ಉದ್ಧಟತನದಿಂದ ಈ ದೇಶದಲ್ಲಿ ಅವನಿಗೆ ಹೆದರದವರಿದ್ದಾರೆಯೇ? ಎಂದು ಮಾತನಾಡಿಕೊಳ್ಳುತ್ತಿದ್ದರು.

ಲಲಿತಾಂಗನ ಸ್ಥಾನದಲ್ಲಿ ಯಾವನಾದರೊಬ್ಬ ಸಾಮಾನ್ಯ ಮನುಷ್ಯ ಹೀಗೆ ದೇಶಕ್ಕೆ, ದೇಶದ ಜನತೆಗೆ ಪೀಡಕನಾಗಿದ್ದರೆ ರಾಜತ್ವ ಮತ್ತು ಪೀಡಿಸಿಕೊಳ್ಳುತ್ತಿದ್ದ ಜನವರ್ಗ ಅಂಥ ಮನುಷ್ಯನನ್ನು ಸಹಿಸಿಕೊಳ್ಳುವದು ಸಾಧ್ಯವೇ ಇರಲಿಲ್ಲ. ಪ್ರಭುತ್ವದ ಕಬಂಧ ಬಾಹುಗಳು ಜನಸಾಮಾನ್ಯರನ್ನು ಅಷ್ಟು ನಿಯಂತ್ರಣದಲ್ಲಿಟ್ಟುಕೊಂಡಿರುತ್ತವೆ. ಸಾಮಾನ್ಯ ಜನರ ಚಿಕ್ಕ ಪುಟ್ಟ ತಪ್ಪುಗಳನ್ನು ಮನ್ನಿಸದ ಪ್ರಭುತ್ವ ಅವರ ತಪ್ಪುಗಳಿಗೆ ಘೋರ ಶಿಕ್ಷೆಗಳನ್ನು ವಿಧಿಸುವದರ ಮೂಲಕವೇ ಜನರಲ್ಲಿ ಪ್ರಭುತ್ವ ಮತ್ತು ಅಪರಾಧ ಎರಡರ ಕುರಿತಾಗಿ ಭಯವನ್ನುಂಟು ಮಾಡುತ್ತದೆ. ಆದರೆ ಪ್ರಭುತ್ವವೇ ತಾನಾಗಿದ್ದ ಲಲಿತಾಂಗನಿಗೆ ಯಾವ ಶಿಕ್ಷೆಯ ಭಯವೂ ಇರದ ಕಾರಣಕ್ಕಾಗಿಯೇ ಸಾಮಾನ್ಯ ಜನರಿಗೆ ಇಷ್ಟೊಂದು ಪೀಡಕನಾಗಿ ಹಿಂಸಿಸುವದು ಸಾಧ್ಯವಾಗುತ್ತದೆ.

ಜನರೆಲ್ಲ ಸೇರಿ ಒಂದು ದಿನ ದೊರೆಯ ಮಗನ ಉಪಟಳವನ್ನು ತಾಳದೇ ಅವನಿಂದ ತಮಗಾಗುತ್ತಿರುವ ಕಷ್ಟ-ನಷ್ಟಗಳ ಬಗ್ಗೆ ರಾಜನಿಗೆ ದೂರು ಹೇಳಿದರು. ರಾಜ ಮಗನಿಗೆ ಬುದ್ಧಿ ಹೇಳಿದರೂ ಲಲಿತಾಂಗ ತಿದ್ದಿಕೊಳ್ಳದಾದಾಗ ರಾಜ ತನ್ನ ಮಗನ ವಿರುದ್ಧ ಹೀಗೆ ತೀರ್ಪು ನೀಡುತ್ತಾನೆ. "ಅದು ಕಾರಣದಿಂದ ದುರ್ಜನನಾಗಿರ್ದ ನಿನ್ನನೊಳಗೊಂಡಿರ್ದೆನಗಿಹದೊಳಿರ್ಪ ಕೀರ್ತಿಯುಂ ಪರದೊಳಪ್ಪ ಸದ್ಗತಿಯುಂ ಕಿಡುಗುಮಿನ್ನೆನ್ನಾಳ್ವದೇಶದೊಳಿರದೆ ಪೋಜಿಮಟ್ಟು ಪೋಗೆಂದು" (ಪು-೪೭,ಗದ್ಯ) ಕಟ್ಟಾಜ್ಞೆಯನ್ನು ಮಾಡುತ್ತಾನೆ. ದುಷ್ಟನಾದ ನಿನ್ನನ್ನು ಸಹಿಸಿಕೊಂಡ ನನಗೆ ಇಹದಲ್ಲಿ ಕೀರ್ತಿಯೂ ಪರಲೋಕದಲ್ಲಿ ಸದ್ಗತಿಯೂ ಕೆಟ್ಟು ಹೋಗುತ್ತದೆ. ಆದ್ದರಿಂದ ನಾನು ಆಳುವ ದೇಶ ಬಿಟ್ಟು ಹೋಗೆಂದು ಆಜ್ಞೆ ಮಾಡುತ್ತಾನೆ. ರಾಣಿ ಸೌಂದರಿ ಮಹಾದೇವಿಯೂ ರಾಜನ ಆದೇಶವೇ ಸರಿ ಎಂದು ಸಮ್ಮತಿಸುತ್ತಾಳೆ.

ಕೊನೆಗೂ ರಾಜ-ರಾಣಿಯರಿಗೆ ತಮ್ಮ ಮಗನ ತಪ್ಪಿನ ಅರಿವಾಗಿ ಜನರನ್ನು ಲಲಿತಾಂಗನ ಉಪಟಳದಿಂದ ಪಾರುಮಾಡುತ್ತಾರೆ. ಪ್ರಭುತ್ವದಲ್ಲೂ ಕೆಲವೊಬ್ಬ ರಾಜರು ಪುತ್ರ ವ್ಯಾಮೋಹ ಬಿಟ್ಟು ತನ್ನ ಪ್ರಜೆಗಳ ಹಿತಚಿಂತನೆಯನ್ನು ಬಯಸುವವರೂ ಇದ್ದರು ಎಂಬುದನ್ನು ಈ ಕತೆ ಸಾಬೀತುಪಡಿಸುತ್ತದೆ.

ಲಲಿತಾಂಗ ರಾಜನ ಆಜ್ಞೆಯಂತೆ ಸ್ವದೇಶ ತೊರೆದು ನೇಪಾಳದಲ್ಲಿನ ಒಂದು ಕಳ್ಳರ ಗುಂಪಿಗೆ ಸೇರುವನು. ಆ ಕಳ್ಳರ ಗುಂಪಿನಲ್ಲಿ ಲಲಿತಾಂಗನೇ ಪ್ರಸಿದ್ಧನಾಗಿ ಅಂಜನಚೋರ ಎಂದು ಜಗತ್ತಿನಲ್ಲೆಲ್ಲ ಹೆಸರುವಾಸಿಯಾದ. ಕಳ್ಳರಿಗಿಂತಲೂ ಮಿಗಿಲಾದ ಕಳ್ಳನಾಗಿ ಕಳ್ಳರಿಗೆಲ್ಲ ಲಲಿತಾಂಗನೇ ಮುಖಂಡನಾಗುವನು. ಹೀಗೆ ರಾಜಕುಮಾರನೊಬ್ಬ ಕಳ್ಳನಾಗುವದು ವ್ಯಕ್ತಿತ್ವದ ಅಧಃಪತನವನ್ನು ಹೇಳುತ್ತದೆ. ರಾಜಕುಮಾರ ಲಲಿತಾಂಗನಿದ್ದಾಗಲೂ ಅಷ್ಟೇ, ಅಂಜನಚೋರ ಕಳ್ಳನಾದಾಗಲೂ ಅಷ್ಟೇ ಎರಡೂ ಪಾತ್ರಗಳಲ್ಲಿ ಈ ವ್ಯಕ್ತಿಯ ಮೂಲ ಧ್ಯೇಯ ಜನ ಸಾಮಾನ್ಯರನ್ನು ಪೀಡಿಸುವದೇ ಆಗಿದೆ. ಜನರನ್ನು ಕಾಡುವದರಲ್ಲೇ ಸುಖಕಾಣುವ ಈ ವ್ಯಕ್ತಿಯಲ್ಲಿ ಧರ್ಮ ನೀತಿಗಳ ಪ್ರಜ್ಞೆ ಉಂಟಾಗುವದಿಲ್ಲ. ಸಾಮಾನ್ಯ ಮನುಷ್ಯನೂ ಸಹ ಅಸಹ್ಯ ಪಟ್ಟುಕೊಳ್ಳುವ ರೀತಿಯಲ್ಲಿ ಸ್ವೇಚ್ಛೆಯನ್ನೇ ಬದುಕನ್ನಾಗಿಸಿಕೊಂಡು ಬದುಕಿದ ವ್ಯಕ್ತಿ ಈತ.

ಪ್ರಭುತ್ವದ ನಂಬಿಕೆ ಮತ್ತು ಸಾಮಾನ್ಯನ ಹಗೆ:

ರಾಜ ಜಯವರ್ಮನ ಆಸ್ಥಾನದಲ್ಲಿ ಅತಿಯಾಗಿ ವರ್ತಿಸುತ್ತಿದ್ದ ಬಲಿಯನ್ನು ಅಕಂಪನಾಚಾರ್ಯ ಮುನಿಯು ರಾಜನೆದುರಲ್ಲೇ ಅಪಮಾನಿಸುತ್ತಾ ನಿಜ ಹೇಳುತ್ತಾನೆ. ಅವನ ಮಾತನ್ನು ಕೇಳಿದ ಮಹಾರಾಜ ಬಲಿಯ ವಂಶದವರೆಲ್ಲರನ್ನು ಊರಿಂದಾಚೆ ಅಟ್ಟುತ್ತಾನೆ. ಇದರಿಂದ ಬಲಿಯು ಅಕಂಪನಾಚಾರ್ಯರ ಮೇಲೆ ವೈರ ಸಾಧಿಸಲು ಕಾಯುತ್ತಿರುತ್ತಾನೆ. ಜಯವರ್ಮನ ಆಸ್ಥಾನದಿಂದ ಹೋಗಿ ಪದ್ಮರಾಜನ ಆಸ್ಥಾನದಲ್ಲಿ ಅವನ ನಂಬಿಗಸ್ಥ ಆಳಾಗಿ ಸೇರಿಕೊಳ್ಳುತ್ತಾನೆ. ಪದ್ಮರಾಜನ ಸೈನ್ಯ ಸಿಂಹಕೀರ್ತಿ ರಾಜನ ಕೈಯಿಂದ ಸೋಲನ್ನನುಭವಿಸಿ ರಾಜನ ಹತ್ತಿರ ಮರಳುತ್ತದೆ. ಅದೇ ವೇಳೆಯನ್ನು ಗಮನಿಸಿದ ಬಲಿ ತಾನು ಪದ್ಮರಾಜನ ವಿಶ್ವಾಸಗಳಿಸಿಕೊಳ್ಳಬೇಕೆಂದು ಹೊಂಚು ಹಾಕಿ ಸಿಂಹಕೀರ್ತಿರಾಜನನ್ನು ಗೆದ್ದು ತರುವೆನೆಂದು ಪದ್ಮರಾಜನಲ್ಲಿ ಅಪ್ಪಣೆ ಪಡೆದು ಹೊರಟು ಯುದ್ಧದಲ್ಲಿ ಗೆದ್ದು ಬರುತ್ತಾನೆ. ಸಂತೋಷಗೊಂಡ ರಾಜ ಬಲಿಗೆ ಮಹಾಮಂತ್ರಿ ಪದವಿಕೊಟ್ಟು 'ಏನು ಬೇಕೋ ಬೇಡಿಕೋ' ಎನ್ನಲು ಬಲಿ 'ಬೇಕಾದಾಗ ಬೇಡಿಕೊಳ್ಳುತ್ತೇನೆ ಹಾಗೆ ಇರಲಿ' ಎನ್ನುವನು.

ಹಾಗೆ ಅಂದ ಸ್ವಲ್ಪ ದಿನಗಳ ನಂತರದಲ್ಲಿ "ದೇವ, ನಿನ್ನ ರಾಜ್ಯಮಂ ಪದಿನೈದು ದಿವಸಂಬರಮೀವುದೆಂದು ಬೇಡುವುದುಂ ಪದ್ಮನವನ ಬೇಡಿದನಾಚಾರಕ್ಕಂ ತಾಂ ಬೇಡಿಕೊಳ್ಳೆಂದದಕ್ಕಂ ವಿಸ್ಮಯಂ ಬಟ್ಟು ದೇವರ್ಗಂ ಕ್ಷತ್ರಿಯವರ್ಗಂ ಪುನರ್ವಚನಮಂ ನುಡಿಯಲಾಗದೆಂಬ ನೀತಿಯಂ ಭಾವಿಸಿ ಬಲಿಯ ಮನದ ಕಪಟಮನೇನೆಂದಱಿಯದೆ ನೀನೇನಂ ಮಾಡಿದೊಡಮುಕ್ಕುಮದನೆನಗೆ ಪೇಳಲ್ವೇಡ ಆನೆನ್ನ ಮುನ್ನಿನ ನುಡಿದ ಕಾರಣಮಾಗೆ ಪದಿನೈದುದಿವಸದ ರಾಜ್ಯಮಂ ಕೊಟ್ಟೆನೆಂದು ಕೊಟ್ಟು ತನ್ನಂತಃಪ್ರರಂಧ್ರಿಯರೊಳ್ ಕೂಡಿರ್ದನನ್ನಗಮಿತ್ತಲ್"(ಪುಟ-೩೨೦, ಗದ್ಯ).

ರಾಜನ ನಂಬಿಕೆಗಳಿಸಿ ಅವನ ಅರಿವಿಗೆ ಬಾರದಂತೆ ತನ್ನ ಸ್ವಾರ್ಥ ಸಾಧಿಸಿಕೊಳ್ಳಲು ಹದಿನೈದು ದಿನಗಳ ಮಟ್ಟಿಗೆ ರಾಜನ ಅಧಿಕಾರವನ್ನು ಇಸಿದುಕೊಂಡ. ಸಾಮಾನ್ಯನೊಬ್ಬ ಅಂದುಕೊಂಡುದುದನ್ನು ಸಾಧಿಸಲು ಎಂಥ ಪರಿಸ್ಥಿತಿಯನ್ನು ಎದುರಿಸಲೂ ತಯಾರಾಗುತ್ತಾನೆ. ಪದ್ಮರಾಜನಿಗೆ ಬಲಿ ಕೇಳಿದ ಬೇಡಿಕೆಯ ಬಗ್ಗೆ ಆಶ್ಚರ್ಯವಾಗುವದಾದರೂ ಕ್ಷತ್ರಿಯನಾದ ತಾನು ಕೊಟ್ಟ ಮಾತಿಗೆ ತಪ್ಪಬಾರದೆಂಬ ನೀತಿಗನು ಗುಣವಾಗಿ ಬಲಿಗೆ ಹದಿನೈದು ದಿನಗಳವರೆಗೆ ರಾಜ್ಯವನ್ನು ಒಪ್ಪಿಸುತ್ತಾನೆ. ಅಲ್ಲದೆ ಪದ್ಮರಾಜನಿಗೆ ಬಲಿಯ ಕಪಟದ ಅರಿವೂ ಇರುವುದಿಲ್ಲ. ಅಧಿಕಾರ ಕೈಗೆ ಬಂದನಂತರ ಅವನ ನಿಜ ಬಣ್ಣ ಹೊರಬರಲಾರಂಭಿಸುತ್ತದೆ.

ಅಂದೆನ್ನಂ ಜಯವರ್ಮನ
ಮುಂದೆ ಮಹಾಭಂಗಮಾಗೆ ಸೋಲಿಸಿದವನಂ
ಕುಂದದೆ ಕೇಳ್ ನಾನಾ ವಿಧ
ದಿಂದಂ ಚಿತ್ತಕ್ಕೆ ಬಂದ ಕೊಲೆಯಿಂ ಕೊಲ್ವೆಂ (ಪು-೩೨೦, ಪ-೧೧೧)

– ಎಂದು ಮನಸ್ಸಿನಲ್ಲಿ ಬಲಿ ಆಲೋಚಿಸಿಕೊಂಡು. ರಾಜನಾದರೋ ಜೈನ ಧರ್ಮದಲ್ಲಿ ಅತ್ಯಂತ ನಂಬಿಗೆಯುಳ್ಳ ವ್ಯಕ್ತಿ. ತಾನು ಅಂದುಕೊಂಡ ಋಷಿವಧೆಯ ವಿಚಾರ ತಿಳಿದರೆ ರಾಜ ತನ್ನನ್ನು ಕೊಲ್ಲದೇ ಬಿಡನು. ಆದ್ದರಿಂದ ರಾಜನಿಗೆ ಈ ವಿಷಯ ತಿಳಿಯದಂತೆ ತನ್ನ ಕಾರ್ಯ ಸಾಧಿಸಿಕೊಳ್ಳಬೇಕೆಂದು ಸಿದ್ಧತೆ ಮಾಡಿಕೊಳ್ಳುವನು.

"ಅದಱಿಂದೆನ್ನ ದ್ರೋಹಮರಸನ ಕಿವಿಯಂ ಮುಟ್ಟದಂತಾಗೆ ಮಾಟ್ಪೆನೆಂದುಪಾಯದಿಂ ಜೋಗಂ ಕೈಕೊಂಡು ಋಷಿಯರ್ ಪೋಗರೆಂಬುದನಱಿವನಪ್ಪುದಱಿಂದೆನ್ನಯಜ್ಞಂ ತೀರ್ವನ್ನಗಂ ಋಷಿಯರೀಪೊಟಲೊಳಿರವೇಡಿಮೆಂದು ಘೋಸಣೆ ನೆಗಟ್ವದು"(ಪು-೩೨೧,ಗದ್ಯ). ಅದೇ ಊರಲ್ಲಿದ್ದರೆ ರಾಜನಿಗೆ ತನ್ನ ದ್ರೋಹ ಗೊತ್ತಾಗುವದೆಂದು ಯಜ್ಞದ ನೆಪ ಮಾಡಿಕೊಂಡು ಯಜ್ಞಮುಗಿಯುವವರೆಗೆ ಋಷಿಗಳಾರೂ ಊರಲ್ಲಿರಬಾರದೆಂದು ಆಜ್ಞೆ ಹೊರಡಿಸುತ್ತಾನೆ. ಆ ಋಷಿಯರೆಲ್ಲ ಒಪ್ಪಿಕೊಂಡು 'ಅಸಿತಗಿರಿ' ಎಂಬ ಬೆಟ್ಟಕ್ಕೆ ಹೋಗುತ್ತಾರೆ.

ಅಕಂಪನಾಚಾರ್ಯರು ಐನೂರು ಜನ ಋಷಿಗಳೊಂದಿಗೆ ಅಸಿತಗಿರಿಗೆ ಹೋದ ಮೇಲೆ ಬಲಿಯೂ ತನ್ನ ಯೋಜನೆಯಂತೆ ಅಸಿತಗಿರಿಗೆ ಹೋಗುತ್ತಾನೆ. ಆ ಅಸಿತಗಿರಿಯ ಆಸುಪಾಸದಲ್ಲೇ ಯಜ್ಞಕ್ಕಾಗಿ ಚಪ್ಪರ ಹಾಕಿಸುತ್ತಾನೆ. ಆ ಋಷಿಗಳು ತಂಗಿದ್ದ ಗುಹೆಯದ್ವಾರದ ಬಳಿ ಹೋಗಿ 'ಸಿಕ್ಕಿದರು' ಎಂದುಕೊಂಡು ಈ ಗುಹೆಯಲ್ಲಿನ ಕ್ರೂರ ಪ್ರಾಣಿಗಳು ದಾರಿಹೋಕರಿಗೆ ತೊಂದರೆಯನ್ನುಂಟುಮಾಡುವವು. ಆದ್ದರಿಂದ ಗುಹೆಯ ಬಾಗಿಲಲ್ಲಿ ದೊಡ್ಡ ಪುಳ್ಳೆಗಳನ್ನು ಹಾಕಿ ಬೆಂಕಿ ಹಚ್ಚಿ ಎಂದು ಆದೇಶಿಸಿದನು.

ಕಟ್ಟಾರಿದ ಪುಳ್ಳಿಗಳಂ
ನೆಟ್ಟನೆ ಕೊದಲಿಗಳನೆಯ್ದೆ ಕಾಟ್ಬೆರಣೆಗಳಂ
ತೊಟ್ಟನೆ ಪಱಿಸೀರೆಗಳಂ
ಬೆಟ್ಟಾಗಿರೆ ಗುಹೆಯ ಬಾಗಿಲೊಳ್ ತೀವಿಸಿದಂ (ಪು-೩೨೪, ಪ-೧೧೬)

"ಅಂತು ತೀವಿಸಿ ಗುಹೆಯ ಬಾಗಿಲು ನಿಶ್ಛಿದ್ರಮಾಗೆ ಮಾಡಿ ತುಪ್ಪದೆಣ್ಣೆಯ ಕೊಡಂಗಳಂ ತರಿಸಿನಾನಾ ವಿಧದಿಂದೆನ್ನ ಮುನಿಸುಪೊಪಿನಂ ಮನಮಾಡೆ ನಾಳೆ ಕಿಚ್ಚಂ ತಗುಳ್ಚಿ ಪೋಗದಂತು ಕೊಲ್ವೆನೆಂದಿರ್ಪನ್" (ಪು-೩೨೪, ಗದ್ಯ).

ಹೀಗೆ ಬಲಿ ತನ್ನ ಹಗೆ ಸಾಧಿಸಲು ಬೇಕಾದ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾನೆ. ಒಣಗಿದ ಪುಳ್ಳೆ, ಬೆರಣಿ, ಎಳ್ಳಿನ ಸಿಪ್ಪೆ, ಹರಿದ ಸೀರೆ ಎಲ್ಲವನ್ನೂ ಗುಹೆಯ ಬಾಗಿಲಿಗೆ ಒಂದು ರಂಧ್ರವೂ ಇಲ್ಲದಂತೆ ತುರುಕಿಸಿದನು. ನಂತರ ಆ ಬಾಗಿಲಿಗೆ ತುಪ್ಪದ, ಎಣ್ಣೆಯ ಕೊಡಗಳನ್ನು ಸುರುವಿ ಬೆಂಕಿಹಾಕಿ ಹೊರಗೆ ಹೋಗದಂತೆ ಅಕಂಪನಾಚಾರ್ಯರೂ ಜೊತೆಗೆ ಐನೂರು ಜನ ಋಷಿಗಳನ್ನೂ ಸುಟ್ಟು ಹಾಕಿದನು.

ಇದೆಲ್ಲವನ್ನೂ ಬಲಿಯಂಥ ಸಾಮಾನ್ಯನು ಮಾಡಲು ಸಾಧ್ಯವಾದದ್ದು ಪ್ರಭುತ್ವದ ಅಧಿಕಾರವನ್ನು ತನ್ನ ಕೈಯಲ್ಲಿ ತೆಗೆದುಕೊಂಡದ್ದರಿಂದ. ಪ್ರಭುತ್ವದ ಸಹಾಯವಿಲ್ಲದೇ ಒಂದು ಧರ್ಮದ ಐನೂರರಷ್ಟು ಋಷಿಗಳನ್ನು ಹೀಗೆ ಕೊಲ್ಲಲು ಸಾಧ್ಯವೇ ಇಲ್ಲ. ಇದರ ಅರಿವು ಬಲಿಗಿರುವ ಕಾರಣಕ್ಕಾಗಿಯೇ ಅವನು ಪದ್ಮರಾಜನನ್ನು ನಂಬಿಸಿ ಅವನ ಕೈಯಿಂದ ಹದಿನೈದು ದಿನಗಳ ಕಾಲ ರಾಜ್ಯಾಧಿಕಾರ ಪಡೆದು ತನ್ನ ಹಗೆಯನ್ನು ಸಾಧಿಸಿಕೊಳ್ಳುವನು. ಹೀಗೆ ತಾನು ಅಂದುಕೊಂಡ ಕೆಲಸವನ್ನು ಸಾಧಿಸಿಕೊಳ್ಳುವದು ಸಾಮಾನ್ಯನ ಶಕ್ತಿಯೂ ಹೌದು ದೌರ್ಬಲ್ಯವೂ ಹೌದು.

ರಾಜ ಮತ್ತು ರಾಜನ ಸತ್ವ ಪರೀಕ್ಷೆ:

ರಾಜನಾದ ವ್ಯಕ್ತಿ ಯಾವಾಗಲೂ ತನಗೇ ಎಲ್ಲರೂ ನಿಷ್ಠರಾಗಿರಬೇಕೆಂದು ಬಯಸುವನು. ಆದರೆ ಇಂದ್ರ ಹೇಳುವಂತೆ ಭೂಲೋಕದಲೆಲ್ಲ ಪ್ರಸಿದ್ಧನಾದ ಒದ್ದಾಯನ ಮಹಾರಾಜನ ಸತ್ವಪರೀಕ್ಷೆ ನಡೆಸಲು

ಸ್ವತಃ ದೇವರೇ ಮಾರುವೇಷದ ಋಷಿಯ ರೂಪದಲ್ಲಿ ಭೂಲೋಕಕ್ಕೆ ಇಳಿಯುತ್ತಾನೆ. ಆ ಕಪಟ ಋಷಿಯ ರೂಪವನ್ನು ನಯಸೇನ ಹೀಗೆ ಹೇಳುತ್ತಾನೆ.

ಬಡವಾಗಿರ್ದೊಡಲೇಟ್ಗಿಗೆಟ್ಟ ನಡು ನೀರ್ ಭೋರೆಂದು ಪಾಯ್ವಕ್ಷಿ ನೋ
ಟ್ಪಿಡೆ ಕೀವಿಂ ಕೊಟೆಯಿಂ ಮಹಾರಸಿಗೆಯಿಂ ಪೊಂಗಿರ್ದ ಪುಣ್ಗುಂಟುಂಗಾ
ಲೊಡೆದೋರಂತಿರೆ ಸೋರ್ವ ರಕ್ತಮಧಿಕಂ ಕಂದಿರ್ದ ಮೆಯ್ತೊನ್ನಿನಿಂ
ದುಡುಗಿರ್ದಂಘ್ರಿಕರದ್ವಯಾಂಗುಲಿಚಯಂ ಕುಂದಿರ್ದಹೀನಸ್ವರಂ

(ಪು-೧೧೫, ಪ-೪೭)

॥ಗದ್ಯ॥ ಮತ್ತಮೊಱತೆಯಂತೆ ಮೆಯ್ಸಿಂದೊಱೆವ ರಸಿಗೆಯುಂ ದುರ್ಜನನ
ನುಡಿಯಂತೆ ಕೊಂಕಿ ಪರಿದ ಜಡೆಗಳುಂ ಕುಟಿಲನ ಚಿತ್ತದಂತೆ ಬಹು
ಪ್ರಕಾರಮಾದ ಮೆಯ್ಯಬಣ್ಣಮುಂ ಒಂಟೆಯ ಕೊರಲಂತೆ ನೀಳ್ದಕೊರಲುಂ
ನೀತಿವಿದನಲ್ಲದರಸಿನ ನಾಡಂತೆ ಅಸಿಯವಾದ ಕಾಲ್ಗಳುಂ ಊದುವ
ತಿದಿಯಂತೆಪೊಂಗಿರ್ದ ಪುಣ್ಗಳುಂ ಮುಖರೋಗದವರಂತೆ ಬಿಡದೆ
ಸುರಿವ ಶ್ಲೇಷ್ಮಮುಂ ಅಟಿಗಣ್ಣವರಂತೆ ಕೊಟೆಗಣ್ಗಳುಂ
ಮಾಗಿಯ ದೇಸಿಗನಂತೆ ಬೂದಿವೆರಸಿರ್ದೊಡಲುಂ ಎಱೆಯ ಕೆಱೆ
ಯಂತೆ ಬತ್ತಿರ್ದಗಲ್ಲಮುಂ ಆನೆ ಮೆಟ್ಟಿದ ಸಂಬಳಿಗೆಯಂತೆ
ಬತ್ತಿದ ಮೂಗುಂ ಪೊಲಿಯಪಣ್ಣಂತೆ ಪೊಱವಾಯ್ವ ಕೀವುಂ ಮುದುಕ
ರಂತೆ ಲೋಳೆ ಸುರಿವ ಬಾಯುಂ ಕೀವುಗಿವಿಯರಂತೆ ಕೀವು ಸುರಿವ
ಕಿವಿಯುಂ ಬೇತಾಳನಂತೊಳಸಾರ್ದಬಸಿಱುಂ ಪಡಿಕೆಯಂತೆ
ನಾಱುತಿರ್ಪ ಪೆರ್ಬುಣ್ಗಳುಂ ಕೆಮ್ಮುಳ್ಳವರಂತೆ ಮೇಲೆತ್ತುವ ಶ್ವಾಸಮುಂ
ಗುಡಿಸಿಲಂತೆ ಬಾಗಿದ ಬೆನ್ನುಂ ಪುಟ್ಟಿನಂತೆ ಬೆರಲ್ಗಳಿಲ್ಲದ ತಳಮುಂ
ಅದ್ಭುತಮಾಗೆ ಮೂಱುಲೋಕದ ಭೀಭತ್ಸ ಮನೆಲ್ಲಮನೊಂದು ಮಾಡಿ
ವಿಧಾತ್ರಂ ರೂಪುಮಾಡಿದನೆಂಬಂತೆ ಹೀನರೂಪಂ ಕೈಕೊಂಡು

(ಪು-೧೧೫, ಗದ್ಯ)

ಹೀಗೆ ಮೂರು ಲೋಕಗಳ ಅಸಹ್ಯವನ್ನೆಲ್ಲ ಒಂದುಗೂಡಿಸಿ ಬ್ರಹ್ಮ ಒಂದು ರೂಪು ಮಾಡಿದ್ದಾನೆ ಎನ್ನುವಂತೆ ಲೋಕದ ಜನರೆಲ್ಲ ಅಸಹ್ಯ ಪಟ್ಟುಕೊಳ್ಳುವಂತೆ ವಾಸವದೇವ ಒದ್ದಾಯನ ಮಹಾರಾಜನನ್ನು ಪರೀಕ್ಷಿಸಲು ಇಂಥ ರೂಪಧರಿಸಿದನು. ಇಂಥ ರೂಪಧರಿಸಿ ಪಟ್ಟಣದಲ್ಲಿ ಭಿಕ್ಷೆಗೆ ಬರಲು ನೋಡಿದವರೆಲ್ಲ ಹೇಸಿಗೆಪಟ್ಟುಕೊಂಡರು. ಅವನ ಅಸಹ್ಯದ ರೂಪು, ಅವನ ಮೈಯಿಂದ ಹೊರಡುವ ದುರ್ಗಂಧ ಎಲ್ಲವನ್ನೂ ನೋಡಿದ ನಾನಾ ತೆರನಾದ ಜನ ನಾನಾ ತೆರನಾಗಿ ಮಾತನಾಡುತ್ತಾರೆ. ಯಾರೂ ಈ

ಋಷಿಯನ್ನು ಭಿಕ್ಷೆಗೆ ನಿಲ್ಲಿಸಿಕೊಳ್ಳುವ ಮನಸ್ಸು ಮಾಡುವದಿಲ್ಲ; ಬದಲಾಗಿ ಅವನನ್ನು ನೋಡಿ ಅಸಹ್ಯ ಪಟ್ಟುಕೊಳ್ಳುತ್ತಾರೆ. ಹೀಗೆ ಪಟ್ಟಣದ ಯಾರೂ ಇವನನ್ನು ಭಿಕ್ಷೆಗೆ ನಿಲ್ಲಿಸಿಕೊಳ್ಳದ ಸಂದರ್ಭದಲ್ಲಿ ಆ ಕಪಟ ಮುನಿ ನಿಧಾನವಾಗಿ ಅರಮನೆಯ ಕಡೆಗೆ ಹೊರಡುತ್ತಾನೆ. ಇಂತಹ ಕಪಟ ಋಷಿ ತನ್ನ ಆಸ್ಥಾನಕ್ಕೆ ಬರುತ್ತಿರುವುದು ಒಡ್ಡಾಯನ ಮಹಾರಾಜನಿಗೆ ಮೋಕ್ಷಲಕ್ಷ್ಮಿ ಅಟ್ಟಿದ ದೂತನ ಹಾಗೆ ಕಾಣುತ್ತದೆ. ರಾಜನ ಮನಸ್ಸಿಗೆ ಸಂತೋಷವಾಗಿ ಭಕ್ತಿಯಿಂದ ಎರಡೂ ಕೈಗಳಿಂದ ನಮಸ್ಕರಿಸಿ ಮುನಿಯನ್ನು ಎದುರುಗೊಂಡು ಕಾಲು ಮುಟ್ಟಿ ನಮಸ್ಕರಿಸಿ ರೇಷ್ಮೆ ಹೊದಿಕೆಯುಳ್ಳ ಉನ್ನತಾಸನದಲ್ಲಿ ಕುಳ್ಳಿರಿಸಿದನು.

ಮುನಿಯ ದೇಹದ ದುರ್ನಾತಕ್ಕೆ ಅಲ್ಲಿದ್ದವರೆಲ್ಲ ಅಸಹ್ಯಪಟ್ಟುಕೊಂಡು ಕೆಲವರು ಅಲ್ಲಿಂದ ಕಾಲ್ಕಿತ್ತರೆ, ಇನ್ನೊಂದಿಷ್ಟು ಜನ ರಾಜನ ಹೆದರಿಕೆಗೆ ಅಲ್ಲೇ ನಿಂತಿದ್ದರು. ಸೇವಕರು, ಸೇವಕಿಯರು, ಅಡಿಗೆಯವರು, ಖಡ್ಗಧಾರಿಗಳು, ಪೀಕದಾನಿಯವರು, ಚಾಮರದವರಂತಹ ಸಾಮಾನ್ಯರೆಲ್ಲ ಮುನಿಯ ದುರ್ಗಂಧಕ್ಕೆ ಹೇಸಿಕೊಂಡು ದೂರವೇ ನಿಂತರು. ಆದರೆ ರಾಣಿ ಪ್ರಭಾವತಿ ಮಹಾದೇವಿ ಮುನಿಯನ್ನು ಕಂಡು ಅಸಹ್ಯ ಪಟ್ಟುಕೊಳ್ಳದೆ ನಿಧಿಯನ್ನು ಕಂಡ ಬಡವನಂತೆ ಸಂತೋಷಪಟ್ಟಳು. ರಾಜ ಮುನಿಗೆ ಊಟ ಮಾಡಿಸುವನು, ಮುನಿ ಕಂಠಪೂರ್ತಿ ಊಟ ಮಾಡಿದ ನಂತರ

ಮಱುಗೆ ಶರೀರಂ ಕಣ್ಗಳ್
ಪೊಱಮಡೆ ಮೇಲ್ವಾಸಮೆತ್ತೆ ಸೆಡೆದಳ್ಕಿ ಬಲಂ
ಪಱಿವಡೆ ಜೊಮ್ಮನೆ ಜೋಲ್ದುಂ
ತೆಱಪಂ ಪಾರ್ದಿರದೆ ತಡೆಯದೊರ್ಮೆಯೆ ಮುನಿಪಂ(ಪು-೧೨೫,ಪ-೯೯)

ಕರಮಲ್ಲದೆ ದುರ್ಗಂಧಂ
ಪಿರಿದಾಗೆ ನಗಾಗ್ರದಿಂದ ಧಾರಾಜಲಮು
ರ್ವರೆಗಿಟಿವಂತೋವೆಂದೋ
ಕರಿಸಿ ನರೇಶ್ವರನ ಮೇಲೆ ಕಾಱಿದನಾಗಳ್ (ಪುಟ-೧೨೬ ಪದ್ಯ-೧೦೦)

ಮುನಿ ಮಾಡಿಕೊಂಡ ವಾಂತಿ ರಾಜನ ಮೈಯನ್ನು ಮುಚ್ಚಿಬಿಟ್ಟಿತು. ಕೊಳೆ ತೊಳೆ ಎಲ್ಲವೂ ವಜ್ರಲೇಪದಂತೆ ಅರಸನ ಮೈಗೆಲ್ಲ ಮೆತ್ತಿಕೊಂಡಿತು. ರಾಜ ಅದಕ್ಕೆ ಅಸಹ್ಯ ಪಟ್ಟುಕೊಳ್ಳದೆ ಋಷಿ ಮುನಿಗೆ ವಾಂತಿಯಾದುದಕ್ಕೆ ತಾನು ಬಡಿಸಿದ ಊಟವೇ ಕಾರಣವಾಯಿತೆಂದು ನೊಂದುಕೊಳ್ಳುವನು. ತಡವರಿಸಿ ಬೀಳುತ್ತಿದ್ದ ಮುನಿಯನ್ನು ಬೀಳಲು ಬಿಡದೆ ತಬ್ಬಿಕೊಂಡು ಅವನ ಮೈಮೇಲೆ ಬಿದ್ದಿದ್ದ ಲೋಳೆಯನ್ನೆಲ್ಲ ತೊಳೆದು ಒರೆಸುತ್ತಾನೆ. ಒಡ್ಡಾಯನ ಮಹಾರಾಜ ಮತ್ತು ರಾಣಿ ಪ್ರಭಾವತಿ ಮಹಾದೇವಿಯೂ ಸೇರಿ ಋಷಿ ಮುನಿಯ ದೇಹವನ್ನು ಬಿಸಿನೀರಿನಿಂದ ತೊಳೆಯುತ್ತಾರೆ. ಮೆತ್ತನೆಯ ಬಟ್ಟೆಯಿಂದ ಮುನಿಯ ಮೈ ಒರೆಸಿ ಅವನನ್ನು ತಂದು ಒಂದು ದೊಡ್ಡ ಮಣೆಯ ಮೇಲೆ ಕುಳ್ಳಿರಿಸಿ ತನ್ನಿಂದ ಮುನಿಗೆ ಕಷ್ಟವಾಯಿತೆಂದು ರಾಜ ಮುನಿಯ ಕ್ಷಮೆಯಾಚಿಸುತ್ತಾನೆ.

ಇದು ರಾಜನ ವಿನಯವಂತಿಕೆ, ಮುನಿನಿಷ್ಠೆ. ಪ್ರಭುತ್ವ ಅಥವಾ ರಾಜ ಎಂದರೆ ನಮ್ಮ ಕಣ್ಮುಂದೆ ಬರುವದು ಅಧಿಕಾರದ ದರ್ಪ. ಆದರೆ ಅತ್ಯಂತ ಸಾಮಾನ್ಯರೂ ಸಹ ನೋಡಿ ಹೇಸಿಗೆ ಪಟ್ಟು ಭಿಕ್ಷೆಗೆ

ನಿಲ್ಲಿಸಲು ಮನಸ್ಸೂ ಸಹ ಮಾಡದ ಮುನಿಯನ್ನು ರಾಜ ಅತ್ಯಂತ ಭಕ್ತಿ ಗೌರವಗಳಿಂದ ಉಪಚರಿಸುವದು ರಾಜನ ಹಿರಿಮೆಯನ್ನು ತೋರುತ್ತದೆ. ಅರಮನೆಯ ಸೇವಕವರ್ಗ ಮುನಿಯನ್ನು ನೋಡಿ ಎಷ್ಟೇ ಹೇಸಿಕೊಂಡಿದ್ದರೂ ಒದ್ದಾಯನ ಮಹಾರಾಜ ತನ್ನ ಅಧಿಕಾರ ದರ್ಪದಿಂದ ಮುನಿಯ ಸೇವೆಯ ಜವಾಬ್ದಾರಿಯನ್ನು ಅವರಿಗೇ ಆಜ್ಞೆ ಮಾಡಬಹುದಾಗಿತ್ತು. ಆದರೆ ರಾಜನಲ್ಲಿಯ ಮುನಿ ನಿಷ್ಠೆ ಮತ್ತು ವಿನಯದ ಕಾರಣವಾಗಿ ರಾಜ ಹಾಗೆ ಮಾಡದೆ ಸ್ವತಃ ತಾನು ಮತ್ತು ರಾಣಿ ಪ್ರಭಾವತಿಯರೇ ಯಾವ ಮುಜುಗರ, ಅಸಹ್ಯ, ಅಹಂಕಾರಗಳ ಲವಲೇಶವೂ ಇಲ್ಲದೇ ಭಕ್ತಿಯಿಂದ ಮುನಿಗಳ ಸೇವೆ ಮಾಡುತ್ತಾರೆ. ರಾಜನೊಬ್ಬ ಅಷ್ಟು ಎತ್ತರದ ವ್ಯಕ್ತಿಯಾಗಿದ್ದೂ ಸಾಮಾನ್ಯನಂತೆ ನಡೆದುಕೊಳ್ಳುವದು ಒದ್ದಾಯನ ರಾಜನ ವ್ಯಕ್ತಿತ್ವದ ವಿಶಿಷ್ಟತೆ.

ಯುವರಾಜ ಮತ್ತು ಕಳ್ಳತನಕ್ಕೆ ಪ್ರಚೋದನೆ:

ಮಗಧ ದೇಶದ ರಾಜ ವೀರಧ್ವಜ, ರಾಣಿ ಸುಸೀಮೆ. ಇವರ ಮಗ ರಾಜಕುಮಾರ ವೀರಕುಮಾರ. ಅವನು ದುರ್ಜನಪ್ರಿಯನಾಗಿ ವಿಟಜನರ, ಕಳ್ಳರ ಗೆಳೆತನ ಬೆಳೆಸಿ ಕೆಟ್ಟ ಕೆಲಸಗಳಲ್ಲಿ ಕಾರ್ಯಮಗ್ನನಾಗಿದ್ದನು. ನಗರದ ಹೊರವಲಯದಲ್ಲಿ ಕಳ್ಳರೊಂದಿಗೆ ಕುಳಿತು ಕಳ್ಳತನದ ಮಾತುಗಳಲ್ಲಿ ತೊಡಗುತ್ತಿದ್ದನು. ಹಾಗೆಯೇ ಒಂದು ದಿನ ಚೋರ ಪ್ರಧಾನನೆಂಬ ಕಳ್ಳ ಯುವರಾಜ ವೀರಕುಮಾರನಿಗೆ ಒಂದು ವಿಷಯ ಹೇಳುತ್ತಾನೆ.

ಕಾಮಲಿಪ್ತಿಪುರದ ಜಿನೇಂದ್ರ ಭಕ್ತನೆಂಬ ವರ್ತಕನ ದೇಹಾರದ ದೇವರ ಮುಕ್ಕೊಡೆಯಲ್ಲಿ ಒಂದು ವೈಡೂರ್ಯ ಮಾಣಿಕ್ಯವನ್ನು ಜೋಡಿಸಿದ್ದಾರೆ. ಮೂರು ಲೋಕದಲ್ಲೂ ಬೆಲೆಕಟ್ಟಲಾಗದಷ್ಟು ಅನರ್ಘ್ಯವಾದ ರತ್ನ ಅದಾಗಿದೆ. ಈ ಲೋಕಕ್ಕೆ ಅಪರೂಪವಾದದ್ದು ಎಂದು ಚೋರಪ್ರಧಾನ ಹೇಳಿದ್ದನ್ನು ಕೇಳಿ ವೀರಕುಮಾರನಿಗೆ ಆ ರತ್ನದ ಕುರಿತು ಆಸೆ ಹುಟ್ಟುತ್ತದೆ. ಅದಕ್ಕೆ ಅಲ್ಲಿ ಸೇರಿದ್ದ ಕಳ್ಳರೆಲ್ಲರನ್ನುದ್ದೇಶಿಸಿ ಹೀಗೆ ಹೇಳುತ್ತಾನೆ.

ಆದಾವುಪಾಯದಿಂದೆನ
ಗಾವಸ್ತುವನದಟನಾಗಿ ಪೋಗುತ್ತುಂ ತಂ
ದೀವವನುಳ್ಳೊಡೆ ಕುಡುವೆಂ
ಭಾವಿಸದೆನ್ನರ್ಧ ರಾಜ್ಯಮಂ ನಿಶ್ಚಯದಿಂ (ಪು-೧೮೨, ಪ-೧೧)

-ಎಂದು ಘೋಷಿಸುತ್ತಾನೆ. ಅದನ್ನು ಕೇಳಿದ ಅಲ್ಲೇ ಇದ್ದ ಸೂರ್ಪನೆಂಬ ಕಳ್ಳ ವೀರಕುಮಾರನಿಗೆ ಅಭಿಮುಖನಾಗಿ "ದೇವಾ ನಾನಾ ವಸ್ತುವಂ ತಂದೆಪೆನ್" ಎಂದನು. ಅದಕ್ಕೆ ಆ ಕಳ್ಳನಿಗೆ ಮೆಚ್ಚಿ ರಾಜಕುಮಾರ ವೀರಕುಮಾರನು ಅವನಿಗೆ ಕರ್ಪೂರ ವೀಳಯವನ್ನು ಕೊಟ್ಟು ಕಳುಹಿಸುತ್ತಾನೆ. ಆ ನಂತರದಲ್ಲಿ ಸೂರ್ಪನು ಪರಮ ಜಿನೇಂದ್ರ ಭಕ್ತನಾದ ಅವನ ಮನೆಯಲ್ಲಿ ಅಷ್ಟು ಕಾವಲಿನ ಮಧ್ಯ ಹೋಗಿ ಕದಿಯುವದು ಸರಳ ಸಾಧ್ಯವಲ್ಲ ಎಂದುಕೊಳ್ಳುತ್ತಾನೆ. ಅದಕ್ಕೆ ಋಷಿಯ ವೇಷ ಧರಿಸಿ ಕಪಟತನದಿಂದ ಅವನ ಮನೆ ಪ್ರವೇಶಿಸಿ ಕೆಲಸ ಸಾಧಿಸಿಕೊಳ್ಳಬೇಕೆಂದು ನಿರ್ಧರಿಸುತ್ತಾನೆ. ಅದಕ್ಕೆ ಜಿನ ಋಷಿಯ ರೀತಿಯನ್ನು ಕಲಿಯಲು ಪೂರ್ವದೇಶದ ಒಂದು ಪಟ್ಟಣದ ಹೊರಗಿನ ಬಸದಿಗೆ ಹೋಗಿ ಜಿನ ಋಷಿಗಳಿಗೆ ತಾನು ಬದುಕಿನಲ್ಲಿ ಜಿಗುಪ್ಸೆ ಹೊಂದಿದವನೆಂದು ನಟಿಸಿ ಅವರನ್ನು ನಂಬಿಸಿ ಪ್ರವೇಶ ಪಡೆದನು. ಕೆಲವು ದಿನ ಅಲ್ಲಿಯೇ ಇದ್ದು, ಋಷಿಗಳು ನಡೆಯುವ, ನುಡಿಯುವ, ಊಟಮಾಡುವ, ವಂದಿಸುವ, ಮಲಗಿರುವ, ಕುಳಿತುಕೊಳ್ಳುವ, ನಿಂತಿರುವ ಕೆಲಸಗಳನ್ನು ಮಾಡುವ ರೀತಿನೀತಿ ಹಾವ

ಭಾವಗಳನ್ನೆಲ್ಲ ಅಭ್ಯಾಸ ಮಾಡಿದನು. ಜೈನ ಋಷಿಗಳಂತೆ ಚಿಮುಟದಿಂದ ತಲೆಯ ಕೂದಲುಗಳನ್ನು ಕಿತ್ತುಕೊಳ್ಳುವದಕ್ಕೆ ಹೆದರಿ ಅಲ್ಲಿಂದ ಓಡಿ ಹೋಗಿ ತಲೆಬೋಳಿಸಿಕೊಂಡು ಬ್ರಹ್ಮಚಾರಿಯ ವೇಷವನ್ನು ಧರಿಸಿದನು. ಋಷಿಗಳಂತೆ ಮೈಮೇಲೆ ಕೊಳೆಯನ್ನು ಧರಿಸಿ ನಿತ್ಯೋಪವಾಸ ಕೈಗೊಂಡನು. ಏಕರಾತ್ರಿ, ತ್ರಿರಾತ್ರಿ, ಮಹಾರಾತ್ರಿ, ಅಷ್ಟೋಪವಾಸ, ಮಾಸೋಪವಾಸಗಳನ್ನು ಆಚರಿಸಲು ದೇಹ ಕುಗ್ಗಿ ಕೃಷವಾಯಿತು. ನಡಿಗೆ ನಿಧಾನವಾಯಿತು. ಹೀಗೆ ಆ ಬ್ರಹ್ಮಚಾರಿಯ ಬತ್ತಿದ ಶರೀವನ್ನೂ, ಅಡಗಿದ ಕಣ್ಣುಗಳನ್ನೂ, ಮಾಯಾ ಸಂಯಮವನ್ನು ಊರವರೆಲ್ಲ ಮೆಚ್ಚಿದರು. ಜಿನೇಂದ್ರ ಭಕ್ತ ಸೆಟ್ಟಿಯನ್ನೊಳಗೊಂಡಂತೆ ಊರಿನ ಗೃಹಸ್ಥರೆಲ್ಲ ಇವನ ಕಪಟ ವೈರಾಗ್ಯವನ್ನೇ ನಿಜವೆಂದು ನಂಬಿ ಅವನಲ್ಲಿ ಪೂರ್ಣಭಕ್ತಿಯನ್ನಿಟ್ಟು ಪೂಜಿಸಿದರು.

ಹೀಗಿರಲು ಕಳ್ಳ ಸೂರ್ಪನು ಉಪವಾಸಗಳಿಂದ ಶ್ರೇಷ್ಠನೆನಿಸಿಕೊಂಡು ಜನರನ್ನು ನಂಬಿಸಿ ಉಪಾಯದಿಂದ ರತ್ನವನ್ನು ಕದಿಯಬೇಕೆಂದು ನಿರ್ಧರಿಸುತ್ತಾನೆ. ಜನರಿಗೆ ತನ್ನ ಮೇಲೆ ಸಂಶಯ ಬರದಂತೆ ಉಪವಾಸದ ಮೇಲೆ ಉಪವಾಸ, ಅಲಾಭದ ಮೇಲೆ ಅಲಾಭ ಮಾಡಿ ಮೌನಿಯಾಗಿ, ಸ್ತ್ರೀ, ಹೊನ್ನು ಕಂಡರೆ ಊಟವಿಲ್ಲ, ಯಾರೊಡನೆಯೂ ಪ್ರೀತಿಯ ವ್ಯವಹಾರವಿಲ್ಲ, ಬರೀ ಕೋಪಗೊಳ್ಳುವನು. ಹೀಗೆ ಬರೀ ಮೋಸದ ಕೃತ್ಯಗಳಿಂದಲೇ ಊರವರನ್ನು ಜಿನೇಂದ್ರಭಕ್ತ ಸೆಟ್ಟಿಯನ್ನೂ ಮೆಚ್ಚಿಸಿದ್ದನು. ಕಳ್ಳ ಸೂರ್ಪನನ್ನು ನಿಜ ಋಷಿಯೆಂದು ನಂಬಿದ ಜಿನೇಂದ್ರಭಕ್ತ ಸೆಟ್ಟಿಯು ತಾನು ವ್ಯಾಪಾರಕ್ಕೆಂದು ಹೋಗಬೇಕಾದರೆ ಈ ಕಳ್ಳನನ್ನು ತನ್ನ ಮನೆಯಲ್ಲಿಟ್ಟು ಹೋಗುತ್ತಾನೆ. ಇವನು ತನ್ನ ಕೆಲಸ ಸಲೀಸಾಯಿತೆಂದು ಹಿಗ್ಗುತ್ತಾನೆ. ಜಿನೇಂದ್ರ ಭಕ್ತ ಸೆಟ್ಟಿ ಮನೆಯಿಂದ ಹೊರಟ ಮೇಲೆ ಕಾವಲು ಕಾಯುವವರು ನಿದ್ರಿಸುತ್ತಿರುವದನ್ನು ಮನಗಂಡು ಮೆಲ್ಲನೆ ಗರ್ಭಗುಡಿಗೆ ಹೋಗಿ ಮುಕ್ಕೊಡೆಯಲ್ಲಿದ್ದ ಮಾಣಿಕ್ಯವನ್ನು ನೋಡಿದನು.

> ನಿನ್ನ ಕತದಿಂದೆ ನಮೆದೆಂ
> ನಿನ್ನಂ ನಡೆನೋಡಿ ಸುಖಮನಱಿದೆಂ ಮತ್ತಂ
> ನಿನ್ನಿಂದ ಪಿರದಪ್ಪ ಮ
> ಹೋನ್ನತಿಯಂ ಪಡೆವೆನೆಂದು ದುಃಖಂಬಟ್ಟೆಂ (ಪು-೧೯೧, ಪ-೪೮)

> ಕಡುತಪದಿಂದ ದೇಹಂ
> ಬಡವಾದುದು ನಿನ್ನ ದೂಸಱಿಂ ಧರೆಯರೆಯಂ
> ಪಡೆವೆಂ ರಾಜ್ಯಶ್ರೀಯೊಳ್
> ತಡೆಯದೆ ಕೂಡಿರ್ಪೆನೆಂಬ ಪರಮೋತ್ಸವದಿಂ (ಪು-೧೯೧, ಪ-೪೯)

– ಎಂದು ಆ ರತ್ನ ಒಂದು ಜಡವಸ್ತುವೆಂಬುದನ್ನು ಮರೆತು ಸೂರ್ಪನು ಅದರೊಂದಿಗೆ ಮಾತಾಡತೊಡಗುತ್ತಾನೆ. ನಂತರ ಯಾರಿಗೂ ಕೇಳದಂತೆ ರತ್ನವನ್ನು ಹೊಡೆದು ಕೀಲನ್ನು ಕಿತ್ತು ಅದು ನೆಲಕ್ಕೆ ಬೀಳದಂತೆ ಅಂಗೈಯಲ್ಲಿ ಹಿಡಿದು ನೋಡಿ ಎದೆ, ತಲೆ, ಹಣೆ ಮೇಲೆ ಇಟ್ಟುಕೊಂಡು ವಿವಿಧ ರೀತಿಯಲ್ಲಿ ಭಾವಭಂಗಿಗಳಲ್ಲಿ ಅದನ್ನು ಭಾವಿಸಿ ನೋಡಿ ತನ್ನ ಕೈಗೆ ಆಗಲೇ ರಾಜ್ಯ ಸಿಕ್ಕಂತೆ ಅತ್ಯುತ್ಸಾಹದಿಂದ ಸಂತೋಷ ಪಡುವನು.

ಈ ಹೊಳೆಯುವ ರತ್ನವನ್ನು ವೀರಕುಮಾರ ರಾಜನಿಗೆ ಒಯ್ದು ಕೊಟ್ಟ ತಕ್ಷಣ ಇದನ್ನು ಕಂಡ ರಾಜ ತಾನಾಳುವ ರಾಜ್ಯದ ಅರ್ಧ ತನಗೆ ಕೊಡುವನು. ಅದರಿಂದ ತಾನು ಸಕಲ ಸೌಖ್ಯವನ್ನೂ ಅನುಭವಿಸುತ್ತೇನೆ ಎಂದು ಮನದಲ್ಲೇ ಮಂಡಿಗೆ ತಿನ್ನುತ್ತಾನೆ. ನಂತರ ತಳವಾರರ ಕೈಗೆ ಸಿಕ್ಕಿ ಬೀಳುತ್ತೇನೆಂಬ ಭಯದಿಂದ ಜಿನೇಂದ್ರ ಭಕ್ತಸೆಟ್ಟಿಯ ಬಿಡಾರಕ್ಕೆ ಹೋಗಿ ರಕ್ಷಣೆ ಕೇಳುತ್ತಾನೆ. ಇವನ ನಿಜ ರೂಪವನ್ನರಿತ ಜಿನೇಂದ್ರ ಭಕ್ತ ಸೂರ್ಪನನ್ನು ತಳವಾರರಿಂದ ರಕ್ಷಿಸಿ ಜಿನಧರ್ಮ ಸೇರೆಂದು ಸದ್ಧರ್ಮ ಬೋಧಿಸುತ್ತಾನೆ. ಸೂರ್ಪನ ಮನಃ ಪರಿವರ್ತನೆಯಾಗಿ ಜಿನದೀಕ್ಷೆ ಸ್ವೀಕರಿಸಿ ಉಗ್ರ ತಪ್ಪಸ್ಸು ಮಾಡಿ ಮೋಕ್ಷಪಡೆಯುವನು.

ರಾಜನೊಬ್ಬ ಕಳ್ಳನಿಗೆ ಕಳ್ಳತನಕ್ಕೆ ಪ್ರೋತ್ಸಾಹಿಸಿ ಅವನ ವ್ಯಕ್ತಿತ್ವವನ್ನು ಅಧಃಪತನಕ್ಕೆ ಇಳಿಸುವನು. ಅರ್ಧ ರಾಜ್ಯದ ಆಮಿಷ ಒಡ್ಡಿ ಕಳ್ಳನನ್ನು ಮತ್ತಷ್ಟು ಪ್ರಚೋದಿಸುವನು. ಅದೇ ಒಬ್ಬ ಸಾಮಾನ್ಯ ಜಿನೇಂದ್ರ ಭಕ್ತ ಸೆಟ್ಟಿ ಕಳ್ಳನಿಗೆ ಕಳ್ಳತನ ಬಿಟ್ಟು ಜಿನಧರ್ಮ ಸ್ವೀಕರಿಸಲು ಬೋಧಿಸುತ್ತಾನೆ, ಪ್ರೋತ್ಸಾಹಿಸುತ್ತಾನೆ. ಕಳ್ಳನ ವ್ಯಕ್ತಿತ್ವವನ್ನು ಎತ್ತರಕ್ಕೇರಿಸುವ ಪ್ರಯತ್ನ ಮಾಡುತ್ತಾನೆ. ಇಲ್ಲಿ ರಾಜ ತನ್ನ ಆಸೆಯ ಈಡೇರಿಕೆಗೆ ಕಳ್ಳನನ್ನು ಬಳಸಿಕೊಂಡರೆ ಜಿನೇಂದ್ರ ಭಕ್ತ ಸಾಮಾನ್ಯ ಕಳ್ಳನ ಬದುಕನ್ನು ಉನ್ನತೀಕರಿಸುವ ಕಡೆ ಲಕ್ಷ್ಯಹರಿಸುತ್ತಾನೆ. ಇದು ಒಬ್ಬ ರಾಜ ಮತ್ತು ಸಾಮಾನ್ಯನಿಗಿರುವ ವ್ಯತ್ಯಾಸ. ರಾಜ ಸ್ವಹಿತ ಬಯಸಿದರೆ, ಸಾಮಾನ್ಯ ಪರಹಿತ ಬಯಸುವವನಾಗಿದ್ದಾನೆ.

ಸಾಮಾನ್ಯನ ಧರ್ಮನಿಷ್ಠೆ-ರಾಜನ ಧರ್ಮಾಂತರ:

ಗುಣಪಾಲ ಸೆಟ್ಟಿ ಎಂಬ ವರ್ತಕ ಅವನ ಹೆಂಡತಿ ಧನಶ್ರೀ. ಇವರ ಮಗಳು ಸುಬಂಧುಶ್ರೀ. ಗುಣಪಾಲ, ಧನಶ್ರೀ, ಸುಬಂಧುಶ್ರೀ ಮೂವರು ಅತ್ಯಂತ ಕಟ್ಟುನಿಟ್ಟಾದ ಜೈನಧರ್ಮಪರಿಪಾಲಕರು. ಅವರು ಸದಾಕಾಲ ಜಿನಪೂಜೆ, ಅರ್ಚನೆ, ಜಿನೋಪದೇಶಗಳಲ್ಲೇ ಮುಳುಗಿರುತ್ತಿದ್ದರು. ಹೀಗಿರುವಾಗ ಒಂದು ದಿನ ವಿಶ್ವಂಧರ ಮಹಾರಾಜ ಗುಣಪಾಲಸೆಟ್ಟಿ ಮಗಳು ಸುಬಂಧುಶ್ರೀಯನ್ನು ನೋಡಿ ಅವಳ ಸೌಂದರ್ಯಕ್ಕೆ ಮಾರು ಹೋಗಿ ಮೋಹಪರವಶನಾಗುತ್ತಾನೆ. ಅರಮನೆಗೆ ಬಂದು ಸುಬಂಧುಶ್ರೀಯನ್ನು ಬೇಡಲು ಹೆಗ್ಗಡೆಗಳನ್ನು ಗುಣಪಾಲಸೆಟ್ಟಿಯ ಮನೆಗೆ ಕಳಿಸುತ್ತಾನೆ. ಹೆಗ್ಗಡೆಯು ಬಂದು ಸುಬಂಧುಶ್ರೀಯನ್ನು ವಿಶ್ವಂಧರ ಮಹಾರಾಜನಿಗೆ ಮದುವೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಾನೆ. ಗುಣಪಾಲಸೆಟ್ಟಿ ಶ್ರಾವಕಧರ್ಮದಲ್ಲಿ ನಂಬಿಕೆ ಇಟ್ಟದ್ದರಿಂದ ವಿಶ್ವಂಧರ ಮಹಾರಾಜನ ಆಸೆಗೆ ಆಶ್ಚರ್ಯಪಟ್ಟು, ಮೆಚ್ಚಿಗೆಯ ಮಾತುಗಳನ್ನಾಡಿ ಹೆಗ್ಗಡೆಯನ್ನು ಅರಮನೆಗೆ ಕಳಿಸುವನು. ಅವನು ಹೋದ ನಂತರ ಜಿನಧರ್ಮದಲ್ಲಿ ಅಚಲ ನಿಷ್ಠೆಯುಳ್ಳ ಗುಣಪಾಲಸೆಟ್ಟಿ ಮನದಲ್ಲಿ ಹೀಗೆ ಯೋಚಿಸಿಕೊಳ್ಳತೊಡಗುವನು.

"...... ಮಿಥ್ಯಾದೃಷ್ಟಿಯಪ್ಪನ ರೂಪುಮಂ ವಿಳಾಸಮುಮಂ ಪ್ರತಾಪಮುಮಂ ಸಂಪತ್ತುಮಂ ಕಂಡು ರಾಗಿಸಿ ಪೊರ್ದಿ ಕೂಸುಗುಡುವನುಂ ಕೆಳೆಗೊಳ್ವನುಂ ನರಕಕ್ಕೆ ಭಾಜನನಕ್ಕುಮಲ್ಲದೆ ಶ್ರಾವಕನಪ್ಪನೇಗೆಯ್ದುಂ ಸುಗತಿಯನೆಯ್ದಲಾಱನ್ ...." (ಪು-೩೪೬, ಗದ್ಯ)

-ಎಂದು ತನಗೆ ತಾನೆ ಯೋಚಿಸಲಾರಂಭಿಸುತ್ತಾನೆ. ಜೈನಧರ್ಮದಲ್ಲಿ ಆಸಕ್ತಿ ಇಲ್ಲದ ರಾಜನಷ್ಟೇ ಅಲ್ಲ ಯಾರೇ ಆದರೂ ಜೈನ ಶ್ರಾವಕರಿಗೆ ಅವರು ಮಿಥ್ಯಾದೃಷ್ಟಿಯುಳ್ಳವರು. ಜೈನ ಶ್ರಾವಕರಿಗೆ ಜೈನಧರ್ಮ ಸಿದ್ಧಾಂತ, ತತ್ತ್ವಗಳೇ ಜೀವನ. ಅದನ್ನು ಹೊರತು ಪಡಿಸಿ ಲೋಕದ ಜನರು ನೆಚ್ಚುವ ರೂಪು, ಐಶ್ವರ್ಯಗಳಂತಹವೆಲ್ಲ ಜೈನ ಶ್ರಾವಕರಿಗೆ ನರಕಕ್ಕೆ ಭಾಜನವಾಗುವಂಥವು. ಸದ್ಗತಿಯನ್ನು ಕೊಡದವುಗಳು. ಅದಕ್ಕೆ ರಾಜನಿಗೆ ಮಗಳನ್ನು ಮದುವೆ ಮಾಡಿ ಕೊಡುವದಕ್ಕಿಂತ ಬೆಟ್ಟದ ಮೇಲಿಂದ ಕೆಳಕ್ಕೆ ನೂಕುವದು

ಒಳ್ಳೆಯದೆಂದು ಕೊಳ್ಳುವನು. ತಾನಷ್ಟೇ ಬೇಡವೆಂದು ನಿರ್ಧರಿಸಲಾಗದೆಂದು ಹೆಂಡತಿ ಧನಶ್ರೀಯ ಅಭಿಪ್ರಾಯವನ್ನು ಕೇಳುತ್ತಾನೆ. ಅದಕ್ಕೆ ಧನಶ್ರೀ

"ಕಾಕತಾಳನ್ಯಾಯದಿಂ ನಿನ್ನಂತಪ್ಪ ಮಹಾಪುರುಷನ ಬಸಿಱೊಳ್ ಬಂದು ಜಿನಧರ್ಮಂಪೊರ್ದಿದಳಂತು ಪೊರ್ದಿದ ಮಗಳಂ ಕಳ್ಳಂಗಂಜಿದರಂ ಪುಲಿಗೊಪ್ಪಿಸಿದರೆಂಬಂತಾನುಂ ಸಿಂಹದ ಬಾರಿಯೊಳ್ ಬರ್ದುಂಕಿದವನಂ ಪಿಟ್ಟುಮೆಳಸಿದರೆಂಬಂ ತಾನುಂ ಪಗೆವರ ಕೊಲೆಯಂ ಬಂಚಿಸಿ ಪೋಪನಂ ಕರಡಿಯ ಮುಂತಿಕ್ಕಿದರೆಂಬಂತಾನುಂ ಮಿಥ್ಯಾ ದೃಷ್ಟಿಯಪ್ಪನ ರಾಜ್ಯಶ್ರೀಯುಮಂ ಸಂಪತ್ತುಮಮುನ್ನ ತಿಕ್ಕೆಯುಮಂ ಕಂಡು ಶೂನ್ಯಹೃದಯರಂತೆ ಮೇಲಣನಂತರಭವದ ದುಃಖಮಂ ಭಾವಿಸದೆ ಪೆರ್ಚಿಂದಂ ಕೂಸಂ ಕುಡುವೆನೆಂಬ ನಿಮ್ಮ ಮರುಳ್ತನಕ್ಕೆ ನಕ್ಕೆ ಪಿರಿದುಂ ವಿಸ್ಮಯಮಾದಪುದು; ನಿಮ್ಮಂತಪ್ಪ ಸದ್ದೃಷ್ಟಿಗಳು ಮಿಂತಪ್ಪ ಕಜ್ಜಮಂ ಮನದೆಕೊಳ್ವಿರೆಂದೊಡಂ ಮತ್ತಿನಟಿ ಶ್ರಾವಕರ ಮತಿಹೀನತೆಗಂ ಕೇಡಿಂಗಮಟಿಲಾಗದು"(ಪು-೩೪೭, ಗದ್ಯ).

-ಎಂದು ತನ್ನ ಅಭಿಪ್ರಾಯ ತಿಳಿಸುತ್ತಾಳೆ. ಐಶ್ವರ್ಯಕ್ಕೆ ಆಕರ್ಷಿತರಾಗಿ ಶೂನ್ಯಹೃದಯರಂತೆ ಜಿನಧರ್ಮ ನಂಬಿದ ಮಗಳನ್ನು ಮಿಥ್ಯಾದೃಷ್ಟಿಯುಳ್ಳವನಿಗೆ ಮದುವೆ ಮಾಡುವದು ಸಲ್ಲದು ಎನ್ನುವಳು. ಅಷ್ಟೇ ಅಲ್ಲದೆ

"ಗಂಡನಿದಿರೊಳ್ ಪೆಂಡತಿ ನುಡಿಯಲಾಗದು; ಮೀಱಿಕೊಟ್ಟರಪ್ಪೊಡೆಮಗೆ ಬಸದಿಯೆ ಶರಣೆಂದು" ಧನಶ್ರೀ ಗಂಡನಿಗೆ ಎಚ್ಚರಿಕೆ ಕೊಡುವದು; ಸಾಮಾಜಿಕ, ಕೌಟುಂಬಿಕ ರೀತಿ ನೀತಿಗಳಿಗನುಗುಣವಾಗಿ ಗಂಡನಿಗೆ ಎದುರಾಗಿ ಹೆಂಡತಿ ಮಾತನಾಡುವದು ಸ್ಥಾಪಿತ ಸಾಂಪ್ರದಾಯಿಕ ಸಂಸ್ಕೃತಿಗೆ ನಿಷಿದ್ಧ. ಅದಕ್ಕೇ ಧನಶ್ರೀ ಮಗಳನ್ನು ರಾಜನಿಗೆ ಮದುವೆ ಮಾಡಿದ್ದಾದರೆ ತಾನು ಸನ್ಯಾಸ ಸ್ವೀಕರಿಸುವದಾಗಿ ಹೇಳುತ್ತಾಳೆ. ಗಂಡನೆದುರು ಮಾತಿನಲ್ಲಿ ಪ್ರತಿಭಟಿಸದಿದ್ದರೂ ಮೌನವಾಗಿ ತನ್ನ ಕ್ರಿಯೆಯ ಮೂಲಕ ಪ್ರತಿಭಟಿಸುವದಾಗಿ ಎಚ್ಚರಿಸುತ್ತಾಳೆ. ಇಷ್ಟಾದ ಮೇಲೆ ಇನ್ನು ಮದುವೆಯಾಗುವ ಹುಡುಗಿ ಸುಬಂಧಶ್ರೀಯ ಅಭಿಪ್ರಾಯ ಕೇಳುತ್ತಾನೆ. ತಂದೆಯ ಮಾತಿಗೆ ನಕ್ಕು ತನ್ನ ಧರ್ಮಸ್ಥಿರತೆಯನ್ನು ತಂದೆಗೆ ಮನಗಾಣಿಸುವ ರೀತಿ ಅನನ್ಯವಾಗಿದೆ.

"...... ನಿಮ್ಮಂತಪ್ಪ ಮಹಾಪುರುಷರಿಂತಪ್ಪ ನಿರ್ಬುದ್ಧಿತನಮಂ ಮಾಡಲಾಗದೀ ಶ್ರೀಗೆಱಗಿ ಧರ್ಮಮಂ ಬಿಡುವುದಾವ ಬುದ್ಧಿ......"(ಪು-೩೫೨, ಗದ್ಯ).

-ಎಂದು ತಂದೆಯನ್ನು ತರಾಟೆಗೆ ತೆಗೆದುಕೊಳ್ಳುವಳು. ಸಂಪತ್ತಿಗೋಸ್ಕರ ಧರ್ಮವದು ಸುಬಂಧುಶ್ರೀಗೆ ತಿಳಿಗೇಡಿತನವಾಗಿ ಕಾಣುತ್ತದೆ. ಅದಕ್ಕೆ ತಂದೆಗೆ ಬುದ್ಧಿ ಹೇಳುವ ಪ್ರೌಢಿಮೆಯನ್ನು ಪ್ರದರ್ಶಿಸುತ್ತಾಳೆ. ಜಿನಧರ್ಮದ ಮೇಲಿನ ತನ್ನ ಅಚಲ ನಿಷ್ಠೆಯನ್ನು ವ್ಯಕ್ತಪಡಿಸುವದರ ಜೊತೆಗೆ ಜಿನಧರ್ಮವಿಲ್ಲದ ಐಹಿಕ ಸುಖ ತನಗೆ ಬೇಡವೆಂಬುದನ್ನು ಹೀಗೆ ಪ್ರಕಟಿಸುವಳು.

"................................ಹೀನ ರಾಜ್ಯಮುಮನಲ್ಪಶ್ರೀಯು ಮನಟಿಸುಖಮುಮಂ ತೋಱಿ ನರಕದೊಳಂತಿರಿಕದೊಳಮಡೆಯಱಿಯದೆ ನಿಷ್ಕರುಣನಾಗಿ ಮೆಚ್ಚಿದ ಕೊಲೆಗಳಿಂ ಕೊಲ್ವಾತನಂ ಕಂಡು ಬೆಚ್ಚಿ ಶರಣರಪ್ಪರೊರ್ವರುಮಿಲ್ಲದೊಳಱಿ ಪೆಳಱಿ ಬಾಯ್ವಿಟ್ಟೆಂತಾನುಮೆನ್ನಭಾಗ್ಯದಿಂ ಸದ್ಧರ್ಮ ಸಮೇತನಪ್ಪ ನಿನ್ನ ಶರಣ್ಬುಗುವಂತೆ ಪುಟ್ಟಿದೆನ್ನಂ ರಕ್ಷಿಸದೆ ಕರ್ಮರಾಜಂಗೆ ಮಗುಳೆ ಪಿಡಿದೊಪ್ಪಿಸುವುದು ಪಾಟಿಯಲ್ಲದೆಂತುಂ ನಿಮಗೆನ್ನ ಮೇಲೆ ಮುಳಿಸುಳ್ಳೊಡೆ ನಿಮ್ಮ ಮೆಚ್ಚಿದ ದಂಡನೆಯಂ ಮಾಡಿಮೇಗೆಯ್ದುಂ ಮಿಥ್ಯಾದೃಷ್ಟಿಗೆ ಕುಡುವವೆಂಬ ಬಗೆಯಂ ಮಾಣ್ಬುದು......"(ಪು-೩೫೩, ಗದ್ಯ).

ಎಂದು ಕಣ್ಣೀರು ಹಾಕುವಳು. ಮಿಥ್ಯಾದೃಷ್ಟಿಯುಳ್ಳ ರಾಜನನ್ನು ಮದುವೆ ಮಾಡಿಕೊಳ್ಳುವದಕ್ಕಿಂತ ತಂದೆಯಿಂದ ಶಿಕ್ಷೆಯನ್ನನುಭವಿಸುವದು ಲೇಸೆಂದುಕೊಳ್ಳುವಳು.

ಇತ್ತ ಗುಣಪಾಲಸೆಟ್ಟಿಯು ರಾಜನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಡುವ ಬಗ್ಗೆ ಏನಾದರೊಂದು ನಿರ್ಧಾರ ಹೇಳಬೇಕಿತ್ತು. ಗುಣಪಾಲಸೆಟ್ಟಿ ಧನಶ್ರೀ, ಸುಬಂಧುಶ್ರೀ ಮೂವರದೂ ಈ ಮದುವೆಗೆ ಸಮ್ಮತಿಯೇ ಇರಲಿಲ್ಲ. ರಾಜನ ಮದುವೆಯ ಈ ಬೇಡಿಕೆಯನ್ನು ತಿರಸ್ಕರಿಸುವ ಶಕ್ತಿಯಾಗಲಿ, ಧೈರ್ಯವಾಗಲಿ ಗುಣಪಾಲಸೆಟ್ಟಿಗೆ ಇರಲಿಲ್ಲ. ಗುಣಪಾಲಸೆಟ್ಟಿಗಷ್ಟೇ ಅಲ್ಲ ಯಾವ ಸಾಮಾನ್ಯನಿಗೂ ಪ್ರಭುತ್ವಕ್ಕೆ ಎದುರಾಡುವ, ಪ್ರಭುತ್ವದ ಬೇಡಿಕೆಯನ್ನು ನಿರಾಕರಿಸಲು ಧೈರ್ಯಸಾಲದು.

ತಡೆದಿಲ್ಲಿ ನಿಂದೆನಪ್ಪೊಡೆ
ಕುಡವೇಟ್ಟುಂ ಭೂಭುಜಂಗೆಮುಗುವಂ ಕೂಸಂ
ಕಡುಗೂರ್ತು ಕೊಟ್ಟೆನಪ್ಪೊಡೆ
ಕಿಡುಗುಂ ಮೇಲಪ್ಪ ನಮ್ಮ ಮೋಕ್ಷದ ಸೌಖ್ಯಂ (ಪು–೩೫೪, ಪ–೭೦)

– ಎಂದು ಯೋಚಿಸಿ ಧನಶ್ರೀ ಗರ್ಭಿಣಿಯಿದ್ದ ಕಾರಣ ಅವಳು ಹೋಗಲಾಗದ್ದರಿಂದ ಗುಣಪಾಲ ಹೆಂಡತಿಯನ್ನು ಗುಪ್ತವಾಗಿ ತನ್ನ ಗೆಳೆಯನ ಮನೆಯಲ್ಲಿರಿಸಿ, ಅವಳ ಖರ್ಚಿಗಾಗಿ ಸಾಕಷ್ಟು ಹಣವನ್ನು ಕೊಟ್ಟು ಹೊರಟನು.

ಮಗಳನೊಡಗೊಂಡು ಪುರದಿಂ
ಬಗೆಯದೆ ಪೆಱಪೆಱತನಳಿಪದೊಂದಕ್ಕಂ ಕೈ
ಮಿಗೆ ಜೈನಧರ್ಮವಾರಿಧಿ
ಮೃಗಾಂಕನನುಪಮಗುಣಾಂಬುನಿಧಿ ಪೊಱಮಟ್ಟು (ಪು–೩೫೫, ಪ–೭೧)

– ಗುಣಪಾಲಸೆಟ್ಟಿಯು ಗರ್ಭಿಣಿ ಹೆಂಡತಿ ಧನಶ್ರೀಯನ್ನು ಅಲ್ಲೇ ಬಿಟ್ಟು ಮಗಳು ಸುಬಂಧುಶ್ರೀಯನ್ನು ಕರೆದುಕೊಂಡು ಆ ಊರನ್ನು ಬಿಟ್ಟು ಪ್ರಯಾಣಿಸಿ ಕೌಶಾಂಬಿ ಎಂಬ ಊರಲ್ಲಿ ಬೀಡು ಬಿಡುತ್ತಾನೆ.

ಹೀಗೆ ಗುಣಪಾಲಸೆಟ್ಟಿಯ ಊರು ಬಿಟ್ಟು ಹೋದ ಸುದ್ದಿಯನ್ನು ಕೇಳಿದ ವಿಶ್ವಂಧರ ಮಹಾರಾಜ ಆಶ್ಚರ್ಯಪಟ್ಟು ಪ್ರಧಾನರನ್ನು ಏಕೆಂದು ಕೇಳಲು

"ಕೊಲೆಯೊಳ್‌ಪೊರ್ದದಿರ್ದ ಸದ್ಧರ್ಮಮೆ ಮುಖ್ಯಮಪ್ಪುದಱಿಂ ಧರ್ಮದ ಮೋಹದಿಂ ಶ್ರೀಯುಮಂ ಸಂಪತ್ತು ಮನುದಾಸೀನಂ ಮಾಡಿ ದೇವ ನೀ ಶ್ರಾವಕನಲ್ಲಮಪ್ಪುಗದಱಿಂ ಮಿಥ್ಯಾತ್ವಕ್ಕಂ ಮೇಲೆ ಬರ್ಪ ನರಕದುಃಖಕ್ಕಂ ಭಯಸ್ಥನಾಗಿ ಕೊಡಲೊಲ್ಲದೆ ಪೋದನೆಂಬುದುಂ......" (ಪು–೩೫೫, ಗದ್ಯ).

–ಎಂದು ಹೇಳುತ್ತಾರೆ. ರಾಜ ಶ್ರಾವಕನಲ್ಲದ ಕಾರಣ ಧರ್ಮದ ಮೇಲಿನ ಮೋಹದಿಂದ ಐಶ್ವರ್ಯ, ಸಂಪತ್ತನ್ನೂ ನಿರಾಕರಿಸಿ, ಉಂಟಾಗುವ ನರಕದುಃಖಕ್ಕೆ ಭಯಗ್ರಸ್ಥನಾಗಿ ಮಗಳನ್ನು ಕೊಡಲು ಒಲ್ಲದೆ ಗುಣಪಾಲಶೆಟ್ಟಿ ಊರನ್ನೇ ಬಿಡುವ ನಿರ್ಧಾರ ಮಾಡಿದ್ದನ್ನು ಅರಿತ ರಾಜನಿಗೆ ಆಶ್ಚರ್ಯವಾಗುತ್ತದೆ. ಗುಣಪಾಲಸೆಟ್ಟಿಯು ಯಾವ ಐಹಿಕ ಸಂಪತ್ತಿಗೂ ಆಸೆಪಡದೆ ಸಕಲ ಸಂಪತ್ತು, ವೈಭವವನ್ನು ತ್ಯಜಿಸಿ ತನ್ನ ವ್ಯಾಪಾರ ವಹಿವಾಟನ್ನೂ ತೊರೆದು. ತಾನು ನಂಬಿದ ಧರ್ಮಮಾತ್ರವನ್ನೇ ನೆಚ್ಚಿಕೊಂಡು ಮಗಳನ್ನು ಕೊಡಲಾಗದಿದುದಕ್ಕೆ ಊರು ಬಿಟ್ಟು ಹೋಗುತ್ತಾನೆಂಬುದು ರಾಜನ ಕಣ್ತೆರೆಸುತ್ತದೆ.

ಅದಱಿಂದಾತಂ ನಂಬಿ
ದುರ್ದೆ ದೈವಂ ವೈಶ್ಯವಂಶತಿಳಕಂ ಪಿಡಿದಿ
ರ್ದುದೆ ಧರ್ಮಮೆಂದು ನಚ್ಚಿದ
ನುದಿತೋದಿತಕೀರ್ತಿ ಮಾಳವೋರ್ವೀನಾಥಂ (ಪು-೩೫೬, ಪ-೭೮)

– ಹೀಗೆ ಸಾಮಾನ್ಯನೊಬ್ಬನ ಧರ್ಮಪ್ರೀತಿ ರಾಜನ ಮನತಟ್ಟುತ್ತದೆ. ಜಿನಧರ್ಮವನ್ನು ನಂಬುವಂತೆ ಮಾಡುತ್ತದೆ. ಆ ವೈಶ್ಯ ಹಿಡಿದುದೇ ಧರ್ಮ, ನಂಬಿದುದೇ ದೇವರು ಎಂದು ಜಿನಧರ್ಮದಲ್ಲಿ ಪ್ರೀತಿಯೂ, ಕುಧರ್ಮದಲ್ಲಿ ಭೀತಿಯೂ ಹುಟ್ಟಿ ಗುಣಪಾಲಸೆಟ್ಟಿಯ ಮೇಲೆ ಮೋಹ, ಸ್ನೇಹ ಭಾವಗಳೆರಡೂ ಉಂಟಾಗುತ್ತವೆ. ಗುಣಪಾಲಸೆಟ್ಟಿಯನ್ನು ಹುಡುಕಿ ತರಲು ರಾಜ ಎಲ್ಲ ದಿಕ್ಕುಗಳಿಗೂ ತನ್ನ ಸೇವಕರನ್ನು ಕಳಿಸುತ್ತಾನೆ. ಎಷ್ಟೋ ದಿನಗಳ ನಂತರ ಗುಣಪಾಲಸೆಟ್ಟಿ ಕೌಶಾಂಬಿಯಲ್ಲಿರುವದು ಗೊತ್ತಾಗಿ ಅವನನ್ನು ಕರೆಸಿಕೊಂಡು ಅತ್ಯಂತ ಪ್ರೀತಿ ಆದರೋಪಚಾರಗಳಿಂದ ಬರಮಾಡಿಕೊಳ್ಳುವನು. ನಂತರ ರಾಜ ಗುಣಪಾಲಸೆಟ್ಟಿಯನ್ನು ಕುರಿತು ಹೀಗೆ ಹೇಳುವನು.

ಎನಗೆ ಸಖನಾಗಿಯುಂ ನಂ
ಟನಾಗಿಯುಂ ನೀನೆ ನಿನ್ನ ನಂಬಿರ್ದ ಜಿನೇ
ಶ್ವರಧರ್ಮದಂದಮಂ ಪೇ
ಳ್ದನುಪಮಜಿನ ಪಾದಸೇವೆಯಂ ಮಾಡೆನಗಂ (ಪು-೩೭೫, ಪ-೧೫೯)

– ಎಂದು ಹೇಳುತ್ತ ಮತ್ತೆ ಎಲ್ಲರಿಗೂ ಕೇಳುವಂತೆ ಮಾತು ಮುಂದುವರೆಸಿ

ನಿನ್ನತನೂಭವಂಗೆ ಧನಕೀರ್ತಿಗೆ ಮಾಳವದೇಶದರ್ಧಮಂ
ಭಿನ್ನ ಸರೋಜವಕ್ತ್ರೆವೆರಸಿತ್ತಪೆನರ್ತಿಯೊಳಿಂತಿದಕ್ಕೆ... (ಪು-೩೭೫, ಪ-೧೬೦)

– ಎಂದು ಹೇಳಿ ಇದಕ್ಕೆ ಪ್ರತಿ ಮಾತನಾಡದೆ ಒಪ್ಪಿಕೊಳ್ಳಬೇಕು ಎಂದು ರಾಜನಾಗಿಯೂ ಸಾಮಾನ್ಯನೊಬ್ಬನನ್ನು ವಿನಂತಿಪೂರ್ವಕವಾಗಿ ವಿನಂತಿಸಿಕೊಳ್ಳುವ ಔದಾರ್ಯವನ್ನೂ ಅವನಲ್ಲಿ ಉಂಟುಮಾಡುತ್ತದೆ. ಅದಕ್ಕೇ ರಾಜ ಈ ಮುಂದಿನಂತೆ ತನ್ನ ಆಸೆಯನ್ನು ಹೀಗೆ ವ್ಯಕ್ತಪಡಿಸುವನು.

ಜಿನಪಾದಭಕ್ತನಲ್ಲಂ
ಜಿನೇಶನೆಂದೆನ್ನದೆಸೆಗೆ ಬೆಚ್ಚದೆ ಮುನ್ನಂ
ಮಿನುತವ್ರತಮಂ ಕೊಟ್ಟೋ
ಯ್ಯನೆ ನಂಬಿ ಬಳಿಕ್ಕೆ ವೈಶ್ಯ ವಂಶಲಲಲಾಮಾ (ಪು-೩೭೫, ಪ-೧೬೫)

– ರಾಜ ಜಿನಭಕ್ತನಲ್ಲ ಎಂಬ ಗುಣಪಾಲಸೆಟ್ಟಿಯ ಬೇಗುದಿಯನ್ನು ಪರಿಹರಿಸಲು ರಾಜ ಹೀಗೆ ಹೇಳುವನು. 'ಮೊದಲು ಶ್ರೇಷ್ಠವಾದ ವ್ರತವನ್ನು ಕೊಟ್ಟು ನಂತರ ಧನಕೀರ್ತಿಗೆ ತನ್ನ ಮಗಳನ್ನು ಮದುವೆ ಮಾಡಿಕೊಂಡು ಅವಳನ್ನೇ ಪಟ್ಟದರಸಿಯಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತಾನೆ. ಹೀಗೆ ರಾಜನೊಬ್ಬ ಸಾಮಾನ್ಯನೆದುರು ತನ್ನ ಅಭೀಪ್ಸೆಯನ್ನು ತೋಡಿಕೊಳ್ಳುವನು. ಮುನ್ನಿನಂತೆಯೇ ರಾಜ ಜೈನಧರ್ಮದ ಶ್ರಾವಕನಲ್ಲವೆಂಬ ಕಾರಣಕ್ಕಾಗಿ ಮತ್ತೆ ಹೊರಟು ಹೋಗಿ ಬಿಡಬಾರದೆಂಬ ಕಾರಣವೇ ರಾಜ

ಗುಣಪಾಲಸೆಟ್ಟಿಗೆ ವಿವರಿಸುವನು ಮತ್ತು ಧನಕೀರ್ತಿಗೆ ತನ್ನ ರಾಜ್ಯದ ಅರ್ಧ ಭಾಗಕೊಟ್ಟು ಮಗಳ ಜೊತೆ ಮದುವೆ ಮಾಡುವನು.

ಈ ಇಡೀ ಕತೆ ಧರ್ಮನಿಷ್ಠೆಯನ್ನೇ ಸಾರಿಹೇಳುತ್ತದೆ. ಸಾಮಾನ್ಯನೊಬ್ಬನ ಅಚಲವಾದ ಧರ್ಮನಿಷ್ಠೆಗೆ ರಾಜನೇ ಆಕರ್ಷಿತನಾಗುತ್ತಾನೆ. ಸಾಮಾನ್ಯರೆಂದರೆ ಬರೀ ಐಹಿಕಸುಖ, ಸಂಪತ್ತು ವೈಭವಗಳಿಗೆ ಮಾರುಹೋಗುವವರು ಎಂಬ ಕಲ್ಪನೆ; ಇದನ್ನು ಸಾಮಾನ್ಯವಾಗಿ ಎಲ್ಲರಲ್ಲೂ ಕಾಣುತ್ತೇವೆ. ಆದರೆ ರಾಜನನ್ನೂ ಎದುರುಹಾಕಿಕೊಂಡು, ಮತ್ತೊಂದು ನಾಡಿಗೆ ಪಲಾಯನ ಮಾಡಿ ತನ್ನ ಧರ್ಮ ನಿಷ್ಠೆಯನ್ನು ಕಾಯ್ದುಕೊಳ್ಳುವ ಸಾಮಾನ್ಯನೊಬ್ಬ ರಾಜನ ಗೌರವ ಪ್ರಾಪ್ತಿಗೆ ಕಾರಣವಾಗುತ್ತಾನೆ. ಸಾಮಾನ್ಯನ ಜಿನಭಕ್ತಿ, ಪ್ರೀತಿಗೆ ಮೆಚ್ಚಿದ ರಾಜನೂ ಜಿನಧರ್ಮಕ್ಕೆ, ಮಾರುಹೋಗಿ ತಾನೂ ಜಿನಾವಲಂಬಿಯಾಗುತ್ತಾನೆ. ಹೀಗೆ ಸಾಮಾನ್ಯನೊಬ್ಬನ ಧರ್ಮನಿಷ್ಠೆ, ರಾಜನನ್ನೂ ಧರ್ಮಾಂತರಗೊಳಿಸುತ್ತದೆ.

ಹರಿಶ್ಚಂದ್ರ ಕಾವ್ಯ

ರಾಜಪ್ರಭುತ್ವ ಮತ್ತು ಸ್ವಾರ್ಥ:

ಇಂದ್ರನ ಒಡ್ಡೋಲಗದಲ್ಲಿ ವಶಿಷ್ಠ, ವಿಶ್ವಾಮಿತ್ರರಿಗೆ ಹರಿಶ್ಚಂದ್ರ ಮಹಾರಾಜ ಸತ್ಯಸಂಧ ಹೌದು ಅಲ್ಲ ಎಂಬ ಚರ್ಚೆ ನಡೆಯುತ್ತಿರುತ್ತದೆ. ವಸಿಷ್ಠ ಮುನಿ ಹರಿಶ್ಚಂದ್ರ ಸತ್ಯಸಂಧ ಎಂದು ಪ್ರತಿಷ್ಠಾಪಿಸಲು ಪ್ರಯತ್ನಿಸಿದರೆ, ವಿಶ್ವಾಮಿತ್ರ ಮುನಿ ಹೇಗಾದರೂ ಸರಿ ಹರಿಶ್ಚಂದ್ರನನ್ನು ಅಸತ್ಯನೆಂದು ಸಾಧಿಸಲು ಹಟ ತೊಡುವನು. ಅದಕ್ಕೆ ಹರಿಶ್ಚಂದ್ರನು ತನ್ನ ಸ್ವಾರ್ಥಕ್ಕಾಗಿ ಸಾಮಾನ್ಯನಿಗೆ ಹೇಗೆ ಮೋಸ ಮಾಡಿದನೆಂಬುದನ್ನು ಹೀಗೆ ಹೇಳುವನು.

ಹರಿಶ್ಚಂದ್ರನಿಗೆ ಮಗನಿರಲಿಲ್ಲ. 'ಅಪುತ್ರಸ್ಯ ಗತೀರ್ನಾಸ್ತಿ' ಎಂಬುದರಲ್ಲಿ ನಂಬಿಕೆಯುಳ್ಳವನಾಗಿದ್ದ. ಹರಿಶ್ಚಂದ್ರ ಮಗನಿಲ್ಲದ ಕಾರಣಕ್ಕಾಗಿ ಎಲ್ಲಿ ತನಗೆ ನರಕ ಪ್ರಾಪ್ತಿಯಾಗುವದೋ ಎಂದು ಪುತ್ರಲಾಭಕ್ಕಾಗಿ ವರುಣದೇವನ ಮೊರೆ ಹೋಗುವನು. ಆಗ ವರುಣದೇವ "ಯಾಗ ಪಶುವ ಮಾಡುವೆನೆಂದು ಮರಳೀವೆಯಾದಡೀವೆನು ಮಗನ ನಿನಗೆಂದೆನೆ"(೨-೧೮) ಎಂದು ಬೇಡಿಕೆ ಇಡುವನು. ಆಗ ಮಗ ಹುಟ್ಟಿದರೆ ಸಾಕೆಂದು ಹಿಂದು ಮುಂದು ಏನೂ ಯೋಚಿಸದೆ ಹರಿಶ್ಚಂದ್ರ ಒಪ್ಪಿಕೊಳ್ಳುವನು. ಮಗನು ಹುಟ್ಟಿದ ಮೇಲೆ ಮಗನ ಮೇಲಿನ ಮೋಹ ಮತ್ತು ವರುಣನ ಮೇಲಿನ ಭಯದಿಂದಾಗಿ ಹರಿಶ್ಚಂದ್ರ ಮಹಾರಾಜ ಮಗನನ್ನು ಕಾಡಿನಲ್ಲಿ ಅಡಗಿಸಿಡುವನು. ಅಲ್ಲದೆ,

"ಹಿರಿದು ಹುಸಿಗಂಬುಧಿಪತಿ ಮುನಿದು ಮಾಡಿದ ಜಳೋ
ದರವ ಭಾವಿಸದೇ ಕಂಗೆಟ್ಟ ಜಾಡ್ಯಂ ಮಹಾ
ಧ್ವರಕೆ ಪುಶುವಂ ಮಗನ ಮಾಡಲಾಱದೆ ಮೋಹದಿಂದಜೀಗರ್ತಮುನಿಯ
ವರಸುತ ಶುನಶ್ಯೇಫನಂ ತಂದು ಯಾಗ ವಿಧಿ
ಗರಿದು ಬೇಳಲ್ಕೆ ಮನದಂದ ಪಾತಕನು ಭೂ
ವರನೇತಕ್ಕೆ ಹೇಸದೆ ಪೊಗಳ್ವೆಯೆಂದು ವಾಸಿಷ್ಠನಂ ಕೆಡೆ ನುಡಿದನು (೨-೧೯)

ವರುಣದೇವನು ಕೋಪಗೊಂಡುದರ ಪರಿಣಾಮವಾಗಿ ಹರಿಶ್ಚಂದ್ರನು ಜಲೋದರ ರೋಗದಿಂದ ಬಳಲಿ ಜಡತ್ವ ಆವರಿಸುತ್ತದೆ. ಇದರಿಂದ ಭಯಗೊಂಡ ಹರಿಶ್ಚಂದ್ರ ಯಾಗ ಮಾಡಲು ನಿರ್ಧರಿಸಿ, ತನ್ನ

ಮಗನನ್ನು ಯಾಗ ಪಶುವಾಗಿ ಮಾಡದೇ ಅಜೀಗರ್ತ ಮುನಿಯ ಮಗ ಶುನಶ್ಯೇಫನನ್ನು ಬಲಿಕೊಡುವನು.

ಈ ಅಜೀಗರ್ತಮುನಿಗೆ "ಶುನಃಪುಚ್ಛ, ಶುನಶ್ಯೇಪ, ಶುನೋಲಾಂಗೂಲ ಎಂಬ ಮೂವರು ಮಕ್ಕಳಿದ್ದರು. ಅವರಲ್ಲಿ ಒಬ್ಬನನ್ನು ತನಗೆ ಮಾರಬೇಕೆಂದೂ ಪ್ರತಿಯಾಗಿ ತಾನು ನೂರು ಹಸುಗಳನ್ನು ಕೊಂಡುವೆನೆಂದೂ ರೋಹಿತನು ಕೇಳಿದನು. ಹಿರಿಯ ಮಗನನ್ನು ಕೊಡಲು ತಂದೆ ಒಪ್ಪಲಿಲ್ಲ; ಕಿರಿಯ ಮಗನನ್ನು ಕೊಡಲು ತಾಯಿ ಒಪ್ಪಲಿಲ್ಲ. ಉಳಿದವನು ನಿರ್ಭಾಗ್ಯ ಶುನಶ್ಯೇಪ. ಅವನನ್ನು ನೂರು ಹಸುಗಳಿಗೆ ಕೊಂಡು ತಂದು ರೋಹಿತನು ತನ್ನ ಬದಲಾಗಿ ತನ್ನ ತಂದೆಗೆ ಕೊಟ್ಟನು. ವರುಣನೂ ಒಪ್ಪಿಕೊಂಡನು. ಆಗ ನಡೆದ ಯಾಗದಲ್ಲಿ ಶುನಶ್ಯೇಪನೇ ಪಶುವಾದನು. ಈ ಯಾಗದಲ್ಲಿ ವಿಶ್ವಾಮಿತ್ರನು ಹೋತೃವೂ, ಜಮದಗ್ನಿಯು ಅಧ್ವರ್ಯುವೂ, ಆಯಾಸ್ಯನು ಉದ್ಗಾತೃವೂ, ವಸಿಷ್ಠನು ಬ್ರಹ್ಮನೂ ಆಗಿದ್ದರು. ಆದರೆ ಪಶುವಾದ ಶುನಶ್ಯೇಪನನ್ನು ಯೂಪಸ್ತಂಭಕ್ಕೆ ಬಂಧಿಸಲು ಯಾರೂ ಒಪ್ಪಲಿಲ್ಲ. ಆದ್ದರಿಂದ ಅವನನ್ನು ಮಾರಿದ ತಂದೆಯೇ ಇನ್ನೊಂದು ನೂರು ಹಸುಗಳನ್ನು ಕೊಟ್ಟರೆ ತಾನು ಬಂಧಿಸುವುದಾಗಿ ಮುಂದೆ ಬಂದನು. ಅವನನ್ನು ಕೊಲ್ಲುವುದಕ್ಕೂ ಹೀಗೇ ಆಯಿತು. ಮತ್ತೊಂದು ನೂರು ಹಸುಗಳನ್ನು ತೆಗೆದುಕೊಂಡು ಅಜೀಗರ್ತನೇ ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನು ಕೊಲ್ಲುವುದಾಗಿ ಒಪ್ಪಿಕೊಂಡು, ಕತ್ತಿಯನ್ನು ಹರಿತ ಮಾಡಿ ಮುಂದುವರಿದನು. ಆಗ ಶುನಶ್ಯೇಫನು ಪ್ರಜಾಪತಿ, ಅಗ್ನಿ, ಸವಿತೃ, ವರುಣ, ವಿಶ್ವದೇವತೆಗಳು, ಇಂದ್ರ, ಉಷಸ್ಸು – ಈ ದೇವತೆಗಳನ್ನು ಪ್ರಾರ್ಥಿಸಿದನು. ಹೀಗೆ ಸ್ತೋತ್ರ ಮಾಡುತ್ತ ಮಾಡುತ್ತ ಒಂದು ಕಡೆ ಅವನ ಕಟ್ಟುಗಳೂ ಸಡಿಲಿದುವು, ಮತ್ತೊಂದು ಕಡೆ ಹರಿಶ್ಚಂದ್ರನ ಹೊಟ್ಟೆಯೂ ತೆಳ್ಳಗಾಗುತ್ತ ಬಂದು ರೋಗ ವಾಸಿಯಾಯಿತು"(ಹರಿಶ್ಚಂದ್ರ ಕಾವ್ಯ ಸಂಗ್ರಹ, ಪ್ರ.ಸಂ.ಬಿ.ಎಂ. ಶ್ರೀಕಂಠಯ್ಯ, ಪು–xxxviii).

ಮೇಲಿನ ಇಡೀ ಕಥೆ ಐತರೇಯ ಬ್ರಾಹ್ಮಣ; ಪಂಚಿಕಾ ೭, ಅಧ್ಯಾಯ ೩ ರಲ್ಲಿ ಬಂದಿರುವುದು ಹರಿಶ್ಚಂಧ್ರ ಕಾವ್ಯ ಸಂಗ್ರಹದಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಈ ಇಡೀ ಕಥೆಯನ್ನು ಗಮನಿಸಿದಾಗ, ರಾಜ ಪ್ರಭುತ್ವಕ್ಕೆ ತನ್ನ ಜೀವ, ತನ್ನ ವಂಶದ ಕುಡಿಯ ಜೀವವೇ ಮುಖ್ಯವಾಗಿ ಜನಸಾಮಾನ್ಯನ ಬದುಕಿಗೆ ಬೆಲೆಯೇ ಇಲ್ಲ ಎನ್ನುವಂತೆ ಹರಿಶ್ಚಂದ್ರ ಮಹಾರಾಜ ತನ್ನ ಮಗನ ಜೀವಕ್ಕೆ ಬದಲಾಗಿ ಶುನಶ್ಯೇಪನನ್ನು ಬಲಿಕೊಡುವ ಅಮಾನುಷ ಘಟನೆ ಒಂದು ಭಾಗವಾದರೆ, ಶುನಶ್ಯೇಪನನ್ನು ತಂದೆ ಅಜೀಗರ್ತನೆ ತನ್ನ ಆರ್ಥಿಕತೆಯ ಬಲವರ್ಧನೆಗಾಗಿ ಬಲಿ ಕೊಡುವ ಇನ್ನೊಂದು ಭಾಗ ಸಮಾಜದ ದೌರ್ಭಾಗ್ಯವೇ ಸರಿ.

ಅಜೀಗರ್ತ ಮುನಿಯು ಮಗ ಶುನಶ್ಯೇಪನನ್ನು ಬಲಿಕೊಡಲು ತನಗೆ ನೂರು ಹಸುಗಳನ್ನು ಕೊಡಬೇಕೆಂದು ಬೇಡಿಕೆಯಿಡುವನು. ಅಜೀಗರ್ತ ಒಬ್ಬ ಮುನಿಯಾಗಿ ಮಗನ ಜೀವಕ್ಕೆ ಬೆಲೆಯಿಲ್ಲ ಎನ್ನುವ ರೀತಿ ಅವನ ಬದಲಾಗಿ ನೂರು ಹಸುಗಳನ್ನು ಬೇಡುವದು ಮುನಿಯ ಆರ್ಥಿಕ ಸಂಕಷ್ಟವನ್ನು ಸಾಬೀತುಪಡಿಸುತ್ತದೆ. ಬಡತನ ಸಾಮಾನ್ಯನಿಗೆ ಎಂಥದ್ದೇ ಪರಿಸ್ಥಿತಿಯಲ್ಲಿ ತಾನು ಬದುಕುವದನ್ನು ಕಲಿಸುತ್ತದೆ. ಅಜೀಗರ್ತನು ಒಬ್ಬ ಬ್ರಾಹ್ಮಣ ಮುನಿಯಾಗಿದ್ದು ಬ್ರಾಹ್ಮಣ್ಯದ ನಂಬಿಕೆಯಂತೆ ಮರಣಾನಂತರ ತರ್ಪಣ ಬಿಡಲು ಅವನಿಗೆ ಹಿರಿಯ ಮಗ ಮುಖ್ಯನಾಗುತ್ತಾನೆ. ಅಜೀಗರ್ತನ ಹೆಂಡತಿಗೆ ಕಿರಿಯ ಮಗ ಮುಖ್ಯನಾಗುತ್ತಾನೆ. ಕಾರಣ ಯಾವುದೇ ತಾಯಿಗೆ ಕಿರಿಯ ಮಕ್ಕಳ ಮೇಲೆ ಮೋಹ ಜಾಸ್ತಿ. ಹಾಗಾಗಿ ತಂದೆ–ತಾಯಿಗಳಿಬ್ಬರಿಗೂ ಬೇಡವಾದ ಮಗು ಶುನಶ್ಯೇಪ. ಅದಕ್ಕೇ ಮಧ್ಯದ ಹುಡುಗನನ್ನು ಬಲಿಕೊಡಲು ನಿರ್ಧರಿಸುವರು. ಮಧ್ಯದ ಮಗ ಹೇಗಿದ್ದರೂ ಹೊರೆಯಾದ ಮಗುವೆನ್ನುವ ರೀತಿಯಲ್ಲಿ ಅವನ ಜೀವಕ್ಕೆ

ಬೆಲೆ ಕಟ್ಟುವದು ಸೋಜಿಗದ ಸಂಗತಿ. ಮತ್ತೆ ಯಾಗದಲ್ಲಿ ಯಜ್ಞಪಶುವಾದ ಶುನಶ್ಯೇಪನನ್ನು ಯೂಪಸ್ತಂಭಕ್ಕೆ ಕಟ್ಟಲು ಯಾರೂ ಒಪ್ಪದಿದ್ದಾಗ ಮತ್ತೆ ಅಜೀಗರ್ತಮುನಿಯೇ ಮಗನನ್ನು ಕಂಬಕ್ಕೆ ಕಟ್ಟಲು ಮುಂದೆ ಬರುವನು. ಅದೂ ತನಗೆ ಆ ಕಾರ್ಯಕ್ಕೆ ಮತ್ತೆ ನೂರು ಹಸುಗಳನ್ನು ದಾನವಾಗಿ ಕೊಟ್ಟರೆ ಮಾತ್ರವೆಂಬ ಬೇಡಿಕೆ ಇಡುವನು. ಇದು ಅಜೀಗರ್ತಮುನಿಯ ಧನದಾಹಕ್ಕೆ ಸಾಕ್ಷಿ. ಮಗನನ್ನು ಕೊಂದು ಸಂಪಾದಿಸುವ ಮನುಷ್ಯನ ಧನ ದಾಹ ಮಾನವನಲ್ಲಿ ಮೃಗತ್ವಕ್ಕೆ ಹಿಡಿದ ಕೈಗನ್ನಡಿ. ಒಬ್ಬಮುನಿಯಾಗಿ ಅಜೀಗರ್ತನು ತನ್ನ ಉಪಯೋಗಕ್ಕೆ ಒಬ್ಬನು ಸಾಕೆಂದು ಇನ್ನೊಬ್ಬನನ್ನು ಸಂಪತ್ತಿನ ಸಂಪಾದನೆಗಾಗಿ ಯಾವ ಪಾಪ ಪ್ರಜ್ಞೆಯೂ ಇಲ್ಲದೇ ಕೊಲ್ಲಲು ಮುಂದಾಗುವ ಪರಿಸ್ಥಿತಿ ಊಹಿಸಲು ಅಸಾಧ್ಯವಾದ ಬದುಕಿನ ವಿಡಂಬನೆಯೇ ಸರಿ.

ಇನ್ನು ರಾಜನಾದವನಿಗೆ ಸಮಸ್ತ ಪ್ರಜೆಗಳೂ ತನ್ನ ಮಕ್ಕಳಂತೆಯೇ, ಅವರೆಲ್ಲರ ಹಿತ ಕಾಯುವ ಜವಾಬ್ದಾರಿ ರಾಜನದು ಆದರೆ ಹರಿಶ್ಚಂದ್ರ ಮಹಾರಾಜ ಮಗನ ಮೋಹದಲ್ಲಿ ಸಿಲುಕಿ ತನ್ನ ಮಗನಿಗೆ ಬದಲಾಗಿ ಬೇರೊಬ್ಬರ ಮಗನನ್ನು ಬಲಿಕೊಡವದು ರಾಜನ ಸಾರ್ಥಪರತೆಯನ್ನು ಎತ್ತಿ ತೋರಿಸುತ್ತದೆ. ಬಡತನದ ಅಸಹಾಯಕತೆಯಿಂದ ಮಗನನ್ನು ಬಲಿಗೊಡಲು ಮಾರುವಂತಹ ದುರಂತ ಪರಿಸ್ಥಿತಿಯಲ್ಲಿದ್ದಾಗ ರಾಜನಾದವನು ಸಾಧಕ ಬಾಧಕಗಳನ್ನು ಯೋಚಿಸದೆ ತನ್ನ ಮಗನ ಜೀವ ಉಳಿದು ತನ್ನ ಹರಕೆ ಈಡೇರಿದರೆ ಸಾಕು ಎನ್ನುವ ರೀತಿಯಲ್ಲಿದೆ ಹರಿಶ್ಚಂದ್ರ ಮಹಾರಾಜನ ನಡುವಳಿಕೆ. ಹೀಗೆ ರಾಜ ಪ್ರಭುತ್ವ ತನ್ನ ಸ್ವಹಿತದ ಸ್ವಾರ್ಥಕ್ಕಾಗಿ ಸಾಮಾನ್ಯನ ಜೀವವನ್ನು ಬಲಿಕೊಡುವ ಉದಾಹರಣೆಗಳು ಚರಿತ್ರೆಯಲ್ಲಿ ಸಾಕಷ್ಟು ದೊರೆಯುತ್ತವೆ.

ರಾಜಪ್ರಭುತ್ವ ಮತ್ತು ವರ್ಣ ವಿನಯತೆ:

ಹರಿಶ್ಚಂದ್ರ ಮಹಾರಾಜನು ತನ್ನ ಪ್ರಜೆಗಳಿಗೆ ಬಾಧೆಯನ್ನುಂಟು ಮಾಡುತ್ತಿರುವ ಕ್ರೂರ ಪ್ರಾಣಿಗಳ ಬೇಟೆಗಾಗಿ ಅರಣ್ಯಕ್ಕೆ ಹೊರಡುತ್ತಾನೆ. ಹಾಗೆ ಬೇಟೆಯಾಡುತ್ತಾ ಪಂಪಾಕ್ಷೇತ್ರಕ್ಕೆ ಬರುತ್ತಾನೆ. ಪಂಪಾಕ್ಷೇತ್ರಕ್ಕೆ ಬಂದನಂತರ ವಿರೂಪಾಕ್ಷನ ಸನ್ನಿಧಿಗೆ ಹೋಗುವನು. ಅಲ್ಲಿ ಪಂಪಾಂಬಿಕೆಯನ್ನೂ, ವಿರೂಪಾಕ್ಷನನ್ನೂ ವಿಧಿವತ್ತಾಗಿ ಪೂಜಿಸಬೇಕೆಂದು ಸಂಕಲ್ಪ ಮಾಡಿಕೊಂಡು ಪೂಜಾ ಸಾಮಗ್ರಿಗಳೆಲ್ಲವನ್ನೂ ತರಿಸಿದನು. ವಿರೂಪಾಕ್ಷ ದೇವನಿಗೆ ಮಹಾರುದ್ರಾಭಿಷೇಕ, ಅರ್ಚನೆಗಳನ್ನು ಮಾಡಿಸಿ, ಸಕಲ ಮಂಗಳ ವಾದ್ಯಗಳೊಡನೆ ಧೂಪದಾರತಿ ಮಾಡಿ, ನೈವೇದ್ಯ ತೋರಿಸಿ, ಕರ್ಪೂರ ತಾಂಬೂಲವನ್ನು ಕೊಟ್ಟು, ರತ್ನದಾರತಿ ಮಾಡಿದನು.

ನಂತರ ಹರಿಶ್ಚಂದ್ರ ಮಹಾರಾಜನು ಪೂಜೆ ಸಾಂಗವಾಗಿ ನೆರವೇರಿದ್ದರಿಂದ ಸಂತೋಷಗೊಂಡು ಅಲ್ಲಿನ ಬ್ರಾಹ್ಮಣರನ್ನು ಕರೆದು ಸಾಕಷ್ಟು ದಾನಧರ್ಮಗಳನ್ನು ಕೊಟ್ಟು ಅವರಿಗೆ ಹೀಗೆ ಹೇಳುವನು.

ಅಂಗವಂಗಕಳಿಂಗ ದೇಶಂಗಳೊಳು ನಿಮ್ಮ
ಕಂಗೆ ಸೊಗಸುವ ನಾಡ ಬೇಡಿ ನಾನೀವೆನೆನೆ
ತುಂಗಭದ್ರಾ ತೀರಮಂ ಬಿಟ್ಟು ಭೂಪ ನಾವೆಲ್ಲಿಗಂ ಬಾರೆವೆನಲು
ಗಂಗೆಯಿತ್ತಡಿಯ ಕರದ ಗ್ರಾಮ ವಿರೂಪಾಕ್ಷ
ಲಿಂಗ ಭೋಗಕ್ಕೆಂದು ಧಾರೆ ಶಾಸನವ ನೃಪ
ಪುಂಗವ ಹರಿಶ್ಚಂದ್ರ ರಾಯನೊಲಿದಿತ್ತು ವಿಪ್ರರಿಗೆ ಮತ್ತಿಂತೆಂದನು

ಗುರು ವಿರೂಪಾಕ್ಷ ಸನ್ನಿಧಿಯೊಳೆನ್ನಂ ನೀವು
ಹರಸುವುದು ಶಿವ ಪೂಜೆಯಂ ಮಾಡಿಯಘವ ಸಂ
ಹರಿಸುವುದುಯೆಂದವರ್ಗೆಕೈಮುಗಿದು ಸುಖದಿಂ ಪ್ರಸಾದ ಪಾದೋದಕವನು
ಧರಿಸಿಯಾಲಿಂಗಕ್ಕೆ ಮತ್ತೆ ಮತ್ತೆಜಿಗಿಯಾ
ಪರಿತುಷ್ಟನಹ ನೃಪಗೆ ಮಂತ್ರಾಕ್ಷತೆಯನಿತ್ತು
ಖರಕರಕುಲದ ರಾಜವನದಿ ವರ್ಧನ ಸುಧಾಕರನನಾ ಘೋಷಿಸಿದರು

(೫-೪೧,೮೨)

ತಾನಾಳುವ ಅಂಗ ವಂಗಕಳಿಂಗ ದೇಶಗಳಲ್ಲಿ ತಮಗೆ ಯಾವುದು ಬೇಕೋ ಆ ನಾಡನ್ನು ಬೇಡಿ, ಕೊಡುವೆನು ಎಂದು ಪಂಪಾಕ್ಷೇತ್ರದ ಬ್ರಾಹ್ಮಣರಿಗೆ ಹರಿಶ್ಚಂದ್ರ ಮಹಾರಾಜ ಹೇಳುವನು. ಅದಕ್ಕೆ ಆ ಬ್ರಾಹ್ಮಣರು ತಾವು ತುಂಗಭದ್ರಾ ತೀರವನ್ನು ಬಿಟ್ಟು ನಾವೆಲ್ಲಿಗೂ ಬರುವದಿಲ್ಲವೆನಲು ನದೀ ತಟದ ಒಂದು ಗ್ರಾಮವನ್ನು ವಿರೂಪಾಕ್ಷನ ಸೇವಾ ಕೈಂಕರ್ಯಕ್ಕೆಂದು ದಾನ ಕೊಡುವನು. ಆ ದಾನಕ್ಕೆ ಪ್ರತಿಯಾಗಿ ವಿರೂಪಾಕ್ಷನ ಸನ್ನಿಧಿಯಲ್ಲಿ ಬ್ರಾಹ್ಮಣರು ತನ್ನನ್ನು ಹರಸುವಂತೆ ರಾಜ ಹರಿಶ್ಚಂದ್ರ ಬ್ರಾಹ್ಮಣರನ್ನು ಕೇಳಿಕೊಳ್ಳುವನು. ನಿತ್ಯ ವಿರೂಪಾಕ್ಷನಿಗೆ ಪೂಜೆಯನ್ನು ಮಾಡುವುದು, ಆ ಮೂಲಕ ತನ್ನ ಪಾತಕವನ್ನು ನೀಗಿಸಬೇಕೆಂದು ಆ ಬ್ರಾಹ್ಮಣರಲ್ಲಿ ವಿನಂತಿಸಿಕೊಳ್ಳುವನು.

ರಾಜನೊಬ್ಬ ವರ್ಣವ್ಯವಸ್ಥೆಯಲ್ಲಿ ಎಷ್ಟು ವಿನಮ್ರತೆಯಿಂದ ವರ್ತಿಸುತ್ತಾನೆಂಬುದನ್ನು ಈ ಪ್ರಸಂಗ ತಿಳಿಸುತ್ತದೆ.

ವರ್ಣವ್ಯವಸ್ಥೆ ಸಮಾಜ ನಿರ್ಮಿತ ಸಾಮಾಜಿಕ ವ್ಯವಸ್ಥೆ. ರಾಜನೂ ಸಹ ಈ ಸಾಮಾಜಿಕ ವ್ಯವಸ್ಥೆಗೆ ಬದ್ಧನಾಗಿರುವದು ವರ್ಣವ್ಯವಸ್ಥೆಯ ಬಿಗಿ ಬಂಧತೆಯನ್ನು ತೆರೆದು ತೋರಿಸುತ್ತದೆ. ಸಾಮಾಜಿಕವಾಗಿ ರಾಜ ಅತ್ಯುನ್ನತ ಮಟ್ಟದಲ್ಲಿರುವ ಪ್ರತಿಷ್ಠಿತ ವ್ಯಕ್ತಿ. ಆದರೆ ವರ್ಣವ್ಯವಸ್ಥೆಯ ಏಣಿ ಶ್ರೇಣಿಯಲ್ಲಿ ಬ್ರಾಹ್ಮಣ ಉನ್ನತ ಮಟ್ಟದಲ್ಲಿರುತ್ತಾನೆ. ಕ್ಷತ್ರಿಯ ಎರಡನೆಯ ಸ್ಥಾನದಲ್ಲಿರುತ್ತಾನೆ. ಇದೇ ಕಾರಣಕ್ಕೆ ರಾಜ ಕ್ಷತ್ರಿಯನಾಗಿರುವದಕ್ಕಾಗಿ ಅವನು ಉನ್ನತ ವರ್ಣದ ಬ್ರಾಹ್ಮಣನನ್ನು ಅತ್ಯಂತ ವಿನಯಪೂರ್ವಕವಾಗಿ ಗೌರವಿಸುವನು. ವರ್ಣವ್ಯವಸ್ಥೆಯ ಏಣಿಶ್ರೇಣಿಗೆ ಪರ್ಯಾಯವಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ಏಣಿಶ್ರೇಣಿಯ ಎರಡನೆಯ ಸ್ಥಾನದಲ್ಲಿ ಬರುವ ಕ್ಷತ್ರಿಯ ರಾಜನಾಗಿ 'ಅಸಾಮಾನ್ಯ ಮಟ್ಟಕ್ಕೆ ಏರಿದರೆ, ಉನ್ನತ ಶ್ರೇಣಿಯಲ್ಲಿರುವ ಬ್ರಾಹ್ಮಣ ಸಾಮಾನ್ಯ ನೆಲೆಯಲ್ಲೇ ಉಳಿಯುವದು ವರ್ಣ ವ್ಯವಸ್ಥೆಯಲ್ಲಿನ ಸೋಜಿಗದ ಸಂಗತಿ.

ರಾಜ ಪ್ರಭುತ್ವ ಮತ್ತು ಬೇಟೆ:

ಜನ ಸಾಮಾನ್ಯರಿಗೆ ಕಿರುಕುಳ ಕೊಡುತ್ತಿದ್ದ ಕ್ರೂರ ಪ್ರಾಣಿಗಳ ಬೇಟೆಗಾಗಿ ರಾಜ ಅರಣ್ಯಕ್ಕೆ ಹೋಗುವನು. ಅಲ್ಲಿ ಕ್ರೂರ ಪ್ರಾಣಿಗಳನ್ನೆಲ್ಲ ಸಂಹಾರ ಮಾಡುವನು. ಕಾಡಿನ ಇನ್ನೊಂದು ಬದಿಯಲ್ಲಿ ಹಂದಿಯೊಂದು ಅತಿ ಕೆಟ್ಟ ರೀತಿಯಲ್ಲಿ ಪ್ರಾಣಿ, ಬೇಡರ ಮೇಲೆ ಹಲ್ಲೆ ಮಾಡಿತು. ಆ ವರಾಹವು ಬೇಡಪಡೆಯನ್ನು ಆಕ್ರಮಿಸಿದ ಪರಿಯನ್ನು ನೋಡಿ ಗಾಬರಿಗೊಂಡ ಬೇಡರು ಓಡತೊಡಗಿದರು. ಅವರಲ್ಲೊಬ್ಬ ಕಾಡಿನಲ್ಲಿ ಬೇಟೆಯಾಡುತ್ತ ಬರುತ್ತಿದ್ದ ಹರಿಶ್ಚಂದ್ರ ರಾಜನಿಗೆ ಎದುರಾಗುತ್ತಾನೆ. ಗಾಬರಿಯಿಂದ ಓಡುತ್ತಿದ್ದ ವ್ಯಾಧನನ್ನು ತಡೆದು ರಾಜ ಕಾರಣ ಕೇಳಲಾಗಿ ಅವನು ಹೀಗೆ ಹೇಳುವನು.

ಮುನ್ನಬೇಂಟೆಯ ಜೋಕೆಯಱಿದ ಬೇಡರು ಮಡಿದ
ರುನ್ನತದಾನಾಯ ಕುನ್ನಿಗಳಲ್ಲಿ ಸೈಗೆಡದು
ವಿನ್ನೇನೆನುತ್ತ ಹೇವರಿಸಿ ಮೂದಲಿಸಿ ತಮ್ಮೊಳಗೆ ಕೈವೊಯ್ದು ಹರಿದು
ಬೆನ್ನಡಗನಗಿ ಬಸುಱ ಬಗಿ ಕರುಳನುಗಿ ಕೆಡಹು
ತಿನ್ನು ತಿದಿಗಳೆ ಮೊಳೆಯಂ ಮುಱಿಯೆನುತ್ತಹೆ
ಗ್ಗುನ್ನಿಗಳ ತಲೆದಡವಿ ಹಾಸಮಂ ತಿವಿದು ಕವಿದರು ಬೇಡರೆಣ್ದೆಸೆಯೊಳು
(೬-೨೪)

ಹೀಗೆ ತಮ್ಮ ಶಬರ ಸೇನೆಯನ್ನು ಕೊಂದ, ತಮ್ಮ ಬೇಟೆ ನಾಯಿಗಳನ್ನು ಸಾಯಿಸಿದ ಹಂದಿ ಆ ಬೇಡನಿಗೆ ಸಾಮಾನ್ಯ ಹಂದಿಯಂತೆ ಕಾಣಿಸದೆ ಹಿರಣ್ಯಾಕ್ಷನನ್ನು ಸಂಹರಿಸಿದ ಆದಿ ವರಾಹ, ಪುರಹರನು ಮುರಿದ ಸೊಂಡಲಿನ ಗಜಾಸುರ, ದುರ್ಗಿಯ ನಿರ್ಘಾತದಿಂದ ಕೊಂಬು ಕಳೆದಿರುವ ಮಹಿಷಾಸುರನಂತೆ ದೈತ್ಯ ಶಕ್ತಿ ಹೊಂದಿದ ವರಾಹವೇ ಇದೆಂದು ನಂಬುವನು. ಹರಿಶ್ಚಂದ್ರ ಮಹರಾಜ ನೋಡ ನೋಡುತ್ತಿದ್ದಂತೆ ಆ ವರಾಹ ಬೇಡನನ್ನು ಕೊಂದಿಕ್ಕಿತು. ಅದನ್ನು ನೋಡಿ ಹರಿಶ್ಚಂದ್ರ ಆ ಹಂದಿಯನ್ನು ಸದೆಬಡಿಯುವ ನಿರ್ಧಾರ ಮಾಡುವನು.

ಇದ್ದ ಬೇಡರನೆಯ್ದೆ ಕೆಡಹಿದಡೆ ರಥದ ಮೇ
ಲಿದ್ದು ಕೋಪಾಟೋಪದಿಂದ ಕರತಳವ ಮಾ
ಉದ್ದುಕೋದಂಡಮಂಸೆಳೆದು ಶರಮೂಡಿಗೆಯ ಮಡಲಿಱಿದು ಕೈ ಹೊಡೆಯನು
ತಿದ್ದಿ ನಾರಿಯ ನೀವಿ ಮಿಡಿದು ಬಾಗಿದ ಕೊಪ್ಪಿ
ನಿದ್ದೆಸೆಯನಾರೈದು ನೆಱಿ ಮೃತ್ಯು ದೇವತೆಗೆ
ಬಿದ್ದನಿಕ್ಕುವೆನೆಂದು ಭೂವಲ್ಲಭಂ ನುಡಿಯೆ ದಿಗುಪಾಲರಳವಳಿದರು (೬-೨೮)

ಹಂದಿಯ ಮೇಲೆ ಕೋಪಗೊಂಡ ಹರಿಶ್ಚಂದ್ರನು ಆ ವರಾಹವನ್ನು ಮೃತ್ಯುದೇವತೆಗೆ ಬಲಿಕೊಡುವ ಹಾಗೆ ಬಾಣ ಅದರ ಕರುಳಲ್ಲಿ ನಾಟಿ ಅದು ನರಳುತ್ತ ಕಾಡು ಸೇರಿತು.

ರಾಜನೊಬ್ಬನಿಗೆ ತನ್ನ ಪ್ರಜೆಗಳೆಂದರೆ ಮಕ್ಕಳಿದ್ದಂತೆ. ಅವರಿಗೆ ಯಾರಿಂದಲೇ ಆಗಲಿ ಕಿಂಚಿತ್ ತೊಂದರೆಯಾದರೂ ಸಹಿಸುವದು ಸಾಧ್ಯವಾಗುವದಿಲ್ಲ, ಅಂಥ ಅವಿನಾಭಾವ ಸಂಬಂಧ ರಾಜ ಮತ್ತು ಪ್ರಜೆಗಳದು. ಬೇಟೆಗಾರರಿಗೆ ನಾಡಿನ ಸಂಪರ್ಕವೇ ಕಡಿಮೆ. ಹಾಗೆಂದು ರಾಜ ತನ್ನ ನಾಡಿನ ಬೇಟೆಗಾರರನ್ನು ಅಲಕ್ಷಿಸುವದಿಲ್ಲ. ಅವರ ಬದುಕು ಯಾವಾಗೆಲ್ಲ ದುರ್ಭರಗೊಳ್ಳುವದೋ ಆಗೆಲ್ಲ ಅವರು ತಮ್ಮನ್ನಾಳುವ ದೊರೆಯನ್ನೇ ಮೊರೆ ಹೋಗುವದು ಸಹಜ. ಆಗೆಲ್ಲ ರಾಜ ತನ್ನ ಶಕ್ತಿಪ್ರದರ್ಶಿಸಿ ಅವರ ಸಂಕಟ ದೂರಗೊಳಿಸುವನು. ಇದೇ ಕಾರಣಕ್ಕೆ ರಾಜಪ್ರಭುತ್ವದ ಕಾಲದಲ್ಲಿ ಸಾಮಾನ್ಯನು ಅಸಹಾಯಕನಾದಾಗ, ದುರ್ಬಲನಾದಾಗ ಅವರ ಕಣ್ಣಲ್ಲಿ ಕಾಣುವ ಕೊನೆ ಆಸೆಯೆಂದರೆ ರಾಜನೇ. ತಮ್ಮ

ಎಂಥ ಕಷ್ಟಕ್ಕೂ ರಾಜ ಉತ್ತರ ನೀಡಬಲ್ಲನೆಂಬ ನಂಬಿಕೆ ರಾಜ ಮತ್ತು ಸಾಮಾನ್ಯನ ಮಧ್ಯದಲ್ಲಿರುತ್ತದೆ. ಇದು ನಿರಂತರವಾಗಿ ಇದ್ದುದರಿಂದಲೇ ರಾಜ ಮತ್ತು ಸಾಮಾನ್ಯ ಇಬ್ಬರೂ ಒಬ್ಬರಿಗೊಬ್ಬರು ಪೂರಕವೂ ಹೌದು, ಪುಷ್ಟಿದಾಯಕವೂ ಹೌದು.

ರಾಜ ಮತ್ತು ದರ್ಪ:

ಹರಿಶ್ಚಂದ್ರ ಮಹಾರಾಜನ ಆಸ್ಥಾನಕ್ಕೆ ಮಾಯಾಂಗನೆಯರ ರೀತಿಯಲ್ಲಿ ಹೊಲತಿಯರಿಬ್ಬರು ಪ್ರವೇಶಿಸುತ್ತಾರೆ. ಹರಿಶ್ಚಂದ್ರ ಮಹಾರಾಜನನ್ನು ನೋಡಿ ಹೊಗಳಿ ಹಾಡಲಾರಂಭಿಸುತ್ತಾರೆ. ತಾಳ ಲಯಬದ್ಧವಾದ ಅವರ ಸಂಗೀತ ಮನತಣಿಯುವಂತಿತ್ತು. ಅವರ ಇಂಪಾದ ಹಾಡಿನಿಂದ ಸಂತೋಷಗೊಂಡ ರಾಜ ಅದುವರೆಗಿನ ತನ್ನ ಆಯಾಸ, ನೋವುಗಳನ್ನು ಮರೆತನು. ಅತ್ಯಂತ ಪ್ರೀತಿಯಿಂದ ಗಾನರಾಣಿಯರಂತಿದ್ದ ಹೊಲತಿಯರ ಹಾಡನ್ನು ಮೆಚ್ಚಿ ಸಂತೋಷ ಸಂತೃಪ್ತಿಗಳನ್ನು ಅನುಭವಿಸಿ ಅದಕ್ಕೆ ಪ್ರತಿಫಲವಾಗಿ ರಾಜ ಆ ಹೊಲತಿಯರಿಗೆ ತನ್ನ ಆಭರಣಗಳನ್ನು ಪಾರಿತೋಷಕವಾಗಿ ಕೊಟ್ಟನು. ಅಷ್ಟಕ್ಕೆ ತೃಪ್ತರಾಗದ ಹೊಲತಿಯರು ರಾಜನ ಮುತ್ತಿನ ಸತ್ತಿಗೆಯನ್ನೇ ಕೇಳುತ್ತಾರೆ. ರಾಜ ಅದನ್ನು ಕೊಡಲಾಗದುದಕ್ಕೆ ಕಾರಣವನ್ನು ಹೀಗೆ ಹೇಳುವನು.

ರವಿಕುಲದ ಪೀಳಿಗೆಯೊಳೊಗೆದ ರಾಯರ್ಗೆ ಪ
ಟ್ಟವ ಕಟ್ಟುವಂದಿದಿಲ್ಲದೊಡರಸುತನ ಸಲ್ಲ
ದವನಿಯೊಳು ಯುದ್ಧರಂಗದೊಳಿದಂ ಕಂಡ ಹಗೆಗಳು ನಿಲ್ಲರಿದಱ ಕೆಳಗೆ
ಕವಿವ ನೆಳಲೊಳಗಾವನಿರ್ದನಾತಂಗೆ ತಾಂ
ತವಿಲೆಡರು ಬಡತನ ನಿರೋಧವಪಕೀರ್ತಿ ಪರಿ
ಭವಭಯಂ ಹರಿವುದಿದನಱಿದಱಿದು ಸತ್ತಿಗೆಯ ಕೊಡಬಹುದೆ ಹೇಳೆಂದನು

(೭-೧೦)

ಈ ಮುತ್ತಿಗೆ ಸತ್ತಿಗೆಯಿಲ್ಲದೆ ಅರಸುತನವಿಲ್ಲ ಯುದ್ಧ ಭೂಮಿಯಲ್ಲಿ ವೈರಿಗಳನ್ನು ಓಡಿಸುವ ಶಕ್ತಿ ಇದಕ್ಕಿದೆ. ಈ ಶ್ವೇತಛತ್ರ ರಾಜನ ಹತ್ತಿರವಿದ್ದರೆ ಬಡತನ, ಅಪಕೀರ್ತಿ, ಅಪಜಯಗಳು ಹತ್ತಿರ ಸುಳಿಯಲಾರವು. ಅಂಥದನ್ನು ಯಾರ್ಯಾರೋ ಬೇಡಿದರೆ ಕೊಡುವದು ಹೇಗೆ? ಸಾಧ್ಯವಿಲ್ಲ ಎಂದು ಹೇಳುತ್ತಾನೆ. ಹರಿಶ್ಚಂದ್ರ ಎಷ್ಟೇ ಹೇಳಿದರೂ ಆ ಹೊಲತಿಯರು ಮುತ್ತಿನ ಸತ್ತಿಗೆ ಕೊಡು ಎಂದೇ ವಾದಿಸುತ್ತಾರೆ. ಆಗುವುದಿಲ್ಲವೆಂದಾಗ ಹಾಗಾದರೆ ತಮ್ಮನ್ನು ಮದುವೆಯಾಗೆಂಬ ಬೇಡಿಕೆಯನ್ನು ಹೊಲತಿಯರು ರಾಜನಿಗೆ ಇಡುತ್ತಾರೆ. ಹೊಲತಿಯರ ಈ ಬೇಡಿಕೆಯನ್ನು ಕೇಳಿದ ರಾಜನಿಗೆ ಕೋಪ ಉಕ್ಕುತ್ತದೆ.

ಹೊಲತಿಯರು ಬಂದಾವು ಸತಿಯರಾದಪೆವೆಂ
ಬುಲಿಹವೆಂಬುದು ಬಂದ ಕಾಲ ಗುಣವೋ ನಿಂದ
ನೆಲದ ಗುಣವೋ ನೋಡು ನೋಡೆಂದು ಕಡುಮುಳಿದು
ಕೋಪಿಸಿದವನೀಶನು(೭-೧೬)

ಹೊಲತಿಯರು ತನ್ನೊಂದಿಗೆ ಮದುವೆಯ ಮಾತನಾಡಿದ್ದು ರಾಜನಿಗೆ ಇರುಸುಮುರುಸು ಉಂಟು ಮಾಡುತ್ತದೆ. ಇದು ಕಾಲ ಬದಲಾದ ಸಂಕೇತವೋ, ನಿಂತ ನೆಲದ ಗುಣವೋ ಎಂದು ಅವರ ಬೇಡಿಕೆಗೆ ರಾಜ ಕೋಪದಿಂದ ಆಶ್ಚರ್ಯ ವ್ಯಕ್ತಪಡಿಸುವನು. ಉತ್ತಮರು ಕೆಳಜಾತಿಯ ಹೆಂಗಸರನ್ನು ನೋಡಬಾರದು. ನೋಡಿದರೂ ಅವರೊಂದಿಗೆ ಮಾತನ್ನಾಡಬಾರದು. ಯಾವುದೇ ಕಾರಣಕ್ಕಾಗಿ ಮಾತನಾಡಿದರೂ ಮನ್ನಿಸಬಾರದು. ಮನ್ನಿಸಿದರೂ ಕರೆದು ಏನನ್ನೂ ಕೊಡಬಾರದು. ಆದಾಗ್ಯೂ ಮನ್ನಿಸಿ ಪಾರಿತೋಷಕವನ್ನು ಕೊಡಲಾಗಿದ್ದರೂ ಹೊಲತಿಯರು ಮುತ್ತಿನ ಸತ್ತಿಗೆ ಕೊಡು ಇಲ್ಲವೆ ತಮ್ಮನ್ನು ಮದುವೆಯಾಗೆಂಬ ಅವರ ಒತ್ತಾಯಕ್ಕೆ ಕೋಪಗೊಳ್ಳುವನು. ರಾಜ ತಮ್ಮನ್ನು ಮದುವೆಯಾಗಬೇಕು ಇಲ್ಲದಿದ್ದರೆ ತಾವು ರಾಜನನ್ನು ಬಿಡದೆ ಹಿಂಬಾಲಿಸುವುದಾಗಿ ಎಚ್ಚರಿಸುತ್ತಾರೆ. ಅದಕ್ಕೆ ಕೋಪಗೊಂಡ ರಾಜ ರೊಚ್ಚಿಗೆದ್ದು ಹೀಗಳೆಯುತ್ತಾನೆ.

ಬಳಿವಿಡಿದು ಬಂದು ಮಾಡುವುದೇನು ನಮ್ಮಬೆಂ
ಬಳಿಯಲೆನಿಬರು ಹೊಲೆಯರಿಲ್ಲೆಂದಡಹಗೆ ಬಿಡೆ
ವೆಳಸಿ ಮಚ್ಚಿಸಿ ಮರುಳ್ಗೊಳಿಸಿ ಮತ್ತೊಲ್ಲನವನಿಪನೆಂದು ಮೊಱೆಯಿಡುತ್ತ
ಇಳೆಯೊಳಗೆ ಸಾಱುತ್ತದೂಱುತ್ತ ಬಪ್ಪವೆನೆ
ಮುಳಿದು ಘುಡುಘಡಿಸಿ ಕೋಪಾಟೋಪದಿಂದ ಹಲ್ಲ
ಕಳೆಬಾಯ ಹರಿಯಹೊಯ್ ಹೊಡೆಹೊಡೆಯೆನುತ್ತಿದ್ದನುರವಣಿಸಿಭೂನಾಥನು

(೭-೨೪)

ಇಷ್ಟೊತ್ತಿನವರೆಗೂ ಸಹಿಸಿಕೊಂಡ ಹರಿಶ್ಚಂದ್ರ ಮಹಾರಾಜನ ತಾಳ್ಮೆಯ ಕಟ್ಟೆಯೊಡೆಯುತ್ತದೆ. ಚಾವಟಿಯನ್ನು ತೆಗೆದುಕೊಂಡು ಸಿಟ್ಟಿನಿಂದ ಮೇಲೆದ್ದನು. ರಾಜನೊಂದಿಗೆ ಮಂತ್ರಿಯೂ ಇನ್ನೊಂದು ಚಾವಟಿಯನ್ನು ತೆಗೆದುಕೊಂಡು ಇಬ್ಬರೂ ಸೇರಿ ಆ ಇಬ್ಬರೂ ಹೊಲತಿಯರನ್ನು ಚೆನ್ನಾಗಿ ಥಳಿಸುತ್ತಾರೆ.

ಈ ಇಡೀ ವೃತ್ತಾಂತದಲ್ಲಿ ಹೊಲೆಯರ ಕುರಿತಾದ ರಾಜನ ಅಭಿಪ್ರಾಯ ಮತ್ತು ಹೊಲತಿಯರ ಮೊಂಡುತನಗಳು ಗಮನ ಸೆಳೆಯುತ್ತವೆ. ಹೊಲತಿಯರು ತಮ್ಮ ಕಲೆಗೆ ಮೀರಿದ ಸಮಂಜಸವಲ್ಲದ ಬೇಡಿಕೆಯನ್ನು ಇಡುವುದು ಅತಿಯೆನಿಸುತ್ತದೆ. ಆದರೆ ಗಮನಿಸಬೇಕಾದ ಒಂದು ಮುಖ್ಯ ಅಂಶವೆಂದರೆ ಈ ಹೊಲತಿಯರಿಗೆ ತಾವು ಹೊಲತಿಯರೆನ್ನುವ ಬಗ್ಗೆ ಯಾವ ಕೀಳರಿಮೆಯೂ ಇಲ್ಲ. ತಮ್ಮ ಹೊಲೆತನವನ್ನು ಇವರು ಮತ್ತೆ ಮತ್ತೆ ಸಮರ್ಥಿಸಿಕೊಳ್ಳುವ ರೀತಿ ಬೆರಗುಗೊಳಿಸುತ್ತದೆ. ಹೀಗೆ ಕೀಳರಿಮೆ ಇಲ್ಲದ ಹೊಲೆತನದ ಕುರಿತಾದ ಸಮರ್ಥನೆ ಸಾಧ್ಯವಾದದ್ದು ಬಹುಶಃ ಈ ಹೊಲತಿಯರು ಮುನಿಯ ಸೃಷ್ಟಿಯಾಗಿದ್ದ ಮಾತ್ರಕ್ಕೆ. ಇಲ್ಲದಿದ್ದರೆ ವಾಸ್ತವದ ಅಸ್ಪೃಶ್ಯ, ಶೂದ್ರರಂತಹ ಸಾಮಾನ್ಯರ ಬದುಕು ಸಮಾಜದ ತಾರತಮ್ಯ ರೀತಿಯನ್ನು ನೋಡಿ ರೋಸಿಹೋಗಿ ಕೀಳರಿಮೆಯನ್ನು ಬೆಳೆಸಿಕೊಳ್ಳುವಂತೆ ಒತ್ತಾಯಿಸುತ್ತದೆ. ಈ ಹೊಲತಿಯರು ವಿಶ್ವಾಮಿತ್ರನ ಸೃಷ್ಟಿ ಮತ್ತು ಬೆನ್ನೆಲುಬಾಗಿ ವಿಶ್ವಾಮಿತ್ರನಂತಹ ಮುನಿ ಇರುವುದರಿಂದಲೇ ರಾಜನೆದುರಲ್ಲಿ ನಿಂತು ಅವರಿಗೆ ಇಷ್ಟೆಲ್ಲ ಮಾತನಾಡುವದು ಸಾಧ್ಯವಾಗುತ್ತದೆ. ಉಳಿದಂತೆ ರಾಜಪ್ರಭುತ್ವದ ಕಾಲದಲ್ಲಿ ಅಸ್ಪೃಶ್ಯ, ಶೂದ್ರರಂತಹ ಸಾಮಾನ್ಯ ಸಾಮಾಜಿಕರಿಗೆ ರಾಜನೆದುರು ನಿಂತು ಇಷ್ಟು ದಾರ್ಷ್ಟ್ಯದಿಂದ ಮಾತನಾಡುವದು ದೂರ, ರಾಜನ ಹತ್ತಿರ ಸುಳಿಯಲೂ ಸಾಧ್ಯವಾಗದ ಪರಿಸ್ಥಿತಿ ಇತ್ತು.

ಇನ್ನು ಹರಿಶ್ಚಂದ್ರ ಮಹಾರಾಜ ವರ್ಣವ್ಯವಸ್ಥೆಯ ಪ್ರತಿನಿಧಿಯಂತಿದ್ದು, ಹೊಲೆಯರಿಗೆ ಎಲ್ಲರೊಂದಿಗೆ ಬದುಕುವ ಹಕ್ಕಿಲ್ಲ ಎಂಬ ಸಮಾಜದ ಒಪ್ಪಿತ ನಂಬಿಕೆಯನ್ನು ಸಾಕ್ಷೀಕರಿಸುತ್ತಾನೆ. ವರ್ಣವ್ಯವಸ್ಥೆಯಲ್ಲಿ ಹೊಲೆಯರ ಬದುಕನ್ನು ತುಂಬ ನಿಕೃಷ್ಟವಾಗಿ ಕಾಣಲಾಗುತ್ತದೆ. ಶೂದ್ರ, ಅಸ್ಪೃಶ್ಯರೂ ತನ್ನ ಪ್ರಜೆಗಳೇ. ಅವರನ್ನು ಉಳಿದವರಷ್ಟೇ ಆದರದಿಂದ ಕಾಣುವ ಜವಾಬ್ದಾರಿ ರಾಜನದಾಗಿರುತ್ತದೆ. ಆದರೆ ರಾಜ ಹರಿಶ್ಚಂದ್ರ ಹೊಲತಿಯರನ್ನು ಮನ್ನಿಸದೇ ಅವರನ್ನು ಅಮಾನುಷ ರೀತಿಯಲ್ಲಿ ಥಳಿಸುವನು. ಅದನ್ನು ರಾಘವಾಂಕ ಹೀಗೆ ಹೇಳುವನು.

ದುಡುಕಿ ಚಮ್ಮಟಿಗೆಯಂ ಸೆಳೆದು ಪ್ರಧಾನ ಬಳಿ
ವಿಡಿದೇಳಲೊಬ್ಬರೊಬ್ಬರನು ಬೆನ್ನೊಡೆಯೆ ಮುಡಿ
ಹುಡಿಯೊಳಗೆ ಹೊರಳೆ ಹಲುಬೀಳೆ ಬಾಯೊಡೆಯೆ ಮೆಯ್
ನೋಯೆ ಕೈಯ್ಯುಳುಕೆ
ನಡೆದಲ್ಲಿ ನಡೆದು ಹೊಕ್ಕಲ್ಲಿ ಹೊಕ್ಕೋಡಿ ಹೋ
ದೆಡೆಗೆ ಬೆನ್ನಟ್ಟಿ ರುಧಿರಂ ಬಸಿಯೆ ಹೊಯ್ದು ಹೊಗ
ರುಡುಗಲರಸಂ ತಿರುಗಲತ್ತಲವರೊಜಿಲುತ್ತ ಹರಿದರಾ ಮುನಿಪನೆಡೆಗೆ (೭-೨೫)

ರಾಜನಾಗಿ ಹೆಣ್ಣಿನ ಮೇಲೆ ಕೈ ಮಾಡುವದು, ಅಮಾನಷವಾಗಿ ನಡೆದುಕೊಳ್ಳುವದು ಮಾನವೀಯತೆಯಲ್ಲ. ಹೊಲತಿಯರ ಪ್ರಸಂಗದಲ್ಲಿ ಹರಿಶ್ಚಂದ್ರ ಮಹಾರಾಜ ಹೊಲೆಯರನ್ನು ಕುರಿತು ತುಂಬ ಕೀಳಾಗಿ ಮಾತನಾಡುತ್ತಾನೆ. ಹರಿಶ್ಚಂದ್ರನ ಬಾಯಲ್ಲಿ ಬರುವ ಹೊಲೆಯರ ಕುರಿತಾದ ಈ ಮಾತುಗಳು ಅವತ್ತಿನ ಸಮಾಜದ ಒಟ್ಟು ಅಭಿಪ್ರಾಯವೇ ಆಗಿದೆ. ರಾಜನೂ ಸಹ ವರ್ಣವ್ಯವಸ್ಥೆಯ ಒಂದು ಭಾಗವೇ ಆಗುವ ಮೂಲಕ, ಸಮಾಜದ ಅಂಗವಾಗುತ್ತಾನೆ.

ರಾಜ ಮತ್ತು ಪ್ರಜೆಗಳ ಅನ್ಯೋನ್ಯ ಸಂಬಂಧ:

ರಾಜನೆಂದರೆ ಪ್ರಜೆಗಳಿಗೆ ಒಂದು ಶಕ್ತಿಯಾದರೆ. ರಾಜನಿಗೆ ಪ್ರಜೆಗಳೇ ಶಕ್ತಿಕೇಂದ್ರ. ಅಂಥದೊಂದು ಕಳ್ಳುಬಳ್ಳಿಯ ಅನ್ಯೋನ್ಯ ಸಂಬಂಧ ರಾಜ ಮತ್ತು ಪ್ರಜೆಗಳ ಮಧ್ಯದ್ದು. ರಾಜ ಪ್ರಜಾ ರಕ್ಷಕನಾಗಿದ್ದರೆ ಪ್ರಜೆಗಳು ರಾಜನನ್ನು ತಮ್ಮ ದೇವರಾಗಿ ಕಾಣುವರು.

ರಾಜಾ ಹರಿಶ್ಚಂದ್ರ ವಿಶ್ವಾಮಿತ್ರ ಮುನಿಗೆ ತನ್ನ ಸಕಲ ರಾಜ ಸಂಪತ್ತು, ರಾಜ್ಯಾಧಿಕಾರವನ್ನೂ ಕೊಟ್ಟು ತಾನು ಬರಿಗೈ ಫಕೀರನಾಗಿ ನಿಲ್ಲುವನು. ವಿಶ್ವಾಮಿತ್ರನ ಈ ಯಾವ ಮೋಸದಾಟವನ್ನೂ ಅರಿಯದ ಅಯೋಧ್ಯಾ ನಗರದ ಸಾಮಾನ್ಯರು ತಮ್ಮ ರಾಜನ ಬರುವಿಕೆಯನ್ನೇ ಎದುರು ನೋಡುತ್ತಿದ್ದರು. ಅಂತೆಯೇ ರಾಜಧಾನಿಯು ಸಮೀಪಿಸಿದಂತೆ ಸೈನಿಕರ ವಾದ್ಯಘೋಷಗಳು ಮೊಳಗಲು, ಅಯೋಧ್ಯಾ ನಗರದ ಜನತೆ ತಮ್ಮ ರಾಜನೇ ಬರುತ್ತಿರುವನೆಂದು ಸಂಭ್ರಮೋತ್ಸಾಹದಿಂದ ಮನೆ ಮನೆಗಳನ್ನೂ, ಕೇರಿಕೇರಿಗಳನ್ನೂ ಸಿಂಗರಿಸಿ ಅವನನ್ನು ಎದುರುಗೊಳ್ಳಲು ತಂಡೋಪ ತಂಡವಾಗಿ ಬಂದು ಸೇರಿದರು.

ಸೇನೆಯ ಮಧ್ಯದಲ್ಲಿ ರಾಜರಥವು ರಾಜಠೀವಿಯಿಂದ ಬರುತ್ತಿತ್ತು. ಮುತ್ತಿನ ಝುಲ್ಲರಿಗಳು, ಚಾಮರಗಳು, ಶ್ವೇತ ಛತ್ರ ಮುಂತಾದ ಗುರುತುಗಳಿಂದ ಅದೇ ಹರಿಶ್ಚಂದ್ರ ಮಹಾರಾಜನ ರಥವೆಂದು 'ಮಹಾರಾಜನಿಗೆ ಜಯವಾಗಲಿ' ಎಂದು ಜಯಕಾರ ಮಾಡುತ್ತ ರಥದ ಹತ್ತಿರ ಹೋಗುವರು. ಆಗ ಒಬ್ಬ

ಗಡ್ಡದ ಮುನಿ ರಥದಲ್ಲಿ ಕುಳಿತು ದರ್ಪದಿಂದ ಬೀಗುತ್ತಿದ್ದುದು ಕಾಣಿಸಿತು. ತಮ್ಮ ಮಹಾರಾಜನ ಬದಲು ರಥದಲ್ಲಿ ಬೇರೊಬ್ಬನನ್ನು ಕಂಡು ಜನರೆಲ್ಲ ಬೇಸರಪಟ್ಟರು. ಮಹಾರಾಜನು ಮುನಿಗಳ ಜೊತೆ ಹಿಂದೆ ಕಾಲ್ನಡಿಗೆಯಲ್ಲಿ ಬರುತ್ತಿರುವ ಸುದ್ದಿ ತಿಳಿದು ಜನರು ಅವನೆಡೆಗೇ ಓಡಿ ಹೋಗುವರು.

ಹರಿಶ್ಚಂದ್ರ ಅವನ ಹೆಂಡತಿ, ಮಗ, ಮಂತ್ರಿಗಳೊಡನೆ ವಿಶ್ವಾಮಿತ್ರ ಮುನಿಗಳ ಕಾವಲಿನಲ್ಲಿ ನಡೆದು ಬರುತ್ತಿದ್ದನು. ಏನನ್ನೂ ಅರಿಯದ ಪ್ರಜೆಗಳು ಆತನ ಸ್ಥಿತಿಯನ್ನು ಕಂಡು ಗಾಬರಿಯಾಗುವರು. ತಳಮಳದಲ್ಲೇ ರಾಜನೆದುರು ಬಂದು ನಮಸ್ಕರಿಸಿ "ಕಾಣಿಕೆಯ ಚಿತ್ತೈಸು ಭೂಭುಜ ಎಂದರು". ಅದಕ್ಕೆ ಹರಿಶ್ಚಂದ್ರ ತನ್ನ ಪ್ರಜೆಗಳಿಗೆ ಹೀಗೆ ತಿಳಿ ಹೇಳುವನು.

ಎನಗರಸುತನ ಮಾದು ಹೋಗಿ ವಿಶ್ವಾಮಿತ್ರ
ಮುನಿಗಾದುದಾತನಂ ಕಂಡು ಕಾಣಿಕೆಯನಿ
ತ್ತನುದಿನಂ ಬೆಸಕೈವುದೆನಲೊಲ್ಲೆವೆನಲು ಬೋಧಿಸಿ ಬಲಾತ್ಕಾರದಿಂದ ।
ಜನವ ಕಾಣಿಸಿ ಕಾಣಿಕೆಯ ಕೊಡಿಸಿ ಹಿಂದುಗೊಂ
ಡಿನಕುಲಲಲಾಮನೆಯ್ತೆಂದು ಪುರಮಂ ಪೊಕ್ಕು
ಮನದೊಳುತ್ಸವದ ಹೆಚ್ಚುಗೆಯಳಿದು ನಿಂದಮಂದಿಯ ನೋಡುತಂ ನಡೆದನು

(೮-೭೩)

ತನಗೆ ಅರಸುತನ ಹೋಗಿದ್ದು, ವಿಶ್ವಾಮಿತ್ರ ಮುನಿಗಳೇ ಇನ್ನು ಅವರ ಅರಸರೆಂದು ಪ್ರಜೆಗಳಿಗೆ ತಿಳಿಹೇಳುವನು. ಇನ್ನು ಮುನಿಗಳ ಆಜ್ಞೆಯನ್ನೇ ಪಾಲಿಸಬೇಕು. ಅವರಿಗೇ ಕಾಣಿಕೆಗಳನ್ನು ಕೊಡಬೇಕೆಂದು ಹೇಳುವನು. ಅವನು ಹೇಳುವ ಮಾತಿಗೆ ಪ್ರಜೆಗಳು ಒಪ್ಪುವದಿಲ್ಲ.

ಇದುವೇ ಪ್ರಜಾಶಕ್ತಿ, ರಾಜನು ಹೇಳಿದ್ದೆಲ್ಲವನ್ನೂ ಪ್ರಜೆಗಳು ಒಪ್ಪುವರೆಂದಾಗಲೀ ಒಪ್ಪಬೇಕೆಂದಾಗಲೀ ಯಾವ ನಿಯಮವೂ ಇಲ್ಲವೆಂಬುದು ರಾಜನ ಆಜ್ಞೆಯನ್ನು ನಿರಾಕರಿಸುವ ಧಿಕ್ಕರಿಸುವ ಮನೋಭಾವ ಪ್ರಜೆಗಳಲ್ಲಿ ಇದ್ದುದನ್ನು ಈ ಮಾತಿನಿಂದ ತಿಳಿಯಬಹುದಾಗಿದೆ. ವಿಷಯ ಯಾವುದೇ ಆಗಿರಲಿ ಸಾಮಾನ್ಯನಿಗೆ ತನ್ನದೇ ಆದ ಅಭಿಪ್ರಾಯವಿರುತ್ತದೆ.

ಹರಿಶ್ಚಂದ್ರ ಒತ್ತಾಯದಿಂದ ತಿಳಿ ಹೇಳಿ ಜನತೆಯನ್ನು ವಿಶ್ವಾಮಿತ್ರರೇ ತಮ್ಮ ರಾಜನೆಂದು ಒಪ್ಪಿಕೊಳ್ಳುವಂತೆ ಮಾಡುತ್ತಾನೆ. ಜನರಿಂದ ಕಾಣಿಕೆಯನ್ನು ಪಡೆದ ನಂತರ ವಿಶ್ವಾಮಿತ್ರರ ರಥ ಅಯೋಧ್ಯಾ ನಗರವನ್ನು ಪ್ರವೇಶಿಸಿತು. ಹರಿಶ್ಚಂದ್ರನು ನೆರೆದಂಥ ಜನರನ್ನು ನೋಡುತ್ತ ಮೌನವಾಗಿ ನಗರದ ಬೀದಿಬೀದಿಯಲ್ಲಿ ನಡೆದನು.

ಗೊಂದಣಂ ಮಿಗೆ ಹರಸಲೆಂದಾರತಿಯನೆತ್ತ
ಲೆಂದು ಸೇಸೆಯನಿಕ್ಕಲೆಂದಾರ್ತದಿಂ ನೋಡ
ಲೆಂದು ರೂಪಂ ಮೆಚಿಯಲೆಂದು ಸೊಬಗಂ ಸಾಱಲೆಂದು ನವರತ್ನವಿಡಿದು

ಹೊಂದೊಡಿಗೆಯಂ ತೋಱಲೆಂದು ಜನದಳವಱೆಯ
ಲೆಂದು ಬೀದಿಯೊಳು ಬಾಗಿಲೊಳು ಭದ್ರಂಗಳೊಳು
ನಿಂದ ಸತಿಯರು ಭೂಪನಿರವ ಕಂಡುರಿಹೊಯ್ದ ಹೂಗಣೆಗಳಂತಿರ್ದರು

(೮-೭೪)

ರಾಜ್ಯ ಕೊಟ್ಟು ಹೊರನಡೆದ ಹರಿಶ್ಚಂದ್ರ ರಾಜನನ್ನು ನೋಡುವದಕ್ಕಾಗಿ ಊರಿನ ಹೆಣ್ಣುಮಕ್ಕಳು ರಸ್ತೆ ಬದಿಯಲ್ಲಿಯೂ, ಬಾಗಿಲಲ್ಲೂ, ಉಪ್ಪರಿಗೆಯ ಮೇಲೂ ನಿಂತಿದ್ದರು. ಕೆಲವರು ಹರಿಶ್ಚಂದ್ರನನ್ನು ಹರಸಬೇಕೆಂದೂ ಆರತಿಯನ್ನೆತ್ತಬೇಕೆಂದೂ ಸೇಸೆಯನ್ನಿಕ್ಕಬೇಕೆಂದೂ ಸಿಂಗಾರಗೊಂಡು ಕಾಯುತ್ತಿದ್ದರು. ಆದರೆ ಅವರೆಲ್ಲರು ರಾಜನ ಸ್ಥಿತಿಯನ್ನು ನೋಡಿ ದುಃಖಿತರಾದರು.

ಹರಿಶ್ಚಂದ್ರನು ಸರ್ವಸ್ವವನ್ನೂ ವಿಶ್ವಾಮಿತ್ರನಿಗೆ ಒಪ್ಪಿಸಿ ಹೋಗುತ್ತಿರುವಾಗ ಪ್ರಜೆಗಳು ತುಂಬ ಸಂಕಟಪಡುವರು.

ದಂತಿಯಿಂದಿಳಿದು ನಡೆದಱಿಯದವ ಬಱುಗಾಲೊ
ಳೆಂತಡಿಯನಿಡುವೆ ಹಾಸಿನೊಳು ಪವಡಿಸುವಾತ
ನೆಂತು ಕಲುನೆಲದೊಳೊಱಗುವೆ ಸಿತಚ್ಛತ್ರ ತಂಪಿನೊಳು ಬಪ್ಪಾತ ನೀನು
ಎಂತು ಬಱುಬಿಸಿಲನಾನುವೆ ಪುರದೊಳಿಪ್ಪಾತ
ನೆಂತರಣ್ಯದೊಳಿಪ್ಪೆ ಜನವನಗಲ್ದಱಿಯದವ
ನೆಂತು ಪೇಳೇಕಾಕಿಯಾಗಿಪ್ಪೆ ಎಂದು ಮೊಱೆಯಿಟ್ಟುದು ಸಮಸ್ತ ಜನವು (೯-೬)

ಯಾವಾಗಲೂ ಆನೆ ಮೇಲೆಯೇ ಓಡಾಡುವ ಮೆತ್ತನೆಯ ಹಾಸಿಗೆ ಮೇಲೆಯೇ ಮಲಗುವ, ಶ್ವೇತಚ್ಛತ್ರದ ತಂಪಿನೊಳಗೇ ಬರುವ ಊರೊಳಗೇ ಇರುವ ತಮ್ಮ ದೊರೆಗೆ ಸುಖದ ಸುಪ್ಪತ್ತಿಗೆ ಒಗ್ಗಿಕೊಂಡಿದೆ. ಅಂಥವನು ವಿಶ್ವಾಮಿತ್ರನಿಗೆ ಎಲ್ಲ ಕೊಟ್ಟು ಹರಕು ಬಟ್ಟೆ ತೊಟ್ಟು ರಾಜ್ಯ ತೊರೆದು ಬರಿಗೈಯಲ್ಲಿ ಹೊರಟು ನಿಂತಾಗ ಜನ ತಮ್ಮ ರಾಜ ಸಾಮಾನ್ಯನಂತೆ ಬರಿಗಾಲಲ್ಲಿ ನಡೆದು ಕಲ್ಲು ನೆಲದೊಳಗೆ ಮಲಗಿ, ಬಿರುಬಿಸಿಲಿಗೆ ಮೈಯೊಡ್ಡಿ ಜನರನ್ನು ಅಗಲಿ ಅರಣ್ಯದೊಳಗೆ ಏಕಾಂಗಿಯಾಗಿ ಹೇಗೆ ಬದುಕು ಸಾಗಿಸುತ್ತಾನೋ ಎಂದು ಮಮ್ಮಲ ಮರುಗುವರು. ಜನಸಾಮಾನ್ಯರಿಗೆ ರಾಜನ ಮೇಲಿರುವ ಪ್ರೀತಿಯನ್ನು ಅಂತಃಕರಣವನ್ನೂ ತೋರಿಸುವ ರೀತಿ ಇದಾಗಿದೆ. ರಾಜನಿಗೆ ತನ್ನ ಪ್ರಜೆಗಳ ಮೇಲೆ ಕಾಳಜಿ ಇದ್ದರೆ ಪ್ರಜೆಗಳಿಗೆ ರಾಜನ ಬಗ್ಗೆ ಗೌರವ, ಅಕ್ಕರತೆ ತಾನಾಗೇ ಉಂಟಾಗುತ್ತದೆ. ಇದಕ್ಕೇ ಹೇಳುವದು ಪ್ರಜೆಗಳಿಗೆ ರಾಜಾ ಪ್ರತ್ಯಕ್ಷ ದೇವತಾಃ ಎಂದು.

ಇಷ್ಟು ಪ್ರೀತಿ ಪೂರ್ವಕವಾಗಿದ್ದ ರಾಜ - ಪ್ರಜೆಗಳ ಸಂಬಂಧ ಎಷ್ಟೇ ಅಗಾಧವಾಗಿದ್ದರೂ ಎಷ್ಟೇ ಜನಸಾಮಾನ್ಯರ ಬೆಂಬಲರಾಜನ ಪರವಾಗಿದ್ದರೂ ಯಾರಿಗೂ ಏನೂ ಮಾಡಲಾಗದ ಅಸಹಾಯಕ ಸ್ಥಿತಿ. ತಮ್ಮ ಮಹಾರಾಜನ ಈ ದುಃಸ್ಥಿತಿಯನ್ನು ಕಂಡು ಮನನೊಂದ ಪ್ರಜೆಗಳ ಆಕ್ರಂದನವನ್ನು ರಾಘವಾಂಕ ಹೀಗೆ ಹೇಳುವನು.

ಪುರದ ಪುಣ್ಯಂ ಪುರುಷ ರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ ಸಪ್ತ
ಶರಧಿ ಪರಿವೃತ ಧರೆಯ ಸಿರಿಯ ಸೊಬಗಜ್ಞಾತವಾಸಕ್ಕೆ ಪೋಗುತಿದೆ ಕೋ
ಧರೆಯ ದೀನಾನಾಥರಾನಂದವಡಗುತಿದೆ
ವರ ಮುನೀಂದ್ರರ ಯಾಗರಕ್ಷೆ ಬಲವಳಿಯುತಿದೆ
ನಿರುತವೆಂದೊಂದಾಗಿ ಬಂದು ಸಂಧಿಸಿ ನಿಂದ ಮಂದಿ ನೆಱೆ

ಮೊಱೆಯಿಟ್ಟುದು(೯-೧೦)

- ಪ್ರಜೆಗಳ ದೃಷ್ಟಿಯಲ್ಲಿ ರಾಜನೇ ಆ ಊರಿನ, ನಾಡಿನ ಪುಣ್ಯರೂಪ ಭಾಗ್ಯವಿಧಾತ, ಧರೆಯ ಸಿರಿಯ ಸೊಬಗು, ನಾಡಿನ ದೀನರ ಅನಾಥರ ಆನಂದ ಬಂಧುವೇ ರಾಜನೆಂದು ಪರಿಗಣಿಸಲಾಗುತ್ತದೆ. ಅಂಥ ಪುಣ್ಯ ಹರಿಶ್ಚಂದ್ರ ಮಹಾರಾಜನ ಪುರುಷ ರೂಪದಲ್ಲಿ ಹೋಗುತ್ತಿರುವುದೆಂದು ನೆರೆದ ಜನರೆಲ್ಲ ಮೊರೆಯಿಡುವರು.

ಜನಸಾಮಾನ್ಯರು ಯಾವಾಗಲೂ ತಮಗೆ ಬೆಲೆ ಕೊಟ್ಟ, ತಮ್ಮ ಭಾವನೆಗಳಿಗೆ ಸ್ಪಂದಿಸಿದ, ತಮ್ಮ ಕಷ್ಟ ಸುಖದಲ್ಲಿ ಭಾಗಿಯಾದ ಯಾರೇ ಆಗಲಿ ಅವರ ಕಷ್ಟಕ್ಕೆ ತಾವೂ ಸ್ಪಂದಿಸುವರು. ಇನ್ನು ಇಲ್ಲಿ ಆ ವ್ಯಕ್ತಿ ತಮ್ಮ ಪ್ರೀತಿ ಅಭಿಮಾನ ದ್ಯೋತಕವಾದ ರಾಜನೇ ಆಗಿದ್ದಾಗ ಜನಸಾಮಾನ್ಯರು ಅನುಭವಿಸುವ ನೋವು ಸಂಕಟ ಹೇಳತೀರದು.

ಹರಿಶ್ಚಂದ್ರ ಎಲ್ಲವನ್ನೂ ತ್ಯಜಿಸಿ ಅಯೋಧ್ಯೆಯನ್ನು ಬಿಟ್ಟು ಹೊರಟ ಸಂದರ್ಭದಲ್ಲಿ ನೆರೆದ ಜನ ಸ್ತೋಮ ತಮ್ಮ ರಾಜನ ಅಗಲಿಕೆಯ ನೋವನ್ನು ತೋರ್ಪಡಿಸುವ ರೀತಿ ತುಂಬ ಸಹಜವಾಗಿದೆ.

ತಡೆಬಿಟ್ಟ ಕಂಬನಿಯ ಕೈಯಿಂದ ಮುಂಗಾಣ
ದೆಡಹುತ್ತ ತಾಗುತ್ತ ಬೀಳುತೇಳುತ್ತೊಱಲು
ತೊಡವರ್ಪ ಪರಿವಾರವಂ ಕಂಡು ಕೈಯೆತ್ತಿ ಹೋ ಎಂದು ನಿಲಿಸಿ ನೃಪನು
ಕಡೆಗೆನ್ನ ಸತ್ಯಕ್ಕೆ ಹಿತವರಾದವರ್ಗಳಿ
ದ್ದೆಡೆಯೊಳಿದ್ದೆನ್ನ ಲೇಸಂ ಬಯಸುತಿಹುದು ಬಂ
ದಡೆ ತ್ರಿಶಂಕು ನರೇಂದ್ರನಾಣೆಯೆನೆ ಮೀಱಿದೆವು ಬಂದಲ್ಲದಿರೆವೆಂದರು

(೯-೨೦)

ಜನರೆಲ್ಲ ಕಂಬನಿ ಸುರಿಸುತ್ತ ಎಡವುತ್ತ ಬೀಳುತ್ತ, ಚೀರುತ್ತ ಗೋಳಾಡುತ್ತ ರಾಜನನ್ನು ಹಿಂಬಾಲಿಸಿದರು. ರಾಜ ಕೈ ಎತ್ತಿ ಬೆಂಬತ್ತಿದವರನ್ನೆಲ್ಲ ತಡೆದು ನಿಲ್ಲಿಸಿ ತನ್ನ ಸತ್ಯ ಮಾರ್ಗಕ್ಕೆ ಅಡ್ಡಿಯಾಗಬಾರದೆಂದೂ, ತಮ್ಮ ಮನೆಗಳಲ್ಲಿಯೇ ಇದ್ದು ಕರ್ತವ್ಯ ಪಾಲಿಸಬೇಕೆಂದೂ ಪ್ರಜೆಗಳಿಗೆ ಮನವರಿಕೆ ಮಾಡಿಕೊಡುವನು. ಅದಕ್ಕೆ ಪ್ರಜೆಗಳು ರಾಜನಿಗೆ ಹೃದಯ ಪೂರ್ವಕ ವಿಶ್ವಾಸವನ್ನೂ ವಿನಂತಿಯನ್ನೂ ಹೀಗೆ ವ್ಯಕ್ತಪಡಿಸುವರು.

ನಿಲ್ಲದಿಂದೀಗರಸನೆಂದು ನಿಮ್ಮೊಡನೊಯ್ಯ
ಲೊಲ್ಲದಿರೆ ನೀಂ ಮರಳಿ ಬಪ್ಪಂದು ತನಕ ಕ
ಣ್ಣಲ್ಲಿಯೇ ಜೀವವನು ಪಿಡಿದಿಪ್ಪೆವನ್ಯರಂ ಸೇವಿಸುವುದಿಲ್ಲೆಂದರು (೯-೨೨)

ಇದು ರಾಜ ಮತ್ತು ಪ್ರಜೆಗಳ ಮಧ್ಯದ ಅಪರೂಪದ ಪ್ರೀತಿ. ಪ್ರಜೆಗಳೆಲ್ಲ ಹರಿಶ್ಚಂದ್ರ ತಮ್ಮನ್ನು ತನ್ನ ಜೊತೆ ಕರೆದೊಯ್ಯದಿದ್ದರೆ ಅವನು ಮರಳಿ ಬರುವವರೆಗೂ ಕಣ್ಣಲ್ಲಿ ಜೀವವಿಡಿದು ಇರುವೆವೇ ಹೊರತಾಗಿ ಅನ್ಯ ಪುರುಷನನ್ನು ತಮ್ಮ ರಾಜನೆಂದು ಒಪ್ಪಿಕೊಳ್ಳುವದಿಲ್ಲವೆನ್ನುವರು. ಹರಿಶ್ಚಂದ್ರ ಅವರಿಗೆ ಈ ರೀತಿಯ ಹಟಮಾರಿತನ ಬೇಡವೆಂದು ತನ್ನ ಪ್ರಜೆಗಳನ್ನು ಸಂತೈಸಿ ಹೊರಟನು. ಹರಿಶ್ಚಂದ್ರ ಪ್ರಜೆಗಳನ್ನು ಬಿಟ್ಟು ಹೊರಟ ಮೇಲೆ ಪ್ರಜೆಗಳ ಸ್ಥಿತಿ 'ಜನನಿ ಹಿಂಗಿದ ಶಿಶು' ವಿನಂತಾಯಿತು ಎಂದು ರಾಘವಾಂಕ ಹೇಳುವ ಮಾತು ಮನತಟ್ಟುತ್ತದೆ.

ಈ ಇಡೀ ವೃತ್ತಾಂತ ಹರಿಶ್ಚಂದ್ರ ಮಹಾರಾಜ ಮತ್ತು ಅವನಾಳುವ ರಾಜ್ಯದ ಪ್ರಜೆಗಳ ಮಧ್ಯದ ಅವಿನಾಭಾವ ಸಂಬಂಧವನ್ನು ವಿವರಿಸುತ್ತದೆ. ರಾಜನೊಬ್ಬನು ತನ್ನ ಪ್ರಜೆಗಳು ಯಾವ ಕುಂದು ಕೊರತೆಗಳೂ ಇಲ್ಲದಂತೆ, ಕಷ್ಟವರಿಯದಂತೆ ರಕ್ಷಣೆ ಮಾಡುತ್ತಿದ್ದ. ಪ್ರಜೆಗಳ ಪ್ರತಿಯಾದ ಈ ನಡುವಳಿಕೆಯಿಂದಾಗೇ ರಾಜ ಸಾಮಾನ್ಯರಿಗೆಲ್ಲ ಹತ್ತಿರದ, ಪ್ರೀತಿಯ ವ್ಯಕ್ತಿಯಾಗಿದ್ದ. ರಾಜ ಸಾಮಾನ್ಯರ ಕಷ್ಟಕ್ಕೆ ಸ್ಪಂದಿಸುವ ಕಾರಣಕ್ಕಾಗಿ ಸಾಮಾನ್ಯರೂ ರಾಜನ ಕಷ್ಟಕ್ಕೆ ಮನೆಯವರಂತೆ ಸ್ಪಂದಿಸುವರು. ರಾಜ ಮತ್ತು ಸಾಮಾನ್ಯರ ಮಧ್ಯ ಒಂದು ತೆರನಾದ ಆಪ್ತ ವಾತಾವರಣವಿದ್ದಾಗ ಮಾತ್ರ ಇಂಥ ಕಳ್ಳುಬಳ್ಳಿಯ ಸಂಬಂಧ ಬೆಸೆದುಕೊಳ್ಳಲು ಸಾಧ್ಯವಾಗುತ್ತದೆ.

ರಾಜ ಪ್ರಭುತ್ವ ಮತ್ತು ನಿರಪರಾಧಿಗೆ ಶಿಕ್ಷೆ:

ಅಪರಾಧಿಗೆ ಶಿಕ್ಷೆಯಾಗಬೇಕು ಅದು ಉಚಿತ. ಆದರೆ ಕೆಲವೊಮ್ಮೆ ಪ್ರಭುತ್ವದ ಅಂಜಿಕೆಯಿಂದಲೋ, ಬೇಜವಾಬ್ದಾರಿತನದಿಂದಲೋ, ರಾಜನ ಪ್ರಜ್ಞಾಪೂರ್ವಕವಾಗೋ ಅಪ್ರಜ್ಞಾಪೂರ್ವಕವಾಗೋ ನಿರಪರಾಧಿಗೂ ಶಿಕ್ಷೆಯಾಗುತ್ತದೆ. ಅಂಥದೇ ಒಂದು ಸಂದರ್ಭ ಹರಿಶ್ಚಂದ್ರ ಕಾವ್ಯದಲ್ಲೂ ಬರುತ್ತದೆ.

ಲೋಹಿತಾಶ್ವ ಹಾವು ಕಚ್ಚಿ ಸಾವನ್ನು ಅನುಭವಿಸುತ್ತಾನೆ. ತಾಯಿ ಚಂದ್ರಮತಿ ಮಗನ ಶವ ಸಂಸ್ಕಾರಕ್ಕೆ ಹಣವಿಲ್ಲದೆ, ಸಾಲಕ್ಕಾಗಿ ಸ್ಮಶಾನದಿಂದ ತನ್ನ ಒಡೆಯ ವಿಪ್ರನನ್ನು ಕಾಣಲು ಬರುತ್ತಿರುತ್ತಾಳೆ. ಆ ಸಂದರ್ಭದಲ್ಲಿ ಕಳ್ಳರು ಕಾಶೀ ರಾಜನ ಅರಮನೆಯಲ್ಲಿ ನುಗ್ಗಿ ರಾಜಕುಮಾರನನ್ನು ಕದ್ದು ಊರ ಹೊರಗೆ ತರುವರು. ಮೈಮೇಲಿನ ಒಡವೆಗಳನ್ನು ಅಪಹರಿಸಬೇಕೆನ್ನುವಷ್ಟರಲ್ಲೆ ರಾಜಕುಮಾರ ಜೋರಾಗಿ ಕಿರುಚಾಡತೊಡಗಿದನು. ಕಳ್ಳರು ಅವನ ಕೊರಳನ್ನು ಕತ್ತರಿಸಿ ಒಡವೆಗಳನ್ನು ಅಲ್ಲಿಯೇ ಬಿಟ್ಟು ಓಡಿ ಹೋಗುವರು. ಅದೇ ದಾರಿಯಲ್ಲಿ ಅತಿಯಾದ ದುಃಖದಿಂದ ಹುಚ್ಚಿಯಂತಾದ ಚಂದ್ರಮತಿ ಬರುತ್ತಿದ್ದಳು, ಆ ರಾಜಕುಮಾರನ ಕಿರುಚಾಟ ಕೇಳಿ ಚಂದ್ರಮತಿಗೆ ತನ್ನ ಮಗನದೇ ಧ್ವನಿಯಾದಂತೆ ಭ್ರಮೆಯಾಗಿ ಆ ಸ್ಥಳಕ್ಕೆ ಬರುವಳು. ಕಳ್ಳರ ಕತ್ತಿಯಿಂದ ನಿತ್ರಾಣಗೊಂಡ ಮಗುವನ್ನು ತನ್ನ ಮಗನೆಂದೇ ತಿಳಿದು, ಮಾತನಾಡಿಸಿ, ತಡವರಿಸಿದಳು. ಅಷ್ಟೊತ್ತಿಗೆ ನಗರವನ್ನು ಕಾಯುತ್ತಿದ್ದ ರಾಜಭಟರು ಅಳುವ ಧ್ವನಿ ಕೇಳಿ ಅಲ್ಲಿಗೆ ಓಡಿ ಬರುವರು. ರಕ್ತದ ಮಡುವಿನಲ್ಲಿದ್ದ ಹುಡುಗನ ಸಮೀಪದಲ್ಲಿದ್ದ ಚಂದ್ರಮತಿಯನ್ನು ಕಂಡು, ಒಡವೆಯ ಆಸೆಗಾಗಿ ಹುಡುಗನನ್ನು ಕೊಂದಿದ್ದಾಳೆಂದು ತಿಳಿದರು.

ಎಲೆಲೆ ರಕ್ಕಸಿಯಾಗದಿರಳಿವಳು ನಾವಿಲ್ಲಿ
ಕೊಲಬೇಡವೀಯಂಗವೆರಸಿ ಕೊಂಡೊಯ್ದು ಭೂ
ತಲಪತಿಗೆಕೊಡುವೆವೆಂದಸುವಳಿದ ಹಸುಳೆಯಂಹೊಜೆಸಲಾಗೊಸರ್ವರಕುತ
ತಲೆಯಿಂದ ಸುರಿದುಟ್ಟ ಸೀರೆ ತೊಪ್ಪನೆ ತೋಯೆ
ಲಲನೆಯಂ ಕಿತ್ತಲಗುಗಳ ನಡುವೆ ಹೆಡಗೈಯ
ಬಲಿದ ನೇಣಂ ಪಿಡಿದು ಜಡಿಜಡಿದು ನಡೆಸಿ ತಂದರು ರಾಜ ಬೀದಿಯೊಳಗೆ

(೧೩-೩)

– ಹೀಗೆ ನಿರಪರಾಧಿಯಾದ ಚಂದ್ರಮತಿಯನ್ನು ಭಟರು ರಾಜ ಬೀದಿಯ ತುಂಬ ಹೊಡೆಯುತ್ತ ರಾಜನಲ್ಲಿಗೆ ಕರೆದುಕೊಂಡು ಹೋಗುತ್ತಿರಲು ಅವಳು ಮನಸ್ಸಿನಲ್ಲಿ ರಾಜ ತನ್ನನ್ನು ವಿಚಾರಿಸಿದಾಗ ತಾನೇ ಅಪರಾಧಿಯೆಂದು ಒಪ್ಪಿಕೊಳ್ಳುವದೆಂದು ನಿರ್ಧರಿಸುವಳು. ರಾಜಭಟರು ಚಂದ್ರಮತಿಯನ್ನು ಪರೀಕ್ಷಿಸಿ ನೋಡದೆ ತಾವು ನೋಡಿದ್ದರ ಮೇಲೆಯೇ ಚಂದ್ರಮತಿ ಕೊಲೆ ಪಾತಕಿ ಎಂದು ನಿರ್ಧರಿಸಿ ರಾಜನ ಮುಂದೆ ಅವಳನ್ನು ಹಾಜರುಪಡಿಸುವರು. ಅವಳನ್ನು ನೋಡಿ ಅನುಮಾನ ಬಂದು ರಾಜ ಯಾರು ನೀನು ? ಬಾಲಕನನ್ನು ಏಕೆ ಕೊಂದೆ ? ಎನಲು ಚಂದ್ರಮತಿಯು 'ವಿಷಯದಾಪೇಕ್ಷೆಯಿಂ ಕೊಂಡೊಯ್ದು ಕೊಂದೆ' ಎಂದು ಒಪ್ಪಿಕೊಳ್ಳುವಳು.

ಹೆದರದಿರು ತೆಕ್ಕದಿರು ಅಂಜದಿರು ಲೋಗರಿ
ಟ್ಟುದೊ ನಿನ್ನ ಕೃತಕವೋ ಹೇಳು ಧರ್ಮಾಧಿಕರ
ಣದವರಂ ಕರಸುವೆಂ ನುಡಿಸುವೆಂ ಕಾವೆನೆಂದನವನಿಪಂ ಬೆಸಗೊಂಡಡೆ

(೧೩-೭)

–ಹೀಗೆ ರಾಜ ಚಂದ್ರಮತಿಗೆ ಧೈರ್ಯ ತುಂಬುವನು ಇದು ರಾಜನ ಮಾನವೀಯತೆ ಧರ್ಮಾಧಿಕಾರಿಗಳನ್ನು ಕರೆಸಿ ವಿಚಾರಿಸುತ್ತೇನೆಂದರೂ ಅವಳು ನಾನೇ ಕೊಂದಿದ್ದು, ಯಾವ ಶಿಕ್ಷೆಯನ್ನು ಬೇಕಾದರೂ ವಿಧಿಸಬಹುದೆನ್ನುವಳು. ಅದಕ್ಕೆ ಅಲ್ಲಿ ನೆರೆದಿದ್ದ ಜನರೆಲ್ಲ ಹೀಗೆ ಹೇಳುವರು.

ಕೊಂದೆ ಕೊಂದೆಂ ಕೊಂದೆನೆಂದು ತನ್ನಿಂದ ತಾ
ನೆಂದಡಿನ್ನೇಕೆ ಲೋಕದ ಮಾತು ಕೊಂದರಂ
ಕೊಂದು ಕಳೆವುದೆ ಧರ್ಮ ಜಗವರ್ತಿಯಂಹೊತ್ತಿಸೆಳೆಹೂಟೆಯಂ ಹೂಡಿಸು
ಸಂದು ಸಂದಂ ಕಡಿಸು ಕಿವಿ ಮೂಗನರಿ ಬಹಳ
ದಿಂದ ತಿವಿಯೆಂದೊಬ್ಬರೊಂದೊಂದನೆಂದುದಾ
ಮಂದಿ ತನತನಗೆ ನುಡಿಯುತ್ತಿರಲು ವೀರಬಾಹುಕನ ಕರಸಿದನರಸನು (೧೩-೮)

ಜನರೆಲ್ಲ ತಮಗೆ ತಿಳಿದಂತೆ ಅವಳಿಗೆ ಕೊಡಬಹುದಾದ ಶಿಕ್ಷೆಗಳನ್ನು ಹೇಳಿದರು. ಅದಕ್ಕೆ ರಾಜ ವೀರ ಬಾಹುಕನನ್ನು ಕರೆಸಿ "ರಾಜ ಕುಮಾರನನ್ನು ಕೊಂದ ಪಾತಕಿ ಇವಳು. ಇವಳನ್ನು ಸ್ಮಶಾನಕ್ಕೆ

ಎಳೆದೊಯ್ದು ನಿನ್ನ ಸೇವಕನಿಂದ ಕೊಲಿಸು" ಎಂದು ಆಜ್ಞೆಯನ್ನೀಯುವನು. ಅದಕ್ಕೆ ವೀರಬಾಹುಕ ತನ್ನ ಸೇವಕನನ್ನು ಕರೆಸಿ ಹೀಗೆ ಹೇಳುವನು.

ವಸುಧಾಧಿಪತಿಯ ನೇಹದ ಮಗನ ಕೊಂದ ರ
ಕ್ಕಸಿಯಿವಳನಾ ರುದ್ರಭೂಮಿಯೊಳಗೆಯ್ದೆ ತ
ಪ್ಪಿಸದೆ ಕೊರಳಂ ಕೊಱೆದು ಬಿಸುಡೆಂದು ಬೆಸನ ಕೊಡಲಡಸಿ ಮುಂದಲೆಯ ಪಿಡಿದು
ಕುಸುಕಿ ಕೆಡೆಮೆಟ್ಟಿ ಕೈಗಳ ಸೇದಿ ಬೆಂಗೆ ಬಾ
ಗಿಸಿ ಬಿಗಿದು ಹೆಡಗಯ್ಯ ನೇಣಿಂದ ಹೊಡೆದು ದ
ಟ್ಟಿಸಿ ಪಾಪಿ ಹೊಲತಿ ನಡೆನಡೆಯೆಂದು ನಡೆಸಿ ತಂದಂ ತನ್ನ ತವಗ ದೆಡೆಗೆ

(೧೩-೧೦)

ಹೀಗೆ ಏನೂ ತಪ್ಪು ಮಾಡದ, ಬದುಕಿನಲ್ಲಿ ತುಂಬ ನೊಂದ ಚಂದ್ರಮತಿಯಂಥ ಅಬಲೆಗೆ ಕೊರಳನ್ನು ಕತ್ತರಿಸುವ ಶಿಕ್ಷೆಯನ್ನೀಯಲಾಗುತ್ತದೆ.

ಸಮಾಜದಲ್ಲಿ ಇಂತಹ ಎಷ್ಟೋ ಅಸಂಖ್ಯಾತ ನಿರಪರಾಧಿಗಳು ತಾವು ನಿರಪರಾಧಿಗಳೆಂದು ಸಾಬೀತುಪಡಿಸಿಕೊಳ್ಳಲಾಗದೆ ಸಾಬೀತುಪಡಿಸಿಕೊಳ್ಳುವ ಮನಸ್ಸಿಲ್ಲದೆ ಯಾರ್ಯಾರದೋ ಬೇಜವಾಬ್ದಾರಿಯಿಂದ ಶಿಕ್ಷೆಯನುಭವಿಸುವದನ್ನು ಚರಿತ್ರೆಯುದ್ದಕ್ಕೂ ಕಾಣುತ್ತೇವೆ. ಒಮ್ಮೊಮ್ಮೆ ರಾಜನಿಗೆ ಅರಿವಿದ್ದೂ ಕಣ್ತಪ್ಪಿನಿಂದಲೂ ಬೇಕೆಂತಲೂ ನಿರಪರಾಧಿಗಳು ಹಿಂದೆಯೂ ಶಿಕ್ಷೆಯನ್ನನುಭವಿಸುತ್ತಿದ್ದರು; ಈಗಲೂ ಅನುಭವಿಸುತ್ತಲಿದ್ದಾರೆ.

ಕುಮಾರವ್ಯಾಸ ಭಾರತ

ಪ್ರಭುತ್ವದ ಕಥೆ:

ಮಹಾಭಾರತ ಪ್ರಮುಖವಾಗಿ ಪ್ರಭುತ್ವದ ಕಥೆ. ಪ್ರಭುತ್ವದ ಪ್ರತಿಷ್ಠೆಗಾಗಿ, ಪ್ರಭುತ್ವದ ಪ್ರತಿಷ್ಠಾಪನೆಗಾಗಿ ಕೌರವ-ಪಾಂಡವರು ನಡೆಸಿದ ಹೋರಾಟದ ಕಥೆ ಕೌರವ - ಪಾಂಡವರಲ್ಲಿ ಬೆಳೆದ ಪ್ರಭುತ್ವದ ಲಾಲಸೆ ಒಂದೇ ದಿನದ ಬೆಳವಣಿಗೆಯಲ್ಲ. ಇವರು ಬಾಲ್ಯವಸ್ಥೆಯಿಂದಲೂ ಬೆಳೆಸಿಕೊಂಡು ಬಂದ ದಾಯಾಂದಿ ಮತ್ಸರ ಯುದ್ಧ ಖಡ್ಗವನ್ನು ಮಸೆಯುತ್ತಲೇ ಬಂತು. ಕೌರವ-ಪಾಂಡವರ ಬದುಕಿನ ಆರಂಭದಲ್ಲಿ ತೋರಿದ ಜಗಳ ಅವರು ಬೆಳೆಬೆಳೆದಂತೆ ಪ್ರಭುತ್ವದ ಸ್ಥಿರೀಕರಣದತ್ತ ವಾಲಿತು. ಹತ್ತಿಕೊಂಡ ನೆಲದ ಮೋಹಕ್ಕೆ ಒತ್ತಾಸೆ ನೀಡಲು ಅನೇಕ ಘಟನೆಗಳು ಕಾರಣವಾದವು. ಭೀಮನ ಕಿಡಿಗೇಡಿತನ ವೈರವಾಗಿ ಬೆಳೆಯಿತು., ದುರ್ಯೋಧನನ ಅಪಮಾನ ಸೇಡಾಗಿ ಬೆಳೆಯಿತು. ದುರ್ಯೋಧನನ ಎದೆಯಲ್ಲಿ ಉರಿಯುತ್ತಿದ್ದ ಸೇಡಿನ ಬೆಂಕಿ ಪಾಂಡವರನ್ನು ಅರಗಿನ ಮನೆಯಲ್ಲಿ ಸುಡಲು ಯತ್ನಿಸಿತು. ಪಾಂಡವರು ಇಂದ್ರಪ್ರಸ್ಥದಲ್ಲಿ ಇಂದ್ರಸಭಾ ನಿರ್ಮಿಸಿ ರಾಜಸೂಯ ಯಾಗ ನಡೆಸಿದರು. ದ್ರೌಪದಿಯ ನಗುವಿನಿಂದ ಕೌರವ ಅವಮಾನಿತನಾಗಿ ಹಸ್ತಿನಾವತಿಯಲ್ಲಿ ಬೇರೊಂದು ಭವನವನ್ನು ಕಟ್ಟಿಸಿದ. ತರುವಾಯ ನಡೆದ ಜೂಜು, ದ್ರೌಪದಿ ಅವಮಾನ, ವನವಾಸ, ಗೋಗ್ರಹಣ ಕ್ರಮವಾಗಿ ನಡೆದು ಸಂಧಿಯೂ ಮುರಿದು ಪರಿಸ್ಥಿತಿ ಯುದ್ಧ ಘಟ್ಟಕ್ಕೆ ಬಂದು ನಿಂತಿತು.

ಪ್ರಭುತ್ವದ ಮೋಹ ಒಂದು ಮಾನಸಿಕ ಸ್ಥಿತಿ. ವ್ಯಾಸ, ಕುಮಾರವ್ಯಾಸ ಇಬ್ಬರೂ ಇದನ್ನು ಚೆನ್ನಾಗಿ ಅರ್ಥೈಸಿಕೊಂಡಿದ್ದಾರೆ. ಪ್ರಭುತ್ವದ ಮೇಲಾಟದಲ್ಲಿ ಹೆಜ್ಜೆಯಿಟ್ಟ ಕೌರವ-ಪಾಂಡವರ ಸೆಣಸಾಟದಲ್ಲಿ ಪಾಂಡವರದು ಮೃದುಧೋರಣೆ. ಕೃಷ್ಣ ಸಂಧಿಗೆ ಹೋಗುವ ಪೂರ್ವದಲ್ಲಿ ಸಹದೇವ, ದ್ರೌಪದಿಯರಿಬ್ಬರನ್ನು ಹೊರತುಪಡಿಸಿ ಉಳಿದವರೆಲ್ಲ ಯುದ್ಧ ವಿರೋಧಿಗಳಾಗಿಯೇ ಮಾತನಾಡುತ್ತಾರೆ. ತರುವಾಯ ದ್ರೌಪದಿಯ ಸೆಳವಿಗೆ ಸಿಲುಕಿ ಭೀಮ ತನ್ನ ಮುಂಚಿನ ಬಿಗುವನ್ನು ಕಳೆದುಕೊಳ್ಳುತ್ತಾನೆ. ಆ ಮಾತು ಬೇರೆ. ದುರ್ಯೋಧನನ ವಿಕಾರ ಮನಸ್ಸು ಮಾತ್ರ ಪ್ರಭುತ್ವದ ಹಪಾಪಿತನವಾಗುತ್ತದೆ. ಐದು ಊರು ಬೇಡಿದರಿಲ್ಲ, ಕೊನೆಗೆ ಮುಳ್ಳು ಮೊನೆಯಷ್ಟು ಮಣ್ಣನ್ನೂ ಕೊಡುವುದಿಲ್ಲ ಎಂಬ ದುರ್ಯೋಧನನ ಪ್ರಭುತ್ವದಾಹ ಮುಂದಿನ ಎಲ್ಲಾ ಅನಾಹುತಗಳನ್ನು ಸಜ್ಜುಗೊಳಿಸಿತು.

ಇಂತಹದೊಂದು ಮೇಲಾಟದ ಕಥೆಯಲ್ಲಿ ಜನಸಾಮಾನ್ಯರ ಪಾತ್ರವೇನು ಎಂಬುದೀಗ ಚರ್ಚೆಯ ವಿಷಯ. ಪಾಂಡವರು ರಾಜಸೂಯಯಾಗದ ಸಂದರ್ಭದಲ್ಲಿ ದಿಗ್ವಿಜಯ ಹೊರಟು ಅನೇಕ ರಾಜರೊಂದಿಗೆ ಕದನ ಮಾಡಿ ಜಯಗಳಿಸಿದರು. ಕೌರವನ ಹುರುಡಿಗೆ ಅನಿವಾರ್ಯವಾಗಿ ಕುರುಕ್ಷೇತ್ರ ಯುದ್ಧವಾಯಿತು.

ಇದರಲ್ಲಿ ರಾಜರು ಗಳಿಸಿದ್ದೆಷ್ಟು, ಕಳೆದುಕೊಂಡದ್ದೆಷ್ಟು ಎಂಬ ಲೆಕ್ಕಾಚಾರದಲ್ಲಿ ಸಾಮಾನ್ಯ ಮನುಷ್ಯನ ಅಸ್ತಿತ್ವದ ವಿಷಯವನ್ನು ನಾವು ಯೋಚಿಸಬೇಕಾಗುತ್ತದೆ. ಮಹಾಭಾರತದ ಅರ್ಧದಷ್ಟು ಭಾಗ ವ್ಯಾಪಿಸಿರುವ ಯುದ್ಧದ ವಿಷಯ ಭೂಮಿ ಒಡೆತನಕ್ಕಾಗಿ. ಇಲ್ಲೆಲ್ಲ ನಮಗೆ ಪ್ರಧಾನವಾಗಿ ತೋರುವುದು ಯುದ್ಧದ ಸಿದ್ಧತೆ, ಯುದ್ಧ !

ಕೌರವ-ಪಾಂಡವರು ಪ್ರಭುತ್ವದಡಿಯಲ್ಲಿ ಪ್ರಜೆಗಳೊಂದಿಗೆ ಇಟ್ಟುಕೊಂಡ ಸಂಬಂಧ, ಈ ವ್ಯವಸ್ಥೆಯ ಇನ್ನೊಂದು ಮುಖವಾಗಿ ಪ್ರಜೆಗಳು ರಾಜರ ವಿಷಯದಲ್ಲಿ ತಾಳಿರುವ ಭಾವನೆಗಳ ಎರಡನ್ನೂ ಅವಲೋಕಿಸಬೇಕಾಗುತ್ತದೆ. ಅರಸರ, ಅರಸಿಯರ ಅಂಕಿತಕ್ಕೊಳಪಟ್ಟ ಸೇವಕ, ಸೇವಕಿಯರ ಅಂತರ್ಯದ ಒಳ ಪದರುಗಳು ಪ್ರಭುತ್ವದ ಹಿನ್ನೆಲೆಯಲ್ಲಿ ಬಿಚ್ಚಿಕೊಳ್ಳುವ ರೀತಿ ಗಮನಾರ್ಹವಾಗಿದೆ. ರಾಜಪ್ರಭುತ್ವ ಕೇವಲ ಮಹಾರಾಜರಿಂದ ನಿರ್ಮಾಣಗೊಳ್ಳುವುದಿಲ್ಲ. ಅದಕ್ಕೆ ಹಿನ್ನೆಲೆಯಾಗಿ ನಿಂತಿರುವ ಪ್ರಜೆಗಳ ಸಾಮುದಾಯಿಕ ಸೇವೆ, ಶ್ರಮಗಳು ಅಷ್ಟೇ ಮುಖ್ಯವೆನಿಸುತ್ತವೆ. ಅಲ್ಲಿ ಕಿಂಕರ ಭಾವಗಳಿರುವಂತೆ ಬಲಿದಾನವಿರುವಂತೆ ಪ್ರೀತಿ, ಭಕ್ತಿಗಳೂ ಅಂತರಾಳದ ಧ್ವನಿಯಾಗಿ ಅನುರಣನೆಗೊಳ್ಳುತ್ತವೆ.

ನಾಡಿನ ಸಂಸ್ಕೃತಿಯೊಂದರ ಭಾಗವಾಗಿರುವ ರಾಜಪ್ರಭುತ್ವದ ಆದರ್ಶಗಳೇನು ಅವು ಹೇಗೆ ಯೋಜನಾ ರೂಪದಲ್ಲಿ ಪ್ರವಹಿಸಬೇಕು ಎಂಬುದೆಲ್ಲ ನಾರದ 'ನೀತಿ'ಯಲ್ಲಿ ಮಂಡಿಸಲ್ಪಟ್ಟಿವೆ. ನಾರದ ಹೇಳುವ ಮಾತುಗಳಲ್ಲಿ ಹಲವು ವಿಷಯಗಳಿವೆ. ಆದರಿಲ್ಲಿ ಪ್ರಭುತ್ವ ಮತ್ತು ಜನಸಾಮಾನ್ಯರಿಗೆ ಸಂಬಂಧಪಡುವ ವಿಷಯಗಳನ್ನು ಮಾತ್ರ ಚರ್ಚೆಗೆ ಒಳಪಡಿಸಲಾಗಿದೆ.

ನಾರದನ ಪ್ರಭುತ್ವ ದೃಷ್ಟಿ – ವಿಲೋಮಸ್ಥಿತಿ:

ಖಾಂಡವ ವನದ ದಹನಾನಂತರ ಪಾಂಡವರು ವಾಸವಾಗಿದ್ದ ಇಂದ್ರಪ್ರಸ್ಥಪುರಕ್ಕೆ ನಾರದನು ಆಗಮಿಸಿ ರಾಜಸೂಯ ಯಾಗಕ್ಕೆ ಪ್ರೇರಣೆ ನೀಡಿದನು. ಅದಕ್ಕೂ ಮುನ್ನ ರಾಜನಾದವನ ಕರ್ತವ್ಯಗಳೇನು ರಾಜ ಪ್ರಭುತ್ವದ ಸ್ವರೂಪವೇನು ಎಂಬ ಕುರಿತು ಧರ್ಮರಾಯನಿಗೆ ಹೇಳುತ್ತಾನೆ. ರಾಜನ ವಿಷಯಕವಾಗಿ ನಾರದನ ಮಾತಿನಲ್ಲಿ ಒಳಿತು ಕೆಡಕು ಎರಡೂ ಭಾವಗಳಿವೆ. ಮೊದಲು ಕುಟಿಲರಾಜರು ಯಾರು ಎಂಬುದನ್ನು ಸ್ಪಷ್ಟಪಡಿಸಿ ತರುವಾಯ ಗುಣಯುತ ರಾಜನಾದವನು ಯಾರು ಎಂಬುದನ್ನು ಹೇಳುತ್ತ

ಹೋಗುತ್ತಾನೆ. ಅಂತರಂಗದಲ್ಲಿ ದುರ್ಗುಣಗಳನ್ನು ಬೆರೆಸಿಕೊಂಡಿರುವ ರಾಜರನೇಕರು ಹೊರಗೆ ಒಳ್ಳೆಯವರಂತೆ ತೋರಿ ಜನರಿಂದ ಮಾನ್ಯತೆ ಪಡೆಯುತ್ತಾರೆ. ಇವರಿಗೆ ಛತ್ರಚಾಮರಗಳು ನೆರಳಾದರೆ ಇವರಲ್ಲಿ ಆಶ್ರಯಪಡೆದಿರುವ ಪಂಡಿತರಾದವರಿಗೆ ಇವರು ಉರಿಬಿಸಿಲು. ಸಭ್ಯರಂತೆ ತೋರ್ಪಡಿಸಿಕೊಳ್ಳುವ ರಾಜದ್ರೋಹಿಗಳೇ ಇವರ ಸುತ್ತಮುತ್ತ ನೆರೆದಿರುತ್ತಾರೆ. ಇಂಥ ರಾಜರಾದವರು ದುಷ್ಟರೊಡನೆ ವಿನೋದ ರಾಜದ್ರೋಹಿಗಳೊಡನೆ ಗೆಳೆತನ ವಿಕಾರ ಮನದವರೊಂದಿಗೆ ಒಡನಾಟವಿಟ್ಟುಕೊಂಡಿರುತ್ತಾರೆ. ಸೂಳೆಯರು ಇವರಿಗೆ ಒಳ್ಳೆಯವರಾಗಿ ತೋರಿದರೆ ತಮ್ಮ ಕುಲವನಿತೆಯರು ಬೇಡದವರಾಗುತ್ತಾರೆ.

ಹೀಗೆ ದುರ್ಗುಣವೆರೆಸಿದ ರಾಜರ ಬಗೆಗೆ ಹೇಳುವ ನಾರದ ಮುಂದೆಲ್ಲ ಒಳ್ಳೆಯರಾಜರ ಗುಣಲಕ್ಷಗಳನ್ನು ಹೇಳುತ್ತ ಹೋಗುತ್ತಾನೆ. ನಾರದ ಕೇಳುವಂತೆ ತಾನಿದ್ದೇನೆಯೇ ಎಂದು ರಾಜನು ತನ್ನನ್ನು ಮಥಿಸಿಕೊಳ್ಳುವ ರೀತಿಯಲ್ಲಿ ನಾರದನ ಮಾತುಗಳಿವೆ. ನಾರದ ನೇರವಾಗಿ ಧರ್ಮರಾಜನಿಗೆ ರಾಜನೆಂದರೆ ಇಂಥವನು, ನೀನು ಹೀಗೆ ಇರು ಎಂದು ಉಪದೇಶಿಸದೆ ಪರೋಕ್ಷವಾಗಿ ಶ್ರೇಷ್ಠರಾಜನ ಗುಣ ಸ್ವಭಾವಗಳನ್ನು ವಿವರಿಸುತ್ತಾನೆ. ಜನ ಸಾಮಾನ್ಯರನ್ನು ನೋಯಿಸಿದೆ ತೆರಿಗೆಯನ್ನು ಸಂಗ್ರಹಿಸುತ್ತೀಯಲ್ಲವೆ? ಎಂದು ನಾರದನು ಧರ್ಮರಾಜನನ್ನು ಕೇಳುವ ಪ್ರಶ್ನೆಯಲ್ಲಿ ಒಳ್ಳೆಯ ರಾಜನಾದವನು ತೆರಿಗೆಯ ವಿಷಯದಲ್ಲಿ ಪ್ರಜೆಗಳನ್ನು ನೋಯಿಸಬಾರದು ಎಂಬ ಮಾತಿದೆ. ಹೀಗೆಯೇ ನಾರದನ ಪ್ರಶ್ನೆಗಳು ರಾಜನಾದವನ ಸಕಾರಾತ್ಮಕ ನಿಲುವುಗಳನ್ನು ವಿವರಿಸುತ್ತವೆ.

ರಾಜನಾದವನು ಸೇವಕರ ವಿಷಯದಲ್ಲಿ ಕರುಣೆ ತೋರಬೇಕು. ಪರಸ್ತ್ರೀ ವಿಷಯದಲ್ಲಿ ಅಂಜಿ ನಡೆಯಬೇಕು. ಕಳವು, ಹುಸಿ, ಅಪನಿಂದೆ, ಅನ್ಯಾಯ ಈ ಯಾವ ದುರ್ವಿಚಾರಗಳೂ ಪ್ರಭುವಾದವನನ್ನು ಬಾಧಿಸಬಾರದು. ಹೀಗೆ ನಾರದನು ವಿಶದಪಡಿಸುವ ಅನೇಕ ಗುಣಗಳೊಂದಿಗೆ ಜನಸಾಮಾನ್ಯರ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಹೇಳುತ್ತಾನೆ. "ಪರಿಜನಕೆ ದಯೆಯನು ಪರಸ್ತ್ರೀಯರಲಿ ಭೀತಿಯ ಹಗೆಗಳಲಿ ನಿಷ್ಕರುಣತೆಯ ಬಡವರಲಿ ದಾನ"(ಸಭಾ-೧-೫೭). ವಿಷಯವನ್ನು ರಾಜನಾದವನು ಸಾಧಿಸಬೇಕು. ರಾಜನಾದವನು ಜನಸಮುದಾಯದ ವಿಷಯದಲ್ಲಿ ಇರಿಸಿಕೊಳ್ಳಬೇಕಾದ ಸದ್ಗುಣಗಳನ್ನು ಈ ಸಾಲುಗಳು ನಿರೀಕ್ಷಿಸುತ್ತವೆ. ಇಂಥ ಭಾವನೆಗಳ ಮೊತ್ತವೇ ರಾಜನಾದವನನ್ನು ಉದಾತ್ತೀಕರಿಸುತ್ತದೆ. ಮುಂದುವರಿದು ರಾಜನಾದವನು ಅಸಹಾಯಕರ ವಿಷಯದಲ್ಲಿ ಹೇಗಿರಬೇಕು ಎಂದು ಹೇಳುವ ಪದ್ಯ ಮಹತ್ವದ್ದಾಗಿ ತೋರುತ್ತದೆ.

> ಜರೆನೆರೆಯ ಮೈನಸಿರಿಯ ಕುಲ ವೃ
> ದ್ಧರನು ಹೀನಾಂಗರನು ಹಿಂಸಾ
> ಚರಿತರನು ಜಾತ್ಯಂಧರನು ಧನದಾಸೆಯಳಿದವರ
> ಅರಮನೆಯ ಸಂರಕ್ಷಣಾರ್ಥದೊ
> ಳಿರಿಸಿದರೆ ಮಾನೋನ್ನತಿಕೆ ವಿ
> ಸ್ತರಣವ ಹುದಿದನರಿದಿಹೈ ಭೂಪಾಲ ಕೇಳೆಂದ (ಸಭಾ-೧-೭೩)

ರಾಜನೂ ದುರ್ಬಲರನ್ನು ತನ್ನ ಅರಮನೆಯ ಧನದಿಂದ ಹೇಗೆ ಸಂರಕ್ಷಿಸಬೇಕು ಎಂಬುದಿಲ್ಲಿದೆ. ಮುಪ್ಪಾವಸ್ಥೆಯಲ್ಲಿರುವವರು. ರೋಗಪೀಡಿತರು ಧನದಾಸೆಯಿಲ್ಲದವರಲ್ಲರ ಸಂಗಡ ಇಲ್ಲಿ ಹಿಂಸಾ ಚರಿತನೂ ಇದ್ದಾರೆ. ಬಹುಶಃ ಹಿಂಸೆಯಿಂದ ಸಮಾಜದ ಅಗು ಹೋಗುಗಳಿಗೆ ವ್ಯತ್ಯಯ ತರುವವರನ್ನು

ಅರಮನೆಯಲ್ಲಿರಿಸಿ ಬುದ್ಧಿ ಹೇಳಿ ಸಚ್ಚಾರಿತ್ರ್ಯರನ್ನಾಗಿ ಪರಿವರ್ತಿಸಬೇಕೆಂಬ ಸೂಚನೆ ಈ ಪದ್ಯದಲ್ಲಿರುವಂತೆ ತೋರುತ್ತದೆ.

ಪ್ರಭುತ್ವ ಎಷ್ಟೇ ಶಕ್ತಿಯುತವಾಗಿದ್ದರೂ ಅದಕ್ಕೆ ಸತ್ಯದ ಬೆಂಬಲ ಬೇಕು. ಸತ್ಯ ಪರಿಪಾಲನೆಯಿಂದ ಮಾತ್ರ ಅರಸನಿಗೆ ಏನೆಲ್ಲ ಸಾಧ್ಯವಾಗುತ್ತದೆ ಎಂಬ ಮಾತು ಎಲ್ಲರನ್ನೂ ಸಂರಕ್ಷಿಸಬಲ್ಲ ಸತ್ಯದ ಮಹತಿಯನ್ನು ಬಿಂಬಿಸುತ್ತದೆ. 'ಸತ್ಯವಿದ್ದರೆ ಭೂಮಿ, ಸತ್ಯವಿದ್ದರೆ ಪದವಿ, ಸತ್ಯವಿದ್ದರೆ ವೀರಸಿರಿ' ಎಲ್ಲವೂ ಸಾಧಿಸುವವು. ಸತ್ಯದ ಈ ಸತ್ವಾತಿಶಯ ದುರ್ಬಲರನ್ನು ಒಳಗೊಂಡಂತೆ ಎಲ್ಲರನ್ನು ಸಂರಕ್ಷಿಸಬಲ್ಲದು. ಹೀಗೆ ಸತ್ಯದ ಪರಿಪಾಲನೆ ಮಾಡಿಕೊಂಡು ಆಳುವ ಅರಸನಿಗೆ ದೊರೆತನವೆಂಬುದು ತೀರ ಸುಖದ್ದೇನೂ ಅಲ್ಲ. ಇದು ಖಡ್ಗಧಾರೆಗೆ ಲೇಪಿಸಿದ ಮಧು, ಮಹಾಹಿಯ ಹೆಡೆಯ ಮೇಲಿರುವ ಮಾಣಿಕ್ಯ ಮುಂತಾಗಿ ಕುಮಾರವ್ಯಾಸನು ಕೊಡುವ ಹೋಲಿಕೆಗಳು ಸುಲಭಸಾಧ್ಯವಲ್ಲದ ಅರಸೊತ್ತಿಗೆಯ ಕಷ್ಟವನ್ನು ನಿಖರವಾಗಿಯೇ ವ್ಯಾಖ್ಯಾನಿಸುತ್ತವೆ.

ಖಡಗಧಾರೆಯ ಮಧು ಮಹಾಹಿಯ
ಹೆಡೆಯ ಮಾಣಿಕ ವಜ್ರದಿಂ ಬಿಗಿ
ದೊಡಲಿಗೊಡ್ಡಿದ. ಸುರಗಿ ಕಡುಗೆರಳಿದ ಮೃಗಾಧಿಪನ
ನಡುಗುಹೆಯೊಳಿಹ ಸುಧೆಯ ಘಟವೀ
ಪೊಡವಿಯೊಡೆತನ ಸದರವೇ ಕಡು
ಬಡವರಿಗೆ ದೊರಕೊಂಬುದೇ ಭೂಪಾಲ ಕೇಳೆಂದ (ಸಭಾ–೧–೬೬)

ಪ್ರಸ್ತುತ ಪದ್ಯದ ಕೊನೆಯ ಚರಣದಲ್ಲಿ ಕಡು ಬಡವರಾದವರಿಗೆ ಒಡೆತನ ಸರಳವಾಗಿ ಕೈಗೂಡುವಂಥದಲ್ಲ ಎಂಬ ಮಾತಿದೆ. ಬಡವರಾದವರಿಗೆ ಅರಸೊತ್ತಿಗೆ ಎನ್ನುವುದು ತಿರುಕನ ಕನಸು. ಹೆಚ್ಚು ಕಡಿಮೆ ವಂಶವಾಹಿನಿಯಾಗಿ ಸಾಗಿರುವ ರಾಜ ಪ್ರಭುತ್ವ ಬಡವರನ್ನು ಬಡವರನ್ನಾಗಿ ಇರಿಸಿಯೇ ಮುಂದುವರಿಯುತ್ತದೆ. ಆರ್ಥಿಕ ಬಲ ಮತ್ತು ರಾಜಭಯದಲ್ಲಿ ನರಳುವ ಜನಬೆಂಬಲ ಎರಡೂ ಬಡವರಾದವರಿಗೆ ಸುಲಭವಾಗುವ ಅಂಶಗಳಲ್ಲ. ಆದ್ದರಿಂದ ಈ ಕೊರತೆಯನ್ನು ತುಂಬಿಕೊಳ್ಳಲು ಶತಮಾನಗಳೇ ಬೇಕು. ಸೈನಿಕರಾಗಿ, ದಾಸಿಯರಾಗಿ, ಊಳಿಗದವರಾಗಿ – ಹೀಗೆ ಅರಮನೆಯ ವಿವಿಧ ಪರಿಚಾರಿಕೆಗಳಲ್ಲಿರುವ ಬಡವರಿಗೆ ಆ ಸೇವೆಗಳನ್ನು ನಿಸ್ತರಿಸುವಲ್ಲಿಯೇ ಜೀವಮಾನ ನವೆದುಹೋಗುತ್ತದೆ. ಹೀಗಿರುವಲ್ಲಿ ಅರಸುತನವೆಲ್ಲಿ ಬರಬೇಕು ? ಅದು ಸಾಧ್ಯವಾಗದ ಮಾತು. ಕುಮಾರವ್ಯಾಸ ಸತ್ಯವನ್ನೇ ಹೇಳುತ್ತಿದ್ದಾನೆ.

ನಾರದ ಹೇಳುವ ಒಳ್ಳೆಯ ರಾಜರ ತಾತ್ವಿಕ ಕರ್ತವ್ಯಗಳು ಎಷ್ಟರ ಮಟ್ಟಿಗೆ ಪಾಲನೆಯಾಗಿ, ಯೋಜನೆಯಾಗಿ, ಕಾರ್ಯರೂಪದಲ್ಲಿ ಅನುಸಂಧಾನಗೊಳ್ಳುತ್ತವೆಂಬುದಿಲ್ಲಿ ಚಿಂತನಾರ್ಹವೆನಿಸುತ್ತದೆ. ನಾರದನಂಥ ಪ್ರಾಜ್ಞರು, ಮಹಿಮಾವಂತರು ರಾಜನ ಅಥವಾ ಪ್ರಜಾಸತ್ತೆಯ ಸಕಾರಾತ್ಮಕ ಗುಣಲಕ್ಷಣಗಳನ್ನು ಹೇಗೇ ವ್ಯಾಖ್ಯಾನಿಸಲಿ ಪ್ರಭುತ್ವ ತನ್ನ ಅಹಮಿಕೆಯನ್ನು ಬಿಟ್ಟುಕೊಡುವುದಿಲ್ಲ. ರಾಜನೊಬ್ಬನ ಸಾತ್ವಿಕ ಗುಣಗಳನ್ನು ಮಗ್ಗುಲಲ್ಲಿಟ್ಟು ನೋಡಿದರೆ ಬಹಳಷ್ಟು ಸಲ ರಾಜರ ನಡುವಳಿಕೆಗಳು ವಿಲೋಮಸ್ಥಿತಿಯನ್ನೇ ಹೇಳುತ್ತವೆ. ಉದಾತ್ತತೆಯನ್ನು ಹೇಳುವ ವಿದುರ, ನಾರದ, ಕೃಷ್ಣದ್ವೈಪಾಯನ, ಧರ್ಮರಾಜ ಯಾರೇ ಇರಲಿ ಇವರೆಲ್ಲರ ಮಾತುಗಳು ಗಾಳಿಗೊಡ್ಡಿದ ಮಂಜಿನಂತೆ ಹಾರಿ ಹೋಗುತ್ತವೆ.

ಗಮನಾರ್ಹ ಸಂಗತಿಯೆಂದರೆ ಇವರೆಲ್ಲ – ಕೃಷ್ಣನೊಬ್ಬನನ್ನು ಹೊರತುಪಡಿಸಿ – ಬೋಧೆಯಲ್ಲಿ ರಾಜನಾದವನು ಯುದ್ಧ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕು, ಆಗಿನ ಅವನ ಕರ್ತವ್ಯಗಳೇನು ಎಂಬ ವಿಷಯ ಕುರಿತು ಯಾರೂ ಹೇಳುವುದಿಲ್ಲ. ಹೀಗಾಗಿ ಯುದ್ಧ ಸಮಯದಲ್ಲಿ ಪ್ರಭುತ್ವ ಅನಿಯಂತ್ರಿತ ರೀತಿಯಲ್ಲಿ ನಡೆದುಕೊಳ್ಳುತ್ತದೆ. ರಾಜಸೂಯ ಯಜ್ಞದ ನಂತರ ನಡೆಯುವ ದಿಗ್ವಿಜಯಗಳು ಈ ಮಾತಿಗೆ ಸಾಕ್ಷಿಯಾಗಿ ನಿಲ್ಲುತ್ತವೆ. ಅರ್ಜುನನ ದಿಗ್ವಿಜಯವನ್ನು ಇಲ್ಲಿ ಉದಾಹರಣೆಯಾಗಿ ತೆಗೆದುಕೊಳ್ಳಬಹುದು.

ಅರ್ಜುನನು ಹಲವು ರಾಜರ ಮೇಲೆ ಯುದ್ಧ ಕೈಗೊಳ್ಳುತ್ತ ರಾಮಗಿರಿ, ಹಿಮಾಲಯ ಪಾರ್ಶ್ವ, ಹರಿವರ್ಷ, ಗಂಧಮಾದನಗಿರಿ, ನೀಲಗಿರಿ, ಹಿರಣ್ಮಯ, ಇಳಾವ್ರತ, ಹೇಮಕೂಟ ಮುಂತಾದ ವನಪ್ರದೇಶದ ಮೇಲೆಯೂ ದಾಳಿ ಮಾಡುತ್ತಾನೆ. ಹಿಮಗಿರಿಯ ಮಗ್ಗುಲಿನ ಬೇಡ ಸಮುದಾಯದ ಮೇಲೆ ದಾಳಿ ಮಾಡಿ ಹಿಮಗಿರಿಯ ಹಲವು ಕಣಿವೆಗಳ ಪುಳಿಂದರನ್ನು ಸದೆಬಡಿಯಲಾಯಿತು. ಪರಾಕ್ರಮಿಗಳೆಂದು ಕೇಳಿದ ಪುಳಿಂದರನ್ನು ಆಸ್ಥಾನಕ್ಕೆ ಕರೆಯಿಸಿಕೊಂಡು ಕಪ್ಪು ಕಾಣಿಕೆಗಳನ್ನು ಪಡೆಯಲಾಯಿತು. ಹರಿವರ್ಷ ಪ್ರದೇಶದ ಮೇಲೆ ಇಂಥದೇ ದಾಳಿ ನಡೆದಾಗ ಅಲ್ಲಿಯ ಜನ ಇಂಥ ದಂಡನ್ನು ನೋಡಿ ಅರಿಯರು, ಸೈನ್ಯದಿಂದುಂಟಾದ ಗಜಿಬಿಜಿ ಆ ವನಪ್ರದೇಶದ ಜನರನ್ನು ಆತಂಕಕ್ಕೀಡು ಮಾಡಿತು, ದೇವಭೂಮಿಯಂತೆ ಶಾಂತವಾಗಿದ್ದ ವನಪ್ರದೇಶ ಸೈನ್ಯಸಮೂಹದ ಕೋಲಾಹಲದಿಂದ ತುಂಬಿತು. ಅಲ್ಲಿಯವರು ಮೃಗಪಕ್ಷಿ, ಹಯ ಉತ್ತಮಾಂಗನೆಯರನ್ನು ಕಾಣಿಕೆಯಾಗಿ ಅರ್ಪಿಸಿದರು.

ಉತ್ತರೋತ್ತರ ದೇವಭೂಮಿಗ
ಳೆತ್ತಣವರೀ ದಳನಿಚಯತಾ
ನೆತ್ತ ಭೂರಿಧ್ವನಿಯನೀ ಗಜಬಜವನೀ ಜನವ
ಎತ್ತಲೆಂದರಿಯರು ವಿನೋದಕೆ
ತೆತ್ತರಲ್ಲಿಯ ಪಕ್ಷಿಮೃಗ ಹಯ
ಉತ್ತಮಾಂಗನೆಯರನು ಮನ್ನಿಸಿ ಕಂಡು ಫಲಗುಣಗೆ (ಸಭಾ–೩–೩೬)

ಹೀಗೆಯೇ ಗಂಧಮಾದನಗಿರಿಯಲ್ಲಿ ಪಶುಪಾಲಕ–ಪುಳಿಂದರನ್ನು ಸೋಲಿಸಿ ಅವರಿಂದ ಸಮಸ್ತ ವಸ್ತುವನ್ನೂ ಸ್ವೀಕರಿಸಲಾಯಿತು. ಹಿರಣ್ಮಯ ಪ್ರದೇಶಕ್ಕೆ ಬಂದಾಗಲೂ ಈ ಕಾಣಿಕೆ ಸ್ವೀಕರಣ ನಡೆಯಿತು.

ವನಿತೆಯರನಾ ದೇಶದಲಿ ಮೀ
ಟೆನಿಪರನು ಮೃಗಪಕ್ಷಿ ಕೃಷ್ಣಾ
ಜಿನವನಂತವನಿತ್ತು ಸತ್ಕರಿಸಿದರು ಫಲಗುಣನ. (ಸಭಾ–೩–೬೦)

ಸಂಪದ್ಭರಿತ ರಾಜ್ಯ ಸಂಸ್ಥಾಪನೆಗೊಂಡಿರುವ ಅರಸರ ಮೇಲೆ ದಂಡೆತ್ತಿ ಹೋಗುವುದಕ್ಕೂ ಇಂಥ ವನಚರರ ಮೇಲೆ ದಾಳಿ ಮಾಡುವುದಕ್ಕೂ ಅಂತರವಿದೆ. ವನಚರರೆನ್ನಿಸಿಕೊಂಡ ಜನವರ್ಗ ತಮ್ಮಲ್ಲೇ ಒಬ್ಬನನ್ನು ನಾಯಕನನ್ನಾಗಿ ಮಾಡಿಕೊಂಡು ತಮ್ಮದೇ ಆದ ಸಾಮಾಜಿಕ ವ್ಯವಸ್ಥೆಯಲ್ಲಿ ಬದುಕು ಸಾಗಿಸುವವರು. ಅವರು ಇಂಥ ಯುದ್ಧ ಜಯಾಪಜಯಗಳ ಆಗುಹೋಗು ಯಾವುದನ್ನು ಅರಿತವರಲ್ಲ ಜನ ಸಾಮಾನ್ಯರಿಗಂತೂ ತಮ್ಮ ದಿನ ನಿತ್ಯದ ಜೀವನ ನಿರ್ವಹಣೆಯೇ ಮುಖ್ಯವಾಗಿರುತ್ತದೆ. ದಿನದ

ಬದುಕೇ ಅತಂತ್ರಗೊಂಡು ಸಾಗಿರುವಾಗ ರಾಜರ ಆಕ್ರಮಣವನ್ನು ಎದುರಿಸಲಾರರು. ಹೊಟ್ಟೆಪಾಡಿಗಾಗಿ ಗುಡ್ಡ ಬೆಟ್ಟ ಅಲೆದು ಅಂದಂದಿನ ಬದುಕನ್ನು ಹೊಂದಿಸಿಕೊಳ್ಳುವ ಇವರಿಗೆ ಮನುಷ್ಯ ದಾಳಿಗಳು ಅನಿರೀಕ್ಷಿತ. ಸೈನಿಕರ ಕೋಲಾಹಲ, ಶಸ್ತ್ರಾಸ್ತ್ರಗಳ ಪ್ರದರ್ಶನ – ಎಲ್ಲ ಇವರಿಗೆ ಹೊಸವು. ಹರಿವರ್ಷದಲ್ಲಿ ಆದದ್ದು ಇದೇ. ಹರಿವರ್ಷದಲ್ಲಿ, ಸೈನ್ಯದಿಂದುಟಾದ ಗಜಬಜ ಪುಳಿಂದರನ್ನು ಆತಂಕಕ್ಕೀಡುಮಾಡಿತು. ಹೆದರಿದ ಇವರು ಎದುರಾದ ಶಸ್ತ್ರಸಜ್ಜಿತ ಸೈನ್ಯವನ್ನು ಎದುರಿಸಿ ಹೋರಾಡಲಾರದೆ ಕಪ್ಪು ಕಾಣಿಕೆಗಳನ್ನು ಕೊಡುತ್ತಾರೆ. ಮರುದಿನದ ಬದುಕು ಅವರಿಗೆ ಮುಖ್ಯವಾಗಿರುವುದರಿಂದ ಅವರಿಗಿದು ಸಹಜ ಅನ್ನಿಸುತ್ತದೆ. ಇಲ್ಲಿ ನಡೆಯುವ ದಾಳಿಯಲ್ಲಿ ಮುಖ್ಯವೆನಿಸಿರುವ ಅಂಶಗಳನ್ನು ಮೂರು ಸ್ತರದಲ್ಲಿ ಗುರುತಿಸಿ ಪ್ರಭುತ್ವದ ರೀತಿಯನ್ನು ಹೀಗೆ ಹೇಳಬಹುದು;

ಅ. ಅನೇಕ ಸಣ್ಣಪಟ್ಟ ಅಥವಾ ದುರ್ಬಲ ಅರಸರ ಮೇಲೆ ರಾಜರು ದಾಳಿ ಮಾಡುತ್ತಾರೆ.

ದುರ್ಬಲ ರಾಜರೇನೂ ಇವರನ್ನು ಕೆಣಕಿದವರಲ್ಲ.

ಆ. ಇಂಥ ದಾಳಿಯಿಂದ ದುಡಿದು ಉಣ್ಣುವ ಜನ ತೊಂದರೆಗೊಳಪಡುತ್ತಾರೆ.

ಇ. ಬೆಳ್ಳಿ, ಬಂಗಾರ, ವಜ್ರ ವೈಡೂರ್ಯಗಳೊಂದಿಗೆ ಹೆಣ್ಣುಮಕ್ಕಳನ್ನೂ ಕಾಣಿಕೆಯಾಗಿ ಅರ್ಪಿಸುತ್ತಾರೆ.

ಆದಿಪರ್ವದ ೬ನೆಯ ಸಂಧಿಯಲ್ಲಿ ಸಹಾಯ ಕೋರಿ ಬಂದ ದ್ರೋಣಾಚಾರ್ಯನೊಂದಿಗೆ ದ್ರುಪದರಾಜ ನಡೆದುಕೊಂಡ ರೀತಿಯಂತೂ ಪ್ರಭುತ್ವದ ಮದಾಂಧತೆಯನ್ನೇ ಹೇಳುತ್ತದೆ. ದ್ರೋಣ ಮತ್ತು ದ್ರುಪದರಿಬ್ಬರೂ ಬಾಲ್ಯ ಸ್ನೇಹಿತರು. ಭರದ್ವಾಜನಲ್ಲಿ ಬಿಲ್ವಿದ್ಯೆ ಕಲಿತವರು. ಕಾಲಾಂತರದಲ್ಲಿ ದ್ರುಪದ, ತಂದೆಯ ಮರಣಾನಂತರದಲ್ಲಿ ಪಾಂಚಾಲದ ರಾಜಭಾರವನ್ನು ವಹಿಸಿಕೊಂಡನು. ದ್ರೋಣನಿಗೆ ಕಡುದಾರಿದ್ರ್ಯ ಆವರಿಸಿತು. ಈ ಹೊತ್ತಿಗೆ ದ್ರುಪದನ ಪೂರ್ವಸ್ನೇಹವನ್ನು ನೆನೆದು ದ್ರುಪದನ ಅರಮನೆಗೆ ಬಂದನು. ದ್ರುಪದನ ಮಂದಿರದ ಬಾಗಿಲು ಕಾಯುವವನಿಗೆ ದ್ರೋಣ "ನಾವು ಮತ್ತು ನಿಮ್ಮ ಅರಸರು ಬಾಲ್ಯಮಿತ್ರರು, ನಾನು ದ್ರೋಣಮುನಿ. ರಾಜನಲ್ಲಿಗೆ ಹೋಗಿ ತಿಳಿಸು" ಎಂದನು. ಸಿರಿಮದ ಮತ್ತು ಪ್ರತಾಪ ಮದದಿಂದ ಕೂಡಿದ ದ್ರುಪದರಾಜ ಪ್ರಭುತ್ವದ ಸೊಕ್ಕಿನಿಂದ "ತಿರಿವ ಹಾರುವರೊಡನೆ ಭೂಮೀಶ್ವರರಿಗೆ ಎತ್ತಣ ಮೈತ್ರಿ ? ಒಳಗೆ ಕರೆತರಬೇಡ" ಎಂದು ಬಿಟ್ಟನು. ರಾಜನ ಇಂಗಿತವನ್ನು ಬಾಗಿಲು ಕಾಯುವವನಿಂದ ಕೇಳಿದ ದ್ರೋಣನಿಗೆ ಅಸಾಧ್ಯ ಕೋಪ ಉಕ್ಕಿತು. ಬಾಗಿಲು ಕಾಯುವವನ ತಡೆಯನ್ನು ಲೆಕ್ಕಿಸದೆ ದ್ರುಪದನಲ್ಲಿಗೆ ನುಗ್ಗಿಬಂದ ದ್ರೋಣ "ಏನೆಲವೋ ಪಾಂಚಾಲ ಚಿಕ್ಕಂದಿನಲ್ಲಿ ನಾನು ನೀನೂ ನಮ್ಮ ತಂದೆಯಲ್ಲಿ ವಿದ್ಯೆಗಳಿಸಿದ್ದನ್ನು ಮರೆತೆಯಾ ? 'ಏನುಬಂದಿರಿ?' ಎಂಬ ಗುಣವಚನದ ಅನುರಾಗ ನಿನ್ನಲ್ಲಿಲ್ಲ" ಎಂದು ಜರಿದರೆ ದ್ರುಪದ "ಧೀರರಿಗೆ ಹೇಡಿಗಳಾದವರಿಗೆ ಎಲ್ಲಿಯ ಸೇರಿಕೆ ? ರಾಜನಿಗೆ ಬಡವನಿಗೆ ಎತ್ತಣದು ಸಖತನ?" ಎಂದು ಮದೋನ್ಮತ್ತನಾಗಿ ನುಡಿಯುತ್ತಾನೆ.

ಧೀರರಿಗೆ ಹಂದೆಗಳಿಗೆತ್ತಣ
ಸೇರುವೆಗಳ್ಳೆ ಭೂಪರಿಗೆ ಬಡ
ಹಾರುವರಿಗೆತ್ತಣದು ಸಖತನವೆಂದನಾ ದ್ರುಪದ (ಆದಿ–೬–೩೪)

ದ್ರುಪದನಾಡುವ ಭಾಷೆ ರಾಜಪ್ರಭುತ್ವದ ಧೌತ್ಯವಲ್ಲದೆ ಬೇರೇನಲ್ಲ. 'ಹಂದೆ', 'ಬಡ ಹಾರುವ' ಎಂಬಂತಹ ಶಬ್ದಗಳು ದ್ರುಪದನ ಮದೋನ್ಮತ್ತತೆಯನ್ನು ಬಿಂಬಿಸುತ್ತವೆ. ಬಡವರನ್ನು ಕೇವಲ ಭೌತಿಕವಾಗಿಯಲ್ಲ: ಹೀಗೆ

ಭಾಷಿಕವಾಗಿಯೂ ನೋಯಿಸುವ ಹಕ್ಕನ್ನು ಪ್ರಭುತ್ವ ಪಡೆದುಕೊಂಡಿದೆ ಎಂಬ ರೀತಿಯಲ್ಲಿ ದ್ರುಪದರಾಯನ ಇಲ್ಲಿಯ ನಡುವಳಿಕೆಯಿದೆ.

ಸೈನಿಕರು – ಯುದ್ಧ:

ಯಾವುದೇ ಆಡಳಿತ ವ್ಯವಸ್ಥೆಯಲ್ಲಿ ಸ್ವರಕ್ಷಣೆಗಾಗಿ ಸೈನ್ಯ ವ್ಯವಸ್ಥೆ(ಮಿಲಿಟರಿ)ಯೊಂದಿರುತ್ತದೆ. ಇಂದು ಬಹಳಷ್ಟು ದೇಶಗಳು ಪ್ರಜಾಸತ್ತಾತ್ಮಕ ರೀತಿಯಲ್ಲಿ ಸೈನ್ಯವೆಂಬುದು ಆಕ್ರಮಣಕಾರಿ ಗುಣ ಹೊಂದಿರದೆ ಸ್ವರಕ್ಷಣೆಯ ಉದ್ದೇಶವನ್ನು ಮಾತ್ರ ಹೊಂದಿರಬೇಕೆಂಬ ಪರಿಜ್ಞಾನ ಬಹುತೇಕ ರಾಷ್ಟ್ರಗಳಲ್ಲಿ ಬೆಳೆಯುತ್ತಿದೆ. ಬಹಳಷ್ಟು ಪ್ರಜ್ಞಾವಂತರು ಯುದ್ಧದಿಂದಾಗುವ ಅನಾಹುತಗಳನ್ನು ಬಲ್ಲವರಾಗಿದ್ದಾರೆ. ಇತಿಹಾಸ ಕಾಲದಲ್ಲಿಯೂ ಸೈನ್ಯವೆನ್ನುವುದು ರಾಜ್ಯಾಡಳಿತದ ಒಂದು ವ್ಯವಸ್ಥೆಯಾಗಿತ್ತು. ಯುದ್ಧವು ರಾಜನಿಂದ ನಿರ್ಣಯಿಸಲ್ಪಡುತ್ತಿತ್ತು. ಆಗೆಲ್ಲ ಯುದ್ಧವು ಮೂರು ಕಾರಣಗಳಿಗಾಗಿ ಸಾರಲ್ಪಡುತ್ತಿತ್ತು.

ಅ. ಭೂಮಿ ವಿಸ್ತರಣೆ. ಹಲವು ರಾಜರಿಗೆ ತಮ್ಮ ತಮ್ಮ ಭೂಮಿಯೊಡೆತನದಲ್ಲಷ್ಟೇ ಸಮಾಧಾನ ಹೊಂದದೆ ಆದರಾಚೆಗೂ ಹಲವು ಪ್ರಾಂತಗಳನ್ನು ವಶಪಡಿಸಿಕೊಳ್ಳಬೇಕು, ಅಲ್ಲಿಯ ರಾಜರನ್ನು ಅಂಕಿತದಲ್ಲಿಟ್ಟುಕೊಂಡು ಅವರ ಮೇಲೆ ಪ್ರಭುತ್ವ ಸ್ಥಾಪಿಸಬೇಕು ಎಂಬ ಅತ್ಯಾಸೆ ಮತ್ತು ಅಧಿಕಾರ ವ್ಯಾಮೋಹ.

ಆ. ಸೇಡಿಗಾಗಿ ಇನ್ನೊಬ್ಬರ ಮೇಲೆ ದಾಳಿ ಇಡುವುದು. ಸಣ್ಣವೋ ದೊಡ್ಡವೋ ಹಲವು ಕಾರಣಗಳಿಗಾಗಿ ರಾಜರಾಜರಲ್ಲಿ ಬೆಳೆದ ವೈಮನಸ್ಸು ಕ್ರಮೇಣ ಸೇಡಾಗಿ ಬೆಳೆಯುತ್ತ ಅದು ಯುದ್ಧದಲ್ಲಿ ಪರ್ಯಾವಸಾನ ಪಡೆಯುವುದುಂಟು.

ಇ. ಸ್ವರಕ್ಷಣೆಗೆ ಜರುಗಿಸುವ ಯುದ್ಧದ ಅನಿವಾರ್ಯತೆ. ಅನ್ಯರಾಜರ ದುರಾಶೆಯೇ ಕಾರಣವಾಗಿ ಒಮ್ಮೆ ಯುದ್ಧ ಅನಿವಾರ್ಯವಾಗಿಬಿಡುವುದುಂಟು. ಎಂತಹ ಅಹಿಂಸಾಮನೋಭಾವದ ಅರಸನಾಗಿರಲಿ ತನ್ನ ಪ್ರಜೆಗಳ ಸಂರಕ್ಷಣೆಗಾಗಿ ಯುದ್ಧವನ್ನು ಎದುರಿಸಿ ಹೋರಾಡುವುದು ಅನಿವಾರ್ಯವಾಗುತ್ತದೆ.

ಮಹಾಭಾರತದ ಹಲವು ಸಂದರ್ಭಗಳಲ್ಲಿ ಯುದ್ಧ ಘಟಿಸಿವೆ. ಪ್ರಧಾನವಾಗಿರುವುದು ಕುರುಕ್ಷೇತ್ರ ಮಹಾಸಮರ. ಇದರಲ್ಲಿ ಪ್ರಧಾನವಾಗಿ ಭಾಗವಹಿಸಿದವರು ಕೌರವ ಪಾಂಡವ – ಎರಡೂ ಪಕ್ಷದ ಸೈನಿಕರು. ಧರ್ಮ, ಭೀಮ, ಅರ್ಜುನ, ದುರ್ಯೋಧನ, ದುಶ್ಶಾಸನ – ಹೀಗೆ ಹಲವು ಜನ ಪ್ರಮುಖರು ಭಾಗವಹಿಸಿದ್ದರೂ ಅಸಂಖ್ಯಾತ ಸೈನಿಕರೆ ಯುದ್ಧ ನಿರ್ಣಾಯಕರಾಗಿ ತೋರುತ್ತಾರೆ. ಇವರೆಲ್ಲ ಸಾಮಾನ್ಯ, ಜನವರ್ಗದಿಂದ ಬಂದವರು. ಇವರೆಲ್ಲ ಹೊಟ್ಟೆಪಾಡಿಗಾಗಿ ಸೈನ್ಯವನ್ನು ಸೇರಿಕೊಂಡವರೋ ರಾಜನ ಒತ್ತಾಯಕ್ಕಾಗಿ ಸೇರಿಕೊಂಡವರೋ ಸ್ಪಷ್ಟವಾಗುವುದಿಲ್ಲ. ಏನೇ ಇರಲಿ ಇವರು ತಮ್ಮ ಜೀವದ ಹಂಗು ತೊರೆದು ರಾಜನಿಗಾಗಿ ಹೋರಾಡಬೇಕು; ರಾಜನಿಗೆ ಜಯ ದೊರಕಿಸಿ ಪ್ರಭುತ್ವವನ್ನು ಕಾಪಾಡಬೇಕು ಇದು ಸೈನಿಕನ ಕರ್ತವ್ಯ, ಯುದ್ಧ ನೀತಿ, ಇವನನ್ನು ಈ ರೀತಿ ಸೈನ್ಯಕ್ಕೆ, ಯುದ್ಧಕ್ಕೆ ಪ್ರಚೋದಿಸುವ ಪ್ರಭುತ್ವದವರು ಎಷ್ಟರ ಮಟ್ಟಿಗೆ ಅವನ ಜೀವನ ಬಗೆಗೆ, ಅವನ ಕುಟುಂಬ ಸದಸ್ಯರ ಬಗೆಗೆ ಯೋಚಿಸಿದರು ಹೀಗೆ ತನ್ನನ್ನು ತಾನು ಪ್ರಭುತ್ವಕ್ಕೆ ಸಮರ್ಪಿಸಿಕೊಳ್ಳುವಲ್ಲಿ ಅವನ ಮನೋ ಧೋರಣೆಯೇನು, ಪ್ರಭುತ್ವಕ್ಕೆ ಅವನ ನಿಷ್ಠೆಯೇನು ಎಂಬೆಲ್ಲ ವಿಷಯಗಳೀಗ ಪ್ರಕೃತ ಚರ್ಚೆಗೆ ಒಳಪಡುತ್ತವೆ.

ಪ್ರಭುತ್ವದಲ್ಲಿ ಪ್ರಜಾವರ್ಗವಿಟ್ಟ ನಿಷ್ಠೆ ಒಂದು ಮೌಲ್ಯವಾಗಿ ತೋರುತ್ತದೆ. ಆದರೆ ಈ ಮೌಲ್ಯ ರಕ್ಷಣೆಗೆ ಪ್ರಜಾವರ್ಗದ ಒಂದು ವಿಭಾಗವಾಗಿರುವ ಸೈನಿಕರ ಸ್ವಾಮಿ ನಿಷ್ಠೆ ಬಲಿದಾನವಾಗಿಯೇ ತೋರುತ್ತದೆ. ಎಂದು ಸೈನಿಕನೊಬ್ಬ ಸೈನ್ಯ ಸೇರುವನೋ ಅಂದೇ ಅವನ ದೇಹ, ಜೀವಗಳು ಪ್ರಭುತ್ವಕ್ಕೆ ಮುಡುಪಾಗುತ್ತವೆ. ಆವಾಗಿನಿಂದಲೇ ಅವನಿಗೆ ಸಂಪತ್ತಿನ ಆಶೆ, ಅಮರತ್ವದ ಆಶೆಯೆರಡನ್ನೂ ತೋರಿಸುತ್ತ ಅವನಲ್ಲಿ ನಿಷ್ಠೆಯನ್ನು ಬೆಳೆಸಲಾಗುತ್ತದೆ. ಯುದ್ಧ ಸಂದರ್ಭದಲ್ಲಂತೂ ಸೈನಿಕರಿಗೆ ಸ್ವರ್ಗದ ಆಶೆಯನ್ನು ತೋರಿಸುವ, ಅವರನ್ನು ಹುರಿದುಂಬಿಸುವ ಪ್ರಕ್ರಿಯೆ ಯುದ್ಧಾರಂಭದಿಂದಲೇ ಅವ್ಯಾಹತವಾಗಿ ನಡೆದಿರುತ್ತದೆ. ಸೇನಾಪತಿ ಪಟ್ಟವನ್ನು ವಹಿಸಿಕೊಂಡ ದ್ರೋಣ ತನ್ನ ಸೈನಿಕರನ್ನು ಯುದ್ಧಕ್ಕೆ ಪ್ರಚೋದಿಸುವ ರೀತಿ ಮೇಲಿನ ಮಾತುಗಳನ್ನು ಪುಷ್ಟೀಕರಿಸುತ್ತದೆ. "ಸಮರಾಂಗಣದಲ್ಲಿ ಉತ್ಸಾಹದಿಂದ ನುಗ್ಗುವ ನೀವು ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಾಗದು ಎಂದು ಹೇಳುತ್ತ "ನಿಮ್ಮ ಶಸ್ತ್ರಧಾರೆಯ ತೀರ್ಥಸ್ನಾನ ಭವದ ಕಲ್ಮಷವನ್ನು ತೊಳೆದು ಸದ್ಗತಿಯನ್ನು ದೊರಕಿಸಿಕೊಡುತ್ತದೆ. ಪ್ರಾಣದಲ್ಲಿ ಆಶೆಯಿಡಬೇಡಿರಿ" ಎಂದು ಅವರನ್ನು ಹುರುದುಂಬಿಸುತ್ತಾನೆ.

ಕರ್ಣನು ಸೈನಿಕರನ್ನು ಹುರುದುಂಬಿಸುವ ರೀತಿ ಇದಕ್ಕಿಂತಲೂ ಭಿನ್ನವಾದುದು ಮತ್ತು ಸೈನಿಕರನ್ನು ಹುರುದುಂಬಿಸುವ ರೀತಿ ಇದಕ್ಕಿಂತಲೂ ಭಿನ್ನವಾದುದು ಮತ್ತು ವಾಸ್ತವವಾದದ್ದು. ಕರ್ಣಪರ್ವದ ೮ನೆಯ ಸಂಧಿಯ ಕೊನೆ ಕೊನೆಯ ಕುಮಾರವ್ಯಾಸನ ಪದ್ಯಗಳು ಸೈನಿಕನ ಮನಸ್ಸನ್ನು ಓದುವಂತೆಯೇ ಇವೆ. ಕರ್ಣ ಹೇಳುತ್ತಾನೆ. ಈಗಾಗಲೇ ನೊಂದವರು ನಿಲ್ಲಿರಿ. ಸ್ವಾಮಿಕಾರ್ಯಕ್ಕೆ ಹಿಂಜರೆಯುವವರು ಮರಳಿರಿ. ಮಹಾರಾಜನಲ್ಲಿ ಕುಂದನ್ನು ಎಣಿಸುವವರು ಈಗಲೇ ಹೊರಟುಬಿಡಿರಿ ರಣ ಹೇಡಿಗಳು ಈಗಲೇ ಹಿಂದಿರುಗಿಬಿಡಿ. ಸ್ವರ್ಗವನ್ನು ಸಾಧಿಸಬೇಕೆನ್ನುವ ಹೆಸರುಳ್ಳ ಸುಭಟ್ಟರೇ ಬನ್ನಿ" ಕರ್ಣನ ಮಾತುಗಳು ಇಷ್ಟಕ್ಕೆ ನಿಲ್ಲುವುದಿಲ್ಲ. ದೂರದಿಲ್ಲಿರುವ ಅರ್ಜುನನನ್ನು ತೋರಿರುವವನಿಗೆ, ರಥದಲ್ಲಿರುವ ಅರ್ಜುನನ್ನು ತೋರಿದವನಿಗೆ – ಹೀಗೇ ಒಟ್ಟಾರೆ ಅರ್ಜುನನ ಸುಳಿವು ಕೊಟ್ಟವರಿಗೆ ತಾನು ಯಾವ ಯಾವ ಬಹುಮಾನವನ್ನು ಕೊಡುತ್ತೇನೆಂದು ಕರ್ಣ ಪಟ್ಟಿಯನ್ನೇ ಕೊಡುತ್ತಾನೆ.

ಅವ ತೋರಿಸಲಾರ್ಪನರ್ಜುನ
ದೇವನನು ರಿಪು ಬಲದೊಳಾತಂ
ಗೀವೆ ನೀ ಪದಕವನು ಖಡೆಯವ ವಜ್ರಮಾಣಿಕದ
ಅವನೀ ಫಲಗುಣನ ತೇರಿನ
ಠಾವಿದೇ ಎಂದವಗೆ ಇದೆ ಮು
ಕ್ತಾವಳಿಯಲಂಕಾರವೆಂದನು ಕರ್ಣ ನಿಜ ಬಲಕೆ (ಕರ್ಣ–೮–೩೫)

– ಕರ್ಣತೋರುವ ಈ ಆಸೆ ಇನ್ನೂ ಮುಂದುವರಿಯುತ್ತದೆ.

ಒರಟೊರಟಾಗಿ ತೋರುವ ದುರ್ಯೋಧನನಂತೂ ಸಂಗ್ರಾಮವೊಂದು ಯಜ್ಞವೆಂದು ಹೇಳುವುದರ ಮುಖಾಂತರ ಅದಕ್ಕೊಂದು ದೈವಿಕತೆಯ ಸ್ವರೂಪಕೊಡುತ್ತಾನೆ. ಮನುಷ್ಯನ ನರ, ಮಿದುಳು, ಎಲುವು, ರಕ್ತಗಳೆಲ್ಲ ಯಜ್ಞಕ್ಕೆ ಹೇಗೆ ಪರಿಕರಗಳಾಗುತ್ತವೆಂಬುದನ್ನು ದುರ್ಯೋಧನ ತನ್ನ ಸೈನಿಕರಿಗೆಲ್ಲ ಸಾರಿ ಸಾರಿ ಹೇಳುವ ಪರಿ ಕಾವ್ಯಾತ್ಮಕವಾಗಿದೆ.

ಸೆರೆನರದ ದರ್ಭೆಗಳ ಮಿದುಳಿನ
ಚರುವಿ ನೆಲುವಿನ ಸಮಿಧೆಗಳ ಬಿಲು
ದಿರು ರವದ ಚದುರಂಗ ರಭಸದ ಸಾಮ ವೇದಿಗಳ
ಅರುಣ ಜಲದಾದ್ಯದ ಸ್ರುವಾದಿಯ
ಶಿರ ಕಪಾಲದ ವೈರಿ ಪಶುಬಲ
ಧುರದ ಸಂಗರ ಯಜ್ಞದೀಕ್ಷೆಯ ಮರೆದಿರಕಟೆಂದ (ಗದಾ–೧–೨೦)

ಇಲ್ಲಿ ಉದಾಹರಣೆಗಳಿಗಾಗಿ ತೆಗೆದುಕೊಂಡಿರುವ ದ್ರೋಣ, ಕರ್ಣ, ದುರ್ಯೋಧನರ ಸಮರದ ಕರೆಯ ಆಶಯವೊಂದೇ – ತಮ್ಮ ತಮ್ಮ ಪಡೆಯಲ್ಲಿರುವ ಯೋಧರನ್ನು ಯುದ್ಧಕ್ಕಾಗಿ ಮಾನಸಿಕವಾಗಿ ಸಜ್ಜುಗೊಳಿಸುವುದು. – ಇವರಷ್ಟೇ ಅಲ್ಲ ಸೈನ್ಯದ ನೇತೃತ್ವವನ್ನು ವಹಿಸಿಕೊಂಡವರೆಲ್ಲ ಸೈನಿಕರನ್ನು ಪ್ರಚೋದಿಸಲು ಇಂತಹ ಮಾತುಗಳನ್ನು ಆಡುತ್ತಲೇ ಇರುತ್ತಾರೆ. ಮಹಾಭಾರತದ ಯುದ್ಧ ಪಂಚಕ ರಣರಂಗವೇ ಆಗಿರುವುದರಿಂದ ಇಂತಹ ಪ್ರಚೋದನೆಯ ಮಾತುಗಳು ಮತ್ತೆ ಮತ್ತೆ ಕೇಳುತ್ತಲೇ ಇರುತ್ತವೆ. ಅಮರತ್ವದ ಸತ್ಯಾಸತ್ಯತೆ ಏನೇ ಇರಲಿ ವೀರವು ಒಂದು ಕಾಲದ ಮೌಲ್ಯವಾಗಿ ಸಾಮಾಜಿಕ ಆವರಣದಲ್ಲಿ ಪ್ರತಿಪಾದಿಸಲ್ಪಡುತ್ತಿತ್ತು. ಜೀವನ ನಿರ್ವಹಣೆಯೊಂದಿಗೆ ದೊರೆಯುವ ಈ ಕೀರ್ತಿ ಜನಸಾಮಾನ್ಯರ ನಂಬಿಕೆಯಾಗಿ ಬೆಳೆದು ಬಂದಿರಲು ಸಾಕು. ಅಂತೆಯೇ ಸದ್ಗತಿಯ ಮಾತು ಮತ್ತೆ ಮತ್ತೆ ಮರುಕಳಿಸಿ ವೀರಾವೇಶ ಜ್ವಾಲೆಗೆ ಎರೆಯಲ್ಪಡುವ ಆಜ್ಯವಾಗುತ್ತದೆ. ಹೆಚ್ಚುವರಿಯಾಗಿ ರಣಭೂಮಿಯಲ್ಲಿ ಸೇನಾಪತಿಗಳು ತೋರುವ ಧನದಾಶೆ, ಸಂಪತ್ತಿನ ಬೇರೆ ಬೇರೆ ಪರಿಕರಗಳ ಆಸೆ ಬಡತನದಲ್ಲೇ ಜೀವನೂಕುವ ಸೈನಿಕರಿಗೆ ಮರೀಚಿಕೆಯಾಗಿ ತೋರುತ್ತದೆ. ಅಂತೆಯೇ ಸೇನಾಪತ್ಯವನ್ನು ವಹಿಸಿಕೊಂಡಿರುವವರೆಲ್ಲ ಇಂತಹ ಮಾತುಗಳನ್ನಾಡಿ ಸೈನಿಕರಲ್ಲಿ ಆವೇಶ ತುಂಬುತ್ತಲೇ ಇರುತ್ತಾರೆ. ಸ್ವಾಮಿಭಕ್ತಿಯನ್ನು ತಮ್ಮ ಜೀವನಾದರ್ಶವಾಗಿ ಬೆಳೆಯಿಸಿಕೊಂಡು ಬಂದಿರುವ ಯೋಧರು ಅವರ ಮಾತಿನ ಅಂತರಾರ್ಥವನ್ನು ಯಾವುದೇ ಬಗೆಯಲ್ಲಿ ಹಿಂಜಿ ನೋಡಲಾರರು. ಅವರ ಕಣ್ಣಮುಂದಿರುವುದು ಒಂದೇ ಸತ್ಯ ಅದು ಯುದ್ಧ, ಹೋರಾಟ. ಹೀಗೆ ಸೈನಿಕರನ್ನು ಭಾವನಾ ಲೋಕಕ್ಕೆ ಎಳೆದೊಯ್ಯುವ ರಾಜಪ್ರಭುತ್ವ ಇಂತಹ ಏನೆಲ್ಲ ಒಳದಾರಿಗಳನ್ನು ಹುಡುಕಿಕೊಳ್ಳುತ್ತಲೇ ಬರುತ್ತದೆ.

ಗಮನಾರ್ಹ ಅಂಶವೆಂದರೆ ರಣಭೂಮಿಯಲ್ಲಿ ಸೈನಿಕರಲ್ಲಿ ತೋರುವ ಉತ್ಸಾಹ ಕ್ರಮೇಣ ಆವೇಶವಾಗುತ್ತ ಮೂರನೆಯ ಹಂತದಲ್ಲಿ ಸಮೂಹ ಸನ್ನಿಯಾಗುತ್ತದೆ. ಎದುರಿನಿಂದ ತೂರಿಬರುವ ಶರಾವಳಿ, ಎಡಬಲದಲ್ಲಿ ಅವ್ಯಾಹತವಾಗಿ ಬೀಸಲ್ಪಡುವ ಖಡ್ಗಗಳು, ಕುದುರೆಗಳ ಹೇಷಾರವ, ಆನೆಗಳ ಘರ್ಜನೆ ಇವೆಲ್ಲ ಒಂದಾಗಿ ಯೋಧನ ಅರಿವನ್ನು ಮಸುಕಾಗಿಸುತ್ತವೆ; ಯೋಧ ಬಿಡುವ ಬಾಣ, ಝಳಪಿಸುವ ಕತ್ತಿ, ಬೀಸುವ ಗದೆ – ಇವೆಲ್ಲ ಯಾಂತ್ರಿಕವಾಗಿ ಬಿಡುತ್ತವೆ. ಒಮ್ಮೆ ಇಂತಹ ಆವೇಶದಲ್ಲಿ ಮನಸೋ ಇಚ್ಛೆ ತೊಡಗಿಸಿಕೊಂಡವರಿಗೆ ಹಿಂದೆಂಬುದಿಲ್ಲ, ಮುಂದುವರೆಯುತ್ತಲೇ ಹೋಗುವುದು ಗೆಲ್ಲುವ ನಿರೀಕ್ಷೆಯನ್ನೇ ತಾಳುವುದು. ಅಂತೆಯೇ ಮೈಯಲ್ಲಿ ಶಕ್ತಿ ಇರುವನಕ ಹೋರಾಡುವುದು: ಸಾಧ್ಯವಾದರೆ ಜಯವನ್ನು ತನ್ನದಾಗಿಸಿಕೊಳ್ಳುವದು. ಇಲ್ಲದೇ ಹೋದರೆ ರಣಭೂಮಿಯಲ್ಲಿ ಶವವಾಗಿ ಬೀಳುವುದು. ಅಂತೆಯೇ ರಾಶಿರಾಶಿ ಹೆಣಗಳು ಕುರುಕ್ಷೇತ್ರದ ತುಂಬ ತೋರುತ್ತವೆ. ಕುಮಾರವ್ಯಾಸ ಜನಸಾಮಾನ್ಯರ ಈ ಬಲಿದಾನವನ್ನು ಅಗಾಧವಾದ ರೀತಿಯಲ್ಲಿ ಕಟ್ಟಿಕೊಡುತ್ತಾನೆ.

ಬಡಪಾಯಿಗಳ ಮೇಲೆ ಯುದ್ಧ ತಂದೊಡ್ಡುವ ಅನಾಹುತಗಳನ್ನ ಕುರುಕ್ಷೇತ್ರದುದ್ದಕ್ಕೂ ಕಾಣುತ್ತೇವೆ. ಇಲ್ಲಿ ಹೋರಾಡುವ ಯೋಧರ ಜೀವಕ್ಕೆ ಯಾವ ಬೆಲೆಯೂ ಇಲ್ಲ. ಭೀಷ್ಮಾಚಾರ್ಯರ ಸೇನಾಧಿಪತ್ಯದಲ್ಲಿ ಉಭಯ ಸೇನೆ ಮುಖಾಮುಖಿಯಾಗಿ ಸೆಣಸಾಟ ನಡೆಸುತ್ತಿರುವಂತೆ ಖಡ್ಗಾಯುಧರು ತೋರುವ ಹೋರಾಟ ಮತ್ತು ಫಲಶ್ರುತಿಯ ಚಿತ್ರಣ ಯುದ್ಧಕ್ಕೆ ಮುಖವೊಡ್ಡಿದ ಜೀವರುಗಳಿಗೊದಗಿದ ಭೀಕರತೆಯನ್ನು ಬಿಡಿಸಿಡುತ್ತವೆ. ತುಂಡರಿಸಿದ ಕಾಲುಗಳು, ನೆಲದ ಮೇಲೆ ಚೆಲ್ಲವರಿದಿರುವ ಕರುಳ ಮಾಲೆಗಳು ಸಾಮಾನ್ಯವಾಗಿವೆ. ಅತಿಬಲರು ವೈರಿಯ ತೋಳನ್ನು ಕೊರೆಯುವುದು, ಶಿರವನ್ನು ಕತ್ತರಿಸುವುದು, ಮೈಯನ್ನು ಎರಡು ಹೋಳಾಗಿ ಸೀಳುವುದು ಇವೆಲ್ಲ ಚಲಿಸುವ ಚಿತ್ರಣವಾಗಿ ಕಣ್ಣೆದುರು ನಿಲ್ಲುತ್ತವೆ. ಉಭಯ ಸೇನೆಯ ಶೂರರಿಬ್ಬರೂ ಆಳೆತ್ತರ ಹೆಣದ ರಾಶಿಯನ್ನು ಒಟ್ಟುತ್ತಿದ್ದರಂತೆ. ಕುಣಿದಾಡುವ ಮುಂಡಗಳನ್ನು ಎಳೆದೆಳೆದು ಮೆಟ್ಟುತ್ತಿದ್ದರೆ ಕೆಳಗೆ ಬಿದ್ದ ಮಿದುಳ ಜೊಂಡಿನಲ್ಲಿ ಜಾರುತ್ತ ಮತ್ತೆ ಮತ್ತೆ ನಿಂತು ಸಮರಗೈಯ್ವ ಬೀಭತ್ಸತೆ ಕಾವ್ಯವಾದ ಬಗೆ ಇಲ್ಲಿದೆ;

ನಿಲುಕಲಿಟ್ಟೆಡೆಯಾದ ಹೆಣನನು

ತುಳಿದು ರಣದಲಿ ಕುಣಿವ ಮುಂಡವ

ನೆಳೆದು ರುಧಿರದೊಳೌಕಿ ಮೆಟ್ಟುವ ಮುಂದೆನಡೆನಡೆದು

ತಲೆಮಿದುಳ ಜೊಂಡಿನಲಿ ಜಾರುವ

ಕಲಹಕಾತರ ರಿಪುಭಟರನ

ಪ್ಪಳಿಸಿ ಘಾಯಂ ಬಡೆದು ಮಗ್ಗಿದರುಭಯಸೇನೆಯಲಿ (ಭೀಷ್ಮ-೪-೩೨)

ಪ್ರಾಣಿವಧೆಯ ದೃಶ್ಯಕ್ಕಿಂತಲೂ ಕಡೆಯಾಗಿ ತೋರುತ್ತಿದೆ ಕುರುಕ್ಷೇತ್ರ ರಣಭೂಮಿಯ ಈ ಭೀಕರ ಚಿತ್ರ.

ಇವರು ರಣಭೂಮಿಯಲ್ಲಿ ಹೋರಾಡುವಾಗಲೂ ಅಷ್ಟೇ, ಹೆಣವಾಗಿ ಬಿದ್ದ ಮೇಲೂ ಅಷ್ಟೇ ಇವರೆಲ್ಲ ಯಾರ ಅನುಕಂಪ ಮರುಕಗಳಿಗೂ ಒಳಗಾಗದವರು. ಇದೇ ಭೀಷ್ಮ ಪರ್ವದ ೮ನೆಯ ಸಂಧಿಯ ಕೊನೆಯಲ್ಲೊಂದು ಮಾತು ಬರುತ್ತದೆ. ಪಾರ್ಥನ ಬಾಣಗಳ ಸುರಿಮಳೆಗೆ ರಿಪುನಾಯಕರು ಗಾಯಗೊಂಡು ಭೀತಿಗೊಂಡರು; ಜೀವಭಯ ಅವರಿಸಿ ತಮ್ಮ ಮನೆಯಲ್ಲಿದ್ದ ರಾಣಿಯರನ್ನು ನೆನೆಯಲು ಆರಂಭಿಸಿದರು(ಭೀಷ್ಮ-೮-೬೧). ನಾಯಕರು ತಮ್ಮ ಹೆಂಡಿರನ್ನು ನೆನೆಯುತ್ತಾರೆ, ಆದರೆ ಅದೇ ಯುದ್ಧ ಭೂಮಿಯಲ್ಲಿ ಅವರೊಂದಿಗೆ ಕಷ್ಟಪಡುತ್ತಿರುವ ಸಾಮಾನ್ಯ ಸೈನಿಕರು ತಮ್ಮ ಹೆಂಡಿರನ್ನು ನೆನೆಯುವ ಉಲ್ಲೇಖಗಳಿಲ್ಲ. ಇವರಿಗೂ ಹೆಂಡಿರು ಮಕ್ಕಳಿದ್ದಾರೆ, ಅವರನ್ನು ಕುರಿತಾದ ಭಾವನೆಗಳಿವೆ. ಆದರೂ ಇವು ಯಾವೂ ಉಲ್ಲೇಖಿಸಲ್ಪಡುವುದಿಲ್ಲ. ಇವರೆಲ್ಲರ ಕೌಟುಂಬಿಕ ಭಾವನೆಗಳು ಯಜಮಾನ ಸಂಸ್ಕೃತಿಯಡಿಯಲ್ಲಿ ನಲುಗಿ ಹೋಗುತ್ತವೆ. ಇವರೆಲ್ಲ ಕೇವಲ ರಾಜನ ಗೆಲುವನ್ನೇ ಹಾರೈಸಿಕೊಂಡು ವಿನಮ್ರವಾಗಿ ನಡೆದುಕೊಳ್ಳಬೇಕು. ನಾರದನು ಧರ್ಮರಾಜನಿಗೆ ಪ್ರಭುತ್ವದ ವಿಷಯ ವಿವರಿಸುವ ಸಂದರ್ಭದಲ್ಲೇ ಸೇವಕನ ವಿನಯ ಹೇಗಿರಬೇಕೆಂಬುದನ್ನೂ ಹೇಳುತ್ತಾನೆ. "ಸೇವಕನಾದವನು ರಾಜನನ್ನು ನೋಡಿದ ಕೂಡಲೇ ನಮಸ್ಕರಿಸಿ ಹಿಂದೆ ಸರಿದು ನಿಲ್ಲಬೇಕು, ಹತ್ತಿರವೂ ಅಲ್ಲದ ದೂರವೂ ಅಲ್ಲದ ಮಧ್ಯಸ್ಥಳದಲ್ಲಿ ನಿಂತುಕೊಂಡು ಸೇವೆಗೆ ಸಿದ್ಧನಾಗುತ್ತಾನೆ. ರಾಜನ ಮುಖವನ್ನೇ ನೋಡುತ್ತಿದ್ದು ಅವನು ಮಾಡಿದ ಅಪ್ಪಣೆಯನ್ನು ಕೈಮುಗಿದು ಕೇಳಿಕೊಂಡು ಅದರಂತೆ ನಡೆದುಕೊಳ್ಳುತ್ತಾನೆ".(ಸಭಾ-೧-೮೦) ಸೇವಕನಾದವನ ದೈನೇಸಿ ಸ್ಥಿತಿಯನ್ನು ಈ ಪದ್ಯ ಹೇಳುತ್ತದೆ. ಅಂತರಾಳದಲ್ಲಿ ರಾಜಭಕ್ತಿಯನ್ನು

ತುಂಬಿಕೊಂಡು ಸೇವೆಗೆ ಸದಾ ಸಿದ್ಧವಾಗಿರುವವನನ್ನು ರಾಜನಾದವನು ಹೀಗೆ ನಡೆಸಿಕೊಳ್ಳುವುದು ಪ್ರಭುತ್ವದ ವಿಡಂಬನೆಯಾಗಿ ತೋರುತ್ತದೆ.

ಹೀಗೆ ಅರ್ಪಣಾ ಮನೋಭಾವದಿಂದ ದುಡಿದ, ಹೋರಾಡಿದ ಸೇವಕರಿಗೆ, ಸೈನಿಕರಿಗೆ ಕುರುಕ್ಷೇತ್ರದ ಕೊನೆಯಲ್ಲಿ ಸಿಕ್ಕ ಉಡುಗರೆಯೇನು? ಸಾವು, ನೋವು. ದುರ್ಯೋಧನ, ಅವನ ಸಹೋದರರು ಎಲ್ಲ ಸಾವನ್ನಪ್ಪಿದರು. ಅವರನ್ನು ಬೆಂಬಲಿಸಿ ಯುದ್ಧಗೈದ ಅಪಾರ ಸೈನ್ಯವೂ ಸರ್ವನಾಶವಾಯಿತು. ಕೌರವ ಪಕ್ಷದಲ್ಲಿ ಕೊನೆಯಲ್ಲುಳಿದವರು ಮೂರೇ ಜನ–ಅಶ್ವತ್ಥಾಮ, ಕೃಪ, ಕೃತವರ್ಮ ಮಾತ್ರ. ಪಾಂಡವರ ಪಕ್ಷದಲ್ಲಿಯೂ ಇದಕ್ಕಿಂತ ಭಿನ್ನವಾದ ಸ್ಥಿತಿಯೇನಿಲ್ಲ. ಪಾಂಡವರ ಏಳು ಅಕ್ಷೋಹಿಣಿ ಸೈನ್ಯವೆಲ್ಲ ನಾಶ ಹೊಂದಿತು. ಪಾಂಡವರೊಂದಿಗೆ ಉಳಿದವರು ಹೆಣ್ಣುಮಕ್ಕಳು, ಬ್ರಾಹ್ಮಣ ಸಮೂಹ, ವಂದಿಮಾಗಧರು. ಇದನ್ನೇ ಸಂಜಯ ಧೃತರಾಷ್ಟ್ರನೆದುರು ಹೇಳುತ್ತಾನೆ:

ಉಳಿದುದೇಳಕ್ಷೋಹಿಣೀ ದಳ
ದೊಳಗೆ ನಾರೀನಿಕರ ವಿಪ್ರಾ
ಉಳಿ ಕುಳೀಲವ ಸೂತ ಮಾಗಧ ವಂದಿಸಂದೋಹ
ಸುಳಿವ ಕಾಣೆನು ಕೈದುವಿಡಿದರ
ನುಳಿದು ಜೀವಿಸಿದಾನೆ ಕುದುರೆಗ
ಳೊಳಗೆ ಜವಿಯಿಲ್ಲನೆಂಬೆನು ಜನಪ ಕೇಳೆಂದ (ಗದಾ–೯–೪೧)

ಗದಾಪರ್ವದ ೧೨ನೆಯ ಸಂಧಿಯ ಕೊನೆಯಲ್ಲಿ ಯುದ್ಧದಲ್ಲಿ ಮಡಿದ ಅಸಂಖ್ಯಾತ ಯೋಧರ ಸುತ್ತಲೂ ಸೌದೆಯೊಟ್ಟಿ, ಬೆಂಕಿಯಿಟ್ಟು ದಹಿಸಲಾಯಿತು.

ಕಳನ ಚೌಕದ ಸುತ್ತಲೊಟ್ಟಿಸಿ
ತಳಿಗಳನು ಬಹಳಾಗ್ನಿಯನು ಕೈ
ಗೊಳಿಸಿದರು ದಹಿಸಿದರು ಬಹಳಾಕ್ಷೋಹಿಣೀ ಭಟರ (ಗದಾ–೧೨–೨೩)

ಹೀಗೆ ದಹಿಸಿಹೋದ ಸಾಮಾನ್ಯ ವರ್ಗದವರ ಆಶೋತ್ತರಗಳೇನಿದ್ದವೋ ಕನಸುಗಳೇನಿದ್ದುವೋ ಅವೆಲ್ಲವೂ ಪ್ರಭುತ್ವದ ಕ್ರೂರ ಉದಾಸೀನತೆಯಲ್ಲಿ ನಲುಗಿ ಹೋಗುತ್ತವೆ.

ಸಾಮಾನ್ಯ ನೆಲೆಯಿಂದ ಪ್ರಭುತ್ವ ನೆಲೆಗೆ ಜೀವನ ನಿರ್ವಹಣೆಗಾಗಿ ಬಂದಿರುವ ಎಲ್ಲಾ ಸೈನಿಕರ ಹಣೆಬರಹವಿಷ್ಟೇ. ಇದರಲ್ಲಿ ತರತಮ ಭಾವಗಳಿಲ್ಲ. ಇವರ ಒಟ್ಟಂದದ ಭಾವನೆ, ಪರಿಣಾಮಗಳನ್ನು ಪ್ರತ್ಯೇಕವಾಗೇನೂ ಎಣಿಸಬೇಕಿಲ್ಲ. ಸೈನಿಕರನ್ನೆಲ್ಲ ಒಂದು ಪಾತ್ರವಾಗಿಸುವಷ್ಟು ಮಟ್ಟಿಗೆ ಇವರ ನೋವಿನಲ್ಲಿ ಏಕರೂಪತೆಯಿದೆ. ಈ ಪಾತ್ರಕ್ಕೆ ಅಲ್ಪಸ್ವಲ್ಪ ಸಂತೋಷವಿರಬಹುದು ಅದರ ಸಾವಿರ ಪಾಲು ದುಃಖದುಮ್ಮಾನಗಳಿವೆ ಅವೆಲ್ಲ ಅರಣ್ಯರೋದನವಾಗಿ ಅವನ ಅಂತರಂಗದಲ್ಲಿಯೇ ಸುಟ್ಟು ಕರಕಲಾಗುತ್ತವೆ. ಪ್ರಭುತ್ವದ ಪಾಲಿಗೆ ಈ ಪಾತ್ರ ನಗಣ್ಯ. ಈ ಪಾತ್ರ ಹೋರಾಡುವ ರೀತಿ, ಅರ್ಪಣಾಸ್ಥಿತಿ ಕೊನೆಗೆ ಈ ಪಾತ್ರ ಸರ್ವನಾಶವಾಗುವ ಬಗೆ – ಇವೆಲ್ಲ ಹದಿನೆಂಟೂ ದಿನಗಳ ಮಹಾಯುದ್ಧದ ಸಾಂತ್ವನ ರಹಿತ ಕಠೋರ ಸತ್ಯ ಅಷ್ಟೇ.

ದಾಸಿಯರು – ಅರಮನೆ ಸೇವೆ:

ಸೈನಿಕರಂತೆ ದಾಸಿಯರೂ ತಳವರ್ಗದಿಂದಲೇ ಬಂದವರು. ಇವರು ರಾಣಿಯರ ಸೇವೆ ಮಾಡಿಕೊಂಡಿರುವವರು; ಕೆಲವರು ರಾಣಿಯೊಂದಿಗೆ ಹೆಚ್ಚು ಸಲುಗೆ ಆಪ್ತತೆಯಿಂದಿರುವವರು 'ಸಖಿ' ಎಂದೂ ಕರೆಯಲ್ಪಡುತ್ತಾರೆ. ರಾಜನಪರಿವಾರದಲ್ಲಿಯೂ ಇವರು ಕಾಣಿಸಿಕೊಳ್ಳುವುದಿದೆ – ಆದರಿದು ಕ್ವಚಿತ್ತಾಗಿ. ಏನೆಂದರೂ ಇವರು ರಾಣಿಯರ ಪರಿಸರದಲ್ಲಿ ಪ್ರಸ್ತಾಪಗೊಳ್ಳುವುದು ಹೆಚ್ಚು. ಇವರಿಗೆ ಹೆಸರಿರುವುದಿಲ್ಲ ಇವರ ತಂದೆ–ತಾಯಿ, ಹಿನ್ನೆಲೆ ಯಾವುದೂ ವಿವರಗೊಳ್ಳುವುದಿಲ್ಲ. ಇವರೆಲ್ಲ ಅಪ್ರಸಿದ್ಧರಾಗಿಯೇ ಹೆಸರೂ ಕೂಡ ಇಲ್ಲದೆಯೇ ಬಾಳು ಸಾಗಿಸುತ್ತಾರೆ. ವಿದುರ, ಯುಯುತ್ಸು ಇಬ್ಬರೂ ದಾಸಿಯರಲ್ಲಿ ಜನಿಸಿದವರು. ವಿದುರ ಅಂಬಿಕೆಯ ದಾಸಿಯ ಮಗ, ಯುಯುತ್ಸು ಧೃತರಾಷ್ಟ್ರನ ದಾಸಿಯ ಮಗ ಅಷ್ಟೇ. ಇವರ ತಾಯಂದಿರು ನಿಮ್ನ ಕುಲದವರಾದ್ದರಿಂದ ಊಳಿಗವನ್ನು ಮಾಡಿಕೊಂಡು ಇರುವವರಾಗಿದ್ದರಿಂದ ಅವರು ದಾಸಿಯರು, ಅವರ ಹೊಟ್ಟೆಯಲ್ಲಿ ಹುಟ್ಟಿದ ಇವರು ದಾಸಿಪುತ್ರರು ಅಷ್ಟೇ.

ರಾಣಿಯರು ಇವರನ್ನು ತಮ್ಮ ಸಹವಾಸದಲ್ಲಿರಿಸಿಕೊಂಡಿರುವುದು ಎರಡು ಕಾರಣಗಳಿಗಾಗಿ. ಒಂದು – ಊಟೋಪಚಾರ, ಪ್ರಸಾಧನ ಮುಂತಾದ ಸಾಮಗ್ರಿಗಳನ್ನು ಸಜ್ಜುಗೊಳಿಸುವರು. ಎರಡು – ಹಾಡು–ಕತೆ ಹೇಳುತ್ತ ರಾಣಿಯರನ್ನು ಸದಾ ಸಂತೋಷದಲ್ಲಿರಿಸುವವರು – ಇವರು ವಿಳಾಸಿನಿಯರು. ಮೂರು – ರಾಯರು ಹೋದಲ್ಲೆಲ್ಲ ಅವರ ವೈಭಬಕ್ಕಾಗಿ – ವಿಶೇಷ ಸಂದರ್ಭಗಳಲ್ಲಿ ಕಳಸಕನ್ನಡಿ ಹಿಡಿದುಕೊಂಡು –ಅವರೊಂದಿಗಿರುವವರು ಕೆಲವು ಜನ.

ರಾಣಿಯರ ಆಧೀನದಲ್ಲಿರುವರು ರಾಣಿಯರು ಹೋದಲ್ಲೆಲ್ಲ ಅವರ ಹಿಂದುಮುಂದು ಇದ್ದುಕೊಂಡಿರುವುದು ಅವರಿಗೆ ಪ್ರತಿಷ್ಠೆಯ ವಿಷಯ, ದಾಸಿಯರಿಗೆ ಸೇವೆ. ವಿರಾಟಪರ್ವದಲ್ಲಿ ಸುದೇಷ್ಣಾದೇವಿ ತನ್ನಕುಮಾರಿಯರು ವಿಳಾಸಿನಿ ಜನ ಸಮೇತಳಾಗಿ ದ್ರೌಪದಿಯಲ್ಲಿಗೆ ಬಂದು ಕಾಣಿಕೆ ಕೊಟ್ಟು ನಮಸ್ಕರಿಸುತ್ತಾಳೆ. ಊರ್ವಸಿ ರಾಣಿಯಲ್ಲದಿದ್ದರೂ ಪ್ರಭುತ್ವದ ಅಹಮಿಕೆಯನ್ನು ಹೊಂದಿರುವವಳು. ಇಂತಹ ಊರ್ವಸಿ ಅರ್ಜುನನನ್ನು ಒಲಿಸಿಕೊಳ್ಳಲು ಬರುವಾಗ ಅವಳ ಸೇವೆಯಲ್ಲಿದ್ದವರನ್ನು ಕುಮಾರವ್ಯಾಸ ವಿವರಿಸುತ್ತಾನೆ. ಊರ್ವಸಿ ಹೊರಟರೆ ಕೆಲವರು ಹಡಪಗಳನ್ನು ಹೊತ್ತುಕೊಂಡರು, ಕೆಲವರು ಚಾಮರ ಹಿಡಿದರು,ಕೆಲವರು ಹಾವುಗೆ ಹಿಡಿದರು, ಕೆಲವರು ಹೊಂಗಳಸುಗಳನ್ನು ತಲೆಯ ಮೇಲೆ ಹೊತ್ತುಕೊಂಡರೆ ಇನ್ನು ಕೆಲವರು ಬೀಸಣಿಕೆ ಬೀಸತೊಡಗಿದರು. ಊರ್ವಸಿ ಅರ್ಜುನನ ಅರಮನೆಯನ್ನು ಪ್ರವೇಶಿಸುತ್ತಿದ್ದಂತೆ ಇವರೆಲ್ಲ ಅಲ್ಲಲ್ಲಿ ಬಾಗಿಲುಗಳಲ್ಲಿ ಕಾವಲು ನಿಂತರು – ಇದು ಊರ್ವಸಿಯ ಊಳಿಗ ಪರಿವಾರ. ಇವರು ಬೇರೆ ಬೇರೆ ಕರ್ತವ್ಯಗಳಲ್ಲಿ ನಿಯೋಜಿಸಲ್ಪಟ್ಟಿರುತ್ತಾರೆ. ಈ ಒಳವೃತ್ತಿಗಳು ಅವರವರಿಗೆ ಕಡ್ಡಾಯವಾಗಿರಬಹುದು. ಹಡಪ, ಬೀಸಣಿಕೆ, ಚಾಮರ ಎಲ್ಲವುಗಳ ಸಂಗಡ ಹಾವುಗೆಗಳನ್ನು ಹಿಡಿಯವವರೂ ಇದ್ದುದು ವಿಶೇಷವೆನಿಸುತ್ತದೆ. ಒಬ್ಬರ ಹಾವುಗೆಗಳನ್ನು ಹಿಡಿಯುವುದು ಅಥವಾ ಅವನ್ನು ಮೆಟ್ಟಲು ಅನುಕೂಲಿಸುವುದು ಸೇವೆಯ ನಿಕೃಷ್ಟತೆಯನ್ನು ಹೇಳುತ್ತದೆ. ವಿಚಿತ್ರವೆಂದರೆ ಸೇವೆಯ ತರತಮಭಾವಗಳಾವವೂ ಊಳಿಗದವರಿಗಿರುವುದಿಲ್ಲ. ಬಹುಶಃ ಇಂಥ ಸೇವೆಗಳೆಲ್ಲ ವಂಶವಾಹಿನಿಯಾಗಿ ಬಂದಿರುವುದರಿಂದ ಜೀವಿಸುವ ಅನಿವಾರ್ಯತೆ ಯಾವುದೇ ಬಗೆಯ ಆತ್ಮಪ್ರತ್ಯಯವನ್ನು ಕಳೆದುಬಿಡುತ್ತದೆ. ಅಶನ–ವಸನವೇ ಕಾರಣವಾಗಿ ಪರಾವಲಂಬಿತ್ವ ಬದುಕಿನಲ್ಲಿ ಇದೆಲ್ಲ ಸಾಮಾನ್ಯವೆಂಬಂತೆ ನಡೆದು ಹೋಗುತ್ತದೆ.

ತುಂಬ ಕೆಟ್ಟದ್ದೆಂದರೆ ದಾಸಿಯರು ಒಂದು ಕೈಯಿಂದ ಇನ್ನೊಂದು ಕೈಗೆ ಕಾಣಿಕೆಯಾಗಿ ವರ್ಗಾಯಿಸಲ್ಪಡುವುದು. ಸಂತೋಷ ಸಂದರ್ಭಗಳಲ್ಲಿ ರಾಜನೊಬ್ಬ ಇನ್ನೊಬ್ಬನಿಗೆ ಕಾಣಿಕೆ ಕೊಡುವ ಸಂದರ್ಭದಲ್ಲಿ, ಯುದ್ಧ ಸಮಯದಲ್ಲಿ ಜಯಶಾಲಿಯಾದ ರಾಜನಿಗೆ ಸೋತವರು ಕಾಣಿಕೆ ಕೊಡುವ ಸಂದರ್ಭದಲ್ಲಿ ಈ ಹಲವು ಬಗೆಯ ಕಾಣಿಕೆಗಳೊಂದಿಗೆ ಹೆಣ್ಣು ಮಕ್ಕಳೂ ಕಾಣಿಕೆಯ ರೂಪದಲ್ಲಿ ಕೊಡಲ್ಪಡುತ್ತಿದ್ದರು. ರಾಜಸೂಯ ಯಾಗ ಪೂರ್ವದಲ್ಲಿ ಪಾಂಡವರು ದಿಗ್ವಿಜಯ ಹೊರಟು ಹರಿವರ್ಷ, ಗಂಧಮಾದನಗಿರಿ, ನೀಲಗಿರಿ, ಹಿರಣ್ಮಯಿ ಮುಂತಾದ ಪ್ರದೇಶಗಳ ಮೇಲೆ ದಾಳಿ ಮಾಡಿದಾಗ ಅಲ್ಲಿ ಸೋತ ಅನೇಕ ರಾಜರು ಬೆಲೆಬಾಳುವ ವಸ್ತುಗಳೊಂದಿಗೆ ದಾಸಿಯರನ್ನೂ ಅರ್ಜುನನಿಗೆ ಕಾಣಿಕೆಯಾಗಿ ನೀಡಿರುವುದನ್ನು ಹಿಂದೆಯೇ ನೋಡಿದ್ದೇವೆ. ಅಂದರೆ ಹಲವು ವಸ್ತುಗಳೊಂದಿಗೆ ದಾಸಿಯೂ ವಸ್ತುವಾಗಿ, ಪರಿಚಾರಿಕೆಯಾಗಿಯೋ, ಉಪಭೋಗದ ವಸ್ತುವಾಗಿಯೋ ಹಸ್ತಾಂತರಗೊಳ್ಳುವುದು ಕೇವಲ ಊಳಿಗ ಮಾಡಿಕೊಂಡಿರುವ ಮಹಿಳಾ ಸಮುದಾಯಕಷ್ಟೇ ಅಲ್ಲ ಒಂದು ರೀತಿಯಲ್ಲಿ ಸ್ತ್ರೀಕುಲಕ್ಕೇ ಮಾಡಿದ ಅಪಮಾನವಾಗಿ ತೋರುತ್ತದೆ.

ಪಾಂಡುರಾಜನಿಗೆ ಗಂಡುಮಕ್ಕಳು ಜನಿಸಿದ ವೃತ್ತಾಂತವನ್ನು ಕೇಳಿ ವಸುದೇವನು ದ್ವಾರಕೆಯಿಂದ ರತ್ನಾಭರಣ, ಕರಿತುರಗಗಳೊಂದಿಗೆ ವಿಲಾಸಿನಿಯರನ್ನೂ ಕಳುಹಿಸಿಕೊಟ್ಟನು. ಇದನ್ನೆಲ್ಲ ನೋಡಿದರೆ ಆಕಾಲದ ಪ್ರಭುತ್ವವು ಹೆಣ್ಣನ್ನು ನಡೆಯಿಸಿಕೊಂಡ ರೀತಿ–ಸ್ವಯಂ ವೇದ್ಯವಾಗುತ್ತದೆ. ಕಾಣಿಕೆ ಕೊಡುವುದಾಗಲಿ, ಸ್ವೀಕರಣೆಯಾಗಲಿ ಒಂದು ರಾಜಸಂಪ್ರದಾಯವೆಂದು ಬೇರೊಂದು ರೀತಿಯಲ್ಲಿ ಇದನ್ನು ಸಮರ್ಥಿಸಿಕೊಳ್ಳಬಹುದಾದರೂ ಇದರ ಹಿಂದಿರುವ ಹೇತು ಅಷ್ಟೇ ದಟ್ಟವಾಗಿ ಪ್ರಭುತ್ವದ ವಿರೂಪ ಮುಖವನ್ನು ಪರಿಚಯಿಸಿಕೊಡುತ್ತದೆ.

ಹೀಗೆ ಕಾಣಿಸಿಕೊಳ್ಳುವ ಪರಿಚಾರಿಕೆಯರು ಕೇವಲ ರಾಣಿವಾಸದಲ್ಲಿ ಮಾತ್ರವಿಲ್ಲ ರಾಜರ ಸಂಗಡವೂ ಕಾಣಿಸಿಕೊಳ್ಳುತ್ತಾರೆ. ದುರ್ಯೋಧನನ ಘೋಷಯಾತ್ರೆಯ ಸಂದರ್ಭದಲ್ಲಿ ಸಂಗಡ ನಾರಿಯರಿದ್ದ ವಿಷಯ ಕುಮಾರವ್ಯಾಸ ಭಾರತದ ಅರಣ್ಯ ಪರ್ವದ ೧೮ನೆಯ ಸಂಧಿಯಲ್ಲಿದೆ.

ತಮ್ಮ ದಾಸಿಯರ ಮೇಲೆ ರಾಜರಾದವರಿಗಿದ್ದ ಅಧಿಕಾರದ ಪರಾಕಾಷ್ಠತೆ ದ್ಯೂತ ಪ್ರಸಂಗದಲ್ಲಿ ವ್ಯಕ್ತವಾಗುತ್ತದೆ. ಧರ್ಮರಾಯನು ಹೇಮ–ರತ್ನಸ್ತೋಮ ಸಾವಿರ ಮತ್ತಗಜಗಳ ತರುವಾಯ ಹತ್ತುಸಾವಿರ ಸಂಖ್ಯೆಯ ಮಾನಿನಿಯರನ್ನು (ಮಡದಿಯರ ಕೆಳದಿಯರು) ಸೋತನು. ಧರ್ಮರಾಜನ ಜೂಜಿನ ದೌರ್ಬಲ್ಯ ಎಷ್ಟೆಂದರೆ ತಮ್ಮ ಸೇವೆಯಲ್ಲಿರುವ ಹೆಣ್ಣು ಮಕ್ಕಳೂ ಬೇರೆ ಬೇರೆ ವಸ್ತುಗಳಂತೆಯೇ ಪರಿಗಣಿಸಲ್ಪಡುತ್ತಾರೆ.

ಕುರುಕ್ಷೇತ್ರ ಯುದ್ಧದಲ್ಲಿ ಹೋರಾಡಿ ಮಡಿದ ಯೋಧರ ಮಡದಿಯರ ಸ್ಥಿತಿ ಇನ್ನೂ ದಾರುಣವಾದುದು. ತನ್ನ ಪತಿ–ಸೈನ್ಯದಲ್ಲಿದ್ದಾನೆ, ಕಷ್ಟವೋ ಸುಖವೋ ತಮಗಾಗಿ ಜೀವ ಸವೆಸುತ್ತಿದ್ದಾನೆ ಎಂಬ ಸಂಗತಿ ಯಾವ ಯೋಧನ ಮಡದಿಗಾದರೂ ಮಕ್ಕಳನ್ನು ಕಟ್ಟಿಕೊಂಡು ಕುಟುಂಬದ ನೊಗ ಹೊರಲು ಅನುವು ಮಾಡಿಕೊಡುತ್ತದೆ. ಆದರೆ ಮಗನಾಗಿ, ಪತಿಯಾಗಿ, ತಂದೆಯಾಗಿ ಕುಟುಂಬಕ್ಕೆ ಆಧಾರವಾಗಿರುವಾತ ಹೀಗೆ ಯುದ್ಧಭೂಮಿಯಲ್ಲಿ ಮಡಿದು ಹೋದರೆ ಭವಿಷ್ಯವೆಂಬುದು ನೆಲೆಯಿರದ ಕೂಪಕ್ಕೆ ತಳ್ಳಲ್ಪಡುತ್ತದೆ. ಒಬ್ಬರಲ್ಲ, ಇಬ್ಬರಲ್ಲ, ಅಕ್ಷೋಹಿಣಿಗಟ್ಟಲೆ ರಣರಂಗದಲ್ಲಿ ಮರಣವನ್ನಪ್ಪುವ ಸೈನಿಕ ಸಂಖ್ಯೆಯ ಕನಿಷ್ಠ ಎರಡು ಮೂರು ಪಟ್ಟು ಹೆಚ್ಚಿನ ಸಂಖ್ಯೆಯ ಪರಿವಾರ ಅನಾಥವಾಗುವ ದಾರುಣತೆಯನ್ನು ತುಂಬಿಕೊಡಲು ಯಾವ ಸಾಧನಗಳೂ ಇಲ್ಲ.

ಕುರುಕ್ಷೇತ್ರ ಯುದ್ಧ ಮುಗಿದಿದೆ ಅಕ್ಷೋಹಿಣಿ ಗಟ್ಟಲೆ ಸೈನ್ಯ ಸಾವಿಗೀಡಾಗಿ ಯುದ್ಧಭೂಮಿಯಲ್ಲಿ ರಾಶಿಯಾಗಿದೆ. ಗಾಂಧಾರಿಯೊಂಧಿಗೆ ರಣರಂಗಕ್ಕೆ ಬಂದ ಸೈನಿಕರ ಸತಿಯರು ರೋದಿಸುವ ಸಂದರ್ಭದಲ್ಲಿ ಕುಮಾರವ್ಯಾಸ ಕಂಡರಿಸಿದ ಎರಡು ಪದ್ಯಗಳಿಲ್ಲ ಅವಲೋಕನಕ್ಕೆ ಅರ್ಹವಾಗಿವೆ.

ಸೂಸಿತಬಲಾ ವೃಂದ ಕೆದರಿದ
ಕೇಶಪಾಶದ ತೆಳುವಸರ ನಿ
ಟ್ಟಾಸುರದ ಹೊಯ್ಲುಗಳ ಲೋಚನವಾರಿಧಾರಿಗಳ
ಆಸುರಾಕ್ರಂದನದ ಶೋಕಾ
ವೇಶ ಬಹಳದ ಬಾಲೆಯರು ಪ್ರಾ
ಣೇಶ ಮೈದೋರೆನುತ ಹೊಕ್ಕರಸಿದರು ಕಳನೊಳಗೆ (ಗದಾ-೧೨-೫)

ಹಿರಿದರಗಲಕೆ ನಾರಿಯರು ಕುರು
ಧರಣಿಯಲಿ ತಂತಮ್ಮ ಪತಿಗಳ
ಕರಿಗಳಲಿ ತುರಗದಲಿ ರಥದಲಿ ಕಂಡರಲ್ಲಲ್ಲಿ
ಶಿರವ ಮುಂಡಾಡಿದರು ಹೆಣನಲಿ
ಹೊರಳಿದರು ವಿವಿಧ ಪ್ರಳಾಪದ
ಪರಿಠವನೆಂತರಿದರೋ ವರ್ಣಿಸುವಡರಿದೆಂದ (ಗದಾ-೧೨-೬)

– ಮೊದಲನೆಯ ಪದ್ಯ ತಮ್ಮ ತಮ್ಮ ಪತಿಗಳಿಗೊದಗಿದ ದಾರುಣ ಸ್ಥಿತಿಗೆ ವಿಹ್ವಲಗೊಂಡು ಯುದ್ಧಭೂಮಿಗೆ ಆಗಮಿಸುತ್ತಿರುವ ವನಿತೆಯರ ಕರುಣಾಜನಕ ದೃಶ್ಯವನ್ನು ಒದಗಿಸುತ್ತದೆ. ಕೆದರಿದ ಕೇಶಪಾಶದಿಂದ ಕೂಡಿದ ಇವರೆಲ್ಲ ತೆಳುವಸರನ್ನು ಕೈಯಿಂದ ಹೊಡೆದುಕೊಳ್ಳುತ್ತಿದ್ದಾರೆ. ಧಾರೆಗಟ್ಟಿದ ಕಣ್ಣೀರು, ಶೋಕಾವೇಶದಿಂದ ಹೊರಟ ಆಕ್ರಂದನ ಎಲ್ಲಕ್ಕೂ ಮೀರಿ 'ಪ್ರಾಣೇಶ ಮೈದೋರು' ಎನ್ನುತ್ತ ಭಾವಾವೇಶದಿಂದ ಧಾವಿಸುತ್ತಿರುವ ದೃಶ್ಯ ಮನಕುಲಕುವ ಚಿತ್ರವಾಗಿದೆ. ಎರಡನೆಯ ಪದ್ಯ ಶೋಕದಗ್ಧಹೃದಯಗಳ ಮಾನಸಿಕ ಅಸ್ವಸ್ಥತೆಯನ್ನು ವಿವರಿಸುತ್ತದೆ. ರಣರಂಗದ ಉದ್ದಗಲಕ್ಕೂ ಹರಿದಾಡಿ ತಮ್ಮ ಪತಿಗಳನ್ನು ಹುಡುಕಿದರು. ಕರಿ, ತುರಗ, ರಥಗಳ ಮೇಲೆ ಒರಗಿದ ಪತಿಗಳ ಶಿರಗಳನ್ನು ಮುಂಡಾಡಿದರು, ಹೆಣಗಳ ಮೇಲೆ ಹೊರಳಾಡಿ ಪ್ರಳಾಪಿಸಿದರು. ಅವರ ಶೋಕಕ್ಕೆ ಇದಕ್ಕಿಂತ ಹೆಚ್ಚಿನ ಬೇರಾವ ವರ್ಣನೆಗಳು ಬೇಕು ?

ಗಮನಾರ್ಹ ಸಂಗತಿಯೆಂದರೆ ಕುಮಾರವ್ಯಾಸ ಜನಸಾಮಾನ್ಯರ ದುಃಖವನ್ನು ಗ್ರಹಿಸಿರುವ ರೀತಿ. ಕೌರವ ಪಾಂಡವರ ಹಣಾಹಣಿಯ ವಿವರಣೆಯಲ್ಲಿ ಜನಸಾಮಾನ್ಯರನ್ನು ಕಣ್ಣೆತ್ತಿಯೂ ಕಾಣಲಾರದಷ್ಟು ಘಟನೆಗಳು ಒತ್ತೊತ್ತಾಗಿ ಸಂಕೀರ್ಣಗೊಂಡಿವೆ. ಅದರಲ್ಲಿಯೂ ಹದಿನೆಂಟು ದಿನಗಳ ಕಾಲ ನಡೆದ ಖಾಡಾಖಾಡಿಯಲ್ಲಿ ಸಾಮಾನ್ಯರ ಯೋಚನೆಗೆ ಲವಲೇಶವೂ ಅವಕಾಶವಿಲ್ಲ. ಆದರೆ ಈ ಮಹಾ ಸಂಗ್ರಾಮದ ಘೋರ ಫಲಿತದಲ್ಲಿ ನುಗ್ಗಾದ, ಬದುಕು ಕಳೆದುಕೊಂಡ ಯೋಧರ ಬಗೆಗೆ ಕವಿತಾಳಿರುವ

ಅನುಕಂಪ ಈ ಮೇಲಿಂದ ಪದ್ಯಗಳಲ್ಲಿದೆ. ಕವಿ ಇದೆಲ್ಲ ತನಗೊದಗಿದ ದುಃಖವೆಂಬ ರೀತಿಯಲ್ಲಿ ಪರಿತಾಪ ಪಟ್ಟಿದ್ದಾನೆ. ಕೌರವ ಪಾಂಡವರು ಬೆಳೆಯಿಸಿಕೊಂಡು ಬಂದ ತೀವ್ರ ಹಗೆತನದ ಅವಲೋಕನದಲ್ಲಿ ಜನಸಾಮಾನ್ಯರು ದೂರ ಸರಿದಿದ್ದಾರೆನ್ನಿಸಿದರೂ ಯುದ್ಧಾನಂತರದಲ್ಲಿ ಬದುಕಿಗೊಡ್ಡಿದ ಹಿಂಸೆ, ಸಾವುಗಳು ಕವಿಯ ಸಹಾನುಭೂತಿಯನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಗಳಿಸಿಕೊಂಡಿವೆ. ಯಾಕೆಂದರೆ ಅರಮನೆಯ ಸೇವೆಯಲ್ಲಿರುವ ದಾಸಿಯರಿಗೆ ಅಸ್ತಿತ್ವವಿಲ್ಲ. ಸೈನಿಕರ ಸತಿಯರಿಗೆ ಭವಿಷ್ಯದ ಬದುಕಿಲ್ಲ. ಅಂತಿಮದಲ್ಲಿ ಇಬ್ಬರೂ ಒಂದೇ ಉಸಿರಿದ್ದೂ ಸತ್ತವರು.

ಪ್ರಜಾವರ್ಗ:

ರಾಜಪ್ರಭುತ್ವದ ಸೌಧನಿಂತಿರುವುದೇ ಪ್ರಜಾವರ್ಗದ ಬುನಾದಿಯ ಮೇಲೆ. ಆದರೂ ಪ್ರಭುತ್ವಕ್ಕಿರುವ ಓಜಸ್ಸು ಪ್ರಜಾವರ್ಗಕ್ಕಿರುವುದಿಲ್ಲ. ಎರಡು ರಾಜ ಕುಟುಂಬಗಳ ಘರ್ಷಣೆಯ ತಾಕಲಾಟದಲ್ಲಿ ಪ್ರಜೆಗಳ ಬದುಕು ಭಾವಸ್ಪಂದನೆಗಳ ವಿವರಣೆಗೆ ಮಹಾಭಾರತದಲ್ಲಿ ಅವಕಾಶ ಕಡಿಮೆ. ಸೈನಿಕರು ಊಳಿಗದವರು – ಇವರನ್ನು ಬಿಟ್ಟರೆ ಉಳಿದ ಜನಸಾಮಾನ್ಯರು ಹೇಗಿದ್ದರು ಅವರ ವೃತ್ತಿ, ಆಹಾರ–ವಿಹಾರ, ಸಂಪ್ರದಾಯ–ಆಚರಣೆ ಹೇಗಿದ್ದವು ಯಾವುದನ್ನೂ ವಿವರಿಸಲಾಗದಷ್ಟು ಪ್ರಭುತ್ವದ ಭಾರ ಭಾರತವನ್ನು ತುಂಬಿಕೊಂಡಿದೆ. ಆದರೂ ವಿಶೇಷ ಸಂದರ್ಭಗಳಲ್ಲಿ ಪ್ರಜೆಗಳು ಕಾಣಿಸಿಕೊಳ್ಳುತ್ತಾರೆ. ಪ್ರಭುತ್ವದ ಆಗುಹೋಗುಗಳಿಗೆ ತಮ್ಮತಮ್ಮಲ್ಲೇ ಪ್ರತಿಕ್ರಯಿಸುವ, ಪ್ರಭುತ್ವದ ಅಟ್ಟಹಾಸಗಳಿಗೆ ಭಯಗೊಳ್ಳುವ, ಪ್ರಭುತ್ವವನ್ನು ಮುಗ್ಧವಾಗಿ ಪ್ರೀತಿಸುವ–ಇಂಥ ಅನೇಕ ಸಂದರ್ಭಗಳು ಆಳಿಸಿಕೊಳ್ಳುವ ಜನಸಾಮಾನ್ಯರ ಹಲವು ಭಾವನೆಗಳನ್ನು ಅಭಿವ್ಯಕ್ತಿಸುತ್ತವೆ.

ನಿರೀಕ್ಷೆ – ಆತಂಕ: ಕೌರವ ಪಾಂಡವರ ವೈರ ಬಾಲ್ಯದಿಂದಲೂ ಬೆಳೆಯುತ್ತ ಬಂದಿತು. ಧನುರ್ವಿದ್ಯಾ ಪ್ರದರ್ಶನದಲ್ಲಿ ಇದು ತುಂಬ ಸ್ಫುಟವಾಗಿ ತೋರಿತು. ದ್ರೋಣನ ಬಯಕೆಯಂತೆ ದ್ರುಪದನನ್ನು ಬಂಧಿಸಿ ತರುವಲ್ಲಿ ಕೌರವ–ಪಾಂಡವರಲ್ಲಿ ಸ್ಪರ್ಧೆಯೇ ಏರ್ಪಟ್ಟಿತು. ಇದೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತ ಬಂದ ಹಸ್ತಿನಾವತಿಯ ಜನ ಇವರಿಬ್ಬರ ಹಗೆತನದಲ್ಲಿ ತಮ್ಮ ಭವಿಷ್ಯ ಏನಾಗಬೇಕು ಎಂದು ಆತಂಕಗೊಂಡರು. ಒಟ್ಟಾರೆ ಕೌರವ – ಪಾಂಡವರಿಬ್ಬರೂ ಕೂಡಿ ಬಾಳಲಾರರು ಎಂಬ ನಿರ್ಣಯಕ್ಕೆ ಬರುತ್ತಾರೆ. "ಪಾಂಡವರು ಬೇರೆ ಎಲ್ಲಾದರೂ ಇರಲಿ ಕೌರವರು ನೂರು ಜನ ಪುರವನ್ನಾಳಲಿ ಅಥವಾ ಕೌರವರು ಬೇರೆ ಎಲ್ಲಾದರೂ ಇರಲಿ ಪಾಂಡವರು ಪುರವನ್ನಾಳಲಿ. ಹಸ್ತಿನಾವತಿಪುರವು ನೂಗಾ ಐದು ಜನವನ್ನೂ ಒಟ್ಟಿಗೆ ಸಹಿಸಿಕೊಂಡಿರಲಾರದು" ಎಂದುಕೊಂಡರು. ಒಂದು ಪ್ರಭುತ್ವವನ್ನೇ ಸಹಿಸುವುದು ಕಷ್ಟ, ಅಂಥದರಲ್ಲಿ ಎರಡು ಪ್ರಭುತ್ವಗಳನ್ನು ಹೇಗೆ ಸಹಿಸಿಕೊಳ್ಳುವುದು ? ಇದು ಪ್ರಜೆಗಳ ಆತಂಕ. ಈ ಆತಂಕ ಸಕಾರಣವಾಗಿಯೇ ಇದೆ. ತಾವು ಸುಖವಾಗಿರಬೇಕೆಂದು ಆಶಿಸಿ ಆ ಕಾರಣವಾಗಿಯೇ ಹಲವು ನಿರೀಕ್ಷೆಗಳನ್ನು ಪ್ರಭುತ್ವದಲ್ಲಿ ಇಟ್ಟುಕೊಳ್ಳುವುದು ಸಹಜವಾಗಿಯೇ ಇದೆ. ಆಕಾಲದ ನಂಬಿಕೆಯಂತೆ ಪ್ರಭುತ್ವ ಹೇರಿಕೆಯಾಗಿ ತೋರುವುದಿಲ್ಲ. ಎಲ್ಲವೂ ಸಹಜವಾಗಿ ಇದ್ದರೆ ಬದುಕು ಸಾಗಿಸಿಕೊಂಡು ಹೋಗಬಹುದು. ಆದರೆ ಹಸ್ತಿನಾವತಿಯ ಜನರ ಸಮಸ್ಯೆ ಬೇರೆಯೇ ಆಗಿದೆ. ತಮ್ಮ ನೆಮ್ಮದಿಯ ಬಾಳಿಗೆ ಈ ರಾಜಕುಮಾರರ ಬದ್ಧದ್ವೇಷ ವ್ಯತ್ಯಯವನ್ನುಂಟು ಮಾಡಬಾರದು ಎಂದು ಬಯಸುತ್ತಾರೆ. ಆದಿಪರ್ವದ ಹಲವು ಪುಟಗಳಲ್ಲಿ ಪ್ರಭುತ್ವದ ಘರ್ಷಣೆಯೇ ತುಂಬಿಕೊಂಡಿದೆ.

ಪ್ರಭುತ್ವದ ವಕ್ರನೋಟ ಎಷ್ಟು ಕೆಟ್ಟದ್ದು, ಅದು ಎಂಥ ಹಿಂಸೆಯನ್ನು ತಂದೊಡ್ಡಬಲ್ಲುದು ಎಂಬುದು ಪ್ರಜಾವರ್ಗಕ್ಕೆಗೊತ್ತಿದೆ. ಅದೂ ಯುದ್ಧ ಸಮಯದಲ್ಲಿ ಅದೂ ಸೋಲುಕಂಡ ರಾಜನ

ಪರಿವಾರದವರು ಪಡುವ ಆತಂಕ ಅವರನ್ನು ಭಯಾವರಣಕ್ಕೆ ನೂಕುತ್ತದೆ. ಜಯಶಾಲಿಯಾದ ಅರಸ ಅಥವಾ ಅವನ ಪ್ರತಿನಿಧಿಗಳು ಕೊಡಬಹುದಾದ ಶಿಕ್ಷೆ ಅವರನ್ನು ಹೆಜ್ಜೆ ಹೆಜ್ಜೆಗೂ ಕಂಗೆಡಿಸುತ್ತದೆ. ಜರಾಸಂಧನೊಂದಿಗೆ ಯುದ್ಧ ಮಾಡಿ ಅವನನ್ನು ಭೀಮ ಸೀಳಿ ಹಾಕಿದ ಮೇಲೆ ಇದನ್ನೆಲ್ಲ ನೋಡುತ್ತಿದ್ದ ಪುರಜನರ ಮುಂದೇನು ಎಂದು ಗಾಬರಿಗೊಂಡು ಹಾ ಹಾ ಎಂದು ಕೂಗಾಡತೊಡಗಿದರು. ಜರಾಸಂಧನ ರಾಣಿಯರು ತಮ್ಮ ಅರಮನೆಯಿಂದ ಹೊರ ಹೊರಟರು. ಜನರು ತಮ್ಮ ಮನೆಗಳ ಕದವಿಕ್ಕಿಕೊಂಡು ಗುಡ್ಡ ಬೆಟ್ಟ ಸೇರಿಕೊಂಡು ಗುಹೆಗಳಲ್ಲಿ ಅಡಗಿದರು. ಈ ಸಂದರ್ಭದಲ್ಲಿ ತೋರುವ ಜನರ ಭಯ ಮಿಶ್ರಿತ ಕೋಲಾಹಲ ಪ್ರಭುತ್ವದ ಭೀತಿಯನ್ನು ನಿಖರಗೊಳಿಸುತ್ತದೆ. ಈ ಸಂದರ್ಭದಲ್ಲಿ ಕೃಷ್ಣನು ಜನರಿಗೆ ಅಭಯ ನೀಡುತ್ತಾನೆ. "ಪುರದವರು ಮಗಧರಾಜನಪರಿವಾರದವರು ಊಳಿಗದವರು ಯಾರೂ ಅಂಜಬೇಡಿರಿ. ಜರಾಸಂಧನ ಮಗನನ್ನು ಕರೆಯಿರಿ, ಅವನನ್ನು ನಾವು ಶಿಕ್ಷಿಸುವುದಿಲ್ಲ" ತರುವಾಯವೇ ಎಲ್ಲ ಶಾಂತವಾಯಿತು. ಇಲ್ಲೆಲ್ಲ ತೋರುವ ಪ್ರಜೆಗಳ ಮಾನಸಿಕ ಸ್ಥಿತಿ ಅವಲೋಕನಾರ್ಹವೆನಿಸುತ್ತದೆ.

ಯುದ್ಧ ಸಂದರ್ಭದಲ್ಲಿ ಜನಸಾಮಾನ್ಯರು ಪಡುವ ಆತಂಕಗದುಗಿನ ಭಾರತದಲ್ಲಿ ಅನೇಕ ಕಡೆಗಳಲ್ಲಿ ತೋರ್ಪಟ್ಟಿದೆ. ಯುದ್ಧದಲ್ಲಿ ಯಾರು ಜಯಶಾಲಿಯಾದರೂ ಅವನು ರಾಜನೇ ಆಗಿರುತ್ತಾನೆ. ಯುದ್ಧದಿಂದ ಇವರು ಗಳಿಸುವ ಲಾಭ ಒತ್ತಟ್ಟಿಗಿರಲಿ, ಸೈನಿಕರು ಪಡುವ ಸಾವು–ನೋವುಗಳೊಂದಿಗೆ ಸೈನಿಕರ ಪರಿವಾರದವರು ಪಡುವ ಆತಂಕ ಹಿಂಸೆ ಎನ್ನಿಸುತ್ತದೆ. ಜರಾಸಂಧನ ಮರಣಾನಂತರ ಅವನ ಪ್ರಜೆಗಳು, ಪರಿವಾರದವರ ಭಯವನ್ನು ಉಪಶಮಿಸಲು ಅಸುರರಿಪು ಏನು ಸಮಾಧಾನ ಹೇಳಿದರೂ ಅದನ್ನು ಥಟ್ಟನೆ ಗ್ರಹಿಸುವ ಮನಃಸ್ಥಿತಿ ಜರಾಸಂಧನ ಪ್ರಜೆಗಳಿಗಿಲ್ಲ. ಯುದ್ಧ ತರುವ ಮಾರಣಹೋಮ ಒಂದು ಬಗೆಯದಾದರೆ ಸೋತರಾಜನ ಪರಿವಾರದವರು ಪಡುವಭಯಮೂಲ ಹಿಂಸೆ ಮರಣಕ್ಕಿಂತಲೂ ಭೀಕರವಾದುದು. ಆದರೂ ಇಲ್ಲಿ ಬೆನ್ನಹಿಂದಿನ ರಕ್ಷೆಯಾಗಿ ಶ್ರೀಕೃಷ್ಣನ ಕೃಪಾಕಟಾಕ್ಷ ಪ್ರಜೆಗಳನ್ನು ಸಂರಕ್ಷಿಸಿತು ಇದೊಂದೇ ಇಲ್ಲಿಯ ಸಮಾಧಾನ.

ಮಹಾರಾಜರ ನಿರಂತರ ಸೇವೆಯಲ್ಲಿ ಕಂಡೂಕಾಣದಂತಿರುವ ಶ್ರಮಿಕವರ್ಗದ ಉಲ್ಲೇಖವೂ ಮುಖ್ಯವೆನಿಸುತ್ತದೆ. ವಿಶೇಷವಾಗಿ ರಾಜರ ಅಪೇಕ್ಷೆಯನ್ನು ಅನುಲಕ್ಷಿಸಿ ಅವರಿಗೆ ಭವನಗಳನ್ನು ಕಟ್ಟಿಕೊಡುವ ಶಿಲ್ಪಿಗಳು ಅಲ್ಲಲ್ಲಿ ಗೋಚರಿಸುತ್ತಾರೆ. ಮಯನು ೧೪ ತಿಂಗಳು ಕಾಲ ಶ್ರಮದಿಂದ ನಿರ್ಮಿಸಿದ ಸಭಾಮಂಟಪವನ್ನು ಎಂಟುಸಾವಿರ ಕಿಂಕರರು ಇಂದ್ರಪ್ರಸ್ಥಪುರಕ್ಕೆ ಸಾಗಿಸುತ್ತಾರೆ. ಹತ್ತು ಸಾವಿರ ಕೈಪ್ರಮಾಣದ್ದು ಅದರ ಸುತ್ತಳತೆ; ಅದನ್ನು ಸಾಗಿಸುವ ಸಂದರ್ಭದಲ್ಲಿ ಅಲ್ಲಿಯ ಸೂಕ್ಷ್ಮ ಕೆತ್ತನೆಗಳು ಉದುರಬಾರದು ! ಮಯ ನಿರ್ಮಿತ ಸಭಾಮಂಟಪಕ್ಕೆ ಮತ್ಸರಿಸಿದ ಕೌರವರು ಹಸ್ತಿನಾವತಿಯಲ್ಲಿ ತಾವೂ ಒಂದು ಸಭಾಮಂಟಪವನ್ನು ನಿರ್ಮಿಸುತ್ತಾರೆ. ಸಭಾಪರ್ವದ ೧೨ನೆಯ ಸಂಧಿಯಲ್ಲಿ ಬರುವ ಈ ಸಭಾಮಂಟಪದ ಭವ್ಯತೆಯೆಂದರೆ ಈ ಸಭಾಮಂಟಪಕ್ಕಾಗಿ ದುರ್ಯೋಧನನು ಕೋಟಿಗಟ್ಟಲೆ ಮರಗಳನ್ನೂ ಬಗೆಬಗೆಯ ಶಿಲೆಗಳನ್ನೂ ತರಿಸಿಕೊಟ್ಟನು. ಸಾವಿರಾರು ಸ್ತಂಭಗಳನ್ನು ರಾಶಿಗೂಡಿಸಿದನು. ಹೀಗೆಯೇ ದ್ರೌಪದಿಯ ವಿವಾಹ ಸಂದರ್ಭದಲ್ಲಿ ಪಾಂಚಾಲ ನಗರಿಯಲ್ಲಿ ಎರಡುಯೋಜನದಗಲ ಚಪ್ಪರ ನಿರ್ಮಾಣಗೊಂಡಿತು. ಈ ಎಲ್ಲ ಸಿದ್ಧತೆಗೆ, ರಚನೆಗೆ ತೊಡಗಿಸಿಕೊಳ್ಳುವ ಆಳುಗಳು, ಶಿಲ್ಪಿಗಳು ತಮ್ಮ ಶ್ರಮವನ್ನು ಪರಿಗಣಿಸದೆ ಪ್ರಭುತ್ವದ ಸುಖದ ಬದುಕನ್ನು ಮಾತ್ರ ಹಾರೈಸುತ್ತಾರೆ.

ಕೌರವನ ಘೋಷ ಯಾತ್ರೆಯ ಸಂದರ್ಭದಲ್ಲಿ ದುಡಿವ ವರ್ಗದ ಶ್ರಮ ಏನು ಎಂಬುದು ಮನದಟ್ಟಾಗುತ್ತದೆ. ದ್ವೈತವನದ ಸುಂದರವಾದ ನದಿತೀರದಲ್ಲಿ, ಸರೋವರದದ ದಡದಲ್ಲಿ ಅನೇಕ

ಕಡೆಗಳಲ್ಲಿ ದುರ್ಯೋಧನನ ಪರಿವಾರ ಬೀಡುಬಿಟ್ಟಿತು. ಅಲ್ಲೆಲ್ಲ ಅರಮನೆಯ ಗುಡಿಗಳು ತಲೆಯೆತ್ತಿದವು. ಭದ್ರಭವನಗಳು ನಿರ್ಮಾಣಗೊಂಡವು. ಕೀಲಾರಿಗಳನ್ನು ಕರೆಸಿಕೊಂಡನು. ಹಲವು ಬಗೆಯ ಕೋಟಿಗಟ್ಟಲೆ ತುರುಗಳು ಕಾಣಿಸಿಕೊಂಡವು. ಮೂಲ ಸೌಕರ್ಯಗಳಿಂದ ದೂರಾದ ಕಾಡಿನ ಮಧ್ಯ ಭವನಗಳನ್ನು ನಿರ್ಮಾಣ ಮಾಡಿ ರಾಜಪರಿವಾರವನ್ನು ಸುಖದಿಂದಿರಿಸಲು ಇವರೆಲ್ಲ ಪಡುವ ಶ್ರಮಕ್ಕೆ ಯಾವ ಬೆಲೆ ಕಟ್ಟಬಹುದು ? ಪರಿವಾರಕ್ಕೆ ಒದಗಿದ ಹಸುಗಳು ಕೋಟಿ ಸಂಖ್ಯೆಯಲ್ಲಿದ್ದವು ಎನ್ನುವುದು ಅತಿಶಯೋಕ್ತಿ ಅನ್ನಿಸಿದರೂ ಹಸು-ಗೂಳಿಗಳ ಸಂಖ್ಯಾಬಾಹುಳ್ಳ ವಿಪುಲವಾಗಿಯೇ ಇತ್ತು ಎನ್ನುವುದಕ್ಕೆ ಯಾವ ಅಭ್ಯಂತರವೂ ತೋರುವುದಿಲ್ಲ. ಈ ಎಲ್ಲ ದನಕರುಗಳ ಆರೈಕೆ, ಹೈನುಗಾರಿಕೆಗೆ ಬೇಕಾಗುವ ಆಳು ಹೋಳು. ನೀರು ನಿಡಿ, ಮೇವು ಸಂಗ್ರಹ- ಎಲ್ಲವನ್ನೂ ಲೆಕ್ಕ ಹಾಕಿದರೆ ಅರಸರಾಧೀನದಲ್ಲಿ ದುಡಿವವರ ಪಡಿಪಾಟಲು ಸ್ವಯಂ ವೇದ್ಯವಾಗುತ್ತವೆ. ಘೋಷ ಯಾತ್ರೆಯ ಈ ಎಲ್ಲ ವ್ಯವಸ್ಥೆಯನ್ನು ನೋಡಿದರೆ ಒಂದು ಮಾತು ಸ್ಪಷ್ಟವಾಗುತ್ತದೆ: ನಿರಂತರ ರಾಜ ಪರಿವಾರದೊಂದಿಗೆ ಶ್ರಮಿಕ ವರ್ಗವೊಂದಿತ್ತು. ಅದು ಸ್ಥಾಯಿಯಾಗಿಯೋ ಸಂಚಾರಿಯಾಗಿಯೋ ಅರಸುವರ್ಗದ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿತ್ತು. ಸೈನಿಕರ ಅರ್ಪಣಾಭಾವವಂತೂ ಅಪರೂಪದ್ದು. ಅದನ್ನು ಹಿಂದೆಯೇ ನೋಡಿದ್ದೇವೆ.

ಪ್ರಭುತ್ವದ ಆಡಂಬರ, ಗರ್ವ, ಒತ್ತಡ ಏನೇ ಇರಲಿ ಪ್ರಭುತ್ವದ ಬಗೆಗೆ ಪ್ರಜಾವರ್ಗ ಇರಿಸಿಕೊಂಡಿರುವ ಮುಗ್ಧ ಪ್ರೀತಿ-ಭಕ್ತಿಗಳು ಅವರ ಅಂತರಾಳದ ದನಿಯಾಗಿ ತೋರುತ್ತವೆ. ಇದು ಕೇವಲ ಭಯಕಾರಣವಾಗಿ ಒಡಮೂಡಿ ಬಂದ ಕೃತ್ರಿಮ ಭಾವಸ್ಪಂದನೆಯಾಗಿ ತೋರುವುದಿಲ್ಲ. ಜನಸಾಮಾನ್ಯರು ಇರುವುದೇ ಹಾಗೆ. ಜೂಜಿನಲ್ಲಿ ಸರ್ವಸ್ವವನ್ನೂ ಕಳೆದುಕೊಂಡು ರಾಜಮಂದಿರಬಿಟ್ಟು ವನವಾಸಕ್ಕೆ ಹೊರಟಾಗ ಇವರನ್ನು ಕಂಡು ಶೋಕಿಸುವ ಪ್ರಜೆಗಳ ದುಃಖ ಸನ್ನಿವೇಶವನ್ನು ಕುಮಾರವ್ಯಾಸ ಕೊಡುತ್ತಾನೆ. ರಾಜಬೀದಿಯಲ್ಲಿ ಇವರು ಹೊರಟಂತೆ ಜನಗಳು ಒತ್ತೊತ್ತಾಗಿ ಸೇರಿದ ಕೇರಿಕೇರಿಗಳಲ್ಲಿ ಸಂದಣಿಸಿದ ಮನೆಮನೆ ಮೇಲೆ ದೊಡ್ಡದೊಡ್ಡ ಮರಗಳ ಮೇಲೆ ಪುರದ ಸದನಗಳ ಶಿಖರಗಳ ಮೇಲೆ ಜನದಟ್ಟೈಸಿದ ರೀತಿಯಿಲ್ಲಿ ಪದ್ಯಚಿತ್ರವಾಗಿದೆ.

ಸಂದಣಿಸಿದುದು ಕೇರಿಕೇರಿಯ
ಮಂದಿ ಮನೆ ಮನೆ ಮೇಲೆ ಘನ ತರು
ವೃಂದದಲಿ ಪುರಸದನ ಶಿಖರೌಘದಲಿಶೋಕಿಸುತ
ನಿಂದುದಲ್ಲಿಯದಲ್ಲಿ ನೋಟಕ
ರಿಂದ ಕೆತ್ತುದು ಬೀದಿ ಪುರಜನ
ಬಂದಿಯಲಿ ಸಿಲುಕಿದ ನೃಪಾಲರು ನಡೆದರೊಗ್ಗಿನಲಿ (ಸಭಾ-೧೬-೬೬)

ಪಾಂಡವರನ್ನನುಸರಿಸಿ ಭಟರು, ಬಾಹತ್ತರ ನಿಯೋಗಿಗಳು, ದ್ವಿಜನಿಕರ, ಪುರವರ್ಗ ಎಲ್ಲ ಬರುತ್ತಿದ್ದರೆ ಭೀಮನು ಅವರಿಗೆ ಹಿಂದಿರುಗಲು ತಿಳಿಹೇಳುತ್ತ "ರಾಜನಿಗಿನ್ನು ವನವಾಸ ವಾಸ, ನಿಬಿಡ ಕಾಡೇ ಇನ್ನು ರಾಜನ ಸಜ್ಜೆಯರಮನೆ ಹಿಂತಿರುಗಿರಿ" ಎಂದರೆ ಜನನಿಕರ "ಅವನಿಪತಿ ಚಿತ್ತೈಸು ನೀನು ಮಹಾಸಾಗರವನ್ನೇ ಪ್ರವೇಶಿಸು, ಹಿಮಗಿರಿಯಲ್ಲಿಯೇ ವಾಸ ಮಾಡು. ಭೂಮಿಯ ಬಿಲದಲ್ಲಿರು. ಮಹಾರಣ್ಯವನ್ನೇ ಪ್ರವೇಶ ಮಾಡು. ನೀನು ಎಲ್ಲಿದ್ದರೂ ನೀನೇ ನಮ್ಮ ಜೀವ, ಧನ, ಗತಿ, ಮತಿ ನಮ್ಮನ್ನು ಕೃಪೆಯಿಟ್ಟು ಕಾಪಾಡು" ಎಂದು ಬೇಡಿಕೊಂಡರು.

ಪ್ರಭುತ್ವವೆಂದಮೇಲೆ ಅದೂ ಧರ್ಮರಾಜನ ಮೇಲೆ ಪ್ರಜೆಗಳಿಟ್ಟಿರುವ ಅಂತಃಕರಣಕ್ಕೆ ಇದಕ್ಕಿಂತ ಹೆಚ್ಚಿನ ವಿವರಣೆ ಬೇಕಿಲ್ಲ ಅನ್ನಿಸುತ್ತದೆ. ತರುವಾಯದ ಕುರುಕ್ಷೇತ್ರ ಯುದ್ಧ, ಯುದ್ಧದ ಫಲಶ್ರುತಿ ಏನೇ ಇರಲಿ ಪ್ರಜಾವರ್ಗದ ಪ್ರಾಂಜಲ ಮನಸ್ಸು ಇಂಥಲ್ಲೆಲ್ಲ ಧಾರೆಯಾಗುತ್ತದೆ.

ಪ್ರಜಾವರ್ಗದ ಈ ಅಖಂಡ ಪ್ರೀತಿ-ಸಂತೋಷಗಳು ಮಹಾಭಾರತದಲ್ಲಿ ಮತ್ತೆ ಮತ್ತೆ ತೋರುತ್ತಲೇ ಇರುತ್ತವೆ.

- ವಾರಣಾವತಪುರಕ್ಕೆ ಪಾಂಡವರು ಬಂದರೆ ಅಲ್ಲಿಯ ಜನ ಕಳಶ ಕನ್ನಡಿ ಹಿಡಿದುಕೊಂಡು ಬಂದು ಅವರನ್ನು ಎದುರುಗೊಂಡರು(ಆದಿ ಸಂಧಿ-೧೦).
- ದ್ರೌಪದಿಯ ವಿವಾಹ ಮಹೋತ್ಸವಕ್ಕೆ ಕಲಾವಿದರು, ಮಲ್ಲರು, ವಾಮನರು, ಕುರುಡರು, ಮೂಕರು, ವಿವಿಧ ಮತಸ್ಥರು – ಮುಂತಾದವರೆಲ್ಲ ಸೇರಿದರು(ಆದಿ-ಸಂ.೧೨).
- ದ್ರೌಪದಿಯ ವಿವಾಹದ ಸಡಗರಕ್ಕೆ ಜನಸಂತೋಷ ಸಮುದ್ರವಾಯಿತು(ಆದಿ-ಸಂ.೧೬).
- ಧನುರ್ವಿದ್ಯಾ ಪ್ರದರ್ಶನಕ್ಕೆ ಕೂಡಿದ ಜನಸಾಮಾನ್ಯರು ಸಂತೋಷಪಟ್ಟರು(ಆದಿ ಸಂ.೭).

ಪ್ರಜಾವರ್ಗದ ಪ್ರೀತಿ-ಕಾಣಿಕೆಯ ರೂಪದಲ್ಲಿಯೂ ಅಭಿವ್ಯಕ್ತಗೊಳ್ಳುವುದುಂಟು. ವಿಶೇಷ ಸಂದರ್ಭದಲ್ಲಿ ಪ್ರಜೆಗಳು ರಾಜರಿರುವಲ್ಲಿಗೆ ಬಂದು ತಮ್ಮ ಕಾಣಿಕೆಯನ್ನು ಸಮರ್ಪಿಸಿ ಶುಭಹಾರೈಸುವುದು. ಒಂದು ಸಂಪ್ರದಾಯವೂ ಹೌದು, ಸಂತೋಷದ ವಿಷಯವೂ ಹೌದು.

- ಜರಾಸಂಧನ ಮರಣಾನಂತರ ಅವನ ಪುರಜನರು ಪಾಂಡವರಿರುವಲ್ಲಿಗೆ ಬಂದು ಕಾಣಿಕೆಗಳನ್ನು ಅರ್ಪಿಸಿದರು(ಸಭಾ-ಸಂ.೨).
- ವಿರಾಟರಾಜನ ಸೇವೆಯಲ್ಲಿದ್ದ ಛದ್ಮವೇಷದ ಪಾಂಡವರು ಪ್ರಕಟಗೊಂಡ ಮೇಲೆ ವಿರಾಟರಾಜನ ಪರಿವಾರ ಪಾಂಡವರಲ್ಲಿಗೆ ಬಂದು ಕಾಣಿಕೆಯನ್ನು ಸಮರ್ಪಿಸಿತು (ವಿರಾಟ-ಸಂ.೧೧).
- ಕುರುಕ್ಷೇತ್ರ ಯುದ್ಧಾನಂತರ ಪ್ರೇತ ಸಂಸ್ಕಾರಗಳು ಮುಗಿದ ಮೇಲೆ ಧರ್ಮರಾಯನಿರುವಲ್ಲಿಗೆ ಜನಪದರು ಬಂದು ಕಾಣಿಕೆಗಳನ್ನು ಸಮರ್ಪಿಸಿದರು(ಗದಾ-ಸಂ.೧೨).

ಇದುವರೆಗೆ ಉಲ್ಲೇಖಗೊಂಡ ಪ್ರಜಾವರ್ಗದ ಸಂತೋಷ ಅಥವಾ ಸಂತೋಷಾಭಿವ್ಯಕ್ತಿಯ ರೀತಿಗಳನ್ನು ಅವಲೋಕಿಸಿದರೆ ಅಲ್ಲೆಲ್ಲ ದಟ್ಟವಾಗಿರುವುದು ಪ್ರಜೆಗಳ ನಿಷ್ಕಲ್ಮಷವಾದ ಅಂತಃಕರಣ, ಪ್ರಭುತ್ವ ಇದನ್ನೆಲ್ಲ ಹೇಗೆ ಗ್ರಹಿಸುತ್ತದೆ ಎಂಬುದು ಮುಖ್ಯ ಅಲ್ಲವೇ ಅಲ್ಲ; ಅದನ್ನವರು ಯೋಚಿಸುವುದೂ ಇಲ್ಲ. ಏಕಮುಖಿಯಾಗಿ ತೋರುವ ಈ ಗುಣಸ್ವಭಾವ ದುಡಿದು ಉಣ್ಣುವ ಸಂಸ್ಕೃತಿಯವರಿಗೆ ಮಾತ್ರ ಸಾಧ್ಯವೇನೋ.

ಸಮಾಜದ ಒಂದು ಘಟಕವೆನಿಸಿರುವ ಜನಸಾಮಾನ್ಯರ ಕೌಟುಂಬಿಕ ಬದುಕು ಎಲ್ಲಿಯೂ ಉಕ್ತಗೊಂಡಿಲ್ಲ. ಜನಸಾಮಾನ್ಯರು ತಮ್ಮ ತಂದೆ-ತಾಯಿ, ಅಣ್ಣ ತಮ್ಮ, ಅಕ್ಕ ತಂಗಿ, ಹೆಂಡಿರು ಮಕ್ಕಳು, ಆಪ್ತರು ಎಂಬ ಪರಿವಾರದೊಂದಿಗೆ ಬಾಳುವ ವಿವರಗಳಾವವೂ ಕನ್ನಡ ಭಾರತದಲ್ಲಿ

ಪ್ರಸ್ತಾಪಗೊಳ್ಳುವುದಿಲ್ಲ. ಆದರೆ ಅರಸರಿಗೆ ಅರಸುಮಕ್ಕಳಿಗೆ ಅರಮನೆಯ ವಿವಿಧ ಆಗು ಹೋಗುಗಳಿಗೆ ಸಡಗರಿಸುವ ಅರಮನೆಯ ವಿವಿಧ ಸೇವೆಯಲ್ಲಿರುವವರ ಮನಸ್ಸನ್ನು ನಾವು ಅರಿಯಬೇಕು. ಇವರ ಸ್ವಂತದ ಕುಟುಂಬದ ವಿಶೇಷತೆಗಳು ಎಲ್ಲಿಯೂ ಉಕ್ತಗೊಳ್ಳುವುದಿಲ್ಲ. ಇವರ ಕುಟುಂಬವೆಂದರೆ ತಮ್ಮ ಸ್ವಂತದ ಪರಿವಾರವಲ್ಲ. ರಾಜಪರಿವಾರವೇ ಇವರ ಕುಟುಂಬ. ಇವರ ಖಾಸಗಿ ಕುಟುಂಬದ ಸುಖ ಸಂತೋಷಗಳನ್ನು ಕವಿ ಭರಿಸುವುದು ಅವರು ಸೇವೆಯಲ್ಲಿರುವ ಅರಮನೆಯವರ ಒಡನಾಟದಲ್ಲಿ.

ಅಧ್ಯಾಯ – ೪

ಧಾರ್ಮಿಕ ನೆಲೆ : ಸಾಮಾನ್ಯ ಮನುಷ್ಯ

ಧಾರ್ಮಿಕ ನೆಲೆ : ಸಾಮಾನ್ಯ ಮನುಷ್ಯ

ಪ್ರವೇಶ:

ಧರ್ಮವನ್ನು ಹಲವು ಮುಖಗಳಿಂದ ವ್ಯಾಖ್ಯಾನಿಸಲಾಗುತ್ತದೆ. ಧರ್ಮದ ಅಸ್ತಿತ್ವ ಭಕ್ತಿಯ ಮೂಲದಲ್ಲಿದೆ. ಪ್ರಾಕೃತಿಕ ಪರಿಸರ ಮತ್ತು ತಮ್ಮ ಸಂಪ್ರದಾಯ – ನಂಬಿಕೆಗಳನ್ನನುಸರಿಸಿ ಜನ ಬೇರೆ ಬೇರೆ ಧರ್ಮಗಳನ್ನು ರೂಪಿಸಿಕೊಂಡರು, ಒಪ್ಪಿಕೊಂಡರು. ಹೀಗೆ ಬೆಳೆಯುತ್ತ ಬಂದ ಧರ್ಮ ವ್ಯಕ್ತಿನಿಷ್ಠವಾಗಿ ಬೇರೆ ಬೇರೆ ಪರಿಕಲ್ಪನೆಗಳನ್ನು ಬೆಳೆಯಿಸಿಕೊಂಡಿತು. ಧರ್ಮವೊಂದೇ ಆದರೂ ಅದನ್ನು ಶಿಷ್ಟರು ನಿರ್ವಚಿಸುವ ರೀತಿಯೇ ಬೇರೆ, ಜನಸಾಮಾನ್ಯರು ಅದನ್ನು ಪರಿಪಾಲಿಸುವ ಕ್ರಮವೇ ಬೇರೆ. ಎಲ್ಲಾ ಧರ್ಮಗಳಲ್ಲಿರುವ ಪಂಡಿತವರ್ಗ ಅದನ್ನು ಶಿಷ್ಟರೂಪದ ವ್ಯಾಖ್ಯಾನಗಳ ಮೂಲಕ, ಗ್ರಂಥಗಳ ಮೂಲಕ ಹೆಚ್ಚು ಹೆಚ್ಚು ಸಂಕೀರ್ಣಗೊಳಿಸಿದರು. ಸಾಮಾನ್ಯ ಜನವರ್ಗ ಮಾತ್ರ ಸರಳ ಆಚರಣೆಗಳ ಮೂಲಕ ಧರ್ಮ ಭಾವನೆಗಳನ್ನು ಬೆಳೆಯಿಸಿಕೊಂಡರು. ಪಂಡಿತ ಪ್ರಣೀತ ಧರ್ಮ ತತ್ವಗಳು, ಸೈದ್ಧಾಂತಿಕ ನಿಲುವುಗಳು ಜನಸಾಮಾನ್ಯರಿಗೆ ಅರ್ಥವಾಗುವುದಿಲ್ಲ. ಹಾಗೆಂದು ಅವರು ಧರ್ಮವನ್ನು ತಿಳಿಯದವರೇನಲ್ಲ. ಒಂದರ್ಥದಲ್ಲಿ ಧರ್ಮ ಯಾವುದೇ ಇರಲಿ ಅದರ ತಿರುಳನ್ನು ಅರ್ಥೈಸಿಕೊಂಡವರು ಸಾಮಾನ್ಯರೇ.

ಒಂದು ಕಾಲಕ್ಕೆ ಪ್ರಭುತ್ವದಡಿ ಬಾಳುವ ಜನವರ್ಗ ತಮ್ಮನ್ನಾಳುವ ಅರಸನ ಧರ್ಮವನ್ನೇ ಪಾಲಿಸಿದ್ದಿದೆ; ಅದಕ್ಕೆ ಉದಾಹರಣೆಗಳೂ ಉಂಟು. ತಾವು ಮೂಲದಲ್ಲಿ ಅನುಸರಿಸಿಕೊಂಡು ಬಂದ ಅವರ ಧರ್ಮನಿಷ್ಠೆ ಮುಗ್ಧವಾದದ್ದು, ಅಚಲವಾದದ್ದು. ಧರ್ಮ ಕುರಿತಾದ ಶಿಷ್ಟರ ನಿಲುವುಗಳೇನೇ ಇರಲಿ. ಜನಸಾಮಾನ್ಯರಿಗೆ ಧರ್ಮ ಎಂದರೆ ನೀತಿ. ಒಂದಿಷ್ಟು ಪೂಜೆ ಪುನಸ್ಕಾರ. ಧಾರ್ಮಿಕ ಭಾವನೆಗಳು ಒಂದೆರಡು ದಿನಗಳಲ್ಲಿ ದಿಢೀರನೆ ಬೆಳೆದುಬಂದವುಗಳಲ್ಲ. ಅವಕ್ಕೆ ಸುದೀರ್ಘವಾದ ನಡೆಯಿರುತ್ತದೆ. ಬಹುಬೇಗ ಮಾಸಿ ಹೋಗುವಂಥವುಗಳೂ ಅಲ್ಲ. ವಡ್ಡಾರಾಧನೆಗೂ ಧರ್ಮಾಮೃತಕ್ಕೂ ಸುಮಾರು ೨೦೦ ವರ್ಷಗಳ ಅಂತರವಿದೆ. ಆದರೂ ಶಿಷ್ಟಪದರು ಹೇಳುವ ಧಾರ್ಮಿಕ ಸೈದ್ಧಾಂತಿಕ ನಿಲುವುಗಳಲ್ಲಾಗಲಿ ಜನಪದರು ನಂಬಿರುವ ವಿಷಯಗಳಲ್ಲಾಗಲಿ ಬಹಳ ಅಂತರವೇನೂ ಕಂಡುಬರುವುದಿಲ್ಲ. ವಡ್ಡಾರಾಧನೆ ಮತ್ತು ಧರ್ಮಾಮೃತಗಳು ಜೈನ ಧರ್ಮದ ಉತ್ತಮಿಕೆಯನ್ನು ಸಾರಲೆಂದೇ ಹುಟ್ಟಿರುವ ಗ್ರಂಥಗಳು. ಎಲ್ಲಾ ಧರ್ಮಗಳಲ್ಲಿರುವಂತೆ ಜೈನಧರ್ಮದಲ್ಲಿಯೂ ಪ್ರತಿಪಾದಿಸಲ್ಪಟ್ಟ ಶಿಷ್ಟ ನಿಲುವುಗಳು ಪಾರಿಭಾಷಿಕ ಪದಗಳ ರೂಪದಲ್ಲಿ ವಿವರಿಸಲ್ಪಟ್ಟಿವೆ. ಪಾಪ–ಪುಣ್ಯಗಳಿಗನುಸರಿಸಿ ಉಂಟಾಗುವ ಭವಾವಳಿಗಳು, ಪಾಪಕ್ಕೆ ಒದಗುವ ನರಕಗತಿ, ಪಶು–ಪಕ್ಷಿ ಹುಟ್ಟನ್ನುಂಟುಮಾಡುವ, ತಿರ್ಯಂಚಗತಿ, ಮೋಕ್ಷ ಸಮ್ಯಗ್ದರ್ಶನ, ಸಮ್ಯಗ್ದರ್ಶನದ ಅಷ್ಟಾಂಗಗಳು, ಪಂಚ ಅಣುವ್ರತಗಳು-ಇವೆಲ್ಲ ಜೈನಧರ್ಮದ ವಿಶಿಷ್ಟತೆಗಳು. ಜನಸಾಮಾನ್ಯರು ಇವನ್ನೆಲ್ಲ ಅರಿತಿದ್ದರೇ? ಅನುಸರಿಸುತ್ತಿದ್ದರೇ? ಸ್ಪಷ್ಟವಿಲ್ಲ. ಈ ಮುಂಚೆ ಹೇಳಿದಂತೆ ಧರ್ಮಾಚರಣೆಗಳಲ್ಲಿಯೇ ಜನಸಾಮಾನ್ಯರ ಆಸಕ್ತಿ. ನಾವು ಧರ್ಮವಂತರಾಗಿ ನಡೆಯಬೇಕು. ಹಾಗಿದ್ದಲ್ಲಿ ಧರ್ಮ ನಮ್ಮ ಕೈಬಿಡುವುದಿಲ್ಲ ಎಂಬ ನಂಬುಗೆ ಧರ್ಮದಲ್ಲಿ ಜನಸಾಮಾನ್ಯರಿರಿಸಿರುವ ಶ್ರದ್ಧೆಯಾಗಿ ತೋರುತ್ತದೆ.

ಎರಡೂ ಗ್ರಂಥಗಳಲ್ಲಿ ವ್ಯಕ್ತವಾಗಿರುವಂತೆ ಮತಾಂತರವನ್ನು ಜೈನಧರ್ಮ ಒಪ್ಪುತ್ತದೆ. ಆದರೆ ಈ ಮತಾಂತರ ಸ್ವಚ್ಛೆಯಿಂದಲೂ ಒತ್ತಾಯದಿಂದಲೂ ಎರಡೂ ಬಗೆಯಲ್ಲಿ ನಡೆಯುತ್ತಿತ್ತು. ಜೈನಧರ್ಮಕ್ಕೆ ಬರಲಿಚ್ಛಿಸುವ ವ್ಯಕ್ತಿ, ಮೊದಲು ಈ ಧರ್ಮದಲ್ಲಿ ನಂಬುಗೆ – ಶ್ರದ್ಧೆಗಳನ್ನು ಬೆಳೆಯಿಸಿಕೊಳ್ಳಬೇಕು. ಬ್ರಾಹ್ಮಣ ಪುತ್ರಿಯಾದ ನಾಗಶ್ರೀಯು ಅಣುವ್ರತಗಳನ್ನು ಸ್ವೀಕರಿಸುವುದು, ಅವಳ ತಂದೆ ಸೋಮಶರ್ಮನು

ವೈದಿಕ ಧರ್ಮವನ್ನು ತ್ಯಜಿಸಿ ಜೈನಧರ್ಮವನ್ನು ಸ್ವೀಕರಿಸುವುದು(ಸುಕುಮಾರ ಸ್ವಾಮಿಯ ಕಥೆ), ಭದ್ರಬಾಹು ಬಾಲಕನು ಗೋವರ್ಧನ ಭಟಾರರ ಮಾರ್ಗದರ್ಶನದಂತೆ ಜೈನಧರ್ಮಕ್ಕೆ ಮತಾಂತರಗೊಳ್ಳುವುದು (ಭದ್ರಬಾಹು ಭಟಾರರ ಕಥೆ) ಇವೆಲ್ಲ ಆ ಕಾಲಕ್ಕೆ ಜನಸಾಮಾನ್ಯರನ್ನು ಜೈನಧರ್ಮ ಎಷ್ಟೊಂದು ಆಕರ್ಷಿಸಿತ್ತು ಎಂಬುದಕ್ಕೆ ಉದಾಹರಣೆಗಳು.

ಹರಿಶ್ಚಂದ್ರ ಕಾವ್ಯ, ಕರ್ನಾಟ ಭಾರತ ಕಥಾಮಂಜರಿ–ಎರಡೂ ಧಾರ್ಮಿಕ ಕಾವ್ಯಗಳಲ್ಲ. 'ಸಾವವರ ಮೇಲೆ ಮನುಜರ ಮೇಲೆ ಕಾವ್ಯ ಬರೆದು ಕೆಡಬಾರದು. ಅಹರ್ನಿಶಂ ಹಂಪೆಯಾಳ್ದನನ್ನೇ ನೆನೆಯಬೇಕೆನ್ನುವ' ಹರಿಹರ ಪ್ರಬಲ ಶಿವಾನುಯಾಯಿ. ಏನು ಬರೆದರೂ ಶಿವನನ್ನೇ ಕುರಿತು ಬರೆಯಬೇಕೆಂಬ ಹರಿಹರನ ಶಿಷ್ಯನಾಗಿಯೂ ಸೋದರಳಿಯನಾಗಿಯೂ ರಾಘವಾಂಕ ಧರ್ಮದ ಶ್ರೇಷ್ಠತೆಯನ್ನು ಎತ್ತಿ ಹಿಡಿಯಲು ಕಾವ್ಯ ಬರೆದವನಲ್ಲ. ತಾನು 'ಜನ ಬದುಕಬೇಕೆಂದು' ಕಾವ್ಯ ಬರೆದುದಾಗಿ ಹರಿಶ್ಚಂದ್ರ ಕಾವ್ಯದ ಕೊನೆಯಲ್ಲಿ ಸ್ಪಷ್ಟವಾಗಿಯೇ ಹೇಳಿದ್ದಾನೆ. 'ಹರನೆಂಬುದೇ ಸತ್ಯ ಸತ್ಯವೆಂಬುದೇ ಹರನು' ಎಂದು ಸಾರಿದ ಹರಿಶ್ಚಂದ್ರನನ್ನು ಕುರಿತು ತಾನು ಕಾವು ಬರೆದಿರುವುದಾಗಿ ಹೇಳುತ್ತಾನೆ. ಇವೆರಡೂ ಮಾತುಗಳು ಅವನ ಕಾವ್ಯೋದ್ದೇಶವನ್ನು ನಿಚ್ಚಳವಾಗಿ ಬಿಡಿಸಿಟ್ಟಿವೆ. ಸತ್ಯವೆಂಬುದೇ ಶಿವನು ಎಂಬುದನ್ನು ಪ್ರಬಲವಾಗಿ ನಂಬಿದ ರಾಘವಾಂಕ ಪರೋಕ್ಷವಾಗಿ ಸತ್ಯವೇ ಧರ್ಮ ಎಂಬುದನ್ನು ಋಜುವಾತುಗೊಳಿಸಲು ಹರಿಶ್ಚಂದ್ರನ ಬದುಕನ್ನು ತನ್ನ ಕಾವ್ಯಕ್ಕೆ ಆರಿಸಿಕೊಂಡಿದ್ದಾನೆ.

ಕುಮಾರವ್ಯಾಸನೂ ಅಷ್ಟೇ, ಪಂಪನ ಕಾಲದ ಸಿದ್ಧ ಮಾದರಿಯನ್ನು ಮುಂದಿಟ್ಟುಕೊಂಡು ಕಾವ್ಯ ರಚಿಸಹೊರಟವನಲ್ಲ. ಕಾವ್ಯ ಶರೀರದಲ್ಲಿ ತುಂಬಿಕೊಂಡಿರುವ ಕೃಷ್ಣ ಮಹಿಮೆಗಳನ್ನು ನೋಡಿದರೆ ಇದು ಅಲೌಕಿಕ. ಕೌರವ–ಪಾಂಡವರ ಈರ್ಷೆಯ ಕಥೆಯನ್ನು ನೋಡಿದರೆ ಇದು ಲೌಕಿಕ. ತನಗಿಂತಲೂ ಪೂರ್ವದಲ್ಲಿದ್ದ ಕಾವ್ಯದ ಎರಡೂ ಮಾರ್ಗಗಳನ್ನು ತನ್ನ ಕನ್ನಡ ಭಾರತದಲ್ಲಿ ಸಮೀಕರಿಸಿದ್ದಾನೆ. ಧರ್ಮ ಮತ್ತು ಬದುಕು ಎರಡೂ ಭೇದಿಸಲಾಗದ ಆದರ್ಶಗಳು ಕುಮಾರವ್ಯಾಸನ ಕಾವ್ಯದ ಆಶಯವಾಗಿರಲೂ ಸಾಕು. ಅಂತೆಯೇ ಇಲ್ಲಿ ಕೌರವ–ಪಾಂಡವರ ಯುದ್ಧ ಕಣ್ಣಿಗೆ ಕಾಣುವಂತೆ ಧರ್ಮದ ಸಂದೇಶ ಸಾರುವ ನೀತಿ ಮಾತುಗಳೂ ಕಿವಿಯನ್ನು ತುಂಬುತ್ತವೆ. ಕುಮಾರವ್ಯಾಸ ಹೇಳ ಹೊರಟಿರುವದು ವೈಷ್ಣವ, ಶೈವ – ಇಂತಹ ಯಾವುದೇ ಧರ್ಮವಲ್ಲ, ಮಾನವ ಧರ್ಮ. ಬಹುಶಃ ಧರ್ಮಗಳ ಮೇಲಾಟ ತಾಕಲಾಟಗಳಿಂದ ಹೊರಬರಬೇಕು ಎಂಬ ಹವಣಿಕೆಯಲ್ಲಿ ಇವರ ಕಾವ್ಯಾಭಿವ್ಯಕ್ತಿಯಿದೆ.

ಕಥೆಯನ್ನು ಅನುಸರಿಸಿ ಧರ್ಮವನ್ನು ಬೋಧಿಸಬೇಕೆಂಬ ಪೂರ್ಣಪ್ರಮಾಣದ ಆಕಾಂಕ್ಷೆಯನ್ನು ವಡ್ಡಾರಾಧನೆ, ಧರ್ಮಾಮೃತ ಕೃತಿಗಳೆರಡೂ ಹೊಂದಿದ್ದರೆ ಹರಿಶ್ಚಂದ್ರ ಕಾವ್ಯ, ಕುಮಾರವ್ಯಾಸ ಕಾವ್ಯಗಳಲ್ಲಿ ಧರ್ಮದ ವಿಷಯ ಆನುಷಂಗಿಕವಾಗಿ ಬಂದಿದೆ. ಆನುಷಂಗಿಕವೆಂದರೂ ಧರ್ಮದ ತಿರುಳನ್ನು ಈ ಕಾವ್ಯಗಳು ಸಾಕಷ್ಟು ಪ್ರಬಲವಾಗಿಯೇ ಮಂಡಿಸಿವೆ. ಸಾಮಾನ್ಯ ಮನುಷ್ಯನ ಪರಿಸರದಲ್ಲಿ ರೂಪುಗೊಂಡು ನಿರೂಪಿಸಲ್ಪಟ್ಟಿರುವ ಇಲ್ಲಿಯ ಧಾರ್ಮಿಕ ನೆಲೆ ಅದೇ ಸಾಮಾನ್ಯ ಮನುಷ್ಯನಿಗೂ ನಿಲುಕುವಂತಿರುವುದು ವಿಶೇಷವೆನಿಸುತ್ತದೆ.

ವಡ್ಡಾರಾಧನೆ

ಧಾರ್ಮಿಕ ನಂಬಿಕೆಗಳು:

ಜೈನರಿಗೆ ಪುನರ್‌ಜನ್ಮದಲ್ಲಿ ನಂಬುಗೆ ಇದೆ. ಕರ್ಮಾನುಸಾರವಾಗಿ ಮುಂದಿನ ಜನ್ಮ ನಿರ್ಧರಿತಗೊಳ್ಳುತ್ತದೆ ಎಂದು ಜೈನ ಧರ್ಮ ಹೇಳುತ್ತದೆ. ಅಂತೆಯೇ ಸುಕುಮಾರಸ್ವಾಮಿಯ ಕಥೆಯಲ್ಲಿ

ಅಗ್ನಿಭೂತಿಯ ಹೆಂಡತಿ ವಾಯುಭೂತಿಗೆ "ದುರಾತ್ಮ ಎನ್ನನೊದೆದ ನಿನ್ನ ಕಾಲ್ಗಳಂ ಜನ್ಮಾಂತರದೊಳಂ ನಾಯುಂ ನರಿಯುಂಮಾಗಿಯಪ್ಪೊಡಂ ಕೊಂದು ಮಕ್ಕಳ್ವೆರಸು ತಿಂಬೆನಕ್ಕೆಂದು" ಶಪಥ ಮಾಡುವಳು. ಅವತ್ತಿನ ಅವಳ ಜೈನಧರ್ಮ ಜನ್ಮಾಂತರ ನಂಬುಗೆ ಈ ರೀತಿಯ ಶಪಥ ಪಡುವಂತೆ ಮಾಡುತ್ತದೆ. ಮನುಷ್ಯನ ವೈರ ಜನ್ಮಜನ್ಮಕ್ಕೂ ಮುಂದುವರೆಯುವದು ಇಲ್ಲಿಯ ಅನೇಕ ಕಥೆಗಳಲ್ಲಿ ಕಾಣುತ್ತೇವೆ.

ಋಷಿಗಳನ್ನು ಅಪಮಾನಿಸಿದುದು ಮತ್ತು ಜೈನ ಧರ್ಮವನ್ನು ಹಳಿದುದರ ಫಲವಾಗಿ ವಾಯುಭೂತಿ ಅನುಭವಿಸಿದ ಯಾತನೆಗಳನ್ನು ವಡ್ಡಾರಾಧನೆಕಾರ ಹೀಗೆ ಹೇಳುತ್ತಾನೆ:

ಇತ್ತ ವಾಯುಭೂತಿಯು "ಮತಿಮಾನ ಗರ್ವದಿಂದಂ ಋಷಿಯರಂ ಪರಿಭವಿಸಿ ಬಯ್ದು ನುಡಿದು ಜಿನಧರ್ಮಮಂ ಪಳಿದ ಪಾಪದ ಫಲದಿಂದ ಮೇಳೆ ದಿವಸದಿಂದೊಳಗೌದುಂಬರ ಕುಷ್ಠಮಾಗಿ ಪುಟಿತು ನೆಮೆದು ಸತ್ತು ಕೌಸಂಬಿ ಎಂಬ ಪೊಟಲೊಳ್ ಮಿಳಿಯ ಬಿದಿರ ಮೇಗೇಜೆಯಾಕಾಶದೊಳಾಡುವ ವಿದ್ಯಾಧರ ಲಂಗಿಗರ ಮನೆಯೊಳ್ ಪೆಣ್ಣತ್ತೆಯಾಗಿ ಪುಟ್ಟಿ ಪಿರಿಯವಪ್ಪ ಪೊಜೆಗಳಂ ಪೊತ್ತು ಪೋಗಿ ಬೆನ್ನೊಳ್ ನಾಳಿಬಿರ್ದುಕಜೆಮೆಯಾಗಿ ಪುಟಿತು ನಮೆದು ಸತ್ತು ಮತ್ತಮಾಪೊಟಲೊಳ್ ಪೇಪಂದಿಯಾಗಿ ಹುಟ್ಟಿ ಸತ್ತು ಮತ್ತಾ ಮಗಧೆಯೆಂಬುದು ನಾಡಲ್ಲಿ ಚಂಪಾನಗರವೆಂಬುದು ಪೊಟಲಲ್ಲಿ ಪೆಣ್ಣಾಯಾಗಿ ಮಾದೆಗರ ಮನೆಯೊಳ್ ಪುಟ್ಟಿ ಸತ್ತು ಮತ್ತಮಾ ಪೊಟಲೊಳ್ ಮಾದೆಗರ್ಗ್ಗೆ ಪ್ರಧಾನನಪ್ಪ ನೀಳನೆಂಬ ಮಾದೆಗಂಗಂ ಕೇಶಿಯೆಂಬ ಮಾದೆಗಿಗಂ ಮಗಳ್ ದುರೂಪೆ ದುರ್ವ್ವರ್ಣೆ ದುರ್ಗಂಧೆ ದುಸ್ವರೆ ಪುಟ್ಟುಂಗುರುಡಿ ಪೊಲತಿಯಾಗಿ ಪುಟ್ಟಿ ವ್ಯಾಧಿ ಪೀಡಿತೆ ಕ್ಷುಧಾಗ್ನಿಯಿಂ ಬಟ್ದಿದೊಳೊಂದು ದಿವಸಮುದ್ಯಾನವನಕ್ಕೆ ಪೋಗಿ ನೇರಲ ಪಣ್ಗಳಂ ತಡವರಿಸಿಯಾಯ್ದಾಯ್ದು ತಿನ್ನುತ್ತಿರ್ಪಳ್"(ವಡ್ಡಾರಾಧನೆ ಪು-೯)ಎಂದು ವಾಯುಭೂತಿಯ ಜನ್ಮ ಜನ್ಮಾಂತರದ ಕಥೆಯನ್ನು ವಡ್ಡಾರಾಧನೆಕಾರ ವರ್ಣಿಸುತ್ತಾನೆ.

ಹೀಗೆ ಜನ್ಮಾಂತರದ ಪಾಪಕರ್ಮಗಳನ್ನು ಹೇಳುವದರ ಮೂಲಕ ಧರ್ಮ ಮತ್ತು ಋಷಿಗಳ ಬಗ್ಗೆ ಜನಸಾಮಾನ್ಯರಲ್ಲಿ ಭಯವನ್ನು ಹುಟ್ಟುಹಾಕುವ ಹುನ್ನಾರವಿದಾಗಿದೆ. ಧರ್ಮ ಯಾವತ್ತೂ ಇಂಥ ಭಯಗಳನ್ನು ಹೇರುವ ಮೂಲಕವೇ ಜನಸಾಮಾನ್ಯರನ್ನು ನಿಯಂತ್ರಿಸುತ್ತಿರುತ್ತದೆ.

ಹುಟ್ಟು, ಸಾವು, ಗಂಡು, ಹೆಣ್ಣು, ರೂಪ, ಕುರೂಪ, ಆರೋಗ್ಯ ಅನಾರೋಗ್ಯ ಇವೆಲ್ಲವೂ ರೂಪುಗೊಳ್ಳುವದು ಜೈವಿಕ ಕ್ರಿಯೆ, ಈ ಜೈವಿಕ ಕ್ರಿಯೆಗಳನ್ನು ಪಾಪ-ಪುಣ್ಯಗಳಾಗಿ ಭ್ರಮೆ ಹುಟ್ಟಿಸಿ ಸಾಮಾನ್ಯನನ್ನು ಧರ್ಮದ ಕೂಪಕ್ಕೆ ತಳ್ಳಿ ಪ್ರಶ್ನಾತೀತವಾಗಿ ನಂಬಿಸುವವರು ಪ್ರಭುತ್ವ ಮತ್ತು ಪುರೋಹಿತಶಾಹಿ ಶಕ್ತಿಗಳು. ಸಾಮಾನ್ಯನು ಹೀಗೇ ನಂಬಿದಾಗಲೇ ಪ್ರಭುತ್ವ ಮತ್ತು ಪುರೋಹಿತಶಾಹಿ ಜನಗಳ ಸ್ವಾರ್ಥಸಾಧನೆ ಯಾವ ಅಡ್ಡಿ ಆತಂಕಗಳಿಲ್ಲದೆ ನಿರಾತಂಕವಾಗಿ ಮುಂದುವರೆಯುತ್ತದೆ.

ಸನ್ಯಾಸ ಮತ್ತು ತಿರಸ್ಕಾರ:

ವ್ಯಕ್ತಿ ಎಷ್ಟೇ ಧರ್ಮಕ್ಕೆ ನಿಷ್ಠನಾಗಿದ್ದರೂ ಕೆಲವೊಮ್ಮೆ ಜಿಗುಪ್ಸೆ, ಬೇಜವಾಬ್ದಾರಿತನದಿಂದಾಗಿ ದೀಕ್ಷೆ ಪಡೆದು ಸಂಸಾರ ತ್ಯಜಿಸಿ ಹೊರಟಾಗ ಎಂಥವರಿಗೆ ಆಗಲಿ ಆ ವ್ಯಕ್ತಿಯ ಮೇಲೆ ಕೋಪ ಬರುವದು ಸಹಜ. ಹಾಗೆಯೇ ಅಣ್ಣ ಅಗ್ನಿಭೂತಿ ತನ್ನ ಮೇಲಿನ ಕೋಪದಿಂದಾಗಿ ದೀಕ್ಷೆ ಪಡೆದು ಸೂರ್ಯಮಿತ್ರರೊಂದಿಗೆ ಹೋದದ್ದು ಅಸಹನೀಯವಾಗಿರುತ್ತದೆ. ಅದೇ ಹೊತ್ತಿಗೆ ಅತ್ತಿಗೆಯೂ ಬಯ್ಯಲು ಬಂದಿದ್ದರಿಂದ ಅವರಲ್ಲಿದ್ದುದೆಲ್ಲವನ್ನೂ ದೋಚಿಕೊಂಡು 'ನಿಮ್ಮ ಸವಣನಾಗಿರ್ದಾಣ್ಮನ ಪೋದಲ್ಲಿಗೆ ಪೋಗೆಂದ'. ಹೀಗೆ ಜೈನ ದೀಕ್ಷೆ ಪಡೆದ ಎಲ್ಲರ ಬಗ್ಗೆಯೂ ಕುಟುಂಬ ವರ್ಗದಲ್ಲಾಗಲಿ,

ಸಮಾಜದಲ್ಲಾಗಲೀ ಗೌರವ ಭಾವ ಇದ್ದೇ ಇರುವದೆಂದು ಹೇಳಲಾಗದು. ಅನೇಕ ಬಾರಿ ಸನ್ಯಾಸದ ಬಗ್ಗೆ ತಿರಸ್ಕಾರವನ್ನು ವಡ್ಡಾರಾಧನೆಯಲ್ಲಿ ಕಾಣುತ್ತೇವೆ.

ದಲಿತರಿಗೂ ಧರ್ಮ:

ವಾಯುಭೂತಿ ಜನ್ಮಾಂತರದಲ್ಲಿ ದಲಿತರ ಮನೆಯ ಕುರುಡು ಹುಡುಗಿಯಾಗಿ ಹುಟ್ಟಿದಾಗ ಅವಳನ್ನು ನೋಡಿದ ಅಗ್ನಿಭೂತಿಗೆ ಮನಕರಗುತ್ತದೆ. ಆಗ ಸೂರ್ಯಮಿತ್ರರು ಆಕೆ ನಿಮ್ಮ ಹಿಂದಿನ ಜನ್ಮದ ತಮ್ಮ ವಾಯುಭೂತಿ ಎಂದು ಹೇಳುತ್ತಾರೆ. ಆ ಹುಡುಗಿಯ ಉದ್ಧಾರಕ್ಕೆ ದಾರಿಯೆಂದರೆ ಧರ್ಮಬೋಧೆಯನ್ನು ಉಪದೇಶಿಸುವದುವೆಂದು ಹೇಳಿದಾಗ ಅಗ್ನಿಭೂತಿ ತಡಮಾಡದೇ ಮಾದಿಗರ ಮನೆಯ ಹುಟ್ಟುಗುರುಡಿಯಾದ ಕೂಸಿನ ಬಳಿ ಹೋಗಿ ಅವಳ ಜನ್ಮವೃತ್ತಾಂತವನ್ನು, ತಮ್ಮ-ಅವಳ ಸಂಬಂಧವನ್ನೂ ವಿವರಿಸುತ್ತಾರೆ. ಅಲ್ಲದೇ ಅವಳಿಗೆ ಧರ್ಮದ, ಪಾಪದ ಫಲಗಳನ್ನು ತಿಳಿಸುತ್ತಾರೆ. ಅಲ್ಲದೆ ಆಗಮದ ಬಗ್ಗೆ, ಹನ್ನೆರಡು ಬಗೆಯ ತಪಸ್ಸಿನ ಬಗ್ಗೆ ಹೇಳುತ್ತಾರೆ. ಧರ್ಮ ಎಂದರೇನು ಎಂಬುದನ್ನು ಹುಡುಗಿಯ ಮನಮುಟ್ಟುವಂತೆ ಹೇಳುತ್ತಾರೆ. ಅವರ ಮಾತುಗಳನ್ನು ಕೇಳುತ್ತಾ ಹೋದಂತೆ ಸಂಸಾರ-ಶರೀರದ ಬಗ್ಗೆ ವೈರಾಗ್ಯ ಬಂದು ಆಗಲೇ ಅಣುವ್ರತ ಮೊದಲಾದ ಶ್ರಾವಕ ವ್ರತಗಳನ್ನು ಕೈಗೊಳ್ಳುತ್ತಾಳೆ. ಆಗ ಅಗ್ನಿಭೂತಿಗಳು "ದೃಢವೃತೆಯಾಗು ಕರ್ಮಕ್ಷಯಕ್ಕೆ"(ವಡ್ಡಾರಾಧನೆ ಪು-೧೧)ಎಂದು ಹೇಳುತ್ತಾರೆ.

ಈ ಒಟ್ಟು ವೃತ್ತಾಂತವನ್ನು ಗಮನಿಸಿದಾಗ ಜೈನಧರ್ಮ ದಲಿತರಿಗೂ ಧರ್ಮಬೋಧೆ, ದೀಕ್ಷೆಯನ್ನು ಕೊಡುತ್ತಿತ್ತೇ ಎಂಬ ಪ್ರಶ್ನೆ ಎದುರಾಗುತ್ತದೆ. ದಲಿತರ ಮನೆಗಳನ್ನು ಉಣಲು ತಕ್ಕದಲ್ಲದ ಮನೆಗಳೆಂದು ವಿಭಾಗಿಸುವ ಈ ಧರ್ಮ, ದಲಿತರಿಗೆ ಧರ್ಮದೊಳಗಡೆ ಮುಕ್ತ ಪ್ರವೇಶ ಕಲ್ಪಿಸುವದು ಅಸಾಧ್ಯದ ಮಾತು. ಈ ಕಥೆಯಲ್ಲಿ ದಲಿತತ್ವದಿಂದ ಮುಕ್ತಗೊಳಿಸಲು ಅವಳಿಗೆ ಪೂರ್ವ ಜನ್ಮದ ಸ್ಮರಣೆಮಾಡಿಸುತ್ತಾರೆ. ಹಿಂದಿನ ಜನ್ಮದಲ್ಲಿ ಜೈನನಾಗಿದ್ದ ಕಾರಣಕ್ಕಾಗಿ ಧರ್ಮಭೋಧೆ ಮಾಡುತ್ತಾರೆ ಹೊರತು ಈ ಜನ್ಮದಲ್ಲಿ ದಲಿತನಾಗಿದ್ದ ಕಾರಣಕ್ಕಾಗಿ ಅಲ್ಲ. ಸಾಮಾಜಿಕವಾಗಿ ದಲಿತ-ಅಸ್ಪೃಶ್ಯರಾದ ಯಾರಿಗೂ ಜೈನರು ದೀಕ್ಷೆ ನೀಡಿದ ಉದಾಹರಣೆ ದೊರೆಯುವದಿಲ್ಲ. ಈ ಕಾರಣಕ್ಕಾಗಿಯೇ ಸಾಮಾಜಿಕವಾಗಿ ವೀರಶೈವ ಧರ್ಮದಷ್ಟು ಜೈನಧರ್ಮ ಎತ್ತರಕ್ಕೇರಲಿಲ್ಲ; ಸಾಮಾಜಿಕರಿಗೆ ಆಪ್ತವಾಗಲಿಲ್ಲ.

ಧರ್ಮಾಂತರ:

ವಡ್ಡಾರಾಧನೆಯ ಕಥೆಗಳಲ್ಲಿ ಅಲ್ಲಲ್ಲಿ ಧರ್ಮಾಂತರ ಪ್ರಕ್ರಿಯೆಯ ಉಲ್ಲೇಖಗಳನ್ನು ಕಾಣುತ್ತೇವೆ. ಧರ್ಮವೊಂದು ಪ್ರಬಲವಾಗಿ ನೆಲೆಯೂರಬೇಕೆಂದಾಗ ಅದು ಈಗಾಗಲೇ ಸ್ಥಾಪಿತ ಧರ್ಮೀಯರನ್ನು ಆಕರ್ಷಿಸಿ ಅವರನ್ನು ತನ್ನವರನ್ನಾಗಿ ಮಾಡಿಕೊಳ್ಳುವ ಪ್ರಕ್ರಿಯೆ ಹಿಂದಿನಿಂದ ಇಂದಿನವರೆಗೂ ನಡೆದುಕೊಂಡು ಬಂದಿದೆ.

ಹಾಗೆಯೇ ಸುಕುಮಾರಸ್ವಾಮಿಯ ಕಥೆಯಲ್ಲಿ ಬರುವ ಪುರೋಹಿತ ಸೋಮಶರ್ಮನ ಮಗಳು ನಾಗಶ್ರೀ ಜೈನ ಭಟಾರರ ಹತ್ತಿರ ಜೈನ ದೀಕ್ಷೆ ಪಡೆದು, ಅಣುವ್ರತ ಮೊದಲಾದ ಶ್ರಾವಕ ವ್ರತಗಳನ್ನು ಸ್ವೀಕರಿಸುತ್ತಾಳೆ. ವಡ್ಡಾರಾಧನೆಕಾರ ಹೇಳಿದ ಇಂತಹ ಅಂಶಗಳನ್ನು ಹೀಗೆ ಗುರುತಿಸಬಹುದು. ವಡ್ಡಾರಾಧನೆಕಾರ ಅವತ್ತಿನ ಸಮಾಜದಲ್ಲಿ ನಡೆದಿರುವ ವಾಸ್ತವಾಂಶಗಳನ್ನು ಕೃತಿಯ ಮೂಲಕ ಬಿಚ್ಚಿಡುವದು. ಈಗಾಗಲೇ ಸ್ಥಾಪಿತ ಪ್ರಬಲ ವೈದಿಕ ಧರ್ಮದವರು ಜೈನ ಧರ್ಮಕ್ಕೆ ಧರ್ಮಾಂತರ ಹೊಂದುತ್ತಾರೆಂದು ಹೇಳಿಕೊಳ್ಳುವ ಮೂಲಕ ಸಾಮಾನ್ಯರನ್ನು ಆಕರ್ಷಿಸುವದು ಮತ್ತು ಸ್ವಮತ ಪ್ರತಿಷ್ಠೆಯೂ ಇದರಲ್ಲಡಗಿದೆ.

ಇದರ ಜೊತೆಗೆ ಹೀಗೆ ಧರ್ಮಾಂತರ ಹೊಂದಿದವರು ಕೆಲವೊಮ್ಮೆ ಸ್ವ-ಇಚ್ಛೆಯಿಂದಲೋ, ಒತ್ತಾಯ ಪೂರ್ವಕವಾಗಿಯೋ ಸ್ವೀಕರಿಸಿದ ಹೊಸಧರ್ಮವನ್ನು ತ್ಯಜಿಸುವ ರೂಢಿ ಮತ್ತು ಅವಕಾಶ ಎರಡೂ ಅವತ್ತಿನ ಸಮಾಜದಲ್ಲಿದ್ದವೆಂಬುದನ್ನು ಕತೆ ಸಾಬೀತುಪಡಿಸುತ್ತದೆ.

ಐದು ದೃಷ್ಟಾಂತಗಳನ್ನು ತೋರಿಸುವ ಮೂಲಕ ನಾಗಶ್ರೀ ಐದು ಅಣುವ್ರತಗಳನ್ನು ಇಟ್ಟುಕೊಳ್ಳುವಂತೆ ಸೋಮಶರ್ಮ ಒಪ್ಪಿಕೊಳ್ಳುತ್ತಾನಾದರೂ ಮನಸ್ಸಿನೊಳಗಡೆ ಅಸಮಾಧಾನ ಇರುತ್ತದೆ. ಅದಕ್ಕೆ "ನಿರ್ಲಜ್ಜಂ ಬತ್ತಲಿಗನಪ್ಪ ಸವಣನಲ್ಲಿಗೆವೋಗಿ ಕಂಡು ನುಡಿದು ಕಾಡಿ ಬರ್ಪಂ ಬಾ ಮಗಳೆ" ಎಂದು ಅವಳನ್ನು ಭಟಾರರ ಹತ್ತಿರ ಕರೆದುಕೊಂಡು ಹೋಗಿ "ಎನ್ನ ಮಗಳ್ಗೆ ನಿಮ್ಮ ಬ್ರತಂಗಳನೇಕೆ ಕೊಟ್ಟಿರ್" ಎಂದು ಸೋಮಶರ್ಮ ಕೇಳಲು ಭಟಾರರು "ನಿಮ್ಮ ಮಗಳಿಗೇಕೆ ನಮ್ಮ ಮಗಳಿಗೆ ನಮ್ಮ ವ್ರತಗಳನ್ನು ನಾವು ಕೊಟ್ಟಿದ್ದೇವೆ. ನಿಮಗೇನು ಬೇನೆ" ಎಂದು ಕೇಳಿ ನಾಗಶ್ರೀಯನ್ನು ಕರೆದು ಪಕ್ಕದಲ್ಲಿ ಕುಳ್ಳಿರಿಸಿಕೊಳ್ಳುತ್ತಾರೆ. "ಹೋಗು ಬ್ರಾಹ್ಮಣ ಹೋಗಿ ನಿಮ್ಮ ಅರಸನಿಗೆ ಹೇಳು" ಎನ್ನಲು ಪಿರಿದೊಂದು ತೊವಲು ಹಿಡಿದು "ಅಬ್ರಹ್ಮಣ್ಯಂಭೋ ಅಬ್ರಹ್ಮಣ್ಯಂ ಭೋ" ಎನ್ನುತ್ತ ಓಡುತ್ತಾನೆ. ಎಂದು ವಡ್ಡಾರಾಧನೆಕಾರ ಚಿತ್ರಿಸುತ್ತಾನೆ. ಪ್ರಬಲ ವೈದಿಕ ಧರ್ಮದಿಂದ ಜೈನ ಧರ್ಮಕ್ಕೆ ಧರ್ಮಾಂತರ ಹೊಂದಿದಾಗ ವೈದಿಕ ಧರ್ಮಕ್ಕೆ ಅಪಚಾರವಾಗಿ ಅಪವಿತ್ರಗೊಳ್ಳುತ್ತದೆ. ಅದನ್ನೇ ಸೋಮಶರ್ಮ ಅಬ್ರಹ್ಮಣ್ಯ ಎನ್ನುತ್ತಾನೆ. ವಡ್ಡಾರಾಧನೆ ಕೃತಿ ರಚನೆಯ ಕಾಲಕ್ಕೆ ವೈದಿಕ ಧರ್ಮದಿಂದ ಜೈನಧರ್ಮಕ್ಕೆ ಜನ ಧರ್ಮಾಂತರ ಹೊಂದುವ ಪ್ರಕ್ರಿಯೆ ಆರಂಭವಾಗಿ ನಿಧಾನವಾಗಿ ವೈದಿಕ ಧರ್ಮ ಇಳಿತರಕ್ಕೆ ಬರತೊಡಗಿತ್ತು. ಆ ಕಾಲದ ಧಾರ್ಮಿಕ ಇತಿಹಾಸವನ್ನು ಇಂಥ ಅಂಶಗಳು ಕಟ್ಟಿಕೊಡುತ್ತವೆ.

ದೀಕ್ಷೆ ಪಡೆಯಲು ಇದ್ದ ನಿಷೇಧಗಳು:

ವಡ್ಡಾರಾಧನೆಯ ಸುಕುಮಾರಸ್ವಾಮಿ ಕಥೆಯಲ್ಲಿ ಸುಕುಮಾರಸ್ವಾಮಿ ಮರಣಹೊಂದಿದಾಗ "ಎಣ್ಬರ್ ಬಸಿರ್ ಪೆಂಡಿರುವಿಯೆ ಇರ್ಪತ್ತುನಾಲ್ವರ್ ಪೆಂಡರುಂ ಉಗ್ರೋಗ್ರ ತಪಂಗೈದರ್ ತಪಂಬಟ್ಟು" (ವಡ್ಡಾರಾಧನೆ ಪು-೩೦)ಎಂದು ಹೇಳುತ್ತಾನೆ. ಅಂದರೆ ಗರ್ಭಿಣಿಯರಿಗೆ ದೀಕ್ಷೆ ತೆಗೆದುಕೊಳ್ಳುವ, ಕೊಡುವ ಅವಕಾಶವಿರಲಿಲ್ಲ. ಧರ್ಮ ಮತ್ತು ಧಾರ್ಮಿಕ ವಿಧಿ-ವಿಧಾನಗಳೂ ತಾಯಿ ಮತ್ತು ಗರ್ಭದಲ್ಲಿನ ಮಗುವಿನ ಕ್ಷೇಮವನ್ನೇ ಬಯಸುತ್ತವೆ. ಜಗತ್ತಿನ ಎಲ್ಲ ಧರ್ಮಗಳೂ ಗರ್ಭಸ್ಥ ಮಗುವಿನ ಒಳಿತನ್ನೇ ಬಯಸುತ್ತವೆ.

ಸುಕುಮಾರ ಸ್ವಾಮಿಯ ೨೪ ಜನ ಹೆಂಡತಿಯರೂ ಮಿಕ್ಕ ಪರಿವಾರದವರೂ ಯಶೋಭದ್ರೆಯೂ ಮುಂತಾದವರು ದೀಕ್ಷೆ ಪಡೆದು ಉಗ್ರ ತಪಸ್ಸಿನಲ್ಲಿ ತೊಡಗಿಕೊಳ್ಳುತ್ತಾರೆ ಎಂಬುದನ್ನು ನೋಡಿದಾಗ ಅಂದಿನ ಸಾಮಾಜಿಕರ ಮನಸ್ಸು ಧರ್ಮಕ್ಕಾಗಿ ಹಾತೊರೆಯುತ್ತಿತ್ತು ಎಂಬುದು ತಿಳಿದು ಬರುತ್ತದೆ. ಮಗ-ಗಂಡ-ಬಂಧು ಎಲ್ಲವೂ ಆಗಿದ್ದ ಸುಕುಮಾರಸ್ವಾಮಿಯ ಮರಣ ಅವರೆಲ್ಲರನ್ನೂ ಜರ್ಜರಿತನ್ನಾಗಿಸಿ, ಅವನ ಮರಣದೊಂದಿಗೆ ತಮ್ಮ ಬದುಕು ನಿಶ್ವರ ಎಂದುಕೊಂಡು ಗರ್ಭಿಣಿಯರನ್ನು ಹೊರತು ಪಡಿಸಿ ಎಲ್ಲರೂ ಸನ್ಯಾಸ ಸ್ವೀಕರಿಸುತ್ತಾರೆ. ಇಲ್ಲಿ ಕಳೆದುಕೊಂಡ ವ್ಯಕ್ತಿಯ ದುಃಖಕ್ಕಿಂತ, ಧರ್ಮ ಮುಖ್ಯವಾಗುತ್ತದೆ.

ಸನ್ಯಾಸ ಮತ್ತು ತಿರಸ್ಕಾರ:

ಜಯಾವತಿಗೆ ಸಿದ್ಧಾರ್ಥ ಋಷಿಯ ಸನ್ಯಾಸ ಸ್ವೀಕಾರದ ವಿಚಾರದಲ್ಲಿ ತೀವ್ರ ಅಸಮಾಧಾನವಿತ್ತು. ಸಿದ್ಧಾರ್ಥ ಋಷಿಯ ಮೇಲಿನ ಆ ಅಸಮಾಧಾನ ಕೋಪವಾಗಿ ತಿರುಗಿ "ಬಾಲವದ್ದೆಯಂ ಕೂಸಂ ಪಿಸುವನವ್ಯಕ್ತನಂವಿಸುಟ್ಟೆಂತು ತಪಂಬಟ್ಟೆ ಪಾಪಕರ್ಮ ದಯೆಯಿಲ್ಲದೊಂ ನಿಷ್ಕರುಣಿ"(ವಡ್ಡಾರಾಧನೆ ಪು-೪೫)ಎಂದು ಬಯ್ಯುತ್ತಿದ್ದಳು ಮುಂದೆ ಎಷ್ಟೋ ವರ್ಷಗಳ ನಂತರ ಸುಕೌಶಳಸ್ವಾಮಿ ದೊಡ್ಡವನಾದ

ಮೇಲೆ ಸಿದ್ಧಾರ್ಥ ಋಷಿಯರು ಸಂಚರಿಸುತ್ತಾ, ಅದೇ ಊರು, ತಮ್ಮ ಮನೆಗೆ ಭಿಕ್ಷೆಗೆಂದು ಬಂದಿರುತ್ತಾರೆ. ಅವರನ್ನು ಕಂಡ ಸುಕೌಶಳ ಸ್ವಾಮಿ ಅವರು ಯಾರೆಂದು ತಾಯಿ ಜಯಾಮತಿಗೆ ಕೇಳುತ್ತಾನೆ. ಅದಕ್ಕವಳು "ಮಗನೆ ಈತನಂಗಡಿ ಯಲವಡಂ ಪೆಱಕಿ ತಿಂದು ಬಾಟಿಲ್ವೊಂ ಬೈಕಂಗುಳಿ ಬೇಡಿ ಪೊಟಲೆಲ್ಲಮಂ ತೊಟಲ್ದು ಬಸಿಱಿಂ ಪೊರೆವೊಂ ದೇಸಿಗನಾರುಮಿಲ್ಲದೊಂ ಕೋವಣಕ್ಕಪ್ಪೊಡಂ ಭಾಗಸಮಿಲ್ಲದೊನ್" ಎಂದು ಹೇಳುತ್ತಾಳೆ. (ವಡ್ಡಾರಾಧನೆ ಪು-೪೬).

ತನ್ನನ್ನು ನಂಬಿದವರನ್ನು ನಡುವೇ ಕೈಬಿಟ್ಟು ಬೇಜವಾಬ್ದಾರನಾಗಿ ವರ್ತಿಸುವ ವ್ಯಕ್ತಿ ಧಾರ್ಮಿಕ-ಸಾಮಾಜಿಕವಾಗಿ ಎಷ್ಟೇ ಅಸಮಾನ್ಯತ್ವ ಪಡೆದ ವ್ಯಕ್ತಿಯಾದರೂ ಕೌಟುಂಬಿಕ ವಲಯದಲ್ಲಿ ಜವಾಬ್ದಾರಿಗಳಿಂದ ಮುಕ್ತವಾದ ವ್ಯಕ್ತಿಯ ಬಗ್ಗೆ ಅಲ್ಲಲ್ಲಿ ನಿಟ್ಟುಸಿರಿಡುವದನ್ನು ಕಂಡೇ ಕಾಣುತ್ತೇವೆ. ಜಯಾವತಿಯ ಈ ಮಾತುಗಳಲ್ಲಿ ಅವಳ ಮನದ ಬೇಗುದಿಯನ್ನು ಕಾಣುತ್ತೇವೆ. ಅವಳ ಕೋಪ ಸಮಂಜಸವೇ. ಯಾವ ಹೆಂಡತಿಯಾದರೂ ಗಂಡನಾದವನು ಕೊನೆಯವರೆಗೂ ಸಂಸಾರದ ಜವಾಬ್ದಾರಿಯನ್ನು ಹಂಚಿಕೊಳ್ಳಲಿ ಎಂದು ಆಸೆಪಡುವದು ಸಹಜ. ಆದರೆ ಸಂಸಾರ ಪ್ರಾರಂಭವಾದ ಹೊಸದರಲ್ಲೇ ಜವಾಬ್ದಾರಿಗಳಿಂದ ನುಣುಚಿಕೊಂಡು ಸನ್ಯಾಸ ಸ್ವೀಕರಿಸಿ ಸಂಸಾರಕ್ಕೆ ಬೆನ್ನು ತಿರುಗಿಸಿದಾಗ ಎಷ್ಟೋ ಕನಸು ಕಟ್ಟಿಕೊಂಡ ಹೆಣ್ಣು ಹತಾಶಳಾಗುತ್ತಾಳೆ. ಅವನಿಲ್ಲದೆಯೂ ಸಮರ್ಥವಾಗಿ ಬದುಕಬಲ್ಲೆ ಎಂಬ ದಿಟ್ಟತನದೊಂದಿಗೆ ಒಂಟಿಯಾಗಿ ಸಮರ್ಥವಾಗಿ ಸಂಸಾರವನ್ನು ನಿಭಾಯಿಸುತ್ತಾಳೆ. ಆದರೆ ಆ ವ್ಯಕ್ತಿಯ ಕುರಿತಾದ ಹತಾಶೆ ಮತ್ತು ತಿರಸ್ಕಾರಗಳು ಅವಳನ್ನು ಕಠೋರಗೊಳಿಸುತ್ತವೆ.

ತಂದೆ ಸಿದ್ಧಾರ್ಥ ಋಷಿ ವಾರಸುದಾರನಿಗೋಸ್ಕರ ಕಾಯ್ದು ಗಂಡು ಹುಟ್ಟಿದ ತಕ್ಷಣ ಸನ್ಯಾಸ ಸ್ವೀಕರಿಸಿದರೆ, ಅವನ ಮಗ ಸುಕೌಶಳಸ್ವಾಮಿ ಗರ್ಭದಲ್ಲಿರುವ ಮಗುವಿಗೇ ಪಟ್ಟಕಟ್ಟಿ ಸನ್ಯಾಸ ಸ್ವೀಕರಿಸುತ್ತಾನೆ.

ಹೀಗೆ ಸನ್ಯಾಸ ಸ್ವೀಕರಿಸಿ ಧಾರ್ಮಿಕ ವಲಯದಲ್ಲಿ ದೊಡ್ಡ ಹೆಸರು ಕೀರ್ತಿಗಳಿಸಿ ಏನು ಸಾಧನೆ ಮಾಡಿದರೂ ಅವರ ಹೆಂಡತಿ, ಕುಟುಂಬ ಮಾತ್ರ ಇಂಥ ಸನ್ಯಾಸವನ್ನು ಶಪಿಸುತ್ತಿರುತ್ತಾರೆ. ಧರ್ಮಕ್ಕಂಜಿ ಎಷ್ಟೋಜನ ತಿರಸ್ಕಾರವನ್ನು ಮೇಲೆ ತೋರಿಸಿಕೊಳ್ಳದೇ ಒಳಗೆ ಅನುಭವಿಸುತ್ತಾರೆ. ಜಯಾವತಿಯಂತೆ ಮಾತಿನ ಮೂಲಕ ಹೊರ ಹಾಕುವವರು ತೀರ ಅಪರೂಪ.

ಈ ಕತೆಗಳಲ್ಲೆಲ್ಲ ಗಂಡು ಸಂಸಾರ ಜವಾಬ್ದಾರಿಯಿಂದ ನುಣುಚಿಕೊಂಡು ಸನ್ಯಾಸ ಸ್ವೀಕರಿಸಿದ ಉದಾಹರಣೆಗಳೇ ತುಂಬಿಕೊಂಡಿವೆ. ಆದರೆ ಹೆಣ್ಣು ಯಾವತ್ತೂ ಜವಾಬ್ದಾರಿಗಳಿಂದ ಹಿಂದೆ ಸರಿಯುವ ಉದಾಹರಣೆಗಳಿಲ್ಲ. ಇಲ್ಲಿಯ ಎಲ್ಲ ಕಥೆಗಳಲ್ಲಿ ಹೆಣ್ಣು ವಯಸ್ಸಾದ ಮೇಲೋ ಗಂಡ ಸತ್ತಮೇಲೋ ಮಕ್ಕಳಿಲ್ಲದವಳೋ, ಮಕ್ಕಳು ದೊಡ್ಡವರಾದ ಮೇಲೋ ಸನ್ಯಾಸ ಸ್ವೀಕರಿಸುತ್ತಾಳೆ. ಗರ್ಭಿಣಿ, ಹಾಲೂಡುವ ತಾಯಂದಿರಾರೂ ಸನ್ಯಾಸ ಸ್ವೀಕರಿಸುವದಿಲ್ಲ. ಹೆಣ್ಣಿಗೆ ಧರ್ಮಕ್ಕಿಂತ ಬದುಕು ಮುಖ್ಯ ಎಂಬುದನ್ನು ಈ ಕಥೆಗಳು ಮತ್ತೆ ಮತ್ತೆ ಸಾಬೀತುಪಡಿಸುತ್ತವೆ.

ತಪಸ್ವಿ ಮತ್ತು ವೈರತ್ವ:

ವಡ್ಡಾರಾಧನೆಯ ಸನತ್ಕುಮಾರ ಚಕ್ರವರ್ತಿಯ ಕಥೆಯಲ್ಲಿ ಬರುವ ಭಾರದ್ವಾಜನೆಂಬ ತಪಸ್ವಿ ಕನಕಪುರಕ್ಕೆ ಹೋಗಿ ಮಾಸೋಪವಾಸ ಮಾಡಿ ಮಹಾ ತಪಸ್ವಿಯೆನಿಸಿದನು. ಹರಿವಾಹನನೆಂಬ ಅರಸ ದಿನವೂ ಭಾರದ್ವಾಜ ಮುನಿಯ ಹತ್ತಿರ ಹೋಗಿ ತನ್ನ ಭಕ್ತಿಯನ್ನು ಸಮರ್ಪಿಸುತ್ತಿದ್ದನು. ಒಂದು ದಿನ ಅರಸನೊಂದಿಗೆ ಜಿನವರ್ಮನೂ ಭಾರದ್ವಾಜ ಮುನಿಗಳ ಭೇಟಿಗೆ ಹೋಗುತ್ತಾನೆ. ಇವರಿಬ್ಬರೂ ಪೂರ್ವ

ಜನ್ಮದಲ್ಲಿ ಜಿನವರ್ಮ-ರಾಜ ಪ್ರತಿಮುಖನಾಗಿಯೂ, ಭಾರದ್ವಾಜಮುನಿ-ಸೆಟ್ಟಿ ನಾಗಚಂದ್ರನೂ ಆಗಿರುತ್ತಾರೆ. ನಾಗಚಂದ್ರನ ಹೆಂಡತಿ ವಿಷ್ಣುಶ್ರೀಯನ್ನು ರಾಜ ಪ್ರತಿಮುಖ ವಶಪಡಿಸಿಕೊಂಡು ತನ್ನ ಹೆಂಡತಿಯನ್ನಾಗಿ ಮಾಡಿಕೊಂಡಿರುತ್ತಾನೆ. ರಾಜನ ಈ ಕಾರ್ಯದಿಂದ ನಾಗಚಂದ್ರ ಅವನ ಮೇಲೆ ವೈರತ್ವ ಬೆಳೆಸಿಕೊಂಡಿರುತ್ತಾನೆ.

ಈ ಕಾರಣಕ್ಕಾಗಿ ಜಿನವರ್ಮನನ್ನು ನೋಡಿದ ತಕ್ಷಣ ಭಾರದ್ವಾಜ ಮುನಿಗೆ ಪೂರ್ವಜನ್ಮದ ವೈರ ಉಕ್ಕತೊಡಗಿತು. ಅದೇ ಸಮಯದಲ್ಲಿ ಅರಸ ಮುನಿಗೆ ನೀವು ನಮ್ಮ ಮನೆಯಲ್ಲಿ ಊಟ ಮಾಡಬೇಕು ಎಂಬ ಬೇಡಿಕೆ ಇಡುತ್ತಾನೆ. ಅದಕ್ಕೆ ಭಾರದ್ವಾಜ ಮುನಿ ಒಂದು ಕರಾರಿನ ಮೇಲೆ ನಿಮ್ಮ ಮನೆಯಲ್ಲಿ ಊಟ ಮಾಡುತ್ತೇನೆ ಎನ್ನುವನು. ಅದೇನೆಂದರೆ "ಜಿನವರ್ಮನ ಬೆನ್ನೊಳಡಿಯಿಲ್ಲದ ತಳಿಗೆಯನಿಟ್ಟು ಬಿಸಿಯ ತುಯ್ಯಲನುಣ್ಬದೆನಗಟ್ಟೆಯೀ ಪಾಂಗಿನೊಳೆನ್ನನೂಡಲಾಪೊರ್ಡುಣ್ಬೆ ನಲದಾಗಳು"(ವಡ್ಡಾರಾಧನೆ ಪು-೬೪, ಪ-೧೦)ಎಂದು ಹೇಳುತ್ತಾನೆ. ತಪಸ್ವಿಯ ಈ ವಿಚಿತ್ರ ಬಯಕೆಗೆ ಅರಸ ಕಂಗಾಲಾಗುತ್ತಾನೆ. ಅದಕ್ಕೆ ಜಿನವರ್ಮ ಅರಸನಿಗೆ ತಪಸ್ವಿಯ ಬಯಕೆಯಂತೆಯೇ ಉಣ್ಣಲಿ ಎಂದು ಹೇಳುತ್ತಾನೆ.

ಜಿನವರ್ಮನ ಬೆನ್ನೊಳ್ ಪಿರಿಯಪರಿಯಾಣಮನಿಟ್ಟದಂ ತೆಕ್ಕನೆ ತೀವಿ ಬಡ್ಡಿಸಿದೊಡೆ ಕುದಿಯುತ್ತಿರ್ದ್ದ ತುಯ್ಯಲಂ ತಣ್ಣಿತ್ತಾಗಿಯಾಱುವನ್ನೆಗಂ ಪಾರುತ್ತಿರ್ದ್ದು ನೀಡುಂ ಬೇಗಮುಂಡು ಸಮೆದ ಬಟಿಕ್ಕೆ ತಳಿಗೆಯನೆತ್ತಿದೊಡಾ ತಳಿಗೆಯೊಡನೆ ಬೆನ್ನ ತೊವಲೆಲ್ಲಮೆರ್ದು ಪೋದುದು"(ವಡ್ಡಾರಾಧನೆ ಪು-೬೪, ಪ-೨೦).

ಅಹಿಂಸಾ ಪರಮೋಧರ್ಮ ಎಂಬ ತತ್ವ ಜೈನ ಧರ್ಮದ್ದು. ಜೈನ ಧರ್ಮ ನಂಬಿದ ಸಾಮಾನ್ಯರೇ ಅತ್ಯಂತ ಕಟ್ಟು ನಿಟ್ಟಾಗಿ ಅಹಿಂಸಾ ಧರ್ಮ ಪಾಲಿಸುವರು. ಅಂಥದರಲ್ಲಿ ತಪಸ್ವಿಯೊಬ್ಬನಿಗೆ ತನ್ನ ಪೂರ್ವಜನ್ಮದ ವೈರ ಜಾಗೃತವಾಗಿ ವೈರಿಯನ್ನು ಇಷ್ಟು ಹಿಂಸಿಸುವ ಮನೋಭಾವದ ಸನ್ಯಾಸಿ ಜೈನಧರ್ಮ ಅನುಯಾಯಿಯಾಗಿರುವದು ವಿರಳ. ಕ್ರಿಮಿ ಕೀಟವನ್ನೂ ಹಿಂಸಿಸಲಿಚ್ಛಿಸದ ಜೈನ ಸನ್ಯಾಸಿಗಳಲ್ಲಿ ಪೂರ್ವಜನ್ಮದ ವೈರಿಯನ್ನು ಇಷ್ಟು ಕಠೋರವಾಗಿ ಹಿಂಸಿಸುವ ಸನ್ಯಾಸಿಗಳು ಇದ್ದರು ಎಂದು ಹೇಳುವ ಕಥೆ ಇದು. ವೈರತ್ವವೆನ್ನುವದು ಸಾಮಾನ್ಯನಿಗಷ್ಟೇ ಅಲ್ಲ ರಾಗ-ದ್ವೇಷಗಳೆಲ್ಲವನ್ನು ಮೀರಿದ ಸನ್ಯಾಸಿಯನ್ನೂ ಬಿಡುವದಿಲ್ಲ ಎಂಬ ಭಾವ ಈ ಕಥೆಯಲ್ಲಿದೆ.

ಭಿಕ್ಷೆ:

ಭಿಕ್ಷೆ ಎನ್ನುವದು ಒಂದು ಧರ್ಮಕಾರ್ಯ; ಕೊಡುವವನಿಗಾದರೂ ಸರಿ, ತೆಗೆದುಕೊಳ್ಳುವವನಿಗಾದರೂ ಸರಿ. ಆದರೆ 'ಭಿಕ್ಷೆ' ಎನ್ನುವ ಪದ ಇಂದು ತನ್ನ ಮೂಲಾರ್ಥ ಕಳೆದುಕೊಂಡು ತಿರುದು ತಿನ್ನು ಎನ್ನುವ ಹೀನಾರ್ಥ ಪಡೆದಿದೆ. ವಡ್ಡಾರಾಧನೆಯ ಕಾಲದಲ್ಲಿ ಭಿಕ್ಷೆ ಧಾರ್ಮಿಕ ಮೌಲ್ಯವಾಗಿತ್ತು.

ಸಾಮಾನ್ಯವಾಗಿ ಅಂದಿನ ಕಾಲದಲ್ಲಿ ಸನ್ಯಾಸಿಗಳು ದೇಶ ಸಂಚಾರ ಕೈಗೊಳ್ಳುವಾಗ ಭಿಕ್ಷೆ ಅನಿವಾರ್ಯವಾಗಿತ್ತು. ಯಾವ ಊರ ಹೊರಗೆ ನಿಲ್ಲುತ್ತಿದ್ದರೋ ಅದೇ ಊರಿನ ಉಣಲು ತಕ್ಕ ಮನೆಗಳಲ್ಲಿ ಭಿಕ್ಷೆಗೆ ಹೋಗುತ್ತಿದ್ದರು.

ಭಿಕ್ಷೆ ನೀಡಲು ವರ್ಣ ತಾರತಮ್ಯವಿತ್ತೇ ಹೊರತಾಗಿ ಬಡವ-ಶ್ರೀಮಂತ ಎಂಬ ವರ್ಗ ತಾರತಮ್ಯವಿರಲಿಲ್ಲ. ಎಷ್ಟೇ ಬಡವನಾದ ವ್ಯಕ್ತಿಯೂ ಸಹ ಸನ್ಯಾಸಿಯನ್ನು ಭಿಕ್ಷೆಗೆ ನಿಲ್ಲಿಸಿಕೊಳ್ಳಬಹುದಿತ್ತು. ಭಿಕ್ಷೆಯ ಮನೆಯಲ್ಲಿ ಇಂಥದ್ದೇ ಊಟ ಇರಬೇಕೆಂದಿಲ್ಲ; ಅವರವರ ಯೋಗ್ಯತಾನುಸಾರವಾಗಿ

ನೀಡಲಾಗುತ್ತಿತ್ತು. ಉದಾ: ಸನತ್ಕುಮಾರ ಚಕ್ರವರ್ತಿಯ ಕಥೆಯಲ್ಲಿ ಸನತ್ಕುಮಾರ ಚಕ್ರವರ್ತಿ ದೀಕ್ಷೆ ಪಡೆದು ಉಪವಾಸದ ನಂತರ ಬಡ ಮುದುಕಿಯೊಬ್ಬಳು ತನ್ನ ಮನೆಗೆ ಇವರನ್ನು ಭಿಕ್ಷೆಗೆ ಆಹ್ವಾನಿಸುತ್ತಾಳೆ. ಊಟಕ್ಕೆ ಹಾರಕದಕ್ಕಿಯ ಅನ್ನ, ಆಡಿನ ಮಜ್ಜಿಗೆ, ಅವರೆ, ಎಣ್ಣೆಗಳನ್ನು ನೀಡಿದಳು. ಮುನಿಗಳು ಅದನ್ನೇ ಮೃಷ್ಟಾನ್ನದಂತೆ ಉಣ್ಣುತ್ತಾರೆ.

ಮುನಿಗಳೂ ಸಹ ಭಿಕ್ಷೆಗೆ ನಿಲ್ಲಿಕೊಳ್ಳುವವರು ಬಡವರು ಶ್ರೀಮಂತರು ಯಾರೇ ಆಗಲಿ ಯಾರಿಗೂ ಇಂಥದ್ದೇ ಊಟಬೇಕೆಂಬ ಕರಾರು ಇಲ್ಲದೆ ಎಂಥ ಊಟ ಕೊಟ್ಟರೂ ಮೃಷ್ಟಾನ್ನ ಕೊಟ್ಟಷ್ಟೇ ಪ್ರೀತಿಯಿಂದ ಉಂಡು ಹೋಗುತ್ತಿದ್ದರು.

ಇವತ್ತಿನ ಸಂದರ್ಭದಲ್ಲಿ ಯಾವುದೇ ಸ್ವಾಮೀಜಿಯನ್ನು ಮನೆಗೆ ನಿಲ್ಲಿಸಿಕೊಳ್ಳುವ ತಾಕತ್ತು ಸಾಮಾನ್ಯನಿಗೆ ಇಲ್ಲ. ಅವರಿಗೆ ಇಂಥದ್ದೇ ಉಚ್ಚಮಟ್ಟದ ಊಟೋಪಚಾರ, ವಸತಿ ವ್ಯವಸ್ಥೆ ಆಗಬೇಕೆಂಬುದರ ದೊಡ್ಡ ಪಟ್ಟಿ ಸ್ವಾಮೀಜಿಗಿಂತ ಮೊದಲೇ ಭಕ್ತರ ಮನೆ ಸೇರಿರುತ್ತದೆ. ಎಲ್ಲೋ ಅತಿ ವಿರಳರಾದ ಸಾದಾ–ಸೀದಾ ಸ್ವಾಮೀಜಿಗಳು ನಮ್ಮ ಮಧ್ಯೆಯೇ ಇದ್ದಾರಾದರೂ ಐಷಾರಾಮಿ ಸೌಲಭ್ಯದ ಆಕಾಂಕ್ಷಿಗಳೇ ಹೆಚ್ಚು.

ಗೋವರ್ಧನರೆಂಬ ಮುನಿಗಳು ವರ್ಧಮಾನ ಭಟಾರರು ಮೋಕ್ಷಕ್ಕೆ ಹೋದ ಮೇಲೆ ಉಜ್ಜಯಂತ ಪರ್ವತಕ್ಕೆ ಹೋಗಿ ನಮಸ್ಕರಿಸಿ ಬರಬೇಕೆಂದು ಹೊರಟರು. ದಾರಿಯಲ್ಲಿ ಆಟವಾಡುತ್ತಿದ್ದ ಬ್ರಾಹ್ಮಣ ಹುಡುಗ ಭದ್ರಬಾಹುವನ್ನು ನೋಡುತ್ತಾರೆ. ಭದ್ರಬಾಹುವನ್ನು ನೋಡಿದ ಗೋವರ್ಧನ ಮುನಿಗಳಿಗೆ ಈ ಹುಡುಗ ಚತುರ್ದಶ ಆಗಮಗಳನ್ನು ತಿಳಿದ ಮಹಾತ್ಮನಾಗುತ್ತಾನೆ ಎಂದು ತಿಳಿಯುತ್ತಾರೆ. ಕೂಡಲೇ ಭದ್ರಬಾಹುವಿನ ತಂದೆ–ತಾಯಿಗಳಿಗೆ "ಈತನನೆಮಗೊಪ್ಪಿಸಿಮೆಲ್ಲ ಶಾಸ್ತ್ರಂಗಳುಮಂ ಕಲ್ಪಿಸಿ ಪಂಡಿತನಂ ಮಾಡಿ ನಿಮಗೊಪ್ಪಿಸುವೊಮ್"(ವಡ್ಡಾರಾಧನೆ ಪು–೭೪) ಎನ್ನುತ್ತಾರೆ. ಅದಕ್ಕೆ ಅವರು ಒಪ್ಪಿ ಭದ್ರಬಾಹುವನ್ನು ಅವರೊಂದಿಗೆ ಕಳುಹಿಸಿಕೊಡುತ್ತಾರೆ.

ಈ ಇಡೀ ಪ್ರಕ್ರಿಯೆಯನ್ನು ಧರ್ಮ ಸಹಿಷ್ಣುತೆ ಮತ್ತು ಧರ್ಮಾಂತರ ಎರಡೂ ದೃಷ್ಟಿಯಿಂದ ನೋಡಬಹುದು ಜೈನ ಮುನಿಯೊಬ್ಬ ಒಬ್ಬ ಬ್ರಾಹ್ಮಣ ಹುಡುಗನನ್ನು ನೋಡಿ ಅವನನ್ನು ಮಹಾತ್ಮನನ್ನಾಗಿಸುತ್ತೇವೆ ಎನ್ನುವದು ಧರ್ಮಸಹಿಷ್ಣುತೆ.

ಇನ್ನು ಬ್ರಾಹ್ಮಣ ಹುಡುಗನೊಬ್ಬನಿಗೆ ವಿದ್ಯೆ ಕೊಡುವ ನೆಪದಲ್ಲಿ ಜೈನ ಧರ್ಮಕ್ಕೆ ಮತಾಂತರಗೊಳಿಸಿಕೊಳ್ಳುವ ಹುನ್ನಾರವೂ ಇದರೊಳಗಿರುತ್ತದೆ. ವಿದ್ಯೆ ಕೊಡುವ ಮೂಲಕ ತಮ್ಮ ಧರ್ಮದತ್ತ ಯುವಕನನ್ನು ಆಕರ್ಷಿಸುವ ಈ ಪ್ರಕ್ರಿಯೆ ಪ್ರಾಚೀನ ಭಾರತದಲ್ಲಷ್ಟೇ ಅಲ್ಲ ಬ್ರಿಟಿಷರು ಮಾಡಿದ್ದು ಇದನ್ನೇ. ವಿದ್ಯೆಯನ್ನು ಸಾರ್ವತ್ರಿಕಗೊಳಿಸುವ ಇಂಗ್ಲೀಷ ಭಾಷೆ, ಜ್ಞಾನವನ್ನು ಭಾರತಕ್ಕೆ ತರುವ ಮೂಲಕ ಅಂದಿನ ಯುವ ಪೀಳಿಗೆಯನ್ನು ತಮ್ಮ ಧರ್ಮದತ್ತ ಆಕರ್ಷಿತರಾಗುವಂತೆ ಮಾಡಿದರು.

ಈ ತೆರನಾದ ಧರ್ಮಾಂತರ ಪ್ರಯತ್ನಗಳು ಕಾಲದಿಂದ ಕಾಲಕ್ಕೆ ನಡೆಯುತ್ತಲೇ ಇರುತ್ತವೆ. ಜಗತ್ತಿನ ಎಲ್ಲ ಧರ್ಮಗಳಿಗೂ ತನ್ನ ಧರ್ಮಾನುಯಾಯಿಗಳ ಸಂಖ್ಯೆ ಹೆಚ್ಚಬೇಕೆಂಬ ಹಂಬಲ ಇದ್ದೇ ಇರುತ್ತದೆ. ಅದಕ್ಕೆ ಈ ರೀತಿಯ ತಂತ್ರಗಳನ್ನು ಹೆಣೆದು ತನ್ನ ಧರ್ಮದತ್ತ ಜನರನ್ನು ಆಕರ್ಷಿಸಲು ಪ್ರಯತ್ನಿಸುತ್ತಿರುತ್ತದೆ.

ಊರಲ್ಲಿಯಂತೆ ಅಡಿವಿಯಲ್ಲಿಯೂ ಭಿಕ್ಷೆಗೆ ಹೋಗುವ ರೂಢಿ ಇತ್ತೆನ್ನವುದನ್ನು ವಡ್ಡಾರಾಧನೆಕಾರ ಹೇಳುತ್ತಾನೆ. ಇದಕ್ಕೆ ಕಾಂತಾರ ಭೈಕ್ಷ್ಯವೆಂದು ಕರೆಯಲಾಗುತ್ತದೆ. ದಾರಿಯಲ್ಲಿ ಹೋಗುವವರು ಕಾಡಿನಲ್ಲೇ

ಬಿಡಾರ ಹೂಡಿರುತ್ತಾರೆ. ಹಾಗೆ ಬೀಡು ಬಿಟ್ಟವರು ಅಡವಿಯಲ್ಲಿನ ಋಷಿಗಳನ್ನು ಭಿಕ್ಷೆಗೆ ನಿಲ್ಲಿಸಿಕೊಳ್ಳುವದನ್ನು 'ಕಾಂತರ ಭೈಕ್ಷ್ಯ' ಎಂದು ಕರೆಯುತ್ತಿದ್ದುದಾಗಿ ವಡ್ಡಾರಾಧನೆಕಾರ ಉಲ್ಲೇಖಿಸುತ್ತಾನೆ. ಅಂದಿನ ಕಾಲದಲ್ಲಿ ಇಂದಿನಂತೆ ಎಲ್ಲೆಂದರಲ್ಲಿ ವಸತಿ ವ್ಯವಸ್ಥೆಯಾಗಲಿ ಊಟದ ವ್ಯವಸ್ಥೆಯಾಗಲಿ ಇರಲಿಲ್ಲ. ಹಾಗಾಗಿ ಮನುಷ್ಯ ಒಬ್ಬನ ಮೇಲೊಬ್ಬ ಅವಲಂಬಿತನಾಗಿ ಬದುಕುವ ರೀತಿಯೇ ಅನನ್ಯವಾಗಿತ್ತು.

ಭದ್ರಬಾಹು ಭಟಾರರೊಂದಿಗೆ ದೇಶ ಸಂಚಾರ ಹೊರಟ ಚಂದ್ರಗುಪ್ತಮುನಿ ಕಾಡಿನಲ್ಲಿ ಭಿಕ್ಷೆಗೆಂದು ಹೊರಡುತ್ತಾನೆ. ಅಲ್ಲಿ ಒಂದು ಮರದ ಪೊಟರೆಯೊಳಗಿನಿಂದ ಮುತ್ತು-ಮಾಣಿಕ್ಯದ ಬಳೆಗಳನ್ನು ಕೈತುಂಬ ತೊಟ್ಟ ಕೈಯೊಂದು ಚಿನ್ನದ ಸೌಟನ್ನು ಹಿಟಿದು ಭೈಕ್ಷಮಂಪಿಡಿ ಎನ್ನುತ್ತಾಳೆ. ಆದರೆ ಭಿಕ್ಷೆ ನೀಡುವ ಕೈಯಷ್ಟೇ ಕಂಡುದರಿಂದ ಭಿಕ್ಷೆ ಸ್ವೀಕರಿಸದೇ ಅಲಾಭ ಎಂದು ತಮ್ಮ ಆವಾಸಕ್ಕೆ ತಿರುಗುತ್ತಾನೆ.

ಮರುದಿನವೂ ಭಿಕ್ಷೆಗೆಂದು ಕಾಡಲ್ಲಿ ಹೋಗುತ್ತಾನೆ. ಅಲ್ಲೊಂದು ಮರದ ಕೆಳಗೆ ಅಲಂಕೃತಳಾದ ಸುಂದರ ಸ್ತ್ರೀಯೊಬ್ಬಳು ಚಿನ್ನದ ಮಡಿಕೆಯಲ್ಲಿ ಅನ್ನ ತುಂಬಿಕೊಂಡು ಚಂದ್ರಗುಪ್ತ ಮುನಿಯನ್ನು ಭಿಕ್ಷೆಗೆ ನಿಲ್ಲಿಸುತ್ತಾಳೆ. ಅದಕ್ಕೆ ಋಷಿಗಳು "ಅಬ್ಬಾ ನೀನೊರ್ವಳೆಯೆ ಪೆಱರಾರಾರುಮಿಲ್ಲಿಂತು ರಿಸಿಯರ್ಕಳ್ಗೆ ನಿಲಲಾಗದು"(ವಡ್ಡಾರಾಧನೆ ಪು-೮೯)ಎಂದು ಹೇಳಿ ತಮ್ಮ ಬಿಡಾರಕ್ಕೆ ಹೋಗುತ್ತಾರೆ. ಹೀಗೇ ಚಂದ್ರಗುಪ್ತಾಚಾರ್ಯರು ಹತ್ತು ದಿನ ಕಳೆಯುತ್ತಾರೆ. ೧೧ನೆಯ ದಿನ ಭಿಕ್ಷೆಗಾಗಿ ಕಾಡಲ್ಲಿ ಅಲೆಯುತ್ತಿದ್ದಾಗ ಒಂದು ಕಡೆ ಸುಂದರವಾದ ಊರು. ಆ ಊರಲ್ಲಿ ಭವ್ಯವಾದ ಮನೆಗಳು, ಉಪ್ಪರಿಗೆಗಳು, ಸೂಳೆಗೇರಿಗಳು, ದೇವಾಲಯಗಳು, ಆನೆ, ಕುದುರೆ, ಮನುಷ್ಯರ ಓಡಾಟ ಎಲ್ಲವನ್ನು ಕಾಣುತ್ತಾನೆ. ಊರನ್ನು ಕಂಡ ತಕ್ಷಣ ಚಂದ್ರಗುಪ್ರ ಮುನಿಗಳು ಭಿಕ್ಷೆಗೆಂದು ಊರೊಳಗೆ ಹೋಗುತ್ತಾರೆ. ಅಲ್ಲಿ ಒಬ್ಬ ದಿವ್ಯಸ್ತ್ರೀ ಪರಿವಾರ ಸಮೇತವಾಗಿ ಬಂದು ಇವರನ್ನು ಭಿಕ್ಷೆಗೆ ನಿಲ್ಲಿಸಿ ತನ್ನ ಮನೆಗೆ ಕರೆದುಕೊಂಡು ಹೋಗಿ ಅವರ ಕಾಲನ್ನು ತೊಳೆದು ನಮಸ್ಕರಿಸಿ ಭಕ್ತಿಯಿಂದ ಮತ್ತೆ ಮತ್ತೆ ದಿವ್ಯಾಹಾರವನ್ನು ಬಡಿಸುತ್ತಾರೆ. ಚಂದ್ರಗುಪ್ರಮುನಿ ತೃಪ್ತಿಯಿಂದ ಊಟಮಾಡಿ ಅವರನ್ನು ಮನಸಾರೆ ಹರಿಸಿ ತಮ್ಮ ಬೀಡಿಗೆ ಬರುತ್ತಾರೆ.

ಇದೆಲ್ಲ ಋಷಿಗಳಿಗೂ ಸಾಮಾಜಿಕ ರೀತಿ ನೀತಿಗಳು ಅನ್ವಯವಾಗುತ್ತಿದ್ದವು ಎಂಬುದನ್ನು ತೋರಿಸುತ್ತದೆ. ಭಿಕ್ಷೆ ಎಂಬುದು ಎಲ್ಲಿ ಬೇಕಾದರೂ ಹೇಗೆ ಬೇಕಾದರೂ ಸ್ವೀಕರಿಸುವಂತಿರಲಿಲ್ಲ. ಭಿಕ್ಷೆಯನ್ನು ಹೆಣ್ಣೊಬ್ಬಳೇ ನೀಡುತ್ತಿದ್ದರೆ ಭಿಕ್ಷೆ ತೆಗೆದುಕೊಳ್ಳುವಂತಿರಲಿಲ್ಲ. ಭಿಕ್ಷೆಯನ್ನು ಪರಿವಾರ ಸಮೇತರಾಗಿ ನೀಡಿದಾಗ ಮಾತ್ರ ಸ್ವೀಕರಿಸಬೇಕೆಂಬ ಕಟ್ಟಳೆಗಳು ಋಷಿಗಳಿಗೂ ಇದ್ದವು. ಒಬ್ಬಳೇ ಸ್ತ್ರೀ ಮನೆಯಲ್ಲಿದ್ದಾಗ ಯಾವ ಪರಪುರುಷನೂ ಅಂತಹ ಮನೆಗೆ ಹೋಗುವದನ್ನು ಸಮಾಜ ನಿರಾಕರಿಸುತ್ತದೆ. ಹಾಗೇನಾದರೂ ಹೋದರೆ ಸಮಾಜ ಅಂಥ ಸ್ತ್ರೀ ಪುರುಷರಿಬ್ಬರನ್ನೂ ಅನುಮಾನಿಸುತ್ತದೆ. ಸಮಾಜದ ಇಂಥ ದೃಷ್ಟಿಯಿಂದ ತಪ್ಪಿಸಿಕೊಳ್ಳಲೆಂದೇ ಚಂದ್ರಗುಪ್ತ ಮುನಿ ಹತ್ತು ದಿನ ಉಪವಾಸವಿದ್ದರೂ ಆ ಹೆಣ್ಣಿನಿಂದ ಭಿಕ್ಷೆ ಸ್ವೀಕರಿಸುವದಿಲ್ಲ.

ಹೀಗೆ ಹೆಣ್ಣೊಬ್ಬಳೇ ಕೊಡುವ ಭಿಕ್ಷೆಯನ್ನು ಋಷಿಗಳು ಸ್ವೀಕರಿಸಬಾರೆನ್ನುವದು ಒಂದು ಅಂಶ. ಮತ್ತೊಂದು ದೇವತೆಗಳು ಮಾಡಿದ ಆಹಾರವನ್ನು ಋಷಿಗಳು ಊಟಮಾಡಬಾರದು ಎಂಬ ಕಟ್ಟಳೆಯನ್ನೂ ವಡ್ಡಾರಾಧನೆಕಾರ ಹೇಳುತ್ತಾನೆ.

ಧರ್ಮದ ಆಕರ್ಷಣೆ:

ಶಿವಗುಪ್ತಾಚಾರ್ಯರೆಂಬ ಎಲ್ಲ ಬಲ್ಲ ಆಚಾರ್ಯರು ಕಾಡಿನಲ್ಲಿ ಇದ್ದು ಮರುದಿನ ಭಿಕ್ಷೆಗೆಂದು ಪಟ್ಟಣಕ್ಕೆ ಹೋಗುತ್ತಿದ್ದಾಗ ಕಟ್ಟಿಗೆಯ ಹೊರೆಯನ್ನು ತರುತ್ತಿದ್ದ ನಂದಿಮಿತ್ರನ ಕಣ್ಣಿಗೆ ಇವರು ಬೀಳುತ್ತಾರೆ. ಆಚಾರ್ಯರು ಎಲ್ಲಿ ಹೋಗುತ್ತಾರೋ ಅಲ್ಲಿಗೆ ಹೋಗಬೇಕೆನಿಸಿ ನಂದಿಮಿತ್ರ ತನ್ನ ಕಟ್ಟಿಗೆಯ ಹೊರೆಯನ್ನು ಅಲ್ಲೇ ಊರ ಹೊರಗಿನ ಬಸದಿಯ ಹತ್ತಿರ ಇಟ್ಟು ಅವರ ಹಿಂದೆಯೇ ಹೊರಡುತ್ತಾನೆ. ಅಂದು ಆ ಊರಿನ ಅರಸ ಆಚಾರ್ಯರನ್ನು ತಾನೇ ಊಟಕ್ಕೆ ನಿಲ್ಲಿಸಿಕೊಳ್ಳುವದಾಗಿಯೂ ಬೇರೆ ಯಾರೂ ಅವರನ್ನು ಊಟಕ್ಕೆ ನಿಲ್ಲಿಸಿಕೊಳ್ಳಕೂಡದೆಂದು ಡಂಗುರ ಹೊಡೆಸಿರುತ್ತಾನೆ. ಹಾಗಾಗಿ ಶಿವಗುಪ್ತಾಚಾರ್ಯರು ಹಿರಿ-ಕಿರಿಯೆನ್ನದೆ ಉಣತಕ್ಕ ಎಲ್ಲ ಮನೆಹೊಕ್ಕು ಹಾಗೇ ಮರಳಿ ಮುಂದೆ ಭಿಕ್ಷೆಗೆಂದು ಅರಮನೆಗೆ ಹೋಗುವರು. ಅವರೊಂದಿಗೆ ನಂದಿಮಿತ್ರನೂ ಅರಮನೆಗೆ ಹೋಗುತ್ತಾನೆ. ಅರಮನೆ ಪ್ರವೇಶಿಸುತ್ತಿದ್ದ ಭಟಾರರನ್ನು ಕಂಡ ರಾಜ ರಾಣಿಯರು "ಸುವರ್ಣಪೂರ್ಣ ಕಳಶಮುಂ ಕನ್ನಡಿಯುಂ ಪೂವುಮಕ್ಕಿಯುಂ ಮಾದುಫಲಮುಂ ಮೊದಲಾಗೊಡೆಯನೇಕಾರ್ಚನೆಯಿಂದಿದಿರಂ ಬಂದು ನಿರಿಸಿ ಬಲಗೊಂಡು ಬಂದು ಭಟಾರರ ಕಾಲಂ ಮಹಾದೇವಿ ನೀರ್ವೊಯ್ಯೆ ಅರಸಂ ತಾನೆ ಪ್ರಕ್ಷಾಳಿಸಿ"(ವಡ್ಡಾರಾಧನೆ ಪು-೭೮) ಶಿವಗುಪ್ತಾಚಾರ್ಯರೊಂದಿಗೆ ಹೋದ ಈ ಬೋಳುದಲೆಯ ಅನಾಥ ನಂದಿಮಿತ್ರನಿಗೆ ರಾಣಿ "ಬ್ರಹ್ಮಯ್ಯಾ ನೀಡಿಂ ನಿಮ್ಮ ಕಾಲಂ ತೊಳೆವೆಮ್" ಎಂದು ತಾನೇ ನಂದಿಮಿತ್ರನ ಕಾಲುಗಳನ್ನು ತೊಳೆಯುತ್ತಾಳೆ. ನಂತರ ಶಿವಗುಪ್ತಾಚಾರ್ಯ ನಂದಿಮಿತ್ರ ಇಬ್ಬರನ್ನೂ ಒಳಗೆ ಕರೆದುಕೊಂಡು ಹೋಗಿ ದೊಡ್ಡ ಅಡ್ಡಣಿಗೆಯ ಮೇಲೆ ದೊಡ್ಡ ಚಿನ್ನದ ತಟ್ಟೆಯನ್ನಿಟ್ಟು ಆಚಾರ್ಯರಿಗೆ ರಾಜನೂ ನಂದಿಮಿತ್ರನಿಗೆ ರಾಣಿಯೂ ಊಟ ಬಡಿಸಲು ಆರಂಭಿಸುತ್ತಾರೆ. ಅವರಿಗಾಗಿ ಮಾಡಿದ ಅಡುಗೆಯೆಂದರೆ "ಪೆಸರ ತೊವ್ವೆಯುಂ ಬೆಣ್ಣೆಗಾಸಿದಾಮೋದ ಸುಗಂಧ ಪರಿಮಳಂ ನಾರ್ಪ ತುಪ್ಪಮುಂ ಪಲವುಂ ತೆಱದ ಬಾಡುಗಳುಂ ತುಯ್ಯಲುಂ ಪೂರಿಗೆಯಿಡ್ಡಲಿಗೆ ಸೋದಿಗೆ ಲಾವಣಿಗೆಘೃತಪೂರಂ ಲಡ್ಡುಗೆ ಮಂಡಗೆ ಮೊದಲಾಗೊಡೆಯ ಪದಿನೆಂಟುಂ ತೆರದ ಭಕ್ಷ್ಯ ರೂಪಂಗಳುಮಂ ನಾನಾ ಪ್ರಕಾರದ ಪಾನಂಗಳುಮಂ"(ವಡ್ಡಾರಾಧನೆ ಪು-೭೮) ಎಲ್ಲವನ್ನು ಭಟಾರರಿಗೆ ಬಡಿಸಿದಂತೆ ನಂದಿಮಿತ್ರನಿಗೂ ಹೊಟ್ಟೆ ತುಂಬುವಂತೆ ಮೃಷ್ಟಾನ್ನ ಉಣಬಡಿಸಿ ಕರ್ಪೂರ ಸಮ್ಮಿಶ್ರಿತವಾದ ನೆಲವತ್ತಿ ಅಡಕೆಯ ಹೋಳುಗಳನ್ನು, ಕೈತೀವಿದ ಎಲೆಯ ತಾಂಬೂಲವನ್ನು ಕೊಡುತ್ತಾರೆ. ಹುಟ್ಟಂದಿನಿಂದಲೇ ಈ ತೆರನಾದ ಊಟವನ್ನು ಕನಸಿನಲ್ಲೂ ಕಾಣದ ಇಷ್ಟು ತೆರನಾದ ಭಕ್ಷ್ಯಗಳು, ಹೊಟ್ಟೆ ತುಂಬ ಊಟ, ಆದರಾತಿಥ್ಯ ಎಲ್ಲವೂ-ನಂದಿಮಿತ್ರನಿಗೆ ಆಶ್ಚರ್ಯವನ್ನುಂಟು ಮಾಡುತ್ತವೆ. ಇಷ್ಟೆಲ್ಲ ಆದನಂತರ ರಾಜ ರಾಣಿಗೆ ಭಟಾರರು ಕರ್ಮಕ್ಷಯವಾಗಲಿ, ದಾನ ಅಕ್ಷಯವಾಗಲಿ ಎಂದು ಹರಸಿ ಅರಮನೆಯಿಂದ ಬಸದಿಗೆ ಬರುತ್ತಾರೆ. ನಂದಿಮಿತ್ರನೂ ಅವರ ಜೊತೆಯೇ ಬಸದಿಗೂ ಬರುತ್ತಾನೆ. ಅವರನ್ನೇ ಗಮನಿಸುತ್ತಿದ್ದ ನಂದಿಮಿತ್ರ ಭಟಾರರಂತಹ ರೂಪುಪಡೆದರೆ ಲೋಕದಲ್ಲೆಲ್ಲ ಗೌರವ, ಪೂಜೆ, ಮೃಷ್ಟಾನ್ನಗಳು ಯಾವ ಕೊರತೆಯೂ ಇಲ್ಲದಂತೆ ದೊರೆಯುತ್ತವೆ. ತಾನೂ ಏಕೆ ಅವರಂತಾಗಬಾರದು ಎಂದು ಆಲೋಚಿಸುತ್ತಾನೆ. ಹಾಗೆಯೇ ಭಟಾರರನ್ನು "ಭಟಾರಾಎನ್ನಂ ನಿಮ್ಮಂತೆ ಮಾಡಿಮ್"(ವಡ್ಡಾರಾಧನೆ ಪು-೭೯) ಎಂದನು.

ಈ ಇಡೀ ವೃತ್ತಾಂತ ಅನಾಥಮಕ್ಕಳು ಅನ್ನಕ್ಕಾಗಿ ಹೇಗೆ ಹಪಹಪಿಸುತ್ತವೆ ಎನ್ನುವದನ್ನು ತೋರಿಸುವದು ಒಂದು ಮುಖವಾದರೆ, ಧಾರ್ಮಿಕ ಗುರುಗಳಿಗೆ ಸಮಾಜ ತೋರುವ ವಿಶೇಷ ಆದರಾತಿಥ್ಯ, ಗೌರವಗಳು ನಿರ್ಗತಿಕರನ್ನು ಹೇಗೆ ಆಕರ್ಷಿಸುತ್ತವೆ ಎಂಬುದು ಧರ್ಮದ ಇನ್ನೊಂದು ಮುಖ. ಇಲ್ಲಿ ಬರುವ ನಂದಿಮಿತ್ರ ಭಟಾರರಿಗೆ ನಿಮ್ಮಂತೆ ನನ್ನನ್ನು ಮಾಡಿ ಎಂದು ಕೇಳುವುದರ ಹಿಂದೆ

ಯಾವ ಆಧ್ಯಾತ್ಮಿಕ ಸೆಳೆತವೂ ಇಲ್ಲ; ಅಲ್ಲಿದ್ದುದು ಹಸಿವು ನೀಗಿಸಿಕೊಳ್ಳಲು ಇರುವ ಮಾರ್ಗವಷ್ಟೇ. ಸಾಮಾನ್ಯ ಬಡವ, ನಿರ್ಗತಿಕನಿಗೆ ಧರ್ಮದ ಹಸಿವಿಗಿಂತ ಹೊಟ್ಟೆಯ ಹಸಿವು ತುಂಬಿಸಿಕೊಳ್ಳುವದೇ ಧರ್ಮವಾಗಿರುತ್ತದೆ.

ಸಮಾಜದ ಆದರಾತಿಥ್ಯ ಗೌರವಸತ್ಕಾರಗಳೆಲ್ಲ ಉಳ್ಳವರಿಗೆ ಸಲ್ಲುತ್ತಿರುತ್ತವೆ. ಏನೂ ಇಲ್ಲದ ನಿರ್ಗತಿಕರಿಗೆ ನಿರ್ಲಕ್ಷ್ಯವೇ ಉಡುಗೊರೆ. ಬಡವರಿಗೆ ಆದರಾತಿಥ್ಯವೂ ಮೃಷ್ಟಾನ್ನದಷ್ಟೇ ಕನಸಿನ ಮಾತಾಗಿರುತ್ತದೆ. ಉಳಿದವರಂತೆ ತಮಗೂ ಮಾನ್ಯತೆಬೇಕೆಂಬ ಹಂಬಲ ಬಡವರಿಗೆ ಇದ್ದೇ ಇರುತ್ತದೆ. ಆದ್ದರಿಂದಲೇ ನಂದಿಮಿತ್ರ ಮತ್ತು ಸಮಾಜದಲ್ಲಿನ ಅವನಂತಹ ಎಷ್ಟೋ ಜನ ತಮಗೆ ಇಲ್ಲದ್ದನ್ನೆಲ್ಲ ಧರ್ಮ ಕೊಡುವದೆಂಬ ಭರವಸೆಯಿಂದ ಧರ್ಮದ ಮೊರೆಹೋಗುವದು ಸಹಜ ಮತ್ತು ಸರಳ ಮಾರ್ಗೋಪಾಯವೆಂದು ಭಾವಿಸುವರು. ಧರ್ಮದ ಆಪ್ತಮಾತು–ನೀತಿಗಳ ಕಾರಣಕ್ಕಾಗೇ ಕೆಲವೊಂದು ಧರ್ಮಗಳು ಜನಸಾಮಾನ್ಯರನ್ನು ಬಡವರನ್ನು ಆಕರ್ಷಿಸುತ್ತವೆ.

ಆದರೆ ಈ ಆಕರ್ಷಣೆ ಕೆಲವೊಮ್ಮೆ ಸಾಮಾನ್ಯ ಮನುಷ್ಯನೊಬ್ಬ ಲೌಕಿಕ ಜಗತ್ತನ್ನು ಮೀರಿ ನಿಜವಾದ ಸ್ವಾಮಿತ್ವವನ್ನು ಅಲೌಕಿಕತೆಯನ್ನು ಸಾಧಿಸುವಂತೆ ಮಾಡುತ್ತದೆ. ಇದನ್ನೇ ನಂದಿಮಿತ್ರ ಸಾಧಿಸಿ ತೋರಿಸುತ್ತಾನೆ.

ಮೊದಮೊದಲು ಸುಮ್ಮನೆ ಶಿವಗುಪ್ತಾಚಾರ್ಯರ ಬಾಹ್ಯ ಆತಿಥ್ಯವನ್ನು ಕಂಡು ಮನಸೋತು ತಾನೂ ಅವರಂತೆ ಆಗಬೇಕೆಂದು ಪ್ರಾರಂಭಿಸಿದ ಉಪವಾಸ ಆರು ದಿನ ಕಳೆಯುತ್ತದೆ. ಏಳನೆಯ ದಿನ ನಂದಿಮಿತ್ರ "ಭಟಾರಾ ಇನಿತು ಕಾಲಮುಂಡುದು ಸಾಲ್ಗುಮೆಮಗೆ ಯಾವಜ್ಜೀವವಂ ಬಾಟ್ವೆನ್ನೆಗಮುಪವಾಸ ಪಚ್ಚಕ್ಕಾಣಂಗುಡುವುದು"(ವಡ್ಡಾರಾಧನೆ ಪು–೮೨)ಎನ್ನುವನು. ಅಲ್ಲಿಗೆ ನಂದಿಮಿತ್ರನಿಗೆ ಬೇಕೆಂಬ ಹಂಬಲ ಕಳೆದು ನಿಜವಾದ ಸಿದ್ಧಿತ್ವವನ್ನು ಪಡೆಯಲು ಅವನ ಮನ ಹಂಬಲಿಸುತ್ತದೆ. ಅದಕ್ಕೆ ಭಟಾರರು "ನಿಮಗಿಂದಿನ ದಿವಸದನಿತೆಯಾಯುಷ್ಯಮ್"(ವಡ್ಡಾರಾಧನೆ ಪು– ೮೨) ಎಂದು ಹೇಳಿ ಭಟಾರರು ಯಾವಜೀವವೂ ಚತುರ್ವಿಧ ಶರೀರಕ್ಕೂ ನಿವೃತ್ತಿದೀಕ್ಷೆ ಕೊಟ್ಟು ಬಸದಿಯ ಒಂದು ಕೋಣೆಯನ್ನು ತೋರಿಸಿ ಅಲ್ಲಿ ಅಲ್ಲಾಡದೇ ಮಲಗಿ ಕೈಕಾಲು ಅಲ್ಲಾಡಿಸದೇ ಜೀವ ಇರುವವರೆಗೂ ಮನಸ್ಸಿನಲ್ಲೇ ಪಂಚನಮಸ್ಕಾರಗಳನ್ನು ಹೇಳುತ್ತಾ ಇದ್ದು ಬಿಡಲು ನಂದಿಮಿತ್ರರಿಗೆ ಉಪದೇಶಿಸುತ್ತಾರೆ. ನಂದಿಮಿತ್ರ ಭಟಾರರು ಹೇಳಿದಂತೆಯೇ ಮಾಡುತ್ತಾರೆ. ಮುಂದುವರಿದು ವಡ್ಡಾರಾಧನೆಕಾರ "ಕಿತ್ತಯ್ಯಂಗಳ್ ಸನ್ಯಸನಂಗೆಯ್ದರಂಬಾ ಮಾತನರಸನಾದಿಯಾಗಿ ಪೊಟಲ ಜನಂಗಳೆಲ್ಲಂ ಕೇಳ್ದು ಪಿರಿದುಂ ಸಂಭ್ರಮಮಾಗಿಯರಸನುಂ ಮಹಾದೇವಿಯುಂ ಮಂತ್ರಿಯುಂ ರಾಜಶ್ರೇಷ್ಠಿಯುಂ ಯುವರಾಜಂ ಮೊದಲಾಗಿ ಪೊಟಲ ಜನಮೆಲ್ಲಮಿರ್ಪೊತ್ತು ಮರ್ಚನೆಯಂ ಕೊಂಡುಬಂದರ್ಚಿಸಿ ಕಿಟಿದು ಬೇಗಮಿರ್ದಾರಾಧನೆಯಂ ವಕ್ಖಾಣಿಸುವದಂ ಕೇಳ್ದು ಮಿಥ್ಯಾದೃಷ್ಟಿಗಳಪ್ಪವರ್ ಶ್ರಾವಕ ಬ್ರತಂಗಳಂ ಕೈಕೊಂಡರ್ ಶ್ರಾವಕರುಂ ದೃಢಸಮ್ಯಗ್ ದೃಷ್ಟಿಗಳಾಗಿ ಬಂದಿಸಿ ಪೋದರ್(ವಡ್ಡಾರಾಧನೆ ಪು–೮೩).

ಇದು ನಂದಿಮಿತ್ರನೆಂಬ ಪಾಪ ಕರ್ಮದ ಅನಾಥ ಹುಡುಗನೊಬ್ಬ ಧರ್ಮ ದೀಕ್ಷೆ ಪಡೆದು ಕಿತ್ತಯ್ಯ ನಂದಿಮಿತ್ರರಾದ ಬಗೆ. ಇಲ್ಲಿ ಸಾಮಾನ್ಯ ಹುಡಗನೊಬ್ಬ ಅಸಾಮಾನ್ಯ ವ್ಯಕ್ತಿತ್ವ ಪಡೆಯುವ ರೀತಿಯನ್ನು ಕಾಣುತ್ತೇವೆ. ಯಾರಿಗೂ ಬೇಡವಾದ ಹುಡುಗನನ್ನು ಮುಂದೆ ಅವನು ಪಡೆದ ಧರ್ಮ ಸಂಸ್ಕಾರದಿಂದ ರಾಜನಾದಿಯಾಗಿ ಇಡೀ ಊರಿಗೆ ಊರೇ ಆರಾಧಿಸುವಂತೆ ನಂದಿಮಿತ್ರ ಹಂತಹಂತವಾಗಿ ಸಾಧನೆಗೈಯ್ದಪರಿ ಅದ್ಭುತವಾಗಿದೆ. ಅನಾಥ ಹುಡುಗ ತುತ್ತು ಅನ್ನಕ್ಕಾಗಿ ಪರಿತಪಿಸುವಾಗ ಒಂದು ತುತ್ತು ಅನ್ನ ಕೊಡದ ಸಮಾಜ ಅದೇ ಹುಡಗ ಧರ್ಮಸಾಧನೆಗೈಯ್ದಾಗ ಅವನನ್ನು ಪೂಜಿಸುತ್ತದೆ.

ಅನುಕರಿಸುತ್ತದೆ. ನಂದಿಮಿತ್ರನ ವ್ರತಾಚರಣೆಗೆ ಮನಸೋತ ಎಷ್ಟೋ ಜನ ದೀಕ್ಷೆ ಪಡೆದು ವ್ರತಗಳನ್ನು ಕೈಗೊಳ್ಳುತ್ತಾರೆ. ಹೀಗೆ ಕೆಲವೊಮ್ಮೆ ಯಾರಿಗೂ ಬೇಡವಾದ ಸಾಮಾನ್ಯ ಎಲ್ಲರೂ ಅನುಸರಿಸುವಂತೆ ಬೆಳೆಯುವದೇ ಸಾಮಾನ್ಯನ ವಿಶೇಷ ಗುಣ. ಅಲ್ಲದೆ ಧರ್ಮ ಹೀಗೆ ಒಬ್ಬರಿಂದ ಇನ್ನೊಬ್ಬರನ್ನು ಆಕರ್ಷಿಸುತ್ತದೆ ಮತ್ತು ಜನ ಸಾಮಾನ್ಯರು ಸಮೂಹ ಸನ್ನಿಯೋಪಾದಿಯಲ್ಲಿ ಧರ್ಮ, ಅಧ್ಯಾತ್ಮಕ್ಕೆ ಒಲಿಯುತ್ತಾರೆನ್ನುವದಕ್ಕೆ ಕಿತ್ತಯ್ಯ ನಂದಿಮಿತ್ರರನ್ನು ಜನ ಆರಾಧಿಸುವದು ಮತ್ತು ಅವರನ್ನು ಅನುಕರಿಸುವದೇ ಸಾಕ್ಷಿ.

ಇದರ ಜೊತೆಯಲ್ಲೇ ಕಥೆಗಾರನೊಬ್ಬನ ಭಾಷಾಶೈಲಿಯೂ ಗಮನಸೆಳೆಯುತ್ತದೆ. ಬಡವ-ಪೂಜಿತ ಎನ್ನುವ ಶ್ರೇಣೀಕರಣವನ್ನು ಅಪ್ರಜ್ಞಾಪೂರ್ವಕವಾಗೇ ಕಥೆಗಾರ ಪಾಲಿಸಿಕೊಂಡೇ ಬರುತ್ತಾನೆ. ಉದಾಹರಣೆಗೆ ವಡ್ಡಾರಾಧನೆಕಾರ ಭದ್ರಬಾಹು ಭಟ್ಟಾರರ ಕಥೆಯಲ್ಲಿ ನಂದಿಮಿತ್ರ ಪಾಪಕರ್ಮದ ಮಗು ಬಾಲಕನಾಗಿದ್ದಾಗ ಏಕವಚನ ಪ್ರಯೋಗಿಸುತ್ತಾನೆ. ಅದೇ ಹುಡುಗ ಧರ್ಮದೀಕ್ಷೆ ಪಡೆದು ಉಪವಾಸ, ತಪಸ್ಸಿಗೆ ಕುಳಿತಾಗ ನಂದಿಮಿತ್ರರು, ಕಿತ್ತಯ್ಯ ನಂದಿಮಿತ್ರರು ಎಂದು ಬಹುವಚನವನ್ನು ಪ್ರಯೋಗಿಸುತ್ತಾನೆ. ಹೀಗೆ ವಡ್ಡಾರಾಧನೆಕಾರನೂ ಸಮಾಜದ ಶ್ರೇಣಿಕೃತ ಭಾಷಾರೂಪಗಳಿಗೆ ಹೊರತಾಗಿಲ್ಲ ಎನ್ನುವದು ಸ್ಪಷ್ಟ. ಸಮಾಜದಲ್ಲಿ ವರ್ಗ ವರ್ಣಗಳಿಗೆ ತಕ್ಕಂತೆ ಬಾಷೆಯೂ ಬದಲಾಗುತ್ತಿರುತ್ತದೆ.

ಮೃತರಾದ ಕಿತ್ತಯ್ಯ ನಂದಿಮಿತ್ರಗಳು ಕನಕಧ್ವಜ ಎಂಬ ದೇವನಾಗಿ ಹುಟ್ಟುತ್ತಾರೆ. ಮುಂದೆ ಇದೇ ಕಿತ್ತಯ್ಯ ನಂದಿಮಿತ್ರಗಳ ಅಂತಿಮ ಯಾತ್ರೆಯನ್ನು ಸಕಲಗೌರವಗಳೊಂದಿಗೆ ವಾದ್ಯ ವೃಂದದೊಂದಿಗೆ ದಾರಿಯುದ್ದಕ್ಕೂ ಚಿನ್ನವನ್ನು ಎರಚುತ್ತಾ ಸಾಗಿರುತ್ತಾರೆ. ಅದನ್ನು ನೋಡಿದ ಕನಕಧ್ವಜನಿಗೆ ಎಲ್ಲರೂ ತನ್ನ ದೇಹಕ್ಕೆ ಇಷ್ಟೊಂದು ಉತ್ಸವ ಮಾಡುತ್ತಿರುವಾಗ ತಾನೂ ಮಾಡಬೇಕೆಂದುಕೊಂಡು, ತಾನೂ ಅನೇಕ ವಿಮಾನಗಳನ್ನು ಸೃಷ್ಟಿಸಿ ಅವು ಸನ್ಯಾಸಿಯ ವಿಮಾನದ ಮುಂದೆ ಸುತ್ತುವರಿಯುವಂತೆ ಮಾಡುತ್ತಾನೆ. ದೇವದುಂದುಭಿ ಬಾರಿಸುವದು ದೇವಲೋಕದ ಪುಷ್ಪಗಳಾದ ನಮೇರು, ಸಂತಾನಕ ಪಾರಿಯಾತ್ರ ಮುಂತಾದ ಹೂಗಳಿಂದ ವಿಮಾನದ ಮುಂದೆ ಹೂಮಳೆ ಸುರಿಸಿ ನಾಟ್ಯವಾಡುತ್ತಿದ್ದನು ಕನಕಧ್ವಜ. ಇದನ್ನೆಲ್ಲ ನೋಡಿದ ಅರಸ ಮುಂತಾದ ಊರಜನರೆಲ್ಲ ಆಶ್ಚರ್ಯಚಕಿತರಾಗಿ ಕನಕಧ್ವಜನನ್ನು ನೀನಾರು ಎಂದು ಕೇಳಲು ಅವನು "ಆನಲ್ತೆ ನಂದಿಮಿತ್ರನಪ್ಪ ಕಿತ್ತಯ್ಯನೆನುಣಿಸಿಂಗೆಂದು ತಪಂಬಟ್ಟೇೞು ದಿವಸಮುಪವಾಸಗೆಯ್ದು ಮುಡಿಪಿ ಸಂನ್ಯಸನಂಗೆಯ್ದು ಮುಡಿಪಿ ದೇವಲೋಕದೊಳ್ ಕನಕಧ್ವಜೂನೆಂಬೊಂ ದೇವನಾಗಿ ಪುಟ್ಟಿ ಎನ್ನ ದೇಹಮಂ ಪೂಜಿಸಲಂ ನಿಮಗೆನ್ನ ವಿಭವಮಂ ತೋಱಲ್ ಬಂದೆ"(ವಡ್ಡಾರಾಧನೆ ಪು-೮೪) ಎಂದು ಹೇಳಿ ತನ್ನ ಶರೀರವನ್ನು ಗಂಧಪುಷ್ಪ ದೀಪಧೂಪ ಅಕ್ಷತೆಗಳಿಂದ ಪೂಜಿಸಿ ತನ್ನ ಗುರುಗಳಾದ ಶಿವಗುಪ್ತಾಚಾರ್ಯರನ್ನು ಪೂಜಿಸಿ ನನಗೆ ದೊರೆತ ಈ ಸಂಪತ್ತು ವೈಭವ, ದೇವತ್ವವೆಲ್ಲವೂ ದೊರೆತದ್ದು ನಿಮ್ಮಿಂದಲೇ ಎಂದು ಗುರುಗಳನ್ನು ವಂದಿಸಿ ತನ್ನ ದೇವಲೋಕಕ್ಕೆ ಹೋಗುತ್ತಾನೆ.

ನಂದಿಮಿತ್ರನೆಂಬ ಅನಾಥ, ಬಡವನೊಬ್ಬ ಸಿರಿಸಂಪತ್ತು ವೈಭವಗಳಿಂದ ಕೂಡಿದ ದೇವಮಾನವನಾದವ. ಜನಸಮಾನ್ಯರೆದುರು ಅವನನ್ನು ಪ್ರತ್ಯಕ್ಷಗೊಳಿಸುವ ಮೂಲಕ ಧರ್ಮದಿಂದಲೇ ಅವನಿಗೆ ಇಷ್ಟೆಲ್ಲ ಸಾಧ್ಯವಾದುದು ಎಂದು ವಡ್ಡಾರಾಧನೆಕಾರನಿಗೆ ಬಿಂಬಿಸಬೇಕಾಗಿದೆ. ಹೀಗೆ ತೋರಿಸುವ ಮೂಲಕ ಈ ಧರ್ಮವನ್ನು ಅನುಸರಿಸಿದರೆ ನಂದಿಮಿತ್ರ ಕನಕಧ್ವಜನಾಗಿ ಅನುಭವಿಸುತ್ತಿರುವ ಸುಖ-ಸಂಪತ್ತು ವೈಭವಗಳನ್ನು ತಾವೂ ಅವನಂತೆ ಅನುಭವಿಸಬಹುದೆಂದು ಜನಸಾಮಾನ್ಯರಲ್ಲಿ ಆಸೆ ಹುಟ್ಟಿಸುವ

ತಂತ್ರಗಾರಿಕೆಯೂ ಇದರಲ್ಲಿ ಇರುತ್ತದೆ. ಈ ಮೂಲಕ ತನ್ನ ಧರ್ಮದತ್ತ ಜನಸಾಮಾನ್ಯರನ್ನು ಆಕರ್ಷಿಸುವ ಪರಿ ಇದಾಗಿದೆ.

ಧರ್ಮ ಕಟ್ಟಳೆಗಳು ಮತ್ತು ಹೊಂದಾಣಿಕೆ:

ಬರದಂಥ ಪ್ರಕೃತಿ ವಿಕೋಪಗಳು ಬದುಕನ್ನು ದುರ್ಭರಗೊಳಿಸುತ್ತವೆ ಮತ್ತು ನಿತ್ಯ ಬದುಕಿನ ವ್ಯವಸ್ಥೆಯನ್ನೇ ಅಲ್ಲೋಲ ಕಲ್ಲೋಲಗೊಳಿಸುತ್ತವೆ. ಜನಸಾಮಾನ್ಯರ ಬದುಕನ್ನಷ್ಟೇ ಅಲ್ಲ ಋಷಿಗಳ ಬದುಕೂ ಸಹ ಪ್ರಕೃತಿ ವಿಕೋಪಗಳಿಂದ ಬದಲಾಯಿಸುತ್ತದೆ. ಅದಕ್ಕೆ ಉದಾಹರಣೆಯಾಗಿ ಒಂದೆರಡು ಘಟನೆಗಳನ್ನು ವಡ್ಡಾರಾಧನೆಕಾರ ಭದ್ರಬಾಹುಭಟ್ಟಾರರ ಕಥೆಯಲ್ಲಿ ಸಿಂಧು ದೇಶದ ಬರದ ಬವಣೆಯನ್ನು ಹೀಗೆ ವಿವರಿಸುತ್ತಾನೆ:

ಶ್ರಾವಕರೆಲ್ಲರೂ ಸೇರಿ ಋಷಿಗಳಲ್ಲಿಗೆ ಹೋಗಿ ಹೀಗೆಂದರು; "ಭಟಾರಾ ಲವಟುಗಳ ಕೈಯಲ್ ಪಗಲುಣಿಲುಮಡಟಿಂ ಪೆಱಲಾಗ ಮೇಲ್ವಾಸೆಟ್ಟಿದು ಕೊಂಡುಂಬರ್ ಲೋಗರೆಲ್ಲಮವರ ಭಯಕ್ಕೆ ಪಗಲಡುಗೆಯಂ ಬಿಸುಟ್ಟಿರುಳಟ್ಟುಣಲ್ ತಗುಳ್ದರದಱಿಂ ನೀಮುಮಿಂದಿತ್ತಿರುಳ್ ಭೈಕ್ಷಭಾಜನಂಗಳಂ ಕೊಂಡು ಪೋಗಿ ಶ್ರಾವಕರ ಮನೆಗಳಂ ತೊಟಿಲ್ದು ಭೈಕ್ಷಂ ಬೇಡಿಕೊಂಡು ಕೊಟಿನಿರುಳ್ ತಂದಿಟ್ಟು ಪಗಲುಣ್ಬುದು"(ವಡ್ಡಾರಾಧನೆ ಪು-೯೨)ಎಂದು ಹೇಳುತ್ತಾರೆ. ಅದಕ್ಕೆ ಋಷಿಗಳೂ ಆಯಿತೆಂದು ಒಪ್ಪಿಕೊಂಡು ರಾತ್ರಿ ಭಿಕ್ಷೆ ತಂದು ಹಗಲು ಉಣ್ಣಲು ಪ್ರಾರಂಭಿಸುತ್ತಾರೆ.

ಹೀಗೆ ಋಷಿಗಳೂ ಸಹ ಬರದಂತಹ ಸಂದರ್ಭಗಳಲ್ಲಿ ಸಾಮಾಜಿಕರಿಗನುಸಾರವಾಗಿ ಬದಲಾಗಬೇಕಾದ ಅನಿವಾರ್ಯತೆ ಇರುತ್ತದೆ. ಪ್ರಕೃತಿ ವಿಕೋಪದಂತಹ ಸಂದರ್ಭಗಳಲ್ಲಿ ಮನುಷ್ಯನಿಗೆ ಹೊಟ್ಟೆಯ ಹಸಿವು ನೀಗಿಸಿಕೊಳ್ಳುವದು ಎಲ್ಲದರಕ್ಕಿಂತ ಮುಖ್ಯವಾಗಿರುತ್ತದೆಯೇ ಹೊರತು ಯಾವ ಧರ್ಮವೂ ಅಲ್ಲ. ಆದರೆ ಇಂಥ ಸಂದರ್ಭದಲ್ಲೂ ಋಷಿಗಳಿಗೆ ಭಿಕ್ಷೆಯನ್ನು ನೀಡುವದು ಜನರ ಧರ್ಮಶ್ರದ್ಧೆಗೆ ಸಾಕ್ಷಿಯಾಗುತ್ತದೆ.

ಇನ್ನೊಂದು ಅಂಶವೆಂದರೆ ಜನ ಹೇಳಿದಂತೆ ದಿಗಂಬರ ಜೈನ ಋಷಿಗಳು ರಾತ್ರಿಯಲ್ಲಿ ಭಿಕ್ಷೆಗೆ ಹೋಗತೊಡಗಿದರು. ಮುಂದೊಂದು ದಿನ ಭಿಕ್ಷೆಗಾಗಿ ತಿರುಗುತ್ತಾ ಒಂದು ಮನೆಗೆ ಹೋಗುತ್ತಾರೆ. ಅಲ್ಲಿದ್ದ ವೇಳಸ್ವಾಮಿನಿ ಎಂಬ ಗರ್ಭಿಣಿ ಮಹಿಳೆ ಕಗ್ಗತ್ತಲು ರಾತ್ರಿಯಲ್ಲಿ ದಿಗಂಬರನಾಗಿ ಬಂದ ಮುನಿಯ ರೂಪು ನೋಡಿ ಭಯಭೀತಳಾಗುತ್ತಾಳೆ. ಆ ಭಯಕ್ಕೆ ವೇಳಾಸ್ವಿಮಿನಿಗೆ ಆಗಲೇ ಬಸಿರಿಯುತ್ತದೆ. ಇದನ್ನು ನೋಡಿ ಶ್ರಾವಕರೆಲ್ಲ ಸೇರಿ ಋಷಿಗಳಿಗೆ "ಕಾಲಮಪ್ಪೊಡೆ ಕೆಟ್ಟತೊಳ್ಳಿತ್ತಪ್ಪ ಕಾಲಮಾದಂದು ಪ್ರಾಯಶ್ಚಿತ್ತಂಗೊಂಡು ನಿಮ್ಮ ತಪಂಗಳೊಳ್ ನಿಲ್ಲಿಮೀಗಳೀ ಪಸವು ಕಟಿವನ್ನೆಗಂ ನೀಮುಮೆಡದ ಕೈಯನೆಟಿಲಿಕ್ಕಿಯರ್ಧಗಪ್ಪಡಮನೆಡದ ಮುಯ್ಪಿನಮೇಗಿಕ್ಕಿ ಒಳಗೆ ನಿರ್ಗ್ರಂಥಮಪ್ಪ ರೂಪಂ ತಾಳ್ದಿ ಬಲದ ಕೈಯೊಳ್ ಭೈಕ್ಷದ ಭಾಜನಮಂ ಪಿಡಿದು ತೊಟಿಲ್ದು ಭೈಕ್ಷಮಂ ಬೇಡಿ" (ವಡ್ಡಾರಾಧನೆ ಪು-೯೨) ಎಂದು ಹೇಳುತ್ತಾರೆ.

ಹೀಗೆ ಹೇಳುವ ಮೂಲಕ ಜನಶಕ್ತಿ ಜೈನಯತಿಯಗಳು ದಿಗಂಬರತ್ವವನ್ನು ಬಿಟ್ಟು ಅರ್ಧಗಪ್ಪಡವನ್ನು ಉಡುವಂತೆ ಮಾಡಿತು. ಸಾಮಾನ್ಯ ಹೆಣ್ಣು ವೇಳಾಸ್ವಾಮಿನಿಯ ಕಾರಣದಿಂದಾಗಿ ಧರ್ಮವೊಂದು ದಿಗಂಬರ-ಅರ್ಧಗಪ್ಪಡ ಎಂದು ಎರಡು ಕವಲಾಗುತ್ತದೆ. ಮೇಲಿನ ಎರಡೂ ಸಂದರ್ಭಗಳಲ್ಲಿ ಜನಶಕ್ತಿ ಧರ್ಮವನ್ನು ನಿಯಂತ್ರಿಸುವದನ್ನು ಕಾಣುತ್ತೇವೆ. ಧರ್ಮ ನಿಲ್ಲುವದೇ

ಜನಸಾಮಾನ್ಯರಿಂದ. ಅದಕ್ಕೆ ಜನಸಾಮಾನ್ಯರ ಮಾತು ಕೇಳಲೇಬೇಕಾಗುತ್ತದೆಂಬ ಅರಿವು ಧರ್ಮಕ್ಕೂ ಇರುತ್ತದೆ. ಜನಸಾಮಾನ್ಯರಿಲ್ಲದ ಧರ್ಮ ಉಳಿಯಲು, ಬೆಳೆಯಲು ಸಾಧ್ಯವೇ ಇಲ್ಲ.

ಧರ್ಮಘೋಷ ಭಟಾರರು ಗಂಗೆಯ ದಡದಲ್ಲಿ ಹಸಿವು ನೀರಡಿಕೆಗಳಿಂದ ಬಳಲಿ ಮೂರ್ಛೆಹೋಗಿ ಬೀಳುತ್ತಾರೆ. ಇದನ್ನು ಕಂಡ ಗಂಗಾದೇವಿ ಶ್ವೇತವಸ್ತ್ರತೊಟ್ಟು ದಿವ್ಯಾಲಂಕೃತಳಾಗಿ ಚಿನ್ನದ ಕೊಡದಲ್ಲಿ ಸುಗಂಧಭರಿತ ತಣ್ಣನೆಯ ನೀರು ತುಂಬಿಕೊಂಡು ಧರ್ಮಘೋಷರಿಗೆ ಹೀಗೆ ಹೇಳುತ್ತಾಳೆ: "ಭಟಾರಾ ಪ್ರಾಸುಕಮಪ್ಪ ನೀರಂ ಪೊಟ್ಟಿದೊಳ್ ಬಂದುದ್ದ ಕುಡಿದು ನಿಮ್ಮ ಸೇದೆಯನಾರಿಸಿಂ ನಿಮಗರಮನೆಗೆ ಪೋಗಿ ಕೂಟಿಂ ತಂದಪೆನೆನ್ನೆವರಂ ನೀರಂ ಕುಡಿದು ತೃಷೆಯಂ ಪಿಂಗಿಸುವದು"(ವಡ್ಡಾರಾಧನೆ ಪು-೧೧೪)ಎಂದ ತಕ್ಷಣ ಧರ್ಮಘೋಷ ಭಟಾರರು ನಿರಾಕರಿಸುತ್ತಾರೆ. ಗಂಗಾದೇವಿ ಆಶ್ಚರ್ಯಗೊಂಡು ಸಿಮಂಧರರೆಂಬ ತೀರ್ಥಂಕರರನ್ನು ಭೇಟಿಯಾಗಿ ಕಾರಣ ಕೇಳುತ್ತಾಳೆ. ಅದಕ್ಕೆ "ನೀವು ತೆಗೆದುಕೊಂಡು ಹೋದ ನೀರು ಜೀವಿಗಳಿಲ್ಲದ್ದಾಗಿದ್ದರೂ ಚಿನ್ನದ ಕೊಡವಾದರೂ ಅದು ದೇವತೆಗಳು ತಂದದ್ದಾದ್ದರಿಂದ ಋಷಿಗಳು ಅದನ್ನು ಸ್ವೀಕರಿಸಲಾಗದು" ಎಂದು ಹೇಳುತ್ತಾರೆ. ಹೀಗೆ ಋಷಿಗಳ ಆಹಾರ ಪದ್ಧತಿಯ ವಿಷಯಗಳನ್ನು ವಡ್ಡಾರಾಧನೆಕಾರ ಮೇಲಿಂದ ಮೇಲೆ ಹೇಳುತ್ತಾನೆ.

ದೇವತೆಗಳೇ ಬಂದು ಋಷಿಗಳನ್ನು ಉಪಚರಿಸುವರೆಂದು ಹೇಳುವುದು ಜನಸಾಮಾನ್ಯರನ್ನು ಧರ್ಮದತ್ತ ಆಕರ್ಷಿಸುವ ತಂತ್ರವೂ ಇದಾಗಿರುತ್ತದೆ.

ಬುದ್ಧಜ ಎಂಬ ಜೈನ ಗೃಹಸ್ಥನಿದ್ದು ಅವನಿಗೆ ವಿನಾಕಾರಣವಾಗಿ ಋಷಿಗಳ ಮೇಲೆ ವೈರವಿರುತ್ತದೆ. ಆ ವೈರತ್ವದ ಕಾರಣದಿಂದಾಗಿ ವೃಷಭಸೇನ ಭಟಾರರು ಭಿಕ್ಷೆಗೆ ಹೋದ ಸಂದರ್ಭದಲ್ಲಿ ಅವರು ತಪಸ್ಸಿಗೆ ನಿಲ್ಲುತ್ತಿದ್ದ ಯೋಗ ಶಿಲೆಯ ಹತ್ತಿರಹೋಗಿ ತರಿಯ ಮರ ಕಡಿದು ದೊಡ್ಡ ದೊಡ್ಡ ಕಟ್ಟಿಗೆಗಳನ್ನು ಮಾಡಿದನು. ಆ ಕಟ್ಟಿಗೆಗಳನ್ನು ಯೋಗ ಶಿಲೆಯ ಮೇಲೆ ಕೆಳಗೆ ಸುತ್ತಲೂ ಒಟ್ಟಿ ಕಿಚ್ಚು ಹಚ್ಚುತ್ತಾನೆ. ಆ ಬೆಂಕಿಯಿಂದ ಸುಟ್ಟ ಶಿಲೆ ಕೆಂಪನೆಯ ಬಣ್ಣದ್ದಾಗಿರುತ್ತದೆ. ಭಿಕ್ಷೆಯಿಂದ ಮರಳಿ ಬಂದ ಭಟಾರರು ಕಿಚ್ಚಿನಿಂದ ಕೆಂಪಾದ ಯೋಗ ಶಿಲೆಯನ್ನು ನೋಡಿ ನಮ್ಮ ಆಯುಷ್ಯ ಇಷ್ಟೇ ಎಂದು ತಿರ್ಮಾನಿಸಿ ಆಹಾರ ಶರೀರ ತ್ಯಜಿಸಿ ಆ ಶಿಲೆಯನ್ನು ಹತ್ತಿ ಎಲ್ಲವನ್ನು ಸಹಿಸಿಕೊಂಡು ಮೋಕ್ಷಕ್ಕೆ ಹೋದರೆಂದು ಕಥೆ ಹೇಳುತ್ತದೆ.

ವಡ್ಡಾರಾಧನೆಕಾರ ಹೇಳುವಂತೆ ಮೇಲಿನ ಕಥೆಯಲ್ಲಿ ಬರುವ ಜೈನ ಗೃಹಸ್ಥ ವಿನಾಕಾರಣ ವೈರಸಾಧಿಸಿದ್ದನ್ನು ಹೇಳುತ್ತಾನೆ. ವಿನಾಕಾರಣವಾಗಿ ಇಷ್ಟು ಬರ್ಬರವಾಗಿ ವ್ಯಕ್ತಿಯೊಬ್ಬನನ್ನು ಮನುಷ್ಯ ಕೊಲ್ಲುತ್ತಾನೆಂದರೆ ಅವನು ಮತಿಹೀನನೇ ಆಗಿರಬೇಕು. ಇಲ್ಲವೇ ವಡ್ಡಾರಾಧನೆಕಾರ ಧರ್ಮದ ಆಂತರಿಕ ವಿಷಯ ಒಂದನ್ನು ಹೇಳದೇ ಮರೆಮಾಚಿರಬೇಕು. ಬಹುಶಃ ಇಲ್ಲಿ ಬರುವ ಈ ಕಥೆ ಆ ಕಾಲದ ಧರ್ಮದ ಆಂತರಿಕ ತಿಕ್ಕಾಟ, ಸಂಘರ್ಷವನ್ನು ಹೇಳುತ್ತಿರಬಹುದು. ಆದರೆ ಅದಕ್ಕೆ ಪುರಾವೆಗಳಿಲ್ಲ. ಏನೇ ಆಗಲಿ ಅವತ್ತಿನ ಸಂದರ್ಭದಲ್ಲಿ ಋಷಿಗಳ ಮೇಲೆ ವಿನಾಕಾರಣವಾಗಿ ಹಗೆ ಸಾಧಿಸುವವರಿದ್ದರೆಂಬುದನ್ನು ಈ ಕಥೆ ಹೇಳುತ್ತದೆ. ಅಷ್ಟೇ ಅಲ್ಲ ಅವನು ಋಷಿಗಳನ್ನು ಅಷ್ಟು ಬರ್ಬರವಾಗಿ ಕೊಂದರೂ ಈ ಕಥೆ ಋಷಿಗಳು ಎಲ್ಲವನ್ನೂ ಸೈರಿಸಿ ಮೋಕ್ಷಕ್ಕೆ ಹೋದುದನ್ನು ಮಾತ್ರ ಹೇಳುತ್ತದೆಯೇ ವಿನಾಃ ಕೊಂದವನಿಗೆ ಯಾವ ಪಶ್ಚಾತ್ತಾಪವನ್ನಾಗಲಿ ಶಿಕ್ಷೆಯನ್ನಾಗಲಿ ಹೇಳದೇ ಮೌನವಹಿಸುತ್ತದೆ.

ಪುಳುಂಗಾರರು ಮತ್ತು ಧರ್ಮ:

ಗರುಡವೇಗನೆಂಬ ಹಕ್ಕಿ ಹಿಡಿಯುವವ. ಅವನ ಹೆಂಡತಿ ಗೋಮತಿ. ಒಂದು ದಿನ ಗೋಮತಿ ಸಮಾಧಿಗುಪ್ತರ ಧರ್ಮೋಪದೇಶ ಕೇಳಿ ವ್ರತಗಳನ್ನು ಕೈಕೊಳ್ಳುವಳು. ಹಕ್ಕಿಗಾರ ಗಂಡ ಹಕ್ಕಿಗಳನ್ನು

ಹಿಡಿದು ತಂದು ಮತ್ತೆ ಬೇಟೆಗೆಂದು ಹೋಗಿರುತ್ತಾನೆ. ಆಗ ಧರ್ಮೋಪದೇಶ ಕೇಳಿ ಮನೆಗೆ ಬಂದ ಗೋಮತಿ ಮನೆಯಲ್ಲಿದ್ದ ಅಷ್ಟೂ ಹಕ್ಕಿಗಳನ್ನು ಸೆರೆಬಿಡಿಸಿ ಹಾರಿಸಿ ಬಿಡುತ್ತಾಳೆ. ಅದನ್ನು ತಿಳಿದ ಗರುಡವೇಗ ಧರ್ಮಿಷ್ಠೆಯಾದ ಗೋಮತಿಯನ್ನು ಮನೆಯಿಂದ ಓಡಿಸುತ್ತಾನೆ.

ಗರುಡವೇಗನಿಗೆ ಹಕ್ಕಿ ಹಿಡಿಯುವ ತನ್ನ ವೃತ್ತಿಯೇ ಬದುಕು, ಧರ್ಮ ಎಲ್ಲವೂ ಆಗಿದೆ. ಯಾವ ಧರ್ಮೋಪದೇಶ, ವ್ರತಾಚರಣೆಗಳೂ ಹೊಟ್ಟೆ ತುಂಬಿಸಲಾರವು ಎಂಬ ಸತ್ಯದ ಮನವರಿಕೆ ಗರುಡವೇಗನಿಗಿದೆ. ಅದಕ್ಕೇ ತನ್ನ ಧರ್ಮವನ್ನೇ ಬದಲಿಸಲು ಹೊರಟ ಗೋಮತಿಯನ್ನು ಮನೆಯಿಂದ ಹೊರಹಾಕುತ್ತಾನೆ. ಧರ್ಮವೆನ್ನುವದು ಉಳ್ಳವರಿಗೆ ಪಾರಮಾರ್ಥಿಕ ಸಾಧನೆಗೆ ಮಾರ್ಗವಾದರೆ ಏನೂ ಇಲ್ಲದವರಿಗೆ ಹೊಟ್ಟೆ ತುಂಬಿಸುವ ಕೆಲಸವೇ ಧರ್ಮವಾಗಿರುವಾಗ ಅನ್ಯ ಧರ್ಮಗಳು ಅವನಿಗೆ ನಿರುಪಯೋಗವೆನಿಸುತ್ತವೆ.

ಧರ್ಮ ಮತ್ತು ಸಾಮಾನ್ಯನ ಪಾಪ ಪ್ರಜ್ಞೆ:

ತುಂಗಭದ್ರ ನೆಂಬ ಕಾಡು ಕಡಿಯುವವ ತಾತ್ಕಾಲಿಕವಾಗಿ ಬೇಸಾಯ ಮಾಡಲು ಮರಗಳನ್ನು ಕಡಿದು ರಾಶಿ ಒಟ್ಟಿರುತ್ತಾನೆ. ಆಗ ಹಳಮುಖರಿಸಿ ಎಂಬುವವರು ಸಂಚಾರ ಮಾಡುತ್ತಾ ಬಂದು ತುಂಗಭದ್ರನ ಹೊಲದಲ್ಲಿ ಹೊತ್ತು ಮುಳುಗಲು ಆ ಮರದ ರಾಶಿಯ ಮೇಲೆ ಧ್ಯಾನಕ್ಕೆ ಕುಳಿತುಕೊಳ್ಳುತ್ತಾರೆ. ರಾತ್ರಿ ನಿದ್ದೆಗಣ್ಣಲ್ಲಿ ತುಂಗಭದ್ರನು ಬಂದು ಮರದ ರಾಶಿಗೆ ಬೆಂಕಿ ಹಚ್ಚಿ ಹೋಗುತ್ತಾನೆ. ಮರದ ರಾಶಿಯ ಮೇಲೆ ಧ್ಯಾನಕ್ಕೆ ಕುಳಿತ ಹಳಮುಖ ಋಷಿ ಬೆಂಕಿಯಲ್ಲಿ ಬೆಂದು ಹೋಗುತ್ತಾರೆ. ಮರುದಿನ ಬೆಳಗ್ಗೆ ಬಂದು ತುಂಗಭದ್ರನು ನೋಡಿದಾಗ ತಾನು ನಿಷ್ಕಾರಣವಾಗಿಋಷಿಯನ್ನು ಸುಟ್ಟು ಕೊಂದದ್ದಕ್ಕಾಗಿ ದುಃಖಪಟ್ಟು, ಅದೇ ಬೆಂಕಿಯಲ್ಲಿ ತಾನೂ ಸುಟ್ಟುಕೊಂಡು ಸತ್ತು ಹೋಗುತ್ತಾನೆ.

ಸಾಮಾನ್ಯರು ಧರ್ಮಕ್ಕೆ ಅಂಜುತ್ತಾರೆ. ಮತ್ತು ನಿಷ್ಕಾರಣವಾಗಿ, ತಿಳಿಯದೇ ಮಾಡಿದ ಪಾಪಪ್ರಜ್ಞೆ ಅವರನ್ನು ಬಹುವಾಗಿ ಕಾಡುತ್ತದೆ. ಈ ಕಾರಣಕ್ಕಾಗೇ ಕಟ್ಟಿಗೆ ಕಡಿಯುವಂತಹ ಸಾಮಾನ್ಯ ಮನುಷ್ಯ ಹಳಮುಖ ಋಷಿಯರು ಬೆಂದ ಬೆಂಕಿಯಲ್ಲಿ ತಾನೂ ಬಿದ್ದು ಸುಟ್ಟು ಹೋಗುತ್ತಾನೆ.

ಋಷಿಗಳು ಮತ್ತು ಸುಳ್ಳು ಆರೋಪ:

ವ್ಯಾಳನೆಂಬ ಪುರೋಹಿತ ಸ್ಕಂದಕುಮಾರ ಎಂಬ ಋಷಿಯೊಂದಿಗೆ ವಾದದಲ್ಲಿ ಸೋತದ್ದರಿಂದ ರಾಜ ವ್ಯಾಳನನ್ನು ತನ್ನ ನಾಡಿನಿಂದ ಓಡಿಸುತ್ತಾನೆ. ಹಾಗೆ ಓಡಿಹೋದ ವ್ಯಾಳ ದಂಡಕ ಅರಸನ ಹತ್ತಿರ ಮಂತ್ರಿಯಾಗಿ ಸೇರುತ್ತಾನೆ. ದೇಶ ಸಂಚಾರದಲ್ಲಿದ್ದ ಸ್ಕಂದಕುಮಾರ ಋಷಿ ಐನೂರು ಜನ ಋಷಿಗಳೊಂದಿಗೆ ದಂಡಕ ರಾಜನ ನಾಡಿಗೆ ಬರುತ್ತಾರೆ. ರಾಜ ಭಿಕ್ಷುಗಳ ಭಕ್ತನಾಗಿದ್ದರಿಂದ ಋಷಿಗಳಿಗೆ ಅತ್ಯಂತ ಗೌರವಾದರಗಳಿಂದ ಆತಿಥ್ಯ ನೀಡುತ್ತಿರುತ್ತಾನೆ. ಆದರೆ ಸ್ಕಂದಕುಮಾರ ಋಷಿಯ ಮೇಲೆ ಹಗೆ ಸಾಧಿಸಿಕೊಂಡಿದ್ದ ವ್ಯಾಳ ಹೇಗಾದರೂ ಮಾಡಿ ಆ ಋಷಿಗಳನ್ನೆಲ್ಲ ಅಲ್ಲಿಂದ ಓಡಿಸಬೇಕೆಂಬ ಹಟ ತೊಡುತ್ತಾನೆ; ಅದಕ್ಕಾಗಿ ನಿರಂತರವಾಗಿ ಪ್ರಯತ್ನಿಸತೊಡಗುತ್ತಾನೆ.

ವ್ಯಾಳನು ತಾನೇ ಆಯುಧಗಳನ್ನು ಅವರಲ್ಲಿ ಅಡಗಿಸಿಟ್ಟು ಆಯುಧ ಋಷಿಗಳವೇ ಎಂದ. ರಾಜ ನಂಬಲಿಲ್ಲ. ೨ನೆಯ ಸಾರಿ ಅರಮನೆಯ ಭಾಂಡಾರದಲ್ಲಿನ ಸಂಪತ್ತು ಕದ್ದು ಋಷಿಗಳ ಮೇಲೆ ಹಾಕಿದ. ರಾಜ ಅದನ್ನೂ ನಂಬಲಿಲ್ಲ. ೩ನೆಯ ಬಾರಿ ಒಬ್ಬನಿಗೆ ಋಷಿಯ ವೇಷ ಹಾಕಿಸಿ ಅಂತಃಪುರದ ರಾಣಿಯ ಮಂಚದ ಮೇಲೆ ಕುಳಿತು ರಾಣಿಯೊಂದಿಗೆ ಹರಟುವ ಹಾಗೆ ಮಾಡಿದ. ಅದನ್ನು ನೋಡಿ ರಾಜ ಅವನು ಋಷಿಯೇ ಎಂದುಕೊಂಡನು. ಮೇಲಿನ ಎರಡೂ ತಪ್ಪುಗಳನ್ನು ಇವರೇ ಮಾಡಿದ್ದು ಎಂದು ವ್ಯಾಳನು

ಮತ್ತೊಮ್ಮೆ ಹೇಳಲು ರಾಜನು ಇವರಿಗೆ ತಕ್ಕ ಶಿಕ್ಷೆ ನೀನೇ ವಿಧಿಸು ಎನ್ನುವನು. ಅಷ್ಟು ಸಾಕೆಂದುಕೊಂಡ ವ್ಯಾಳ ಐನೂರು ಋಷಿಯರನ್ನು ಎಳೆಸಿತಂದು ಎಳ್ಳಿನ ಗಾಣಗಳಿಗೆ ಹಾಕಿ ಹಿಂಡಿ ಅವರನ್ನು ಕೊಂದನು.

ಯಾರನ್ನೇ ಆಗಲಿ ವಿನಾಕಾರಣ ಇಷ್ಟೊಂದು ಜನರನ್ನು ಕೊಲ್ಲಬೇಕೆಂದರೆ ಪ್ರಭುತ್ವದ ಸಹಕಾರದಿಂದಲೇ ಸಾಧ್ಯ. ಅದಕ್ಕಾಗಿಯೇ ವ್ಯಾಳನಂತಹವರು ಪ್ರಭುತ್ವದ ಕಣ್ಣಿಗೆ ಮಣ್ಣೆರಚಿ ತಮ್ಮ ಕೆಲಸ ಸಾಧಿಸಿಕೊಳ್ಳುತ್ತಾರೆ, ಸಾಮಾನ್ಯರನ್ನೂ ಹಿಂಸಿಸುತ್ತಾರೆ. ಇಂಥವರಿಗೆ ಧರ್ಮದ ಅಂಜಿಕೆಯೂ ಇರುವುದಿಲ್ಲ.

ಧರ್ಮಾಮೃತ

ಧಾರ್ಮಿಕ ಸಂಘರ್ಷ:

ಆ ಕಾಲದ ಬ್ರಾಹ್ಮಣ – ಜೈನರ ಮಧ್ಯದ ನಾ ಹೆಚ್ಚು, ನೀ ಹೆಚ್ಚು ಎನ್ನುವ ಧರ್ಮಗಳ ಕಿತ್ತಾಟಕ್ಕೆ ಈ ಕೃತಿ ಸಾಕ್ಷಿಯಾಗಿದೆ.

ಬ್ರಾಹ್ಮಣನೊಬ್ಬ ಜೈನ ಸನ್ಯಾಸಿಯನ್ನು ಮೂದಲಿಸುವ ಪರಿ:

ತಿರಿದಾಕೂಳಂ ನೀರೊಳ್
ಗರಗರನಪ್ಪಂತು ಕರ್ಚಿ ಮೇಣುಂಡಪರೋ
ಪರಿಯೊಳ್ ಮೇಣ್ಮಿಂದಪರೊ
ಮರುಳೀತಂ ಶ್ರವಣರಾವತಪಮಂ ಕಂಡರ್ (ಪು–೧೬, ಪ– ೮೯)

ಭಿಕ್ಷೆ ಬೇಡಿ ತಂದ ಅನ್ನವನ್ನು ನೀರಲ್ಲಿ ಸ್ವಚ್ಛವಾಗಿ ತೊಳೆದು ತಿನ್ನದ ನಿತ್ಯವೂ ಸ್ನಾನ ಮಾಡದ ಇಂಥ ಸವಣರ ತಪಸ್ಸನ್ನು ಯಾರು ಕಂಡಿದ್ದಾರೆ ಎಂದು ಅವರನ್ನು ಅನುಮಾನಿಸುತ್ತಾನೆ. ಮುಂದುವರೆದು

ಕುಲಮಂ ಮಾಸಿಸಿ ಮಿೂಹಮಂ ತೊಱೆದು ಕಂಡಪೇಸೆಮ್ಮೈಯೊಳ್
ಮಲಮಂ ತಾಳ್ದಿದ ಕಷ್ಟರಂ ಸವಣರಂ ಕಂಗೆಟ್ಟರಂ ಕಂಡು ಮಹಾ...

(ಪು–೧೬, ಪ–೯೧)

ಕುಲವನ್ನು ಕೆಡಿಸಿ ಸ್ನಾನ ಬಿಟ್ಟು, ನೋಡಿದವರು ಹೇಸಿಕೊಳ್ಳುವ ಹಾಗೆ ಮೈಮೇಲೆ ಅತಿಯಾದ ಕೊಳೆ ಧರಿಸುವ ನೀಚ, ದಿಕ್ಕೆಟ್ಟ ಸವಣರು ಎಂದು ಸವಣರನ್ನು ಮೂದಲಿಸುತ್ತಾನೆ.

ಮಲಮಂ ಧರಿಯಿಸಿ ನಾಣಂ
ತೊಲಗಿಸಿ ನಿರ್ಗ್ರಂಥಮಿರ್ದುಸೊಂಬಿಂ ಪಲ್ಲಂ
ಸುಲಿಯದೆ ಮಿೂಯದೆ ಮಿಳ್ಕದೆ
ಕುಲದಿಂ ಕೆಟ್ಟನರವಣ್ಣ ನೀ ಮನ್ನಿಪುದೇ (ಪು–೧೭, ಪ– ೯೫)

– ಕೊಳೆ ಧರಿಸಿ, ನಾಚಿಕೆಯನ್ನು ಬಿಟ್ಟು, ಬೆತ್ತಲೆಯಿದ್ದು, ಸೋಮಾರಿತನದಿಂದ ಹಲ್ಲನ್ನು ಉಜ್ಜದೆ, ಸ್ನಾನ ಮಾಡದೆ ಕುಲದಿಂದ ಕೆಟ್ಟವರು ಸವಣರು ಎನ್ನುವನು.

ಜೈನಧರ್ಮಕ್ಕೂ ಮೊದಲು ವೈಧಿಕ ಧರ್ಮ ತನ್ನ ಪ್ರಾಬಲ್ಯ ಮೆರೆದಿತ್ತು. ಹೊಸದಾಗಿ ಪ್ರಭಾವ ಬೀರಲೆತ್ನಿಸುತ್ತಿದ್ದ ಜೈನಧರ್ಮ ಒಮ್ಮೆಲೇ ಒಪ್ಪಿತಗೊಳ್ಳುವ ಸಾಧ್ಯತೆ ಇರಲಿಲ್ಲ. ಹೊಸದಾಗಿ ಪ್ರಭಾವ ಬೀರಲೆತ್ನಿಸುವ ಮತ್ತು ಈಗಾಗಲೇ ಸ್ಥಾಪಿತಗೊಂಡ ಧರ್ಮಗಳ ಮಧ್ಯೆ ಸಂಘರ್ಷ ಸಾಮಾನ್ಯ. ಧರ್ಮ-ಕುಲ -ಜಾತಿಗಳ ವಿಷಯ ಬಂದಾಗ ಸಾಮಾನ್ಯನಿಗೆ ತನ್ನದೇ ಶ್ರೇಷ್ಠವೆಂಬ ಪ್ರತಿಷ್ಠೆ ಕಾಡತೊಡಗುತ್ತದೆ. ಅದಕ್ಕೇ ತಿಕ್ಕಾಟಗಳು ಆರಂಭಗೊಳ್ಳುವದು.

ಅಂತೆಯೇ ಬ್ರಾಹ್ಮಣನೊಬ್ಬ ಜೈನ ಸನ್ಯಾಸಿಗಳನ್ನು, ಅವರ ಜೀವನ ಶೈಲಿಯನ್ನು ಅಪಹಾಸ್ಯ ಮಾಡುತ್ತಾನೆ. ಬ್ರಾಹ್ಮಣರ, ಜೈನರ ಬದುಕಿನ ರೀತಿಯಲ್ಲಿ ತುಂಬ ಭಿನ್ನತೆಗಳಿವೆ. ಅವನ್ನೇ ಎತ್ತಿ ತೋರಿಸುತ್ತಾನೆ. ಜೈನ ಸನ್ಯಾಸಿಗಳ ದಿಗಂಬರತೆಯನ್ನು ತುಚ್ಛೀಕರಿಸಿ ಮಾತನಾಡುತ್ತಾನೆ.

ಜೈನ ಕವಿಯಾದ ನಯಸೇನ ಧರ್ಮಾಮೃತದಲ್ಲಿ ಹೀಗೆ ಜೈನ ಸನ್ಯಾಸಿಗಳ ಕುರಿತು ಬ್ರಾಹ್ಮಣನ ಮೂಲಕ ನಿಕೃಷ್ಟವಾಗಿ ಮಾತನಾಡುತ್ತಾನೆಂದರೆ, ಆ ಬ್ರಾಹ್ಮಣ ಅಂದಿನ ಎಲ್ಲ ಬ್ರಾಹ್ಮಣರ ಪ್ರತಿನಿಧಿಯಾಗಿ ನಿಲ್ಲುತ್ತಾನೆ. ಅಂದಿನ ಬ್ರಾಹ್ಮಣರ ಜೈನ ಸನ್ಯಾಸಿಗಳ ಕುರಿತಾದ ಅಭಿಪ್ರಾಯವನ್ನು ಈ ರೀತಿಯಲ್ಲಿ ಹೇಳುತ್ತಾನೆ.

ಧರ್ಮ ಮತ್ತು ಹಿಂಸೆ:

ಮನುಷ್ಯ ಧರ್ಮಕ್ಕೋಸ್ಕರವಾಗಿ ತನ್ನನ್ನು ತಾನು ಹಿಂಸೆಗೊಡ್ಡಿಕೊಳ್ಳುವ ಪರಿಯನ್ನು ಜೈನಧರ್ಮದಲ್ಲಿ ಹೆಚ್ಚಾಗಿ ಕಾಣುತ್ತೇವೆ. ಜೈನ ಧರ್ಮ ಹಿಂಸೆಯನ್ನು ವಿರೋಧಿಸುತ್ತದೆ. ಆದರೆ ಸ್ವಶರೀರ ಹಿಂಸೆಯನ್ನು ಪುಷ್ಟೀಕರಿಸುತ್ತದೆ. ದೈಹಿಕ ಹಿಂಸೆಯನ್ನು ಸಾಧಿಸುವ ಮೂಲಕವಾಗಿ ಧರ್ಮ ಸಾಧನೆಗೆ ತೊಡಗುತ್ತಾರೆ. ಜೈನಯತಿ ಶ್ರದ್ಧೆಯಿಂದ ಸಹಿಸಿಕೊಳ್ಳುವ ದೈಹಿಕ ಹಿಂಸೆಯನ್ನು ಜೈನಧರ್ಮದಲ್ಲಿ ನಿಷ್ಠೆಯಿಲ್ಲದ ಬ್ರಾಹ್ಮಣ ವಸುಭೂತಿ ಎಷ್ಟು ಕಷ್ಟಪಟ್ಟು ಸಹಿಸಿಕೊಳ್ಳುತ್ತಾನೆ ಎನ್ನುವದನ್ನು ನಯಸೇನ ಹೀಗೆ ಚಿತ್ರಿಸುತ್ತಾನೆ.

ತಲೆಯಿಂ ಬಲುದಡಿಗರ್ಕಿಳೆ
ನಿಲಲಾಱದೆ ಸುಂಟಿದಿಂದ ಕೋಡಗದಂತು
ಮ್ಮಳಿಸಿ ಕಳವಳಿಸಿ ನೋವಿಂ
ತಲೆಯಂ ತಿರಿಪುತ್ತುಮಂಜಿ ಕೆಟ್ಟೆನೆನುತ್ತುಂ

ನಡುಗೆ ಶರೀರಂ ಪಲ್ಲಂ
ಗಿಡಿಗಿಱಿದೆರ್ದೆಗೂಡುವಾಯೆ ಪಂದೆಯ ಮೇಲ್ಪಾ
ವಡರ್ದಂತಿರೆ ದೇಹಂ ಮರ
ವಡೆ ಕಣ್ಣೀರ್ಸುರಿಯೆ ತಳದಿನದನೊತ್ತುತ್ತುಂ

ಬಿಡದೌಡುಗರ್ಚಿ ನೋವಿಂ

ದಡಿಗಡಿಗಹಹಹಾಯೆನುತುಮೆಡಗಯ್ಯಿಂದಂ

ತಡವರಿಸುತ್ತುಂ ಸಾಸವೆ

ಗುಡಿದಂತಿರೆ ಕರಮೆ ಮಱುಗಿ ತಳವೆಳಗಾದಂ

(ಪು-೨೧,ಪ-೧೧೪,೧೧೫, ೧೧೬)

- ಧಾಂಡಿಗ ಮನುಷ್ಯರು ತಲೆಕೂದಲನ್ನು ಕೀಳಲು ಉಂಟಾದ ನೋವಿನಿಂದ ತಲೆತಿರುಗಿಸುತ್ತ ಅಂಜಿ 'ಕೆಟ್ಟೆ' ಎಂದು ಕೊಳ್ಳುತ್ತಾನೆ. ದೇಹ ನಡುಗುತ್ತಿರಲು, ಹಲ್ಲುಗಳನ್ನು ಗಟ್ಟಿಯಾಗಿ ಕಚ್ಚಿಕೊಳ್ಳುತ್ತ, ಎದೆ ಹೊಡೆದುಕೊಳ್ಳತೊಡಗುತ್ತದೆ. ನೋವಿನಿಂದ ದೇಹ ಮರಗಟ್ಟಿದಂತಾಗಿ, ಕಣ್ಣೀರು ಸುರಿಯುತ್ತಿರಲು ಕಣ್ಣೀರನ್ನು ಅಂಗೈಯಿಂದ ಒತ್ತಿಕೊಳ್ಳುತ್ತ ಗಟ್ಟಿಯಾಗಿ ಅವುಡುಗಚ್ಚಿಕೊಂಡು 'ಅಹಹಾ' ಎಂದು ಎಡಗೈಯಿಂದ ತಡವಿಕೊಳ್ಳುತ್ತಾ ಸಂಕಟ ಹೆಚ್ಚಾಗಿ ಮೇಲೆ ಕೆಳಗಾದನು.

ನೋವು ಹಿಂಸೆ ಅತಿಯಾದಾಗ ಸಹಿಸಿಕೊಳ್ಳಲಾಗದ ಸಾಮಾನ್ಯನ ಪ್ರತಿಕ್ರಿಯೆ ಹೇಗಿರುತ್ತದೆಂಬುದನ್ನು ನಯಸೇನ ಅತ್ಯಂತ ಸಹಜವಾಗಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾನೆ.

ವ್ರತ-ನೋವು-ಸಂಕಟ:

ವ್ರತದ ನಿಯಮದಂತೆ ನಿತ್ಯ ಒಂದೇ ಹೊತ್ತು ಊಟ ಎನ್ನಲು ಇಡೀ ದಿನದ ಊಟವನ್ನು ಒಂದು ಹೊತ್ತಿನಲ್ಲಿಯೇ ಉಣ್ಣಬೇಕೆಂಬ ಹಪ ಹಪಿತನದಿಂದ ಒಮ್ಮೆಲೇ ಎಲ್ಲವನ್ನೂ ತಿನ್ನುವನು. ಹಗಲೆಲ್ಲ ಸಂತೋಷವಾಗಿದ್ದು ರಾತ್ರಿ ಕಳೆದಂತೆ ವಸುಭೂತಿ ಅನುಭವಿಸುವ ನೀರಡಿಕೆಯ ಬೇಗೆಯನ್ನು ಕವಿ ಹೀಗೆ ವರ್ಣಿಸುತ್ತಾನೆ.

ಅಸದಳಮೆನಿಸುವ ತೀವ್ರದ

ತೃಷೆ ಮೊಕ್ಕಳಮಾಗೆ ನಾಡೆಯುಂ ಮನದೊಳ್ಸೈ

ರಿಸಲಾರದೆ ತಲ್ಲಣದಿಂ

ಬಿಸುಸುಯ್ಯುದ್ಮಮ್ಮಳಿಸಿ ಬಾಟಲರಿದಾಯ್ತೆನುತುಂ (ಪು-೨೩, ಪ - ೧೨೨)

ಬಿಡುಗುಂ ಬಾಯಂ ನೆಲದೊಳ್

ಪಡುಗುಂ ಪೊಱಗಣ್ಗೆಪೋಗಿ ತಣ್ಣಪೆಡೆಯೊಳ್

ಪಡುಗುಂ ತಂಪಿಲ್ಲದೊಡೆರ್ದೆ

ಗಿಡುಗುಂ ವಸುಭೂತಿ ಧೈರ್ಯಮಿಲ್ಲದೆ ಮನದೊಳ್ (ಪು-೨೩, ಪ-೧೨೩)

- ಧರ್ಮ-ವ್ರತದ ಮೇಲೆ ನಿಜವಾಗಿ ಶ್ರದ್ಧೆಯುಳ್ಳ ವ್ಯಕ್ತಿ ಊಟ - ನೀರಡಿಕೆಯ ಮೇಲೆ ಸ್ವಪ್ರೇರಣೆಯಿಂದ ಹತೋಟಿಯನ್ನಿಟ್ಟುಕೊಳ್ಳುವನು. ಹಾಗಾಗಿ ನಿಜವಾದ ಮನಸ್ಸಿನಿಂದ ವ್ರತ ಮಾಡುವವನಿಗೆ ಯಾವ ಹಸಿವು - ನೀರಡಿಕೆಗಳೂ ಬಾಧಿಸುವದಿಲ್ಲ, ವ್ರತ ಕಷ್ಟವೆನಿಸುವದಿಲ್ಲ. ಸಾಮಾನ್ಯ ವಸುಭೂತಿಯಂಥವರು

ಧರ್ಮಶ್ರದ್ಧೆಯಿಲ್ಲದೆ ಹಣದ ಆಸೆಗಾಗಿ ವ್ರತ ಮಾಡುವವರು. ಇಂಥವರಿಗೆ ವ್ರತಕ್ಕಿಂತ ಹೆಚ್ಚು ಊಟ, ನೀರಡಿಕೆಯ ಕಡೆಗೇ ಮನಸ್ಸು ಕೊಡವದರಿಂದ ದೈಹಿಕವಾಗಿಯೇ ಹೆಚ್ಚು ಜರ್ಜರಿತರಾಗುತ್ತಾರೆ. ಮನಸ್ಸು ವ್ರತದ ಕಡೆಗೆ ವಾಲದೆ ಚಂಚಲಗೊಳ್ಳುತ್ತದೆ. ಸಾಮಾನ್ಯನಲ್ಲಿಯೇ ಧರ್ಮಶ್ರದ್ಧೆ ಅಗಾಧವಾಗಿದ್ದರೆ ಇಂಥ ಯಾವ ಬಾಹ್ಯ ವಿಚಾರಗಳೂ ಅವನನ್ನು ಬಾಧಿಸುವದಿಲ್ಲ ಎಂಬುದನ್ನು ನಯಸೇನ ಈ ತೆರನಾದ ಪದ್ಯಗಳ ಮುಖೇನ ಹೇಳುತ್ತಾನೆ.

ಧರ್ಮ ಮತ್ತು ಹಂಚಿಕೊಂಡು ತಿನ್ನುವ ಗುಣ:

ಧರೆಯೊಳ್ ಕಳವುಂ ಕೊಲೆಯುಂ ಪ್ರಸಿದ್ಧ ಪಾಪಂಗಳಾಗಿರ್ದುಂ ಕವರ್ದುತಂದ ಧನಮುಮಂ ಬೇಂಟೆಯೊಳ್ ಕೊಂಡುತಂದಡಗುಮಂ ತಮ್ಮೊಳ್ ಧರ್ಮದಿಂಪಚ್ಚಿಕೊಡಿಮೆಂ ಬರದುವುಂ ಧರ್ಮಮಕ್ಕುಮೆ (ಪು–೨೮, ಗದ್ಯ)

ಲೋಕದಲ್ಲಿ ಪಾಪ ಕೃತ್ಯಗಳನ್ನು ಮಾಡುವ ಪಾಪಿಗಳು ಎನ್ನಿಸಿಕೊಂಡವರಲ್ಲೂ ಹಂಚಿಕೊಂಡು ತಿನ್ನುವ ಗುಣವಿದೆ. ಪ್ರಪಂಚದಲ್ಲಿ ಕಳುವು ಮತ್ತು ಕೊಲೆ ಎಂಬವು ಪ್ರಸಿದ್ಧ ಪಾಪಗಳಾಗಿವೆ. ಅಂಥವರೂ ಕೂಡ ತಾವು ಲೂಟಿ ಮಾಡಿ ತಂದ ಧನವನ್ನೂ, ಬೇಟೆಯಲ್ಲಿ ಕೊಂದು ತಂದ ಮಾಂಸವನ್ನೂ ಧರ್ಮದಿಂದ ಹಂಚಿಕೊಡಿ ಎಂದು ಪಾಲು ಮಾಡಿಸಿಕೊಳ್ಳುತ್ತಾರೆ. ನಯಸೇನ ಇದು ಧರ್ಮವೆ ? ಎನ್ನುವನು.

ಅದೂ ಧರ್ಮವೇ. ಕಳುವು, ಬೇಟೆಯೇ ಅವರಿಗೆ ಬದುಕು, ಧರ್ಮ ಎಲ್ಲವೂ. ಕದ್ದ ಮಾಲು, ಬೇಟೆಯಾಡಿದ ಮಾಂಸವನ್ನೂ ಸಹ ಹಂಚಿಕೊಂಡು ತಿನ್ನುವ ಗುಣ ಅವರಲ್ಲಿದ್ದುದು ಅಪ್ಪಟ ಮಾನವ ಧರ್ಮ. ಹೀಗೆ ಅನೇಕ ಸಾರಿ ಸಾಮಾನ್ಯನು ಲೋಕಧರ್ಮಗಳನ್ನು ಮೀರಿ ವಿಶ್ವಧರ್ಮ, ಮಾನವ ಧರ್ಮಗಳ ಅನುಯಾಯಿಯಾಗಿ ಬದುಕುತ್ತಿರುತ್ತಾನೆ. ಇದು ಸಾಮಾನ್ಯನ ಹೆಚ್ಚುಗಾರಿಕೆಯೂ ಅಲ್ಲ, ಕೀಳಾಗಿಯೂ ಕಾಣುವಂತಿಲ್ಲ, ಅದು ಅವನಿಗೆ ಸಹಜ ಧರ್ಮ.

ನೆರೆದೆಲ್ಲರ್ ಕಳ್ಗುಡಿಯು
ತ್ತಿರೆ ಬಡವರ್ಗಲ್ಲಿ ಧರ್ಮಗಳ್ಳಂದಜೆವರ್
ಧರೆಯೊಳಗದುವುಂ ಧರ್ಮಮೆ
ನಿರುತಂ ಪೇಟಿಣ್ಣ ನೀನೆ ಭಾವಿಸಿಮನದೊಳ್ (ಪು–೨೮, ಪ – ೧೩೯)

ನಯಸೇನ ಮೇಲಿನ ಪದ್ಯದಲ್ಲಿ ಪಾಪಿಗಳಲ್ಲೂ ಮಾನವೀಯತೆಯನ್ನು ಹೇಳಿದರೂ ಅವನಿಗದು ಧರ್ಮವೆನ್ನಿಸುವದಿಲ್ಲ. ಅಂತೆಯೇ ಈ ಪದ್ಯದಲ್ಲಿ ಎಲ್ಲರೂ ಸೇರಿ ಹೆಂಡ ಕುಡಿಯುವಾಗ ಬಡವರಿಗೆ ಧರ್ಮದ ಹೆಸರಿನಲ್ಲಿ 'ಧರ್ಮಗಳ್ಳ' ಎಂದು 'ಧರ್ಮದ ಹೆಂಡ'ವನ್ನು ಕುಡಿಸುವದೂ ಧರ್ಮವಲ್ಲ ಎಂದು ಹೇಳುವನು. ಎಂದಿನಿಂದಲೂ ನಮ್ಮಲ್ಲಿ ಧರ್ಮ ದೇವರುಗಳ ಹೆಸರಲ್ಲಿ ಹೆಂಡ ಸೇವನೆ ಸಹಜವಾಗೇ ಯಾವ ಅಡತಡೆಯೂ ಇಲ್ಲದೇ ಅತ್ಯಂತ ಶ್ರದ್ಧಾಭಕ್ತಿಗಳಿಂದ ನಡೆಯುತ್ತಿತ್ತು. ಹೆಂಡದ 'ಸೇವನೆ ಈಗಲೂ ನಡೆಯುತ್ತಿದೆ. ಅದೂ ಧರ್ಮವೇ ? ಎಂಬ ಪ್ರಶ್ನೆಯನ್ನು ನಮ್ಮ ಮುಂದಿಡುವನು.

ಜೈನ ಧರ್ಮ ಮತ್ತು ವ್ರತಗಳ ಮೇಲಿನ ನಂಬುಗೆ:

ಕಳ್ಳನಾದ ಧನ್ವಂತರಿ ವರಧರ್ಮ ಭಟಾರಕರಿಗೆ ವ್ರತವೊಂದನ್ನು ಅನುಗ್ರಹಿಸಲು ಕೇಳಿಕೊಳ್ಳುತ್ತಾನೆ. ಅದಕ್ಕೆ ಭಟಾರರು "ನಿಜ್ಜಲುಂ ತಜಿಂಟುದಲೆಯಂ ಕಂಡಲ್ಲದುಣವೇಡ" (ಪು–೫೯. ಗದ್ಯ) ಎನ್ನುವರು.

ಅದಕ್ಕೆ ಧನ್ವಂತರಿ ಒಪ್ಪಿಕೊಂಡು ಹೊರಡುವನು. ಮುನಿಗಳು ಹೇಳಿದ ವ್ರತವನ್ನು ಧನ್ವಂತರಿ ದಿನವೂ ಪಾಲಿಸುತ್ತಿರಲು ಒಂದು ದಿನ ಇನ್ನೇನು ಊಟಕ್ಕೆ ಕೂಡಬೇಕೆಂದಾಗ ವ್ರತದ ನೆನಪಾಗಿ ಅಚಾತುರ್ಯವಾಗಿತ್ತೆಂದು ಅಸಮಾಧಾನ ಉಂಟಾಗಿ ಬೋಳು ತಲೆಯವನನ್ನು ನೋಡಲೇಬೇಕು ಎಂದುಕೊಂಡಾಗ ನೆರೆಮನೆಯ ಬೋಳು ತಲೆಯ ಕುಂಬಾರ ನೆನಪಾಗುತ್ತಾನೆ; ಅವನನ್ನು ಹುಡುಕಿಕೊಂಡು ಹೊರಡುತ್ತಾನೆ. ಆ ಕುಂಬಾರ ಅವನ ಮನೆಯಲ್ಲಿ ಕಾಣದೆಯಿದ್ದಾಗ ಮಣ್ಣಿನ ಗುಳಿಯಲ್ಲಿದ್ದುದನ್ನು ದೂರದಿಂದಲೇ ನೋಡಿ, ಅವನ ಬೋಳ ತಲೆಯನ್ನು ಕಂಡು 'ಕಂಡೆ' ಎಂದು ಕೂಗಿ ಬಂದುಬಿಡುತ್ತಾನೆ.

ಕಾಕತಾಳೀಯವೆನ್ನುವಂತೆ ಕುಂಬಾರ ಆ ಮಣ್ಣಿನ ಗುಳಿಯಲ್ಲಿ ನಿಧಿ ನೋಡುತ್ತಿರುತ್ತಾನೆ. ಅದನ್ನು ನೋಡಿಯೇ ಧನ್ವಂತರಿ 'ಕಂಡೆ' ಎಂದಿರಬೇಕು ಎಂದು ಕುಂಬಾರ ಅಂದುಕೊಳ್ಳುತ್ತಾನೆ. ಹಾಗಾಗಿ ತಾನು ಕಂಡ ಹೊನ್ನನ್ನು ತಂದು ಧನ್ವಂತರಿಗೆ ಒಪ್ಪಿಸುತ್ತಾನೆ.

ಇದು ವ್ರತದ ಕಾರಣವಾಗಿ ಧನ್ವಂತರಿಗಾದ ಲಾಭವನ್ನು ಹೇಳುವ ಕಥೆ. ಮೊದಲನೆಯ ವ್ರತದಿಂದಾದ ಲಾಭವನ್ನು ಕಂಡು ಧನ್ವಂತರಿ ಮುನಿಗಳಿಗೆ ಮತ್ತೊಂದು ವೃತವನ್ನು ಕರುಣಿಸುವಂತೆ ಬೇಡಿಕೊಳ್ಳುತ್ತಾನೆ.

ಕರಮುಗಿದು ಬೇಟ್ಟುದುಂ ಮುನಿ
ವರನೆಂದಂ ಬೇಡ ಮಗನೆ ಪೆಸರಱಿಯದ ಭೂ
ಮಿರುಹಂಗಳ ಪಣ್ಗಳನಾ
ದರದಿಂ ಮೆಲೆಲ್ಲಿಯಾದೊಡಂ ಪಸಿವಿಂದಂ (ಪು-೬೦, ಪ - ೧೧೬)

- ಎಂದು ಮುನಿಗಳು ಕೊಟ್ಟ ವ್ರತವನ್ನು 'ಮಹಾಪ್ರಸಾದ'ವಾಗಿ ಸ್ವೀಕರಿಸಿ ಅದನ್ನು ಪಾಲಿಸುತ್ತಿರುತ್ತಾನೆ. ನಂತರ ಪರದೇಶಕ್ಕೆ ಹೋಗಿ ಕದ್ದ ಹಣ ಬಹಳ ಕೂಡಿದ ನಂತರ ಹಿಂತಿರುಗುವಾಗ ದಾರಿಯಲ್ಲಿರುವ ದೊಡ್ಡ ಅರಣ್ಯದಲ್ಲಿ ಬೀಡು ಬಿಡುತ್ತಾರೆ. ಆಹಾರವಿಲ್ಲದೆ ಸಂಕಟವಾಗಿ ತಮ್ಮ ಭೃತ್ಯರನ್ನು ಕರೆದು ತಮಗೆ ತಿನ್ನಲು ಅಡವಿಯಲ್ಲಿಯ ಹಣ್ಣು ಕಾಯಿಗಳನ್ನು ಹುಡುಕಿ ತರುವಂತೆ ಹೇಳುತ್ತಾರೆ. ಅಂತೆಯೇ ಅವರು

ಸಾರಂ ಕಂಪಿನೊಳವು ಕ
ರ್ಪುರಮುಮಂ ಗೆಲ್ವವೆನಿಸಿ ಕುಂಕುಮರುಚಿಯಿಂ
ದೋರಂತೊಪ್ಪುವವಂ ಕಾಂ
ಚೀರಮಹೀರುಹದ ಪಣ್ಗಳಂ ಕಂಡಾಗಳ್ (ಪು-೬೦, ಪ- ೧೧೭)

- ಇಂತಹ ಹಣ್ಣುಗಳನ್ನು ಖುಷಿಯಿಂದ ಕಿತ್ತು ತಂದು ಧನ್ವಂತರಿ ವಿಶ್ವಾನುಲೋಮರ ಮುಂದೆ ರಾಶಿ ಹಾಕಿದರು. ಆ ಹಣ್ಣಿನ ಹೆಸರು ತಿಳಿಯದ್ದರಿಂದ ಧನ್ವಂತರಿ ಆ ಹಣ್ಣನ್ನು ತಿನ್ನಲೊಪ್ಪಲಿಲ್ಲ. ಧನ್ವಂತರಿ ತಿನ್ನದಾದ್ದರಿಂದ ವಿಶ್ವಾನುಲೋಮನೂ ತಿನ್ನುವದಿಲ್ಲ. ಆದರೆ ಭೃತ್ಯರು ಹಸಿವು ತಾಳಲಾರದೆ ಹಣ್ಣುಗಳನ್ನು ಆಸೆಯಿಂದ ತಿಂದು ಸಾಯುತ್ತಾರೆ. ಅದನ್ನು ನೋಡಿದ ಧನ್ವಂತರಿ ಮತ್ತು ವಿಶ್ವಾನುಲೋಮರು ಭಟಾರರ ವ್ರತದ ಕಾರಣವಾಗಿ ತಾವು ಬದುಕಿದೆವು ಎಂದು ಸಂತೋಷದಿಂದ ತಮ್ಮ ತಮ್ಮ ಭೃತ್ಯರ ಗುಂಪಿನ ಹೊನ್ನನ್ನೂ ತಾವಿಬ್ಬರೂ ಹಂಚಿಕೊಂಡು ಪಟ್ಟಣಕ್ಕೆ ಬರುತ್ತಾರೆ.

ಇಂತಹ ಅನೇಕ ವ್ರತಗಳನ್ನು ಹೇಳುವ ಮೂಲಕ ಜನಸಾಮಾನ್ಯರಿಗೆ ವ್ರತದ ಕಾರಣವಾಗಿಯೇ ತಮಗೆ ಲಾಭವಾಯಿತು ಎಂದು ಹೇಳುವದರೊಂದಿಗೆ ಜನಸಾಮಾನ್ಯರಲ್ಲಿ ಜೈನ ಧರ್ಮಕ್ಕೆ ನಿಷ್ಠರಾಗಿ ಅದರ ಮೇಲೆ ಅಚಲವಾದ ನಂಬಿಕೆ ಇಡುವಂತೆ ಪ್ರೇರೇಪಿಸುತ್ತದೆ. ಅಂತೆಯೇ ಮುನಿ ಹೇಳಿದ ಪ್ರತಿಯೊಂದು ವ್ರತವೂ ಧನ್ವಂತರಿಗೆ ಲಾಭವನ್ನು ತರುತ್ತದೆ. ಸಾಮಾನ್ಯನು ಯಾವಾಗಲೂ ಲಾಭವನ್ನು ಬಯಸುವದರಿಂದ ಧರ್ಮ ಸಾಮಾನ್ಯನಿಗೆ ಬೇಕಾದುದನ್ನೇ ಹೇಳಿ ತನ್ನೆಡೆಗೆ ಆಕರ್ಷಿಸಿಕೊಳ್ಳುವ ತಂತ್ರಗಾರಿಕೆಯನ್ನೇ ಹೆಣೆಯುತ್ತಿರುತ್ತದೆ.

ಸವಣರು ವ್ರತ ಹಿಡಿದರೆ ಆ ವ್ರತ ಮುಗಿಯುವವರೆಗೂ ಅವರ ದಿನಚರಿಯನ್ನು ನಯಸೇನ ಹೀಗೆ ಹೇಳುತ್ತಾನೆ. "ನೋಂಪಿ ತೀರ್ವನ್ನಂ ಗ್ರಾಸದೊಳ್ ಕಳಪೆಯ ಕೂಟಂ ತಿಳಿದುಪ್ಪಮಂ ಪೆಱರೊರ್ವರ್ಬಡಿಸೆಕೈಯೊಳ್ ಮೋನದಿಂದುಂಡು

ಮಱುದಿನಮಾಪೊತ್ತಪ್ಪಿನ

ಮಱೆಯ ನೀರೂಟ ತಂಬುಲಂಗಳ ಮಾತು

ತೋಱದು ಮತಿಮಱದು ಮನೆಯೊಳ್

ಪೊಱಮಡದೋದುತ್ತು ಮಿರ್ಪುದಿರುಳುಂ ಪಗಲುಂ (ಪು-೨೦, ಪ-೧೦೮)

ಮತ್ತಂ ನೋಂಪಿಯ ಪ್ರಾರಂಭದೊಳಂ ನೆಱವಿಯೊಳು ಮಂದರದಂತೆ ಧೈರ್ಯಂ ಬೆರಸು ಲಾಭಂಬೆತ್ತ ಪರದನಂತುತ್ಸಾಹಂಬೆರಸು ಪಂದೆಯಂತು ನೋವಿಂಗಳ್ಕದೆ ತಣಿಯುಂಡನಂತೆ ಸಾಲ್ದುಮೆನ್ನದೆ ದೃಢಚಿತ್ತದಿಂದಿರ್ದು ತಲೆಯ ರೋಮಗಳೆಲ್ಲಮಂ ಪಱಯಿಸಿ ರಾಗದಿ ನೇಮ ಗೀವುದಿತ್ತು ಮನ ದೊಳುಮ್ಮಳಿಸದೊಂದೆಡೆಯೊಳ್ ಮುನ್ನಿನ ವಿನೋದಂಗಳಂ ಮಱದಪ್ಪೊಡಂ ನೆನೆಯದೆ ಸ್ವಾಧ್ಯಾಯ ಪರನಾಗಿ ಬೀಡಿನೊಳಾದಿನಿತಕ್ಕಂ ವಿಸ್ಮಯಕ್ಕಂ ವಸ್ತ್ರಕ್ಕಮಪೇಕ್ಷೆಯಿಂದೆಳಸದಿಂತೆರಡು ತಿಂಗಳ್ವರಂ ಎಮ್ಮ ಪೇಟ್ಗೋಜೆಯಿಂ ಕ್ರಮಂದಪ್ಪದೆ ನೋಂಪುದೆಂದು ಪೇಟ್ಟುದಂ"(ಪು-೨೦, ಗದ್ಯ).

ವ್ರತ ಹಿಡಿದ ಮೇಲೆ ಅದು ಮುಗಿಯುವವರೆಗೂ ಸವಣರು ಎಷ್ಟು ಕಟ್ಟುನಿಟ್ಟಾದ ಕ್ರಮಗಳನ್ನು ಪಾಲಿಸುತ್ತಿದ್ದರೆಂಬುದನ್ನು ಹೇಳುವದರ ಜೊತೆಗೆ ಅವರ ವ್ರತ ನಿಷ್ಠೆಯನ್ನೂ, ಕಠೋರತೆಯನ್ನೂ ಹೇಳುವದು ನಯಸನೇನನ ಉದ್ದೇಶ. ಸಾಮಾನ್ಯ ಸವಣರು ಐಹಿಕ ಬದುಕಿಂದ ದೂರವಾಗಿ ಅಸಮಾನ್ಯತ್ವ ಸಾಧಿಸುತ್ತಾರೆ.

ದಯಾಮಿತ್ರ ಸೆಟ್ಟಿಯು ಜಿನೇಶ್ವರನ ಸಾಕ್ಷಿಯಾಗಿ ಮಹರ್ಷಿಗಳಿಂದ ವ್ರತವನ್ನು ಮಾಡಿಸಿ ಅವರು ಬೇಡಿದುದನ್ನು ಕೊಡುವ ರೂಢಿ ಇಟ್ಟುಕೊಂಡಿದ್ದನು. ಜೈನ ಋಷಿಗಳು ಯಾರೂ ಇಲ್ಲದ್ದರಿಂದ ಬ್ರಾಹ್ಮಣ ವಸುಭೂತಿಯೂ ವ್ರತಾಚರಣೆ ಮಾಡಬಹುದು. ವ್ರತಾಚರಣೆಗಳನ್ನು ಅದೇ ಕಟ್ಟಳೆಗಳಿಂದ ಮಾಡಿದರೆ ಕೇಳಿದಷ್ಟು ಹಣ ಕೊಡುವೆನು ಎನ್ನುವನು. ಸೆಟ್ಟಿಯ ಮಾತಿಗೆ ವಸುಭೂತಿ ಮನಸ್ಸಿನಲ್ಲಿ ಬಹಳ ಸಂತೋಷಪಟ್ಟು ವ್ರತದ ಕಷ್ಟವನ್ನರಿಯದೇ ಒಪ್ಪಿಕೊಳ್ಳುವನು.

ಆರಯ್ದು ನೋಡಿ ನಗುವವ

ರಾರೆನ್ನಂ ದೂರದೇಶ ಮಾಂ ನೋಂಪೆನಿದಂ

ಸೈರಣೆಯಿಂ ಚೆಂಬೊಂಗಳ

ನೋರಂತಿರೆ ಬೇಡಿಕೊಳ್ವೆನೆನ್ನಾರ್ಪನಿತಂ (ಪು-೨೦, ಪ – ೧೧೧)

ವ್ರತದ ಕಷ್ಟದ ಅರಿವಿಲ್ಲದೆ ತನ್ನನ್ನು ನೋಡಿ ನಗುವವರು ಯಾರಿದ್ದಾರೆ. ಈ ದೂರದೇಶದಲ್ಲಿ ! ಶಕ್ತಿಯಿದ್ದಷ್ಟು ಸಹನೆಯಿಂದ ವ್ರತಮಾಡಿ ಹೊನ್ನಿನ ನಾಣ್ಯಗಳನ್ನು ಕೇಳಿ ಪಡೆಯುತ್ತೇನೆ ಎಂದು ಕೊಳ್ಳುವನು. ಯಾರಿಗೆ ಆಗಲಿ ಪರಿಚಿತ ಜನರೆದುರು ಹಾಸ್ಯಾಸ್ಪದವಾಗುವದು ಇಷ್ಟವಾಗುವದಿಲ್ಲ. ಅಪರಿಚಿತರೆದುರು ಏನೇ ಅಸಹ್ಯವಾದರೂ ಅಷ್ಟು ಮನ ನೋಯುವದಿಲ್ಲ. ಇದು ಮನುಷ್ಯ ಸಹಜ ಗುಣ. ಅಪರಿಚಿತರೆದುರು ಏನು ಅಸಹ್ಯವಾದರೂ ನಡೆಯುತ್ತದೆ ಎಂಬ ಹುಂಬ ಧೈರ್ಯದ ಮೇಲೆ ವಸುಭೂತಿ ಅಷ್ಟು ಕಷ್ಟಕರವಾದ ವ್ರತ ಮಾಡಿ ಬೇಡಿ ನನಗೆ ಬೇಕಾದಷ್ಟು ಚಿನ್ನದ ನಾಣ್ಯ ಪಡೆಯುತ್ತೇನೆ ಎಂಬ ಸಂತೋಷ ಅವನಲ್ಲಿ ಮನೆ ಮಾಡುತ್ತದೆ. ಸಾಮಾನ್ಯ ಹಣದ ಆಸೆಗೋಸ್ಕರ ಎಂಥ ಅಪಾಯಕ್ಕೂ ತನ್ನನ್ನು ತಾನು ಒಡ್ಡಿಕೊಳ್ಳಲು ತಯಾರಾಗುತ್ತಾನೆ.

ದಾನ ಧರ್ಮ:

ಧನ್ವಂತರಿ ಒಬ್ಬ ಮಹಾ ಕಳ್ಳ. ಮುನಿಗಳು ಹೇಳಿದ ವ್ರತಗಳನ್ನ ಪಾಲಿಸಿದ್ದರಿಂದ ಅವನಿಗೆ ದಿನದಿಂದ ದಿನಕ್ಕೆ ಒಳ್ಳೆಯ ಲಾಭ ಬರತೊಡಗುತ್ತದೆ. ಅದರಿಂದ ಧನ್ವಂತರಿಗೆ ಜೈನ ಧರ್ಮದಲ್ಲಿ ನಂಬಿಕೆ ಮೂಡಲಾರಂಭಿಸುತ್ತದೆ. ಮುನಿಗಳು ಹೇಳುವ ವ್ರತದಿಂದಾಗಿಯೇ ತನ್ನಿಂದಾಗುವ ಕೊಲೆಯಂತಹ ಪ್ರಮಾದ ತಪ್ಪಿದ್ದಕ್ಕೆ ಮನಸ್ಸಿನಲ್ಲಿ ತನ್ನ ಬಗ್ಗೆ ತನಗೇ ಅರಿವುಂಟಾಗಿ ತಪಸ್ಸಿಗೆ ನಿಲ್ಲಲು ನಿರ್ಧರಿಸುತ್ತಾನೆ.

ತನ್ನಲ್ಲಿರುವ ಹಣದಲ್ಲಿ ಹೆಂಡತಿಗೂ ತಾಯಿಗೂ ತಕ್ಕಷ್ಟು ಕೊಡುತ್ತಾನೆ. ಉಳಿದದ್ದನ್ನು ಬಡ ಜೈನ ಗೃಹಸ್ಥರಿಗೂ ಜಿನಪೂಜೆಗೂ ಕೊಟ್ಟು ವರಧರ್ಮ ಭಟಾರಕರಲ್ಲಿಗೆ ಬಂದು ದೀಕ್ಷೆ ನೀಡಬೇಕೆಂದು ಕೇಳಿಕೊಳ್ಳುತ್ತಾನೆ.

ಲೌಕಿಕದಲ್ಲಿ ಆಸಕ್ತಿಯುಳ್ಳ ಕಳ್ಳ ಎಲ್ಲರಲ್ಲೂ ಕದ್ದು ಹಣ ಕ್ರೋಢೀಕರಿಸುವದನ್ನೇ ಬದುಕಿನ ಗುರಿಯಾಗಿಸಿಕೊಂಡಿದ್ದ. ಲೌಕಿಕ ಬದುಕಿನಲ್ಲಿ ಆಸಕ್ತಿ ಕಳೆದುಕೊಂಡ ಅದೇ ಕಳ್ಳ ಅಷ್ಟೆಲ್ಲ ತಾನು ಕಳ್ಳತನದಿಂದ ಸಂಪಾದಿಸಿದ ಹಣವನ್ನು ದಾನ ಧರ್ಮದಲ್ಲಿ ವಿನಿಯೋಗಿಸಿ ಕೃತಾರ್ಥನಾಗುತ್ತಾನೆ. ಗಳಿಸಿದ ಹಣದಲ್ಲಿ ತಕ್ಕಷ್ಟು ಹಣವನ್ನು ತಾಯಿಗೂ ಹೆಂಡತಿಗೂ ಕೊಡುವದರೊಂದಿಗೆ ಅವರ ಮುಂದಿನ ಬದುಕನ್ನು ಆರ್ಥಿಕವಾಗಿ ಸ್ಥಿರಗೊಳಿಸುತ್ತಾನೆ. ಗೃಹಸ್ಥನಾಗಿ ಅದು ಅವನ ಕರ್ತವ್ಯ ಕೂಡ. ಉಳಿದದ್ದನ್ನು ಬಡ ಜೈನ ಗೃಹಸ್ಥರಿಗೂ, ಜಿನಪೂಜೆಗೂ ಹಂಚಿ ತನ್ನ ಬದುಕನ್ನು ಸಾರ್ಥಕಗೊಳಿಸಿಕೊಳ್ಳಬಯಸುತ್ತಾನೆ. ಲೌಕಿಕದಲ್ಲಿ ಆಸಕ್ತಿಯುಳ್ಳ ಮನುಷ್ಯನಿಗೆ ಹಣ ಅಮೂಲ್ಯವಾಗಿ ಕಂಡರೆ, ಅದೇ ಮನುಷ್ಯ ಲೌಕಿಕದಲ್ಲಿ ನಿರಾಸಕ್ತನಾದಾಗ ಹಣ ತನ್ನ ಮೌಲ್ಯವನ್ನು ಕಳೆದುಕೊಂಡು ಜಂಜಡವೆನಿಸತೊಡಗುತ್ತದೆ. ಅದಕ್ಕೇ ದಾನ ಧರ್ಮದಲ್ಲಿ ಹಣವನ್ನು ವಿನಿಯೋಗಿಸುತ್ತಾನೆ.

ಧರ್ಮಕಟ್ಟಳೆ ಮತ್ತು ಬಾಲ್ಯ:

ಅನಂತಮತಿಯ ಕತೆಯಲ್ಲಿ ಅನಂತಮತಿ ಚಿಕ್ಕ ಹುಡುಗಿ. ತನ್ನ ಗೆಳತಿಯರೊಡನೆ ಸಂತೋಷದಿಂದ ಮದುವೆಯ ಆಟ ಆಡುವ ಆಸೆಯಿಂದ ಗೊಂಬೆಗೆ ನಾನಾ ವಸ್ತುಗಳನ್ನು ಹಾಕಿ ಮದುಮಗನಂತೆ ಶೃಂಗಾರ ಮಾಡಿ ಆ ಗೊಂಬೆಯನ್ನೇ ಅವಳ ಗೆಳತಿಯರು ಅನಂತಮತಿಯ

ಪಕ್ಕದಲ್ಲಿರಿಸಿ ಮದುವೆಯ ಆಟದಲ್ಲಿ ನಲಿದಾಡುತ್ತಿದ್ದರೆ ಅದೇ ಸಮಯಕ್ಕೆ ಬಂದ ಅನಂತಮತಿಯ ತಂದೆ ಆ ಮದುವೆಯ ಆಟ ನೋಡಿ :

ಸ್ನೇಹದಿಂ ಗುಡಿಗಟ್ಟಿದೆ ಪೌರರ್ಮಂಗಳ ತೂರ್ಯರವಂಗಳು
ತ್ಸಾಹದಿಂದಮರ್ದೊಪ್ಪದೆ ನೆಂಟರ್ ಬಾರದೆ ಪಾವನರತ್ನ ಸಂ
ದೋಹದಿಂದೆಸೆವಂತು ವಿವಾಹಮಂ ಕರಮೊಪ್ಪಿರೆ ಮಾಡದಾಂ
ಮೋಹದಿಂ ನೆಱೆನೋಡದೆ ನೀನಾತ್ಮೇಶನನಞ್ಜೊಱೆಗೊಳರ್ತಿಯಿಂ(ಪು-೭,ಪ-೭೧)

– ಹೀಗೆ ಕದ್ದು ಮುಚ್ಚಿ ಮದುವೆಯಾಗುವದು ಉಚಿತವಲ್ಲ ಎಂದು ತಮಾಷೆ ಮಾಡುತ್ತ ವರದತ್ತ ಭಟಾರಕರ ಮುಂದೆ ಬಂಧುಗಳಿಗೆ ತಿಳಿಯದೆ, ನನಗೆ ತಿಳಿಯದೆ, ಮೊದಲು ಜಿನಪೂಜೆ ಮಾಡದೆ ತಾನು ತನ್ನ ಜೊತೆ ಆಡುವ ಮಕ್ಕಳೂ ಸೇರಿ ಮದುವೆ ಮಾಡಿಕೊಂಡಳು. ಅವಳಿಗೆ ಬ್ರಹ್ಮಚರ್ಯ ವ್ರತವನ್ನು ಕೊಡಿ ಎಂದು ಅನಂತಮತಿಯ ತಂದೆ ವರದತ್ತ ಭಟಾರಕರ ಮುಂದೆ ಹೇಳಲಾಗಿ ಭಟಾರರು ನಗುತ್ತ "ನಿನಗಿಂದು ಮೊದಲಾಗಿ ಬ್ರಹ್ಮಚರ್ಯ ವ್ರತವಂಕೊಟ್ಟೆವೆಂಬುದುಂ" ಎಂದ ತಕ್ಷಣ ಅನಂತಮತಿ 'ಮಹಾಪ್ರಸಾದ' ಎಂದು ನುಡಿದು ವ್ರತವನ್ನು ಕಠಿಣವಾಗಿಯೇ ಹಿಡಿಯುವಳು. ಚಿಕ್ಕವಯಸ್ಸಿನ ಹುಡುಗಿಯೊಂದಕ್ಕೆ ಮನಸೋ ಇಚ್ಛೆ ಆಟವಾಡುವ ಸ್ವಾತಂತ್ರ್ಯವನ್ನೂ ಸಹ ಕಸಿದುಕೊಳ್ಳುವ ಸಮಾಜ-ಧರ್ಮದ ಕಟುತ್ವದ ರೀತಿಯನ್ನು ಇದು ಧ್ವನಿಸುತ್ತದೆ. ಮಕ್ಕಳ ಆಟವನ್ನು ಸಹ ಆಟವಾಗಿ ಪರಿಗಣಿಸುವ ಮನಸ್ಥಿತಿ ನಮ್ಮ ಸಮಾಜಕ್ಕಿಲ್ಲ. ಅದರಲ್ಲೂ ಹುಡುಗಿಯರ ಕುರಿತಾಗಿನ ಕಟ್ಟು ನಿಟ್ಟಳೆಗಳು, ಸಮಾಜದ ನಿರೀಕ್ಷೆಗಳು ತುಂಬಾ ಕಠಿಣತರವಾಗಿಯೇ ಇರುತ್ತವೆ. ಆಟವಾಡುವದು ವಯೋಸಹಜವಾದ ಸ್ವಾತಂತ್ರ್ಯವಾಗಬೇಕು. ಅದು ಪ್ರತಿ ಮಗುವಿನ ದೈಹಿಕ ಮಾನಸಿಕ ಆರೋಗ್ಯಕರ ಬೆಳವಣಿಗೆಗೆ ಸಹಕಾರಿಯೂ ಹೌದು, ಅವಶ್ಯಕತೆಯೂ ಹೌದು.

ಹೀಗೆ ಆಕಸ್ಮಿಕವಾಗಿ ಜಿನದೀಕ್ಷೆ ಪಡೆದವಳು ಅನಂತಮತಿ. ನಂತರದಲ್ಲಿ ಇವಳ ಸೌಂದರ್ಯಕ್ಕೆ ಮನಸೋತ ವಿದ್ಯಾಧರನೊಬ್ಬ ಅವಳನ್ನು ಅಪಹರಿಸುತ್ತಾನೆ. ಆದರೆ ಹೆಂಡತಿಗೆ ಹೆದರಿ ಇವಳನ್ನು ಕಾಡಿನಲ್ಲಿಯೇ ಬಿಡುತ್ತಾನೆ. ತರುವಾಯ ಬೇಡನೊಬ್ಬನು ಇವಳನ್ನು ಒಲಿಸಿಕೊಳ್ಳುವಲ್ಲಿ ಸೋಲುವನು. ಅವಳ ಒಳ್ಳೆಯ ಗುಣಗಳನ್ನು ಕಂಡು ವೈಶ್ಯನೊಬ್ಬ ಮನೆಗೆ ಕರೆದೊಯ್ದು ತಾನು ತಿರುಗಿ ಬರುವವರೆಗೂ ಅವಳನ್ನು ಮಗಳಂತೆ ಕಾಣಬೇಕೆಂದು ಹೆಂಡತಿಗೆ ತಾಕೀತು ಮಾಡಿ ಹೋಗುವನು. ಆದರೆ ವೈಶ್ಯನ ಹೆಂಡತಿ ಅನುಮಾನ ಪಟ್ಟು ಅವಳನ್ನು ಕುಂಟಣಗಿತ್ತಿಗೆ ಮಾರುತ್ತಾಳೆ. ಆ ಕುಂಟಣಗಿತ್ತಿ ಅನಂತಮತಿಯನ್ನು ಸಿಂಹಧರನೆಂಬ ರಾಜನಿಗೆ ಮಾರುತ್ತಾಳೆ. ರಾಜನ ಯಾವ ಬೆದರಿಕೆ ಒತ್ತಾಯಕ್ಕೂ ಅನಂತಮತಿ ಮಣಿಯದಾದಾಗ ರಾಜನೇ ತಪ್ಪೊಪ್ಪಿಕೊಂಡು ಅವಳ ದಾರಿಗೆ ಅವಳನ್ನು ಬಿಟ್ಟು ಬಿಡುತ್ತಾನೆ. ಅಷ್ಟರಲ್ಲಿ ಅವಳ ಗುರುತು ಹಿಡಿದು ಬಂದ ತಂದೆ-ತಾಯಿಯರು ಮಗಳಿಗೆ ಮದುವೆಯಾಗೆಂದು ಒತ್ತಾಯಿಸಿದಾಗ ಅನಂತಮತಿ ಖಡಾಖಂಡಿತವಾಗಿ ನಿರಾಕರಿಸುತ್ತಾಳೆ. ಜಿನದೀಕ್ಷೆಯನ್ನು ಪಡೆದು ತಪಸ್ಸು ಮಾಡಿ ಸಮಾಧಿ ವಿಧಿಯಂತೆ ದೇಹತ್ಯಾಗ ಮಾಡಿ ಸಹಸ್ರಾರ ಕಲ್ಪದಲ್ಲಿ ಸುಖಾಂತನೆಂಬ ದೇವನಾಗಿ ಹುಟ್ಟಿದಳು.

ಅನಂತಮತಿಯ ಕತೆ ಸಾಮಾನ್ಯ ಮನುಷ್ಯನ ಅನೇಕ ಮುಖಗಳನ್ನು ನಮ್ಮೆದುರು ತೆರೆದಿಡುತ್ತದೆ. ಈ ಕತೆಯಲ್ಲಿ ಬರುವ ಬೇಡ, ಕುಂಟಿಣಿ, ವೈಶ್ಯ, ವೈಶ್ಯನ ಹೆಂಡತಿ, ಅನಂತಮತಿಯ ತಂದೆ-ತಾಯಿ ಎಲ್ಲರೂ ಸಾಮಾನ್ಯರೇ. ಇವರೆಲ್ಲರೂ ಸೇರಿ ಅನಂತಮತಿ ಎಂಬ ಸಾಮಾನ್ಯ ಹುಡುಗಿ ಜಿನದೀಕ್ಷೆ ಪಡೆದು

ತಪಸ್ಸನ್ನಾಚರಿಸುವಂತೆ ಅಧ್ಯಾತ್ಮಿಕ ವ್ಯಕ್ತಿಯಾಗಿ ಬದಲಾಗಲು ಕಾರಣೀಕರ್ತರಾದರು. ಮೇಲಿನವರೆಲ್ಲರ ಮನಸ್ಥಿತಿ ಒಬ್ಬರಿಗಿಂತ ಒಬ್ಬರದು ಭಿನ್ನವಾಗಿಯೇ ಇದೆ. ಬೇಡ, ಕುಂಟಣಿ ಅನಂತಮತಿಯ ಪರಿಸ್ಥಿತಿಯ ಲಾಭ ಪಡೆದರೆ, ವೈಶ್ಯ ಅನಂತಮತಿಯನ್ನು ಕಾಪಾಡಬಯಸುತ್ತಾನೆ. ವೈಶ್ಯನ ಹೆಂಡತಿ ತನ್ನ ಗಂಡ, ಅನಂತಮತಿ ಇಬ್ಬರ ಬಗೆಗೂ ಅನುಮಾನ ಪಡುತ್ತಾಳೆ. ಅನಂತಮತಿಯ ತಂದೆ-ತಾಯಿಯರು ಮಗಳಿಗೆ ಕೊಡಬೇಕಾದ ಸ್ವಾಭಾವಿಕವಾದ ಸ್ವಚ್ಛವಾದ ಆಟದ ಹಕ್ಕನ್ನೂ ಸರಳವಾಗಿ ನೋಡದಂಥವರು. ಇವೆಲ್ಲವೂ ಸಾಮಾನ್ಯ ಮನುಷ್ಯನ ಅತ್ಯಂತ ಸಹಜ ಭಾವಗಳು. ಕತೆಗಾರ ಕತೆಯ ಕೊನೆಯಲ್ಲಿ ಹೇಳುವಂತೆ ಅನಂತಮತಿ ದೀಕ್ಷೆ ಪಡೆದು ಸತ್ತು ಹುಟ್ಟುವಾಗ ಸುಖಾಂತನೆಂಬ ಗಂಡಾಗಿ ಹುಟ್ಟುವಳು. ಏಕೆಂದರೆ ಹೆಣ್ಣು ಮೋಕ್ಷಕ್ಕೆ ಅರ್ಹಳಲ್ಲ ಎಂಬ ನಂಬಿಕೆಯ ಕಾರಣಕ್ಕಾಗಿ ಮೋಕ್ಷ ಸಾಧನೆಗಾಗಿ ಗಂಡು ಜನ್ಮ ತಾಳಲೇ ಬೇಕಾದ ಅನಿವಾರ್ಯತೆಯನ್ನು ಧರ್ಮ ಹೇಳುತ್ತದೆ. ಅನಂತಮತಿ ಎಲ್ಲವನ್ನೂ ಸಾಧಿಸಿದ್ದು ಹೆಣ್ಣಾಗಿ. ಮೋಕ್ಷ ಬೇಕೆಂದಾದರೆ ಗಂಡಾಗಲೇಬೇಕಾದ ಅನಿವಾರ್ಯತೆ ಮೌಢ್ಯಯುತವಾದ ಸಮಾಜ ಧರ್ಮದ ಲಿಂಗ ತಾರತಮ್ಯ ನೀತಿಯ ಪ್ರತೀಕವಾಗಿ ನಿಲ್ಲುತ್ತದೆ.

ಸಂಸಾರ ತ್ಯಾಗ ಮತ್ತು ಸಾಮಾನ್ಯ:

'ವಾರಿಷೇಣ – ಪುಷ್ಪದಾಡ' ಎಂಬ ಕತೆಯಲ್ಲಿ ವಾರಿಷೇಣ ಎಂಬುವನು ರಾಜಕುಮಾರ. ಪುಷ್ಪದಾಡ ಸಾಮಾನ್ಯ ಬ್ರಾಹ್ಮಣ ಯುವಕ. ವಾರಿಷೇಣ ರಾಜಕುಮಾರ ಮುಡಿಯ ಪುತ್ರರೆಂಬ ಮುನಿಗಳ ಪ್ರಭಾವದಿಂದ ತಮ್ಮ ರಾಜ್ಯಭೋಗ, ಐನೂರು ಜನ ಹೆಂಡಿರು ತಂದೆ-ತಾಯಿಯರನ್ನು ಬಿಟ್ಟು ಜಿನದೀಕ್ಷೆ ಪಡೆದು ತಪಸ್ಸು ಮಾಡಿದನು.

ಒಂದು ದಿನ ವಾರಿಷೇಣ ಮುನಿಗೆ ತನ್ನ ಬಾಲ್ಯ ಸ್ನೇಹಿತನಾದ ಪುಷ್ಪದಾಡನ ನೆನಪಾಯಿತು. ಅಷ್ಟೊತ್ತಿಗೆ ಪುಷ್ಪದಾಡನಿಗೆ ಸುದಂತಿ ಎಂಬ ಕನ್ಯೆಯೊಡನೆ ವಿವಾಹ ಏರ್ಪಾಟಾಗಿರುತ್ತದೆ. ಆದರೆ ವಾರಿಷೇಣ ಮುನಿಗಳು ಪುಷ್ಪದಾಡನನ್ನು ಸಂಸಾರದಿಂದ ಬಿಡಿಸಿ ಮೋಕ್ಷಕ್ಕೆ ಸೇರಿಸಬೇಕೆಂಬ ಯೋಚನೆಯಿಂದ ಪುಷ್ಪದಾಡನ ಮನೆಗೆ ಬಂದು ಹೊಸ ಮದುವಣಗಿತ್ತಿಯ ಪಕ್ಕದಲ್ಲಿದ್ದಾತನನ್ನು ಕೈಹಿಡಿದು ಕರೆದುಕೊಂಡು ಬಂದು ತಮ್ಮ ಗುರುಗಳಿಗೆ ನಮಸ್ಕಾರ ಮಾಡಿಸಿ "ನಿಮ್ಮಡಿ ಚಿತ್ತೈಸಿ ಕೇಳಿಮೀತಂ ಸಂಸಾರಭೀರುವಾಗಿ ಜಿನದೀಕ್ಷೆಯಂ ಬಯಸಿ ಬಂದನೀತಂಗೆ ದೀಕ್ಷೆಯಂ ಪ್ರಸಾದಂಗೆಯ್ಯಿಂ"(ಪು–೨೩೮, ಗದ್ಯ) ಎಂದು ಬೇಡಿಕೊಳ್ಳುತ್ತಾನೆ. ಆ ಮುನಿವರನು ಮುನಿಸಿಕೊಂಡರೆ ಕೆಟ್ಟದ್ದಾಗುವದೆಂದು ಮನಸ್ಸಿಲ್ಲದ ಮನಸ್ಸಿನಿಂದ ಧರ್ಮಾಂತರ ಹೊಂದಿ ದೀಕ್ಷೆ ಪಡೆದನು. ಮನದಲ್ಲಿ ಮದುವಣಗಿತ್ತಿಯ ಮೇಲೆ ಮನಸಿಟ್ಟು ಕಾಡನ್ನು ಬಿಟ್ಟು ಬಂದ ಆನೆಯಂತೆ ದುಃಖಿಸುತ್ತಿದ್ದನು. ಈ ಕತೆಯ ವಿವರಣೆಗಳನ್ನು ನೋಡಿದಾಗ ಆ ಕಾಲದ ಧಾರ್ಮಿಕ ಪರಿಸರ ಎಷ್ಟು ಕಠಿಣವಾಗಿತ್ತು ಎಂಬುದನ್ನು ಕತೆ ತಿಳಿಸುತ್ತದೆ. ಒತ್ತಾಯ ಪೂರ್ವಕವಾಗಿ ದುರ್ಬಲರನ್ನು ಧರ್ಮಾಂತರಗೊಳಿಸುವ ಪ್ರಕ್ರಿಯೆ ಅಂದು ನಡೆಯುತ್ತಿದ್ದುದನ್ನು ಕೃತಿ ಸಾಕ್ಷೀಕರಿಸುತ್ತದೆ. ಬ್ರಾಹ್ಮಣ ಹುಡುಗನೊಬ್ಬನಿಗೆ ಒತ್ತಾಯಪೂರ್ವಕವಾಗಿ ದೀಕ್ಷೆ ಕೊಡಿಸಿದರು. ದೀಕ್ಷೆ-ಮದುವೆ ಎನ್ನುವದು ವ್ಯಕ್ತಿಯೊಬ್ಬನ ವೈಯಕ್ತಿಕ ಸ್ವಾತಂತ್ರ್ಯದ ನಿರ್ಧಾರವಾಗಬೇಕು. ಆದರೆ ಈ ಕೃತಿಯಲ್ಲಿ ಪುಷ್ಪದಾಡನಿಗೆ ಮದುವೆಯ ಬಗ್ಗೆ ಆಸಕ್ತಿ ಇರುತ್ತದೆ. ವಾರಿಷೇಣನ ಬಲವಂತದ ಧಾರ್ಮಿಕ ಹೇರುವಿಕೆ ಪುಷ್ಪದಾಡನಿಗೆ ಹೆಂಡತಿಯ ನೆನಪಿನಲ್ಲಿ ಕೊರಗುವಂತೆ ಮಾಡುತ್ತದೆ. ಧರ್ಮ ಯಾವುದೇ ಇರಲಿ ಒತ್ತಾಯಪೂರ್ವಕವಾಗಿ ಸನ್ಯಾಸತ್ವವನ್ನು ಹೇರಲಾಗುವದಿಲ್ಲ. ಬದುಕಿನ ಸಹಜ ಭಾವಗಳಾದ ಅರಿಷಡ್ವರ್ಗಗಳನ್ನು ತ್ಯಜಿಸುವದು ಸಾಮಾನ್ಯ ಮನುಷ್ಯನಿಗೆ ಅಷ್ಟು ಸರಳ ಸಾಧ್ಯವಾದುದಲ್ಲ. ಧರ್ಮದ ಕಟ್ಟುನಿಟ್ಟಿಗೋ, ಸಮಾಜದ ರೀತಿ – ನೀತಿಗೋ ಹೆದರಿ ಸನ್ಯಾಸ ತೆಗೆದುಕೊಂಡ ನಂತರ

ಸಂಸಾರದ ಆಸಕ್ತಿಯನ್ನು ಬಹಿರಂಗವಾಗಿ ವ್ಯಕ್ತಪಡಿಸಲಾಗುವದಿಲ್ಲ. ಹೀಗೆ ಧರ್ಮದ ಹೆಸರಿನಲ್ಲಿ ಒತ್ತಾಯಪೂರ್ವಕವಾಗಿ ಸನ್ಯಾಸ ಸ್ವೀಕರಿಸಿ ಸಮಾಜಕ್ಕೆ ಹೆದರಿ ತಮ್ಮ ಆಸೆಗಳನ್ನು ಹತ್ತಿಕ್ಕಿಕೊಳ್ಳುವ ಪುಷ್ಪದಾಡನಂತವರನ್ನು ಧರ್ಮಾಮೃತದ ಕಾಲಕ್ಕಷ್ಟೇ ಅಲ್ಲ ಎಲ್ಲ ಕಾಲಕ್ಕೂ ಎಲ್ಲ ಧರ್ಮದಲ್ಲೂ ನೋಡಬಹುದಾಗಿದೆ.

ಪುಷ್ಪದಾಡನಿಗೆ ಸಂಸಾರ ಮೋಹ ಬಿಡಿಸಲು ವಾರಿಷೇಣ ಜಿನದೀಕ್ಷೆ ಕೊಡಿಸಿ ತನ್ನ ಐನೂರು ಹೆಂಡಂದಿರ ಸೌಂದರ್ಯ ತೋರಿಸಿ ಅವರ ಮುಂದೆ ಪುಷ್ಪದಾಡನ ಹೆಂಡತಿ ಎಷ್ಟು ಕುರೂಪಿ ಎಂಬುದನ್ನು ವರ್ಣಿಸುತ್ತಾನೆ. ಜಿನದೀಕ್ಷೆ ಪಡೆದ ವಾರಿಷೇಣ ಇನ್ನೂವರೆಗೂ ಬಾಹ್ಯ ಸೌಂದರ್ಯಕ್ಕೆ ಮಹತ್ವ ಕೊಡುತ್ತಿರುವುದು ಮತ್ತು ಅಂತಹ ಸೌಂದರ್ಯವನ್ನು ಇನ್ನೂ ನೆನಪಿಸಿಕೊಳ್ಳುತ್ತಿರುವದು ವಿಪರ್ಯಾಸದ ಸಂಗತಿ. ಜಿನದೀಕ್ಷೆ ಪಡೆದ ಮೇಲೂ ಪುಷ್ಪದಾಡನಿಗೆ ಹೆಂಡತಿಯನ್ನು ಮರೆಯಲಾಗುವದಿಲ್ಲ. ಗುರುವಿಲ್ಲದಾಗ ಕದ್ದು ಅವಳ ಹತ್ತಿರವಾಗುತ್ತಾನೆ. ಜೀವಿಗಳ ನಡುವಿನ ಬೆಸುಗೆಗೆ ಮನುಷ್ಯ ನಿರ್ಮಿತ ಯಾವ ಬಂಧನಗಳೂ ಅಡ್ಡಿಯಾಗುವುದಿಲ್ಲ ಎಂಬುದು ಇಂಥ ಸಂಬಂಧಗಳಿಂದ ಅರ್ಥವಾಗುತ್ತದೆ. ಇದು ತಪ್ಪೆನಿಸುವದೂ ಇಲ್ಲ.

ಜಿನದೀಕ್ಷೆ ಮತ್ತು ತಿರಸ್ಕಾರ:

ಬ್ರಾಹ್ಮಣಳಾದ ಯಜ್ಞದತ್ತೆ ಎಂಬ ಮಹಿಳೆಗೆ ೫ ತಿಂಗಳ ಗರ್ಭಿಣಿಯಾದಾಗಿನಿಂದಲೇ ಜಿನ ಮಂದಿರಗಳನ್ನು ಪ್ರದಕ್ಷಿಣೆ ಮಾಡುವ, ಪೂಜೆ ಮಾಡುವ, ಯಾವಾಗಲೂ ಜಿನಮುನಿಯ ಉಪದೇಶ ಕೇಳುವ ಬಯಕೆಯಾಯಿತು. ತನ್ನ ಬಯಕೆಯನ್ನು ಯಾರಿಗೆ ಹೇಳಿದರೂ ನೆರವೇರಲಾರದು ಎಂದು ಮನದಲ್ಲಿ ಕೊರಗಿ ಬಡವಾಗುತ್ತಾಳೆ. ಎಲ್ಲರೂ ಅವಳ ಮನದ ಬಯಕೆ ಏನೆಂದು ಒತ್ತಾಯಿಸಲು ನಿಜವಾದ ಬಯಕೆಯನ್ನು ತಿಳಿಸಲಾಗದೆ

ತನಿರಸದಿಂದಮೃತದ ದೊರೆ
ಯೆನಿಸುವ ಕುಂಕುಮದ ರುಚಿಯನನುಕರಿಸುವ ಮಾ
ವಿನ ಪಣ್ಣನೆನಗೆ ನೀವಿಂ
ಬಿನೆ ತಂದಿಕ್ಕುವುದಮೋಘಮೆಂಬುದುಮಾಗಳ್ (ಪು-೨೫೮, ಪ-೧೧)

- ಎಂದು ಸುಳ್ಳಾಗಿ ಹೇಳುತ್ತಾಳೆ. ಮಾವಿನ ಹಣ್ಣಿನ ದಿನಗಳಲ್ಲದ ದಿನಗಳಲ್ಲಿ ಹುಡುಗಿಗೆ ಮಾವಿನ ಹಣ್ಣಿನ ಬಯಕೆಯನ್ನು ಹೇಗಾದರೂ ಮಾಡಿ ಈಡೇರಿಸಬೇಕೆಂದುಕೊಂಡು ಗಂಡ ಸೋಮದತ್ತನನ್ನೂ ಒಳಗೊಂಡು ಎಲ್ಲರೂ ಒಂದೊಂದು ದಿಕ್ಕಿಗೆ ಹಣ್ಣು ಹುಡುಕಿಕೊಂಡು ಹೊರಡುತ್ತಾರೆ. ಬಹಳ ಪ್ರಯತ್ನ ಪಟ್ಟಮೇಲೆ ಬೇಡನೊಬ್ಬನ ಸಹಾಯದಿಂದ ಮಾವಿನ ಹಣ್ಣಿರುವ ಗಿಡವನ್ನು ಹುಡುಕುತ್ತಾರೆ.

ಈವನದ ಚೂತಭೂಜಾ
ತಾವಳಿಯೊಳ್ ಫಲಮವಿಲ್ಲ ಮಿರ್ದಂತಾಗೀ
ಮಾವಿನೊಳೆ ಪಣ್ಗಳಾದುವು
ಭಾವಿಸುವಂತಿದುವೆ ಚೋದ್ಯಮುರ್ವೀತಳದೊಳ್ (ಪು-೨೬೦. ಪ-೧೮)

– ಆ ಮಾವಿನ ಮರದ ಬುಡದಲ್ಲಿ ಕುಳಿತ ಭಟಾರಕರ ತಪೋಮಹಿಮೆಯ ಫಲವಿದೆಂದು ಸೋಮದತ್ತನು ನಿರ್ಧರಿಸಿಕೊಳ್ಳುವನು. ಅವರ ತಪಸ್ಸಿನ ಕಾರಣವಾಗಿ ದಿನಗಳಲ್ಲದ ದಿನದಲ್ಲಿ ಈ ಗಿಡಕ್ಕೆ ಮಾತ್ರ ಮಾವಿನ ಫಲವಾಗಿದೆ ಎಂದುಕೊಳ್ಳುವನು. ಆ ಸೋಮದತ್ತ ಸುಮತಿ ಭಟಾರಕರ ಉಪದೇಶಕ್ಕೆ ಮಾರುಹೋಗಿ ತಾನು ಬ್ರಾಹ್ಮಣನೆಂಬುದನ್ನೂ ಮರೆಯುತ್ತಾನೆ.

ಸುಡು ಸಂಸಾರ ಮನೊಳೆಯೊಳ
ಗಿಡು ಸಂಸ್ಕೃತಿಸುಖಮನೀಮಹಾಪುರುಷನ ಮೆ
ಲ್ಲಡಿಯಂ ನೋಡುತ್ತಂ ಮೃದು
ನುಡಿಯಂ ಕೇಳುತ್ತಮಿರ್ಪುದೊಂದರಸಲ್ತೇ (ಪು–೨೬೩, ಪ–೩೦)

ಎಂದು ಮಾವಿನ ಪಣ್ಗಳಂಛಾತ್ರರಕೈಯೊಳ್
ಅಹಿಚ್ಛತ್ರದ ಪುರಕಟ್ಟಿ ತಾಂಪೋಗಲೊಲ್ಲದಿರ್ದು (ಪು–೨೬೩, ಗದ್ಯ)

– ಗರ್ಭಿಣಿ ಹೆಂಡತಿಯ ಬಯಕೆ ಈಡೇರಿಸಲೆಂದು ಬಂದ ಸೋಮದತ್ತ ಗರ್ಭಿಣಿ ಯಜ್ಞದತ್ತೆ ಬಯಸಿದ ಹಣ್ಣುಗಳನ್ನು ಶಿಷ್ಯರ ಕೈಯಲ್ಲಿ ಕೊಟ್ಟು ಕಳಿಸುವನು. ಹಣ್ಣುಗಳನ್ನು ಕಂಡು ಖುಷಿಪಟ್ಟ ಯಜ್ಞದತ್ತೆಗೆ ಸೋಮದತ್ತನ ವಿಚಾರವನ್ನೆಲ್ಲ ಅವನ ಶಿಷ್ಯರು ತಿಳಿಸುವರು. ಅದಕ್ಕವಳು ಜೈನಯತಿಗಳ ಬಳಿ ಹುಸಿಭಕ್ತಿಯನ್ನು ಅಭಿನಯಿಸಿ ಏನಾದರೂ ವಿದ್ಯೆಕಲಿಯಲು ನಿಂತಿರಬೇಕು, ಮಗು ಹುಟ್ಟಿದ ಸುದ್ದಿ ಕೇಳಿ ಎಲ್ಲಿದ್ದರೂ ಬರುವನೆಂಬ ಲೆಕ್ಕಾಚಾರದಿಂದ ದಿನಗಳೆದು ಪ್ರಸವವಾಗುತ್ತದೆ. ಗಂಡು ಮಗುವಿನ ಜನನವಾಗುತ್ತದೆ. ಸೋಮದತ್ತನು ಜೈನ ಮುನಿಯಾಗಿದ್ದನ್ನು ತಿಳಿದು ಯಜ್ಞದತ್ತೆ ಮಗುವನ್ನೂ ಬಂಧುಗಳನ್ನೂ ಕರೆದುಕೊಂಡು ಸೋಮದತ್ತಮುನಿಯನ್ನು ಮನೆಗೆ ಕರೆತರಲು ಹೋಗುತ್ತಾಳೆ "ಆರುಮಿಲ್ಲದ ದೇಸಿಗರಂತೆ ಕಾಡಂ ಪೊಕ್ಕು ಕೂಟ್ಟಿಡೆಯದ ತಿರಿಕರಂತೆ ಗಿಡಿಗಿಡಿಜಂತ್ರಮಾಗಿ ತರುವಲಿಗಳಂತೆ ಸಿರಿಯಂ ಬಿಟ್ಟು ಪಂದಿಯಂತೆ ಕೆಸಱನೊಟ್ಟಿಕೊಂಡು ಬೆಂದ ಕಗ್ಗೊಗ್ಗರಡಿನಂತೆ ಬಿಸಿಲೊಳ್ ನಿಂದು, ಕಂಡಂ ಬಡೆಯದ ಬಡವನಂತೆ ಪಸಿದು ಪಟ್ಟು ಬಱಿದಿದೇ ಕೊಡಲಂ ತಪಿಸಿ ಗಾವಿಲನಾದಪ್ಪೆ"(ಪು–೨೬೮, ಗದ್ಯ) ಎಂದು ಎಲ್ಲರೂ ಬಗೆ ಬಗೆಯಾಗಿ ಸೋಮದತ್ತನ ಮನ ಒಲಿಸಲು ಪ್ರಯತ್ನ ಪಟ್ಟರೂ ಅವನು ತನ್ನ ನಿರ್ಧಾರಕ್ಕೆ ಅಚಲನಾಗಿರುವನು, ಎಷ್ಟು ಹೇಳಿದರೂ ಸೋಮದತ್ತ ಕೇಳದಾದಾಗ ಯಜ್ಞದತ್ತೆ ಕೋಪಗೊಂಡು ಆ ಕೂಸನ್ನು ಸೋಮದತ್ತ ಮುನಿಯ ಮುಂದಿಟ್ಟು ಸಾಯುವ ನಿರ್ಧಾರ ಮಾಡಿ ಅಲ್ಲಿಂದ ಹೊರಟು ಹೋಗುತ್ತಾಳೆ.

ಗಂಡ ಸಂಸಾರ ತೊರೆದು ಜೈನ ಧರ್ಮದ ಅನುಯಾಯಿಯಾಗಿ ಕುಟುಂಬವನ್ನು ಕಡೆಗಣಿಸಿದಾಗ 'ಅದೇತರ ಧರ್ಮ' ಎಂದು ಪ್ರಶ್ನಿಸುತ್ತಾಳೆ, ಆಕ್ರೋಶ ವ್ಯಕ್ತಪಡಿಸುತ್ತಾಳೆ. ಸಂಸಾರದ ಜವಾಬ್ದಾರಿಗಳನ್ನೆಲ್ಲ ಬಿಟ್ಟು ಹೀಗೆ ಸನ್ಯಾಸ ಪಡೆಯುವ ಸೋಮದತ್ತನಂಥವರ ಬಗ್ಗೆ ಅವರ ಕುಟುಂಬವರ್ಗದಲ್ಲಿ ಅಸಮಾಧಾನವಿರುವದು ಕಂಡುಬರುತ್ತದೆ. ಯಜ್ಞದತ್ತೆಯಂಥ ಸ್ತ್ರೀಯರಿಗೆ ಗಂಡನೇ ಸರ್ವಸ್ವ, ಅವನೇ ಬದುಕಿಗೆ ಬೆನ್ನು ಮಾಡಿದಾಗ ಮಗುವನ್ನು ಅವನ ಎದುರಿಗೆ ಹಾಕಿ ತಾನು ಸಾಯಲು ನಿರ್ಧರಿಸುವಳು. ಯಜ್ಞದತ್ತೆಗೆ ಧರ್ಮಕ್ಕಿಂತ ಬದುಕು ಮುಖ್ಯ.

ಯಾವುದೇ ಧರ್ಮದಲ್ಲಿ ಧಾರ್ಮಿಕರು ಸಿದ್ಧಿತ್ವವನ್ನು ಪಡೆಯುವದನ್ನು ಅತ್ಯಂತ ಪೂಜ್ಯ ಭಾವನೆಯಿಂದ ನೋಡುವ ಭಾವ ಕಣ್ಮುಂದೆ ಮೂಡುತ್ತದೆ. ಆದರೆ ವ್ಯಕ್ತಿ ತನ್ನ ಕೌಟುಂಬಿಕ, ಸಾಮಾಜಿಕ ಜವಾಬ್ದಾರಿಗಳನ್ನು ಮರೆತು ದೀಕ್ಷೆ ಪಡೆಯುವದು, ತಪಸ್ಸು ಆಚರಿಸುವದನ್ನು ಮೌನದಿಂದ ಸ್ವೀಕರಿಸುವ ಚಿತ್ರಣಗಳೇ ಹೆಚ್ಚು ಸಿಗುತ್ತವೆ. ಅಪರೂಪವೆನ್ನಿಸಿದರೂ ಈ ತೆರನಾದ ವಿರೋಧದ ಚಿತ್ರಣಗಳು ಅಲ್ಲಲ್ಲಿ ಕಾಣದೊರೆಯುತ್ತವೆ.

ಮುನಿಗಳಿಂದ ದುಷ್ಟ ನಿಗ್ರಹ:

ಬಲಿಯು ಮೋಸದಿಂದ ಅಕಂಪನಾಚಾರ್ಯ ಮತ್ತು ಐನೂರು ಜನ ಋಷಿಗಳನ್ನು ಕೊಲ್ಲಬೇಕೆಂದು ಆ ಋಷಿಗಳೆಲ್ಲ ಯೋಗಕ್ಕೆ ಕುಳಿತ ಗುಹೆಯ ಬಾಗಿಲಿಗೆ ಪುಳ್ಳಿ, ಬೆರಣಿಗಳಂಥ ಉರುವಲುಗಳನ್ನೊಟ್ಟಿ ಬೆಂಕಿ ಹಚ್ಚಲು ಸಿದ್ಧಪಡಿಸಿರುತ್ತಾನೆ. ಈ ಕುಕೃತ್ಯ ವಿಷ್ಣು ಮುನಿಗಳಿಗೆ ಅವರ ಅವಧಿ ಜ್ಞಾನದಿಂದ ತಿಳಿಯುತ್ತದೆ. ಅದಕ್ಕೆ ವಿಷ್ಣು ಮುನಿಗಳು ಮುಂದೆ ಉಂಟಾಗುವ ಕೇಡನ್ನು ತಪ್ಪಿಸಲು ಪದ್ಮರಾಜನಿಗೆ ಭೇಟಿಯಾಗಿ ರಾಜನ ಈ ತೆರನಾದ ಉಪೇಕ್ಷೆಯನ್ನು ಹೀಗೆ ಖಂಡಿಸುತ್ತಾರೆ.

"ಅಂತಲ್ಲದೊಡಂ ರಾಜ್ಞಾಹಿ ರಕ್ಷಿತೋ ಧರ್ಮ" ಎಂಬ ಮಾತುಮಂ "ದುರ್ಬಲಸ್ಯ ಬಲೋ ರಾಜಾ" ಎಂಬ ನೀತಿಯುಮಂ "ಸರ್ವೇಂಷಾಂ ಪಾರ್ಥಿವೋ ಗುರುಃ" ಎಂಬ ನೀತಿ ವಾಕ್ಯಮುಮಂ "ಭೃತ್ಯಾಪರಾಧಸ್ಯ ಸ್ವಾಮಿನೋದಂಡ" ಮೆಂಬ ಪುರಾಣಮುಮಂ ನೆನೆದಪ್ಪೊಡಂ ಮುನಿವರರು ಪಸರ್ಗಮಂ ಮಾಣಿಸುವುದೆಂಬುದು(ಪು-೩೨೯, ಗದ್ಯ) ಎಂದು ವಿಷ್ಣುಮುನಿಯು ರಾಜನಿಗೆ ಅವನ ಕರ್ತವ್ಯವನ್ನು ಹೇಳಿಕೊಡುತ್ತಾನೆ. ಮುನಿಗಳಿಗೆ ಉಂಟಾಗುವ ಕೇಡನ್ನು ತಪ್ಪಿಸುವದು ರಾಜನ ಜವಾಬ್ದಾರಿ ಎಂದು ಅವನ ಕೆಲಸಗಳನ್ನು ಮನವರಿಕೆ ಮಾಡಿಕೊಡುತ್ತಾನೆ. ಇದೆಲ್ಲವನ್ನು ಕೇಳಿದ ರಾಜ ಬಲಿಯ ಮೇಲೆ ಕಿಡಿಕಾರುತ್ತಾನೆ.

ಬೆಱಗಾಗಿ ಕೇಳ್ದು ಕೋಪಂ
ಪೊಱಮಡೆ ಕಣ್ಗಟ್ಟಿ ಪುಸಿದು ಯಜ್ಞದ ನೆವದಿಂ
ನೆಱೆ ಮುನಿಚರ್ಯಕ್ಕೆ ತಪ್ಪುವ
ಕುಱಿಯಂ ತಱಿದೊಟ್ಟಿ ಕೊಲ್ಲದಂತು ಮಾಣೆಂ (ಪು-೩೨೯, ಪ-೧೪೦)

– ಎಂದು ತನ್ನ ನಂಬಿಕೆಯನ್ನು ದುರುಪಯೋಗ ಮಾಡಿಕೊಂಡವನನ್ನು ಪದ್ಮರಾಜ ಕೊಲ್ಲಲನುವಾಗುತ್ತಾನೆ. ಅದಕ್ಕೆ ವಿಷ್ಣುಕುಮಾರ ಮುನಿಯು ರಾಜನಿಗೆ ಕೊಲೆಯಂಥ ಕೆಲಸ ಮಾಡಬೇಡ, ಯಾವ ಪ್ರಾಣಹಾನಿ ಇಲ್ಲದೆ ಅವನನ್ನು ಓಡಿಸಲು ನಾವೇ ಸಾಕೆನ್ನುವರು. ಅಂತೆಯೇ ಮುನಿವರನು ದೇವತೆಗಳ ಮೂಲಕ ಬಲಿಯನ್ನು ಅಂಬಲಿಯನ್ನು ಮೊಟ್ಟೆ ಕಟ್ಟುವಂತೆ ಕೋಡಗಗಟ್ಟು ಕಟ್ಟಿ ಹಸ್ತಿನಾಪುರದಿಂದ ಅವನನ್ನು ಓಡಿಸುತ್ತಾರೆ. ಬಲಿಯನ್ನು ಓಡಿಸಿಯಾದ ಮೇಲೆ ಅಸಿತಗಿರಿಯ ಗುಹೆಯ ಬಾಗಿಲನ್ನು ಬಲಿ ಬೆರಣಿ ಪುಳ್ಳಿ ಮುಂತಾದ ಉರುವಲುಗಳಿಂದ ಮುಚ್ಚಿಸಿ ಕಿಚ್ಚು ಹಚ್ಚಿದ್ದ. ಅದೆಲ್ಲವನ್ನೂ ಋಷಿಯರು ಸ್ವಚ್ಛಗೊಳಿಸಿ ಅಕಂಪನಾಚಾರ್ಯರನ್ನೂ ಒಳಗೊಂಡಂತೆ ಐನೂರು ಜನ ಋಷಿಗಳಿಗೆ ಒದಗುತ್ತಿದ್ದ ದುರ್ಗತಿಯನ್ನು ತಪ್ಪಿಸಿದರು.

ಹೀಗೆ ವಿಷ್ಣು ಮುನಿಯಂತಹ ಸಾಮಾನ್ಯರೇ ಆದ ಅನೇಕ ಋಷಿಗಳು ತಮ್ಮಲ್ಲಿರುವ ಅತೀಂದ್ರಿಯ ಶಕ್ತಿಯಿಂದ ಪವಾಡ ಸದೃಶ್ಯ ಕಾರ್ಯಗಳನ್ನು ಮಾಡುತ್ತಿದ್ದರು. ಇನ್ನು ಅಕಂಪನಾಚಾರ್ಯರಂತಹ

ಋಷಿಗಳು ಹೊರಗಿನ ಗೊಡವೆಗೆ ಹೋಗದೇ ತಪಸ್ಸಿನಲ್ಲಿ ಮುಳುಗಿರುವವರು ಇದ್ದರು. ಬಲಿಯಂತಹ ದುರ್ಬುದ್ಧಿಯ ವ್ಯಕ್ತಿಯನ್ನು ತಮ್ಮ ಬುದ್ಧಿ ಶಕ್ತಿಯಿಂದಲೇ ಓಡಿಸುವ ಸಾಮರ್ಥ್ಯ ಮುನಿಗಳಿಗಿತ್ತು. ರಾಜನಿಗೆ ಅವನ ಕರ್ತವ್ಯಗಳನ್ನು ರಾಜನೀತಿಯನ್ನು ತಿಳಿಸಿ ಹೇಳುವ ಅಧಿಕಾರ ಮುನಿಗಳು ಪಡೆದಿದ್ದರು. ರಾಜನಿಗೆ ಬುದ್ಧಿ ಹೇಳುವ ಸ್ವಾತಂತ್ರ್ಯವೂ ಅವರಿಗಿತ್ತು. ಅವರಲ್ಲಿರುವ ಅವಧಿಜ್ಞಾನದಿಂದಲೇ ಐನೂರರಷ್ಟು ಮುನಿಗಳನ್ನು ಜೀವ ಸಹಿತ ಉಳಿಸಲು ಸಾಧ್ಯವಾಯಿತು. ದುಷ್ಟರನ್ನು ಶಿಕ್ಷಿಸುವ ಜವಾಬ್ದಾರಿ ಪ್ರಭುತ್ವದ್ದು. ಆದರೆ ಪ್ರಭುತ್ವ ವಿಫಲವಾದಾಗ ಮುನಿಗಳಂತಹ ಸಾಮಾನ್ಯರೇ ಸಮಾಜವನ್ನು ರಕ್ಷಿಸುವ ಜವಾಬ್ದಾರಿ ತೆಗೆದುಕೊಳ್ಳುವ ಪರಿಯನ್ನು ಅಂದಿನಿಂದ ಇಂದಿನವರೆಗೂ ಕಾಣುತ್ತೇವೆ.

ವ್ರತಾಚರಣೆಗಳು: ತಿರಸ್ಕಾರ ಮತ್ತು ಪಶ್ಚಾತ್ತಾಪ

ಉಜ್ಜಯನಿ ಗ್ರಾಮದ ಪಕ್ಕದಲ್ಲಿ ಶಿರಿಷ್ಪ ಎಂಬ ಊರು. ಆ ಊರಲ್ಲಿ ಮೃಗಸೇನನೆಂಬ ಬೆಸ್ತ. ಅವನ ಹೆಂಡತಿ ಘಂಟೆ. ಇವರು ತಮ್ಮ ವೃತ್ತಿಯನ್ನು ನಂಬಿ ಬದುಕುತ್ತಿದ್ದವರು. ಒಂದು ದಿನ ಮೃಗಸೇನ ಬಲೆ ತೆಗೆದುಕೊಂಡು ಮೀನು ಹಿಡಿಯಲು ಹೋಗುತ್ತಿರುತ್ತಾನೆ. ದಾರಿಯಲ್ಲಿ ಯಶೋಧರ ಋಷಿಯರ ಧರ್ಮಬೋಧೆ ನಡೆಯುತ್ತಿರುತ್ತದೆ. ಅದನ್ನು ಕೇಳಲು ಜನ ಸಮೂಹ ನೆರೆದಿರುತ್ತದೆ. ಮೃಗಸೇನನೂ ಅದನ್ನೆಲ್ಲ ನೋಡಿ ತನ್ನ ಬಲೆಯನ್ನು ಕೆಳಗಿಟ್ಟು ಕೂತು ಹೀಗೆ ಯೋಚಿಸತೊಡಗುವನು.

ಹಾರದ ಮುತ್ತಿನ್ಸೈಸರದ ವಜ್ರದ ಕಂಕಣದೊಪ್ಪುವೆತ್ತ ಕೇ
ಯೂರದ ರತ್ನ ಕುಂಡಲದ ವಸ್ತ್ರದ ಮುದ್ರಿಕೆಯೊಂದು ಮಿಕ್ಕಲಂ
ಕಾರದ ವಾರಮಪ್ಪ ಪುರುಷರ್ ನೆರೆದದ್ಭುತಮಲ್ತೆ ಕಟ್ಟಲುಂ
ಸೀರೆಯುಮಿಲ್ಲದೀ ಗುರುವನರ್ಚಿಸಿ ಕೈಮುಗಿದಂಜಿ ಸುತ್ತಲುಂ

(ಪುಟ-೩೭೭,ಪ-೧೬೮)

ಆದ್ದರಿಂದ ಈ ಮುನಿ ಪ್ರತ್ಯಕ್ಷ ದೇವರೇ ಆಗಿರಬೇಕೆಂದುಕೊಳ್ಳುವನು. ಮುನಿಯ ಉಪದೇಶವನ್ನು ಕೇಳಲು ತಾನೂ ಕುಳಿತುಕೊಳ್ಳುವನು. ನಂತರ ಎಲ್ಲರೂ ಮುನಿಗಳ ಹತ್ತಿರ ತಾವು ಬಯಸುವ ವ್ರತಗಳನ್ನು ಪಡೆದುಕೊಳ್ಳುವರು. ಎಲ್ಲರನ್ನೂ ನೋಡಿದ ಮೃಗಸೇನ ಎದ್ದು ತಾನೂ ಕೈಮುಗಿದು ವ್ರತವನ್ನು ಕೇಳಿಕೊಳ್ಳುವನು. ಅದಕ್ಕೆ ಮುನಿಗಳು ಹೆಂಡ ಬಿಡೆಂದರೆ ಮೃಗಸೇನ "ನಿಮ್ಮಡಿ, ಕಳ್ಳಿಲ್ಲದೊಡಿಂದೆ ಸಾವು" ಎನ್ನುವನು. ಮತ್ತೆ ಮುನಿಗಳು ಕೆಟ್ಟಕೊಲೆಯನ್ನು ಬಿಡು ಎನಲು "ಕೊಲ್ಲದೊಡಾನೆಂತು ಪೊಱೆವೆನೆನ್ನಂಗನೆಯಂ" ಎಂದನು. ಹಾಗಾದಾರೆ ಸುಳ್ಳನ್ನು ಬಿಡು ಎನ್ನಲು "ನಿಮ್ಮಡಿ ಪುಸಿಯಂ ಮಾಣ್ದಂದು ಬಾೞಬಾರದು ಧರೆಯೊಳ್" ಎಂದು ಕಳವು ಬಿಡು ಎನ್ನಲು "ಕಳವೆಂಬುದು ಮುನಿಪತಿ ಮತ್ತುಳಕ್ಕೆ ಬಿಡಬಾರದದನೆ ಬಿಟ್ಟೊಡೆ ಬಾೞ್ವೊಂದಳವಾವುದೊ ಪೇೞಿಂ ಭೂತಳದೊಳ್ ಮೊಂಗುಲಿಗನಪ್ಪವಂಗದು ಮುಖ್ಯಂ" ಎನ್ನುವನು. ಅದಕ್ಕೆ ಮುನಿಗಳು ಅಣುವ್ರತಗಳಲ್ಲಿ ಒಂದು ವ್ರತವನ್ನೂ ಸ್ವೀಕರಿಸಲಾಗದೆಂದರೆ 'ನೀ ಬಲೆಯಂ ಬೀಸಿದಲ್ಲಿ ಮೊದಲ್ ಸಿಕ್ಕಿದೊಂದು ಮೀನಂ ಬಿಡುವುದು" ಎನ್ನಲು ಮೃಗಸೇನ 'ಹಾಗೇ ಆಗಲಿ' ಎಂದು ಮೀನು ಹಿಡಿಯಲು ಹೊರಟ. ಸಿಂಪಾ ನದಿಯ ದೊಡ್ಡ ಮಡುವಿಗೆ ಹೋಗಿ ಮೀನಿಗಾಗಿ ಬಲೆ ಬೀಸಿದಾಗ ದೊಡ್ಡ ಮೀನೊಂದು ಬಲೆಗೆ ಬರುತ್ತದೆ. ಋಷಿವಾಕ್ಯ ಮೀರಲಾಗದೆಂದು ಬಲೆಗೆ ಬಿದ್ದ ಮೊದಲ ಮೀನಿನ ಗುರುತಿಗೆ ದಾರವೊಂದನ್ನು ಕಟ್ಟಿ ಪುನಃ ಆ ಮೀನನ್ನು ನದಿಗೇ ಬಿಡುವನು. ಸ್ವಲ್ಪ ದೂರ ಹೋಗಿ ಬಲೆ ಬೀಸಲು ಮತ್ತೆ ಮೊದಲು ಸಿಕ್ಕಿದ ಮೀನೇ ಮತ್ತೆ ಬಲೆಗೆ ಬರುತ್ತದೆ. ಆ ಮೀನಿನ ಗುರುತು ನೋಡಿ ಮತ್ತೆ ಅದನ್ನು ನದಿಗೇ

ಬಿಡುವನು. ಹೀಗೆ ಸಂಜೆವರೆಗೂ ಎಷ್ಟು ಸಾರಿ, ಎಷ್ಟು ದೂರ ಹೋಗಿ ಬಲೆ ಬೀಸಿದರೂ ಮೊದಲ ಮೀನೇ ಬಲೆಗೆ ಬರುತ್ತಿತ್ತು. ಹೀಗೆ ಹೊತ್ತು ಮುಳುಗಿತು, ಬೇರೆ ಮೀನು ಸಿಗಲೇ ಇಲ್ಲ. ಬರಿಗೈಯಲ್ಲಿ ಮನೆಗೆ ಹೋಗಬಾರದೆಂದು ಪುಳ್ಳೆಗಳನ್ನು ತೆಗೆದುಕೊಂಡು ಮನೆಗೆ ಹೋದನು. ಬರುವುದು ತಡಮಾಡಿದನೆಂದು ಮೊದಲೇ ಕೋಪಗೊಂಡಿದ್ದ ಘಂಟೆ ಮೀನಿಲ್ಲದೆ ಬರಿ ಸೌದೆ ತಂದ ಮೃಗಸೇನನನ್ನು ಕಂಡು ಸಿಟ್ಟಾಗಿ ಹೊರಗೆ ಹಾಕಿದಳು. ಅವನು ಭಯದಿಂದ ಹೆಂಡತಿಯ ಕಾಲ ಮೇಲೆ ಬಿದ್ದು ತಡವಾಗಿದ್ದಕ್ಕೆ ಕಾರಣ ಹೇಳುವನು. ಕಾರಣ ಕೇಳಿ ಇನ್ನೂ ಕೋಪಗೊಂಡ ಘಂಟೆ ಗಂಡನನ್ನು ಕೈಯಿಂದ ಬಡಿದು, ಕಾಲಿಂದ ಒದೆಯತೊಡಗುವಳು.

"ಅಂತು ನುರ್ಗಾಗೆ ಬಡಿದು ನಿನಗೆ ವ್ರತಮನಿತ್ತ ಋಷಿಯರ ಮನೆಗೆ ಪೋಗೆಂದು ಪೊಱಮಡಿಸಿ ಪಡಿಯಂ ಕೀಱುವದುಂ ಮಗಸೇನಂ ದುಃಖಿತನಾಗಿ"(ಪುಟ-೩೭೭, ಗದ್ಯ).

- ವ್ರತ ಕೊಟ್ಟ ಋಷಿಯರ ಮನೆಗೇ ಹೋಗೆಂದು ಮನೆಯಿಂದ ಹೊರಹಾಕುವಳು. ಇದರಿಂದ ದುಃಖಿತನಾದ ಮೃಗಸೇನ

ಒಂದು ದಿನಂ ವ್ಯವಸಾಯಂ
ಕುದಿದೊಡೀ ಕಾಂತೆ ಮುಳಿದು ಬಯ್ದುಪಳದಱಿಂ
ಸೌಂದರಿಯುಂ ಸುತರುಂ ಬೇ
ಡೆಂದಱಿಪುವ ದಿವ್ಯ ಮುನಿಯ ವಚನಮನೀಗಳ್ (ಪು-೩೭೭, ಪ-೧೭೭)

ಎಂದು ಘಂಟೆ ತನ್ನೊಂದಿಗೆ ನಡೆದುಕೊಂಡ ರೀತಿಗೆ ಕೋಪಗೊಳ್ಳುವನು.

ಮುಳಿದೆನ್ನಂ ಕರುಣಿಸದ
ಗ್ಗಳಮಾಗಿರೆ ಬಡಿದ ಸತಿಯುಮಂ ಮನೆಯುಮನು
ಜ್ವಲಮಾಗಿ ತೊಱೆದು ನೆಟ್ಟನೆ
ಮಲರಹಿತನನೆಯ್ದಿ ಕೇಳ ಬೆಳಗಾದಾಗಳ್ (ಪುಟ-೩೮೦, ಪ-೧೮೧)

- ಎಂದುಕೊಂಡು ಮಲಗಿದ್ದಾಗಲೇ ರಾತ್ರಿ ಹಾವು ಕಚ್ಚಿ ಸತ್ತು ಹೋಗುವನು. ಹೀಗೆ ಗಂಡ ಒಮ್ಮೆಲೆ ಸತ್ತು ಹೋದುದನ್ನು ಕಂಡು ದುಃಖಪಡುವಳು. ಮೃಗಸೇನನ ಸುವ್ರತವನ್ನು ಕೇಳಿ ತಾನೂ ಅದೇ ವ್ರತವನ್ನು ಹಿಡಿವೆನೆಂದು ಈಟಿಯಿಂದ ಇರಿದುಕೊಂಡು ಸತ್ತಳು.

ಮೃಗಸೇನ ಮತ್ತು ಘಂಟೆಯ ಬದುಕಿನ ವೃತ್ತಿ ರೀತಿಯನ್ನು ನಯಸೇನ 'ಪಾಪಾಸಕ್ತಿ' ಎನ್ನುವನು. ಇದು ನಯಸೇನನ ಪೂರ್ವಗ್ರಹಿತ ಮಾತು. ಹೊಟ್ಟೆ ತುಂಬಿದ ನಯಸೇನನಂತವರಿಗೆ ಮೀನು ಹಿಡಿಯುವದು ಪ್ರಾಣಿಹಿಂಸೆಯಿಂದ ಕೂಡಿದ ಪಾಪಕರ್ಮ. ಮೃಗಸೇನೆ ಘಂಟೆಯಂತಹ ಬಡವರಿಗೆ ಅವರ ವೃತ್ತಿಯೇ ಬದುಕು. ಇನ್ನು ಘಂಟೆಗೆ ಬದುಕು ಮುಖ್ಯವೇಹೊರತು ಧರ್ಮವಲ್ಲ, ಘಂಟೆಯಂಥ ಸಾಮಾನ್ಯ ಹೆಣ್ಣುಗಳಿಗೆ ಧರ್ಮದ ವ್ರತಾಚರಣೆಗಳಿಂತ ಬದುಕು ಸಾಗಿಸಲು ಬೇಕಾದ ವೃತ್ತಿ ಮತ್ತು ಆಹಾರಗಳೇ ಮುಖ್ಯವಾಗುತ್ತವೆ. ಯಾವ ಧರ್ಮವೂ ಸಾಮಾನ್ಯನ ಹೊಟ್ಟೆ ತುಂಬಿಸಲಾರವು ಎಂಬ ಸತ್ಯದರಿವು ಹೆಣ್ಣಿಗಿದೆ. "ಅದಕ್ಕೆ ಬದುಕನ್ನು ಶಿಷ್ಟೀಕರಿಸಲು ಹೋಗಿ ಬದುಕಿನಿಂದ ವಿಮುಖಗೊಳ್ಳುವದನ್ನು

ವಿರೋಧಿಸುವ ನೆಲೆ ಅಂದಿಗೂ ಎಂದೆಂದಿಗೂ ಮುಖ್ಯವೇ"(ಧರ್ಮಾಮೃತ: ಸಾಂಸ್ಕೃತಿಕ ಮುಖಾಮುಖಿ ಸಂ:ಡಾ.ಬಿ.ಎಂ.ಪುಟ್ಟಯ್ಯ, ಪುಟ-೧೦೮) ಎಂಬುದನ್ನು ಈ ಕತೆ ಸಾರಿ ಹೇಳುತ್ತದೆ.

ಆದರೆ ನಯಸೇನನಿಗೆ ಬದುಕೆಂದರೆ ಧರ್ಮ, ವ್ರತಾಚರಣೆ ಎಂಬರ್ಥ. ಆದ್ದರಿಂದ ಘಂಟೆಯ ಬಾಯಿಂದ ಮೊದಲು ವ್ರತಾಚರಣೆಗಳ ಬಗ್ಗೆ ತಿರಸ್ಕಾರದ ಮಾತುಗಳನ್ನಾಡಿಸಿದರೂ, ಕೊನೆಯಲ್ಲಿ ಮೃಗಸೇನನಂತೆ ಘಂಟೆಯೂ ವ್ರತಸ್ವೀಕರಿಸಿ ಈಟಿಯಿಂದ ತನ್ನನ್ನು ತಾನೇ ಇರಿದುಕೊಂಡು ಸಾಯುವಳು. ಹೀಗೆ ಸಾಯುವದು ತಾನು ಮಾಡಿದ ಪಾಪಕಾರ್ಯವನ್ನು ಪ್ರಾಯಶ್ಚಿತ್ತಗೊಳಿಸಿಕೊಳ್ಳಲು.

ಮೃಗಸೇನ ತನ್ನ ವೃತ್ತಿ ನಂಬಿ ಬದುಕುತ್ತಿದ್ದ ವ್ಯಕ್ತಿ. ಭಟಾರರ ಧರ್ಮೋಪದೇಶ ಕೇಳಲು ನೆರೆದ ಜನಸಮೂಹಕ್ಕೆ ಆಕರ್ಷಿತನಾಗಿ ಉಪದೇಶ ಕೇಳಲು ಕುಳಿತು ಋಷಿಗಳ ಪ್ರಭಾವಕ್ಕೆ ಒಳಗಾಗುತ್ತಾನೆ. ತಾನೂ ಎಲ್ಲರಂತೆ ವ್ರತ ಸ್ವೀಕರಿಸಿ ತನ್ನ ವೃತ್ತಿ ಬದುಕನ್ನು ಮರೆತು ವ್ರತಾಚರಣೆ ಪಾಲಿಸಲು ಬದ್ಧನಾಗುತ್ತಾನೆ. ಅದನ್ನು ಹೆಂಡತಿ ಖಂಡಿಸಿದಾಗ ಧರ್ಮಪಾಲಿಸಲಾಗದ ಬದುಕು ನಿರರ್ಥಕವೆಂದು ಸಂಸಾರದಿಂದ ಬಿಡಿಸಿಕೊಂಡು ದೀಕ್ಷೆ ಪಡೆಯಬೇಕೆನ್ನುವನು.

ಇಲ್ಲಿ ಬರುವ ಮೃಗಸೇನ ಘಂಟೆಯರು ಶ್ರೇಣೀಕೃತ ಸಮಾಜದಲ್ಲಿನ ತಳಸಮುದಾಯಕ್ಕೆ ಸೇರಿದ ಸಾಮಾನ್ಯರು. ಇವರ ಬದುಕು ವೃತ್ತಿಯನ್ನು ಅವಲಂಬಿಸಿದ್ದು. ಇವರು ತಮ್ಮ ವೃತ್ತಿಯೇ ಧರ್ಮ; ಧರ್ಮವೇ ವೃತ್ತಿ ಎಂದು ಬಾಳಿದವರು. ಇದು ದುಡಿಯುವ ವರ್ಗಗಳಿಗೆ ಅನಿವಾರ್ಯವೂ ಹೌದು. ನಿತ್ಯ ದುಡಿದಾಗಲೇ ಹೊಟ್ಟೆ ತುಂಬುವದು ಎಂಬ ಸ್ಥಿತಿಯಲ್ಲಿರುವ ಸಾಮಾನ್ಯರು ಧರ್ಮವ್ರತಾಚರಣೆ ಎಂದು ಕೂತರೆ ಹೊಟ್ಟೆ ತುಂಬುವದಿಲ್ಲ. ಇಂಥವರಿಗೆ ಕಾಯಕವೇ ಧರ್ಮದ ಮಾರ್ಗವೂ ಹೌದು, ಅನ್ನದ ಮಾರ್ಗವೂ ಹೌದು.

ಮುನಿ ರಾಜನಾದ ಪ್ರಸಂಗ:

ಯಶೋಧರನೆಂಬ ಮಹಾರಾಜ. ಅವನ ಹೆಂಡತಿ ಸೌಂದರಿ ಮಹಾದೇವಿ. ಈ ಇಬ್ಬರೂ ದಂಪತಿಗಳಿಗೆ ಅನಂತ ವೀರ್ಯ ಕುಮಾರ; ಶ್ರೀಧರಕುಮಾರ ಪ್ರಿಯಬಲಕುಮಾರರೆಂಬ ಮೂರು ಜನ ಗಂಡು ಮಕ್ಕಳಿದ್ದರು. ಯಶೋಧರ ಮಹಾರಾಜನಿಗೆ ರಾಜ್ಯಭಾರ ಸಾಕಾಗಿ ತನ್ನ ಮಕ್ಕಳಿಗೆ ರಾಜ್ಯಭಾರ ವಹಿಸಿಕೊಡಬೇಕೆಂದು ಮಕ್ಕಳನ್ನು ಕರೆಸಿ ತಾನು ತಪಸ್ಸಿಗೆ ಹೋಗುವುದಾಗಿ ಹೇಳುತ್ತಾನೆ. ಹಿರಿಯ ಮಗ ಅನಂತವೀರ್ಯ ಕುಮಾರ ಮತ್ತು ನಡುವಿನ ಮಗ ಶ್ರೀಧರಕುಮಾರ ಇಬ್ಬರೂ ರಾಜ್ಯಲಕ್ಷ್ಮಿ ತಮಗೆ ಬೇಡವೆಂದೂ ತಾವೂ ತಂದೆಯ ಜೊತೆ ತಪಸ್ಸಿಗೆ ನಿಲ್ಲುವದಾಗಿಯೂ ಘೋಷಿಸಿಕೊಳ್ಳುವರು. ಹಾಗಾಗಿ ಮೂರನೆಯ ಮಗ ಪ್ರಿಯಬಲನಿಗೆ ಪಟ್ಟ ಕಟ್ಟಿ ಯಶೋಧರ ಮಹಾರಾಜ ತನ್ನಿಬ್ಬರು ಮಕ್ಕಳೊಂದಿಗೆ ತಪಸ್ಸಿಗೆ ಹೋಗುವನು. ಮುಂದೆ ತಪಸ್ಸಿನಲ್ಲಿ ಸಾಧನೆಗೈದು ಯಶೋಧರ ಮಹಾರಾಜ ಮತ್ತು ಅನಂತವೀರ್ಯ ಕುಮಾರ ಇಬ್ಬರೂ ಮೋಕ್ಷಲಕ್ಷ್ಮಿಗೆ ಪ್ರಿಯರಾದರು. ಶ್ರೀಧರಾಚಾರ್ಯ ಉಗ್ರ ತಪಸ್ಸಿನಲ್ಲಿ ನಿರತರಾಗುವರು. ಪ್ರಿಯಬಲಕುಮಾರನು ಪ್ರಬಲ ಪರಕಾಕ್ರಮದಿಂದ ಸಮಸ್ತ ಭೂಮಂಡಲವನ್ನು ಆಳುತ್ತಿರುತ್ತಾನೆ.

ವಸಂತಮಾಸದಲ್ಲಿ ವನವೆಲ್ಲ ತುಂಬ ಹಸುರಿನಿಂದ ಕಂಗೊಳಿಸುತ್ತಿರಲು ವನಪಾಲಕನು ಪ್ರಿಯಬಲ ಮಹಾರಾಜನನ್ನು ವನವಿಹಾರಕ್ಕೆ ಬರಬೇಕೆಂದು ವಿನಂತಿಸಿಕೊಳ್ಳುವನು. ವನಪಾಲಕನ ಆಹ್ವಾನಕ್ಕೆ ಒಪ್ಪಿಕೊಂಡ ರಾಜ ತನ್ನ ಸಮಸ್ತ ಪರಿವಾರದೊಂದಿಗೆ ವನವಿಹಾರಕ್ಕೆ ಹೋಗುತ್ತಾನೆ. ಆ ವನದ ಪ್ರಕೃತಿ

ಸೌಂದರ್ಯವನ್ನು ಕಣ್ತುಂಬಿಕೊಂಡ ರಾಜ ವನ ಕ್ರೀಡೆಯಾಡಿ ಅಲ್ಲೇ ಚಿಗುರು ಹಾಸಿನ ಮೇಲೆ ಮಲಗಿರಲು ಹಾವೊಂದು ಅವನ ಕಾಲನ್ನು ಕಡಿದು ವಿಷವೇರಿ ಪ್ರಿಯಬಲ ಮಹಾರಾಜ ಸಾವನ್ನಪ್ಪುತ್ತಾನೆ.

ಪ್ರಿಯಬಲರಾಜ ಹೀಗೆ ಅಕಾಲಿಕವಾಗಿ ಮರಣ ಹೊಂದಿದ್ದನ್ನು ತಿಳಿದ ಇಂದ್ರಪ್ರಭನೆಂಬ ಹೆಗ್ಗಡೆಯು

ಸಂತತಿಯಿಲ್ಲದ ರಾಜ್ಯಂ
ಪಿಂತಾದುದು ವೈರಿಭೂಭುಜರ್ಗೆಡೆಯಾಯ್ತಿ
ನ್ನೆಂತಕ್ಕುಮೊ ಪೇಟಿವಿದಿಯೆಂ
ದಂತರದೊಳ್ ಮಱುಗಿಕುದಿದು ಬೆದೆಬೆದೆಬೆಂದು" (ಪು-೪೦೨, ಪ-೮೪)

- ಸಂತತಿ ಇಲ್ಲದ ಕಾರಣ ಮುಂದಿನ ರಾಜ್ಯಭಾರವನ್ನು ವಹಿಸುವಂಥವರು ಯಾರೂ ಇಲ್ಲದ್ದರಿಂದ ಭಯಭೀತನಾಗಿ ರಾಜನು ಸತ್ತನೆಂಬ ಸುದ್ದಿಯನ್ನು ಯಾರಿಗೂ ತಿಳಿಸದೆ ಮುಚ್ಚಿಟ್ಟು, ರಾಜನು ವನವಿಹಾರದಲ್ಲಿ ಬಳಲಿದ್ದಾನೆಂದು ಹೇಳಿ ಅರಮನೆಗೆ ತಂದು ರಾತ್ರಿಯಲ್ಲಿ ಸಂಸ್ಕಾರ ಮಾಡಿದನು.

ನಂತರ ದಕ್ಷಿಣದ ರಾಜರನ್ನು ವಶಪಡಿಸಿಕೊಂಡು ಅವರಿಂದ ಕಪ್ಪ ಕಾಣಿಕೆಗಳನ್ನು ತರಲು ಹೇಳಿದ್ದಾನೆಂದು ಹೆಗ್ಗಡೆಯು ಊರೆಲ್ಲ ಸುಳ್ಳು ಸುದ್ದಿ ಹಬ್ಬಿಸಿದನು. ಕಪ್ಪ ತರುವುದಾಗಿ ಹೇಳಿ ಚತುರಂಗಸೈನ್ಯ ತೆಗೆದುಕೊಂಡು ಶ್ರೀಧರಚಾರ್ಯನನ್ನು ಹುಡುಕಿಕೊಂಡು ಹೊರಟನು. ಶ್ರೀಧರಾಚಾರ್ಯರು ನೆಲೆಸಿದ್ದ ಋಷಿನಿವಾಸ ಪರ್ವತವನ್ನು ಸೇರಿ ಆ ಬೆಟ್ಟದ ತಪ್ಪಲಿನಲ್ಲಿ ಬೀಡುಬಿಟ್ಟರು. ಸ್ವಲ್ಪ ಜನರನ್ನು ಕರೆದುಕೊಂಡು ಬೆಟ್ಟ ಹತ್ತಿ ಶ್ರೀಧರಾಚಾರ್ಯರ ಹತ್ತಿರ ಬಂದು ಅವರ ಪಾದಪೂಜೆ ಮಾಡಿ; ಸ್ವಲ್ಪ ಹೊತ್ತು ಧರ್ಮಶ್ರವಣ ಮಾಡುವರು.

"ಕಾಣ್ಬೆವೆಂಬರ್ತಿಯಿಂ ವೆಂಗಿಮಂಡಲದಿಂ ಬಂದೆವಾವಪ್ಪೊಡೆ ಪರದರೆವಾಮುಮಯದ ಶ್ರಾವಕರೆವಿನ್ನುಂ ನಿಮ್ಮಡಿಗಳ ಶ್ರೀಪಾದಮಂ ಕಾಣಲೆಂದು ಪಲಂಬರುಂ ಪಿರಿದಪ್ಪ ವ್ರತಂಬೆರೆತು ಬಂದು ಪರ್ವತದ ಕೆಳಗಿರ್ದರೀ ಗಿರಿಯನೇಱಲಾಱರ್ ಕಡುವೃದ್ಧರವರಂ ನಿಮ್ಮಡಿಗಳ್ ಬಿಜಯಂಗೆಯ್ದು ಪರಸಿ ಸಂತೋಷಮಂ ಮಾಟ್ಪುದೆಂದು ಪ್ರಾರ್ಥಿಸಿ ಮಗುಳೆ ವಂದಿಸಿ ತಮ್ಮ ಬಿಟ್ಟ ಬೀಡಿಂಗೆ ಬಂದರನ್ನೆಗಂ ಮುನಿಮುಖ್ಯನವರ ಮಾತಿಂಗೆ ಕರುಣಿಸಿ ಮಧ್ಯಾಹ್ನದೊಳ್ ಚರ್ಯಾ ಮಾರ್ಗದಿಂ ಪೊಱಮಟ್ಟು"(ಪು-೪೦೩, ಗದ್ಯ).

ಶ್ರೀಧರಾಚಾರ್ಯರು ಹೆಗ್ಗಡೆ ಮುಂತಾದವರು ಹೇಳಿದ್ದನ್ನು ನಿಜವೆಂದೇ ನಂಬಿ ಭಿಕ್ಷೆಗೆಂದು ಅವರ ಬೀಡಿಗೆ ಹೊರಟನು. ಅವರೆಲ್ಲರೂ ಪ್ರೀತಿಯಿಂದ ಮುನಿಗಳನ್ನು ಭಿಕ್ಷೆಗೆ ನಿಲ್ಲಿಸಿದರು. ಹೆಚ್ಚು ನಿದ್ದೆಬರುವಂತಹ ಮದ್ದುಗಳನ್ನು ಅನ್ನದಲ್ಲಿ ಕಲಸಿ ಮುನಿವರ್ಯನಿಗೆ ಊಟಕ್ಕೆ ಬಡಿಸಿದರು. ಮುನಿಗಳು ಇವರ ಕಪಟ ಚೇಷ್ಟೆಯನ್ನ ತಿಳಿಯದೆ ಊಟ ಮಾಡಿ ಪ್ರಜ್ಞಾಹೀನರಾಗಿ ಒಮ್ಮೆಂದೊಮ್ಮೆಲೆ ಕೆಳಗೆ ಬಿದ್ದು ನಿದ್ದೆ ಮಾಡಿದರು.

ಆಗ ಸಂತೋಷದಿಂದ ಓಡಿಬಂದು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಮುನಿಗಳನ್ನು ಮೇಣೆಯಲ್ಲಿಟ್ಟುಕೊಂಡು ಬಂದು ಪ್ರತಿಪಾಲಪುರವನ್ನು ಪ್ರವೇಶಿಸಿದರು. ಮೈಮರೆತು ಮಲಗಿದ್ದ ಶ್ರೀಧರಾಚಾರ್ಯರಿಗೆ ರತ್ನಾಭರಣಗಳನ್ನು ತೊಡಿಸಿ ಪರಿಮಳದ್ರವ್ಯಗಳನ್ನು ಹಚ್ಚಿ, ದಿವ್ಯ ವಸ್ತ್ರಗಳನ್ನು ಉಡಿಸಿ ರೋಮಜ (ಕಂಬಳಿ) ವೆಂಬ ಹಾಸಿಗೆಯ ಮೇಲೆ ಮಲಗಿಸಿ ಎಲ್ಲರೂ ಅವನ ಸುತ್ತಮುತ್ತಿಕೊಂಡರು.

ಮೂರನೆ ದಿನದ ಹೊತ್ತಿಗೆ ಮುನಿಗಳಿಗೆ ನಿದ್ದೆಯಿಂದ ಎಚ್ಚರವಾಯಿತು, ಮದ್ದಿನ ತೀವ್ರತೆ ಕಡಿಮೆಯಾಯಿತು.

ಮುನಿಗಳಿಗೆ ಎಚ್ಚರವಾದ ಮೇಲೆ ದೇಹದ ಮೇಲೆ ತೊಡಿಸಿದ್ದ ಒಡವೆ, ಧರಿಸಿದ ಬಟ್ಟೆ ದೇಹಕ್ಕೆ ಹಚ್ಚಿದ ಶ್ರೀಗಂಧದ ಸುಗಂಧದ್ರವ್ಯವನ್ನೂ, ಮುನಿಯ ಸುತ್ತ ಮುತ್ತಿಕೊಂಡಿದ್ದ ಕಿರೀಟಧಾರಿಗಳನ್ನು ನೋಡಿ ಮುನಿಗೆ ಆಶ್ಚರ್ಯವಾಗುತ್ತದೆ. ಇದೆಲ್ಲವನ್ನೂ ನೋಡಿ ಶ್ರೀಧರಾಚಾರ್ಯ ಮುನಿಯು.

ಪುಸಿದು ದುರಾತ್ಮನೆನ್ನ ಗುಣಮಂ ಭುವನತ್ರಯ ಪೂಜ್ಯನಪ್ಪುದಂ
ಕುಸಿಯಿಸಿ ತನ್ನ ಬಾಙ್ಕೆಗೆಡೆಯಿಲ್ಲದೆ ವೈಶ್ಯರೆವಂ ಬಂದು ನಂ
ಬಿಸಿ ಕಡು ದೂರ್ತಿನಿಂ ಪಲವು ಟಕ್ಕುಗಳಿಂ ಸಮೆದನ್ನಮಂ ಸಮಂ
ಜಸಿಕೆಯನೊಕ್ಕು ಬೇಗ ಮೆನ ಗಿಕ್ಕಿ ಬಟಿಕ್ಕೆ ಮನೋನುರಾಗದಿಂ

(ಪು-೪೦೪,ಪ-೯೦)

ಎಂದು ತನ್ನ ಈ ಸ್ಥಿತಿಗೆ ಕಾರಣರಾದ ಎಲ್ಲರ ಬಗ್ಗೆ ಕೋಪವನ್ನು ವ್ಯಕ್ತಪಡಿಸುವನು. ಮುನಿಯು ಇವರೆಲ್ಲ ಸೇರಿ ತನ್ನನ್ನು ಇಲ್ಲಿಗೆ ತಂದು ತಮ್ಮ ವಶಮಾಡಿಕೊಂಡರೆಂದು ತನ್ನ ಕೇಡಿಗೆ ನಿಟ್ಟುಸಿರು ಬಿಟ್ಟು ಹಾಸಿಗೆಯ ಮೇಲೆ ಬಿದ್ದನು. ಕೂಡಲೇ ಅರಮನೆಯ ಜನರೆಲ್ಲ ಸೇರಿ ಶೈತ್ಯೋಪಚಾರ ಮಾಡಿ ಚೇತರಿಸಿಕೊಂಡ ಮೇಲೆ ಮುನಿಯನ್ನು ಹೀಗೆ ವಿನಂತಿಸಿಕೊಳ್ಳುವರು.

"ಸಂತತಿಯಿಲ್ಲದ ರಾಜ್ಯಮ
ನಿಂತಿದನಡಿಗರ್ದಿ ಕಿಡಿಸದುನ್ನತಗುಣ ನಿ
ಶ್ಚಿಂತಂ ನಿಜೌಸಿ ಬಟಿಕ್ಕಂ
ಸಂತತಿಯಂ ಮಾಡಿ ದೇವ ನೀನಿದಂ ಕಿಡಿಸುವುದೇ (ಪು-೪೦೫, ಪ-೯೧)

ಎಂದು ಶ್ರೀಧರಾಚಾರ್ಯರಿಗೆ ತಮ್ಮ ಮೇಲೆ ಕರುಣೆ ಬರುವಂತೆ ಜನ ವಿನಂತಿಸಿಕೊಳ್ಳುವರು. "ನಿಷ್ಕರುಣಿಯಾಗಿ ಪೋಪೆನೆಂಬ ಬಗೆಯುಳ್ಳೊಡನಿಬರುಂ ಕೊಂದು ಪೋಗೆಂದು" ಪರಿಪರಿಯಾಗಿ ಕೇಳಿಕೊಂಡು ಬಲವಂತದಿಂದ ಪಟ್ಟ ಕಟ್ಟಿ ಅವನನ್ನು ಸೆರೆಯಲ್ಲಿಡುವಂತೆ ಇಟ್ಟು ಸದಾ ಕಾವಲಿಟ್ಟು ಅವನು ಎಲ್ಲೂ ಅಲುಗಾಡದಂತೆ ರಾಜ್ಯ ಭಾರ ಮಾಡಿಸಿದರು. ಅಲ್ಲಿಯೇ ಅವನಿಗೊಬ್ಬ ಮಗನು ಹುಟ್ಟುವನು. ಆ ಮಗ ಶ್ರೇಷ್ಠನೂ; ಪರಾಕ್ರಮಿಯೂ ಆಗಿದ್ದನು. ಶ್ರೀಧರಾಚಾರ್ಯ ಅವನಿಗೆ ಪಟ್ಟಗಟ್ಟಿ ತಾನು ಮುಕ್ತಿಯನ್ನರಸಿ ಸೆರೆಬಿಡಿಸಿದ ಪಕ್ಷಿಯಂತೆ ಮರಳಿ ನೋಡದೇ ಓಡಿ ಹೋಗಿ ಮತ್ತೆ ಜಿನದೀಕ್ಷೆ ಪಡೆದುಕೊಂಡು ತಪಸ್ಸಿಗೆ ನಿಂತು ನಿರ್ವಾಣ ಹೊಂದಿದನು.

ಮಕ್ಕಳಿಲ್ಲದ ರಾಜನೊಬ್ಬ ಅಕಾಲಿಕವಾಗಿ ಮರಣ ಹೊಂದಿ ರಾಜ್ಯಕ್ಕೆ ಮುಂದಿನ ಸಂತತಿ ಇಲ್ಲದ ಕಾರಣಕ್ಕಾಗಿ ತಪಸ್ಸಿಗೆ ಕುಳಿತ. ಅದೇ ಸಂತತಿಯ ಸನ್ಯಾಸಿಯನ್ನು ತಂದು ಅವನಿಗೆ ಒತ್ತಾಯಪೂರ್ವಕವಾಗಿ ಪಟ್ಟಗಟ್ಟಿ, ಅವನಿಂದ ಮತ್ತೆ ರಾಜ ಸಂತತಿಯನ್ನು ಬೆಳೆಸಿಕೊಳ್ಳುವದನ್ನು ನೋಡಿದಾಗ ರಾಜತ್ವ ವಂಶಪಾರಂಪರ್ಯದಿಂದಲೇ ಬರಬೇಕು. ಯಾರು ಬೇಕೆಂದರವರು ರಾಜನಾಗುವಂತಿರಲಿಲ್ಲ. ಅದಕ್ಕೆ ಸಾಮಾನ್ಯ ಜನ ಅವಕಾಶವನ್ನೂ ಕೊಡುತ್ತಿರಲಿಲ್ಲ.

ಸಾಮಾನ್ಯರು ಬಯಸಿದರೆ ಏನೆಲ್ಲ ಮಾಡುತ್ತಾರೆ ಎಂಬುದಕ್ಕೆ ಸಾಕ್ಷಿಯೆಂಬಂತೆ ರಾಜ ಸಂತತಿಯ ಸನ್ಯಾಸಿಯನ್ನು ಮೋಸದಿಂದ ರಾಜ್ಯಕ್ಕೆ ತಂದು ಒತ್ತಾಯಪೂರ್ವಕವಾಗಿ ಅವನಿಗೆ ರಾಜಪಟ್ಟ ಕಟ್ಟಿ ಸಂಸಾರಿಯನ್ನಾಗಿಸುತ್ತಾರೆ. ಆ ಸನ್ಯಾಸಿಯ ಸಂತತಿಯಿಂದಲೇ ಮುಂದೆ ಆ ರಾಜ ಪರಂಪರೆ ಮುಂದುವರೆಯುತ್ತದೆ. ಇದು ಸಾಮಾನ್ಯನ ಸಾಂಘಿಕ ಶಕ್ತಿ.

ಹರಿಶ್ಚಂದ್ರ ಕಾವ್ಯ

ಮುನಿಯ ಹಟ – ಸಾಮಾನ್ಯರ ಗೋಳು:

ಇಂದ್ರನ ಒಡ್ಡೋಲಗದಲ್ಲಿ ವಸಿಷ್ಠ ವಿಶ್ವಾಮಿತ್ರರ ವಾಗ್ವಾದದ ನಂತರದಲ್ಲಿ ವಿಶ್ವಾಮಿತ್ರ ಮುನಿ ಹರಿಶ್ಚಂದ್ರ ಮಹಾರಾಜನನ್ನು ಹೇಗಾದರೂ ಮಾಡಿ ಅನೃತವನ್ನಾಡಿಸುವೆನು ಎಂದು ಹಟ ತೊಡುವನು ಅದಕ್ಕಾಗಿ ನಾನಾ ತೆರನಾದ ಪ್ರಯತ್ನಗಳನ್ನು ಆರಂಭಿಸುವನು.

ಹರಿಶ್ಚಂದ್ರನ ತೇಜೋವಧೆಗಾಗಿ ಕಾಯುತ್ತಿದ್ದ ವಿಶ್ವಾಮಿತ್ರರಿಗೆ ಅವನ ರಾಜ್ಯ ಅತ್ಯಂತ ಸುಭಿಕ್ಷುವಾಗಿದ್ದು ಹೀಗೆ ಕಾಣುತ್ತದೆ.

ಒಂದೆರಡು ಹಳ್ಳಿ ಹಿರಿಯೂರ ಮನ್ನಣೆಯ ಜನ
ವೆಂದಿಲ್ಲ ವನಧಿಪರ್ಯಂತ ವಸುಧೆಯ ವಿಪ್ರ
ವೃಂದ ಮೊದಲಷ್ಟಾದಶಪ್ರಜೆಯ ಸಂಕುಳಂ ಕಡೆಯೆನಲು ಸಲೆ ಸರ್ವರ
ಕುಂದೆಡರು ಬಡತನ ನಿರೋಧವಪಕೀರ್ತಿಗಳ
ನೆಂದುವುಂ ಕಾಣನೆಂದೆಂಬ ಬಿರುದಿನ ಹಾಹೆ
ಹೊಂದೊಡರೊಳಪ್ಪುದಾ ಭೂಭುಜಂಗೆಂಬಾಗಳೆನ್ನುಱೆಕೆಯಾಯ್ತೆಂದನು (೩–೯)

ಯಾವುದೋ ಒಂದೆರಡು ಹಳ್ಳಿ, ಪಟ್ಟಣಗಳಲ್ಲಿನ ಜನರಷ್ಟೇ ಅಲ್ಲ, ಸಮುದ್ರಪರ್ಯಂತವಾಗಿ ಭೂಮಂಡಲದಲ್ಲೆಲ್ಲ ಬ್ರಾಹ್ಮಣರನ್ನೂ ಒಳಗೊಂಡಂತೆ ಅಷ್ಟಾದಶ ಪ್ರಜೆಗಳ ಸಮೂಹವೆಲ್ಲ ಹರಿಶ್ಚಂದ್ರ ಮಹಾರಾಜನನ್ನು ಹೊಗಳುವವರೇ. ರಾಜ್ಯದಲ್ಲಿ ಎಲ್ಲಿ ಒಂದು ಕಡೆಯೂ ಕಷ್ಟಗಳಾಗಲೀ, ಬಡತನವಾಗಲೀ, ಕೊರತೆಗಳಾಗಲೀ ಯಾವುದರ ಬಾಧೆಯೂ ಇರಲಿಲ್ಲ. ರಾಜ್ಯದೆಲ್ಲೆಡೆಯೂ ರಾಜನನ್ನು ಧರ್ಮಾತ್ಮನೆಂದೇ ಪರಿಗಣಿಸಲಾಗುತ್ತಿತ್ತೇ ಹೊರತಾಗಿ ರಾಜನ ಬಗ್ಗೆ ಎಲ್ಲಿಯೂ ಅಪಕೀರ್ತಿಯ ಸುಳಿವೂ ಸಹ ಇರಲಿಲ್ಲ. ಹರಿಶ್ಚಂದ್ರನ ನಾಡಿನ ಸಮೃದ್ಧತೆ, ಜನ ಮಾನಸದಲ್ಲಿ ಹರಿಶ್ಚಂದ್ರನ ಬಗೆಗಿರುವ ಗೌರವಾದರಗಳನ್ನು ಗಮನಿಸಿದ ವಿಶ್ವಾಮಿತ್ರ ಹೇಗಾದರೂ ಮಾಡಿ ಅವನ ವ್ಯಕ್ತಿತ್ವಕ್ಕೆ ಕಳಂಕ ತರಬೇಕೆಂದು ತಂತ್ರ ರೂಪಿಸುವನು.

ಮುಳಿದು ಮೃಗಸಂಕುಳಂಗಳನು ಹುಟ್ಟಿಸಿ ನಾಡ
ಬೆಳೆಗಳಂ ಕೆಡಿಸಿ ಕೇಡಿಂಗೆ ಬೆಂಡಾಗಿ ಜನ
ವಳವಳಿದು ಬಾಯ್ಬಿಟ್ಟು ದೂಜೆದಡೆಕೇಳ್ದು ಸೈರಿಸಲಾಜದಾ ಹುಯ್ಯಲ

ಬಳಿವಿಡಿದು ಬೇಟಿಂಗೆಯ್ತಂದ ಭೂಪಾಲಕನ
ನೆಳೆತಟಂ ಮಾಡಿತೆಗೆದೆನ್ನಾಶ್ರಮಕ್ಕೊಯ್ದು
ಬಳಿಕ ನೋಡುವೆನವನ ಸತ್ಯಗಿತ್ಯದ ಬಲುಹನೆಂದ ವಿಶ್ವಾಮಿತ್ರನು (೩–೧೧)

ಹೀಗೆ ವಿಶ್ವಾಮಿತ್ರನು ತನ್ನ ತಪೋಬಲದಿಂದ ರಾಜ್ಯದಲ್ಲಿ ಕ್ರೂರ ಮೃಗಗಳನ್ನು ಸೃಷ್ಟಿಸಿ, ಬೆಳೆಗಳನ್ನು ನಾಶಪಡಿಸಬೇಕು ಕಾಡು ಪ್ರಾಣಿಗಳ ಹಾವಳಿಗೆ ದಿಕ್ಕೆಟ್ಟ ಜನ ರಾಜನಿಗೆ ಮೊರೆ ಇಡುವರು. ಪ್ರಜೆಗಳ ಕಷ್ಟ ನೋಡಲಾಗದೆ ಹರಿಶ್ಚಂದ್ರ ಮಹಾರಾಜ ಬೇಟೆಗೆಂದು ಕಾಡಿಗೆ ಬರುವನು. ಆಗ ರಾಜನನ್ನು ಮರಳು ಮಾಡಿ ತನ್ನಾಶ್ರಮಕ್ಕೆ ಕರೆತಂದು ಅವನ ಸತ್ಯ ನಿಷ್ಠೆ ಪರೀಕ್ಷಿಸಬೇಕೆಂದು ವಿಶ್ವಾಮಿತ್ರ ಯೋಜನೆ ರೂಪಿಸಿಕೊಂಡನು. ಅದೇ ರೀತಿಯಾಗಿ ತಮಗೆ ಸಿದ್ಧಿಸಿದ ಉತ್ಪತ್ತಿ ಮಂತ್ರವನ್ನು ಹೇಳಿಕೊಂಡು ನೀರನ್ನು ಮಂತ್ರಿಸಿ ದಿಕ್ಕು ದಿಕ್ಕಿಗೆ ಚೆಲ್ಲುವರು. ಕೂಡಲೇ ನಾನಾ ತೆರನಾದ ಜಾತಿಯ ಮೃಗ ಪಕ್ಷಿಗಳು ಹುಟ್ಟಿದವು. ವಿಶ್ವಾಮಿತ್ರ ಮುನಿಗಳು ಅವುಗಳಿಗೆಲ್ಲ 'ದೇಶಮಂಗೋಳಿಡಿಸಲು' ಆಜ್ಞೆ ಮಾಡಿದರು.

ವಿಶ್ವಾಮಿತ್ರರ ಆಜ್ಞೆ ಫಲಿತಗೊಂಡು ಎಲ್ಲವೂ ಜನ ಸಾಮಾನ್ಯರನ್ನು ನಾನಾ ವಿಧವಾಗಿ ಕಾಡಲಾರಂಭಿಸಿದವು.

ಮೊಳೆದ ಬೀಜವನು ಕ್ರಿಮಿಕೀಟಕಂಗಳು ಸಸಿಯ
ನೆಳೆಹುಲ್ಲೆಗಳು ಹೊಡೆಯನೆರಳೆಗಳು ಸವಿದಂಟು
ಗಳನಾವುಗಳು ತೆನೆಗಳಂ ಗಿಳಿ ನವಿಲು ಕೊಂಚೆ ಮೊದಲಾದ ಖಗತತಿಗಳು
ಉಳಿದ ಬೆಳೆಯಂ ನಕುಲ ಹೆಗ್ಗಣಂಗಳು ಕಾವ
ಬಳವಂತರೆಲ್ಲರಂ ಸರ್ಪಸಂತತಿ ತಿಂದು
ತಳಪಟಮಾಡಿ ನಾಡೆಲ್ಲಮಂ ಗೋಳಿಡಿಸುತಿರ್ದುವೇವಣ್ಣಿಸುವೆನು

ಬೆಳೆಯ ದೆಸೆಯಿಂತಾಯಿ ತುಳಿದ ತೋಟದ ಗೆಡ್ಡೆ
ಗೆಳಸು ಹಂದಿಗೆ ಹವಣು ಹಣ್ಣು ಕಾಯ್ಕಬ್ಬಗಳ
ನಳಿಲು ನೀಲಲೀಯವುದಕದೊಳಾವೆ ಮೊಸ್ಮೊಸಳೆಗಳ ಭಯಂ ಘನವಾದುದು ।
ಎಳೆಗಜುಗಳಂ ತೋಳನಾಕಳಂ ಹುಲಿ ಮೊಱೆ
ಸುಳಿವವರನಮ್ಮಾವು ಕರಡಿ ಕಾಳ್ಕೋಣಂ ಗ
ಳುಳಿಯಲೀಯದಿರೆ ನಾಡೆದ್ದು ಬಾಯ್ಬಿಟ್ಟುದೂಱಲು ಹರಿದರವನಿಪತಿಗೆ ॥ (೩–೫೯,೬೦)

ಹೀಗೆ ವಿಶ್ವಾಮಿತ್ರರ ಕಪಟಬೀಜವು ಮೊಳೆತು ಹೊಲಗದ್ದೆಗಳಲ್ಲಿ ಮೊಳೆತ ಬೀಜಗಳನ್ನು ಕ್ರಿಮಿಕೀಟಗಳು ತಿಂದವು. ಸಸಿಗಳನ್ನು ಎಳೆಯಹುಲ್ಲೆಗಳು ತಿಂದವು. ತೆನೆಗಳನ್ನು ಗಿಳಿ, ನವಿಲು, ಕೊಂಚೆ ಮುಂತಾದ ಪಕ್ಷಿಗಳು ತಿಂದವು. ಉಳಿದ ಬೆಳೆಯನ್ನು ಇಲಿ, ಹೆಗ್ಗಣಗಳು ತಿಂದು ಮುಗಿಸಿದವು. ಬೆಳೆ ಕಾಯುವ ಜನರನ್ನು ಹಾವುಗಳು ಕಚ್ಚಿದವು. ತೋಟದಲ್ಲಿನ ಗಡ್ಡೆ, ಗೆಣಸುಗಳನ್ನು ಹಂದಿಗಳು ತಿಂದು ಹಾಳು ಮಾಡಿದವು. ಹಣ್ಣು ಕಾಯಿ ಕಬ್ಬುಗಳು ಅಳಿಲುಗಳ ಪಾಲಾದರೆ, ನೀರಲ್ಲಿ ಮೊಸಳೆಗಳ ಭಯ

ಹೆಚ್ಚಾಯಿತು. ಎಳೆಗರುಗಳನ್ನು ತೋಳಗಳು, ಹಸುಗಳನ್ನು ಹುಲಿಗಳೂ ತಿಂದವು. ಕರಡಿ ಕಾಡುಕೋಣಗಳು ದಾರಿಹೋಕರ ಮೇಲೆ ದಾಳಿ ಮಾಡಿ ಅವರನ್ನು ಕೊಂದವು.

ಇಲ್ಲಿ ಗಮನಿಸಬೇಕಾದದ್ದು ಮುಖ್ಯವಾಗಿ ಎರಡು ಸಂಗತಿಗಳು ಒಂದನೆಯದು – ರಾಜನಾದ ಹರಿಶ್ಚಂದ್ರನ ರಾಜ್ಯ ಅತ್ಯಂತ ಸುಭಿಕ್ಷುವಾಗಿತ್ತು. ಹಳ್ಳಿ, ಪಟ್ಟಣಗಳೆನ್ನದೆ ಎಲ್ಲೆಡೆಯೂ ತಮ್ಮ ರಾಜ ಹರಿಶ್ಚಂದ್ರನನ್ನು ಕೊಂಡಾಡುವವರೆ. ಎಲ್ಲಿಯೂ ಬಡತನ, ಕಷ್ಟಕಾರ್ಪಣ್ಯ, ಕೊರತೆಗಳಾವುವು ಇಲ್ಲದಂತೆ ಬ್ರಾಹ್ಮಣಾದಿಯಾಗಿ ಹದಿನೆಂಟು ಜಾತಿಯ ಜನರೆಲ್ಲ ಸಮೃದ್ಧವಾದ ಬದುಕನ್ನು ಸಾಗಿಸುತ್ತಿದ್ದರು. ಹಾಗಾಗಿಯೇ ರಾಜ ಹರಿಶ್ಚಂದ್ರ ಜನ ಸಾಮಾನ್ಯರ ಬದುಕನ್ನು ಹಸನುಗೊಳಿಸುತ್ತ. ಜನ ಮಾನಸದಲ್ಲಿ ಅಚ್ಚಳಿಯದ ಸ್ಥಾನ ಹೊಂದಿದ್ದ. ರಾಜ ಹರಿಶ್ಚಂದ್ರನಿಗೆ ಪ್ರಜೆಗಳ ರಕ್ಷಣೆಯೇ ಧರ್ಮವಾಗಿತ್ತು. ಅಂಥವನನ್ನು ಮುನಿಯೊಬ್ಬ ಕಳಂಕಿತನನ್ನಾಗಿಸಲು ಹಟ ತೊಡುವದು ವಿಪರ್ಯಾಸ.

ಮುನಿಲೋಕ ಹಿತವನ್ನು ಬಯಸಬೇಕು. ಧರ್ಮ ರಕ್ಷಣೆ ಮಾಡಬೇಕಾಗಿದ್ದ ಮುನಿ, ರಾಜನ ಮೇಲಿನ ಹಟಕ್ಕೋಸ್ಕರ ನಾನಾ ತೆರನಾದ ಕ್ರೂರ ಪ್ರಾಣಿಗಳನ್ನು ಸೃಷ್ಟಿಸಿ ಜನರನ್ನು ಗೋಳಾಡಿಸುವನು. ಹೀಗೆ ನೇರವಾಗಿ ವಿನಾಕಾರಣ ಸಾಮಾನ್ಯರನ್ನು ಹಿಂಸಿಸುವದು ವಿಶ್ವಾಮಿತ್ರನ ಉದ್ದೇಶವಲ್ಲವಾದರೂ, ಒಬ್ಬ ರಾಜನನ್ನು ತಲುಪಲು ಮುನಿ ಆ ನಾಡಿನ ಜನರನ್ನು ಆಯ್ದುಕೊಳ್ಳುವನು. ಆದರೆ ಎಲ್ಲರಿಗೂ ಧರ್ಮದ ಬಗ್ಗೆ ಹೇಳುವ ಮುನಿ ಜನರೆಲ್ಲ ಸುಭಿಕ್ಷುವಾಗಿ ಯಾವ ತೊಂದರೆಯೂ ಇಲ್ಲದೇ ಬದುಕುತ್ತಿದ್ದಾಗ ಅವರನ್ನು ನಾನಾ ತೆರನಾಗಿ ಕಾಡುವದು ಯಾವ ಧರ್ಮ ? ಯಾವ ತಪ್ಪೂ ಮಾಡದ ಆ ನಾಡಿನ ಜನರಿಗೆ ಹೀಗೆ ಮುನಿ ತೊಂದರೆಯನ್ನುಂಟು ಮಾಡುವದು ಯಾವ ಧರ್ಮಕ್ಕೂ ಸಲ್ಲದ ವಿಷಯ. ತನ್ನ ತಪಸ್ಸಿನ ಶಕ್ತಿಯನ್ನು ಹೀಗೆ ಅಮಾಯಕ, ಅಸಹಾಯಕ ಸಾಮಾನ್ಯನ ಮೇಲೆ ತೋರ್ಪಡಿಸುವದು ಶೋಭಾಯಮಾನವಾಗಲಿ, ಸಾಧುವಾಗಲಿ ಅಲ್ಲ. ಈ ಇಡೀ ವೃತ್ತಾಂತವನ್ನು ನೋಡಿದಾಗ ಮುನಿಯಾದವನು ತನ್ನ ಕಾರ್ಯಸಾಧನೆಗಾಗಿ ನಿರಪರಾಧಿ ಪ್ರಜೆಗಳನ್ನು ರಾಜನನ್ನು ಕಾಡುವದು ಎಷ್ಟರ ಮಟ್ಟಿಗೆ ಸರಿ ? ಎಂಬ ಪ್ರಶ್ನೆ ಮೂಡುತ್ತದೆ.

ಈ ತೆರನಾಗಿ ನಾನಾ ತೆರನಾದ ಸಂಕಷ್ಟಗಳನ್ನು ಜನಸಾಮಾನ್ಯರು ಅನುಭವಿಸುವಂತಾಯಿತು. ಜನರಿಗೆ ಪರಿಹಾರೋಪಾಯ ಮಾರ್ಗಗಳೇ ಕಾಣದಾದಾಗ ರಾಜನೇ ತಮ್ಮನ್ನ ಕಾಪಾಡುವನೆಂಬ ನಂಬಿಕೆಯಿಂದ ರಾಜನಲ್ಲಿಗೆ ಹೋಗಿ ತಮ್ಮ ಅಳಲನ್ನು ಈ ರೀತಿಯಾಗಿ ತೋಡಿಕೊಳ್ಳುವರು.

ತರದ ಬಾಧೆಗಳಿಲ್ಲ ಬಿಟ್ಟಿಯೂಳಿಗವಿಲ್ಲ
ಪರನೃಪರ ಭಯವಿಲ್ಲ ಸಾಲದಂಡಲೆಯಿಲ್ಲ
ನೆರೆಯೂರ ಕದನವಿಲ್ಲೇನೆಂಬೆನದ್ಭುತವ ಖಗಮೃಗದ ಕಾಟದಿಂದ
ಧರೆಯೊಳಗೆ ಬೆಳಸಿಲ್ಲ ಬಿತ್ತಿಲ್ಲ ನೀರಿಲ್ಲ
ತರಹರಿಸಿ ಹದುಳವಿರಲಿಲ್ಲೆಮ್ಮ ದುಃಖಮಂ
ಪರಹರಿಸಬೇಕು ಚಿತ್ತೈಸು ಬಲ್ಲಹಯೆಂದು ಭೂಪನಂ ಮೊಱೆಯಿಟ್ಟುದು

(೩–೬೪)

ಇಷ್ಟು ದಿನ ಎಲ್ಲರಿಗೂ ಕೆಲಸವಿದ್ದದ್ದರಿಂದ ಯಾರಿಗೂ ವ್ಯಥೆ ಇರಲಿಲ್ಲ. ಸಾಲದ ಚಿಂತೆಯಿರಲಿಲ್ಲ. ಬೇರೆ ರಾಜರು ಬೇರೆ ಊರಿನವರು ಬಂದು ದಾಳಿಗೈಯ್ಯುವರೆಂಬ ಭಯವಿರಲಿಲ್ಲ. ಹೀಗೆ ನಾಡು

ಸುಭಿಕ್ಷುವಾಗಿ ಜನ ನಿಶ್ಚಿಂತರಾಗಿದ್ದಾಗ ನಾಡು ಕ್ರೂರ ಪ್ರಾಣಿಗಳ ಕಾಟಕ್ಕೆ ನಲುಗುತ್ತದೆ. ಕ್ರೂರ ಪ್ರಾಣಿ ಪಕ್ಷಿಗಳ ದಾಳಿಯಿಂದಾಗಿ ನಾಡಲ್ಲಿ ಬೆಳೆ, ಬಿತ್ತನೆ, ನೀರಿಲ್ಲದೆ ಬದುಕು ದುಸ್ತರಗೊಂಡಿದ್ದು ದುಃಖಪರಿಹರಿಸಿ ನಮ್ಮ ಬಾಳನ್ನು ಉತ್ತಮಗೊಳಿಸಬೇಕೆಂದು ರಾಜನಲ್ಲಿ ಜನರೆಲ್ಲ ಮೊರೆಯಿಡುತ್ತಾರೆ. ಹರಿಶ್ಚಂದ್ರ ಮಹಾರಾಜನು ಜನರಿಗೆಲ್ಲ ಸಮಾಧಾನಿಸಿ ಧನಧಾನ್ಯಗಳನ್ನು ಕೊಟ್ಟು ಪ್ರಜೆಗಳನ್ನು ಸಂತೈಸುತ್ತಾನೆ.

ಹೀಗೆ ಧರ್ಮವನ್ನು ಕಾಪಾಡಬೇಕಾದ ಮುನಿಯೊಬ್ಬ ದುಸ್ತರಗೊಳಿಸಿದ ಜನ ಸಾಮಾನ್ಯರ ಬದುಕನ್ನು ರಾಜನೊಬ್ಬ ಹಸನುಗೊಳಿಸುವುದು ರಾಜನ ಅಂತಃಸತ್ವವನ್ನು ಧರ್ಮದ ಅರಾಜಕತೆಯನ್ನು ತೋರ್ಪಡಿಸುತ್ತದೆ. ಯಾರದ್ದೋ ಕಾರಣಕ್ಕಾಗಿ ಮುನಿಯೊಬ್ಬ ಜನಸಾಮಾನ್ಯರನ್ನು ಕಾಡುವದು, ಹಿಂಸಿಸುವದನ್ನು ಯಾವ ಧರ್ಮವಾಗಲಿ, ದೇವರಾಗಲಿ ಕಾವ್ಯದುದ್ದಕ್ಕೂ ವಿರೋಧಿಸದಿರುವದು ಸೋಜಿಗದ ಸಂಗತಿ, ಒಬ್ಬನ ಸತ್ಯ ಪರೀಕ್ಷೆಗಾಗಿ ಇಷ್ಟೊಂದು ಜನಸಾಮಾನ್ಯರನ್ನು ಕಷ್ಟಕ್ಕೀಡುಮಾಡುವದು ಧರ್ಮವಲ್ಲ ಎಂಬುದನ್ನು ಕವಿ ಮರೆತಂತೆ ಕಾಣುತ್ತದೆ. ಆ ಕೊರತೆ ನೀಗಿಸಲು ರಾಜನಿಂದ ಜನಸಾಮಾನ್ಯರಿಗೆ ಸಹಾಯ ಮಾಡಿಸುವನು.

ಮುನಿ ಎದುರು ರಾಜನ ಶರಣಾಗತಿ:

ಧರ್ಮ ಮತ್ತು ಪ್ರಭುತ್ವ ಸಮಾಜದ ಶಕ್ತಿ ಕೇಂದ್ರಗಳು. ಕೆಲವೊಮ್ಮೆ ಪ್ರಭುತ್ವ ಧರ್ಮದ ಮೇಲೆ ಹಿಡಿತ ಸಾಧಿಸಿದರೆ, ಮತ್ತೊಮ್ಮೆ ಧರ್ಮಪ್ರಭುತ್ವವನ್ನು ಮಣಿಸುತ್ತದೆ. ಧರ್ಮ ಮತ್ತು ಪ್ರಭುತ್ವಗಳು ಒಂದಕ್ಕೊಂದು ಒಮ್ಮೆ ಪೂರಕವಾಗುತ್ತಾ ಮತ್ತೊಮ್ಮೆ ಪೋಷಕವಾಗುತ್ತಾ ಮಗದೊಮ್ಮೆ ಮಾರಕವಾಗುತ್ತಾ ಬಂದಿರುವದನ್ನು ಚರಿತ್ರೆಯುದ್ದಕ್ಕೂ ಕಾಣುತ್ತೇವೆ. ಅಂಥದೇ ಒಂದು ಉದಾಹರಣೆಯನ್ನಿಲ್ಲಿ ಕಾಣಬಹುದು.

ಹರಿಶ್ಚಂದ್ರ ಕಾವ್ಯದುದ್ದಕ್ಕೂ ಮುನಿಯೊಬ್ಬ ತನ್ನ ಹಟ ಸಾಧನೆಗಾಗಿ ನಿರಂತರವಾಗಿ ರಾಜನನ್ನು ಬಗ್ಗಿಸಲು ಪ್ರಯತ್ನಿಸುವದನ್ನು ಕಾಣುತ್ತೇವೆ. ಅದರಲ್ಲೂ ಹೊಲತಿಯರ ಪ್ರಸಂಗದಲ್ಲಿ ಹರಿಶ್ಚಂದ್ರ ಮಹಾರಾಜ ವಿಶ್ವಾಮಿತ್ರ ಮುನಿಯ ಸೃಷ್ಟಿಯಾದ ಹೊಲತಿಯರನ್ನು ಥಳಿಸಿದ್ದು ಮುನಿಗೆ ಕ್ರೋಧವನ್ನುಂಟುಮಾಡಿರುತ್ತದೆ. ಅದಕ್ಕೆ ವಿಶ್ವಾಮಿತ್ರ ಮುನಿ ಹರಿಶ್ಚಂದ್ರನಿದ್ದೆಡೆಗೆ ತಾನೇ ಬರುತ್ತಾನೆ. ಮುನಿಯನ್ನು ಬರಮಾಡಿಕೊಂಡು ವಂದಿಸಿದ ರಾಜನನ್ನು ವಿಶ್ವಾಮಿತ್ರ ಮುನಿ ಒದ್ದು ಆರ್ಭಟಿಸುತ್ತಾನೆ.

ಚರಣವೊಂದೇ ನಿನ್ನ ದೆಸೆಯಿಂದ ನೊಂದವೆಲೆ
ಧರಣೀಶ ಕೇಳೆನ್ನ ಮನಬುದ್ಧಿ ಚಿತ್ತಾಧಿ
ಕರಣವೆಲ್ಲಂ ನೊಂದು ಬೆಂದು ಕೂಳ್ಗುದಿಗೊಂಡವಿನ್ನಾಡಿ ತೋಜಲೇಕೆ
ದುರುಳತನವೇನೇನ ಮಾಡಬೇಕದನೆಯ್ದೆ
ಭರವಸದಿ ಮಾಡಿ ಮತ್ತೀ ದುಷ್ಟತನದ ಬೋ
ಸರಿಗತನವೇಕೆಂದೊಡೆಯ ಪೇಳಾಂ ನೆಗಳ್ದದುಷ್ಟತನವೇನೆಂದನು (೮-೪)

ಎಂದು ರಾಜನನ್ನು ಹೀಯಾಳಿಸಿ ಮಾತನಾಡುವನು. ಮುನಿಯ ಕೋಪ ಕಂಡ ಹರಿಶ್ಚಂದ್ರ ಮಹಾರಾಜ ತನ್ನನ್ನೇ ತಾನು ಮುನಿಗೆ ಒಪ್ಪಿಸಿಕೊಳ್ಳುವನು.

ಒಸೆದು ಹುಟ್ಟಿಸುವ ಪಾಲಿಸುವ ಮರ್ದಿಸುವ ಸ
ತ್ವಸಮರ್ಥನೆನಿಪ ತಪ್ಪ ಹೊಜೆಸಿದ

ಟ್ಟಿಸುವಡಿನ್ನುತ್ತರಿಸಿ ಶುದ್ಧನಹುದರಿದಯ್ಯ ನಿಮ್ಮ ಕರುಣದ ತೊಟ್ಟಿಲ
ಹಸುಳೆಯಾಂ ಸರ್ವಾಪರಾಧಿಯಾಂ ತಂದೆ ಕರು
ಣಿಸು ದಯಂಗೆಡದಿರುದ್ರೇಕಿಸದಿರೆಂದು ಪದ
ಬಿಸರುಹದ ಮೇಲೆ ಕೆಡಹಿದನು ನಿಜಮಣಿ ಮಕುಟಮಂಡಿತ ಶಿರೋಂಬುಜವನು
(೮-೧೦)

ಎಂದು ರಾಜ ವಿಶ್ವಾಮಿತ್ರ ಮುನಿ ಎದುರು ಅಸಹಾಯಕನಾಗಿ ತನ್ನ ಪರಿಸ್ಥಿತಿಯನ್ನು ಅವನಿಗೆ ಅರ್ಥೈಸಲು ಪ್ರಯತ್ನಿಸುವನು. ಅದಕ್ಕೆ ವಿಶ್ವಾಮಿತ್ರ ಮುನಿಯು ತನ್ನ ನಲ್ಮೆಯ ಮಕ್ಕಳನ್ನು "ಅಬಲೆಯರೆಂದು ತಿಳಿದು ಸಾಯುವಂತೆ ಸದೆಬಡಿದೆಯಾ?" ಎಂದು ಕೇಳುವನು. ಅದಕ್ಕೆ ಹರಿಶ್ಚಂದ್ರ ಮಹಾರಾಜ.

ಬೇಗದಲಿ ನಿಮ್ಮ ಮನೆಯವರೆಂದು ಮೊಱೆಯಿಟ್ಟ
ರಾಗಿ ಕರುಣಿಸಿ ಬಿಟ್ಟೆನಲ್ಲದಿರ್ದಡೆ ಕೆಡಹಿ
ಮೂಗನರಿದೆಳೆ ಹೂಟೆಯಂ ಕಟ್ಟಿ ಹೆಟ್ಟವೆಳಸುವೆ ಬಟ್ಟಬಯಲೊಳೆನಲು
(೮-೧೩)

ಎಂದು ರಾಜ ಹೇಳಿದ್ದಕ್ಕೆ ವಿಶ್ವಾಮಿತ್ರನಿಗೆ ಕೋಪ ಉಂಟಾಗುತ್ತದೆ. 'ಹೊಡೆದ ಕೈಗಳನ್ನು ಕಡಿಯುವೆನು. ನನ್ನ ವಿರುದ್ಧ ಜನ ತಿರುಗಿಬಿದ್ದರೆ ದೇಶವನ್ನೇ ಸುಡುತ್ತೇನೆ' ಎಂದು ಪರಿಪರಿಯಾಗಿ ಹರಿಶ್ಚಂದ್ರ ರಾಜನ ವಿರುದ್ಧ ಮುನಿ ಹರಿಹಾಯುವನು. ಮುನಿಯ ರೌದ್ರಾವತಾರವನ್ನು ಕಂಡು ಬೆಚ್ಚಿಬಿದ್ದ ಹರಿಶ್ಚಂದ್ರ ಮುನಿಯೆದುರು ವಾದಿಸದೆ ತಲೆಬಾಗುವದೇ ಲೇಸೆಂದು ಯೋಚಿಸುವನು.

ತಱಿಸಂದ ಮುನಿಯ ಕೋಪದ ಕಿಚ್ಚಿನುಬ್ಬರದ
ಬಱುಬನಱಿದತಿ ತೀವ್ರತರವಾಯಿತಿನ್ನು ಕಿಱಿ
ದಱಿಲಿ ತಗ್ಗುವುದಲ್ಲ ಗರ್ವಿಸುವುದುಚಿತವಲ್ಲೆಂದು ವಸುಧಾಧೀಶನು
ಅಱಿಯದನ್ಯಾಯಮಂ ಮಾಡಿದೆನಿದೊಮ್ಮಿಂಗೆ
ನೆಱಿದ ಕೋಪಾಗ್ನಿಯಂ ಬಿಡು ತಂದೆಯೆಂದು ಧರೆ
ಗುಱುವ ಸತಿಸುತವೆರಸಿ ಪೊಡೆವಟ್ಟಡಣಕಿಸಿದನಾಸುರದ ಕೋರಡಿಗನು
(೮-೧೯)

ಅರಿಯದೆ ತಪ್ಪು ಮಾಡಿದೆನು ಕ್ಷಮಿಸಬೇಕೆಂದು ಮುನಿಯನ್ನು ಬೇಡಿಕೊಂಡು ಪತ್ನಿ ಪುತ್ರನೊಂದಿಗೆ ನೆಲದ ಮೇಲೆ ಸಾಷ್ಟಾಂಗ ನಮಸ್ಕಾರ ಮಾಡಿ ಧರ್ಮಕ್ಕೆ ಶರಣಾಗುವನು. ಸರಿ-ತಪ್ಪುಗಳೇನೇ ಇದ್ದರೂ ರಾಜನಾಗಿಯೂ ಮುನಿಗಳೆದುರು ಸಾಮಾನ್ಯನಾಗಿ ಮನೆಯ ಯಜಮಾನನಂತೆ ತಾನು ತಲೆಬಾಗಿ, ಯಾವ ತಪ್ಪು ಮಾಡದ ತನ್ನ ಪತ್ನಿ, ಪುತ್ರರನ್ನೂ ಮುನಿಯೆದುರು ತಪ್ಪೊಪ್ಪಿಕೊಳ್ಳುವಂತೆ ಮಾಡುವನು. ವಿಶ್ವಾಮಿತ್ರ ಮುನಿಗೆ ಇಲ್ಲಿ ಧರ್ಮಮುಖ್ಯವಲ್ಲ. ಹೇಗಾದರೂ ಮಾಡಿ ಹರಿಶ್ಚಂದ್ರ ಮಹಾರಾಜನನ್ನು ಅಸತ್ಯನನ್ನಾಗಿ ನಿರೂಪಿಸುವುದೇ ಅವನಿಗೆ ಮುಖ್ಯವಾಗಿದೆ.

ಇದು ಧರ್ಮದ ಇನ್ನೊಂದು ಮುಖ. ಧರ್ಮದ ವಿಚಾರಗಳು ಮುನಿಯ, ರಾಜಸತ್ತೆಯ ಇಷ್ಟಕ್ಕೆ ತಕ್ಕಂತೆ ಬದಲಾಗುವ ಗುಣ ಹೊಂದಿರುತ್ತದೆ. ಮುನಿ, ರಾಜರಂಥವರು ಧರ್ಮದ ಮೇಲೆ ಆತ್ಯಂತಿಕ ಹಿಡಿತ ಹೊಂದಿರುತ್ತಾರೆ. ಅವರವರಿಗೆ ತಕ್ಕಂತೆ ಧರ್ಮವನ್ನು ಬದಲಾಯಿಸಿಕೊಳ್ಳುವ ಸಾಮರ್ಥ್ಯ ಹೊಂದಿರುತ್ತಾರೆ. ಅಂತೆಯೇ ಇಲ್ಲಿ 'ಮುನಿಯೊಬ್ಬ ತನಗೆ ಬೇಕಾದ ಹಾಗೆ ಧರ್ಮದ ಮಾತಾಡಿ ರಾಜನೊಬ್ಬನನ್ನು ತನಗೆ ಬೇಕಾದ ರೀತಿಯಲ್ಲಿ ಶರಣಾಗತನನ್ನಾಗಿಸಿಕೊಳ್ಳುವದು ಧರ್ಮದ ವಿಪರ್ಯಾಸವೇ ಸರಿ.

ಜನ ಸಾಮಾನ್ಯರ ಶಕ್ತಿ ಮತ್ತು ಮುನಿ:

ವಿಶ್ವಾಮಿತ್ರ ಮುನಿ ಮೋಸದಿಂದ ಹರಿಶ್ಚಂದ್ರ ಮಹಾರಾಜನ ಸಕಲ ರಾಜ್ಯ, ಚತುರಂಗಸೇನೆ, ಸಕಲ ಭಂಡಾರ, ರಾಜಧಾನಿ, ಆಜ್ಞೆಯನ್ನೀಯುವ ಅಧಿಕಾರ, ಬಿರುದುಬಾವಲಿಗಳ ಜೊತೆ ಸಪ್ತದ್ವೀಪಗಳನ್ನು ರಾಜ ಅವನ ಹೆಂಡತಿ, ಮಗನ ವಸ್ತ್ರ, ಒಡವೆಗಳನ್ನೂ ಕಸಿದುಕೊಂಡನು. ಇದಷ್ಟೇ ಅಲ್ಲದೆ ಹರಿಶ್ಚಂದ್ರ ಮಹಾರಾಜ ಬಹುಸುವರ್ಣಯಾಗದ ಸಂದರ್ಭದಲ್ಲಿ ವಿಶ್ವಾಮಿತ್ರರಿಗೆ ದಕ್ಷಿಣೆಯಾಗಿ ಕೊಟ್ಟಿದ್ದ ಒಂದು ಸುವರ್ಣ ರಾಶಿಯನ್ನು ವಿಶ್ವಾಮಿತ್ರರು ಇಲ್ಲೇ ಬಿಟ್ಟು ಹೋಗಿದ್ದು ಅದನ್ನು ಈಗಲೇ ಕೊಡಬೇಕು. ಇಲ್ಲದಿದ್ದರೆ ಸಾಲವಾಗಿ ಆ ಹಣವನ್ನು ನಲವತ್ತೆಂಟು ದಿನಗಳಲ್ಲಿ ತೀರಿಸಬೇಕೆಂದು ಶರತ್ತನ್ನಿಡುವನು. ಅದಕ್ಕೂ ಹರಿಶ್ಚಂದ್ರ ಒಪ್ಪಿಕೊಳ್ಳುವನು ಆಗ ವಿಶ್ವಾಮಿತ್ರ ಮುನಿ ಅವನಿಗೆ ಹೀಗೆ ಆದೇಶಿಸುವನು.

ಮೇಲಿನ್ನು ನಾನಾಳ್ವ ದೇಶದೊಳು ಬೇಡದಂ
ತೋಲ್ಯೆಸದಂತೆ ಕೃಷಿ ವ್ಯವಸಾಯಮಂ ಮಾಡ
ದಾಲಯಂಗಟ್ಟಿರದೆಯವಧಿಯೊಳು ಹೊನ್ನ ನಿರ್ಣಯಿಸುವುದು ಬೇಗವೆನಲು

(೮-೫೮)

ಅದಕ್ಕೆ ರಾಜ ವಿಶ್ವಾಮಿತ್ರನ ಆಳ್ವಿಕೆಗೊಳಪಡದ ಕಾಶೀಕ್ಷೇತ್ರ, ಪಂಪಾಕ್ಷೇತ್ರಗಳು ಸೇರಿದವುಗಳಲ್ಲವಾದ್ದರಿಂದ ಕಾಶೀಕ್ಷೇತ್ರಕ್ಕೆ ಹೋಗಿ ನಿಮ್ಮ ಹಣ ತೀರಿಸುವೆನೆಂದು ಯಾವ ಅಳುಕೂ ಇಲ್ಲದೆ ಸ್ಥಿತ ಪ್ರಜ್ಞನಾಗಿ ಹೊರಡಲನುವಾಗುವನು. ಆಗ ವಿಶ್ವಾಮಿತ್ರನು ಹರಿಶ್ಚಂದ್ರನಿಗೆ ರಾಜಧಾನಿಗೆ ಬಂದು ಪ್ರಜೆಗಳಿಗೆ ತಿಳಿ ಹೇಳುವಂತೆ ಹೇಳುವನು.

ಧರಣೀಶ ಬಂದು ಹೋಗೊಂದು ಮಾತುಂಟೆಂದು
ಕರೆದು ನಿನ್ನಂ ನಂಬಿ ನಾನು ರಾಜ್ಯಂ ಗೆಯ್ವ
ಭರದೊಳಱಿಯದೆ ಹೋದಡೆಲೆ ಮರುಳೆ ನಿನಗೆಲ್ಲಿಯರಸುತನವೆಂದು ಮೂಱಿ
ಪುರದ ಬಾಗಿಲ ಬಲಿದು ಗವನಿಗೊಂಡಬ್ಬರಿಸಿ
ಪರಿಜನಂ ಕಲುಗುಂಡ ಕಱಿಯದಿರರೆನ್ನನೊ
ಯ್ದಿರಸಿ ಸರ್ವವನೊಪ್ಪುಗೊಟ್ಟು ಹೋಗೆಂದಡವನಿಪನದನೊಡಂಬಟ್ಟನು

(೮-೬೫)

ವಿಶ್ವಾಮಿತ್ರರ ಈ ಮಾತಿನಿಂದ ವಿಶ್ವಾಮಿತ್ರರಿಗೆ ಜನಸಾಮಾನ್ಯರ ಶಕ್ತಿಯ ಬಗ್ಗೆ ಅರಿವಿತ್ತು ಮತ್ತು ಸಾಮಾನ್ಯ ಜನ ತಾವು ನಂಬಿದ ರಾಜನಿಗೆ ಅತ್ಯಂತ ನಿಷ್ಠರಾಗಿ ಇರುವರೆಂಬುದರ ಕಲ್ಪನೆ ವಿಶ್ವಾಮಿತ್ರನಿಗಿತ್ತು. ಅದಕ್ಕೆ ವಿಶ್ವಾಮಿತ್ರ ಹರಿಶ್ಚಂದ್ರ ಮಹಾರಾಜನಿಗೆ ತನ್ನ ನಾಡಿನ ಜನರಿಗೆ ತಾನೇ ಬಂದು ವಿಶ್ವಾಮಿತ್ರನಿಗೆ ತಾನೇ ಅರಸುತನ ಕೊಟ್ಟಿದ್ದಾಗಿ ಹೇಳಿ ತನಗೆ ವ್ಯವಸ್ಥೆ ಮಾಡಿ ಹೋಗಬೇಕೆಂದು ಹೇಳುವನು.

ಸಾಮಾನ್ಯರ ಶಕ್ತಿ ಇದೇ. ಯಾವಾಗಲೂ ರಾಜ ಸಾಮಾನ್ಯರ ಹಿತ ಕಾಯುವನು ಎಂಬುದು ಸಾಮಾನ್ಯ ತಿಳುವಳಿಕೆ. ಆದರೆ ರಾಜನಿಗೆ ಸಂಕಷ್ಟವೊದಗಿದಾಗ ರಾಜನ ಹಿತ ಕಾಪಾಡುವ ಶಕ್ತಿಯನ್ನು ಸಾಮಾನ್ಯನು ಹೊಂದಿರುವನು. ಎಂಥದ್ದೇ ಸಂದರ್ಭ ಬಂದರೂ ರಾಜನಿಗೆ ನಿಷ್ಠನಾಗಿರುವವನು ಸಾಮಾನ್ಯನೇ ಎಂಬುದೂ ಅಷ್ಟೇ ಸತ್ಯವಾದದ್ದು. ತಮ್ಮ ರಾಜನ ರಾಜಸತ್ತೆಯನ್ನು ಉಳಿಸಲು ಜನ ಸಾಮಾನ್ಯರು ಮುನಿಯನ್ನೂ ಎದುರು ಹಾಕಿಕೊಳ್ಳಲು ಹಿಂದೆ ಮುಂದೆ ನೋಡುವದಿಲ್ಲ. ತಮ್ಮ ರಾಜನಿಗೆ ಕೇಡುಂಟು ಮಾಡಿದವರಿಗೆ ಬುದ್ಧಿ ಕಲಿಸುವ ಸಾಹಸವನ್ನು ಜನಸಾಮಾನ್ಯರು ಮಾಡೇ ಮಾಡುವರೆಂಬುದು ಸಾಮಾನ್ಯ ತಿಳುವಳಿಕೆ.

ಸಾಮಾನ್ಯರು ಮುನಿಯನ್ನು ವಿರೋಧಿಸುವ ಪರಿ:

ಹರಿಶ್ಚಂದ್ರ ಮಹಾರಾಜ ಜನರನ್ನು ಕಾಡು ಮೃಗಗಳ ಕಾಟದಿಂದ ದೂರಮಾಡಲು ಅರಣ್ಯಕ್ಕೆ ಹೋಗಿರುತ್ತಾನೆ. ಆಗ ವಿಶ್ವಾಮಿತ್ರರು ಮೋಸದಿಂದ ಹರಿಶ್ಚಂದ್ರನ ರಾಜ್ಯ, ಸಕಲ ಸಂಪತ್ತನ್ನೂ ಕಸಿದುಕೊಳ್ಳುವರು. ರಾಜ್ಯ ಪಡೆದ ಮುನಿ ತಾನೇ ರಾಜ್ಯಾಧಿಪತಿಯಾಗಿ ಅಯೋಧ್ಯೆಗೆ ಬರುವ ಸಂದರ್ಭ.

ದೂರದಿಂದಲೇ ಸೈನಿಕ ವಾದ್ಯ ಘೋಷಗಳನ್ನು ಕೇಳಿ ಅಯೋಧ್ಯೆಯ ಜನ ತಮ್ಮ ರಾಜನೇ ಬಂದನೆಂದು ಅತ್ಯಂತ ಸಡಗರ ಸಂಭ್ರಮ ಸಂತೋಷದಿಂದ ಊರನ್ನು ತಮ್ಮನ್ನು ಸಿಂಗರಿಸಿಕೊಂಡು ರಾಜನನ್ನು ಬರಮಾಡಿಕೊಳ್ಳಲು ಊರ ಹೊರಗೆ ಹೋಗುವರು. ರಥದಲ್ಲಿ ಬರುತ್ತಿದುದು ರಾಜನಲ್ಲ ಯಾವುದೋ ಮುನಿ ಎಂದು ತಿಳಿದ ಜನರಿಗೆ ಆಘಾತವಾಗುತ್ತದೆ. ಹಿಂದೆ ಮುನಿಗಳೊಂದಿಗೆ ತಮ್ಮ ರಾಜ ಹರಕು ಬಟ್ಟೆ ತೊಟ್ಟು, ಕಾಲ್ನಡಿಗೆಯಲ್ಲಿ ಸಾಮಾನ್ಯನಾಗಿ ಬರುವದನ್ನೂ, ರಾಜ ಎಲ್ಲವನ್ನೂ ವಿಶ್ವಾಮಿತ್ರ ಮುನಿಗೆ ಕೊಟ್ಟ ವಿಚಾರವನ್ನೂ ಪ್ರಜೆಗಳು ತಿಳಿಯುವರು. ಆಗ ಪ್ರಜೆಗಳೆಲ್ಲ ವಿಶ್ವಾಮಿತ್ರ ಮುನಿಯನ್ನು ನಾನಾ ತೆರನಾಗಿ ನಿಂದಿಸುವರು. ಕೇಳಿದ್ದನ್ನು ಬೇಸರವಿಲ್ಲದೆ ಕೊಡುವ ದೊರೆಯು ಸಿಕ್ಕಿದನೆಂದು ರಾಜಧಾನಿಯಿಂದ ಹೊರಹೋದಾಗ ನಿಷ್ಕಾರಣವಾಗಿ ದಾನವನ್ನು ಬೇಡಿ ಸರ್ವಸ್ವವನ್ನೂ ದೋಚುವುದೇ? ನಿಷ್ಕರುಣಿ, ಪಾಪಿ, ನಿರ್ದಯ, ಮೂರ್ಖ, ನೀಚ, ನೀರಸ, ನಿರ್ಗುಣ ಎಂದು ಬಯ್ಯುವರು. 'ನಮ್ಮನ್ನೆಲ್ಲ ಕೊಂದೆ ನೀನು. ನಮ್ಮ ಒಡಲಲ್ಲಿ ಉರಿಯುವ ಬೆಂಕಿ ನಿನ್ನನ್ನು ಇರಿಯದೇ ಇದ್ದೀತೆ!' ಎಂದು ಹಲುಬುವರು. ವಿಶ್ವಾಮಿತ್ರ ತಮ್ಮ ಪಾಲಿಗೆ ವಿಶ್ವದ ಮೃತ್ಯು; ಎನ್ನುವರು. ಜನಸಾಮಾನ್ಯರು ಮುನಿಗೇ ಧರ್ಮ ಹೇಳುವರು. ಇಲ್ಲಿ ಮುನಿಗಿಂತ ಹೆಚ್ಚಾದ ದಾನ ಧರ್ಮದ ಪರಿಕಲ್ಪನೆ ಸಾಮಾನ್ಯರಿಗೆ ಇದೆ ಎನ್ನಿಸುತ್ತದೆ. ದಾನವೆಂಬುದನ್ನು ಯಾವಾಗ, ಎಲ್ಲಿ ಕೇಳಬೇಕೆನ್ನುವುದನ್ನು ಧರ್ಮ ನಿರ್ಧರಿಸುತ್ತದೆ ವಿಶ್ವಾಮಿತ್ರ ಮುನಿಗೆ ಮೀರಿದ ಧರ್ಮವನ್ನು ಜನಸಾಮಾನ್ಯರು ಬದುಕುತ್ತಿದ್ದುದು ತಿಳಿಯುತ್ತದೆ.

ಜಡೆಗಳೆದು ಮಕುಟಮಂ ನಾರಸೀರೆಯನು ತೋಜಿ
ದುಡಿಗೆಯಂ ರುದ್ರಾಕ್ಷ ಮಾಲೆಯಂ ಕಳೆದು ಮಣಿ
ದೊಡಿಗೆಯಂ ಕಂದಮೂಲವನು ಬಿಟ್ಟೂಟವಂ ದರ್ಭೆಯಂ ಬಿಟ್ಟಸಿಯನು

ಅಡವಿಯಂ ಬಿಟ್ಟು ನಗರಿಯ ಭಸಿತವಂ ಬಿಟ್ಟು
ಕಡುಸುಗಂಧಗಳ ಜಿತೇಂದ್ರಿಯತ್ವವ ಬಿಟ್ಟು
ಮಡದಿಯರ ಜಗವಱಿಯೆ ಕೂಡಲು ವ್ರತಕ್ಕೆ ಮುಪ್ಪಾಯ್ತೆ ಮುಪ್ಪಿನೊಳೆಂದರು

ಮಲೆತು ಬೆನ್ನಟ್ಟುವ ಮಹಾರಿಷಡ್ವರ್ಗವಂ
ಗೆಲಲಱಿಯದವನಾವ ಹಗೆಗಳಂ ಗೆಲುವೆ ನಿ
ನ್ನೊಳಗೆ ಕರಣವ ಸಂತವಿಡಲಱಿಯದವನಾವ ದೇಶವಂ ಸಂತವಿಡುವೆ
ಸಲೆ ತಪಸ್ತೇಜದಿಂ ಪುರುಪಾರ್ಥ ಕೋಶಮಂ
ಬಳಸಲಱಿಯದನಾವ ತೇಜದಿಂ ಕೋಶಮಂ
ಬಳಸಿದಪೆ ಕಂಗೆಟ್ಟು ಕಡುಪಾಪಿ ಮೂರ್ಖಕೌಶಿಕ ಕೇಳು ಕೇಳೆಂದರು (೯-೮,೯)

ಜನರಿಗೆ ವಿಶ್ವಾಮಿತ್ರ ಮುನಿತ್ವ ಬಿಟ್ಟು ತಮ್ಮ ಅರಸನಿಂದ ಪಡೆದ ರಾಜತ್ವವನ್ನು ಅನುಭವಿಸುತ್ತಿರುವದಕ್ಕೆ ವಿರೋಧವಿದೆ. ಅದನ್ನು ಜನಸಾಮಾನ್ಯರು ಮುನಿತ್ವ ಮತ್ತು ರಾಜತ್ವಗಳ ಚಿಹ್ನೆಗಳನ್ನಿಟ್ಟುಕೊಂಡು ವಿಶ್ವಾಮಿತ್ರನಿಗೆ ಹಂಗಿಸುವರು. ಜಟೆಯನ್ನು ತೆಗೆದು ಕಿರೀಟ ಧಾರಣೆ ಮಾಡುವದು, ನಾರುಬಟ್ಟೆಗೆ ಬದಲಾಗಿ ಪೀತಾಂಬರವನ್ನುಡುವದು, ರುದ್ರಾಕ್ಷಿ ಮಾಲೆಯನ್ನು ಕಿತ್ತೆಸೆದು ಮಣಿಭೂಷಣಗಳನ್ನು ಧರಿಸುವದು, ಕಂದ ಮೂಲ ಆಹಾರ ಬಿಟ್ಟು ಮೃಷ್ಟಾನ್ನ ತಿನ್ನುವದು, ದರ್ಭೆಯ ಕಟ್ಟನ್ನು ತೆಗೆದು ಕತ್ತಿ ಹಿಡಿಯುವದು, ಅಡವಿಗೆ ಬದಲಾಗಿ ರಾಜಧಾನಿಯಲ್ಲಿರುವದು, ವಿಭೂತಿಗೆ ಬದಲಾಗಿ ಸುಗಂಧ ದ್ರವ್ಯಗಳನ್ನು ಹಚ್ಚಿಕೊಳ್ಳುವದು, ಜಿತೇಂದ್ರಿಯತ್ವ ತೊರೆದು ಸಂಸಾರ ಕಟ್ಟಿಕೊಳ್ಳುವದು ಇವೆಲ್ಲ ಜನಸಾಮಾನ್ಯರು ತಿಳಿದ ಮುನಿ ಧರ್ಮ ಮತ್ತು ರಾಜಧರ್ಮವನ್ನು ಹೇಳುವ ಭೌತಿಕ ಪ್ರಪಂಚ. ಸಾಮಾನ್ಯರ ಬದುಕಲ್ಲಿ ಮುನಿ, ರಾಜ ಇಬ್ಬರೂ ಗೌರವಾನ್ವಿತರು. ಮುನಿ ತನ್ನ ಸ್ಥಾನದಲ್ಲಿ ರಾಜ ತನ್ನ ಸ್ಥಾನದಲ್ಲಿದ್ದರೇ ಜನಮನಕ್ಕೆ ತೃಪ್ತಿ. ಸ್ಥಾನಪಲ್ಲಟವಾದರೆ ಜನರಲ್ಲಿ ಆತಂಕ ಮನೆ ಮಾಡುತ್ತದೆ. ಸಾಮಾನ್ಯರ ಪ್ರಪಂಚದಲ್ಲಿ ರಾಜನೊಬ್ಬ ಮುನಿಯಾಗುವುದನ್ನು ಸಹಜವಾಗಿ ಒಪ್ಪಿಕೊಳ್ಳುವ ಜನ ಮುನಿಯೊಬ್ಬ ರಾಜನಾಗಿ ಸಂಸಾರಕ್ಕೆ ಮುಖ ಮಾಡುವದು ಯಾವ ಕಾಲಕ್ಕೇ ಆದರೂ ಸಮಾಜದ ಆಕ್ಷೇಪಣೆ ಗುರಿಯಾಗುತ್ತದೆ. ಕಾರಣ ಜನ ಸಾಮಾನ್ಯರಿಗೆ ಧರ್ಮವೆಂದರೆ ವ್ಯಕ್ತಿ ಸಂಸಾರಕ್ಕೆ ವಿಮುಖನಾಗಿ ಮಾಡುವ ಅಧ್ಯಾತ್ಮಸಾಧನೆಯೇ ಹೊರತು ಸಂಸಾರಸ್ಥನಾಗಿದ್ದು ಬದುಕಿನ ಜಂಜಾಟದಲ್ಲಿ ನವೆಯುವದಲ್ಲ. ಅದಕ್ಕೆ ವಯಸ್ಸಿಗಷ್ಟೇ ಅಲ್ಲ ವ್ರತಕ್ಕೂ ಮುಪ್ಪು ಆವರಿಸುವ ಮೂಲಕ ಅರಳು ಮರುಳುತನದಿಂದ ಇಂಥ ಕೆಲಸ ಮಾಡಿವೆ ಎಂದು ಹೀಯಾಳಿಸುವರು.

ಮುಂದುವರಿದು ಮುನಿಧರ್ಮದಿಂದ ಬದುಕು ಗೆಲ್ಲದವನು ರಾಜಧರ್ಮದ ಮೂಲಕ ಗೆಲ್ಲಲು ಸಾಧ್ಯವೇ? ಎಂಬ ಪ್ರಶ್ನೆ ಮಾಡುವರು. ಅರಿಷಡ್ವರ್ಗಗಳ ಗೆಲುವು ಇಂದ್ರಿಯಗಳ ನಿಯಂತ್ರಣ ತಪೋಬಲದಿಂದ ಪುರುಷಾರ್ಥಗಳಿಕೆ - ಇವು ಮುನಿಧರ್ಮ ಕ್ರಿಯೆಗಳು. ರಣರಂಗದಲ್ಲಿ ಶತ್ರುಗಳನ್ನು ಗೆಲ್ಲುವದು, ರಾಜ್ಯವನ್ನು ಹಿಡಿತದಲ್ಲಿ ಇಟ್ಟುಕೊಳ್ಳುವದು, ಬಲದಿಂದ ಅರ್ಥಸಂಚಯ ಗಳಿಸುವದು ಇವೆಲ್ಲ ರಾಜಧರ್ಮದ ಪ್ರತೀಕಗಳು. ಮುನಿಯನ್ನು ಮುನಿಸ್ಥಾನದಲ್ಲಿ ಯೋಗಿ ದೃಷ್ಟಿಯಿಂದ ನೋಡಬಯಸುವ

ಸಾಮಾನ್ಯರು ರಾಜನನ್ನು ಭೋಗಿದೃಷ್ಟಿಯಿಂದಲೇ ನೋಡಬಯಸುವರು. ಸ್ಥಾನಪಲ್ಲಟವನ್ನು ಜನ ಎಂದಿಗೂ ಅಷ್ಟು ಸರಳವಾಗಿ ಒಪ್ಪಿಕೊಳ್ಳಬಯಸುವದಿಲ್ಲ.

ಹೀಗೆ ವಿಷಯ ಯಾವುದೇ ಇರಲಿ, ವ್ಯಕ್ತಿ ಯಾರೇ ಇರಲಿ ಸಾಮಾನ್ಯರು ಮಾತಿನ ಮೂಲಕ ತಮ್ಮ ವಿರೋಧಾಭಿಪ್ರಾಯವನ್ನು ವ್ಯಕ್ತಪಡಿಸುತ್ತಲೇ ಇರುತ್ತಾರೆ. ಬದಲಾವಣೆ ಯಾವುದೇ ಆಗಿರಲಿ ಸಾಮಾನ್ಯ ಆ ಪ್ರಕ್ರಿಯೆಯನ್ನು ಅಷ್ಟು ಸರಳವಾಗಿ ಒಪ್ಪಿಕೊಳ್ಳುವದಿಲ್ಲ. ಅದರಲ್ಲೂ ಧರ್ಮದ ವಿಷಯಕ್ಕೆ ಬಂದಾಗ ಸಾಮಾನ್ಯ ಯಾರ ಅಂಜಿಕೆ ಅಳುಕೂ ಇಲ್ಲದೇ ನೇರ ಮಾತಿನ ಮೂಲಕ ತಾ ನಂಬಿದ ಧರ್ಮವನ್ನೇ ಪ್ರತಿಷ್ಠಾಪಿಸಬಯಸುತ್ತಾನೆ. ಇದನ್ನೇ ಹರಿಶ್ಚಂದ್ರ ಕಾವ್ಯವು ನಿರೂಪಿಸುತ್ತದೆ.

ಕುಮಾರವ್ಯಾಸ ಭಾರತ

ಕೃಷ್ಣ – ಕೃಷ್ಣಭಕ್ತಿ

೧೦ನೆಯ ಶತಮಾನದ ಕಾವ್ಯಗಳು ಅಥವಾ ಆ ಪ್ರಭಾವದಿಂದ ಸೃಷ್ಟಿಗೊಂಡ ತರುವಾಯದ ಕಾವ್ಯಗಳು ಲೌಕಿಕ ಮತ್ತು ಆಗಮಿಕ ಎಂದು ಎರಡು ಹೋಳಾಗಿ ಪ್ರತ್ಯೇಕ ರಚಿಸಲ್ಪಟ್ಟವು. ಹೆಸರೇ ಸೂಚಿಸುವಂತೆ ಲೌಕಿಕ ಕಾವ್ಯವು ವಾಸ್ತವ ಬದುಕಿಗೆ ಹತ್ತಿರವಾಗಿದ್ದು ನಿತ್ಯ ಜೀವನದ ಬಹುಮುಖಗಳ ಅನಾವರಣವಿಲ್ಲಿ ಮೂಲ ಆಶಯವಾಗಿರುತ್ತದೆ. ಆಗಮಿಕ ಕಾವ್ಯ ಧರ್ಮವೊಂದರ ಸಂಪ್ರದಾಯ, ಆಚರಣೆಗಳ ವಿಧಿವಿಧಾನ ಆ ಧರ್ಮದ ಸಂದೇಶ – ಎಲ್ಲವನ್ನೂ ಒಳಗೊಂಡಿರುತ್ತದೆ. ಎರಡೂ ಕಾವ್ಯಗಳಲ್ಲಿ ಪಾತ್ರಗಳ ಪರಿವೇಷಣವಿದ್ದರೂ ಮುಂಚೆ ಹೇಳಿದಂತೆ ಮೊದಲನೆಯ ವಿಭಾಗಕ್ಕೆ ಲೌಕಿಕ ಬದುಕು ಮುಖ್ಯವಾಗಿದ್ದರೆ ಎರಡನೆಯ ವಿಭಾಗಕ್ಕೆ ಬದುಕನ್ನು ಉದ್ದೇಶಿತ ಧರ್ಮದ ಮುಖೇನ ಉನ್ನತೀಕರಿಸುವ ಉದ್ದೇಶವಿರುತ್ತದೆ.

ನಾರಣಪ್ಪನ ಭಾರತ ಕಾವ್ಯ ಲೌಕಿಕ, ಅಲೌಕಿಕತೆಗಳೆರಡನ್ನೂ ಸಮೀಕರಿಸುತ್ತದೆ. ಇದು ಕೌರವ ಪಾಂಡವರ ವಾಸ್ತವ ಬದುಕು–ಭಾವನೆಗಳನ್ನೆಲ್ಲ ಹೇಳುತ್ತ ಹೋಗುತ್ತದೆ. ಸಂಗಡವೇ ಇದು ಕೃಷ್ಣ ಮಹಿಮೆ ಮತ್ತು ಧರ್ಮದ ತಿರುಳನ್ನು ಬಿಂಬಿಸುವ ಉದ್ದೇಶವನ್ನು ಇಟ್ಟುಕೊಂಡಿದೆ. ಕೃಷ್ಣನ ವ್ಯಕ್ತಿತ್ವದ ಮುಖಾಂತರ ಲೌಕಿಕ ಆಗಮಿಕಗಳೆರಡನ್ನೂ ನಾರಣಪ್ಪ ಸಾಧಿಸುವ ಉದ್ದೇಶವಿಟ್ಟುಕೊಂಡಿರುವಂತೆ ತೋರುತ್ತದೆ.

ಎಸ್.ವ್ಹಿ.ರಂಗಣ್ಣನವರಿಗೆ ಕುಮಾರವ್ಯಾಸನ ಕಾವ್ಯೋದ್ದೇಶದಲ್ಲಿ ಕೃಷ್ಣನೇ ಪ್ರಧಾನವಾಗಿ ತೋರುತ್ತಾನೆ. (ಕುಮಾರವ್ಯಾಸ–೪೫). ಆದರೆ ನಾರಣಪ್ಪನಿಗೆ ಮುಖ್ಯವಾಗಿ ಹೇಳಬೇಕೆಂದಿರುವುದು ಭಾರತ ಕಥೆಯನ್ನು. ಕೃಷ್ಣನನ್ನೇ ಮುಖ್ಯವಾಗಿ ತರಬೇಕೆಂದಿದ್ದರೆ ಇದು 'ಕೃಷ್ಣ ಕಥೆ'ಯಾಗಬಹುದಿತ್ತು. 'ಕೃಷ್ಣ ಕಾವ್ಯ'ವಾಗಬಹುದಿತ್ತು, 'ಕೃಷ್ಣ ವಿಜಯ'ವಾಗಬಹುದಿತ್ತು. ಹಾಗೇನಾದರೂ ಆಗಿದ್ದರೆ ಕುಮಾರವ್ಯಾಸನ ಈ ಕಾವ್ಯ ವಿಷ್ಣು ಪುರಾಣದ ಮಾದರಿಯಲ್ಲಿ 'ಕೃಷ್ಣ ಪುರಾಣ'ವಾಗುತ್ತಿತ್ತು.

ಕೃಷ್ಣ ಮಹಿಮೆ ಮತ್ತು ಕೃಷ್ಣನ ಸಾಮಾನ್ಯತ್ವ ಎರಡೂ ಕನ್ನಡ ಭಾರತದಲ್ಲಿ ಸಮಸಮವಾಗಿ ಬಂದಿವೆ. ಶ್ರೀಕೃಷ್ಣ ಎಲ್ಲರನ್ನೂ ಎಲ್ಲವನ್ನೂ ನಿಯಂತ್ರಿಸುವ ಸರ್ವಶಕ್ತನಾಗಿ ತೋರುತ್ತಾನೆ. ಕೃಷ್ಣಮಹಿಮೆಯ ಹಲವು ನಿದರ್ಶನಗಳು ಭಾರತದ ತುಂಬ ಇವೆ. ಅವನು ಉಂಗುಷ್ಟದಿಂದ ಭೂಮಿಯೊತ್ತಿದರೆ ದುರ್ಯೋಧನನ ಸಿಂಹಾಸನದ ಗೊಣಸು ಮುರಿದು ಅವನು ಸಿಂಹಾಸನದಿಂದ ಉರುಳಿ ಹರಿಯ ಚರಣಗಳ ಮೇಲೆ ಬಿದ್ದ(ಸಭಾಪರ್ವ). ಹೀಗೆಯೇ ಭೂಮಿಯನ್ನು ಕಾಲಿಂದ ಒತ್ತಿ ಅರ್ಜುನನ ರಥ

ಐದಂಗುಲದಷ್ಟು ಹೂಳಿ ಅರ್ಜುನನನ್ನು ಕರ್ಣನ ಸರ್ಪಾಸ್ತ್ರದಿಂದ ರಕ್ಷಿಸಿದ(ಕರ್ಣಪರ್ವ), ಸಂಧಾನಕ್ಕೆ ಬಂದ ಕೃಷ್ಣನನ್ನು ಕಟ್ಟಿಹಾಕಲು ದುರ್ಯೋಧನ ಬಯಸಿದರೆ ಕೂಡಿದ ಸಭೆಗೆ ತನ್ನ ವಿಶ್ವರೂಪ ತೋರಿದ (ಉದ್ಯೋಗ ಪರ್ವ). ಹೀಗೇ ಯುದ್ಧವನ್ನೊಲ್ಲೆನೆಂದು ಕೈಚೆಲ್ಲಿ ಕುಳಿತ ಅರ್ಜುನನಿಗೆ ಗೀತೋಪದೇಶ ಮಾಡಿದ ಸಂದರ್ಭದಲ್ಲಿಯೂ ವಿಶ್ವರೂಪ ದರ್ಶನ ಮಾಡಿಸಿದ (ಭೀಷ್ಮಪರ್ವ). ಜೂಜಿನ ಸಂದರ್ಭದಲ್ಲಿ ದ್ರೌಪದಿಯ ಮೊರೆಯನ್ನು ದ್ವಾರಾವತಿಯಲ್ಲಿ ರುಕ್ಮಿಣಿ ಸತ್ಯಭಾಮೆಯರೊಂದಿಗೆ ಲೆತ್ತವಾಡುತ್ತಿದ್ದ ಕೃಷ್ಣ ಕೇಳಿಸಿಕೊಂಡು ಅವಳಿಗೆ ಅಕ್ಷಯಾಂಬರ ಕರುಣಿಸಿದ(ಸಭಾಪರ್ವ). ಇಂಥ ಕೃಷ್ಣ ಮಹಿಮೆಗಳು ಕೃಷ್ಣ ಭಕ್ತರನ್ನು ಸೆಳೆದು ಅವನನ್ನು ಆರಾಧಿಸುವಂತೆ ಮಾಡುತ್ತವೆ.

ಕುಮಾರವ್ಯಾಸನ ಕಾವ್ಯ ನಿರ್ಮಾಣದ ಹೊತ್ತಿಗೆ ಉತ್ತರ ಭಾರತದಲ್ಲಿ ವ್ಯಾಪಕ ಹರವು ಪಡೆದುಕೊಂಡಿದ್ದ ಕೃಷ್ಣ ಭಕ್ತಿ ಕರ್ನಾಟಕಕ್ಕೂ ಕಾಲಿಕ್ಕಿ ವೈಷ್ಣವ ಭಕ್ತಿಯ ಒಂದು ಕವಲಾಗಿ ಭಕ್ತರಲ್ಲಿ ಸಂಚಲನ ಮೂಡಿಸಿತ್ತು. ೯ನೆಯ ಶತಮಾನದ ಆದಿಭಾಗದಲ್ಲಿ ಶಂಕರಾಚಾರ್ಯರಿಂದ ಹೊರಟ ಅದ್ವೈತ ಸಿದ್ಧಾಂತದ ಭಕ್ತಿ, ೧೨ನೆಯ ಶತಮಾನದ ಮಧ್ವಾಚಾರ್ಯರ ದ್ವೈತ ಸಿದ್ಧಾಂತ, ೧೩ನೆಯ ಶತಮಾನದ ರಾಮಾನುಚಾರ್ಯರ ವಿಶಿಷ್ಟಾದ್ವೈತ ಸಿದ್ಧಾಂತಗಳ ಮುಖಾಂತರ ಹರಿದು ಭಕ್ತಿಯೆಂಬುದು ಶ್ರೀಸಾಮಾನ್ಯನ ಮನೆಯ ಬಾಗಿಲಿಗೆ ತಲುಪಿತು. ವಿಶೇಷವಾಗಿ ರಾಮಾನುಜಾಚಾರ್ಯರ ಸಿದ್ಧಾಂತ ಸಾಮಾಜಿಕ ಆವರಣದಲ್ಲಿ ಹೆಚ್ಚಿನ ಬದಲಾವಣೆ ತಂದಿತು. ದೇವರಿಗೆ ಸಂಪೂರ್ಣವಾಗಿ ತನ್ನನ್ನು ತಾನು ಅರ್ಪಿಸಿಕೊಂಡು ಶರಣು ಹೋಗುವ ಪ್ರಪತ್ತಿ ಮಾರ್ಗ ಅತ್ಯಂತ ಸುಲಭದ ಭಕ್ತಿಮಾರ್ಗ ಕ್ರಮಣವೆನ್ನಿಸಿತು. ಇನ್ನೂ ವಿಶೇಷವೆಂದರೆ ಈ ಭಕ್ತಿಮಾರ್ಗವನ್ನು ಎಲ್ಲ ಜಾತಿಯವರೂ ಅನುಸರಿಸಬಹುದೆಂಬ ಪ್ರತಿಪಾದನೆ.

ಮಧ್ಯ ಕಾಲೀನ ಇತಿಹಾಸದಲ್ಲಿ ತೋರ್ಪಟ್ಟ ಈ ಕೃಷ್ಣ ಭಕ್ತಿಯನ್ನು ಹಲವು ಜನ ದಾಸರು ಸಂತರು ಲೋಕಮಾನ್ಯ ಮಾಡಿಕೊಟ್ಟರು. ಈ ಸಂದರ್ಭದಲ್ಲಿ ಧರ್ಮದ ಆಕೃತಿಗಳೆಲ್ಲ ಭಕ್ತಿಯಾಗಿ ಸಾಮಾಜೀಕರಣಗೊಂಡವು. ಆದರೆ ವಿದುರನೊಬ್ಬನನ್ನು ಬಿಟ್ಟು ಯಾವ ಜನಸಾಮಾನ್ಯರಲ್ಲಿಯೂ ಈ ಭಕ್ತಿಯ ಸೆಳಕುಗಳನ್ನು ಕಾಣುವುದಿಲ್ಲ. ವಿದುರ ಕೃಷ್ಣನ ಪರಮ ಭಕ್ತ. ವಿದುರ ದಾಸಿಪುತ್ರನೆಂದರೂ ಕೃಷ್ಣ ಅವನಲ್ಲಿಗೆ ಹೋಗಿ ಹಾಲು ಸ್ವೀಕರಿಸಿದ. ವಿದುರ ತಾಳುವ ಭಕ್ತಿ ಸಂಭ್ರಮ ಅನನ್ಯವಾದುದು. ಅವನು ಮಾಡುವ ಕೃಷ್ಣ ಸಂಕೀರ್ತನೆ ಮತ್ತು ಭಕ್ತಿಪರವಶತೆಗಳೆರಡೂ ಭಕ್ತಿಯ ದರ್ಶನ ಮಾಡಿಕೊಡುತ್ತವೆ.

ವೇದದರಿಕೆಗಳಡಗದುಪನಿಷ
ದಾದಿ ದಿವ್ಯ ಸ್ತುತಿಯ ಗಡಣೆಗೆ
ಹೋದ ಹೊಲಬಳವಡದ ಮುನಿಗಳಮುಖಕೆ ಮನಗುಡದ
ಕಾದಿಕಡಗುವ ತಾರ್ಕಿಕರು ಬೆಂ
ಡಾದರಲ್ಲದೆ ನಿಜವನರಿಯದ
ನಾದಿ ಸಿದ್ಧನ ಬರವ ಕಂಡನು ಬಾಗಿಲಲಿ ವಿದುರ (ಉದ್ಯೋಗ-೮-೯)

ಕೃಷ್ಣಸ್ತುತಿ ಕರ್ನಾಟ ಭಾರತ ಕಥಾಮಂಜರಿಯಲ್ಲಿ ಅಲ್ಲಲ್ಲಿ ಹಲವರ ಬಾಯಿಂದ ಸಾಕಷ್ಟು ವಿವರವಾಗಿಯೇ ಬಂದಿದೆ. ವನವಾಸ ಸಂದರ್ಭದಲ್ಲಿ ಪಾಂಡವರು ಕಾಮ್ಯಕವನದಲ್ಲಿದ್ದಾಗ ಮಾರ್ಕಂಡೇಯಮುನಿ ಪಾಂಡವರೆದುರು ಕೃಷ್ಣನ ಸ್ತುತಿಗೈಯ್ಯುತ್ತಾನೆ. ಗೀತೋಪದೇಶದ ಸಂದರ್ಭದಲ್ಲಿ ಅರ್ಜುನನ ಕೃಷ್ಣಸ್ತುತಿ ಸಾಕಷ್ಟು ಭಾವಪರವಾಶವಾಗಿದೆ. ಹೀಗೆ ಅನೇಕ ಜನರ ಸಂಸ್ತುತಿಯಿದೆ. ಆದರೂ

ಪ್ರಕೃತ ವಿದುರ ಭಕ್ತಿಗೆ ತನ್ನದೇ ಆದ ಮಹತ್ವವಿದೆ. ಇದು ವಿದುರ ಕೃಷ್ಣನಲ್ಲಿರಿಸಿದ ಗಾಢ ಭಕ್ತಿಯನ್ನು ವಿಶದೀಕರಿಸುವಂತೆ ದಾಸಿಪುತ್ರನೆನಿಸಿದ ವಿದುರನಂಥ ಸಾಮಾನ್ಯನಿಗೆ ಭಕ್ತಿಯ ಅಭಿವ್ಯಕ್ತಿಗೆ ಅವಕಾಶ ದೊರೆತು ಸಾಂಪ್ರದಾಯಿಕ ಧರ್ಮವನ್ನು ಸಾಮಾನ್ಯೀಕರಿಸುತ್ತದೆ. ಇಲ್ಲಿರುವ ಅನೇಕ ಕಥಾ ಮೌಲ್ಯಗಳಿಂದ ಸಾಮಾನ್ಯರು ಪಾಠ ಕಲಿಯಬಹುದಾಗಿದೆ.

ಕೃಷ್ಣನ ಮಹಿಮೆಗಳನ್ನವಲಂಬಿಸಿ ತೋರುವ ಕೃಷ್ಣ ಭಕ್ತಿಯ ಮಗ್ಗುಲಲ್ಲಿಯೇ ಕೃಷ್ಣನ ಸಾಮಾನ್ಯತ್ವವೂ ಇದೆ. ಸ್ವತಃ ಕೃಷ್ಣನೇ ತನ್ನ ಸಾಮಾನ್ಯತ್ವವನ್ನು ಒಂದೆಡೆ ಬಿಂಬಿಸುತ್ತಾನೆ. ಕುರುಕ್ಷೇತ್ರಕ್ಕೆ ಮೊದಲು ದುರ್ಯೋಧನನು ಯಾದವ ಸೈನ್ಯವನ್ನು ಆರಿಸಿಕೊಂಡರೆ ಅರ್ಜುನನು ಕೃಷ್ಣನನ್ನು ಆರಿಸಿಕೊಂಡ. ಕೃಷ್ಣ ಅರ್ಜುನನಿಗೆ 'ದೇವನೆಂದೇ ನೀವು ಬಗೆವಿರಿ ದೇವತನ ನಮ್ಮಲ್ಲಿ ಲವವಿಲ್ಲ ಬಂದು ನಿಮ್ಮಲ್ಲೇನು ಮಾಡುವುದು' ಎಂದಿರುವ ಮಾತು ಕೃಷ್ಣನ ವಿನಯವಾಗಿರುವಂತೆಯೇ ಭಕ್ತವೃಂದದ ಸಾಮಿಪ್ಯದಲ್ಲಿರುವ ಪರಿಯೂ ಹೌದು. ವನವಾಸ ಸಂದರ್ಭದಲ್ಲಿ ಪಾಂಡವರ ಭೆಟ್ಟಿಗೆ ಬರುವ ಕೃಷ್ಣ ದಂಡಿಗೆ ಇಳಿದು ಕಾಲ್ನಡಿಗೆಯಲ್ಲೇ ಪಾಂಡವರಿಗೆ ಎದುರಾಗುತ್ತಾನೆ. ದುಃಖತಪ್ತ ದ್ರೌಪದಿಯ ಕಣ್ಣೀರನ್ನು ತನ್ನ ಸೆರಗಿನಿಂದ ಒರಿಸುತ್ತಾನೆ. ಇಂಥದೇ ಆಪ್ತ ಪ್ರಸಂಗವೊಂದು ಉದ್ಯೋಗ ಪರ್ವದ ಎಂಟನೆಯ ಸಂಧಿಯಲ್ಲಿದೆ. ಸಂಧಿಗಾಗಿ ಹಸ್ತಿನಾವತಿಗೆ ಬಂದ ಕೃಷ್ಣನು ವಿದುರನ ಆತಿಥ್ಯ ಸ್ವೀಕರಿಸಿದ ಮೇಲೆ ಹಿರಿಯರ ಭೇಟಿಗೆ ಬರುತ್ತಾನೆ. 'ಹಿರಿಯರಿಗೆ ತಾ ಹಿರಿಯನೆಂಬೀ ಗರುವತನವನು ಬಿಸುಟು ಕುಂತಿಗೆ ಕರವ ಮುಗಿದೆರಗಿದನು' ಕೃಷ್ಣನ ಇಂತಹ ಸಾಮಾನ್ಯತ್ವ, ಸಹೃದಯತೆಗಳೇ ವಿದುರನಂಥವನನ್ನು ಶರಣಾಗತಿಗೊಡ್ಡಿರಲು ಸಾಕು. ಅಂತೆಯೇ ಕೃಷ್ಣ ತನ್ನ ಮನೆಗೆದುರಾಗಿ ಬಂದರೆ ಅವನು ತಾಳುವ ಭಕ್ತಿಯ ಉನ್ಮಾದ, ಭಾವಪರವಶತೆಗಳು ಗಮನಾರ್ಹವೆನಿಸುತ್ತವೆ.

ವಿದುರನೊಬ್ಬನನ್ನುಬಿಟ್ಟು–ಅದೂ ಅವನು ಹಸ್ತಿನಾವತಿಯ ಅರಮನೆಯ ಸಂಪರ್ಕದಲ್ಲಿದ್ದಾನೆಂದು – ಉಳಿದ ಸಾಮಾನ್ಯ ಜನವರ್ಗದೊಂದಿಗೆ ಕೃಷ್ಣನ ಒಡನಾಟವಿಲ್ಲ. ಕಥೆಯ ಒಡಲಲ್ಲಿ ಅದಕ್ಕೆ ಅವಕಾಶವೂ ಇಲ್ಲ.

ಕುಮಾರವ್ಯಾಸ ಭಾರತ ವೈಷ್ಣವ ಪರಂಪರೆಯ ಕಾವ್ಯವೆನಿಸಿದರೂ ಕೃಷ್ಣನಿಲ್ಲಿ ಪ್ರಧಾನ ಪಾತ್ರವಹಿಸಿದರೂ ಇಲ್ಲಿಯ ಧಾರ್ಮಿಕ ವಿಷಯಗಳೆಲ್ಲವೂ ಕೃಷ್ಣ ಪರವಾಗಿಲ್ಲ ಎಂಬುದು ಗಮನಾರ್ಹ. ರಾಜಸೂಯಯಾಗದ ನಂತರ ನಡೆದ ಅಗ್ರಪೂಜೆಯ ಸಂದರ್ಭದಲ್ಲಿ ತೋರ್ಪಡುವ ಶಿಶುಪಾಲನ ನಡುವಳಿಕೆಯೇ ಇದನ್ನು ಸ್ಪಷ್ಟಗೊಳಿಸುತ್ತದೆ. ಯಾಗಾ ನಂತರದಲ್ಲಿ ನಡೆಯುವ ಅಗ್ರ ಪೂಜೆಯೆನ್ನುವುದು ಒಂದು ಧಾರ್ಮಿಕ ವಿಧಾನ. ಕೃಷ್ಣನಿಗೆ ಅಗ್ರಪೂಜೆ ಸಲ್ಲಬೇಕೆಂಬ ತೀರ್ಮಾನವಾದಾಗ ಶಿಶುಪಾಲ ತಾಳಿದ ಮಾತ್ಸರ್ಯ ಕೃಷ್ಣನನ್ನು ವಿರೋಧಿಸುತ್ತದೆ. ಶಿಶುಪಾಲ ತಾನೂ ಯದುವಂಶಕ್ಕೆ ಸಂಬಂಧಪಟ್ಟವನೇ ಆದರೂ ಇಂಥದೊಂದು ಧಾರ್ಮಿಕ ಕ್ರಿಯಾಚರಣೆಯನ್ನು ವಿರೋಧಿಸುತ್ತಾನೆ. ಇದರ ಫಲಿತವೇನೇ ಇರಲಿ ಕೆಲವರಾದರೂ ಇಂಥ ಧಾರ್ಮಿಕ ಆಚರಣೆಗಳನ್ನು ವಿರೋಧಿಸುತ್ತಿದ್ದರೆಂಬುದು ಸ್ಪಷ್ಟ.

ಕುಮಾರವ್ಯಾಸ ಭಾರತ ವೈಷ್ಣವ ಪರಂಪರೆಯ ಕಾವ್ಯವೆನಿಸಿದರೂ ಶಿವಪಾರಮ್ಯವೂ ಇಲ್ಲಿ ಅಧಿಕ ಪ್ರಮಾಣದಲ್ಲಿಯೇ ಇದೆ. ಅರ್ಜುನ ಶಿವನನ್ನು ಕುರಿತು ತಪಸ್ಸು ಮಾಡುವುದು, ಶಿವನು ಅವನ ತಪಸ್ಸಿಗೆ ಮೆಚ್ಚಿ – ಪಾಶುಪತಾಸ್ತ್ರವನ್ನು ಕೊಡುವುದು – ಇವೆಲ್ಲ ಅರಣ್ಯಪರ್ವದಲ್ಲಿ ಸಾಕಷ್ಟು ವಿವರವಾಗಿಯೇ ಬಂದಿವೆ. ಕರ್ಣಪರ್ವದಲ್ಲಿ ಕರ್ಣನೊಂದಿಗೆ ನಾನು ಯುದ್ಧ ಮಾಡಲಾರೆನೆಂದು ಶಲ್ಯ ಹಿಂದೆಗೆದಾಗ ದುರ್ಯೋಧನನು ಅವನ ಮನವೊಲಿಸಲು ಶಿವಭಕ್ತಿಯ ಹಿರಿಮೆ ಸಾರುವ ತ್ರಿಪುರ ಸಂಹಾರದ

ಕಥೆಯನ್ನು ಹೇಳಿ ಬ್ರಹ್ಮನು ಶಿವನಿಗೆ ಸಾರಥಿಯಾಗಿ ತ್ರಿಪುರದಹನ ಮಾಡಿದ ಕಥೆಯನ್ನು ವಿವರಿಸುತ್ತಾನೆ. ಪಾಂಡವರು ಶ್ರೀಕೃಷ್ಣ ಕೃಪೆಯಲ್ಲಿ ಬದುಕು ಸಾಗಿಸಿದರೂ ಅವರು ಶಿವನ ಆರಾಧಕರಾಗಿದ್ದರು (ಭಾರತೀಯ ಸಂಸ್ಕೃತಿ ದರ್ಶನ ಪು.೭೮, ೧೦೭). ಮಹಾಭಾರತದ ಹಲವು ಪಾತ್ರಗಳ ಬಾಯಿಂದ 'ಶಿವಶಿವಾ' ಎಂಬ ಉದ್ಗಾರ ಅತ್ಯಂತ ಸಹಜವಾಗಿ ಅನೇಕ ಸಂದರ್ಭಗಳಲ್ಲಿ ಹೊರಡುತ್ತದೆ.

- ಭೀಮನ ಸಿಂಹಧ್ವನಿಗೆ ಹನುಮಂತನ ಉದ್ಗಾರ – "ಇವನಾರೋ ಮಹಾದೇವ ಪ್ರಚಂಡನಲ" (ಅರಣ್ಯ – ೧೦–೧೩)
- ಹನುಮಂತನ ಬಾಲ ಮಿಸುಕದೆ ಹೋದಾಗ ಅವನ ಸತ್ವಾತಿಶಯಕ್ಕೆ ಶಿವಶಿವಾ' ಎಂದು ಭೀಮನು ಉದ್ಗರಿಸಿದನು. (ಅರಣ್ಯ –೧೦–೨೧)
- ಶಲ್ಯ– "ಕರ್ಣ ಕಾಳೆಗಕೆ ನಾವ್ ಸಾರಥಿಗಳೇ ಶಿವಶಿವಾ" ಎಂದನು (ಕರ್ಣ–೫–೨೧)
- ಕರ್ಣ"ಖೇಳಮೇಳದಲಾಡಿ ದಣಿಯನುಶಿವಶಿವಾ ತನ್ನೊಡನೆ ಕುರುರಾಯ"ಎಂದನು(ಕರ್ಣ–೨೭–೭)
- ಕರ್ಣನ ಅಳಲು "ಸುಯೋಧನ ನೃಪತಿಗಿನ್ನಾಸ್ಪದರ ಕಾಣೆನು ಶಿವಶಿವಾ" (ಕರ್ಣ–೨೭–೮)
- ಜಂಬೂ ಫಲದ ವಿಸ್ಮಯಕ್ಕೆ ಋಷಿಗಳ ಪ್ರತಿಕ್ರಿಯೆ "ಶಿವಶಿವಾ ನಳಿನನಾಭನೆ ಬಲ್ಲ"(ಅರಣ್ಯ–೩–೧೪)
- ದುಶ್ಯಾಸನನು ದ್ರೌಪದಿಯ ಸಿರಿಮುಡಿಗೆ ಕೈಹಾಕಿದಾಗ ಅಲ್ಲಿದ್ದ ಕಾಮಿನಿ ಜನ "ಅಕಟಕಟಾ ಮಹಾಸತಿ ಶಿವಶಿವಾ" ಎಂದು ಚೀರಿದರು. (ಸಭಾ ಪರ್ವ–೬೭)
- ಕೊನೆಗೆ ಶ್ರೀಕೃಷ್ಣನ ಬಾಯಿಂದಲೂ ಶಿವೋಚ್ಚಾರ ಬಂದಿದೆ. ಅರಣ್ಯಪರ್ವದಲ್ಲಿ ಭೀಮನು ಜಂಬೂ ಫಲವನ್ನು ಹರಿದು ಕಣ್ವ ಋಷಿಯ ಕೋಪಕ್ಕೀಡಾಗಬಹುದು ಎಂಬ ಆತಂಕದಲ್ಲಿ ಕೃಷ್ಣನನ್ನು ನೆನೆದರೆ ಪಾಂಡವರಿಗೆ ಬಂದೊದಗಿದ ಕಷ್ಟವನ್ನರಿತ ಕೃಷ್ಣ "ಮಂದಮತಿ ಪವಮಾನಜನ ಕತ । ದಿಂದ ಪಾಂಡು ಕುಮಾರರಿಗೆ ಕೇಡಿಂದು ಬಹುದಾ ಋಷಿಯ ಶಾಪದಿಶಿವಶಿವಾಯೆಂದ"(ಅರಣ್ಯ–೩–೨೧).

ಭಾರತದ ಕೊನೆ ಗದಾಪರ್ವದ ೧೧ನೆಯ ಸಂಧಿಯಲ್ಲಿ ವ್ಯಾಸಮುನಿಯು ನೊಂದ ಧೃತರಾಷ್ಟ್ರನಿಗೆ ಸಮಾಧಾನ ಹೇಳುತ್ತಾನೆ. "ಪಾಂಡವರು ಸುಚರಿತರೆಂದೇ ಕೃಷ್ಣನು ಅವರಿಗೆ ಮರುಳಾದ ಶಿವನು ಮೆಚ್ಚಿ ಅರ್ಜುನನಿಗೆ ಅಸ್ತ್ರವನ್ನು ಕೊಟ್ಟ." ವ್ಯಾಸರ ಈ ಮಾತು ಶ್ರೀಕೃಷ್ಣ – ಶಿವರ ಸಮೀಕಣವಲ್ಲದೆ ಬೇರೇನಲ್ಲ. ಇದುವರೆಗಿನ ಎಲ್ಲ ಹೇಳಿಕೆಗಳು ಧರ್ಮಸಮನ್ವಯವನ್ನೇ ಹೇಳುತ್ತವೆ.

ಆದರೆ ವ್ಯಾಸಭಾರತದಲ್ಲಾಗಲಿ, ಕುಮಾರವ್ಯಾಸ ಭಾರತದಲ್ಲಾಗಲಿ ಒಂದು ಮಾತು ಸ್ಪಷ್ಟವಾಗುವುದಿಲ್ಲ. ಮಹಾಭಾರತದ ಕಾಲಕ್ಕೆ ಜನಸಾಮಾನ್ಯರು ಯಾವಧರ್ಮಾನುಯಾಯಿಗಳಾಗಿದ್ದರು ? ಅವರು ಪೂಜಿಸುವ ದೇವರು ಯಾರಾಗಿದ್ದರು ? ದೊಡ್ಡವರಿಗಿರುವಂತೆ ಸಣ್ಣವರೆನ್ನಿಸಿಕೊಂಡವರಿಗೂ ಒಂದು ಮತವಿರುತ್ತದೆ. ಅವರವೇ ಆದ ಮತಾಚರಣೆಗಳಿರುತ್ತವೆ. ಇಲ್ಲಿ ಅವು ಯಾವವೂ ಕಾಣಿಸಿಕೊಳ್ಳುವುದಿಲ್ಲ. ರಾಜನ ಧರ್ಮವೇ ಪ್ರಜೆಗಳ ಧರ್ಮ ಎನ್ನುವುದು ತಾರ್ಕಿಕ ಸಮಾಧಾನವಾಗಬಹುದಷ್ಟೇ.

ಧರ್ಮೋಪದೇಶ – ನೀತಿ ನಿರೂಪಣೆ:

ಎಲ್ಲಾ ಕಥನಮುಖಿ ಕಾವ್ಯಗಳಲ್ಲಿರುವಂತೆ ಕುಮಾರವ್ಯಾಸ ಭಾರತದಲ್ಲಿಯೂ ಪಾತ್ರಗಳ ಮುಖಾಂತರ, ಘಟನೆಗಳ ಮುಖಾಂತರ ಕಲಿಯಬಹುದಾದ ಪಾಠಗಳೆಷ್ಟೋ ಇವೆ. ಭೀಮನ ಪರೋಪಕಾರ(ಬಕಾಸುರ ವಧೆ) ಅದೇ ಭೀಮನ ದುಷ್ಟಮರ್ದನ(ಕೀಚಕವಧೆ) ಧರ್ಮನ ಸಮಯಾನುಸಾರ ವಿವೇಕ(ಯಕ್ಷ ಪ್ರಸಂಗ), ಪಾಂಡವರು ತೋರಿದ ಶರಣಾಗತ ರಕ್ಷಣೆ, (ದುರ್ಯೋಧನನ ಘೋಷಯಾತ್ರೆ) – ನಾರಣಪ್ಪನ ಭಾರತದಲ್ಲಿ ತೋರುವ ಈ ಎಲ್ಲ ಘಟನಾವಳಿಗಳು ಒಂದೊಂದು ನೀತಿಯನ್ನೇ ಹೇಳುತ್ತವೆ. ಇಡೀ ಮಹಾಭಾರತವೇ ಶಿಷ್ಟರಕ್ಷಣೆಯ ಧ್ಯೇಯ ಹೊತ್ತ ಒಂದು ಮಹಾಪಥ್ಯವಾಗಿದೆ. ಕಥೆಯ ಮೂಲಕ ಹರಿಯುವ ಧರ್ಮಸ್ರೋತವಲ್ಲದೆ ಧರ್ಮೋಪದೇಶಕ್ಕಾಗಿಯೇ ಅನೇಕ ಪ್ರಸಂಗಗಳನ್ನಿಲ್ಲಿ ಸೃಷ್ಟಿಮಾಡಿಕೊಂಡದ್ದಿದೆ. ವಿದುರ ನೀತಿ ಸನತ್‌ಸುಜಾತ ಧರ್ಮ ವಿವೇಚನೆ ನಾರದ ಉಪದೇಶ ಇಲ್ಲೆಲ್ಲ ವ್ಯಕ್ತಿ – ಸಮಾಜಗಳು ಅನುಸರಿಸಬೇಕಾದ ಧರ್ಮಪರ ವಿಚಾರಗಳಿವೆ. ಅದರಲ್ಲಿ ಮನುಷ್ಯ ರೂಢಿಸಿಕೊಳ್ಳಬೇಕಾದ ಸನ್ನಡತೆಯ ಅಂಶಗಳಿವೆ, ಅನೇಕ ಲೋಕೋಕ್ತಿಗಳಿವೆ.

ಕಾವ್ಯದೊಂದಿಗೆ ಧರ್ಮವಿಚಾರಗಳನ್ನು ಹೇಳುವುದು ನಮ್ಮ ಕಾವ್ಯಪರಂಪರೆ ಅನುಸರಿಸಿಕೊಂಡು ಬಂದಿರುವ ಒಂದು ವಿಧಾನ, ಇಂಥ ಸಾತತ್ಯವನ್ನು ಭಾರತೀಯ ಎಲ್ಲಾ ಭಾಷೆಗಳು ಅನುಸರಿಸಿಕೊಂಡು ಬಂದಿವೆ. ಕುಮಾರವ್ಯಾಸ ಭಾರತದಲ್ಲಿ ವಿದುರ ಪಾತ್ರಕ್ಕೆ ಬೇರೆ ಆಯಾಮಗಳಿದ್ದರೂ ವಿದುರನ ಧರ್ಮಪ್ರಜ್ಞೆಗೆ ವಿಫುಲ ಅವಕಾಶವೊದಗಿದೆ. ಹಾಗೆಯೇ ಸನತ್ ಸುಜಾತನು ಧರ್ಮಕುರಿತಾದ ಆಡುವ ಮಾತುಗಳನ್ನು ಅನೇಕ ಧರ್ಮ ವಿವೇಚನೆಗೆ ಅವಕಾಶ ಮಾಡಿಕೊಟ್ಟಿವೆ. ಪ್ರಸ್ತುತ ಧರ್ಮ ನೆಲೆಗೆ ಸಂಬಂಧಪಡುವ ವಿದುರ ಮತ್ತು ಸನತ್ಸುಜಾತರ ಮಾತುಗಳು ಸಂಖ್ಯೆಯಲ್ಲಿ ಹೇರಳವಾಗಿವೆ. ವಿದುರ ನೀತಿಗೆ ಸಂಬಂಧಪಡುವ ಪದ್ಯಗಳು ಸು.೧೩೫ ಇದ್ದರೆ ಸನತ್ಸುಜಾತನಿಗೆ ಸಂಬಂಧಪಡುವ ಪದ್ಯಗಳು ಸು.೧೨೦ ಪದ್ಯಗಳು. ಉದ್ಯೋಗ ಪರ್ವದ ೩–೪ನೆಯ ಸಂಧಿಗಳಲ್ಲಿ ಬರುವ ಈ ಪದ್ಯಗಳು ವಿದುರನವು ಮನುಷ್ಯ ನೀತಿಗೆ ಸಂಬಂಧಿಸಿದ್ದರೆ ಸನತ್ಸುಜಾತನವು ಬ್ರಹ್ಮೋಪದೇಶಕ್ಕೆ ಸಂಬಂಧಿಸಿವುಗಳಾಗಿವೆ. ಸನತ್ಸುಜಾತನ ತತ್ವೋಪದೇಶಕ್ಕೆ 'ಸನತ್ಸುಜಾತೀಯ' ವೆಂದು ಕರೆಯುವ ರೂಢಿಯಿದೆ (ಪುರಾಣನಾಮ ಚೂಡಾಮಣಿ ಪು.೫೯೦). ವಿದುರ ನೀತಿಯಲ್ಲಿ ಲೌಕಿಕ ಮೌಲ್ಯಗಳ ಪ್ರತಿಪಾದನೆಯಿದ್ದರೆ ಸನತ್ಸುಜಾತನ ಮಾತುಗಳಲ್ಲಿ ತಾತ್ವಿಕ ವಿಷಯಗಳೇ ಪ್ರಾಧಾನ್ಯತೆ ಪಡೆಯುತ್ತವೆ. ಜನ ಸಾಮಾನ್ಯರಿಗೆ ಅನ್ವಯಿಸಬಹುದಾದ ಎಷ್ಟೋ ವಿಷಯಗಳನ್ನು ಇಬ್ಬರೂ ಮಂಡಿಸಿದ್ದಾರೆ.

ಸಂಧಿಯ ಮುನ್ನಾದಿನ ಸಂಜಯ ಬಂದು ಹೋದ ತರುವಾಯ ಧೃತರಾಷ್ಟ್ರನು ಕಾಳಗವೋ ಸಂಧಿಯೋ ಏನಾಗುತ್ತದೆ ಭವಿಷ್ಯದಲ್ಲಿ ? ಎಂಬ ದುಗುಡ, ಉದ್ವಿಗ್ನತೆ ಹೊಂದಿ ವಿದುರನನ್ನು ಕರೆಯಿಸಿಕೊಂಡು ತನಗೆ ನಿದ್ರೆಬಾರದಾಗಿದೆ ಎಂದು ಹೇಳುತ್ತಾನೆ. ಯಾರು ಯಾರಿಗೆ ನಿದ್ರೆ ಬರುವುದಿಲ್ಲ ಎಂಬ ವಿವರಣೆಯೊಂದಿಗೆ ಆರಂಭಗೊಳ್ಳುವ ವಿದುರನ ಮಾತು ಕ್ರಮೇಣ ಬೇರೆ ಬೇರೆ ವಿಷಯಗಳ ಕಡೆಗೆ ಜಾರುತ್ತದೆ. ಮುಂದುವರಿಯುವ ವಿದುರನ ಎಲ್ಲಾ ಮಾತುಗಳು ಸಂದರ್ಭಕ್ಕೆ ನೇರ ಸಂಬಂಧಿಸಿದವುಗಳೇನಲ್ಲ. ಲೌಕಿಕ ಜೀವನದಲ್ಲಿ ಮನುಷ್ಯ ಧರ್ಮಪರನಾಗಿ ಹೇಗೆ ಬಾಳಬೇಕು ಎಂಬುದಕ್ಕೆ ಇಲ್ಲಿಯ ಮಾತುಗಳು ಪೂರಕ ಸಾಮಗ್ರಿಗಳಾಗುತ್ತವೆ. ಜನಸಾಮಾನ್ಯರು ಬದುಕಿನಲ್ಲಿ ಅಳವಡಿಸಿಕೊಂಡಿರುವ, ಅಳವಡಿಸಿಕೊಳ್ಳಬಹುದಾದ ಎಷ್ಟೋ ವಿಷಯಗಳು ವಿದುರನ ಮಾತಿನಲ್ಲಿ ಹಾದು ಹೋಗುತ್ತವೆ.

ದೀಪದೀಪವ ತೊಳಲಿ ಕರ್ಮಕ
ಳಾಪದಲಿ ಕುದಿಕುದಿದು ನಾನಾ
ರೂಪಿನಿಂದಾರ್ಜಿಸುವ ಧರ್ಮದ ಗೊಡವೆ ತಾನೇಕೆ
ಭೂಪಕೇಳೈ ಸತ್ಯವೊಂದೇ
ಸೋಪನವು ಸಗ್ಗಕ್ಕೆ ಜನ್ಮದ
ಕೂಪರಪಕ್ಕಿದು ನಾವೆಯಾಗಿಹುದೆಂದನಾ ವಿದುರ (ಉದ್ಯೋಗ-೩-೯)

-ಜನಸಾಮಾನ್ಯರ ಧರ್ಮವಲಯಕ್ಕಂಟಿಗೊಂಡತೆಯೇ ಈ ಪದ್ಯದ ಭಾವವಿದೆ ಅನ್ನಿಸುತ್ತದೆ. ಮೇಲು ವರ್ಗದವರೋ ಧರ್ಮಸೂಕ್ಷ್ಮಗಳನ್ನು ಓದಿಕೊಂಡವರೋ ಬೆಳೆಯಿಸಿಕೊಂಡಿರುವ ಧರ್ಮವಿಷಯಕ ತಿಳುವಳಿಕೆಗಳಿಂದ ಆವಿರ್ಭವಿಸಿದ ಧಾರ್ಮಿಕ ಚಹರೆಗಳನ್ನು ಅಥವಾ ಅವರು ತಾಳಿರುವ ಧರ್ಮ ವಿಷಯ ಸಂಕೀರ್ಣತೆಯನ್ನು ಸಮಾಜದ ತಳವರ್ಗದವರು ಅರಿಯಲಾರರು. ಆ ಗೋಡವೆಯೇ ಅವರಿಗೆ ಬೇಡವಾದುದು. ಸತ್ಯದಿಂದ ನಡೆದುಕೊಂಡರೆ ಆ ಸತ್ಯವೇ ಸ್ವರ್ಗಕ್ಕೆ ಸೋಪಾನವಾಗಬಲ್ಲುದು, ಜೀವನ ಸಮುದ್ರವನ್ನು ಸುಸೂತ್ರವಾಗಿ ದಾಟಿಸುವ ನಾವೆಯಾಗಬಲ್ಲದು. ಜನವರ್ಗದ ಈ ನಡೆಯನ್ನೇ ಕುಮಾರವ್ಯಾಸ ಹೇಳಿದ್ದಾನೆ.

ಸನತ್ಸುಜಾತನ ಬಹಳಷ್ಟು ಉಪದೇಶಗಳನ್ನು ಜನಸಾಮಾನ್ಯರು ಅರಿಯಲಾರರು, ತಾತ್ವಿಕ ವಿಷಯಗಳನ್ನನೇಕ ಸನತ್ಸುಜಾತ ಹೇಳುತ್ತಾನೆ. ಉದಾಹರಣೆಗೆ ಒಂದು ಪದ್ಯ:

ನೇತ್ರ ನಾಸಿಕ ಪಾದ ಪಾಣಿ
ಶೋತ್ರವೆಂಬಿವು ತಮ್ಮೊಳೊಂದೇ
ಸೂತ್ರದಲಿ ಸಂಸ್ಪೃಷ್ಟವಾಗಿ ಸಮಾನ ಬುದ್ಧಿಯಲಿ
ಗಾತ್ರವಿಡಿದಿಹವೋಲು ವಿಶ್ವದ
ಮೈತ್ರಿಯಲಿ ಮನಸಂದು ಪಾತ್ರಾ
ಪಾತ್ರವೆನ್ನದೆ ಬೆರಸಿ ಬದುಕುವುದಧಿಕ ಗುಣವೆಂದ (ಉದ್ಯೋಗ-೪-೭)

ಈ ಪದ್ಯದ ಎಲ್. ಗುಂಡಣ್ಣನವರ ಗದ್ಯಾನುವಾದ ಹೀಗಿದೆ; "ನೇತ್ರ, ನಾಸಿಕ, ಪಾದ, ಪಾಣಿ, ಶ್ರೋತೃ-ಎಂಬ ಇವೆಲ್ಲವೂ ತಮ್ಮಲ್ಲಿ ಒಂದೇ ಸೂತ್ರದಲ್ಲಿ ಸಂತೃಪ್ತವಾಗಿ, ಸಮಾನ ಬುದ್ಧಿಯಲ್ಲಿ ಗಾತ್ರವಿಡಿದಿರುವ ಹಾಗೆ ವಿಶ್ವದ ಮೈತ್ರಿಯಲ್ಲಿ ಮನಸ್ಸಿಟ್ಟು ಪಾತ್ರಾಪಾತ್ರವೆನ್ನದೆ ಎಲ್ಲರೊಡನೆಯೂ ಬದುಕುವುದು ಬಹು ಶ್ರೇಷ್ಠವಾದ ಗುಣ" (ಕರ್ನಾಟ ಭಾರತ ಕಥಾಮಂಜರಿ-ಪು.೪೭೦) ಕುಮಾರವ್ಯಾಸನ ಪದ್ಯ ನೋಡಿದರೂ ಅಷ್ಟೇ ಅದರ ಅನುವಾದ ನೋಡಿದರೂ ಅಷ್ಟೇ ಇಲ್ಲಿಯ ಆಧ್ಯಾತ್ಮಿಕ ವಿಷಯ ಜನಸಾಮಾನ್ಯರಿಗೆ ಸುಲಭಗ್ರಾಹ್ಯವಲ್ಲ.

ಧರ್ಮಾಚರಣೆಯ ವಿಷಯದಲ್ಲಿ ಸನತ್ಸುಜಾತ ಹೇಳುವ ಒಂದೆರಡು ಸಂಗತಿಗಳು ಪ್ರಕೃತ ವಿಷಯಕ್ಕೆ ಸಂಬಂಧಿಸಿವೆ.

ವಿಗ್ರಹವೊಂದಕ್ಕೆ ಚೈತನ್ಯವನ್ನು ತುಂಬಿ ಅದನ್ನು ಆರಾಧನಾ ಯೋಗ್ಯ ಮಾಡುವುದಕ್ಕೆ ಅನೇಕ ಧಾರ್ಮಿಕ ವಿಧಿವಿಧಾನಗಳಿವೆ. ಅದನ್ನು ಮಾಡಬಲ್ಲವನು ಬ್ರಾಹ್ಮಣ ಮಾತ್ರ ಎಂಬುದು ಸನತ್ಸುಜಾತನ ಅಭಿಪ್ರಾಯ. ಕಲ್ಲುಕುಟಿಗನು ಕಲ್ಲು ಕಡೆದು ಮೂರ್ತಿಯನ್ನಾಗಿ ಮಾಡಬಲ್ಲನೆ ಹೊರತು ಅವಶ್ಯಕ ಸಂಸ್ಕಾರಗಳೊಂದಿಗೆ ಅದನ್ನು ದೈವವನ್ನಾಗಿ ಮಾಡಲಾರ ಎನ್ನುವಲ್ಲಿ ಶಿಲ್ಪಿಯ ಕಲಾಪರಿಣತಿ ಮತ್ತು ಶ್ರಮ ಎರಡಕ್ಕಿಂತಲೂ ಬ್ರಾಹ್ಮಣನು ನಡೆಸಿಕೊಡುವ ಸಂಸ್ಕಾರ ಮುಖ್ಯವಾಗಿ ತೋರಿದೆ (ಉದ್ಯೋಗ–೪–೫೧). ಸಂಧ್ಯಾವಂದನೆಯ ಸಮಯದಲ್ಲಿ ಪವಿತ್ರ(ದರ್ಭೆಯ ಉಂಗುರ) ಯಾರು ಯಾರು ಹೇಗೆ ಧರಿಸಬೇಕೆಂಬುದನ್ನೂ ಸನತ್ಸುಜಾತಮುನಿ ವಿವರಿಸುತ್ತಾನೆ: ಬ್ರಾಹ್ಮಣರು ಬಲಗೈಯ ಬೆರಳ ಮೊದಲಲ್ಲಿ, ಕ್ಷತ್ರಿಯರಾದವರು ನಡುಬೆರಳಲ್ಲಿ, ವೈಶ್ಯರಾದವರು ತುದಿಬೆರಳಲ್ಲಿ ಪವಿತ್ರವನ್ನು ಧರಿಸಬೇಕು. ಇಲ್ಲಿ ನಾಲ್ಕನೆಯ ವರ್ಗದ ಶೂದ್ರರು ಉಲ್ಲೇಖಿಸಲ್ಪಟ್ಟಿಲ್ಲ ಎಂಬುದು ಗಮನಾರ್ಹ ಸಂಗತಿಯೆನಿಸುತ್ತದೆ.

ಯುದ್ಧ ಭೂಮಿಯಲ್ಲಿ ಅರ್ಜುನನಿಗೆ ಕೃಷ್ಣ ಹೇಳುವ ಉಪದೇಶ 'ಭಗವದ್ಗಿತೆ' 'ಗೀತೋಪದೇಶ'ವೆಂದು ಪ್ರಸಿದ್ಧಿ ಪಡೆದಿದೆ. ಜೀವ–ಆತ್ಮರ ಸಂಬಂಧದ ವಿವರಣೆ ಸಾಮಾನ್ಯ ಮನುಷ್ಯನಿಗೆ ಅರ್ಥವಾಗುವುದಿಲ್ಲ. ಕೃಷ್ಣ ಹೇಳುವ ಆತ್ಮಸ್ವರೂಪದ ಪದ್ಯ ಹೀಗಿದೆ:

ಏಕನಾತ್ಮನನಂತನಚಲನ
ಶೋಕನದ್ವಯನಮಲನಭವನ
ಲೋಕನಿಸ್ಪೃಹನಮಿತನಕ್ರಿಯನಹತನ ಭ್ರಮನು
ಲೋಕಗತಿ ಮಾಯಾವಿಲಾಸ ವಿ
ವೇಕಿಗಳಿಗಿದು ಬಯಲು ಫಲುಗುಣ
ಸಾಕುಗರ್ವವ ಬೀಳುಕೊಡು ಸೆಳೆಶರವ ಹಿಡಿಧನುವ (ಭೀಷ್ಮ–೩–೫೫)

ಭಾರತೀಯ ಆಧ್ಯಾತ್ಮ ಪರಂಪರೆಯ ಜಿಜ್ಞಾಸೆಯಲ್ಲಿ ಆತ್ಮ ಕುರಿತಾದ ವಿಶ್ಲೇಷಣೆಗೆ ವಿಪುಲ ಅವಕಾಶಗಳಿವೆ. ಆತ್ಮ ಎನ್ನುವುದು ನಿರಾಕಾರವಾಗಿದ್ದರೂ ಜಿಜ್ಞಾಸುಗಳು ನಡೆಸುವ ಆತ್ಮ ಕುರಿತಾದ ಚರ್ಚೆ ಆತ್ಮಕ್ಕೆ ಹಲವು ಮುಖಗಳ ಆಯಾಮ ಒದಗಿಸುತ್ತದೆ. ಆದರೆ ಸಾಮಾನ್ಯರಿಗೆ ಇದು ಕಷ್ಟಸಾಧ್ಯ. ಅವರಿಗೆ ಎದುರಿಗಿರುವ ಬಂಧುಗಳನ್ನು ಹೇಗೆ ಕೊಲ್ಲುವುದು ಎಂಬ ಅರ್ಜುನನ ತಾಕಲಾಟ ಅರ್ಥವಾಗುತ್ತದೆ; ಏನಿದ್ದರೂ ನಿನ್ನ ಕರ್ತವ್ಯವನ್ನು ನೀನು ಮಾಡು ಎಂಬ ಕೃಷ್ಣನ ಪ್ರೇರಣೆ ಅರ್ಥವಾಗುತ್ತದೆ. ಆದರೆ ಈ ಸಂದರ್ಭದ ಹಿನ್ನೆಲೆಯಲ್ಲಿ ಮುಂದುವರಿದ ಆಧ್ಯಾತ್ಮಿಕ ವಿವರಣೆಯನ್ನು ಅವರು ಅರಗಿಸಿಕೊಳ್ಳಲಾರರು.

ವಿದುರ ನೀತಿ, ಸನತ್ಸುಜಾತ ನೀತಿ, ಭಗವದ್ಗೀತೋಪದೇಶಗಳಂತೆಯೆ ಉರಗ ಪ್ರಸಂಗ, ಯಕ್ಷ ಪ್ರಸಂಗಗಳಲ್ಲಿ ಶ್ರೀಸಾಮಾನ್ಯನಿಗೆ ಅನ್ವಯಿಸಬಹುದಾದ ಅನೇಕ ನೀತಿ ಮಾತುಗಳೂ ಪ್ರಸಿದ್ಧವಾಗಿವೆ. ಉರಗ ಪ್ರಸಂಗ: ಸಚ್ಚಾರಿತ್ರ್ಯವುಳ್ಳ ಶೂದ್ರನೂ ಬ್ರಾಹ್ಮಣನೆನಿಸಿಕೊಳ್ಳಬಲ್ಲ (ಅರಣ್ಯ–೧೩–೫೩). ತನಗೆ ಕೇಡಾದರೂ ಇನ್ನೊಬ್ಬರ ಸುಖ ಬಯಸುವವರು ಸಜ್ಜನರು(ಅರಣ್ಯ–೧೩–೭೧). ಯಕ್ಷಪ್ರಸಂಗ: ಸುಧೀಮನು ಸಾಧುಸೇವಕನೆನಿಸುವನು(ಅರಣ್ಯ–೨೩–೪೧). ಬಡವನಾದವನು ನಡೆವ ಹೆಣನೆನಿಸಿಕೊಳ್ಳುತ್ತಾನೆ (ಅರಣ್ಯ–೨೩–೪೩).

ಧರ್ಮದ ಸಾಮಾಜಿಕರಣ:

ಧರ್ಮದ ಸೈದ್ಧಾಂತಿಕ ನಿಲುವುಗಳಿಗೆ ಸಮಾನಾಂತರವಾಗಿ ಧರ್ಮದ ಸಾಮಾಜಿಕರಣ ಚಲಿಸುತ್ತದೆ. ಜನ ಸಾಮಾನ್ಯರ ಧಾರ್ಮಿಕ ಆಚರಣೆಗಳು, ಧರ್ಮದ ಪರಿಕಲ್ಪನೆಗಳು ಈ ಪರಿಚಲನೆಯಲ್ಲಿ ಸಮಾವೇಶಗೊಳ್ಳುತ್ತವೆ. ಕೆಲವು ಉದಾಹರಣೆಗಳ ಮೂಲಕ ಇದನ್ನು ಸ್ಪಷ್ಟಪಡಿಸಬಹುದು.

೧. ದ್ರೋಣನನ್ನು ಕೌರವ ಪಾಂಡವರಿಗೆ ಗುರುವಾಗಿ ಭೀಷ್ಮನು ನೇಮಿಸಿದ ಮೇಲೆ ಇವರ ಶಸ್ತ್ರಾಸ್ತ್ರ ವಿದ್ಯಾಭ್ಯಾಸಕ್ಕಾಗಿ ಗರಡಿ ಮನೆಯನ್ನು ಕಟ್ಟಿಸಲಾಯಿತು. ಈ ಗರಡಿ ಮನೆಯ ಪ್ರವೇಶದಂದು ಗರಡಿ ಮನೆಯನ್ನು ಪೂಜಿಸಿ ಸಾವಿರ ಕುರಿಗಳನ್ನು ಬಲಿಗೊಟ್ಟು ಚಂಡಿಕೆಯನ್ನು ಪೂಜಿಸಲಾಯಿತು(ಆದಿ-೬-೪೦). ಸಾಮಾನ್ಯ ಜನಜೀವನದಲ್ಲಿರುವ ಇಂಥ ಆಚರಣೆಗಳನ್ನು ಉನ್ನತ ವರ್ಗದವರು ಅನಾಮತ್ತಾಗಿ ಎತ್ತಿಕೊಳ್ಳುತ್ತಾರೆ. ಅಂಜಿಕೆ, ಶುಭಹಾರೈಕೆ ಎಲ್ಲರಿಗೂ ಒಂದೇ.

ಹೀಗೆಯೇ ಧನುರ್ವಿದ್ಯಾಭ್ಯಾಸ ಪ್ರದರ್ಶನಕ್ಕೆ ಮೊದಲು ಕುರಿಕೋಣಗಳನ್ನು ಕಡಿದು ಎಲ್ಲಾ ದಿಕ್ಕುಗಳಲ್ಲಿರುವ ಭೂತಗಳಿಗೆ ಚೆಲ್ಲಿ ತೃಪ್ತಿಪಡಿಸಲಾಯಿತು. (ಆದಿ-೭-೧೯)

ಇಂಥ ಆಚರಣೆಗಳು ಉನ್ನತವರ್ಗದವರಿಂದ ಬಂದವುಗಳೇ ಅಥವಾ ಜನಸಾಮಾನ್ಯರಲ್ಲಿ ರೂಢಿಯಲ್ಲಿದ್ದವುಗಳೇ ಎಂಬ ಪ್ರಶ್ನೆಗೆ ಮೊದಲಾಗುತ್ತದೆ. ಇಂಥ ಆಚರಣೆಗಳು ಮೂಲತಃ ಜನಸಾಮಾನ್ಯ ವರ್ಗಗಳಿಂದಲೇ ಬಂದವುಗಳೆನ್ನಿಸುತ್ತವೆ. ನಾಗರಿಕತೆಗೆ ಮೊದಲು ಆಹಾರಕ್ಕೆ ಸೀಮಿತವಾದ ಪ್ರಾಣಿವಧೆ ತರುವಾಯ ದೇವರನ್ನು ತೃಪ್ತಿಪಡಿಸುವ ನೈವೇದ್ಯವಾಯಿತು. ಆದಿವಾಸಿಗಳಲ್ಲಿ ರೂಢಿಯಲ್ಲಿದ್ದ ಇಂಥದೊಂದು ರೀತಿ ಕ್ರಮೇಣ ಶಿಷ್ಟವರ್ಗವನ್ನು ಪ್ರವೇಶಿಸಿತು.

೨. ಧರ್ಮ ಕುರಿತಾದ ಭಾವನೆಗಳು, ಧರ್ಮಾಚರಣೆಗಳು ಮನುಷ್ಯ ಜೀವನದಲ್ಲಿ ತಮ್ಮಷ್ಟಕ್ಕೆ ತಾವು ಚಲಿಸುತ್ತವೆ. ಬಹಳಷ್ಟು ಸಲ ಇವು ಪುರೋಹಿತ ವರ್ಗದಿಂದ ನಿಯಂತ್ರಿಸಲ್ಪಡುತ್ತವೆ. ಹಾಗೆಯೇ ಪ್ರಭುತ್ವದಿಂದಲೂ ನಿಯಂತ್ರಿಸಲ್ಪಡುತ್ತವೆ. ಧರ್ಮಾಚರಣೆಯ ಒಂದು ಭಾಗವಾಗಿ ನಡೆದ ರಾಜಸೂಯದ ಅಗ್ರಪೂಜೆ ಸಂದರ್ಭದಲ್ಲಿ ಶಿಶುಪಾಲ “ಅಗ್ರಪೂಜೆ ರಾಜರಾದವರಿಗೆ ಸಲ್ಲಬೇಕೇ ಹೊರತು ಪಶುಪಾಲಕರಿಗಲ್ಲ” ಎಂದು ಜರಿಯುತ್ತಾನೆ. ಶಿಶುಪಾಲ ಒಬ್ಬ ರಾಜನಾಗಿ ಧರ್ಮಾಚರಣೆಯ ಈ ಪ್ರಸಂಗವನ್ನು ನಿಯಂತ್ರಿಸಲು ಯತ್ನಿಸುತ್ತಾನೆ. ಶಿಶುಪಾಲ ಪಶುಪಾಲಕರಾದ ಯಾದವ ಕುಲದ ರಾಜನಾದರೂ ರಾಜನಾದವನಿಗೆ ಇದನ್ನು ಮಾತನಾಡಲು, ತಡೆಯಲು ಅವಕಾಶವಿದೆ ಎಂದು ಭಾವಿಸಿದವನು.

೩. ಮೂಲ ಮಹಾಭಾರತದ ವನಪರ್ವದಲ್ಲಿ ಬರುವ ಉಪಾಖ್ಯಾನದ ಹರಹನ್ನು ಪಡೆದಿರುವ ಧರ್ಮವ್ಯಾಧನ ವಿಷಯ ಕುಮಾರವ್ಯಾಸ ಭಾರತದಲ್ಲಿ ಕೇವಲ ಹತ್ತೊಂಬತ್ತು ಪದ್ಯಗಳ ಉಪಕಥೆಯಾದರೂ ಅದರ ಸತ್ವಾತಿಶಯ ಮನಸ್ಸು ಹಿಡಿಯುತ್ತದೆ. ಮಹಾಭಾರತದಲ್ಲಿ ಉಪಕಥೆಗಳ ಮೂಲಕ ಸಾಂದ್ರಗೊಂಡಿರುವ ಧಾರ್ಮಿಕ ಭಾವನೆಗಳನ್ನು ಕುಮಾರವ್ಯಾಸ ಸಂಕ್ಷಿಪ್ತಗೊಳಿಸುತ್ತಾನೆ ಎಂದೆನಿಸಿದರೂ ಹೇಳಬೇಕಾದ ವಿಷಯದ ತಿರುಳನ್ನು ಅತ್ಯಂತ ಖಚಿತವಾದ ರೀತಿಯಲ್ಲಿ ಸಾದರಪಡಿಸುತ್ತಾನೆ. ಈ ಧರ್ಮವ್ಯಾಧನ ಕಥೆಯ ನಂತರ ಬರುವ ಒಂದು ಸಾಲು: ‘ಆಹವದ ಜಯಸಿರಿಯು ಧರ್ಮದ ಬೆನ್ನಲಿಹುದೆಂದ’.

ಧರ್ಮವ್ಯಾಧನ ಕಥೆ ಪರೋಕ್ಷವಾಗಿ ನಿಜದ ಧರ್ಮವನ್ನೇ ವ್ಯಾಖ್ಯಾನಿಸುತ್ತದೆ. ತಲೆಯ ಮೇಲೆ ಹಿಕ್ಕೆಯನ್ನು ಕೆಡವಿದ ಹಕ್ಕಿಯನ್ನು ನೋಟ ಮಾತ್ರದಿಂದಲೇ ಕೊಂದ ಮುದ್ಗಲ್ಯ ವಂಶದ ವಿಪ್ರನು ಪತಿವ್ರತೆಯೆದುರು ಸೋಲನನುಭವಿಸುವ ರೀತಿಯೇ ವಿಶಿಷ್ಟವಾದುದು. ಪತಿಯ ಶುಶ್ರೂಷೆಯಲ್ಲಿ ನಿರತಳಾದ ಪತಿವ್ರತೆ ಭಿಕ್ಷೆ ತರುವುದು ತಡವಾದರೆ ಬ್ರಾಹ್ಮಣ ಸಿಟ್ಟಿನಿಂದ ಅವಳನ್ನು ನೋಡಿದ. ಅದಕ್ಕವಳು ಪ್ರತಿಕ್ರಿಯಿಸಿದ ರೀತಿ ವಿಪ್ರನ ಜ್ಞಾನವನ್ನೇ ಪ್ರಶ್ನಿಸುತ್ತದೆ. ಎಲೆ ಮರುಳೇ ನಿನ್ನ ಸಿಟ್ಟಿಗೆ ಬೆಂದು ಹೋಗುವ ಗಿಡದ ಮೇಲಿನ ಪಕ್ಷಿ ನಾನಲ್ಲ" ಎನ್ನುವ ಮಾತು ವಿಪ್ರನಿಗೆ ವಿಪರೀತ ಕುತೂಹಲ ಹುಟ್ಟಿಸಿತು. ತನ್ನ ಮನದೊಳಗಿನ ಕುತೂಹಲವನ್ನು ವ್ಯಕ್ತಪಡಿಸುವ ಮೊದಲೇ ಅವನ ಮನವನ್ನು ಓದಿದ ತರಳೆ "ವಿಪ್ರನೇ ನಿಗಮದ ಮಹತಿಯನ್ನು ನಾನು ತಿಳಿದಿಲ್ಲ, ಧರ್ಮತತ್ವದ ರಹಸ್ಯವನ್ನು ನಾನು ಅರಿಯದವಳು. ಪತಿಯ ಪರಿಚರ್ಯೆಯಲ್ಲಿ ಮಗ್ನರಾಗಿರುವವರು ಧನ್ಯರು"

ಪತಿವ್ರತೆಗೆ ಮುಖ್ಯವಾದುದು ತನ್ನ ಪತಿಯ ಪರಿಚರ್ಯ, ಅದು ಅವಳಿಗೆ ಕರ್ತವ್ಯವಾಗಿ ತೋರುವುದು ಅವಳ ಪಾಲಿಗೆ ಅತ್ಯಂತ ಸಹಜವಾದ ವಿಷಯ. ಓದಿನ ಮೂಲಕ ಪಡೆಯುವ ಜ್ಞಾನಕ್ಕಿಂತಲೂ ತನ್ನ ಕೌಟುಂಬಿಕ ನಿಷ್ಠೆ ದೊಡ್ಡದೆಂಬ ಸಾಮಾನ್ಯ ಮಹಿಳೆಯ ವಾದ ಧರ್ಮ ಜಿಜ್ಞಾಸೆಗೆ ಅವಕಾಶ ಮಾಡಿಕೊಡುತ್ತದೆ. ಸಮಾಜ, ಕುಟುಂಬ – ಹೀಗೆ ಬೇರೆ ಬೇರೆ ನೆಲೆಗಳಲ್ಲಿ ಸಾಮಾನ್ಯ ಮನುಷ್ಯ ತಾನು ಇಟ್ಟುಕೊಂಡಿರುವ ತಾತ್ವಿಕ ನಿಲುವುಗಳು ಯಾವುದೇ ಓದಿನ ಅಥವಾ ತಪಸ್ಸಿನ ನಿರ್ಮಿತಿಗಳಲ್ಲ. ಇವಳಿಗೆ ಧರ್ಮವೆನ್ನುವುದು ತನ್ನ ಪತಿ, ತನ್ನ ಕುಟುಂಬ.

ಪತಿವ್ರತೆಯ ನಿರ್ದೇಶನದಂತೆ ಧರ್ಮವ್ಯಾಧನಲ್ಲಿಗೆ ಬಂದಾಗಲೂ ಅಷ್ಟೇ "ನಿನ್ನನ್ನು ಪತಿವ್ರತೆ ನನ್ನಲ್ಲಿಗೆ ಕಳಿಸಿದಳೇ" ಎಂದು ಬ್ರಾಹ್ಮಣನನ್ನು ಎದುರುಗೊಳ್ಳುವ ಮೂಲಕ ತನ್ನ ವಿಶಿಷ್ಟ ಜ್ಞಾನವನ್ನು ಮೆರೆಯುತ್ತಾನೆ. "ಧರಣಿಯಮರೋತ್ತಮರಿಗಿದು ಸಂಚಾರಯೋಗ್ಯವಾದ ಸ್ಥಳವಲ್ಲ" ಎಂದು ತನ್ನ ಮನೆಗೆ ಕರೆದೊಯ್ಯುವಲ್ಲಿ ತಣ್ಣನೆಯ ವಿಡಂಬನೆಯಿದೆ. ಮುಪ್ಪಿನಿಂದ ಜರ್ಜರಿತರಾಗಿರುವ ತನ್ನ ತಂದೆ ತಾಯಿಗಳನ್ನು ತೋರಿಸುತ್ತಾನೆ; ತನ್ನ ಹೆಂಡತಿ – ಮಗನನ್ನು ಪರಿಚಯಿಸುತ್ತಾನೆ. ಧರ್ಮವ್ಯಾಧ ಮುಂದೆ ಹೇಳುವ ಮಾತುಗಳ ಮೌಲ್ಯ ದೊಡ್ಡದು "ಇವರ ರಕ್ಷಣೆಗಾಗಿ ಬೇಟೆಯಾಡಿ ಪ್ರಾಣಿಗಳನ್ನು ಕೊಲ್ಲುತ್ತೇನೆ. ಆ ಮಾಂಸ ತಂದು ಅಂಗಡಿಯಲ್ಲಿ ಮಾರಿ, ಅದರಿಂದ ದೊರೆತ ಹಣದಲ್ಲಿ ಇವರನ್ನು ರಕ್ಷಿಸುತ್ತೇನೆ. ಇದಾವುದೂ ನನಗೆ ಭೂತ ಹಿಂಸೆಯೆನಿಸುವುದಿಲ್ಲ. ಮಾಂಸ ವಿಕ್ರಯ ಮೃಗವಧಾದಿಗಳೆಮ್ಮ ಜಾತಿ ಧರ್ಮವು". ಜಾತಿಧರ್ಮ ತ್ಯಜಿಸುವುದಾಗಲಿ ವಿಜಾತಿ–ಧರ್ಮವನ್ನು ಗ್ರಹಿಸುವುದಾಗಲಿ ಇವೆರಡೂ ನರಕಕ್ಕೆ ದಾರಿ ಮಾಡಿಕೊಡುತ್ತವೆ. ಸುಳ್ಳು ಹೇಳುವುದು, ಪರಧನ, ವಂಚನೆ, ಪರರನ್ನು ಕೊಲ್ಲುವುದು, ಆತ್ಮರತಿ, ಪರಸ್ತ್ರೀ ವ್ಯಾಮೋಹ ಮುಂತಾದುವೆಲ್ಲ ದೋಷಾಂಕುರಗಳಾದರೆ ವೇದಾಧ್ಯಯನ, ಸಜ್ಜನಸಂಗ, ಶಾಸ್ತ್ರ ಶ್ರವಣ ಮುಂತಾದವೆಲ್ಲ ಸದ್ಧರ್ಮಗಳೆಂದು ಹೇಳುವ ಪದ್ಯಗಳಿವು.

ವಿತಥ ಭಾಷಿತವನ್ಯವಿತ್ತಾ
ಹೃತಿ ಪರ ವ್ಯಾಪಾದವಾತ್ಮ
ಸ್ತುತಿ ಪರಸ್ತ್ರೀ ವ್ಯಸನವತ್ಯಚಾರ ಬಕವೃತ್ತಿ

ಕೃತ ವಿನಾಶನ ಡಂಭಹಿಂಸಾ
ರತಿನಿಜಾನ್ವಯ ಧರ್ಮಕರ್ಮ
ಚ್ಯುತಿಗಳಿವು ದೋಷಾಂಕುರಗಳು ವಿಪ್ರ ಕೇಳೆಂದ. (ಅರಣ್ಯ-೧೫-೧೪)

ಸಾಂಗವೇದಾಧ್ಯಯನ ಸಜ್ಜನ
ಸಂಗಶಾಸ್ತ್ರಶ್ರವಣ ತೃಷ್ಣಾ
ಭಂಗ ಯಜನಧ್ಯಾನ ಮೌನವ್ರತ ಸದಾಚಾರ
ಮಾಂಗಲಿಕ ಕರ್ಮಾಭಿಯೋಗ ಕು
ಲಾಂಗನಾ ರತಿಯಾತ್ಮಚಿಂತೆ ಪ
ರಾಂಗನಾ ವೈಮುಖ್ಯವಿವು ಸದ್ಧರ್ಮ ಗತಿಯೆಂದ (ಅರಣ್ಯ-೧೫-೧೫)

ಮುಂದುವರಿದು ಧರ್ಮವ್ಯಾಧ ಹೇಳುವ ಮಾತು "ನೀವು ಜಾತಿಯಿಂದ ಶ್ರೇಷ್ಠರಾದವರು ನಾವು ಜಾತಿ ವಿಹೀನರು. ನಾವು ಜಾತಿ-ವಿಹೀನರಾಗಿದ್ದರೂ ಭಾವಶುದ್ಧಿಯಿಂದ ಸ್ವಧರ್ಮಾಚಾರವನ್ನು ಪರಿಪಾಲಿಸುತ್ತಿದ್ದೇವೆ. ದ್ವಿಜ, ದೇವ, ಗುರುಗಳ ಸೇವೆಯಲ್ಲಿ ಸಂಭಾವಿತರಾಗಿದ್ದೇವೆ. ನಮ್ಮನ್ನು ನೋಡಿ ತಿಳಿದುಕೊ".

ಒಂದಿಷ್ಟು ಸ್ವಾಭಿಮಾನದಿಂದಲೇ ಹೇಳುವ ಧರ್ಮವ್ಯಾಧನ ಈ ಮಾತುಗಳು ಮನುಷ್ಯಧರ್ಮವನ್ನು ಬಹಳ ಸ್ಪಷ್ಟವಾಗಿ ನಿರ್ವಚಿಸುತ್ತವೆ. ತಳವರ್ಗದವರು ಮನುಷ್ಯ ಕಲ್ಪಿತ ವ್ಯವಸ್ಥೆಯಿಂದ ಜಾತಿ ಹೀನರೆಂದೆನಿಸಿಕೊಂಡಿರಬಹುದು. ಆದರೆ ಸ್ವಧರ್ಮ ಆಚರಣೆಯ ವಿಷಯದಲ್ಲಿ ತಾವು ಯಾರಿಗೂ ಕಡಿಮೆಯಿಲ್ಲ ಎಂಬ ವಾದಮಂಡನೆ ವಾಸ್ತವ ಸತ್ಯವಾಗಿ ತೋರುತ್ತದೆ. ತಾನು ಧರ್ಮದ ತಾತ್ವಿಕ ವಿಷಯಗಳನ್ನು ಯಾವುದೇ ಧರ್ಮಗ್ರಂಥಗಳಿಂದ ತಿಳಿದವಳಲ್ಲ. ಆದರೆ ನನ್ನ ಪತಿಸೇವೆ ನನಗೆ ಧರ್ಮವೆನ್ನುವ ಪತಿವ್ರತೆಯಾಗಲಿ, ನನ್ನ ತಂದೆ ತಾಯಿಗಳ ಸೇವೆಗೆ ಪ್ರಾಣಿ ಹಿಂಸೆ ಮಾಡಿದರೂ ಅದು ನಾನು ಪಾಲಿಸಿಕೊಂಡು ಬಂದಿರುವ ಸ್ವಧರ್ಮ ಎಂದು ಹೇಳುವ ಧರ್ಮವ್ಯಾಧನಾಗಲಿ ವಿದ್ವಲ್ಲೋಕದ ಧರ್ಮ ವಿಶ್ಲೇಷಣೆಯನ್ನು ಅರಿತವರಲ್ಲ. ಇವರದು ಬದುಕಿನಲ್ಲಿ ಅವಳಡಿಸಿಕೊಂಡು ಬಂದಿರುವ ನೀತಿ ಪ್ರಜ್ಞೆ, ಜನಸಾಮಾನ್ಯರು ಇಂಥ ಪ್ರಜ್ಞೆಯನ್ನು ಗಾಢವಾಗಿ ಹೊಂದಿದವರು. ತನ್ಮೂಲಕ ಅವರಿಗೆ ಅಲೌಕಿಕ ಜ್ಞಾನ ಉಂಟಾದ ವಿಷಯ - ವಿಪ್ರ ತನ್ನ ಕೋಪಾವಿಷ್ಠ ದೃಷ್ಟಿ ಮಾತ್ರದಿಂದ ಪಕ್ಷಿಯನ್ನು ಕೊಂದುದು ಮತ್ತು ವಿಪ್ರನನ್ನು ಪತಿವ್ರತೆ ಕಳಿಸಿದಳೆಂಬುದು - ಸತ್ಯವೂ ಆಗಿರಬಹುದು, ಸಂಕೇತವೂ ಆಗಿರಬಹುದು. ಅದು ಏನೇ ಇರಲಿ ನಾವಿಲ್ಲಿ ಮುಖ್ಯವಾಗಿ ಗ್ರಹಿಸಬೇಕಾಗಿರುವುದು ಜನಸಾಮಾನ್ಯರು ಅರಿಗಿಸಿಕೊಂಡಿರುವ ಧರ್ಮ ಪರಿಕಲ್ಪನೆಯ ವಿಧಾನಗಳನ್ನು. ಇವೆಲ್ಲ ಧರ್ಮವನ್ನು ಬೇರೆ ಬೇರೆ ಆಕೃತಿಗಳಲ್ಲಿ ಕಂಡು ಕೊಂಡಿರುವ ಸ್ವಾನುಭಾವದ ನೆಲೆಗಳು.

೪. ಇಂಥದೇ ಜಾತಿ ಧರ್ಮದ ಇನ್ನೊಂದು ಪ್ರಸಂಗ ಅರಣ್ಯ ಪರ್ವದಲ್ಲಿಯೇ ಬರುತ್ತದೆ. ಶಿವನನ್ನು ಕುರಿತು ತಪಸ್ಸಿಗೆ ತೊಡಗಿದ ಅರ್ಜುನ. ತಪಸ್ಸು ಮಾಡುತ್ತಿದ್ದರೂ ಖಡ್ಗ, ಬಿಲ್ಲು, ಬಾಣಗಳು ಅರ್ಜುನನ ಸಂಗಡ ಇವೆ. ಇದು ಕಿರಾತಕನಿಗೆ ವಿರೋಧಾಭಾಸವಾಗಿ ತೋರಿ ವ್ಯಂಗ್ಯವಾಡಿದರೆ ಅರ್ಜುನ ಕೋಪಗೊಂಡು ಇದು ವಿವೇಕಶಾಸ್ತ್ರ ವಿಚಾರ, ಅರಣ್ಯದಲ್ಲಿ ಬೇಟೆಯಾಡುವ ನಿನಗೆ

ಇದೆಲ್ಲ ತಿಳಿಯುವುದಿಲ್ಲ ಎಂದು ಹಂಗಿಸಿದಾಗ ಆತನು ತನ್ನ ವೃತ್ತಿಧರ್ಮವನ್ನು ಕುರಿತು ಆಡುವ ಮಾತು ವಿಚಾರಾರ್ಹವಾಗಿದೆ. "ನೀವು ಶಾಸ್ತ್ರ ಮತ್ತು ಶಸ್ತ್ರಾವಳಿ ಎರಡನ್ನೂ ಬಲ್ಲವರು, ನಾವು ಕೇವಲ ಪಕ್ಷಿ ಮೃಗಾವಳಿಯ ಬೇಟೆಯಲ್ಲಿ ಬಲ್ಲಿದರಾಗಿದ್ದು ಇದೆಲ್ಲ ನಮ್ಮ ಜಾತಿಧರ್ಮ" ಎನ್ನುತ್ತಾನೆ.

ನೀವು ಬಲ್ಲಿರಿ ಶಾಸ್ತ್ರದಲಿ ಶ
ಸ್ತ್ರಾವಳಿಯಲಾವಿಂದು ಪಕ್ಷಿ ಮೃ
ಗಾವಳಿಯ ಬೇಂಟೆಯಲಿ ಬಲ್ಲೆವು ಜಾತಿಧರ್ಮವಿದು (ಅರಣ್ಯ-೬-೪)

-ಇಲ್ಲಿರುವ ಕಿರಾತನಮಾತುಗಳು ಧರ್ಮವ್ಯಾಧನಿಗಿಂತ ತೀರ ಭಿನ್ನವಾಗೇನೂ ಇಲ್ಲ. ಶಾಸ್ತ್ರ ವಿಚಾರ ಎನ್ನುವ ಅರ್ಜುನನ ಮಾತಿಗೆ ಕಿರಾತ ಕೊಟ್ಟ ತಿರುಗೇಟು ಇದು. ಬೇಟೆಯಾಡುವುದು ತಮ್ಮ ಜಾತಿಧರ್ಮ ಎನ್ನುವ ಕಿರಾತ ಅರ್ಜುನನಂತೆ ಶಾಸ್ತ್ರಬಲ್ಲವನಲ್ಲ. ಆದರೂ ಇದೊಂದು ತನ್ನ ವೃತ್ತಿ ಬದುಕಿನಲ್ಲಿ ಕೊರೆತೆಯೆನಿಸುವುದಿಲ್ಲ. ಅಂತೆಯೇ ಅರ್ಜುನನಿಗೆ ಕಿರಾತ ಕೊಡುವ ಉತ್ತರ ಸಾಕಷ್ಟು ಆತ್ಮಪ್ರತ್ಯಯದಿಂದಲೇ ಕೂಡಿದೆ.

ಜಾತಿ ಧರ್ಮವನ್ನು ಹೀಗೆ ವಿವರಿಸುವ ವ್ಯಾಸರಾಗಲಿ ಅದನ್ನು ಅನುಸರಿಸಿ ಮುಂದುವರೆದಿರುವ ಕುಮಾರವ್ಯಾಸನಾಗಲಿ ಜನಸಾಮಾನ್ಯರು ಅರ್ಥೈಸಿಕೊಂಡು ಬಂದಿರುವ ವೃತ್ತಿ, ಧರ್ಮವನ್ನು ಅಲ್ಲಗಳೆಯುವುದಿಲ್ಲ. ಪ್ರಾಣಿವಧೆ ಒಂದು ಅಪರಾಧವೆಂದಾಗಲಿ, ಆ ಮೂಲಕ ಜೀವನ ಸಾಗಿಸುವುದು ಪಾಪವೆಂದಾಗಲಿ ಭಾವಿಸದೆ ಅದನ್ನು ಜಾತಿ ಧರ್ಮವೆಂದು ವ್ಯಾಖ್ಯಾನಿಸಿರುವುದು ಸಾಮಾನ್ಯರ ಸಹಜ ಧರ್ಮವನ್ನು ಅರಿತುಕೊಂಡ ಪರಿಯಾಗಿದೆ.

ಧರ್ಮ ಪಾದಗಳು:

ಕುಮಾರವ್ಯಾಸನು ಧರ್ಮರಾಯನ ಜೀವನ ದೃಷ್ಟಿ ಹೇಳುವಾಗ ಧರ್ಮ ಪಾದದ ಮಾತು ಬರುತ್ತದೆ. ಇಂದ್ರಪ್ರಸ್ಥಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯ ಭಾರಮಾಡುತ್ತಿದ್ದ ಧರ್ಮರಾಜನ ಆಡಳತ ಸಂದರ್ಭದಲ್ಲಿ ಅನ್ಯಾಯ, ಕ್ಷಾಮ, ಕೊಲೆ, ದಾಳಿ ಯಾವ ಅನಾಹುತ, ಅಹಿತಗಳೂ ಇರಲಿಲ್ಲ. ಆದಿಯುಗದಲ್ಲಿ ಅಂದರೆ ಕೃತಯುಗದಲ್ಲಿ ಧರ್ಮಕ್ಕೆ ೪ ಪಾದಗಳಿದ್ದವು. ತ್ರೇತಾಯುಗದಲ್ಲಿ ಒಂದು ಕಾಲು ಊನವಾಯಿತು. ಅಂದರೆ ಧರ್ಮ ಮೂರು ಪಾದಗಳ ಮೇಲೆ ನಡೆಯುತ್ತಿತ್ತು. ದ್ವಾಪರಯುಗದ ಆಧಿಭಾಗದಲ್ಲಿ ಧರ್ಮಕ್ಕೆ ಎರಡು ಕಾಲಗಳು ಅಡಗಿದವು ಮುಂದೆ ಧರ್ಮರಾಯನ ಆಡಳಿತದಲ್ಲಿ ಅಡಗಿದ್ದ ಎರಡೂ ಕಾಲುಗಳು ಚಿಗುರಿ ಧರ್ಮವು ಸುಸ್ಥಿರವಾಗಿ ನಾಲ್ಕು ಪಾದಗಳಿಂದ ನಡೆಯತೊಡಗಿತು.

ಆದಿಯುಗದೊಳು ಧರ್ಮವಿದ್ದುದು
ಪಾದ ನಾಲ್ಕರ ಗಾಢ ಗತಿಯಲಿ
ಪಾದವೂಣೆಯವಾದುದಾ ತ್ರೇತಾ ಪ್ರಭಾವದಲಿ

ಪಾದವೆರಡಡಗಿದವು ದ್ವಾಪರ
ದಾದಿಯಲಿ ಯುಧಿಷ್ಠರನ ರಾ
ಜ್ಯೋದಯದಲಂಕುರಿಸಿ ಸುಳಿದುದು ನಾಲ್ಕು ಪಾದದಲಿ

(ಆದಿ-೧೮-೨೦)

ಕಾಮ್ಯಕವನದಲ್ಲಿ ಮಾರ್ಕಂಡೇಯ ಮುನಿ ಧರ್ಮರಾಜನಿಗೆ ಕಾಲಾನುಕ್ರಮದಲ್ಲಿ ಧರ್ಮ ಇಳಿಮುಖವಾದುದನ್ನು ಹೇಳುತ್ತಾನೆ. ತ್ರೇತಾಯುಗದಲ್ಲಿ ಅಧರ್ಮವನ್ನು ಒಂದು ಪಾದದಲ್ಲಿ ಕಟ್ಟಿದ್ದರಿಂದ ಆಗ ಧರ್ಮದ ಚಲನೆ ಮೂರು ಪಾದಗಳಿಂದಾಯಿತು. ಕಲಿಯುಗದಲ್ಲಿ ಧರ್ಮದ ಚಲನೆಯಿರುವುದು ಒಂದು ಪಾದದಿಂದ ಮಾತ್ರ. ಕಲಿಯುಗದಲ್ಲಿ ಧರ್ಮದ್ರೋಹ, ಮಾತ್ಸರ್ಯ, ಕಳವು, ಅನೀತಿ, ಅಪವಾದ, ಹಾದರ ಇವುಗಳು ತಾಂಡವಾಡುತ್ತವೆ.

ಆ ಯುಗದ ತರುವಾಯಲಾತ್ರೇ
ತಾಯುಗವಲೇ ಬಳಿಕ ಧರ್ಮದ
ಲಾಯದಲಿ ಕಟ್ಟಿದರಧರ್ಮವನೊಂದು ಪಾದದಲಿ
ರಾಯ ಕೇಳೈ ದ್ವಾಪರದಲಿ ದ್ಯ
ಢಾಯದಲಿ ತಾ ಧರ್ಮವೆರಡಡಿ
ಬೀಯವಾದುದು ನಿಂದುದೆನಿಸಿತು ನಿನ್ನ ದೆಸೆಯಿಂದ(ಅರಣ್ಯ-೧೪-೩೭)

ಕಲಿಯ ರಾಜ್ಯದಲೊಂದು ಪಾದದ
ಸಲುಗೆಧರ್ಮಕ್ಕಹುದು ಗಡ ವೆ
ಗ್ಗಳೆಯವದರೊಳ ಸತ್ಯ ಧರ್ಮದ್ರೋಹ ಮಾತ್ಸರ್ಯ
ಕಳವು ಹಿಂಸೆಯನೀತಿ ಲೋಭ
ಸ್ಖಲಿತವಾರಡಿಕಕ್ಕು ವಂಚನೆ
ಹಳಿವು ಹಾದರ ಗವತೆಯೆಂಬಿವರುಬ್ಬು ಹಿರಿದೆಂದ (ಅರಣ್ಯ-೧೪-೩೮)

–ಮೇಲಿನ ಪದ್ಯಗಳಲ್ಲಿ ಕುಮಾರವ್ಯಾಸ ಕೃತಯುಗದ ಪಾದಸಂಖ್ಯೆಯನ್ನು ಹೇಳಿಲ್ಲವಾದರೂ ಕುಮಾರವ್ಯಾಸನೇ ಹೇಳಿರುವಂತೆ ಆ ಯುಗದಲ್ಲಿ ಹರಿಶ್ಚಂದ್ರ, ಪುರೂರವರಂಥ ಶ್ರೇಷ್ಠರಾಜರು ಆಳಿಹೋದುದರಿಂದ ಆಗೆಲ್ಲ ಕೃತಯುಗದ ಧರ್ಮಕ್ಕೆ ನಾಲ್ಕು ಪಾದುಗಳಿದ್ದವೆಂಬುದು ಗ್ರಹಿತ. ಇದನ್ನು ಈ ಮೊದಲೇ ವಿವರಿಸಲಾಗಿದೆ.

ಧರ್ಮವು ಯುಗದಿಂದ ಯುಗಕ್ಕೆ ಕ್ಷೀಣಗೊಳ್ಳುತ್ತ ಬಂದ ವಿಷಯ ಭೀಮನು ಸೌಗಂಧಿಕಾ ಪುಷ್ಪತರಲು ಹೋದ ಸಂದರ್ಭದಲ್ಲಿಯೂ ಉಲ್ಲೇಖಗೊಂಡಿದೆ. ಹನುಮಂತನು ಕೃತ. ತ್ರೇತಾ. ದ್ವಾಪರ.

ಕಲ್ಕಿ – ಈ ನಾಲ್ಕು ಯುಗಗಳ ವಿಶೇಷತೆಗಳನ್ನು ಹೇಳುತ್ತ ಧರ್ಮಭಾವನೆ ಕೃತಯುಗದಿಂದ ಕಲ್ಕಿಯವರೆಗೆ ಹೇಗೆ ಇಳಿಮುಖವಾಯಿತೆಂಬುದನ್ನು ಹೇಳುತ್ತಾನೆ.

ಕೃತಯುಗದವರು ತ್ರೇತೆಯವರಿಂ
ದತಿ ಪರಾಕ್ರಮ ಯುಕ್ತರವರದು
ಭುತದ ಬಲವೀ ತ್ರೇತೆಯವರಲಿ ದ್ವಾಪರ ಸ್ಥಿತಿಗೆ
ವಿತತ ಸತ್ವರು ಕಲಿಯುಗದದು
ರ್ಮತಿ ಮನುಷ್ಯವ್ರಾತ ಹೀನಾ
ಕೃತಿ ಕಣಾ ಯುಗಧರ್ಮಕೃತ ಮೊದಲಾಗಿ ಕಲಿಯುಗಕೆ (ಅರಣ್ಯ-೧೦-೩೩)

ಹೀನಸತ್ವರು ಸತ್ಯಧರ್ಮ
ವಿಹೀನರರ್ಥ ಪರಾಯಣರು ಕುಜ
ನಾನು ರಕ್ತರು ವರ್ಣ ಧರ್ಮಾಶ್ರಮ ವಿದೂಷಕರು
ದಾನಿಗಳು ದುಷ್ಪಾತ್ರದಲಿ ಗುಣ
ಮೌನಿಗಳು ಗರ್ವಿತರು ಮಿಥ್ಯಾ
ಜ್ಞಾನಿಗಳು ಕಲಿಯುಗದ ಮನುಜರು ಭೀಮ ಕೇಳೆಂದ (ಅರಣ್ಯ-೧೦-೩೪)

ಕ್ರಮೇಣ ನಡೆದ ಈ ಧರ್ಮಕ್ಷಯಕ್ಕೆ ಸಾಮಾನ್ಯರ ಮೇಲೆ ಸವಾರಿ ಮಾಡುವ ಮೇಲು ವರ್ಗಗಳೇ ಕಾರಣವೆಂಬುದನ್ನು ಪ್ರಮಾಣೀಕರಿಸಲು ವಿಪುಲ ಅವಕಾಶಗಳಿವೆ. ಮನುಷ್ಯನನ್ನು ನೀತಿ ವಿಮುಖನನ್ನಾಗಿಸಲು ಕಾರಣವೆನ್ನಲಾದ ಅಂಶಗಳು ಎರಡು: ಒಂದು – ಅಧಿಕಾರಬಲ, ಎರಡು– ಹಣಬಲ, ಇವೆರಡೂ ಸಾಮಾನ್ಯ ಮನುಷ್ಯನಲ್ಲಿ ತೋರುವುದಿಲ್ಲ. ಹೀಗಾಗಿ ಜನಸಾಮಾನ್ಯರು ಇವು ಇರುವ ಮನುಷ್ಯರಿಂದ ಶೋಷಿಸಲ್ಪಡುತ್ತಾರೆ. ಅಧಿಕಾರ ಬಲದಿಂದ ಅನ್ಯಾಯ, ಅಹಂಕಾರಗಳು ಬೆಳೆದಂತೆ ಹಣಬಲದಿಂದ ಅತ್ಯಾಶೆ, ವಂಚನೆಗಳು ಬೆಳೆಯುತ್ತವೆ. ಇಲ್ಲೆಲ್ಲ ಅನ್ಯಾಯಕ್ಕೆ ಒಳಪಡುವವರು, ವಂಚನೆಗೆ ಈಡಾಗುವವರು ಸಾಮಾನ್ಯ ಜನವರ್ಗವೇ. ರಾಜಮಹಾರಾಜರ ಭೂಮಿ – ಸಂಪತ್ತಿನ ಆಶೆಯಿಂದ ನಡೆಯುವ ಯುದ್ಧಗಳಲ್ಲಿ ಆಹುತಿಯಾಗುವವರು ಸಾಮಾನ್ಯ ವರ್ಗದಿಂದ ಬಂದ ಸೈನಿಕರು. ದೊಡ್ಡವರ ಬಾಹ್ಯಾಡಂಬರಕ್ಕೆ ನಿರ್ಮಾಣಗೊಳ್ಳುವ ಭವನಗಳನ್ನು ನಿರ್ಮಿಸಿಕೊಡುವವರು ಶ್ರಮಿಕರು. ಹೀಗೆ ಇವರ ಮೇಲೆ ನಡೆಯುವ ನಿರಂತರ ದೈಹಿಕ ಮತ್ತು ಮಾನಸಿಕ ದಾಳಿಯಿಂದ ಸಾಮಾಜಿಕ ಧರ್ಮ ಖಿಲಗೊಳ್ಳುತ್ತದೆ. ಇಂಥ ಆವಾಂತರಗಳಿಂದ ಮಹಿಳೆಯರು, ಮಕ್ಕಳು, ದುರ್ಬಲರು ಪಡೆಯುವ ಹಿಂಸೆ ಅತಿಯಾಗುತ್ತದೆ. ನೀತಿ ನಿಯತ್ತುಗಳನ್ನು ರೂಪಿಸುವ ಧರ್ಮಭಾವನೆ ಅಧೋಗತಿಗಿಳಿಯುತ್ತದೆ. ಇಂಥ ಅಧಿಕಾರಶಾಹಿ ಪ್ರವೃತ್ತಿ ದುರ್ಬಲರ ಮೇಲಿನ ಪ್ರಹಾರವಾಗಿ ಧರ್ಮ ತನ್ನ ವೇಗವನ್ನು ಕಡಿಮೆ ಮಾಡಿಕೊಳ್ಳುತ್ತದೆ. ಒಮ್ಮೆ ಇಳಿಮುಖವಾಗಿ ಪ್ರವಹಿಸುವ ಧರ್ಮಭಾವನೆಗಳು ಮತ್ತೆ ತನ್ನ ಚಲನೆಯನ್ನು ಊರ್ಧ್ವಮುಖವಾಗಿಸಿಕೊಳ್ಳುವುದು ಕಷ್ಟ. ಅಂತೆಯೇ ಕೃತಯುಗ, ತ್ರೇತಾಯುಗ, ದ್ವಾಪರಯುಗ,

ಕಲಿಯುಗದ ಧರ್ಮಭಾವನೆಯಲ್ಲಿ ತೋರುವ ಇಳಿಕೆ ಪಾದಗಳ ಪ್ರತಿಮಾರೂಪದಲ್ಲಿ ವಿವರಿಸಲ್ಪಟ್ಟಿರುವುದು ಉಚಿತವೆನಿಸುತ್ತದೆ. ಕುಮಾರವ್ಯಾಸ ಹೇಳುವ ಯುಗಧರ್ಮ ನಡೆಯಲ್ಲಿ ಶೋಷಣೆಗೊಳಗಾಗುವ ಸಾಮಾನ್ಯರ ನಿಕೃಷ್ಟ ಬದುಕು ಸ್ವಯಂವೇದ್ಯವಾಗುತ್ತದೆ.

ಕುಮಾರವ್ಯಾಸನ ಧರ್ಮದೃಷ್ಟಿ:

ಕುಮಾರವ್ಯಾಸ ಕಾವ್ಯದಲ್ಲಿ ಧರ್ಮಕ್ಕೆ ಸಂಬಂಧಿಸಿದ ವಿಷಯಗಳು ತೇಪೆ ಹಚ್ಚಿದಂತೆ ಪ್ರತ್ಯೇಕವಾಗಿ ನಿರೂಪಿಸಲ್ಪಡುವುದಿಲ್ಲ. ಹೇಳಬಯಸುವ ಧರ್ಮ ವಿಷಯಗಳೆಲ್ಲ ಕಥಾಂತರಗೊಂಡಿರುವುದಿಲ್ಲಿ ವಿಶೇಷ. ಕುಮಾರವ್ಯಾಸ ವೈಷ್ಣವ ಧರ್ಮಾವಲಂಬಿಯೆಂಬ ದಟ್ಟವಾದ ಹೇಳಿಕೆಯೊಂದು ಪರಂಪರಾಗತವಾಗಿ ಬಂದಿದೆ. ಈ ಹಿನ್ನೆಲೆಯಲ್ಲಿ ಕುಮಾರವ್ಯಾಸನ ಧರ್ಮ ನಿರೂಪಣೆಯನ್ನು ಆ ನಿಟ್ಟಿನಲ್ಲಿ ಯಾರಾದರೂ ನಿರೀಕ್ಷಿಸಬಹುದು. ಆದರೆ ಕುಮಾರವ್ಯಾಸ ವೈಷ್ಣವ ಧರ್ಮದ ಆಚರಣೆ–ಸಂಪ್ರದಾಯಗಳನ್ನೆಲ್ಲಿಯೂ ಹೇಳುವುದಿಲ್ಲ. ನಾರಣಪ್ಪನದು ವೈಷ್ಣವ ಭಕ್ತಿಯೆನ್ನುವುದು ಕೃಷ್ಣಭಕ್ತಿ. ವೈಷ್ಣವ ಭಕ್ತಿಯನ್ನು ಹೇಳಬೇಕೆನ್ನುವುದು ನಾರಣಪ್ಪನ ಉದ್ದೇಶವಲ್ಲ. ಅವನ ಗಮ್ಯವಿರುವುದು ಕೃಷ್ಣನ ಕಡೆಗೆ, ಪಾಂಡವರ ಕಡೆಗೆ, ಅವನು ಸಂದರ್ಭಾನುಸಾರ ಧರ್ಮವೆಂದರೇನು ಎಂಬುದನ್ನು ವ್ಯಾಖ್ಯಾನಿಸುತ್ತಾನೆ ಅಥವಾ ಪಾಂಡವರ ಸನ್ನಡತೆಯನ್ನು ಉದಾಹರಣೆಯಾಗಿರಿಸಿ ಪರೋಕ್ಷವಾಗಿ ಧರ್ಮ ಭೋಧನೆ ಮಾಡುತ್ತಾನೆ. ಪಾಂಡವರನ್ವಯ ನೋಡುವ ಈ ಧರ್ಮ ಮಾನವ ಧರ್ಮವೇ ಆಗಿದೆ. ಮುಂದುವರಿದು ಪಾಂಡವರಿಗೆ ಸಂಬಂಧಪಡುವ ಧರ್ಮನೀತಿ ವಿಶಾಲಾರ್ಥದಲ್ಲಿ ಎಲ್ಲರದೂ ಆಗುತ್ತದೆ. ಧರ್ಮದ ಲೌಕಿಕ ಆಚರಣೆಗಳಿಗಿಂತ ಮುಖ್ಯವೆನಿಸುವುದು ಮನುಷ್ಯ ಧರ್ಮದ ತಿರುಳು, ಧರ್ಮ ಪರಿಚಲನೆ ಮಾತ್ರ ಕುಮಾರವ್ಯಾಸ ಹೇಳಹೊರಟಿರುವುದು ಇದನ್ನೇ. ಅಂತೆಯೇ ಕುಮಾರವ್ಯಾಸ ಭಾರತಕ್ಕೆ ಲೋಕಮಾನ್ಯತೆಯಿದೆ.

ಕುಮಾರವ್ಯಾಸನ ಧರ್ಮನಿರ್ವಚನಗಳು ಕಾವ್ಯದ ತುಂಬ ಅಲ್ಲಲ್ಲಿ ತೋರುತ್ತಲೇ ಹೋಗುತ್ತವೆ. ಈ ಧರ್ಮ ಮನುಷ್ಯ ಧರ್ಮದ ಸಾರವೇ ಆಗಿದೆ. ಇದಕ್ಕೆ ಕುಮಾರವ್ಯಾಸ ಭಾರತದಿಂದ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ಅಲ್ಲಲ್ಲಿ ಚದುರಿ ಹೋಗಿರುವ ಧರ್ಮದ ಮಾತುಗಳನ್ನು ಒಟ್ಟುಗೂಡಿಸಿ ಕುಮಾರವ್ಯಾಸ ಹೇಳಬೇಕೆಂದಿರುವ ಧರ್ಮವನ್ನು ನಾವು ಕಟ್ಟಿಕೊಳ್ಳಬಹುದು.

ದ್ರೋಣಪರ್ವದಲ್ಲಿ ಕೌರವರ ಬಲತಗ್ಗಿ ಕೌರವ ಪಾಳೆಯದಲ್ಲಿ ದುಮ್ಮಾನ ವ್ಯಾಪಿಸಿಕೊಂಡಿರುವ ಸಂದರ್ಭದಲ್ಲಿ ಸಂಜಯನು ಧೃತರಾಷ್ಟ್ರನಿಗೆ ಹೇಳುತ್ತಾನೆ:

ಎತ್ತಲೊಲೆವುದು ಧರ್ಮಬಲ ತಾ
ನತ್ತಲೊಲೆವುದು ದೈವ ದೈವವ
ದೆತ್ತಲೊಲೆದಿಹುದತ್ತ ವಿಜಯಶ್ರೀಯ ಕುಡಿನೋಟ. (ದ್ರೋಣ-೪-೨)

ಧರ್ಮವಿರುವಲ್ಲಿ ದೈವವಿದೆ, ದೈವವಿರುವಲಿ ವಿಜಯವಿದೆ ಎನ್ನುವ ಮಾತು ಧರ್ಮವನ್ನು ದೇವರಿಗಿಂತಲೂ ದೊಡ್ಡದು ಮಾಡಿದೆ. ಧೃತರಾಷ್ಟ್ರನ ಸುಕೃತವೆಲ್ಲ ಒಟ್ಟುಗೂಡಿ ಇಷ್ಟೆಲ್ಲ ಅವಾಂತರಗಳು ನಡೆಯುತ್ತಿವೆ ಎಂಬ ಸಂಜಯನ ವ್ಯಂಗ್ಯ ನುಡಿಯೊಂದು ಇದೇ ಸಂಧಿಯ ಆರಂಭದ ಪದ್ಯವಾಗಿದೆ. ಧೃತರಾಷ್ಟ್ರ ಧರ್ಮಾಧರ್ಮಗಳನ್ನು ತೂಗಿ ನೋಡದೆ ಪುತ್ರ ವ್ಯಾಮೋಹದಿಂದ ಅಧರ್ಮದ ಕಡೆಗೆ ವಾಲಿದ. ಧೃತರಾಷ್ಟ್ರನ ಪುತ್ರಮೋಹ ಅವನನ್ನು ಧರ್ಮವಿಮುಖನನ್ನಾಗಿ ಮಾಡಿತು. ಧರ್ಮಪರ ನಿಲುವನ್ನು ತಳೆದಿರುವ ಪಾಂಡವರ ಕುರುಕ್ಷೇತ್ರದ ಗೆಲವುಗಳನ್ನು ಅವರ ಮುಂದಿನ ಮಹಾಜಯವೆಂಬ

ಸೂಚನೆಯನ್ನು ಸಂಜಯ ಕೊಡುತ್ತಾನೆ. ಸಂಜಯನ ಈ ಮಾತು ಕೇವಲ ಧೃತರಾಷ್ಟ್ರನಿಗೆ ಅನ್ವಯಿಸುವುದಿಲ್ಲ; ಪರೋಕ್ಷವಾಗಿ ಪಾಂಡವರ ಧರ್ಮ ನಡತೆಯನ್ನು ಬೆಂಬಲಿಸುತ್ತದೆ. ಮುಂದುವರಿದು ಧರ್ಮ ಪರವಾಗಿರುವ ಯಾರಿಗಾದರೂ ವಿಜಯಶ್ರೀಯು ಒಲಿಯುತ್ತಾಳೆನ್ನುವುದು ನಿಜಧರ್ಮದ ಕುರುಹಾಗಿ ತೋರುತ್ತದೆ.

ಗದಾಪರ್ವದ ೧೧ನೆಯ ಸಂಧಿಯ ಹೊತ್ತಿಗೆ ಯುದ್ಧವೆಲ್ಲ ಮುಗಿದಿದೆ. ವೇದವ್ಯಾಸ ಮುನಿ ಬಂದು ಧೃತರಾಷ್ಟ್ರನಿಗೆ ಧರ್ಮ ಬೋಧೆ ಮಾಡುತ್ತಾನೆ. "ನಿನ್ನ ಮಗನ ಧರ್ಮ ಬಾಹಿರ ಕರ್ಮಗಳಿಂದಲೇ ಇಷ್ಟೆಲ್ಲ ಆಯಿತು. ನಿನ್ನವನು ಧರ್ಮದೂರನಾಗಿ, ಸತ್ಕರ್ಮ ಬಾಹಿರನಾಗಿ ವಿಕರ್ಮದೋಷದಿಂದ ಅಳಿದನು. ಧರ್ಮವಿರುವಲ್ಲಿ ಜಯವಿದೆ, ಸತ್ಕರ್ಮವಿರುವಲ್ಲಿ ಸಿರಿಯಿದೆ, ತ್ರಿ-ಮೂರ್ತಿಗಳು ಸದ್ಧರ್ಮವನ್ನು ಸಂರಕ್ಷಿಸುತ್ತಾರೆ".

ಧರ್ಮವೆಲ್ಲಿಹುದಲ್ಲಿ ಜಯ ಸ
ತ್ಕರ್ಮವೆಲ್ಲಿಹುದಲ್ಲಿ ಸಿರಿ ಸ
ದ್ಧರ್ಮಸಂರಕ್ಷಕರು ಹರಿಧೂರ್ಜಟಿ ಪಿತಾಮಹರು
ಧರ್ಮದೂರನು ನಿನ್ನವನು ಸ
ತ್ಕರ್ಮಬಾಹಿರನಾತ್ಮ ರಚಿತ ವಿ
ಕರ್ಮದೋಷದಲಳಿದನಿನ್ನೇನೆಂದನಾ ಮುನಿಪ (ಗದಾ-೧೧-೭)

ಇದನ್ನು ಸಾಮಾನ್ಯೀಕರಿಸುವುದಾದರೆ ಧರ್ಮದೂರರಿಗೆ ಈ ಬಾಳಿನಲ್ಲಿ ಅವಕಾಶವಿಲ್ಲ. ಅವರ ಕರ್ಮದೋಷ ಅವರ ನಾಶಕ್ಕೆ ಕಾರಣವಾಗುತ್ತದೆ. ಹೆಸರಿಲ್ಲದ ನಿಜಧರ್ಮವನ್ನು ಅನುಸರಿಸುವಲ್ಲಿ ಧರ್ಮಾಚರಣೆಯ ಹೊರೆಯಿರುವುದಿಲ್ಲ. ಇಂಥ ಧರ್ಮವನ್ನು ಸಾಮಾನ್ಯರು ಅರಿಯಬಲ್ಲರು, ಅನುಸರಿಸಬಲ್ಲರು. ಇದನ್ನು ಅನುಸರಿಸಬಲ್ಲವರಿಗೆ ಯಾವುದೇ ಕೊರತೆಯಿರುವುದಿಲ್ಲ. ಯಾವ ದೇವರಾದರೂ ಈ ಸರಳಧರ್ಮವನ್ನು ಸಂರಕ್ಷಿಸುತ್ತಾನೆ. ಧರ್ಮವೆನ್ನುವುದು ಹೆಚ್ಚು ಸಂಕೀರ್ಣಗೊಳ್ಳುವುದು ಶಿಷ್ಟರಲ್ಲೇ. ಇವರ ಧಾರ್ಮಿಕ ವಿಧಿ ವಿಧಾನಗಳು ಜ್ಞಾನದ ಮೂಷೆಯಲ್ಲಿ ಮತ್ತೆ ಮತ್ತೆ ಮಥಿಸಿ ಹಲವು ಆಚರಣೆಗಳು ಸಂಕೀರ್ಣಗೊಳ್ಳುತ್ತ ಬೆಳೆಯುತ್ತವೆ. ಅನೇಕ ಸಲ ಧರ್ಮಾಚರಣೆ ವಿಜೃಂಭಣೆಯಾಗಿ ಯಾವುದು ಧರ್ಮ ಎಂಬ ವಿಷಯದಲ್ಲಿ ಗೋಜಲಾಗುವುದೂ ಉಂಟು. ಈ ಸಂಕೀರ್ಣತೆಯಿಂದ ಜನಸಾಮಾನ್ಯರು ದೂರ ಉಳಿಯುತ್ತಾರೆ. ವಿಶೇಷವೆಂದರೆ ಅವರ ಅಂತರಂಗದಲ್ಲಿ ಹುದುಗಿದ ಭಕ್ತಿಗೆ ಯಾವ ಕೊರತೆಯೂ ಇರುವುದಿಲ್ಲ. 'ಧರ್ಮವೆಲ್ಲಿಹುದಲ್ಲಿ ಸಿರಿ' ಎಂಬ ವೇದವ್ಯಾಸರ ಈ ಮಾತು ಎಲ್ಲ ಧರ್ಮಗಳ ತಿರುಗಳಾಗಿದೆ. ಅಂತಲೇ ಇಂಥದೊಂದು ಧರ್ಮವನ್ನು ಜನಸಾಮಾನ್ಯರ ಪ್ರತಿನಿಧಿಗಳಂತಿರುವ ಪತಿವ್ರತೆ, ಧರ್ಮವ್ಯಾಧ, ಬೇಡರಂಥವರು ಸುಲಭವಾಗಿ ಅರಿಯುತ್ತಾರೆ, ಆ ದಾರಿಯಲ್ಲೇ ಕ್ರಮಿಸುತ್ತಾರೆ.

ಕುಮಾರವ್ಯಾಸನು 'ಧರ್ಮ'ವನ್ನು ಹಲವು ವಿನ್ಯಾಸಗಳಲ್ಲಿ ಬಳಸುತ್ತಾನೆ. ಅವನಿಗೆ ಸತ್ಯವೇ ಧರ್ಮವಾಗಿ, ನಿಜದ ನಡೆಯೇ ಧರ್ಮವಾಗಿ ತೋರುತ್ತದೆ.

ಧರ್ಮರಾಯನೆದುರು ನಾರದ ಪ್ರಜೆಗಳ ಹಿತರಕ್ಷಣೆಗಾಗಿ ಇರುವ ರಾಜನು ಸತ್ಯದಿಂದಲೇ ನಡೆದುಕೊಳ್ಳಬೇಕೆಂದು ಹೇಳುತ್ತಾನೆ. ಸತ್ಯದಿಂದಲೇ ಅವನಿಗೆ ಏನೆಲ್ಲ ಸಾಧ್ಯವಾಗುತ್ತದೆ. ಸತ್ಯದಿಂದ ನಡೆದುಕೊಂಡರೆ ಭೂಮಿ ದೊರೆಯುತ್ತದೆ. ಸತ್ಯದಿಂದ ನಡೆದುಕೊಂಡರೆ ಯಾವ ಪದವಿಯನ್ನಾದರೂ ಪಡೆಯಬಹುದು. ಹೀಗೆ ಸತ್ಯದಿಂದಲೇ ರಾಜ್ಯ, ಸಂಪತ್ತು ಏನೆಲ್ಲ. ಹೀಗೆ ಆರಂಭಗೊಳ್ಳುವ ನಾರದನ ಹಿತವಚನ ರಾಜನಾದವನು ತನ್ನ ಪ್ರಜೆಗಳ ಹಿತರಕ್ಷಣೆಯನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬ ವಿಷಯಕ್ಕೆ ಬಂದು ನಿಲ್ಲುತ್ತದೆ. ಇಲ್ಲಿ ನಾರದನ ಮುಖಾಂತರ ಕುಮಾರವ್ಯಾಸ ಬಳಸುವ 'ಸತ್ಯ' ಪದ ನೀತಿ, ಧರ್ಮವೇ ಆಗಿದೆ.

ಕೌರವರು ಪಾಂಡವರನ್ನು ಸುಟ್ಟುಹಾಕಬೇಕೆಂದು ಅರಗಿನ ಮನೆಗೆ ಬೆಂಕಿಯಿಟ್ಟರು. ಪುರೋಚನನ ಕುತಂತ್ರದಿಂದಾಗಿ ಪಾಂಡವರೆಲ್ಲ ಸುಟ್ಟುಹೋದರು ಎಂದು ಭ್ರಮಿಸಿದ ವಾರಣಾವತದ ಜನ ಅವರಿಗಾಗಿ ಮರುಗುತ್ತಾರೆ.

ಅಕಟಪಾಂಡವರಳಿದರೇ ಕೌ
ಳಿಕದಿ ಕೌರವರಿರಿದರೇ ಮತಿ
ವಿಕಳರವದಿರು ಬೆಂದು ಹೋದರು ಧರ್ಮದಲಿ ನಡೆದು
ಪ್ರಕಟ ಪಾಪರಿಗಹುದು ಸಾಮ್ರಾ
ಜ್ಯಕವು ಧರ್ಮಾತ್ಮರಿಗಹುದು ಪರಿ
ವಿಕಟತೆಯಸುರ ರಾಜ್ಯವೆಂದುದು ಪೌರಜನಮರುಗಿ (ಆದಿ-೮-೮೯)

ಇನ್ನು ಸುಡುಸುಡು ಧರ್ಮ ಸಂಪ್ರತಿ
ಪನ್ನ ಗುಣದಾಚಾರಗಳ ಸಂ
ಪನ್ನತೆಯನೆಂದೊರಲಿ ಮರುಗಿತು ನಿಖಿಳ ಪರಿವಾರ (ಆದಿ-೮-೯೦)

ವಾರಣಾವತದ ಜನ ಕೇವಲ ಕೌರವರನ್ನು ಹಳಿಯುವುದಿಲ್ಲ. ಧರ್ಮಪರರಾದ ಪಾಂಡವರಿಗೊದಗಿದ ಸ್ಥಿತಿಗೆ ದುಃಖಪಡುತ್ತಾರೆ. ಕೌರವರು ಮೋಸದಿಂದ ಪಾಂಡವರನ್ನು ಕೊಂದರು ಅಂಥವರಿಗೆ ಸಾಮ್ರಾಜ್ಯಪದವಿ; ಧರ್ಮದಿಂದ ನಡೆದು ಬೆಂದು ಹೋದ ಪಾಂಡವರಿಗೆ ಇಂಥ ಶಿಕ್ಷೆ! ಸುಡು ಸುಡು ಗುಣಾಚಾರಗಳಿಂದ ಏನಾಗಬೇಕು? ಎನ್ನುತ್ತಾರೆ. ವಾರಣಾವತದ ಈ ಜನ ಸಾಮಾನ್ಯರಾದರೂ ಎರಡು ವೈರುಧ್ಯಗಳನ್ನು ಸಾಕ್ಷಿಯಾಗಿರಿಸಿಕೊಂಡು ಧರ್ಮವಿವೇಚನೆಗೈಯ್ಯುತ್ತಾರೆ. ಕ್ರೂರಿಗಳಾದ ಕೌರವರಿಗೆ ಸಾಮ್ರಾಜ್ಯದ ಸಕಲ ಸುಖ; ಧರ್ಮಾತ್ಮರೆನಿಸಿದ ಪಾಂಡವರು ಹಿಂಸೆ ಪಟ್ಟು ಮರಣ ಹೊಂದುವ ದಾರುಣತೆ. ಜನ ಈ ಅಸಮ ನಡೆಯನ್ನು ಧರ್ಮದ ಕಟಕಟೆಯಲ್ಲಿ ನಿಲ್ಲಿಸಿ ವಿಚಾರಣೆಗೊಳಪಡಿಸುತ್ತಾರೆ. ಕ್ರೌರ್ಯವೇ ಗೆಲ್ಲುವುದಾದರೆ ಧರ್ಮಪರತೆ ಏಕೆ ಬೇಕು ? ಎಂಬುದು ಇವರ ಪ್ರಶ್ನೆ. ಇದು ತಾತ್ಕಾಲಿಕ ಅಷ್ಟೇ. ಇವರ ಪ್ರಶ್ನೆಗೊಂದು ಉತ್ತರವೆನ್ನುವಂತೆ ಪಾಂಡವರ ಸನ್ನಡತೆ ಅವರನ್ನು ಅರಗಿನ ಮನೆಯಿಂದ ಪಾರುಮಾಡಿ ಧರ್ಮವನ್ನು ಸಂರಕ್ಷಿಸಿದೆ ಅಥವಾ ಧರ್ಮಗ್ರಂಥ ನ್ಯಾಯದ ಪರವಾಗಿ ನಿಂತು ಧರ್ಮವನ್ನು ಸಂರಕ್ಷಿಸಿದೆ. ಇಲ್ಲಿ ವಾರಣಾವತದ ಜನ ಸಂದರ್ಭಕ್ಕೆ

ಪ್ರತಿಕ್ರಿಯಿಸಿ ಧರ್ಮವನ್ನು ಕುರಿತಾಗಿ ಮಾತನಾಡುವುದು ಮಹತ್ವದ್ದೆನಿಸುತ್ತದೆ. ಪುರಜನರ ಧರ್ಮಕುರಿತಾದ ಈ ಬೇಸರ ಇನ್ನೊಂದರ್ಥದಲ್ಲಿ ಧರ್ಮ ತಿಳುವಳಿಕೆಯ ಎಚ್ಚರವಾಗಿ ತೋರುತ್ತದೆ. ಪಂಡಿತ ವರ್ಗ ಧರ್ಮವನ್ನು ಹೇಗೆ ವ್ಯಾಖ್ಯಾನಿಸಲಿ ಜನಸಾಮಾನ್ಯರಿಗೆ ಧರ್ಮವೆನ್ನುವುದು ಸರಳಾರ್ಥದಲ್ಲಿ ನೀತಿ ಮಾರ್ಗ. ಧರ್ಮ ಮುಖೇನ ನೀತಿಯೆಂಬುದು ತನ್ನನ್ನು ತಾನು ಸಾಕ್ಷಾತ್ಕರಿಸಿಕೊಳ್ಳುವುದು ಹೀಗೆಯೇ. ಇದನ್ನು ಕುಮಾರವ್ಯಾಸ ಕಾವ್ಯದಲ್ಲಿ ಧಾರಾಳವಾಗಿ ಕಾಣಬಹುದು.

ಒಂದು ಮಾತು ನಿಜ. ಕುಮಾರವ್ಯಾಸ ಭಾರತದಲ್ಲಿ ಜನಸಾಮಾನ್ಯರು ಅನುಸರಿಸುತ್ತಿದ್ದ ಧರ್ಮ ಯಾವುದಾಗಿತ್ತು ? ಅವರು ಅನುಸರಿಸುತ್ತಿದ್ದ ಧಾರ್ಮಿಕ ಆಚರಣೆಯ ಸ್ವರೂಪ ಏನಾಗಿದ್ದವು ? ಯಾವುದೂ ಸ್ಪಷ್ಟವಾಗುವುದಿಲ್ಲ. ಮಹಾಭಾರತದ ಆಶಯ ಮತ್ತು ಹರಹು ನೋಡಿದರೆ ಜನಸಾಮಾನ್ಯರು ಎಷ್ಟೊಂದು ಸಹಜವಾಗಿ ಕಳೆದು ಹೋಗಿದ್ದಾರೆ. ವ್ಯಾಸ ಮತ್ತು ಕುಮಾರವ್ಯಾಸ ಇಬ್ಬರಿಗೂ ಮುಖ್ಯವಾಗಿರುವುದು ಕೌರವ ಪಾಂಡವರ ಕಥೆ ಹೇಳುವುದು. ವ್ಯಾಸಭಾರತ ೨೪೦೦೦ ಶ್ಲೋಕವುಳ್ಳ ಬೃಹತ್ ಕಾವ್ಯ. ಹದಿನೆಂಟು ಪರ್ವಗಳುಳ್ಳ ಇಂಥ ಕಾವ್ಯದಲ್ಲಿ ಧರ್ಮರಾಯನ ಪಟ್ಟಾಭಿಷೇಕದವರೆಗೆ ಮಾತ್ರ ಕುಮಾರವ್ಯಾಸ ಹೇಳಿದರೂ ಇದು ೧೦ ಪರ್ವ ೧೫೨ ಸಂಧಿ ೮೨೬೧ ಭಾಮಿನಿ ಪದ್ಯಗಳುಳ್ಳ ಮಹಾ ಕಾವ್ಯವಾಗಿದೆ. ಮಹಾಭಾರತದ ಹರಹು ನೋಡಿದರೆ ಈ ಹತ್ತು ಪರ್ವಗಳೂ ಸಾಕಷ್ಟು ಸಂಕ್ಷಿಪ್ತಗೊಂಡಿವೆ. ಈ ಎಲ್ಲ ಸಂಧಿಗಳ ಮುಖಾಂತರ ಕುಮಾರವ್ಯಾಸ ಭಾರತ ಕಥೆಯನ್ನು ಹಂತಹಂತವಾಗಿ ಕಥಾರೂಪದಲ್ಲಿ ಹೇಳುತ್ತ ಹೋಗುತ್ತಾನೆ. ಹೀಗಿರುವ ಇದು ಕಥಾಗುಚ್ಛ, ಕಥಾಮಂಜರಿ, ಅಂತಲೇ ಇದಕ್ಕೆ ಕುಮಾರವ್ಯಾಸ ಇಟ್ಟ ಹೆಸರು 'ಕರ್ಣಾಟ ಭಾರತ ಕಥಾಮಂಜರಿ'. ಘಟ್ಟಘಟ್ಟವಾಗಿ ಸಾಗುವ ಮಹಾಭಾರತ ಕಥಾ ಸಂವಿಧಾನದಲ್ಲಿ ಸಂಬಂಧಿಸಿರದ ಪಾತ್ರಗಳನ್ನು ಆ ಪಾತ್ರಗಳ ಚಲನವಲನ ಸಂಬಂಧಿ ನಡೆಯಲ್ಲಿ ಸಂಬಂಧಿಸಿರದ ಆಶಯಗಳನ್ನು ಸೇರಿಸುವುದು ಕಥನ ಕ್ರಿಯೆಗೆ ಸಾಧ್ಯವಾಗುವುದಿಲ್ಲ ಅನಿಸುತ್ತದೆ. ಮೇಲಾಗಿ ಇಲ್ಲಿ ಬರುವ ಸಾಮಾನ್ಯವೆನಿಸುವ ಸಮುದಾಯವೆಂದರೆ ಸೈನಿಕರು ಮತ್ತು ರಾಣಿವಾಸದವರು. ಆದಿಪಂಚಕದಲ್ಲಿ ಕೌರವ ಪಾಂಡವರ ಸಂಘರ್ಷ ಬಿಟ್ಟರೆ ಇವರಾರಿಗೂ ಇಲ್ಲಿ ಆಸ್ಪದವಿಲ್ಲ. ಇನ್ನು ಯುದ್ಧ ಪಂಚಕದಲ್ಲಿ ಸೈನಿಕರ ವಿಷಯವೆಲ್ಲ ಯುದ್ಧಸಂಬಂಧಿ ಚಟುವಟಿಕೆಗಳಿಗೆ ಸಂಬಂಧಿಸಿದ್ದು. ಹೀಗಾಗಿ ಒಟ್ಟೂ ಮಹಾಭಾರತದಲ್ಲಿ ಜನಸಾಮಾನ್ಯರು ಧಾರ್ಮಿಕ ನೆಲೆಯಲ್ಲಿ ತೋರ್ಪಡುವುದು ತುಂಬ ಅಪರೂಪ.

ಅಧ್ಯಾಯ – ೫

ಸಾಮಾಜಿಕ ನೆಲೆ : ಸಾಮಾನ್ಯ ಮನುಷ್ಯ

ಸಾಮಾಜಿಕ ನೆಲೆ : ಸಾಮಾನ್ಯ ಮನುಷ್ಯ

ಪ್ರವೇಶ:

ಕವಿರಾಜಮಾರ್ಗದಷ್ಟೊತ್ತಿಗೆ ಸಮಾಜ ನಾಲ್ಕು ಹೋಳಾಗಿರುವುದು ಸ್ಪಷ್ಟವಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ – ಎಂಬೀ ನಾಲ್ಕು ಭೇದಗಳು ಚಾತುರ್ವರ್ಣ್ಯವೆನಿಸಿದ್ದವು.

ಪರದರ್ಗ್ಗ ಪಾರ್ವರ್ಗ್ಗ
ಯ್ತರಸರ್ಗ್ಗ ಕುಡಿಯರಪ್ಪ ನಾಲ್ವರ್ಗ್ಗಗಳ್
ಸ್ಥಿರ ಗೋಪಾಧ್ಯಾಯಕ್ಷ್ಮಾ
ಪರಿಪಾಲ್ಯಕ್ಷೇತ್ರ ಕರ್ಷಣಂಗಳ್ ಕ್ರಿಯೆಗಳ್ ಕವಿರಾಜಮಾರ್ಗಂ (೧–೬೫)

–ಮೇಲಿನ ಕಂದಪದ್ಯದನ್ವಯ ವೈಶ್ಯ, ಬ್ರಾಹ್ಮಣ, ಕ್ಷತ್ರಿಯ, ಕುಡಿಯ(ಒಕ್ಕಲಿಗರು)ರೆಂದೆನಿಸಿಕೊಂಡವರಿಗೆ ಅನುಕ್ರಮವಾಗಿ ಪಶುಪಾಲನೆ, ಅಧ್ಯಯನ, ರಾಜ್ಯಾಡಳಿತ, ಒಕ್ಕಲುತನಗಳು ಉದ್ಯೋಗಗಳಾಗಿದ್ದವು. ಆದರೆ ಕಾಲಾಂತರದಲ್ಲಿ ಈ ಕ್ರಿಯೆ(ಉದ್ಯೋಗ)ಗಳು ಜಾತಿಗಳಾಗಿ ಮಾರ್ಪಟ್ಟು ಅವುಗಳಲ್ಲೊಂದು ಶ್ರೇಣಿ ನಿರ್ಮಾಣಗೊಂಡಿತು. ಈ ಶ್ರೇಣಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಅನುಕ್ರಮಣಿಕೆಯನ್ನು ತಾಳಿತು. ಈ ಶ್ರೇಣಿಯಲ್ಲಿ ಸಾಮಾಜಿಕ ಉಪೇಕ್ಷೆಗೆ ಒಳಗಾದವರು ನಾಲ್ಕನೆಯ ವರ್ಗದ ಜನ. ಇವರ ಶ್ರಮ ಮೇಲಿನ ಮೂರೂ ವರ್ಗಗಳನ್ನು ಪೋಷಿಸುತ್ತದೆಯಾದರೂ ಇವರನ್ನು ಮೇಲ್ವರ್ಗದವರು ಕಡೆಗಣಿಸುತ್ತ ಬಂದಿರುವುದು ವಿಪರ್ಯಾಸವಾಗಿ ತೋರುತ್ತದೆ. ಮನುಷ್ಯ ಮನುಷ್ಯರಲ್ಲಿ ಭೇದವೆಣಿಸುವ ಸಾಮಾಜಿಕ ಶ್ರೇಣಿಯನ್ನು ತರುವಾಯದ ಇತಿಹಾಸವೇನು ಪುರಸ್ಕರಿಸಿಲ್ಲ. ವಚನಕಾರರು, ಸರ್ವಜ್ಞ, ಕನಕದಾಸ, ಪುರಂದರದಾಸರಂಥ ಕವಿಗಳು ಇದನ್ನು ಸ್ಪಷ್ಟವಾಗಿಯೇ ಖಂಡಿಸಿರುವುದು ತರುವಾಯದ ಬೆಳವಣಿಗೆ.

ಚಾತುರ್ವರ್ಣ್ಯಗಳ ಈ ವಿಭಜನೆ ಇರುತ್ತಲೇ ಬೇರೆ ಬೇರೆ ಧರ್ಮಗಳು ತಮ್ಮ ಉತ್ತಮಿಕೆಯನ್ನು ಪ್ರತಿಷ್ಠಾಪಿಸಲು ಪ್ರಯತ್ನಿಸುತ್ತಿದ್ದ ವಿಷಯ ಸಾಮಾಜಿಕ ನೆಲೆಯಲ್ಲಿ ಸ್ಪಷ್ಟವಾಗುತ್ತದೆ. ವಡ್ಡಾರಾಧನೆಯಲ್ಲಿ ಸ್ಪಷ್ಟಗೊಳ್ಳುವ ಎರಡು ಅಂಶಗಳನ್ನು ಗುರುತಿಸಬಹುದು. ಎಲ್ಲಾ ಧರ್ಮದವರಿಗೆ, ಎಲ್ಲಾ ಧರ್ಮಗ್ರಂಥಗಳಿಗೆ ಇರುವ ಮತ ಪ್ರತಿಷ್ಠೆ ಇಲ್ಲಿಯೂ ಇದೆ. ಆ ಕಾಲಕ್ಕೆ ಧರ್ಮಾವಲಂಬಿ ಸಮುದಾಯಗಳಿಗೆ ಇದು ತುಂಬ ಸಹಜವಾದ ವಿಷಯವಾಗಿತ್ತು. ಎರಡನೆಯದಾಗಿ ಚಾತುರ್ವರ್ಣ್ಯವನ್ನು ವಡ್ಡಾರಾಧನೆ ಒಪ್ಪಿಕೊಂಡಿದೆ. ವಡ್ಡಾರಾಧನೆಯ ಹೆಚ್ಚುಕಡಿಮೆ ಎಲ್ಲಾ ಕಥೆಗಳು ರಾಜಪರಿಸರದಿಂದಲೇ ಆರಂಭಗೊಳ್ಳುತ್ತವೆ. ಅಷ್ಟೇ ಅಲ್ಲ ತೀರ್ಥಂಕರಾದವರು ಕ್ಷತ್ರಿಯ ಕುಲದ ರಾಜರಾಗಿದ್ದವರು ಎಂಬುದೂ ಇಲ್ಲಿ ಮಹತ್ವದ್ದೆನಿಸುತ್ತದೆ. ಅಂದರೆ ರಾಜನಾದವನು ಜೈನಧರ್ಮದ ಕಡೆಗೆ ಒಲವು ತೋರುತ್ತಾನೆ; ತರುವಾಯ ಜೈನಧರ್ಮದ ಉತ್ತಮಾಂಶಗಳನ್ನು ಬಳಸಿಕೊಂಡು ತೀರ್ಥಂಕರ ಹಂತ ತಲುಪುತ್ತಾನೆ. ಅಹಿಂಸಾವಾದವನ್ನು ಪ್ರಬಲವಾಗಿ ಮಂಡಿಸುವ ಜೈನಧರ್ಮ ಹೀಗೆ ಕ್ಷತ್ರಿಯ ಮನಸ್ಸನ್ನು ಪರಿವರ್ತನೆ ಮಾಡಿ ಆ ಮೂಲಕ ನಿಜವಾದ ಧರ್ಮವನ್ನು ಹೇಳುವುದು, ಸಾಮಾಜಿಕ ಶ್ರೇಯಸ್ಸನ್ನು ಹಾರೈಸುವುದು ಸಾಮಾಜಿಕ ನೆಲೆಗೆ ಸಲ್ಲುವ ಕೊಡುಗೆಯಾಗುತ್ತದೆ. ಇಂಥವೇ ಆಶಯ ಕ್ರಮಗಳನ್ನು ವಡ್ಡಾರಾಧನೆಯಂತೆ ಧರ್ಮಾಮೃತವೂ ಹೊಂದಿರುವುದರಿಂದ ಇಲ್ಲಿ ಮತ್ತೆ ಪ್ರತ್ಯೇಕವಾಗಿ ಚರ್ಚೆಗೆ ಎತ್ತಿಕೊಳ್ಳುವುದು ವಿಷಯದ ಪುನರಾವರ್ತನೆಯಾಗುತ್ತದೆ.

ಸತ್ಯವನ್ನು ಗೆಲ್ಲಿಸುವುದು ಹರಿಶ್ಚಂದ್ರ ಕಾವ್ಯದ ಪ್ರಧಾನ ಆಶಯ. ಕ್ಷತ್ರಿಯನಾದ ಹರಿಶ್ಚಂದ್ರ ಈ ಕಾವ್ಯದ ನಾಯಕ ಅಸೀಮ ಪ್ರೀತಿಯನ್ನು ಇವನ ಮೇಲೆ ಇಟ್ಟುಕೊಂಡಿರುವ ಪ್ರಜಾವರ್ಗದಲ್ಲಿ ಸಾಮಾಜಿಕ ತಾರತಮ್ಯವನ್ನು ಹುಡುಕುವುದು ಸಾಧ್ಯವಾಗುವುದಿಲ್ಲ; ಜನವರ್ಗಕ್ಕೆ ಸಂಬಂಧಿಸಿದ ಅಂಥ ಪರಿಸರವೂ ಹರಿಶ್ಚಂದ್ರ ಕಾವ್ಯದಲ್ಲಿ ಹರಿಶ್ಚಂದ್ರ ರಾಜನಾಗಿರುವ ತನಕ ದೊರೆಯುವುದಿಲ್ಲ. ಆದರೆ ಹೊಲತಿಯರ ಪ್ರಸಂಗದಲ್ಲಿ ಮನುಷ್ಯ ಕಲ್ಪಿತ ವರ್ಗವಿಭೇದವನ್ನು ಹರಿಶ್ಚಂದ್ರಕಾವ್ಯ ಚರ್ಚೆಗೆ ಒಳಗುಪಡಿಸುತ್ತದೆ. ಹಾಗೇ ಚಂದ್ರಮತಿ ಮತ್ತು ಹರಿಶ್ಚಂದ್ರರು ವಿಪ್ರನಲ್ಲಿ ಮತ್ತು ವೀರಬಾಹುಕನಲ್ಲಿ ಸೇವೆಗೆ ನಿಂತ ಪ್ರಸಂಗ ಸಾಮಾಜಿಕ ನ್ಯಾಯವನ್ನು ಕುರಿತು ಯೋಚಿಸುವಂತೆ ಮಾಡುತ್ತದೆ. ವಿಶ್ವಾಮಿತ್ರನೇನೋ ಕಾವ್ಯದ ಕೊನೆಯಲ್ಲಿ ಹರಿಶ್ಚಂದ್ರನನ್ನು ಕಾಡಿನೋಡಿದ ಉದ್ದೇಶವನ್ನು ಹೇಳುತ್ತಾನೆ. ಅವನ ಒಳ ಉದ್ದೇಶ ಏನೇ ಇರಲಿ, ರಾಜನೊಬ್ಬನ ಕುಟುಂವನ್ನು ತಳವರ್ಗಕ್ಕೆ ತಂದು ನಿಲ್ಲಿಸಿ ಶೂದ್ರರ ಅಸಹನೀಯ ಬದುಕನ್ನು, ಅವರಿಗೊದಗುವ ಅನ್ಯಾಯವನ್ನು ಬಯಲು ಮಾಡಿ ಲೋಕದೆದುರು ನಿಲ್ಲಿಸಿರುವುದು ಸತ್ಯಕ್ಕೆ ದೊರಕಿಸಿಕೊಟ್ಟ ಜಯದಷ್ಟೇ ಮುಖ್ಯವಾದುದು.

ವ್ಯಾಸಭಾರತವನ್ನು ಕನ್ನಡದಲ್ಲಿ ಹೇಳ ಹೊರಟಿರುವ ಕುಮಾರವ್ಯಾಸ ಈ ವಿಷಯದಲ್ಲಿ ಪೂರ್ಣ ಸ್ವತಂತ್ರನಲ್ಲ. ಸಾಮಾಜಿಕ ಶ್ರೇಣಿಯನ್ನು ಪುರಸ್ಕರಿಸುವ ಮತ್ತು ಅವನು ಪರಾಮರ್ಶೆಗೆ ಒಳಗು ಮಾಡುವ ವಿಷಯಗಳೆಷ್ಟೋ ಮೂಲ ಮಹಾಭಾರತದಲ್ಲಿವೆ. ಅವನ್ನೆಲ್ಲ ಇದ್ದಹಾಗೆಯೇ ಕುಮಾರವ್ಯಾಸ ಅನುವಾದಗೊಳಿಸಿದ್ದಾನೆ. ಆದರೂ ತನ್ನವೇ ಆದ ಹಲವು ಭಾವನೆಗಳನ್ನು ಸೇರಿಸಿದ್ದಾನೆ. ಕ್ಷತ್ರಿಯ ಮಗನಾಗಿ ಹುಟ್ಟಿದರೂ ಜೀವನ ಪರ್ಯಂತ ಸೂತಕುಲದವನೆನ್ನಿಸಿಕೊಂಡು ಬಾಳಿದ ದುರಂತ ಕರ್ಣನ ಬಗೆಗೆ ಅಪಾರ ಸಹಾನುಭೂತಿ ನಾರಣಪ್ಪನಿಗಿರುವುದನ್ನು ಕಾಣಬಹುದು. ತಂದೆ ಕಡೆಯಿಂದ ಕ್ಷತ್ರಿಯ ಮಗನಾಗಿ ಹುಟ್ಟಿಯೂ ವಿದುರ ಬಾಳಿದ ರೀತಿ ವಿಶ್ಲೇಷಣೆಯನ್ನು ಬಯಸುವಂತಹದು.

ವಡ್ಡಾರಾಧನೆ

ಶ್ರೇಣೀಕೃತ ಜಾತಿ ವ್ಯವಸ್ಥೆ:

ಸುಕುಮಾರ ಸ್ವಾಮಿಯ ಕತೆಯಲ್ಲಿ ಬರುವ ನಾಗಶ್ರೀಯ ತಂದೆ ಬ್ರಾಹ್ಮಣ ಪುರೋಹಿತ ಸೋಮಶರ್ಮನಿಗೆ ಮಗಳು ಜೈನಧರ್ಮವನ್ನು ಸ್ವೀಕರಿಸಿದ್ದು ಗೊತ್ತಾಗುತ್ತದೆ. ಆಗ ಸೋಮ ಶರ್ಮನು ಮಗಳಿಗೆ "ನಾಮುಂ-ಪಾರ್ವರೆಮುಂ ಲೋಕಕ್ಕೆಲ್ಲಮಗ್ಗಳಂ ಲೋಕದಿಂದಂ ಪೂಜಿತ ಮುಮೆಮ್ಮಿಂದಗ್ಗಳಂಪೆರರಿಲ್ಲದರೆಂದಂ ಸವಣರ ಧರ್ಮಮಂ ನಮಗೆ ಕೊಳಲಾಗ ಬಿಸುಡು" ಎಂದು ಅವಳಿಗೆ ತಮ್ಮ ಬ್ರಾಹ್ಮಣತ್ವದ ಹಿರಿತನದ ಬಗ್ಗೆ ತಿಳಿ ಹೇಳುತ್ತಾನೆ. ಪಂಪ ಹೇಳುವ ಜಾತಿಯೊಳೆಲ್ಲಮುತ್ತಮದ ಜಾತಿ ವಿಪ್ರಕುಲಂ ಎಂಬ ಮಾತು ಇದೇ ಅಭಿಪ್ರಾಯವನ್ನೇ ವ್ಯಕ್ತಪಡಿಸುತ್ತದೆ. ವರ್ಣವ್ಯವಸ್ಥೆಯಲ್ಲಿ ಅತ್ಯಂತ ಶ್ರೇಷ್ಠಸ್ಥಾನ ಬ್ರಾಹ್ಮಣರದು. ಹಾಗಾಗಿಯೇ ಬ್ರಾಹ್ಮಣ ಕುಲವೇ ಶ್ರೇಷ್ಠವೆಂಬ ಅಭಿಪ್ರಾಯವನ್ನು ಸಮಾಜ ಮತ್ತು ಜನಸಾಮಾನ್ಯನಿಗೆ ನಂಬಿಸಲಾಗಿತ್ತು. ಈ ಮಾತು ಅಂದಿನ ವೈದಿಕ-ಜೈನ ಧರ್ಮಗಳ ನಡುವಿನ ಮುಸುಕಿನ ಗುದ್ದಾಟವನ್ನು ಹೇಳುತ್ತದೆ. ವಡ್ಡಾರಾಧನೆಕಾರ ಜೈನನಾಗಿದ್ದಾಗ್ಯೂ ಬ್ರಾಹ್ಮಣರ ಬಗೆಗಿನ ಜನಸಾಮಾನ್ಯ ಮತ್ತು ಖುದ್ದು ಬ್ರಾಹ್ಮಣರಲ್ಲಿದ್ದ ಅಭಿಪ್ರಾಯವನ್ನು ಅತ್ಯಂತ ಸಹಜವಾಗಿ ವ್ಯಕ್ತಪಡಿಸುತ್ತಾನೆ.

ಭೈಕ್ಷಕೆಂದು ಕೌಶಂಬಿನಗರಮಂ ಪೊಕ್ಕು ಕಿರಿಮನೆಪೆರ್ಮನೆಯೆನ್ನದುಣಲ್ತಕ್ಕ ಮನೆಗಳಂ ಚರಿಗೆದೊಟಿಲುತ್ತಂ" ಎಂದು ವಡ್ಡಾರಾಧನೆಕಾರ ಹೇಳುವ ಮಾತು ಅತ್ಯಂತ ಸೂಕ್ಷ್ಮವಾಗಿದೆ. ವಡ್ಡಾರಾಧನೆಕಾರ ಹೇಳುವ ಈ ಉಣಲು ತಕ್ಕುದಾದ ಮನೆಗಳೆಂದು ಪ್ರತ್ಯೇಕವಾಗಿ ಹೇಳುವಾಗ ಉಣಲು ತಕ್ಕದಲ್ಲದ ಮನೆಗಳ ಬಗ್ಗೆ ಏನೂ ಪ್ರತ್ಯೇಕವಾಗಿ ಮಾತನಾಡದೇ ಇದ್ದರೂ ಈ ವಾಕ್ಯದಲ್ಲಿ ಮೌನವೇ ಮಾತನಾಡುತ್ತದೆ.

ವಡ್ಡಾರಾಧನೆಕಾರ ಉಣಲು ತಕ್ಕದ್ದಲ್ಲದ ಮನೆಗಳ ಕುರಿತು ಏನೂ ಮಾತನಾಡುವದಿಲ್ಲ. ಆದಾಗ್ಯೂ ಉಣಲು ತಕ್ಕದ್ದಲ್ಲದ ಮನೆಗಳೆಂದರೆ ಅಸ್ಪೃಶ್ಯರ ದಲಿತರ ಮನೆಗಳು ಎಂದು ಅತ್ಯಂತ ಸಲೀಸಾಗಿ ಗುರುತಿಸಬಹುದಾಗಿದೆ.

ಸುಕುಮಾರ ಸ್ವಾಮಿ ಕಥೆಯ ಸುಮಿತ್ರಸೆಟ್ಟಿ ಮಗ ಸತ್ತಾಗ ನಾಲ್ಕು ಜನ ಭಟಾರರು ಸ್ಮಶಾನದಲ್ಲಿ ಅವನ ಕಳೆಬರವನ್ನು ಕಾಯುತ್ತಾರೆ. ಸತ್ತ ಮಗ ಬದುಕಿ ಬಂದ ಖುಷಿಗೆ ಸೆಟ್ಟಿ ಕಾದ ನಾಲ್ಕೂ ಜನ ಭಟರಿಗೆ ಸಾವಿರ ಚಿನ್ನದ ನಾಣ್ಯಗಳಿದ್ದ ಪೊಟ್ಟಣಗಳನ್ನು ಉಪ್ಪರಿಗೆಯ ಮೇಲಿಂದ ಕೆಳಗೆ ಎಸೆಯುತ್ತಾನೆ.

ಮೇಲ್ಜಾತಿಯವರು ಕೆಳಜಾತಿಯ ದಲಿತ ಜನರಿಗೆ ಕುಡಿಯುವ ನೀರನ್ನು ಹಿಡಿದು ಎಲ್ಲವನ್ನೂ ಮೇಲಿಂದ ಎತ್ತಿಹಾಕುವ ಸಂಪ್ರದಾಯವನ್ನು ಇಡೀ ಭಾರತದುದ್ದಕ್ಕೂ ಪ್ರಾಚೀನ ಕಾಲದಿಂದ ಇವತ್ತಿನವರೆಗೂ ಕಾಣುತ್ತೇವೆ. ಸ್ಮಶಾನದಲ್ಲಿ ರಾತ್ರಿ ಕಳೆಯುವ ಭಟರು ಅಲ್ಲಿಯೇ ಕುರಿ ಸುಟ್ಟುಕೊಂಡು ಊಟಮಾಡಿದರು ಎಂದು ಕತೆಗಾರ ಹೇಳಿದ ವಿವರಣೆಗಳೆಲ್ಲ ಅವರು ದಲಿತರು ಎಂಬುದನ್ನು ಸೂಚಿಸುತ್ತದೆ. ಹಾಗಾಗೇ ಶೆಟ್ಟಿ ಖುಷಿಯಾಗಿ ಕಾಣಿಕೆ ನೀಡಿದರೂ ಅವರನ್ನು ಮುಟ್ಟಿ ಕೊಡಲಾಗದೇ ಮೇಲಿಂದ ಕೆಳಗೆ ಹಾಕುತ್ತಾನೆ. ಹೀಗೆ ಸಮಾಜ ಅಸ್ಪೃಶ್ಯತೆಯನ್ನು ಅತ್ಯಂತ ಕಟ್ಟು ನಿಟ್ಟಾಗಿ ಪಾಲಿಸಿಕೊಂಡು ಬರುತ್ತದೆ.

ಸುಕುಮಾರ ಸ್ವಾಮಿಯ ಕತೆಯಲ್ಲಿ ಬರುವ ಅಗ್ನಿಭೂತಿ ವಾಯುಭೂತಿಯರ ಕತೆಯಲ್ಲಿ ಅಗ್ನಿಭೂತಿಯು ಸೂರ್ಯಮಿತ್ರಾಚಾರ್ಯರ ಹತ್ತಿರ ದೀಕ್ಷೆಪಡೆದು ತಪಸ್ಸು ಆಚರಿಸಿ ಅವರೊಂದಿಗೆ ಸಂಚಾರ ಕೈಗೊಂಡು ಚಂಪಾನಗರಕ್ಕೆ ಬಂದಿರುತ್ತಾರೆ. ಒಂದು ದಿನ ಚಂಪಾನಗರದಲ್ಲಿ ಭಿಕ್ಷೆಗಾಗಿ ಅಗ್ನಿಭೂತಿ ಮುನಿಯು ಊರನ್ನು ಪ್ರವೇಶಿಸುವರು. ಹೀಗೆ ಪ್ರವೇಶಿಸುತ್ತಿರುವಂತೆಯೇ ಹೊಲೆಯರ ಹುಟ್ಟುಗುರುಡಿ ಹುಡುಗಿಯೊಂದು ಉದ್ಯಾನವನದಲ್ಲಿ ನೇರಿಲ ಹಣ್ಣನ್ನು ಹುಡುಕಿ ತಿನ್ನುತ್ತಿರುವದನ್ನು ನೋಡಿ ಅಗ್ನಿಭೂತಿ ಮುನಿಯು ಅಂತಃಕರಣ ಉಕ್ಕಿ ಆಕೆಯ ಮೇಲೆ ಸ್ನೇಹ ಉಂಟಾಗಿ ಕಣ್ಣಲ್ಲಿ ನೀರು ಸುರಿಸುತ್ತ "ಕರುಣದಿಂದ ಕುಂಚದ ಕೋಲ್ಲೋಳ್ ಪರೆದಿರ್ದ ಪಣ್ಗಳಂ ಕೂಸಿನ ಮುಂದೆ ಸಾರ್ಚತ್ತಂ" ಎಂದು ವಡ್ಡಾರಾಧನೆಕಾರ ಮನಮುಟ್ಟುವಂತೆ ಹೇಳುವನು. ಅಗ್ನಿಭೂತಿ ಮುನಿಗೆ ಆ ಹುಡುಗಿಗೆ ಸಹಾಯ ಮಾಡುವ ಮನಸ್ಸಿದೆ, ಆದರೆ ಧರ್ಮಗುರುವಾದರೂ ಸಮಾಜದ ಜಾತೀಯತೆ ಕಟ್ಟಳೆಯನ್ನು ಅವನೂ ಮೀರಲಾರ. ಆದ್ದರಿಂದಲೇ ಕುಂಚದಿಂದ ನೂಕಿ ನೂಕಿ ಹೊಲೆಯ ಕುರುಡ ಹುಡುಗಿಗೆ ಹಣ್ಣುಗಳನ್ನು ಆರಿಸಿಕೊಡುವನು. ಕತೆಗಾರ ಸೂಕ್ಷ್ಮಸಂವೇದನೆಯ ಮನಸ್ಸುಳ್ಳವನು. ತನ್ನ ಸುತ್ತಮುತ್ತಲ ಸಮಾಜದಲ್ಲಿ ಕಂಡ ಅನುಭವಗಳನ್ನೆ ತನ್ನ ಕತೆಗಳಲ್ಲಿ ದಾಖಲಿಸಿದ್ದಾನೆ.

ತಪಸ್ವಿಗಳು, ಧರ್ಮಬೋಧಕರು ಧಾರ್ಮಿಕವಾಗಿ ಎತ್ತರದ ಸ್ಥಾನದಲ್ಲಿರುವವರು. ಸಮಾಜ ಹಾಗೂ ಸಾಮಾಜಿಕರಲ್ಲಿರುವ ಅಂಧಶ್ರದ್ಧೆ, ಕರ್ಮಠ, ಆಚಾರ-ವಿಚಾರಗಳನ್ನು ಹೋಗಲಾಡಿಸಿ ಮನುಷ್ಯ ಬದುಕನ್ನು ಹಸನುಗೊಳಿಸುವ ಜವಾಬ್ದಾರಿ ಧರ್ಮ ಮತ್ತು ಧಾರ್ಮಿಕ ಗುರುಗಳ ಕರ್ತವ್ಯವಾಗಿರುತ್ತದೆ.

ಆದರೆ ಸಮಾಜದಲ್ಲಿ ಅನೂಚಾನವಾಗಿ ನಡೆದುಕೊಂಡು ಬಂದ ಜಾತೀಯತೆಯನ್ನು ಸವಣರೂ ಸಹ ಅತ್ಯಂತ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದುದರ ಚಿತ್ರಣ ವಡ್ಡಾರಾಧನೆಯ ಕತೆಗಳಲ್ಲಿ ದೊರೆಯುತ್ತದೆ. ಮನುಷ್ಯ ಮನುಷ್ಯರ ನಡುವಿನ ಅಂತರ-ಅಸಮಾನತೆಯನ್ನು ತಿಳಿಸಬೇಕಾಗಿದ್ದ ಧರ್ಮದ ಸಾರವನ್ನು ಅರಿತ ಧರ್ಮಗುರುಗಳೇ ಅತ್ಯಂತ ವ್ಯವಸ್ಥಿತವಾಗಿ ಜಾತೀಯತೆಯನ್ನು ಪೋಷಿಸುವದು ವಿಪರ್ಯಾಸದ ಸಂಗತಿ.

ಆ ಕಾಲದ ಅಸ್ಪೃಶ್ಯತೆಯಂತಹ ಸಾಮಾಜಿಕ ರೀತಿ ನೀತಿಗಳನ್ನು ಸಾಮಾಜಿಕರಷ್ಟೇ ಅಲ್ಲ ಧರ್ಮದ ಸಾರವನ್ನರಿತ ಅಗ್ನಿಭೂತಿ ವಾಯುಭೂತಿಯಂತಹ ಎಲ್ಲ ಧರ್ಮದ ಅನುಯಾಯಿಗಳೂ ಅತ್ಯಂತ ಕಟ್ಟುನಿಟ್ಟಾಗಿ ಯಾವುದೇ ವಿರೋಧವಿಲ್ಲದೇ ಮುಂದುವರೆಸಿಕೊಂಡು ಬಂದದ್ದಕ್ಕೆ ಇಂಥ ಕತೆಗಳು ಸಾಕ್ಷಿಯಾಗುತ್ತವೆ ಮತ್ತು ಅವರೂ ಸಮಾಜದಿಂದ ಹೊರತಾದವರಲ್ಲ ಎಂಬುದನ್ನು ತೋರಿಸುತ್ತವೆ.

ಕುಟುಂಬ ವ್ಯವಸ್ಥೆ:

ವಡ್ಡಾರಾಧನೆಕಾರನ ಕಾಲಕ್ಕೂ ಎಲ್ಲ ಕುಟುಂಬಗಳೂ ಕೂಡುಕುಟುಂಬಗಳಿರಲಿಲ್ಲ. ಕುಟುಂಬ ವ್ಯವಸ್ಥೆಯಲ್ಲಿ ಇವತ್ತಿಗಷ್ಟೇ ಅಲ್ಲ ಅವತ್ತೂ ಅಣ್ಣ-ತಮ್ಮ ಬೇರೆ ಬೇರೆ ಮನೆ ಮಾಡಿಕೊಂಡಿರುವದನ್ನು ಕಾಣುತ್ತೇವೆ. ಸುಕುಮಾರ ಸ್ವಾಮಿಯ ಕತೆಯಲ್ಲಿ ಬರುವ ಅಗ್ನಿಭೂತಿ ವಾಯುಭೂತಿ ಅಣ್ಣತಮ್ಮಂದಿರು ಬೇರೆ ಬೇರೆ ಮನೆಗಳಲ್ಲಿ ವಾಸಿಸುತ್ತಿದ್ದರು ಎಂಬುದನ್ನು ಕತೆ ಹೇಳುತ್ತದೆ.

ಭಿಕ್ಷೆಬೇಡುತ್ತ ಬಂದ ಸೂರ್ಯಮಿತ್ರಾಚಾರ್ಯರು ಅಗ್ನಿಭೂತಿ ಮನೆಗೆ ಹೋಗುತ್ತಾರೆ. ಅಗ್ನಿಭೂತಿ ಸೂರ್ಯಮಿತ್ರಾಚಾರ್ಯರನ್ನು ಭಕ್ತಿಗೌರವಗಳಿಂದ ಆದರಿಸಿ ಆತಿಥ್ಯಮಾಡುತ್ತಾನೆ. ಅವರು ತನ್ನನ್ನು ಹರಸಿ ಹೊರಡಲನುವಾದಾಗ ಅಗ್ನಿಭೂತಿ ವಾಯುಭೂತಿಯನ್ನು ಹರಿಸಬೇಕೆಂದು ವಾಯುಭೂತಿಯ ಮನೆಗೆ ಕರೆತಂದ. ಹೀಗೆ ಹೇಳುವದರೊಂದಿಗೆ ತನಗೆ ಅರಿವಿಲ್ಲದಂತೆ ವಡ್ಡಾರಾಧನೆಕಾರ ಅವತ್ತಿನ ಕೌಟುಂಬಿಕ ವ್ಯವಸ್ಥೆಯನ್ನು ಹೇಳುತ್ತಾನೆ. ಯಾವತ್ತಿಗಾದರೂ ಅಷ್ಟೇ ಅಣ್ಣ-ತಮ್ಮ ಬೇರೆಯಾಗುವದು ರೂಢಿಯಲ್ಲಿದೆ.

ವಾಯುಭೂತಿಯು ಸೂರ್ಯಮಿತ್ರಾಚಾರ್ಯರೊಂದಿಗೆ ಕೆಟ್ಟದಾಗಿ ನಡೆದುಕೊಂಡದ್ದಕ್ಕಾಗಿ ಅಗ್ನಿಭೂತಿಯ ಹೆಂಡತಿಯಾದ ವಾಯುಭೂತಿಯ ಅತ್ತಿಗೆ ಸೋಮದತ್ತೆ ಮಯ್ದುನನ ಮೇಲಿನ ಅಕ್ಕರತೆ ಸಲುಗೆಯಿಂದಲೂ ತನ್ನ ಗಂಡ ಅಗ್ನಿಭೂತಿ ದೀಕ್ಷೆತೆಗೆದುಕೊಂಡು ಸಂಸಾರ ತ್ಯಜಿಸಿ ಸೂರ್ಯಮಿತ್ರಾಚಾರ್ಯರೊಂದಿಗೆ ಹೋಗಲು ಕಾರಣ ವಾಯುಭೂತಿಯೇ ಎಂಬ ದುಃಖ, ಸಿಟ್ಟಿನಿಂದಲೂ ವಾಯುಭೂತಿಗೆ ಕಟುವಾಗಿ ಮಾತನಾಡುತ್ತಾಳೆ. ಅವಳ ಮಾತಿನಿಂದ ಅತೀವವಾಗಿ ಕೋಪ ಬಂದು ಅತ್ತಿಗೆಯನ್ನು ಬಾಯಿಗೆ ಬಂದಂತೆ ಬಯ್ದು ಬಡಿದು ಕಾಲಿಂದ ಅವಳ ತಲೆಗೆ ಒದೆಯುತ್ತಾನೆ. ಅತ್ತಿಗೆ-ಮೈಯ್ದುನರ ಸಂಬಂಧವೆಂದರೆ ತಾಯಿ ಮಕ್ಕಳ ಸಂಬಂಧ ಎಂದು ನಮ್ಮ ಭಾರತೀಯ ಕೌಟುಂಬಿಕ ವ್ಯವಸ್ಥೆ ಪರಿಗಣಿಸುತ್ತದೆ. ಅವೆಲ್ಲವನ್ನು ಮೀರಿ ವಾಯುಭೂತಿ ಅತ್ತಿಗೆಯನ್ನು ಒದ್ದು ಅವಳ ಮನೆಯಲ್ಲಿದ್ದುದೆಲ್ಲವನ್ನು ದೋಚಿಕೊಂಡು "ನಿಮ್ಮ ಸವಣನಾಗಿರ್ದಾಣ್ಮನ ಪೋದಲ್ಲಿಗೆ ಪೋಗೆಂದಟ್ಟಿ"(ವಡ್ಡಾರಾಧನೆ ಪು-೮) ಮನೆಯಿಂದ ಹೊರಗಟ್ಟುವನು. ವಾಯುಭೂತಿಯ ಈ ನಡುವಳಿಕೆಯಿಂದ ಕೋಪಗೊಂಡ ಅತ್ತಿಗೆ ಜನ್ಮಾಂತರದಲ್ಲಾದರೂ ವೈರ ಸಾಧಿಸುವ ಶಪಥಮಾಡುತ್ತಾಳೆ. ಈ ರೀತಿಯ ಕೌಟುಂಬಿಕ ದೌರ್ಜನ್ಯಗಳು ಹೆಣ್ಣಿನ ಮೇಲೆ ಅನಾದಿಕಾಲದಿಂದಲೂ ಇವತ್ತಿನವರೆಗೂ ನಡೆದುಕೊಂಡೇ ಬಂದಿವೆ.

ಸುಕುಮಾರ ಸ್ವಾಮಿಯ ಕತೆಯಲ್ಲಿ ಬರುವ ಸುಮಿತ್ರಸೆಟ್ಟಿಯ ಮಗನಿಗೆ ಹಾವು ಕಚ್ಚಿ ಸಾಯುತ್ತಾನೆ. ಮಂತ್ರವಾದಿಯೊಬ್ಬ ಅವನ ಮಗನನ್ನು ಮರುದಿನ ಬೆಳಗ್ಗೆ ಮಂತ್ರದಿಂದ ಬದುಕಿಸುವದಾಗಿ ಅದಕ್ಕಾಗಿ

ರಾತ್ರಿ ಇಡೀ ಸ್ಮಶಾನದಲ್ಲಿ ಅವನಿಗೆ ಕಾವಲಿರಲು ಹೇಳುತ್ತಾನೆ. ಸುಮಿತ್ರಸೆಟ್ಟಿ ತಾನು ತನ್ನ ಮಗನನ್ನು ಕಾಯದೇ ನಾಲ್ಕು ಜನ ಬೇರೆಯವರನ್ನು ಕಾವಲಿಡುತ್ತಾನೆ.

ಆ ಕಾಲಕ್ಕಷ್ಟೇ ಅಲ್ಲ ಈ ಕಾಲದಲ್ಲೂ ಅಷ್ಟೇ ತಮ್ಮ ವಸ್ತು, ವ್ಯಕ್ತಿಯನ್ನು ನೋಡಿಕೊಳ್ಳಲು ಬೇರೆಯವರನ್ನು ನೇಮಿಸುವದನ್ನು ಕಾಣುತ್ತೇವೆ. ತಮ್ಮದನ್ನು ತಾವು ಕಾಪಾಡಿಕೊಂಡಿರುವದರಲ್ಲಿನ ಖುಷಿ ಆ ಕೆಲಸ ಇನ್ನೊಬ್ಬರು ಮಾಡಿದಾಗ ಸಿಗದು, ಮನುಷ್ಯ ಎಷ್ಟೇ ಸಿರಿವಂತನಾಗಿದ್ದರೂ ಸತ್ತ ಮಗ ಬದುಕಿ ಬರುತ್ತಾನೆಂದರೆ ಒಂದು ರಾತ್ರಿ ತನ್ನ ಮಗನನ್ನು ಕಾಯಲಾಗದೇ ಬೇರೆಯವರನ್ನು ನೇಮಿಸುವ ಮನಃಸ್ಥಿತಿಯ ತಂದೆ-ತಾಯಿಯರು ಅಂದೂ ಇದ್ದರು ಇಂದೂ ಇದ್ದಾರೆ.

ಸುಕುಮಾರಸ್ವಾಮಿಯ ಕತೆಯಲ್ಲಿ ಬರುವ ಸುದಾಮೆಯು ಮಾತಿನಂತೆ ತನ್ನ ಮದುವೆ ದಿನದ ಅಲಂಕಾರ ತೋರಿಸಲು ಸೋದರ ಮೈದುನನ ಬಳಿ ಹೋಗುತ್ತಾಳೆ. ಅವನು ಅಂಗಡಿಯಲ್ಲಿ ಮಲಗಿದ್ದ ಎಂಬ ವಿವರಣೆ ವಡ್ಡಾರಾಧನೆಕಾರ ಕೊಡುತ್ತಾನೆ.

ಹೀಗೆ ವಯಸ್ಸಿಗೆ ಬಂದ ಮದುವೆಯಾಗದ ಹುಡುಗರು, ವಯಸ್ಸಾದವರು ಅಂಗಡಿಯಲ್ಲೋ ಊರದೇವಸ್ಥಾನದ ಜಗುಲಿಯ ಮೇಲೋ, ಊರ ಅಗಸಿಯ ಬಾಗಿಲ ಎಡ-ಬಲ ಭಾಗಗಳಲ್ಲಿ ಇರುವ ಪೌಳಿಗಳಲ್ಲೋ ಮಲಗುವ ರೂಢಿ ಯಾವತ್ತಿನಿಂದಲೂ ಇದೆ. ಅದಕ್ಕೆ ಕಾರಣ ಮನೆ ಚಿಕ್ಕದಾಗಿರುತ್ತದೆ. ಅಂಗಡಿಯಲ್ಲಿ ಮಲಗಿದರೆ ಅಂಗಡಿಯನ್ನು ಕಾಯ್ದಂತೆ ಆಗುತ್ತದೆ ಎಂಬ ಎರಡೂ ಉದ್ದೇಶ ಇದರ ಹಿಂದೆ ಅಡಗಿರುತ್ತದೆ.

ಇದೇ ಸುಕುಮಾರ ಸ್ವಾಮಿಯ ಕಥೆಯಲ್ಲಿ ಬರುವ ಮೋದಾಳಿ ಎಂಬುವಳು ತೊಟ್ಟಿಲಲ್ಲಿದ್ದಾಗಲೇ ಅವಳನ್ನು ಸೋದರಮಾವನಿಗೆ ಮದುವೆ ಮಾಡುವದಾಗಿ ನಿಶ್ಚಯ ಮಾಡಲಾಗಿತ್ತು. ಅವನು ಬೆಳೆದು ದೊಡ್ಡವನಾಗಿ ಹಣಗಳಿಕೆಗಾಗಿ ಸುವರ್ಣ ದ್ವೀಪಕ್ಕೆ ಹೋಗುತ್ತಾನೆ. ಹೋಗುವಾಗ ತಾನು ಹನ್ನೆರಡು ವರ್ಷದೊಳಗಾಗಿ ಬರದಿದ್ದರೆ ತನ್ನ ತಮ್ಮನಿಗೆ ಮೋದಾಳಿಯನ್ನು ಕೊಟ್ಟು ಮದುವೆ ಮಾಡಬೇಕಾಗಿ ಮಾವನಿಗೆ ಹೇಳಿ ಹೋಗುತ್ತಾನೆ. ಹನ್ನೆರಡು ವರ್ಷಕಾದರೂ ಬಾರದಿದ್ದವ ಇನ್ನೇನು ಮೋದಾಳಿಗೆ ನಂದನ ತಮ್ಮ ಬೋಧನಿಗೆ ಧಾರೆ ಎರೆದು ಕೊಡಬೇಕೆಂದಾಗ ಮೊದಲು ನಿಶ್ಚಯವಾದ ನಂದನೇ ಪ್ರತ್ಯಕ್ಷವಾಗಿ ಬಿಡುತ್ತಾನೆ. ಆಗ ಅಣ್ಣನ ಹೆಂಡತಿ ತಮ್ಮನಿಗೆ ಬೇಡ ತಮ್ಮನ ಹೆಂಡತಿ ಅಣ್ಣನಿಗೆ ಬೇಡ ಎಂದು ಇಬ್ಬರೂ ಬಿಡುತ್ತಾರೆ.

ಭಾರತೀಯ ಸಂಪ್ರದಾಯದಲ್ಲಿ ಅಣ್ಣನ ಹೆಂಡತಿಯು ತಾಯಿ ಎಂಬ ಕಲ್ಪನೆ ಇದೆ. ಅದನ್ನೇ ಪಂಪ ತನ್ನ "ಆದಿಪುರಾಣ" ದಲ್ಲಿ "ಅಣ್ಣನೊಲಿದ ಲತಾಂಗಿಗಂ ಆನುಂ ಆಟಿಸಿದಂತೆ" ಎಂದು ಹೇಳುತ್ತಾನೆ. ಸಾಮಾನ್ಯನಲ್ಲಿನ ಈ ಭಾವನೆಯ ಕಾರಣಕ್ಕಾಗಿಯೇ ಭಾರತೀಯ ಕೌಟುಂಬಿಕ ವ್ಯವಸ್ಥೆ ಇವತ್ತಿಗೂ ಸುರಕ್ಷಿತವಾಗಿದೆ.

ಇದೇ ಕತೆಯ ಮುಂದುವರಿದ ಭಾಗದಲ್ಲಿ ಮೋದಾಳಿ ಮದುವೆಯಾಗದೇ ತವರಿನಲ್ಲೇ ಉಳಿಯುತ್ತಾಳೆ. ನಾಗಸೂರ ಎಂಬುವವನು ಎಂಟು ಜನ ಹೆಂಡತಿಯರಿದ್ದಾಗ್ಯೂ ಅವರಲ್ಲಿ ಸಂತೋಷ ಪಡದೇ ಮೋದಾಳಿಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದ ಎಂಬ ಮಾತಿನಲ್ಲಿ ಗಂಡಿಗೆ ನೈತಿಕತೆಯ ಪ್ರಶ್ನೆ ಇಲ್ಲ ಗಂಡು ಏನು ಮಾಡಿದರೂ ನಡೆಯುತ್ತದೆ ಎಂಬ ಭಾವವನ್ನು ಕಾಣುತ್ತೇವೆ.

ಭಾರತೀಯ ಕೌಟುಂಬಿಕ ವ್ಯವಸ್ಥೆ ವರ್ಣ ವ್ಯವಸ್ಥೆಯ ಮೇಲೆ ಆಧಾರಿತವಾದದ್ದು. ವರ್ಣವ್ಯವಸ್ಥೆಯಲ್ಲಿ ಆಯಾ ಜಾತಿಗೆ ಸೇರಿದ ಕುಟುಂಬ ಆಯಾ ಜಾತಿಗೆ ಸೇರಿದ ಆಚರಣೆಗಳನ್ನು ಬದುಕಿನಲ್ಲಿ ಮತ್ತು ಸಂಸ್ಕಾರಗಳಲ್ಲಿ ಅಳವಡಿಸಿಕೊಳ್ಳುತ್ತದೆ.

ಅಂತೆಯೇ ಬ್ರಾಹ್ಮಣ ಸಮುದಾಯದಲ್ಲಿ ಬಾಲಕರಿಗೆ ಮುಂಜಿ(ಉಪನಯನ) ಮಾಡುವ ಸಂಪ್ರದಾಯವಿದೆ. ಈ ಉಪನಯನ ಮಾಡಲು ಯಾವಾಗಲೂ ಒಳ್ಳೆಯದಾದ ವಾರ-ತಿಥಿ-ನಕ್ಷತ್ರ ಮುಹೂರ್ತ ನೋಡಿ ಮಾಡಲಾಗುತ್ತದೆ.

ಆರ್ಥಿಕತೆ : ವಿವಿಧ ಮುಖಗಳು

ವಡ್ಡಾರಾಧನೆಯ ಕಾಲಕ್ಕೆ ವ್ಯವಸಾಯ, ವ್ಯಾಪಾರವೇ ಆರ್ಥಿಕತೆಯನ್ನು ನಿರ್ಧರಿಸುತ್ತಿದ್ದವು. ಒಕ್ಕಲುತನದಲ್ಲಿ ಒಕ್ಕಲು ಮಕ್ಕಳ ಆರ್ಥಿಕ ಸ್ಥಿತಿ ಚಿಂತಾಜನಕವಾಗಿತ್ತು. ಉಳ್ಳವರು, ಭೂಹಿಡುವಳಿದಾರರು ಊಳುವವರನ್ನು ಅತ್ಯಂತ ಅಮಾನವೀಯವಾಗಿ ನಡೆಸಿಕೊಳ್ಳುತ್ತಿದ್ದ ಉದಾಹರಣೆಗಳು ವಡ್ಡಾರಾಧನೆಯಲ್ಲಿ ದೊರೆಯುತ್ತವೆ.

"ವೆಟ್ಟುಗಳಬಾಯಂ ಕಟ್ಟಿಯೊಕ್ಕಿಸುಗುಂ ಮತ್ತಡುವ ಬಡ್ಡಿಸುವ ಬೆಸಕಯ್ವ ಪೆಂಡಿರಮೊಲೆಗಳಂ ಸೀರೆಯಿಂ ಕಟ್ಟಿಸಿ ಕೂಸುಗಳಂ ಮೊಲೆಯುಣಲೀಯದೆ ಬೆಸಕೆಯ್ಸುಗುಂ" (ವಡ್ಡಾರಾಧನೆ, ಪುಟ-೧೭೧) ತನ್ನ ಹೊಲದಲ್ಲಿ ಕೆಲಸ ಮಾಡುವ ಎತ್ತುಗಳ ಬಾಯನ್ನು ಕಟ್ಟುವದು, ಅಡುಗೆ ಮಾಡುವ, ಬಡಿಸುವ, ಸೇವೆಗೈವ ಹೆಂಡಿರ ಮೊಲೆಗಳಿಗೆ ಭದ್ರವಾಗಿ ಬಟ್ಟೆಕಟ್ಟಿಸಿ ಹಸುಗೂಸುಗಳು ತಾಯಿ ಹಾಲು ಕುಡಿಯದ ಹಾಗೆ ಮಾಡುವನು. ಇದು ದುಡಿಯುವ ವರ್ಗದ ಜನರ ನರಕ ಸದೃಶ ಬದುಕನ್ನು ಚಿತ್ರಿಸುತ್ತದೆ. ದುಡಿಯುವ ವರ್ಗದ ಜನ ಇಂಥ ಹಿಂಸೆಯನ್ನೂ ಸಹಿಸಿಕೊಂಡು ಅವರಲ್ಲೇ ದುಡಿಯುವದನ್ನು ನೋಡಿದಾಗ ಅವರ ಆರ್ಥಿಕ ದುಸ್ಥಿತಿಯೇ ಇಂಥ ಎಲ್ಲ ಕಷ್ಟಗಳನ್ನು ಸಹಿಸಿಕೊಳ್ಳುವ ಅನಿವಾರ್ಯತೆಯನ್ನು ಸೃಷ್ಟಿಸುತ್ತದ. ಜೊತೆಗೆ ಜಮೀನ್ದಾರರ ಆರ್ಥಿಕ ಸಬಲತೆಯೇ ಬಡವರನ್ನು ಅವರು ಇಷ್ಟು ನಿರ್ದಯವಾಗಿ ನಡೆಸಿಕೊಳ್ಳುವಂತೆ ಮಾಡುತ್ತದೆ.

ಒಕ್ಕಲಿಗರನ್ನು ವಂಚಿಸುವದು ತಮ್ಮ ಪ್ರತಿಷ್ಠೆಯ, ಬುದ್ಧಿವಂತಿಕೆಯ ವಿಷಯವಾಗಿ ಪರಿಗಣಿಸುವ ಗುಂಪು ಎಲ್ಲ ಕಾಲಕ್ಕೂ ಇದ್ದೇ ಇರುತ್ತದೆ. ಅವರನ್ನು ಮೋಸಗೊಳಿಸುವದರಲ್ಲಿ ತಮ್ಮ ಚಾಣಾಕ್ಷತೆಯ ಪ್ರದರ್ಶನ ಒಂದೆಡೆಯಾದರೆ ಇನ್ನೊಂದೆಡೆಯಲ್ಲಿ ಉಳುವವರು ಬುದ್ಧಿಹೀನರು, ದಡ್ಡರು ಎಂದು ನಂಬಿಸುವ ಮೂಲಕ ಅವರ ಅಂತಃಸ್ಥೈರ್ಯವನ್ನು ಕುಗ್ಗಿಸುವ ಕೆಲಸವೂ ನಿರಂತರ ನಡೆಯುತ್ತಲೇ ಇರುತ್ತದೆ. ಇದಕ್ಕೆ ಉದಾಹರಣೆಯಾಗಿ 'ಚಾಣಕ್ಯರಿಸಿಯ ಕತೆ'ಯ ಒಂದು ಪ್ರಸಂಗ ಹೀಗೆ ಬರುತ್ತದೆ. "ಇಂತೆಂದನಾರೊರ್ವರೊಂದು ಪೇಱು ಮಣ್ಣಂ ಶ್ರೀಪರ್ವತದ ಮೇಗೊಟ್ಟುವರವರ್ಗೊಂದು ಪೇಱು ಪೊನ್ನಂ ಕುಡುವೆನೆಂದಾ ನಾಡೊಳ್ ಘೋಷಣೆಯಂ ಪೊಯ್ಸಿದೊಡದಂ ಕೇಳ್ದೊರ್ವನೊಕ್ಕಲಿಗನೊಂದು ಪೇಱು ಪೊನ್ನಂ ಕಟ್ಟೊಡದಂ ಕೇಳ್ದಾ ನಾಡೊಕ್ಕೊಲಿಗರೆಲ್ಲಂ ಮಣ್ಣ ಪೇಱಂ ತಂದು ಶ್ರೀಪರ್ವತದ ಮೇಗೆ ಬಳಸಿಯುಂ ಪಿರಿದುಂ ರಾಶಿಯಾಗೊಟ್ಟಿ ಚಾಣಕ್ಯನಂ ಪೊನ್ನಂ ಬೇಡಿದೊಡಿಂತೆಂದಂ ನಿಮ್ಮಂ ತರವೇಟ್ಟೊದಾರೆಯಗೊಂಡದು ಪೇಱು ಮಣ್ಣು ಬಾಜ್ತೆಯಾಗಿ ತರಿಸಿಕೊಂಡೆಟೇಯುಟೆದ ಮಣ್ಣೆಮಗೆ ಬಾಜ್ತೆಯಲ್ತು ನಿಮ್ಮ ನಿಮ್ಮ ತಂದ ಮಣ್ಣಂ ಕೊಂಡು ಪೋಗಿಮೆಂದೊಡವರ್ಗಳ್ ನಿರಾಶೆಯಾಗಿ ಬಿಸುಟ್ಟು ಪೋದರ್ ಮತ್ತಾ ಮಣ್ಣಿಂದು ಬಳಸಿಯುಂ ಕೋಂಟೆಯಂ ಮಾಡಿ ಮಾಟ ಕೂಟ ಪ್ರಾಸಾದ ಸಹಿತಂ ಪೊಟಿಲಂ ಮಾಡಿ"(ವಡ್ಡಾರಾಧನೆ, ಪು-೧೮೭).

ಆರ್ಥಿಕ ಅಸಹಾಯಕತೆ ಒಕ್ಕಲಿಗನನ್ನು ದನಿ ಇಲ್ಲದವನನ್ನಾಗಿ ಮಾಡಿದ ರೀತಿಯನ್ನು ಚರಿತ್ರೆಯುದ್ದಕ್ಕೂ ಕಾಣುತ್ತೇವೆ. ಚಿನ್ನ ಕೊಡುವ ಡಂಗುರ ಹೊಡೆಸಿ ಒಬ್ಬನಿಗೆ ಮಣ್ಣಿಗೆ ಬಂಗಾರ ಕೊಟ್ಟು ಎಲ್ಲರಲ್ಲೂ ಆಸೆ ಹುಟ್ಟಿಸಿ ಒಕ್ಕಲಿಗರು ಮಣ್ಣು ತಂದು ಹಾಕುವಂತೆ ಮಾಡಲಾಯಿತು. ತಮ್ಮ ಕಾರ್ಯ ಫಲಪ್ರದವಾದ ಮೇಲೆ ತಮ್ಮ ಜಾಣತನದ ಬಗ್ಗೆ ಹೆಮ್ಮೆಪಟ್ಟು ನಮಗೆ ಬೇಕಾದ್ದು ಒಂದೇ ಹೇರು ಮಣ್ಣು ನಿಮ್ಮ ಮಣ್ಣು ನೀವು ಒಯ್ಯಿರಿ ಎಂದಾಗ ಒಕ್ಕಲಿಗರ ಆಸೆಕಂಗಳು ಬತ್ತಿ ನಿರಾಸೆಯುಂಟಾಗುತ್ತದೆ. ತಮ್ಮ ಕಾರ್ಯ ಸಾಧನೆಯಾದವರಿಗೆ ಬಡವರ ನಿರಾಸೆ ಕಾಣದೆ ತಮ್ಮ ಜಾಣತನ ಮೆರೆದುದರ ಬಗ್ಗೆ ಹೆಮ್ಮೆ ಪಡುವರು. ಹೀಗೆ ಸದಾ ಆರ್ಥಿಕ ಮುಗ್ಗಟ್ಟಿನಿಂದ ಬಳಲುವ ರೈತ, ಬಡವ ಹಣದ ಅವಶ್ಯಕತೆಗಾಗಿ ಹಿಂದುಮುಂದು ಯೋಚಿಸದೇ ಶ್ರಮಪಟ್ಟರೂ ಫಲ ಸಿಗದೇ ಶೋಷಣೆಗೊಳಗಾಗುವ ಇಂಥ ಪ್ರಸಂಗಗಳು ಎಲ್ಲ ಕಾಲಕ್ಕೂ ಮೇಲಿಂದ ಮೇಲೆ ಘಟಿಸುತ್ತಲೇ ಇರುತ್ತವೆ.

ಒಕ್ಕಲು ಮಕ್ಕಳ ಆರ್ಥಿಕ ಸ್ಥಿತಿ ಅವರು ಬೆಳೆಯುವ ಬೆಳೆಗಳ ಮೇಲೆ ನಿರ್ಧರಿತವಾಗುತ್ತದೆ. ಆಯಾ ಪ್ರದೇಶದಲ್ಲಿ ಬೆಳೆಯುವ ದವಸ ಧಾನ್ಯಗಳೇ ಸಾಮಾನ್ಯ ಜನಜೀವನದ ಆಹಾರ ಕ್ರಮದಲ್ಲಿ ಪ್ರಮುಖ ಸ್ಥಾನವನ್ನು ಪಡೆಯುತ್ತವೆ. ಅಂತೆಯೇ ವಡ್ಡಾರಾಧನೆಯ ಕಾಲಕ್ಕೆ ಬೆಳೆಯುವ ದವಸ ಧಾನ್ಯಗಳನ್ನು ಕೃತಿಗಾರ ಉಲ್ಲೇಖಿಸುವ ಆಹಾರದಿಂದ ತಿಳಿದುಕೊಳ್ಳಬಹುದಾಗಿದೆ. ಅದರಲ್ಲಿ ಬರುವ ಹಾರದಕ್ಕಿಯ ಅನ್ನ, ಎಳ್ಳುಂಡೆ, ಅಂಬಲಿ, ಅವರೆ ಎಣ್ಣೆ, ಭತ್ತ ಇತ್ಯಾದಿ ಉಲ್ಲೇಖಗಳನ್ನು ಪರಿಶೀಲಿಸಿದಾಗ ಹಾರದಕ್ಕಿ, ಎಳ್ಳು, ರಾಗಿ, ಅವರೆ, ಭತ್ತ ಇತ್ಯಾದಿ ಧಾನ್ಯಗಳನ್ನು ಬೆಳೆಯುತ್ತಿದ್ದುದನ್ನು ಗುರುತಿಸಬಹುದಾಗಿದೆ. ಅಲ್ಲದೆ 'ಸುಕುಮಾರಸ್ವಾಮಿ ಕಥೆ'ಯಲ್ಲಿ ವೈನಾಕನೆಂಬ ಒಕ್ಕಲಿಗ "ಒಂದು ದಿವಸಂ ಕರ್ಬಿನ ಕೆಯ್ಯನುಟಿಪ್ವೊಂ" ಎಂಬ ಉಲ್ಲೇಖ ಬರುತ್ತದೆ. ಇದರಿಂದ ಆಗ ಕಬ್ಬನ್ನು ಬೆಳೆಯುತ್ತಿದ್ದುದು ಬಾಳೆ ಮತ್ತು ಬಾಳೆಯ ಬನಗಳು ವಡ್ಡಾರಾಧನೆಯ ಕಾಲದಲ್ಲಿ ಇದ್ದುದನ್ನು ಸುಕೌಶಳ ಸ್ವಾಮಿಯ ಕಥೆಯಲ್ಲಿ ಬರುವ ಮಾತುಗಳು ತಿಳಿಸುತ್ತವೆ. ಪ್ರಿಯದರ್ಶನೆಂಬುವನು ಕದಳಿ ವನದಲ್ಲಿ ಮಲಗಿದ್ದ ವಿಷಯ ಈ ಕಥೆಯಲ್ಲಿ ಬರುತ್ತದೆ. ಭದ್ರಬಾಹು ಭಟಾರರ ಕಥೆಯಲ್ಲಿ ನಂದಿಮಿತ್ರನಿಗೆ "ಉಂಡ ಬಟ್ಟೆಕ್ಕೆ ಕರ್ಪೂರ ಸಮ್ಮಿಶ್ರಮಪ್ಪ ನೆಲವತ್ತಿಯಡಕೆಯ ಪೊಟ್ಟಿಳುಮಂ" ಕೊಟ್ಟ ಬಗ್ಗೆ ಹೇಳಲಾಗಿದೆ. ಇದು ಆಗ ಒಕ್ಕಲಿಗರು ಅಡಕೆ ಬೆಳೆಯುತ್ತಿದ್ದುದನ್ನು ತಿಳಿಸುತ್ತದೆ. ಪ್ರಾಚೀನ ಕರ್ನಾಟಕದಲ್ಲಿ ಬೆಳೆಯುತ್ತಿದ್ದ ಬೆಳಗಳನ್ನೇ ಈಗಲೂ ಬೆಳೆಯುತ್ತಿದ್ದಾರೆ. ಅಲ್ಲದೆ ಗದ್ದೆಯಲ್ಲಿ ಮುಖ್ಯವಾಗಿ ಅಂದು ಕಬ್ಬು ಮತ್ತು ಭತ್ತಗಳನ್ನು ಹೆಚ್ಚಾಗಿ ಬೆಳೆಯುತ್ತಿದ್ದರೆಂಬುದು ತಿಳಿದು ಬರುತ್ತದೆ. (ವಡ್ಡಾರಾಧನೆ; ಜಾನಪದೀಯ ಅಧ್ಯಯನ, ಪು-೧೬೯) ಅಂತೆಯೇ ಕೃತಿಕಾರ ಮೇಲಿಂದ ಮೇಲೆ ಉಲ್ಲೇಖಿಸುವ ಹೆಸರಬೇಳೆ ತೊವ್ವೆ, ಆ ಕಾಲಕ್ಕೆ ಹೆಸರು ಕಾಳಿನ ಬೆಳೆಯ ಸಮೃದ್ಧತೆಯನ್ನು ಸೂಚಿಸುತ್ತದೆ. ವಡ್ಡಾರಾಧನೆಕಾರನ ಕಾಲದಲ್ಲಿ ಬೆಳೆಯುತ್ತಿದ್ದ ಬೆಳೆಯನ್ನು ಕರ್ನಾಟಕದಲ್ಲಿ ಇಂದಿಗೂ ಯಥೇಚ್ಛವಾಗಿ ಬೆಳೆಯುವದನ್ನು ನಾವು ಗಮನಿಸಬಹುದು.

ವಡ್ಡಾರಾಧನೆಯ ಕಾಲಕ್ಕೆ ಒಕ್ಕಲುತನದ ಜೊತೆಗೆ ವ್ಯಾಪಾರ-ವಹಿವಾಟೂ ಕೂಡ ಆರ್ಥಿಕತೆಯನ್ನು ನಿರ್ಧರಿಸುವ ಮಾನದಂಡವಾಗಿತ್ತು. ವಡ್ಡಾರಾಧನೆ ಕೃತಿಯಲ್ಲಿ ಒಕ್ಕಲುತನಕ್ಕಿಂತ ವ್ಯಾಪರವನ್ನೇ ಶ್ರೇಷ್ಠ ಉದ್ಯೋಗವಾಗಿ ಪರಿಗಣಿಸಲಾಗಿದೆ. ಕಾರಣ ಒಕ್ಕಲುತನ ಹಿಂಸಾಕೃತ್ಯವಾದ್ದರಿಂದ ಜೈನರಿಗೆ ಅದು ಮಾಡಬಾರದ ಕೆಲಸ. ಆದ್ದರಿಂದಲೇ ಜೈನಧರ್ಮ, ಧರ್ಮೀಯರು ವ್ಯಾಪಾರವನ್ನೇ ಉತ್ಕೃಷ್ಟವಾಗಿ ಭಾವಿಸುತ್ತಾರೆ. ಆದ್ದರಿಂದ ವಡ್ಡಾರಾಧನೆ ಕೃತಿಯಲ್ಲಿ ವರ್ತಕ ಪ್ರಧಾನ ಆರ್ಥಿಕ ವ್ಯವಸ್ಥೆಯನ್ನು ಕಾಣುತ್ತೇವೆ.

ಸರಕನ್ನು ಬಂಡಿಗಳಲ್ಲಿ ಹೇರಿಕೊಂಡು ಊರಿಂದೂರಿಗೆ ಅಲೆದು ವ್ಯಾಪಾರ ಮಾಡುವ ಅಲೆಮಾರಿ ವ್ಯಾಪಾರಸ್ಥರನ್ನು ವಡ್ಡಾರಾಧನೆಯ ಕಾಲದಲ್ಲಿ ಕಾಣುತ್ತೇವೆ. ಅವರನ್ನು 'ಶಾಕಟಿಕ' ಎಂದು ಕರೆಯುತ್ತಿದ್ದುದಾಗಿ ಡಾ. ಫಿ.ಎಲ್.ಪಾಟೀಲ ಉಲ್ಲೇಖಿಸುತ್ತಾರೆ. "ದೇವಿಲನೆಂಬ ಶಾಕಟಕ ಪರದರುಂಬೆರಸು ಬಂಡಿಗಳೊಳ್ ಪಟ್ಟೆಯುಂ ಧಾನ್ಯಮಂ ತೀವಿಕೊಂಡು ಪೊಳಲ್ಗೆ ಮಾರಲೆಂದು" ಹೋದ ಉಲ್ಲೇಖ ಬರುತ್ತದೆ. ಈ ರೀತಿ ಬೇರೆ ಬೇರೆ ಪಟ್ಟಣ ಸ್ಥಳಗಳಿಗೆ ಗುಂಪು ಗುಂಪಾಗಿ ಪರದರು ವ್ಯಾಪಾರಕ್ಕೆ ಹೋಗುತ್ತಿದ್ದರು(ವಡ್ಡಾರಾಧನೆ; ಜಾನಪದೀಯ ಅಧ್ಯಯನ, ಪು-೧೭೨).

"ಪರದರು ತಾವು ಒಯ್ದ ಸರಕುಗಳನ್ನು ಮಾರಿ ತಮಗೆ ಬೇಕಾದ ಸಾಮಾನುಗಳನ್ನು ತುಂಬಿಕೊಂಡು ಬರುತ್ತಿದ್ದರು. ಇವರು ಸ್ವದೇಶವಲ್ಲದೆ ವಿದೇಶಗಳವರೆಗೂ ತಮ್ಮ ವ್ಯಾಪಾರವನ್ನು ವಿಸ್ತರಿಸಿದ್ದರು. ಆ ಜನತೆಗೆ ಬೇಕಾದ ಪದಾರ್ಥಗಳನ್ನು ಒದಗಿಸುತ್ತಿದ್ದರು. ನಂದ ಒಂದು ದಿವಸ ಧನ ಸಂಪಾದನೆಗಾಗಿ ಸುವರ್ಣ ದ್ವೀಪಕ್ಕೆ ಹೋದನು. "ಮತ್ತೊಂದು ದಿವಸಂ ರತ್ನ ದ್ವೀಪದಿಂದೊರ್ವ ಪರದಂ ಸರ್ವ ರತ್ನ ಕಂಬಳಂಗಳಂ ಲಕ್ಷ ದೀನಾರಂಗಳ್ ಬೆಲೆಯಪ್ಪವನುಜ್ಜೇನಿಗೆ ಮಾರಲ್ಕೊಂಡು ಬಂದೊನ್" ಇಂಥವುಗಳನ್ನು ನೋಡಿದಾಗ ಸಮುದ್ರಯಾನ ಮಾಡಿ ದ್ವೀಪಗಳಿಗೆ ವ್ಯಾಪಾರಕ್ಕಾಗಿ ಹೋಗುವದು ಮತ್ತು ಬರುವದು ನಡೆಯುತ್ತಿದ್ದ ಬಗ್ಗೆ ತಿಳಿದು ಬರುತ್ತದೆ.(ವಡ್ಡಾರಾಧನೆ; ಜಾನಪದೀಯ ಅಧ್ಯಯನ, ಪು-೧೭೩). ಇದನ್ನೆಲ್ಲ ಗಮನಿಸಿದಾಗ ವಡ್ಡಾರಾಧನೆಯ ಕಾಲಕ್ಕಾಗಲೆ ಆರ್ಥಿಕ ವಹಿವಾಟು ವಿದೇಶಕ್ಕೂ ವಿಸ್ತರಿಸಿಕೊಂಡದ್ದು ಸ್ಪಷ್ಟವಾಗುತ್ತದೆ. ವರ್ತಕರನೇಕರು ಸಮುದ್ರಯಾನ ಮಾಡಿ ತಮ್ಮ ವಹಿವಾಟಿನ ಹರಹನ್ನು ವಿಸ್ತರಿಸಿಕೊಂಡು ಆರ್ಥಿಕವಾಗಿ ಸಬಲರಾಗಿದ್ದರು. ಮತ್ತೊಂದೆಡೆ ವರ್ತಕರಿಗೆ ಸಗಟನ್ನು ತೆಗೆದುಕೊಂಡು ಸಂಚರಿಸುವ ಸಂದರ್ಭದಲ್ಲಿ ಮಾರ್ಗಮಧ್ಯೆ ಕಳ್ಳಕಾಕರ ತೊಂದರೆಯನ್ನು ಅನುಭವಿಸಬೇಕಾಗುತ್ತಿತ್ತು. ಅದಕ್ಕೆ ವಡ್ಡಾರಾಧನೆಯಲ್ಲಿ ಅನೇಕ ಉದಾಹರಣೆಗಳು ದೊರೆಯುತ್ತವೆ. ಅವುಗಳಲ್ಲಿ ಭದ್ರಬಾಹುವಿನ ಕಥೆಯಲ್ಲಿ ಬರುವ ಈ ಉದಾಹರಣೆಯೂ ಒಂದು.

"ಪಲಂಬರ್ ಶಾಕಟಿಕ ಪರದರುಂಬೆರಸು ಬಂಡಿಗಳೊಳ್ ಪಟ್ಟೆಯುಂ ಧಾನ್ಯಮಂ ತೀವಿಕೊಂಡು ಪೊಟಿಲ್ಗೆ ಮಾಱಲೆಂದು ಪೋಪನ್ನೆಗ ಮೆಡೆಯೊಳಡವಿಯೊಳ್ ಕಳ್ಳರ್ ಬಟ್ಟೆಗಟ್ಟಿ ಮೇಲ್ವಾಯ್ದಿಱಿದೊಡೆ ದೇವಿಲಂ ಮೊದಲಾಗೊಡೆಯ ಪಲಂಬರ್ ಪರದರ್ ಶಾಕಟಿಕ ಪರದರುಂಬೆರಸು ಬಂಡಿಗಳೊಳ್ ಪಟ್ಟೆಯುಂ ಧಾನ್ಯಮಂ ತೀವಿಕೊಂಡು ಪೊಟಿಲ್ಗೆ ಮಾಱಲೆಂದು ಪೋಪನ್ನೆ ಗಮೆಡೆಯೊಳದಡವಿಯೊಳ್ ಕಳ್ಳರ್ ಬಟ್ಟೆಗಟ್ಟಿ ಮೇಲ್ವಾಯ್ದಿಱಿದೊಡೆ ದೇವಿಲಂ ಮೊದಲಾಗೊಡೆಯ ಪಲಂಬರ್ ಪರದರ್ ಸತ್ತರುಟಿದರೆಲ್ಲ ಮೋಡಿ ಕೆಟ್ಟೊಡೆ ಬಂಡಮು ಮೇಟಿಸ್ತಗಳುಂ ಮೊದಲಾಗೆಲ್ಲಮಂ ಕಳ್ಳರ್ಕೊಂಡು ಪೋದರಾ" (ವಡ್ಡಾರಾಧನೆ, ಪು-೭೬). ಹೀಗೆ ವ್ಯಾಪಾರಸ್ಥರಿಗೆ ದಾರಿಯುದ್ದಕ್ಕೂ ಕಳ್ಳಕಾಕರು ದಾಳಿ ಮಾಡಿ ಆರ್ಥಿಕ ಸಂಕಷ್ಟವನ್ನೂ ದೈಹಿಕ ಹಿಂಸೆಯನ್ನೂ ಪ್ರಾಣಹಾನಿಯನ್ನೂ ಉಂಟು ಮಾಡುತ್ತಿದ್ದರು.

ವಡ್ಡಾರಾಧನೆಯ ಕಾಲಕ್ಕೆ ವ್ಯಾಪಾರಸ್ಥರನೇಕರು ರಾಜನಿಗೆ ಮಿಗಿಲಾದ ಸೌಧಗಳನ್ನು, ಸೌಲಭ್ಯಗಳನ್ನು ಹೊಂದಿದ್ದರೆಂಬುದು ವರ್ತಕರ ಆರ್ಥಿಕ ಸಬಲತೆಯನ್ನು ತಿಳಿಸುತ್ತದೆ. ಇಂತಹ ಅನೇಕ ಉದಾಹರಣೆಗಳನ್ನು ಕೃತಿಯಲ್ಲಿ ಕಾಣಬಹುದಾಗಿದೆ.

"ಸುಕೌಶಳ ಸ್ವಾಮಿಯ" ಏಕಶಾಲ, ದ್ವಿಶಾಲ, ತ್ರಿಶಾಲ, ಚತುಃಶಾಲ, ಸ್ವಸ್ತಿಕ, ನಂದ್ಯಾವರ್ತ ಮೊದಲಾಗೊಡೆಯ ಮಾಡಂಗಳುಂ ಮೂವತ್ತೆರಟ್ಬಳ್ಳಿ ಮಾಡಂಗಳುಮಂ ಮಾಡಿಸಿ ತನ್ನ ಮನೆಯ ಅಂಗಣದೊಳ್ ಸೆಂಡಾಡುವ ತಟಿಯುಂ ಆನೆಯನೇಱುವ ವಿನೋದಂ ಮೊದಲಾಗೊಡೆಯ ವಿನೋದ ಸ್ಥಾನಂಗಳೆಲ್ಲ"ವನ್ನೂ ಹೊಂದಿದ್ದನು. ಅದೇ ರೀತಿ ಸುಕುಮಾರ ಸ್ವಾಮಿಯು "ಮೂವತ್ತೆರಡು ಬಳ್ಳಿ

ಮಾಡಂಗಳು, ಮೂವತ್ತೆರಡು ಜನ ಹೆಂಡಂದಿರು, ಮೂವತ್ತೆರಡು ಬಗೆಯ ನಾಟಕ ಗೃಹಗಳು, ಮೂವತ್ತೆರಡು ಕೋಟಿ ಚಿನ್ನ-ಪಂಚರತ್ನಗಳನ್ನು" ಹೊಂದಿದ್ದನು. ಇದನ್ನು ನೋಡಿದಾಗ ಇಂದಿನ ವೈಭವಯುತ ಪಂಚತಾರಾ ಹೋಟೆಲುಗಳನ್ನು ಇಂಥ ಶೆಟ್ಟಿಯರ ಮನೆಗಳ ಮುಂದೆ ನಿವಾಳಿಸಿ ಚೆಲ್ಲಬಹುದಾಗಿದೆ. ಶೆಟ್ಟಿಗಳು ತಮ್ಮ ಮನೆಗಳ ಬಾಗಿಲನ್ನು ಕಾಯಲು ಆಳುಗಳನ್ನು ಇಡುತ್ತಿದ್ದರು ಮತ್ತು ಸುಕೌಶಳ ಸ್ವಾಮಿಗೆ ಮೊಲೆಯುಣ್ಣಿಸಲು, ಊಟ ಮಾಡಿಸಲು, ಆಡಿಸಲು, ಸ್ನಾನ ಮಾಡಿಸಲು, ಸಿಂಗರಿಸಲು, ಬೇರೆ ಬೇರೆ ದಾದಿಯರನ್ನು ನೇಮಿಸಿದ ಬಗ್ಗೆ ಸುಕೌಶಳ ಸ್ವಾಮಿಯ ಕಥೆಯಿಂದ ತಿಳಿದು ಬರುತ್ತದೆ. ಇದರಿಂದ ಬೇರೆ ಬೇರೆ ಸೇವೆಗಳಿಗಾಗಿ ಬೇರೆ ಬೇರೆ ದಾದಿಯರು ಇರುತ್ತಿದ್ದುದು ವಿದಿತವಾಗುತ್ತದೆ"(ವಡ್ಡಾರಾಧನೆ; ಜಾನಪದೀಯ ಅಧ್ಯಯನ, ಪು-೧೭೪). ಇಂತಹ ರಾಜನಿಗೆ ಮಿಗಿಲಾದ ವೈಭವದ ಜೀವನ ನಡೆಸಿದ ಶ್ರೀಮಂತ ವರ್ತಕರಿದ್ದರು. ಹೀಗೆ ಆ ಕಾಲದ ಅರ್ಥವ್ಯವಸ್ಥೆ ಬರೀ ರಾಜನಿಂದಲೇ ನಿರ್ಧರಿತಗೊಳ್ಳುವದಲ್ಲ. ಆ ಕಾಲದ ಇಂಥ ಅನೇಕ ವರ್ತಕರೂ ಸಹ ಅರ್ಥ ವ್ಯವಸ್ಥೆಯಲ್ಲಿ ನಿರ್ಣಾಯಕ ಪಾತ್ರವಹಿಸುತ್ತದೆ.

ಯಾವುದೇ ಸಮಾಜದ ಅರ್ಥವ್ಯವಸ್ಥೆ ಯಾರೋ ಒಬ್ಬಿಬ್ಬರಿಂದ ನಿರ್ಧರೀತಗೊಳ್ಳುವದಿಲ್ಲ. ಆಯಾ ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ದುಡಿಮೆಯ ಫಲ ಅರ್ಥವ್ಯವಸ್ಥೆಗೆ ಕಾರಣವಾಗಿರುತ್ತದೆ. ಹಾಗಾಗಿ ಎಲ್ಲ ದುಡಿಯುವ ವರ್ಗಗಳೂ ಅರ್ಥವ್ಯವಸ್ಥೆಯ ಭಾಗವಾಗಿರುತ್ತವೆ ಮತ್ತು ಆರ್ಥಿಕತೆಗೆ ತಮ್ಮದೇ ಆದ ಕಾಣಿಕೆ ನೀಡುತ್ತಿರುತ್ತವೆ. ಇದಕ್ಕೆ ಪುಷ್ಟಿ ನೀಡುವಂತೆ ವಡ್ಡಾರಾಧನೆ ಕೃತಿ ಅಲ್ಲಲ್ಲಿ ಇಂಥ ಅನೇಕ ದುಡಿಯುವ ವರ್ಗಗಳ ಆರ್ಥಿಕತೆಯ ಬಗ್ಗೆ ವಿವರಿಸುತ್ತದೆ.

'ಗುರುದತ್ತ ಭಟಾರರ ಕಥೆಯಲ್ಲಿ ಧಾತ್ರಿವಾಹನ ಅರಸನು ವಿಶ್ವಕರ್ಮ ವಿಶ್ವಮತಿ ಎಂಬ ತನ್ನ ಇಬ್ಬರು ಬಡಗಿಗಳನ್ನು ಕರೆಸಿ" ಆಱುದಿಂಗಳೊಳಗೆ ನೀಮಿರ್ವರುಮೋರೊರ್ವರಯ್ನೂಱು ರಥಂಗಳಂ ಬೇಗಂ ಮಾಡಿ ಎನಗೊಪ್ಪಿಸಲ್ವೇೞ್ಕು"(ವಡ್ಡಾರಾಧನೆ, ಪು-೧೪೭) ಎಂದು ಆಜ್ಞಾಪಿಸುತ್ತಾನೆ. ಅರಸನಾಜ್ಞೆಯಂತೆ ಆರುತಿಂಗಳೊಳಗಾಗಿ ವಿಶ್ವಕರ್ಮನು ಐನೂರು ರಥಗಳನ್ನು ಮಾಡಿ ರಾಜನಿಗೆ ಕೊಡುತ್ತಾನೆ. ಅದಕ್ಕೆ ಪ್ರತಿಯಾಗಿ ರಾಜನು ವಿಶ್ವಕರ್ಮನಿಗೆ ತುಷ್ಟಿದಾನ ಕೊಡುವನು.

ಬಡಗಿಗಳಂತೆ ನೇಕಾರರು, ಗಾಣಿಗರು, ಮಾಲೆಗಾರರು, ಬೆಸ್ತರು, ಬೇಡರು, ಕೂಲಿಕಾರರು ಮುಂತಾದವರು ಆ ಕಾಲದ ಅರ್ಥ ವ್ಯವಸ್ಥೆಯಲ್ಲಿ ತಮ್ಮ ತಮ್ಮದೇ ರೀತಿಯಲ್ಲಿ ಭಾಗಿಗಳಾಗಿದ್ದರು. ಅರ್ಥವ್ಯವಸ್ಥೆ ಎಂಬುದು ವಡ್ಡಾರಾಧನೆಯ ಕಾಲಕ್ಕೆ ಹಣ ವಿನಿಮಯಕ್ಕಿಂತ ವಸ್ತು ವಿನಿಮಯದ ರೂಪದಲ್ಲೇ ಹೆಚ್ಚಾಗಿ ನಡೆಯುತ್ತಿತ್ತು.

ಸಮಾಜದಲ್ಲಿ ಬಡತನ ಸಿರಿತನ ಎರಡೂ ಇತ್ತು. ಒಪ್ಪತ್ತಿನ ಊಟಕ್ಕೂ ಗತಿ ಇರದ ಕಡುಬಡತನವೂ ಇತ್ತು. ರಾಜನಿಗೂ ಮಿಗಿಲಾದ ಸಿರಿವಂತಿಕೆಯೂ ಸಾಮಾನ್ಯರಲ್ಲಿತ್ತು.

ವಡ್ಡಾರಾಧನೆಯ ಸುಕುಮಾರ ಸ್ವಾಮಿಯ ಕತೆಯಲ್ಲಿ ರತ್ನದ್ವೀಪದಿಂದ ಬಂದ ವರ್ತಕನೊಬ್ಬ ರತ್ನಕಂಬಳಿಯನ್ನು ಮಾರಲು ತಂದನು. ಆ ಊರಿನ ಅರಸ ಆ ರತ್ನಗಂಬಳಿಗಳನ್ನು ಕೊಳ್ಳಲು ಬೆಲೆ ಕೇಳುತ್ತಾನೆ. ವರ್ತಕ ಆ ರತ್ನಗಂಬಳಿಗಳ ಬೆಲೆ ಒಂದು ಲಕ್ಷ ದೀನಾರವೆಂದು ಹೇಳಲು ಅರಸ ಕೊಂಡು ಕೊಳ್ಳಲಾಗಲಿಲ್ಲ. ಎಲ್ಲರನ್ನೂ ಕೇಳುತ್ತ ಯಶೋಭದ್ರೆಯ ಹತ್ತಿರ ಬಂದು ರತ್ನಗಂಬಳಿ ತೋರಿಸಿ ಬೆಲೆ ಹೇಳುತ್ತಾನೆ. ಅವಳು ಲಕ್ಷದೀನಾರಗಳನ್ನು ಕೊಟ್ಟು ಅವನ್ನು ಕೊಂಡು ಕೊಳ್ಳುತ್ತಾಳೆ. ರತ್ನಗಂಬಳಿಯಲ್ಲಿ

ಒಂದರಲ್ಲಿ ೪ ಭಾಗ ಮಾಡಿ ತನ್ನ ಮೂವತ್ತೆರಡು ಸೊಸೆಯರಿಗೂ ಅವನ್ನು ಹಂಚುತ್ತಾಳೆ. ಆ ಸೊಸೆಯರೋ ಆ ರತ್ನಗಂಬಳಿಯನ್ನು ತಮ್ಮ ಚಪ್ಪಲಿಗಳಿಗೆ ಕಟ್ಟಿಸಿಕೊಳ್ಳುವರು.

ಇದು ಸಾಮಾನ್ಯರಲ್ಲಿ ಕ್ವಚಿತ್ತಾಗಿ ದೊರೆಯುವ ಅತಿಯಾದ ಶ್ರೀಮಂತಿಕೆ ವೈಭವ. ರಾಜನಿಗೂ ಮಿಗಿಲಾದ, ನಿಲುಕದ ಶ್ರೀಮಂತಿಕೆ ಕೆಲವೊಮ್ಮೆ ಸಾಮಾನ್ಯರ ಸೊತ್ತಾಗಿರುತ್ತದೆ ಅಂಥ ಅಗರ್ಭ ಶ್ರೀಮಂತಿಕೆಗೆ ವೈಭೋಗಕ್ಕೆ ಸಾಕ್ಷಿಯಾಗುವ ಸಾಮಾನ್ಯನೆಂದರೆ ಸುಕುಮಾರ ಸ್ವಾಮಿ.

ಸಾಮಾನ್ಯ ಬ್ರಾಹ್ಮಣನಾದ ಚಾಣಕ್ಯನಿಗೆ ಬಡತನದ ಬಗ್ಗೆ ತನ್ನದೇ ಆದ ಅಭಿಪ್ರಾಯವಿದ್ದು ಅದನ್ನು ಹೀಗೆ ಹೇಳುತ್ತಾನೆ: ಈ ಲೋಕದಲ್ಲಿ ದಾರಿದ್ರ್ಯಕ್ಕಿಂತ ಬೇರೆ ಕಷ್ಟವಿಲ್ಲ. ಬಡತನವೇ ಮಹಾಪಾತಕ ಧನವಿಲ್ಲದವನೊಂದಿಗೆ ಯಾವ ಬಂಧುಬಾಂಧವರೂ ಬರುವದಿಲ್ಲ. ಮಾತನಾಡುವದಿಲ್ಲ, ಹಬ್ಬ ಹರಿದಿನ ಉತ್ಸವದ ಸಂದರ್ಭದಲ್ಲಿ ಉಳ್ಳವರು ಇಲ್ಲದವರ ಬಟ್ಟೆನೋಡಿ ಅವರನ್ನು ನಿಕೃಷ್ಟವಾಗಿ ಕಾಣುತ್ತಾರೆ. ದೂರದಿಂದಲೇ ಬಡವನನ್ನು ಕಂಡು ಹಿಂಜರಿಯುತ್ತಾರೆ; ಕಡೆಗಣಿಸುತ್ತಾರೆ. ಬಡತನವನ್ನು ತೋರಿಸಿಕೊಳ್ಳುವದು ಮಹಾಕಷ್ಟ ಎಂದು ಬಗೆಯುತ್ತಾನೆ.

ವಡ್ಡಾರಾಧನೆಯ ಚಾಣಕ್ಯರಿಸಿಯ ಕತೆಯಲ್ಲಿ ವಡ್ಡಾರಾಧನೆಕಾರ ಚಾಣಕ್ಯನ ಮೂಲಕ ಹೇಳುವ ಬಡತನದ ಬಗೆಗಿನ ಅಭಿಪ್ರಾಯ ವಡ್ಡಾರಾಧನೆಕಾರನದೇ. ಕಾಲ ಯಾವುದೇ ಆಗಿರಲಿ ಬಡತನದ ಬಗೆಗಿನ ಅಭಿಪ್ರಾಯ ಮಾತ್ರ ಅದೇ ಇದೆ. ಎಲ್ಲ ಕಾಲದಲ್ಲೂ ಬಡವ ಏಕಾಂಗಿಯೇ; ನಿರ್ಗತಿಕನೇ. ಸಾಮಾನ್ಯನ ಬಡತನದ ಈ ಅಭಿಪ್ರಾಯ ಹಿಂದೆ ಬದಲಾಗಿಲ್ಲ, ಮುಂದೆ ಬದಲಾಗುವದೂ ಇಲ್ಲ.

ಕಾಷ್ಠಕೂಟ ಕಟ್ಟಿಗೆಯನ್ನು ಹೊತ್ತು ಪಟ್ಟಣದಲ್ಲಿ ಮಾರುವವ. ಅವನಿಗೆ ದಾರಿಯಲ್ಲಿ ಒಂದು ದಿನ ನಂದಿಮಿತ್ರ ಎಂಬ ಅನಾಥ ಹುಡುಗ ಸಿಗುತ್ತಾನೆ. ಮಲಗಲು ತಲೆಗೆ ಆಧಾರವಿಲ್ಲವೆಂದು ನಂದಿಮಿತ್ರ ನಾಲ್ಕು ಜನ ಸೇರಿ ಎತ್ತಿದರೂ ಎತ್ತಲಾಗದ ಕಲ್ಲು ಬಂಡೆಯನ್ನು ಅನಾಮತ್ತಾಗಿ ತಾನೊಬ್ಬನೇ ಎತ್ತಿಕೊಂಡು ಬಂದು ತಲೆಯ ಕೆಳಗೆ ಇಟ್ಟುಕೊಂಡು ಮಲಗುತ್ತಾನೆ. ಅವನ ಅಗಾಧ ದೈಹಿಕ ಸಾಮರ್ಥ್ಯವನ್ನು ನೋಡಿ ಇವನನ್ನು ತನ್ನ ಜೊತೆ ಕರೆದುಕೊಂಡು ಹೋಗಿ ಊಟ ಹಾಕಿ ಕೆಲಸ ಮಾಡಿಸಿಕೊಂಡರೆ ಹತ್ತು ಜನ ಮಾಡುವ ಕೆಲಸವನ್ನು ಇವನೊಬ್ಬನೇ ಮಾಡುವನೆಂದು ತನ್ನಲ್ಲೇ ಯೋಚಿಸಿ, ನಂದಿಮಿತ್ರನಿಗೆ ಸಂಬಂಧಿಕರಾರೂ ಇಲ್ಲದ್ದನ್ನು ಖಚಿತಪಡಿಸಿಕೊಂಡನು. ಆಗಲೇ ನಂದಿಮಿತ್ರನನ್ನು ಕಾಷ್ಠಕೂಟ ತನ್ನ ಮನೆಗೆ ಕರೆದುಕೊಂಡು ಹೋಗುವನು. ಮನೆಗೆ ಹೋಗುತ್ತಿದ್ದಂತೆ ಕಾಷ್ಠಕೂಟ ತನ್ನ ಹೆಂಡತಿ ಜಯಘಂಟೆಗೆ "ಈತಂಗೆ ನೀಂ ಬಸಿರ್ ತೀವೆ ಬಡ್ಡಿಸದಿರೆಣ್ಣೆಯಂ ತಿಣ್ಣಮೆರೆಯದಿರ್ ಮೀಯಲ್ ಬೇಡದೊಡಮೆರ್‌ಯದಿರ್"(ವಡ್ಡಾರಾಧನೆ ಪು-೭೭) ಎಂದು ಆದೇಶಿಸುತ್ತಾನೆ. ನಂದಿ ಮಿತ್ರನು ಕಡಿದು ತಂದ ಕಟ್ಟಿಗೆಯ ಭಾರಿಭಾರಿ ಹೊರೆಗಳನ್ನು ಮಾರಿ ಕಾಷ್ಠಕೂಟ ದಿನದಿಂದ ದಿನಕ್ಕೆ ಶ್ರೀಮಂತನಾಗುತ್ತ ಹೋದ. ಒಂದು ದಿನ ಕಾಷ್ಠಕೂಟನ ಹೆಂಡತಿ ಜಯಘಂಟೆಯು ನಂದಿಮಿತ್ರನ ಮೇಲೆ ಕರುಣೆಯಿಂದ ಹೊಟ್ಟೆತುಂಬ ಊಟಕ್ಕೆ ಬಡಿಸುವಳು. ಮರುದಿನ ನಂದಿಮಿತ್ರ ಕಾಷ್ಠಕೂಟನಿಗೆ "ಅಯ್ಯಾ ಎನಗುಡಲಿಲ್ಲೇನುಮೊಂದು ದಮ್ಮಕ್ಕಾದೊಡಂ ಸೀರೆಯಂ ಕೊಡೀಯಿಮ್"(ವಡ್ಡಾರಾಧನೆ ಪು-೭೭)ಎಂದು ಕೇಳುವನು. ಅದಕ್ಕೆ ಆಗಲಿ ಎಂದು ತಕ್ಷಣ ಮನೆಗೆ ಬಂದು ಹೆಂಡತಿ ಜಯಘಂಟೆಗೆ "ನಂದಿಮಿತ್ರನಿಗೆ ಬಸಿರ್ ತೀವೆಯುಣಲಿಕ್ಕಿದಾ"(ವಡ್ಡಾರಾಧನೆ ಪು-೭೭)ಎಂದು ಕೇಳುತ್ತಾನೆ. ಅದಕ್ಕವಳು "ಕರುಣಿಸಿ ಪರ್ವವೆಂದು ತಣಿಯೆಯುಣಲಿಕ್ಕಿದೆನ್"(ವಡ್ಡಾರಾಧನೆ ಪು-೭೭) ಎನ್ನುವಳು. ಅದಕ್ಕೆ ಕಾಷ್ಠಕೂಟ ಹೆಂಡತಿಯ ಮೇಲೆ ಮುನಿದು ಅವಳನ್ನು ಸಾಯುವಂತೆ ಬಡಿದು ಮನೆಯಿಂದ ಹೊರಹಾಕಿದ.

ಈ ಕತೆಯಲ್ಲಿ ಬರುವ ಕಾಷ್ಠಕೂಟ ಜಯಘಂಟೆ ನಂದಿಮಿತ್ರ ಎಲ್ಲರೂ ಅತ್ಯಂತ ಸಾಮಾನ್ಯರೇ. ಸಾಮಾನ್ಯನೂ ಸಹ ಅವಕಾಶ ಸಿಕ್ಕರೆ ಮತ್ತೊಬ್ಬನನ್ನು ಶೋಷಿಸಲು ಸಿದ್ದನಾಗುತ್ತಾನೆ ಎನ್ನುವದಕ್ಕೆ ಉದಾಹರಣೆ ಕಾಷ್ಠಕೂಟ. ಹಸಿದ ವ್ಯಕ್ತಿಗೆ ಒಮ್ಮೆ ಹೊಟ್ಟೆ ತುಂಬ ಊಟ ಹಾಕಿದರೆ ಅವನ ಬೇಡಿಕೆಗಳು ಹೆಚ್ಚುತ್ತವೆ ಎಂಬ ತಿಳುವಳಿಕೆ ಅವನದು. ಇದು ಕಾಷ್ಠಕೂಟನೊಬ್ಬನ ತಿಳುವಳಿಕೆಯಲ್ಲ ದಯೆಯಿಲ್ಲದೇ ದುಡಿಸಿಕೊಳ್ಳುವ ಬಹುತೇಕರ ಅಭಿಪ್ರಾಯ. ನಂದಿಮಿತ್ರನಂತಹವರ ದುಡಿಮೆಯಿಂದಲೇ ಸಂಪತ್ತು ಹೆಚ್ಚಿದರೂ ಹೊಟ್ಟೆತುಂಬ ಉಣ್ಣಲೂ ಕೊಡದೇ ದುಡಿಸಿಕೊಳ್ಳುವ ಅಸಹಾಯಕರನ್ನು ಶೋಷಿಸುವ ಜನ ವಡ್ಡಾರಾಧನೆಯ ಕಾಲಕ್ಕಷ್ಟೇ ಅಲ್ಲ ಎಲ್ಲ ಕಾಲಕ್ಕೂ ಕಂಡು ಬರುವದನ್ನು ಕಾಣುತ್ತೇವೆ.

ಮೇಲಿನ ಕಥೆ ನಂದಿಮಿತ್ರನ ಶೋಷಣೆಯನ್ನಷ್ಟೇ ಅಲ್ಲ ಜಯಘಂಟೆಯ ಅಸಹಾಯಕತೆಯನ್ನು ಕಂಡರಿಸುತ್ತದೆ. ತಮಗಾಗಿ ಹಗಲಿರುಳು ದುಡಿಯುವ ನಂದಿಮಿತ್ರನ ಮೇಲೆ ಕರುಣೆಯುಂಟಾಗಿ ಒಂದು ದಿನ ಹೊಟ್ಟೆ ತುಂಬ ಊಟ ಹಾಕಿದ್ದೇ ಕಾಷ್ಠಕೂಟನಿಗೆ ಜಯಘಂಟೆ ಮಾಡಿದ ಮಹಾಪರಾಧ ಮತ್ತು ಗಂಡನ ಮಾತಿನ ಉಲ್ಲಂಘನೆ ಮಾಡಿದಂತೆನಿಸುತ್ತದೆ. ಅದಕ್ಕಾಗಿ ಕಾಷ್ಠಕೂಟ ಅವಳನ್ನು ಸಾಯುವಂತೆ ಬಡಿದು ಹೊರಗಟ್ಟಿದರೂ ಅವಳಿಂದ ಒಂದೇ ಒಂದು ಪ್ರತಿಭಟನೆಯ ಮಾತೂ ಬರುವದಿಲ್ಲ. ಗಂಡ ಮಾತ್ರ ಮನೆಯ ಯಜಮಾನ, ಹೆಂಡತಿಗೆ ಯಾವುದೇ ತೆರನಾದ ಅಧಿಕಾರವಿಲ್ಲ ಎಂಬುದು ಸಮಾಜದ ಒಪ್ಪಿತ ನಂಬಿಕೆಯಾಗಿತ್ತು. ಸಮಾಜದ ಇಂಥ ಅಭಿಪ್ರಾಯವನ್ನು ಮೀರುವದು ಇಂದಿನ ಸಂದರ್ಭದಲ್ಲೇ ಇನ್ನೂ ಪೂರ್ಣ ಪ್ರಮಾಣದಲ್ಲಿ ಸಾಧ್ಯವಾಗದಿರುವಾಗ ವಡ್ಡಾರಾಧನೆಯ ಕಾಲಕ್ಕೆ ಅಂಥ ಪ್ರತಿಭಟನೆಯ ನಿರೀಕ್ಷೆಯಂತೂ ದೂರದ ಮಾತೇ ಸರಿ.

ನಂದಿಮಿತ್ರನಿಗೆ ತನ್ನ ಸಲುವಾಗಿ ಕಾಷ್ಠಕೂಟ ಜಯಘಂಟೆಯನ್ನು ಶಿಕ್ಷಿಸಿದ್ದು ಅನ್ಯಾಯವೆನಿಸುತ್ತದೆ. ಅದಕ್ಕೆ ತನ್ನ ಪ್ರತಿಭಟನೆಯನ್ನು ಪ್ರತ್ಯಕ್ಷವಾಗಿ ಕಾಷ್ಠಕೂಟನೆದುರು ತೋರಿಸಿಕೊಳ್ಳದಿದ್ದರೂ ಪರೋಕ್ಷವಾಗಿ ಅವನ ಮನೆಯಿಂದ ಹೊರನಡೆಯುವ ಮೂಲಕ ತೋರಿಸಿಕೊಳ್ಳುತ್ತಾನೆ. ನಂದಿಮಿತ್ರ ಕಾಷ್ಠಕೂಟನ ಬಗ್ಗೆ ಜಯಘಂಟೆ ಎದುರು ತೋರಿಸಿಕೊಳ್ಳುವ ಪ್ರತಿಕ್ರಿಯೆ ಹೀಗಿದೆ. “ಪಂಚಮಹಾಪಾತಕನ ಮನೆಯೋಳ್ ಮಾರಿಯಿರ್ಕೆ” (ವಡ್ಡಾರಾಧನೆ ಪು–೭೭)ಎಂದು ಕೂಡಲೇ ಅವನ ಮನೆಬಿಟ್ಟು ಹೋಗಿ ದಿನವೂ ತಾನೇ ಕಟ್ಟಿಗೆ ತಂದು ಮಾರಿ ಬದುಕಲಾರಂಭಿಸಿದ.

ಕಳ್ಳತನ:

ವಡ್ಡಾರಾಧನೆಕಾರ ತಸ್ಕರಶಾಸ್ತ್ರ ಪರಿಣಿತನಾದ ಕಳ್ಳನೊಬ್ಬನ ಚಿತ್ರಣವನ್ನು ಹೀಗೆ ಕಟ್ಟಿಕೊಡುತ್ತಾನೆ. ಕಳ್ಳನು ಹಗಲು ಹೊತ್ತಿನಲ್ಲಿ ಹಾಳು ದೇವಾಲಯದಲ್ಲಿ ಅಂಜನವನ್ನು ಹಚ್ಚಿಕೊಂಡು ತೊನ್ನನಾಗಿ ಮುದುಡಿದ ಕೈಕಾಲು ಮೂಗು ಒಳಗ್ಹೋಗಿ ರಸಿಗೆ ಸುರಿಯುತ್ತಿರಲು ನೊಣಗಳು ಮುತ್ತಿಕೊಂಡಿರಲು ಎಲ್ಲರಿಗೂ ಹೇಸಿಗೆ, ಜಿಗುಪ್ಸೆ ಬರುವಂತಹ ರೂಪದಲ್ಲಿ ಊರಿನ ಮನೆಮನೆಯಲ್ಲಿ ಭಿಕ್ಷೆ ಬೇಡುತ್ತ ಅಲೆದಾಡುತ್ತಿದ್ದನು. ರಾತ್ರಿ ಹೊತ್ತು ಸ್ವಾಭಾವಿಕ ರೂಪು ಧರಿಸಿ ನಗರದಲ್ಲಿ ಕಳ್ಳತನ ಮಾಡಿ ಕದ್ದ ಚಿನ್ನಾಭರಣಗಳನ್ನು ಪಟ್ಟಣದ ಹೊರಗೆ ಸ್ವಲ್ಪ ದೂರದ ಬೆಟ್ಟದ ಮೇಲಿನ ಗುಹೆಯಲ್ಲಿ ಮುಚ್ಚಿಟ್ಟು ಗುಹೆಯ ಬಾಯಿಗೆ ಒಂದು ದೊಡ್ಡ ಕಲ್ಲನ್ನು ಒತ್ತುತ್ತಿದ್ದನು. ನಂತರ ರೇಷ್ಮೆ ವಸ್ತ್ರ ಉಟ್ಟು, ಮೈಗೆ ಸುಗಂಧ ದ್ರವ್ಯ ಹಚ್ಚಿಕೊಂಡು ಹೂವು ಮುಡಿದು ಕರ್ಪೂರ ತಾಂಬೂಲ ತಿನ್ನುತ್ತ ಊರಿನ ಸೂಳೆಗೇರಿಗಳಲ್ಲಿ ಅಡ್ಡಾಡುತ್ತಾ ತನಗೆ ಇಷ್ಟಬಂದ ಹೆಣ್ಣುಗಳಿಗೆ ಬೇಕಾದಷ್ಟು ಚಿನ್ನಾಭರಣಗಳನ್ನು ಕೊಟ್ಟು ಅವರೊಂದಿಗೆ ಸುಖಿಸುತ್ತಿದ್ದನು. ಯಾರೂ ತಾನಾರು ಎಂಬುದನ್ನು ಅರಿಯದಂತೆ ಊರಿನ ಬಚ್ಚರು, ದೂಸಿಗರೂ, ನಿಯೋಗಿಗಳು, ಸೂಳೆಯರು ಮತ್ತು ಸಾಮಂತರ ಚಿನ್ನ ಕದಿಯುತ್ತಿದ್ದನು.

ಹೀಗೆ ಸಮಾಜದಲ್ಲಿ ಎಲ್ಲ ಕಾಲಕ್ಕೂ ಕಳ್ಳರು ತಮ್ಮ ಕೈಚಳಕ ತೋರಿಸುತ್ತಲೇ ಇರುತ್ತಾರೆ. ಅಂದಿಗೂ ಇಂದಿಗೂ ಕಳ್ಳರು ಚಾಲಾಕಿತನದಿಂದ ಜನರನ್ನು ಮೋಸಗೊಳಿಸುತ್ತಲೇ ಬಂದಿರುತ್ತಾರೆ.

ಇಷ್ಟೇ ಅಲ್ಲದೇ ಊರಲ್ಲಿ ಸೂಳೆಗೇರಿ ಪ್ರತ್ಯೇಕವಾಗಿರುತ್ತಿತ್ತು. ಕಳ್ಳರು ತಾವು ಕದ್ದ ಚಿನ್ನಾಭರಣಗಳನ್ನು ಸೂಳೆಯರಿಗೂ ಕೊಟ್ಟು ಅವರನ್ನು ಖುಷಿ ಪಡಿಸಿ ತಾವೂ ಖುಷಿ ಪಡುತ್ತಿದ್ದರು.

ಒಂದು ದಿನ ತಳವಾರ ವಿದುಚ್ಚೋರನ ಚಟುವಟಿಕೆ ಗಮನಿಸಿ ರಾಜನ ಸರ್ವ ಋಜಾಪಹಾರ ಕದ್ದ ಕಳ್ಳ ಇವನೇ ಎಂದು ರಾಜನಿಗೆ ವಿದ್ಯುಚ್ಚೋರನನ್ನು ಒಪ್ಪಿಸುತ್ತಾನೆ. ಆದರೆವಿದ್ಯುಚ್ಚೋರ "ದೇವಾನಾಂ ಕಳ್ಳನಲ್ಲದುದರ್ಕ್ಕೆ ಪೊಳಲೆಲ್ಲಮರಿಗುಂ ಕಳ್ಳನನಾರಯ್ಯಲಾರದೆನ್ನಂ ತನ್ನ ಸಾವಿಗಂಜಿ ಬಡವನಂ ದೇಸಿಗನಂ ಪೊಳಲೊ ಬೈಕಂದಿರಿದುಂಡು ಬಾಳ್ವನಂ ಪಿಡಿದುಕೊಂಡು ಬಂದು ಕೊಲಿಸಿದಪ್ಪನ್"(ವಡ್ಡಾರಾಧನೆ ಪು-೧೨೪). ಕಳ್ಳನ ಈ ಮಾತನ್ನು ನೋಡಿದಾಗ ನಿಜವಾದ ಕಳ್ಳನನ್ನು ಹಿಡಿಯಲಾಗದಾದಾಗ ಅಸಹಾಯಕ ನಿರ್ಗತಿಕರನ್ನು ಕಳ್ಳನೆಂದು ಒಪ್ಪಿಸಲಾಗುತ್ತಿತ್ತೇ? ಎಂಬ ಪ್ರಶ್ನೆ ಸಹಜವಾಗೇ ಉಂಟಾಗುತ್ತದೆ.

ವಿದ್ಯುಚ್ಚೋರ ರಿಸಿಯ ಕತೆಯಲ್ಲಿ ಬರುವ ತಳವಾರ ಮತ್ತು ಕಳ್ಳ ಇಬ್ಬರೂ ಬಾಲ್ಯ ಸ್ನೇಹಿತರು. ಇವರು ಚಿಕ್ಕವರಿದ್ದಾಗ ಆಟವಾಡುವಾಗ ಒಬ್ಬರಿಗೊಬ್ಬರು ಮೂದಲಿಸಿಕೊಂಡು ಕಳ್ಳನನ್ನು ತಳವಾರನೂ ತಳವಾರನನ್ನು ಕಳ್ಳನೂ ದಂಡಿಸುವದಾಗಿ ಶಪಥ ಮಾಡಿರುತ್ತಾರೆ. ಆ ಶಪಥದಂತೆ ತಳವಾರ ಕಳ್ಳನನ್ನು ಮೂವತ್ತೆರಡು ಬಗೆಯ ಘೋರ ದಂಡನೆಗಳಿಂದ ದಂಡಿಸುತ್ತಾನೆ. ಕಳ್ಳ ಏನೂ ತಪ್ಪಿಲ್ಲದೇ ತಳವಾರ ಶೂಲಕ್ಕೇರುವಂತಹ ಸಂದರ್ಭ ತಂದೊಡ್ಡುತ್ತಾನೆ. ಯಾವ ಅಡೆತಡೆಯೂ ಇಲ್ಲದೇ ತಳವಾರ ಕಳ್ಳ ಇಬ್ಬರೂ ತಮ್ಮ ಬಾಲ್ಯದ ಶಪಥದಂತೆ ದೊಡ್ಡವರಾದಮೇಲೆ ಒಬ್ಬರನ್ನೊಬ್ಬರು ಶಿಕ್ಷಿಸಿ ಶಪಥ ಪೂರೈಸಿಕೊಳ್ಳುವರು.

ವಿದ್ಯಾಭ್ಯಾಸ:

ಸುಕುಮಾರ ಸ್ವಾಮಿಯ ಕತೆಯಲ್ಲಿ ಅವೊತ್ತಿನ ವಿದ್ಯಾಭ್ಯಾಸದ ಕುರಿತಾದ ತಿಳುವಳಿಕೆಯನ್ನು ಕಾಣುತ್ತೇವೆ. ಸುಖಸಲುಗೆ ಇದ್ದರೆ ವಿದ್ಯೆ ತಲೆಗೆ ಹತ್ತುವುದಿಲ್ಲ ಎಂಬ ತಿಳುವಳಿಕೆ ಸಾಮಾನ್ಯವಾಗಿ ಎಲ್ಲರಿಗೂ ಎಲ್ಲಕಾಲದಲ್ಲೂ ಇದ್ದುದ್ದನ್ನು ಕಾಣುತ್ತೇವೆ. ಈ ಕಾರಣಕ್ಕಾಗಿಯೇ ವಡ್ಡಾರಾಧನೆಯ ಕಾಲದಲ್ಲಿ ಭಿಕ್ಷೆಬೇಡಿ ಹರುಕು ಬಟ್ಟೆತೊಟ್ಟು, ಹಗಲಿರುಳು ಸ್ವಲ್ಪವೂ ಆಲಸ್ಯವಿಲ್ಲದೇ ಶ್ರದ್ಧೆಯಿಂದ ಓದುವದಾದರೆ ಮಾತ್ರ ವಿದ್ಯೆ ಕಲಿಸುವ ಷರತ್ತನ್ನು ಕೆಲವು ಗುರುಗಳು ಹಾಕುತ್ತಿದ್ದುದ್ದನ್ನು ಕಾಣುತ್ತೇವೆ, ಉದಾಹರಣೆಗೆ ಸೂರ್ಯಮಿತ್ರನು ತನ್ನ ಅಳಿಯಂದಿರೆಂದು ಅವರನ್ನು ಒಪ್ಪಿಕೊಳ್ಳದೇ ಗೊತ್ತಿಲ್ಲದವರಂತೆ ಇಟ್ಟುಕೊಂಡು ಮೇಲಿನ ಒಪ್ಪಂದದಂತೆ ವಿದ್ಯೆ ಕಲಿಸುತ್ತಾನೆ.

ತಾವು ಸೂರ್ಯಮಿತ್ರನಲ್ಲಿ ಕಷ್ಟಪಟ್ಟು ಓದಿದ ಪರಿಯನ್ನು ವಾಯುಭೂತಿ ಹೀಗೆ ಹೇಳುತ್ತಾನೆ. "ಬೈಕಂದಿರಿದು ತಂದ ಕೂಟ್ಗೆನೆರೆಮಣ್ಣೆಯ ನಕ್ಕುಪ್ಪನಕ್ಕೆ ಕಟಿಯನಕ್ಕಂದಪ್ಪೊಡಮಿಕ್ಕಿಯು ಮೆರೆಯಿಸಿಯಜಿಯಂ ಕೆಲರಿಗೆ ಪೋಗಿ ಮೀಟಾಗಳ್ ತಲೆಯಂ ಪೊಸಲೆಣೆಯನಪ್ಪೊಡಮೆಜಿಯಿಸಿಯಜಿಯಂ ತಾಂದಿವ್ಯಮಪ್ಪಹಾರಂಗಳಂ ದೇವಸದೇವಸಕ್ಕಂ ಪಲಂಬರ್ ನಂಟರ್ಕ್ಕಳು ಆಳ್ಗಳುಂ ಬೆರೆಸುಣ್ಣುಂ ಪರ್ವದಿವಸದೊಳಪ್ಪಡಮೆಂದಾನುಮಿವರ್ಗುಣಲಿಕ್ಕೆ ಮೆಂದಜಿಯಂ" ಹೀಗೆ ಸ್ವತಃ ಸೋದರಳಿಯರನ್ನೇ ದಂಡಿಸಿ ವಿದ್ಯೆ ನೀಡುವ ಸೂರ್ಯಮಿತ್ರನ ನಂಬುಗೆ ವಿದ್ಯೆ ಕಲಿಯುವಾಗ ಸಲುಗೆ ಸೌಲಭ್ಯಗಳಿರಬಾರದೆನ್ನುವದು. ಇದು ಸಮಾಜದಿಂದ ಬಂದ ಸಾಮಾನ್ಯ ತಿಳುವಳಿಕೆ.

ವಿದ್ಯೆಯ ಕುರಿತಾಗಿ ಜನಸಾಮಾನ್ಯರಲ್ಲಿನ ತಿಳುವಳಿಕೆ ಎಂದರೆ ಕಷ್ಟವಿದ್ದರೆ ವಿದ್ಯೆ ತಲೆಗೆ ಹತ್ತುತ್ತದೆ; ಎಲ್ಲ ಸುಖ ಸೌಲಭ್ಯಗಳಿದ್ದಾಗ ವಿದ್ಯೆ ಹತ್ತುವದಿಲ್ಲ ಎನ್ನುವದು. ಆ ಕಾರಣಕ್ಕಾಗೇ ಸುಕುಮಾರ ಸ್ವಾಮಿಯ ಕತೆಯಲ್ಲಿನ ಅಗ್ನಿಭೂತಿ ವಾಯುಭೂತಿಯರ ಮಾವ ಸೂರ್ಯಮಿತ್ರ ತಾನೆ ಗುರು ಆದಾಗ್ಯೂ ಅವರ ವಿದ್ಯೆ ಮುಗಿಯುವವರೆಗೆ ಅವನು ಅವರೊಂದಿಗೆ ಅಪರಿಚಿತನಾಗೇ ಇದ್ದ. ಕಾರಣ ಸಂಬಂಧದ ಸಲುಗೆಯಿದ್ದರೆ ಶ್ರದ್ಧೆಯಿಂದ ವ್ಯಾಸಂಗ ಮಾಡುವದಿಲ್ಲವೆಂದ ಕಾರಣಕ್ಕಾಗಿ. ಜ್ಯೋತಿಷ್ಯವನ್ನು ಒಂದು ವಿದ್ಯೆಯಾಗಿ ಕಲಿಸುತ್ತಿದ್ದರು ಎಂಬುದನ್ನು ವಡ್ಡಾರಾಧನೆಕಾರ ಸುಕುಮಾರ ಸ್ವಾಮಿಕತೆಯಲ್ಲಿ ಹೇಳುವನು.

ಹೆಣ್ಣಿನ ಸ್ಥಾನಮಾನ:

ವಡ್ಡಾರಾಧನೆಯ ಕತೆಗಳಲ್ಲಿ ಹೆಣ್ಣನ್ನು ವೈಭವಯುತವಾಗಿಯೂ ಚಿತ್ರಿಸಿಲ್ಲ, ನಿಕೃಷ್ಟವೆಂಬಂತೆಯೂ ಇಲ್ಲ. ಸಹಜ ಮತ್ತು ಸರಳ ವ್ಯಕ್ತಿತ್ವದ ಪಾತ್ರಗಳು ಈ ಕೃತಿಯ ತುಂಬ ಕಾಣುತ್ತವೆ. ಹೆಣ್ಣಿನ ಜಾಣ್ಮೆ, ಶಕ್ತಿ, ಯುಕ್ತಿ, ಪ್ರಾಮಾಣಿಕತೆ, ಸಹನೆ, ತಾಳ್ಮೆ, ತಣ್ಣನೆಯ ವಿರೋಧ ಈ ತೆರನಾದ ಗುಣವುಳ್ಳ ಪಾತ್ರಗಳು ತುಂಬಿವೆ.

ಸುಮತಿ ಎಂಬ ಹುಡುಗಿ ಜಾಣತನದಿಂದ ತನ್ನ ತಂದೆಯನ್ನು ಕಷ್ಟದಿಂದ ಪಾರುಮಾಡಿದ ಕತೆಯನ್ನು ವಡ್ಡಾರಾಧನೆಕಾರ ಹೇಳುತ್ತಾನೆ.

ಸುಕುಮಾರ ಸ್ವಾಮಿಯ ಕತೆಯಲ್ಲಿ ಬರುವ ಸುಮಿತ್ರ ಸೆಟ್ಟಿಯ ಮಗ ಸತ್ತು ಬದುಕಿದ್ದಕ್ಕಾಗಿ ಸಂತೋಷಗೊಂಡು ಸ್ಮಶಾನದಲ್ಲಿ ಒಂದಿಡೀ ರಾತ್ರಿ ಮಗನನ್ನು ಕಾಯ್ದ ನಾಲ್ಕೂ ಭಟರಿಗೆ ಸಾವಿರ ಚಿನ್ನದ ನಾಣ್ಯಗಳಿದ್ದ ಒಂದೊಂದು ಪೊಟ್ಟಣಗಳನ್ನು ಉಪ್ಪರಿಗೆಯ ಮೇಲಿಂದ ಕೆಳಗೆ ಒಗೆಯುತ್ತಾನೆ. ನಾಲ್ವರಲ್ಲಿ ಒಬ್ಬನು ಪೊಟ್ಟಣವನ್ನು ತೆಗೆದುಕೊಂಡು ಇಲ್ಲವೆಂದು ಸುಳ್ಳು ವಾದಿಸುತ್ತಾನೆ. ಈ ದೂರು ರಾಜನ ಬಳಿ ಹೋಗುತ್ತದೆ. ಆಗ ರಾಜ ತಳವಾರನಿಗೆ ಕೂಡಲೇ ಕಳ್ಳನನ್ನು ಹಿಡಿಯಬೇಕು ಇಲ್ಲದಿದ್ದರೆ ಶಿಕ್ಷೆಯನ್ನು ನಿನಗೆ ಕೊಡಲಾಗುವದು ಎಂದು ಹೇಳುತ್ತಾನೆ. ಅರಸನಾಜ್ಞೆಗೆ ತಳವಾರ ಹೆದರಿ ನಾಲ್ವರು ಭಟರನ್ನು ತನ್ನ ಮನೆಗೆ ಕರೆದುಕೊಂಡು ಹೋಗುತ್ತಾನೆ. ತಳವಾರನ ಮಗಳು ಸುಮತಿ ತಂದೆಯ ಚಿಂತೆಗೆ ಕಾರಣ ತಿಳಿದುಕೊಂಡು ಕಳ್ಳನನ್ನೂ, ಚಿನ್ನವನ್ನೂ ತಂದೆಗೆ ಒಪ್ಪಿಸುವದಾಗಿ ಶಪಥಮಾಡುತ್ತಾಳೆ.

ಅದೇ ರಾತ್ರಿ ಭಟರನ್ನು ಪರೀಕ್ಷಿಸಲು ಸುಮತಿ ಅವರೊಂದಿಗೆ ಮಾತನಾಡುತ್ತ ಸುದಾಮೆ ಎಂಬ ಪ್ರಾಮಾಣಿಕ ಹೆಣ್ಣಿನ ಕತೆ ಹೇಳುತ್ತಾಳೆ. ಸುದಾಮೆಯನ್ನು ಕಾಡದೇ ಬಿಟ್ಟ ಕಳ್ಳ ತಳವಾರ ಬ್ರಹ್ಮರಾಕ್ಷಸ ಈ ಮೂವರಲ್ಲಿ ಯಾರು ಒಳ್ಳೆಯವರೆಂದು ಕೇಳುತ್ತಾಳೆ. ಅವರಲ್ಲಿ ಕುರಿಯನ್ನು ಕೊಂದವ ಬ್ರಹ್ಮರಾಕ್ಷಸನನ್ನು, ಕಾವಲು ಕುಳಿತವ ತಳವಾರನನ್ನು ಬೆಂಕಿ ತರಲು ಹೋದವ ಸುದಾಮೆಯ ಸೋದರ ಮೈದುನನ್ನು ನಾಲ್ಕನೆಯವ ಕಳ್ಳನನ್ನು ಒಳ್ಳೆಯವರೆನ್ನುತ್ತಾರೆ. ಅವರ ಉತ್ತರಗಳಿಂದ ಕಳ್ಳ ಒಳ್ಳೆಯವನೆಂದ ಭಟನೇ ನಿಜವಾದ ಕಳ್ಳ ಎಂದು ನಿರ್ಧರಿಸುತ್ತಾಳೆ. ಚಿನ್ನವನ್ನು ವಶಪಡಿಸಿಕೊಳ್ಳಬೇಕೆಂದು ಅವನೊಂದಿಗೆ ಏಕಾಂತದಲ್ಲಿ ಸಲುಗೆಯಿಂದ ಮಾತನಾಡಿ ಮುಚ್ಚಿಟ್ಟಿದ್ದ ಚಿನ್ನವನ್ನು ತೆಗೆದುಕೊಂಡು ತಂದೆಗೆ ಕೊಡುತ್ತಾಳೆ. ಆ ತಳವಾರ ಕಳ್ಳನನ್ನು ಚಿನ್ನದ ಸಮೇತ ರಾಜನಿಗೆ ಒಪ್ಪಿಸುತ್ತಾನೆ. ಹೀಗೆ ಹುಡುಗಿಯೊಬ್ಬಳು ತಂದೆಯನ್ನು ಕಷ್ಟದಿಂದ ಪಾರುಮಾಡಿದ ಕತೆಯನ್ನು ವಡ್ಡಾರಾಧನೆಕಾರ ಹೇಳುತ್ತಾನೆ.

ಮಾತು ಹೆಣ್ಣಿನ ದೌರ್ಬಲ್ಯವೆಂಬಂತೆ ಅವಳು ಯಾವ ಗುಟ್ಟನ್ನೂ ಮುಚ್ಚಿಟ್ಟುಕೊಳ್ಳುವದಿಲ್ಲವೆಂಬಂತೆ ಸಮಾಜದ ಅಭಿಪ್ರಾಯವನ್ನು ವಡ್ಡಾರಾಧನೆಕಾರ ಕತೆಯಲ್ಲಿ ಕಟ್ಟಿಕೊಡುತ್ತಾನೆ.

ಸುಕುಮಾರ ಸ್ವಾಮಿಯ ಕತೆಯಲ್ಲಿ ಬರುವ ಧರ್ಮಪುರ ವೈನಾಕನೆಂಬ ಬಂಟನಿಗೆ ಕಜ್ಜಿನ ಗದ್ದೆಯಲ್ಲಿ ಊಳುವಾಗ ಅಪಾರ ಸಂಪತ್ತು ದೊರೆಯುತ್ತದೆ. ಇದನ್ನು ಯಾರಿಗೂ ಹೇಳದೇ ಗೌಪ್ಯವಾಗಿಡಬೇಕೆಂದು ತನ್ನ ಹೆಂಡತಿಯ ಮುಂದಾದರೂ ಹೇಳುವದೋ ಬೇಡವೋ ಎಂದು ಹೆಂಡತಿಯನ್ನು ಪರೀಕ್ಷಿಸಲು ಮುಂದಾದ. ಅದಕ್ಕಾಗಿ ಕೃತಕವಾಗಿ ಗರ್ಭಧರಿಸಿದಂತೆ ನಾಟಕವಾಡತೊಡಗಿದ. ಅದಕ್ಕೆ ಅವನ ಹೆಂಡತಿ ನಿಮ್ಮ ಹೊಟ್ಟೆ ಹೀಗೇಕಾಗಿದೆ ಎಂದು ಮತ್ತೆ ಮತ್ತೆ ಕಾಡಿ ಒತ್ತಾಯಿಸಿದಾಗ ವೈನಾಕನು ಯಾರಿಗೂ ಹೇಳುವದಿಲ್ಲ ಎನ್ನುವದಾದರೆ ಮಾತ್ರ ಹೇಳುತ್ತೇನೆ. ಪುರುಷರಿಗೆ ಆಗಲಾರದ್ದು ತನಗಾಗಿದೆ ಎಂದು ಹೇಳುತ್ತಾನೆ. ಅದನ್ನು ಅವನ ಹೆಂಡತಿ ಮನದಲ್ಲಿ ಇಟ್ಟುಕೊಳ್ಳದೇ ಊರಿಗೆಲ್ಲ ಸಾರಿ ಸಾರಿ ಹೇಳುವಳು. ಹೀಗೆ ಹೆಣ್ಣು ಮಾತಿನ ದೌರ್ಬಲ್ಯಕ್ಕೊಳಗಾಗಿ ಯಾವ ಗೌಪ್ಯವನ್ನು ಕಾಪಾಡಲಾರಳೆಂಬ ಅಪಖ್ಯಾತಿ ಎಲ್ಲ ಕಾಲಕ್ಕೂ ಕೆಲವರಿಂದ ಎಲ್ಲರಿಗೂ ವ್ಯಾಪಿಸಿದೆ.

ಗಂಭೀರೆಯ ಮಗಳು ಗರ್ಭಿಣಿಯಾಗಿದ್ದು ಅವಳಿಗೆ ಬಯಕೆಯೂಟ ಕೊಡಲು ಮಗಳ ಊರಿಗೆ ಹೋಗುತ್ತಿರುತ್ತಾಳೆ. ದಾರಿಯಲ್ಲಿ ಎಂಟು ಜನ ಕಳ್ಳರನ್ನು ನೋಡಿ ಅವರಿಗೆ ಬುದ್ದಿ ಕಲಿಸಲು ಅವರಲ್ಲೇ ಒಬ್ಬನನ್ನು ನೋಡಿ ಜೋರಾಗಿ ಅಳತೊಡಗಿದಳು. ನನ್ನ ಮಗ ನಿನ್ನಂತೆಯೇ ಇದ್ದ ಹನ್ನೆರಡು ವರ್ಷದ ಹಿಂದೆ ಮನೆಬಿಟ್ಟು ಹೋದ ಎಲ್ಲಿಗೆ ಹೋದನೋ ನಿನ್ನ ನೋಡಿದರೆ ಅವನನ್ನು ನೋಡಿದಂತೆಯೇ ಆಗುತ್ತಿದೆ. ಪಕ್ಕದೂರಲ್ಲೇ ನಮ್ಮ ಮನೆಯಿದೆ. ಇಂದಿದ್ದು ಸ್ನಾನ ಊಟ ಮಾಡಿ ನಾಳೆ ಹೋಗುವಿರಂತೆ ಎಂದು ಅವರನ್ನು ಮಗಳ ಮನೆಯಲ್ಲಿ ಇರಿಸಿಕೊಳ್ಳುತ್ತಾಳೆ. ಅವರೆಲ್ಲರಿಗೂ ತಲೆಗೆ ಎಣ್ಣೆ ಹಚ್ಚಿ ನೀರೆರೆಯುವಳು. ಅವರಿಗೆಲ್ಲ ಒಲ್ಲಣಿಗೆಯನ್ನು ಉಡಿಸಿ ತಲೆಯ ಮೇಲೆ ಕುದಿಯುವ ಗಂಜಿ ಸುರಿದು ಮನೆ ಮೇಲೆ ಹತ್ತಿ ಕಳ್ಳರು ಕಳ್ಳರು ಎಂದು ಕಿರುಚುತ್ತಾಳೆ. ಅದನ್ನು ಕೇಳಿದ ಕಳ್ಳರು ಭಯದಿಂದ ಓಡಿ ಹೋಗುತ್ತ ತಮಗೆ ಮೋಸಮಾಡಿದ ಮುದುಕಿಗೆ ತಕ್ಕ ಶಾಸ್ತಿ ಮಾಡಬೇಕೆಂದು ವೈರಸಾಧಿಸಿಕೊಂಡು ಕೂಡುತ್ತಾರೆ. ಅಂದು ರಾತ್ರಿಯಾಗುತ್ತಿದ್ದಂತೆಯೇ ಮುದುಕಿ ಮೊದಲೇ ಊಹಿಸಿದಂತೆ ರಾತ್ರಿಯಾಗುವವರೆಗೆ ಕಾದು ಮುದುಕಿ ಮಲಗಿದ್ದ ಕೋಣೆಗೆ ಕಳ್ಳರು ಕನ್ನ ಹಾಕಿದರು. ಕಳ್ಳನೊಬ್ಬ ಒಳನುಗ್ಗಲೆಂದು ತಲೆಹಾಕಿದೊಡನೆ ಗಂಭೀರೆ ಕತ್ತಿಯಿಂದ ಅವನ ಮೂಗನ್ನ ಚರಚರನೆ ಕೊಯ್ದುಬಿಟ್ಟಳು. ಕೊಯ್ಸಿಕೊಂಡವ ಮುಂದಿನವರಿಗೆ ಹೇಳದೇ ತನ್ನ ತಲೆ ಕನ್ನದಲ್ಲಿ ಹಾಯುವದಿಲ್ಲ ನೀನು ಹೋಗು ಎನ್ನುವನು. ಹೀಗೆ ಎಂಟು ಜನರೂ ಮೂಗು ಕೊಯಿಸಿಕೊಂಡು ಹಿಂದಿರುಗುವರು.

ಮರುದಿನ ಗಂಭೀರ ನಸುಕಿನಲ್ಲೇ ಎದ್ದು ತನ್ನ ಊರಿಗೆ ಹೊರಡುತ್ತಾಳೆ. ಇನ್ನೂ ಕತ್ತಲೆ ಬಹಳವಿರುವದರಿಂದ ದಾರಿಯಲ್ಲಿ ಹೆದರಿಕೆಯಾಗಿ ಆಲದ ಮರವನ್ನು ಹತ್ತಿ ಕುಳಿತುಕೊಳ್ಳುತ್ತಾಳೆ. ಒಂದಾಗಿ ಹೋಗಿದ್ದ ಕಳ್ಳರು ಆ ದಾರಿಯಲ್ಲಿ ಯಾರಾದರೂ ಬರುತ್ತಿದ್ದಾರೆಯೇ ಎಂದು ನೋಡಲು ಒಬ್ಬ ಕಳ್ಳ ಅದೇ ಆಲದ ಮರವನ್ನು ಹತ್ತಿದನು. ಅಲ್ಲಿಯೇ ಕುಳಿತಿದ್ದ ಈ ಮುದುಕಿಯನ್ನು ನೋಡಿ ಯಾರೆಂದು ಕೇಳಿದ್ದಕ್ಕವಳು ತನ್ನನ್ನು ಯಕ್ಷದೇವತೆ ಎಂದು ಹೇಳಿಕೊಳ್ಳುತ್ತಾಳೆ. ಕಳ್ಳ ಅವಳಿಗೆ ನನ್ನನ್ನು ಮದುವೆಯಾಗುವೆಯಾ ಎಂದು ಕೇಳಲು ಮುದುಕಿ ಈ ಮಾಂಸದ ತುಂಡನ್ನು ನಾಲಗೆಯ ಮೇಲಿಟ್ಟುಕೊಂಡು ನನ್ನ ಬಾಯಿಯೊಳಗಿಡುವದಾದರೆ ಮದುವೆಯಾಗುವದಾಗಿ ಹೇಳುತ್ತಾಳೆ. ಕಳ್ಳನು ಅವಳು ಹೇಳಿದಂತೆ ಮಾಡಲು ಹೋದಾಗ ಅವಳು ಕಚಕ್ಕನೇ ಅವನ ನಾಲಗೆಯನ್ನು ಕತ್ತರಿಸುತ್ತಾಳೆ. ನೋವಿಗೆ ಜೋರಾಗಿ ಕಿರುಚಿಕೊಂಡು ಮರದಿಂದ ಕೆಳಗೆ ಬಿದ್ದು ಓಡುತ್ತಾನೆ. ಆ ಕಳ್ಳರಿಗೆಲ್ಲ ಮುದುಕಿ ಕದ್ದ ವಸ್ತುಗಳ ಎಂಟನೇ ಒಂದು ಭಾಗ ಈ ಮರದ ಬಿರುಕಿನಲ್ಲಿಟ್ಟು ಹೋಗಬೇಕು: ತಪ್ಪಿದರೆ ನಿಮ್ಮನ್ನೆಲ್ಲ ಕೊಂದುಬಿಡುತ್ತೇನೆ ಎಂದು ಒದರಿ ಹೇಳುತ್ತಾಳೆ. ಅಂದು ಹೆದರಿದ ಕಳ್ಳರು ಅಂದಿನಿಂದ ತಾವು ಕದ್ದ

ವಸ್ತುಗಳ ಎಂಟನೇ ಒಂದು ಭಾಗ ಮರದ ಬಿರುಕಿನಲ್ಲಿ ತೆಗೆದಿಟ್ಟು ಹೋಗುತ್ತಿದ್ದರು. ಮುದುಕಿ ದಿನವೂ ಅದನ್ನು ತನ್ನ ಊರಿನಿಂದ ಬಂದು ತೆಗೆದುಕೊಂಡು ಹೋಗುತ್ತಿದ್ದಳು

ಹೀಗೆ ಮುದುಕಿಯೊಬ್ಬಳು ತನ್ನ ದೂರದೃಷ್ಟಿ ಸಮಯ ಪ್ರಜ್ಞೆಯ ಮೂಲಕ ಎಂಟು ಜನ ಕಳ್ಳರನ್ನು ಆಳುತ್ತ ಸುಖವಾಗಿ ಬಾಳುತ್ತಿದ್ದಳು. ಹೆಣ್ಣು ಅಬಲೆ ಎನ್ನುವ ಮನಃಸ್ಥಿತಿಯುಳ್ಳವರಿಗೆ ಗಂಭೀರೆಯ ಯುಕ್ತಿಯು ಶಕ್ತಿಯಾದ ಬಗೆ ಮತ್ತು ಹೆಣ್ಣಿನ ಮಾನಸಿಕ ಸ್ಥೈರ್ಯವನ್ನು ವಡ್ಡಾರಾಧನೆಕಾರ ಈ ಕತೆಯ ಮೂಲಕ ವಿವರಿಸುತ್ತಾನೆ.

ಒಂದು ದಿನ ಸುದಾಮೆ ಸ್ನಾನಕ್ಕೆಂದು ನದಿಗೆ ಹೋದಾಗ ಮೊಸಳೆ ಹಿಡಿಯುತ್ತದೆ. ಸುದಾಮೆಯ ಸೋದರ ಮೈದುನ ಮೊಸಳೆಯಿಂದ ಅವಳನ್ನು ಬಿಡಿಸುತ್ತಾನೆ. ಅದಕ್ಕೆ ಪ್ರತಿಯಾಗಿ ಏನು ಬೇಕೆಂದು ಸುದಾಮೆ ಕೇಳಿದಾಗ, ನಿನ್ನ ಮದುವೆ ದಿನದ ಅಲಂಕಾರವನ್ನು ತೋರಿಸಬೇಕಷ್ಟೇ ಎಂದು ಹೇಳುತ್ತಾನೆ. ಅವಳು ಅದಕ್ಕೆ ಒಪ್ಪಿಕೊಳ್ಳುತ್ತಾಳೆ.

ಮುಂದೊಂದು ದಿನ ಅವಳ ಮದುವೆಯಾಗುತ್ತದೆ. ಅವಳಿಗೆ ತಾನು ಕೊಟ್ಟ ಮಾತು ನೆನಪಾಗಿ ಮಧ್ಯರಾತ್ರಿಯಲ್ಲಿ ಸರ್ವಾಲಂಕೃತಳಾಗಿ ಮನೆಯಿಂದ ಮೈದುನನಿದ್ದ ಅಂಗಡಿಗೆ ಹೊರಡುತ್ತಾಳೆ. ದಾರಿಯಲ್ಲಿ ಕಳ್ಳನೊಬ್ಬ ಅವಳನ್ನು ಅಡ್ಡಗಟ್ಟಿ ಸಿಂಗರಿಸಿಕೊಂಡಿರುವ ಆಭರಣಗಳನ್ನೆಲ್ಲ ಕೊಡುವಂತೆ ಕೇಳುತ್ತಾನೆ. ಅದಕ್ಕವಳು ತಾನು ಹೋಗುತ್ತಿರುವ ಕಾರಣ ಹೇಳಿ ಬರುವಾಗ ಕೊಡುತ್ತೇನೆ ಅಲ್ಲಿಯವರೆಗೆ ಇಲ್ಲಿಯೇ ಇರು ಎನ್ನುವಳು. ಅವನು ಅವಳಿಗೆ ಸಮ್ಮತಿಯನ್ನು ಸೂಚಿಸುತ್ತಾನೆ. ಮುಂದೆ ತಳವಾರ ಅವಳನ್ನು ತಡೆದು ಇಷ್ಟೊತ್ತಿನಲ್ಲಿ ಎಲ್ಲಿ ಹೋಗುತ್ತಿದ್ದೀಯಾ ಎಂದು ಕೇಳುತ್ತಾನೆ. ಮುಖ್ಯ ಕೆಲಸಕ್ಕೆ ಹೋಗುತ್ತಿದ್ದೇನೆ ಹಿಂದಿರುಗಿ ಬರುವಾಗ ನೀನು ಇಷ್ಟಬಂದಂತೆ ಮಾಡು ಎಂದು ಹೇಳಿ ಹೊರಡುತ್ತಾಳೆ. ಮುಂದೆ ಬ್ರಹ್ಮರಾಕ್ಷಸ ಎದುರಾಗಿ ಅವಳನ್ನು ತಿನ್ನಲು ಯತ್ನಿಸಿತು. ಸುದಾಮೆ ಅದಕ್ಕೂ ಮುಖ್ಯ ಕೆಲಸವೊಂದಿದೆ.ಅದನ್ನು ಮುಗಿಸಿಬಂದ ಮೇಲೆ ಏನಾದರೂ ಮಾಡುವಂತೆ ಎಂದಾಗ ಬ್ರಹ್ಮರಾಕ್ಷಸನೂ ಅದಕ್ಕೂ ಒಪ್ಪಿ ಅವಳನ್ನು ಕಳಿಸಿಕೊಡುತ್ತಾನೆ. ನಂತರ ಅವಳನ್ನು ಪರೀಕ್ಷಿಸಬೇಕೆಂದು ಕಳ್ಳ, ತಳವಾರ, ಬ್ರಹ್ಮರಾಕ್ಷಸ ಮೂವರೂ ಅವಳನ್ನು ಹಿಂಬಾಲಿಸುತ್ತಾರೆ.

ಸುದಾಮೆ ತನ್ನ ಮೈದುನ ಮಲಗಿದ್ದ ಅಂಗಡಿಗೆ ಹೋಗಿ ಬಾಗಿಲು ಬಡಿದು ಅವನನ್ನು ಎಬ್ಬಿಸಿ ತನ್ನ ಅಲಂಕಾರವನ್ನು ತೋರಿಸಿ ತಾನು ಕೊಟ್ಟ ಮಾತನ್ನು ನೆನಪಿಸುತ್ತಾಳೆ. ಅವನು ಅವಳ ಅಲಂಕಾರವನ್ನು ಕಣ್ತುಂಬ ನೋಡಿ ಖುಷಿ ಪಟ್ಟು ಮಧ್ಯರಾತ್ರಿ ಕೆಟ್ಟ ಸಮಯ ಕಳ್ಳರು, ತಳವಾರರು ಕಾಡುತ್ತಾರೆ. ಬೇಗ ಹೋಗಿ ಮನೆ ಸೇರಿಕೋ ಎಂದು ಹೇಳಿ ಕಳಿಸುತ್ತಾನೆ. ಎಲ್ಲವನ್ನೂ ಹೊರಗೆ ನಿಂತು ಕೇಳಿಸಿಕೊಳ್ಳುತ್ತಿದ್ದ ಕಳ್ಳ, ತಳವಾರ, ಬ್ರಹ್ಮರಾಕ್ಷಸ ಎಲ್ಲರೂ ತಿರುಗಿ ಬಂದು ತಮ್ಮ ಮೊದಲಿನ ಸ್ಥಳಕ್ಕೆ ಹೋಗಿ ನಿಲ್ಲುತ್ತಾರೆ. ಅವಳು ಬಂದು "ನೀವು ಏನು ಬೇಕೋ ಹಾಗೆ ಮಾಡಿ" ಎಂದು ಮೂವರಿಗೂ ಹೇಳುತ್ತಾಳೆ. ಆದರೆ ಮೂವರೂ ಸುದಾಮೆಯ ಪ್ರಾಮಾಣಿಕತೆಗೆ ಮನಸೋತು ಅವಳನ್ನು ಮನೆಗೆ ಕಳುಹಿಸುತ್ತಾರೆ. ಹೀಗೆ ಎಂಥ ಕೆಟ್ಟ ಮನಸ್ಸುಗಳೂ ಒಳ್ಳೆಯದನ್ನು ಮೆಚ್ಚುವ, ಕಾಪಾಡುವ ಗುಣವನ್ನು ವಡ್ಡಾರಾಧನೆಕಾರ ಕಟ್ಟಿಕೊಡುತ್ತಾನೆ. ಅಲ್ಲದೇ ಸುದಾಮೆಯ ಸೋದರ ಮಾವನ ಮೂಲಕ ಅವತ್ತಿನ ಕಾಲದಲ್ಲಿ ಸ್ತ್ರೀಯರ ಬಗ್ಗೆ ಸಮಾಜದಲ್ಲಿದ್ದ ಗೌರವಾದರಗಳು ಮನತುಂಬುತ್ತವೆ ಮತ್ತು ಇವತ್ತಿನ ಹೆಣ್ಣಿನ ಅಸುರಕ್ಷತೆಯನ್ನು ಅವತ್ತಿನ ಕಾಲದೊಂದಿಗೆ ತುಲನೀಕರಿಸುವಂತೆ ಮಾಡುತ್ತವೆ. ಈ ಕತೆಯಲ್ಲಿ ಬರುವ ಎಲ್ಲರೂ ಸಾಮಾನ್ಯರೇ. ಇವರೆಲ್ಲ ಮನುಷ್ಯತ್ವಕ್ಕೆ ಪ್ರಾಮಾಣಿಕತೆಗೆ ಬೆಲೆಕೊಡುವಂಥವರೇ ಹೊರತು ಸ್ವಾರ್ಥವೇ ಮುಖ್ಯ ಎನ್ನುವವರಲ್ಲ.

ಧರ್ಮಾಮೃತ

ಜಾತಿ ವ್ಯವಸ್ಥೆ:

ಮೊದಲ ಆಶ್ವಾಸದಲ್ಲಿ ಕುರುಬರನ್ನು ಉಲ್ಲೇಖಿಸುವ ನಯಸೇನ ದ್ವಿತೀಯ ಆಶ್ವಾಸದ ಲಲಿತಾಂಗನ ಕಥೆಯಲ್ಲಿ ಸಮಾಜದಲ್ಲಿರುವ ಅನೇಕ ಜಾತಿಗಳನ್ನು ಹೆಸರಿಸುತ್ತಾನೆ. ತೆಲ್ಲಿಗರ್ (ಗಾಣಿಗರು), ಮಾಲೆಗಾರ, ಕಂಚುಗಾರ, ಕಳ್ಳಸಿಗ(ಈಡಿಗ), ದೂಸಿಗರು(ವರ್ತಕರು), ಮಣಿಗಾರ, ಅಗಸರು, ಪಾರ್ವರು(ಬ್ರಾಹ್ಮಣರು), ಬಳೆಗಾರರು, ಒಕ್ಕಲಿಗರು, ಕುಂಬಾರರು, ಬೇಡರು, ಜಂತಿಗರ್ (ದಂತದ ವ್ಯಾಪಾರಿಗಳು), ತಂಬುಲಿಗರ್ (ತಾಂಬೂಲ ಮಾರುವವರು), ಚೊಲ್ಲೆಯರ್ (ಕಂಚುಕಿಗಳು), ಬಡಗಿಗಳು, ಪೊಲೆಯರ್, ಮಾದೆಗರು, ತಿರುಕರು, ಹರಿಕಾರರು, ಕಟುಕರು, ಮನ್ನೆಯರ್ (ಪಾಳೆಗಾರರು), ತಳವಾರ, ಕ್ಷತ್ರಿಯ ಹೀಗೆ ಅನೇಕ ವೃತ್ತಿ, ಜಾತಿ ಸಮುದಾಯಗಳನ್ನು ಹೆಸರಿಸುತ್ತಾನೆ.

ವಡ್ಡಾರಾಧನೆಕಾರ ಹೆಸರಿಸದ ಇಷ್ಟೊಂದು ವೃತ್ತಿ, ಜಾತಿ ಸಮುದಾಯಗಳನ್ನು ನಯಸೇನ ಹೆಸರಿಸುತ್ತಾನೆ. ವಡ್ಡಾರಾಧನೆ ಕೃತಿಗೂ ಧರ್ಮಾಮೃತಕ್ಕೂ ಸರಿಸುಮಾರು ಎರಡುನೂರು ವರ್ಷಗಳ ಅಂತರವಿದೆ. ಈ ಕಾಲಾಂತರದಲ್ಲಿ ಅಸ್ಪಷ್ಟವಾಗಿದ್ದ ಜಾತಿ ವ್ಯವಸ್ಥೆ ಸ್ಪಷ್ಟವಾಗಿ ರೂಪುಗೊಂಡಿದ್ದು ತಿಳಿಯುತ್ತದೆ. ಒಂಬತ್ತು–ಹತ್ತನೆಯ ಶತಮಾನದಷ್ಟೊತ್ತಿಗೆ ವೃತ್ತಿಗಳು ಜಾತಿಗಳಾಗಿ ಮಾರ್ಪಾಡಾಗತೊಡಗಿದವು. ಹನ್ನೊಂದು–ಹನ್ನೆರಡನೆಯ ಶತಮಾನದ ಕಾಲಕ್ಕಾಗಲೇ ಬ್ರಾಹ್ಮಣ ಹೊಲೆಯರಾದಿಯಾಗಿ ಅನೇಕ ವೃತ್ತಿ ಜನಾಂಗಗಳೆಲ್ಲ ಜಾತಿಗಳಾದುದರ ಬಗ್ಗೆ ಸ್ಪಷ್ಟ ಮಾಹಿತಿ ದೊರೆಯುತ್ತದೆ(೧೮ ಜಾತಿಗಳು, ಪು–೬). ಇದೇ ಕಾರಣಕ್ಕಾಗಿ ವಡ್ಡಾರಾಧನೆಯಲ್ಲಿ ಕಾಣದೊರೆಯದ ಜಾತಿ ಸ್ವರೂಪವನ್ನು ಧರ್ಮಾಮೃತದಲ್ಲಿ ಕಾಣುತ್ತೇವೆ.

ಧರ್ಮಾಮೃತದ ಕೃತಿಯ ಉದ್ದಕ್ಕೂ ಹೋಲಿಕೆಗಳ ರೂಪದಲ್ಲಿ ಕೆಳಜಾತಿಗಳ, ದುಡಿಯುವ ವರ್ಗಗಳನ್ನು ಅವಮಾನಿಸುವ, ಕೀಳಾಗಿ ಕಾಣುವ ದೃಷ್ಟಿಕೋನ ಕಾಣುತ್ತೇವೆ. ಉದಾಹರಣೆಗೆ –

ಬೇಡಂ ಮಾಣಿಕಮೊಂದಂ

ಕಾಡೊಳ್ ಕಂಡೊರ್ಮೆ ಮೆಲ್ದುಪಗಿನಲ್ಲೆಂದೀ

ಡಾಡಿದನ್............... (ಪು–೧೭, ಪ–೯೬)

ಬೇಡನೊಬ್ಬ ಕಾಡಲ್ಲಿ ಮಾಣಿಕ್ಯ ಕಂಡು, ಒಮ್ಮೆ ರುಚಿ ನೋಡಿ ಅದು ಹಣ್ಣಲ್ಲೆಂದು ಬಿಸಾಡಿದನು ಎಂದು ಬೇಡನ ಮೂರ್ಖತನವನ್ನು ಎತ್ತಿತೋರಿಸುವನು. ಮಾಣಿಕ್ಯದ ಬೆಲೆಯೇ ಗೊತ್ತಿಲ್ಲದ ಬೇಡ ಮಾಣಿಕ್ಯವನ್ನು ಆಹಾರವಾಗೇ ಕಾಣುವ ಅವನ ದೃಷ್ಟಿಕೋನ ನಯಸೇನನಿಗೆ ಮೂರ್ಖತನವೆನ್ನಿಸುತ್ತದೆ.

ಕುದುರೆಯೇರ್ದ ಕುಱುಬನಂತೆ ನಡುಗುತುಂ

ಬಿನ್ನಪಂಗೆಯ್ವ ವೊಕ್ಕಲಿಗನಂತೆ ಬಿಕ್ಕುತ್ತುಂ ಸಾಕ್ಷಿಯಿಲ್ಲದೆ

ಸಾಲಂಗೊಟ್ಟೊಕ್ಕಲಿಗನಂತೆ (ಪು–೨೧, ಗದ್ಯ)

ಮತ್ತೊಂದು ಕಡೆ ತನಗೆ ನಿಲುಕದ ವಸ್ತುವನ್ನು ಭ್ರಮಿತನಾಗಿ ನೋಡುವನು ಎಂಬುದನ್ನು ನಯಸೇನ "ಕುಱುಂಬನರಸುಗಂಡಂತೆ ನೋಡುತ್ತುಮಿರ್ದ"(ಪು–೩೨, ಗದ್ಯ) ಎಂದು ಹೇಳುತ್ತಾನೆ. ಕೆಳಜಾತಿಯ ವ್ಯಕ್ತಿ ಮನುಷ್ಯ ಎಂದು ಪರಿಗಣಿಸದೇ ಇದ್ದ ಕಾಲದಲ್ಲಿ ಕುಱುಬನೊಬ್ಬ ರಾಜತ್ವವನ್ನು

ಎದುರು ನೋಡುವ ಅವನನ್ನು ಹುಚ್ಚನೆಂದೇ ಭಾವಿಸುವ ಕಾಲವದಾಗಿತ್ತು. ಇಂದಿನ ಪ್ರಜಾಪ್ರಭುತ್ವ ಎಂಥ ಕೆಳಜಾತಿ ಕೆಳವರ್ಗದವನೂ ರಾಜತ್ವವನ್ನು ಎದುರು ನೋಡುವ ಸಾಧ್ಯತೆಯನ್ನು ಸಾಮಾನ್ಯನ ಮುಂದೆ ತೆರೆದಿಟ್ಟಿದೆ.

ಆರ್ಥಿಕತೆ

ಕರ್ನಾಟಕದಲ್ಲಿ ಅರ್ಥವ್ಯವಸ್ಥೆ ತುಂಬ ವ್ಯವಸ್ಥಿತವಾಗಿ ಮುನ್ನಡೆದುಕೊಂಡು ಬಂದಿದೆ. ವ್ಯಾಪಾರ-ವಹಿವಾಟಿನಲ್ಲಿ ಸರಕಿನ ಮೇಲೆ ತೆರಿಗೆ ವಿಧಿಸುವ ಪದ್ಧತಿ ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಇದೆ. ತೆರಿಗೆ ಪದ್ಧತಿಯು ಜನಸಾಮಾನ್ಯರ ಮೇಲೆ ಹೇಗೆ ಪ್ರಭಾವ ಬೀರುತ್ತಿತ್ತು ಎಂಬುದರ ಬಗ್ಗೆ, ಸುಂಕದ ವಿವಿಧ ಮುಖಗಳನ್ನು ನಯಸೇನ ಧರ್ಮಾಮೃತದಲ್ಲಿ ಚಿತ್ರಿಸುತ್ತಾನೆ.

"ನಯಸೇನನಲ್ಲಿ "ಕದ್ದು ಪರದಾಡುವಂ ಸುಂಕಿಗನಕಯ್ಯೊಳ್ ಸಿಕ್ಕುವಂತೆ" (೧೩-೧೮೫), "ಸುಂಕಿಗನಂ ಕಂಡ ಭಂಡಮುಳ್ಳನಂತೆ ಸಂಕಿಸುತ್ತುಂ"(೩-೪೬), ಈ ಬಟ್ಟೆಯೊಳ್ ಸುಂಕಂ ಪಿರಿದೆಂದೊಡೆ ಮೊದಲಾಗದೆಂಬರ್"(೭-೬೧) ಇಂತಹ ಕೆಲವು ಮಾತುಗಳು ಬರುತ್ತವೆ. ಇದರಿಂದ ಕಳ್ಳರೂ, ಭಂಡವುಳ್ಳವರೂ ಸುಂಕಿಗನ ಕೈಯ್ಯಲ್ಲಿ ಸಿಕ್ಕು ಪೇಚಾಡುತ್ತಿದ್ದರೆಂಬುದು ವಿದಿತವಾಗುವುದಲ್ಲದೆ ವ್ಯಾಪಾರಿಗಳು ಸುಂಕದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೆಂದೂ, ಕೆಲವೆಡೆ ಸುಂಕವು ಅಧಿಕವಾಗಿತ್ತೆಂಬುದು ಹೊಳೆಯುತ್ತದೆ"(ನಯಸೇನ ಮತ್ತು ಅವನ ಕೃತಿಗಳು, ಪು-೨೭೯).

ಧರ್ಮಾಮೃತದ ಕಾಲಕಷ್ಟೇ ಅಲ್ಲ ಎಲ್ಲ ಕಾಲಕ್ಕೂ ತೆರಿಗೆ ಎಂಬುದು ಅರ್ಥವ್ಯವಸ್ಥೆಯನ್ನು ನಿರ್ಧರಿಸುತ್ತಿರುತ್ತದೆ. ಅಂತೆಯೇ ಎಲ್ಲ ಕಾಲದಲ್ಲೂ ತೆರಿಗೆಯಿಂದ ತಪ್ಪಿಸಿಕೊಳ್ಳುವದಕ್ಕಾಗಿ ಹೊಂಚು ಹಾಕುವ ಜನ ಇದ್ದೇ ಇರುವರು. ಅಂಥವರೇ ಎಲ್ಲ ಕಾಲಕ್ಕೂ ಅರ್ಥ ವ್ಯವಸ್ಥೆಗೆ ನಷ್ಟವನ್ನುಂಟು ಮಾಡುವವರು.

ಅಂದಿನ ಆರ್ಥಿಕ ವ್ಯವಸ್ಥೆಯಲ್ಲಿ ಒಕ್ಕಲುತನದ ಪಾಲು ಬಹು ದೊಡ್ಡದಾಗಿಯೇ ಇತ್ತು. ಒಡೆದ ಕಲ್ಲ ಕರೆಗಳೂ ಇದ್ದವು. ಒಕ್ಕಲುತನವು ಬರೀ ಮಳೆಯನ್ನೇ ಆಶ್ರಯಿಸಿದ್ದು ಇತ್ತು. ಕೆಲವು ಕಡೆ ಕರೆಯ ನೀರಿನಿಂದ ಬೇಸಾಯ ಮಾಡುವ ಉಲ್ಲೇಖಗಳೂ ಧರ್ಮಾಮೃತದಲ್ಲಿ ದೊರೆಯುತ್ತವೆ.

ನಯಸೇನ ಧರ್ಮಾಮೃತದಲ್ಲಿ ಕೇಸಕ್ಕಿ, ತಳಿಸಿದಕ್ಕಿ, ಕರ್ಚಿದಕ್ಕಿ ಎಂಬ ಅನೇಕ ತೆರನಾದ ಅಕ್ಕಿಗಳನ್ನು ಉಲ್ಲೇಖಿಸಿದ್ದನ್ನು ನೋಡಿದಾಗ ಈ ನಾನಾ ತೆರನಾದ ಅಕ್ಕಿ ಪ್ರಭೇದಗಳನ್ನು ಅಂದು ಬೆಳೆಯುತ್ತಿದ್ದಿರಬಹುದಾಗಿದೆ. ಕಬ್ಬನ್ನು ಬೆಳೆದು, ಗಾಣಕ್ಕೆ ಹಾಕಿ ಬೆಲ್ಲ ತಯಾರಿಸುವ ಉಲ್ಲೇಖವನ್ನೂ ನಯಸೇನ ಮಾಡುತ್ತಾನೆ. ಜೋಳವನ್ನು ಹಗೆಹದಲ್ಲಿ ಹಾಕುವದು ಧರ್ಮಾಮೃತದಲ್ಲಿ ಉಕ್ತಗೊಳ್ಳುತ್ತದೆಂದರೆ ಅಪಾರ ಪ್ರಮಾಣದ ಜೋಳ ಆ ಕಾಲಕ್ಕೆ ನಯಸೇನನ ಪ್ರದೇಶದಲ್ಲಿ ಬೆಳೆಯುತ್ತಿದ್ದರೆಂಬುದು ವಿದಿತ. ಪೆರ್ಗೆರೆ, ಕೈವೊಲ, ಗೋಕುಲಗಳಿಗೆ ಒಡೆಯರಾದ ಕೆಲವು ಜನ ಒಕ್ಕಲಿಗರು ಆರ್ಥಿಕವಾಗಿ ತುಂಬ ಸ್ಥಿತಿವಂತರಾಗಿದ್ದರು. ಶ್ರೀಮಂತ ಒಕ್ಕಲಿಗರಿಗೆ ರಾಜರ ಪರಿಚಯವಿರುತ್ತಿತ್ತು ಎಂಬುದನ್ನೂ ಧರ್ಮಾಮೃತದಲ್ಲಿ ಕಾಣುತ್ತೇವೆ.

ಒಕ್ಕಲಿಗರ ಜೀವನ ಯಾವಾಗಲೂ ಸುಖಮಯವಾಗಿರುತ್ತಿರಲಿಲ್ಲ. ನಿಸರ್ಗದ ಕೋಪಕ್ಕೆ ತುತ್ತಾಗಿ ಇಲ್ಲವೆ ಬೇರೆ ಕಾರಣಗಳಿಂದಾಗಿ ಕಷ್ಟ ಅನುಭವಿಸುತ್ತಿದ್ದುದೂ ಉಂಟು. ಒಮ್ಮೊಮ್ಮೆ ಮಳೆಗಾಗಿ ಆಕಾಶವನ್ನು ನೋಡುತ್ತ ಕೂಡುತ್ತಿದ್ದರು(೧-೧೬೦). ಬೆಳೆ ಇನ್ನೇನು ಕೈಗೆ ಬಂದಿತೆನ್ನುವ ಹೊತ್ತಿಗೆ ಕಿಚ್ಚು ತಗುಳ್ದು ನಾಶವಾಗುತ್ತಿತ್ತು. ಹತ್ತಿಯ ರಾಶಿಗೂ ಬೆಂಕಿ ಬೀಳುತ್ತಿತ್ತು(೨-೭೧) ಹುಲಿಗಳು ದನಗಳ ಗುಂಪನ್ನು

ಹೊಕ್ಕು ಕೊಲ್ಲುತ್ತಿದ್ದವು. ಬೆಲ್ಲದ ಹೇರಿನಲ್ಲಿ ಇಲಿಗಳು ಹೊಕ್ಕು ನಾಶಮಾಡುತ್ತಿದ್ದವು(೨-೭೧). ಎರೆಯ ಕೆರೆಗಳು ಬೇಸಗೆಯಲ್ಲಿ ಬತ್ತಿಹೋಗಿ ಕುಡಿವ ನೀರಿಗೂ ಅಭಾವವಾಗುತ್ತಿತ್ತು(೭-೪೬, ೭೫). ಅರಳೆಗೆ ಕಿಚ್ಚು ಹತ್ತುತ್ತಿತ್ತು(೫-೧೮). ಸೌಂತೆಯ ಬಳ್ಳಿಗಳಲ್ಲಿ ಎತ್ತುಗಳು ನುಗ್ಗಿ ಹಾಳು ಮಾಡುತ್ತಿದ್ದವು(೭-೯೫; ೧೨೨). ಹಸಿದ ಎಮ್ಮೆಗಳು ಬೆಳೆ ಹಾಳು ಮಾಡುತ್ತಿದ್ದವು(೭-೯೫). ಹಂದಿಗಳೂ ಹಾಳು ಮಾಡುತ್ತಿದ್ದವು(೭-೨೩). ಕಬ್ಬಿನ ತೋಟಕ್ಕೆ ನರಿಗಳ ಕಾಟವಿತ್ತು(೨-೭೧). ಜೋಳದ ರಾಶಿಯನ್ನು, ಬಣವೆಗಳನ್ನು, ನೆರೆ ಬಂದು ಕೊಚ್ಚಿಕೊಂಡು ಹೋಗುತ್ತಿತ್ತು(೨-೭೧; ೯-೨೩) ಗೂಳಿಗಳು, ತುಡುಗಾಡುವ ಬಸವಗಳು ಹೊಲಗದ್ದೆಗಳನ್ನು ಹೊಕ್ಕುತಿಂದು ಪೆಟ್ಟು ಪಡೆಯುತ್ತಿದ್ದವು(೩-೭೩, ೧೩-೧೮೫). ಬರಗಾಲದ ಭಯವೂ ಇದ್ದೇ ಇತ್ತು(೯-೨೩). "(ನಯಸೇನ ಮತ್ತು ಅವನ ಕೃತಿಗಳು; ಪು-೨೮೪).

ಹೀಗೆ ಒಕ್ಕಲಿಗರ ಬದುಕು ಆರ್ಥಿಕ ಅನಿಶ್ಚಿತತೆಯಿಂದ ಕೂಡಿತ್ತು. ರೈತರ ಬದುಕು ಬೆಳೆಯ ಮೇಲೆಯೇ ಅವಲಂಬಿತವಾಗಿರುತ್ತದೆ. ಆ ಬೆಳೆಗೆ ಪ್ರಾಣಿಗಳಿಂದ ನಷ್ಟ ಒದಗುವದು ಒಂದೆಡೆಯಾದರೆ ಮತ್ತೊಮ್ಮೆ ಮಳೆಯ ಅಭಾವ, ಬರ, ಅತಿವೃಷ್ಟಿಯಂತಹ ಪ್ರಕೃತಿ ವಿಕೋಪಗಳೂ ರೈತನ ಬದುಕನ್ನು ಅಲ್ಲೋಲ ಕಲ್ಲೋಲಗೊಳಿಸುತ್ತವೆ. ಅದರಿಂದಾಗಿ ಆರ್ಥಿಕ ನಷ್ಟವನ್ನು ರೈತ ಅನುಭವಿಸುವಂತಾಗುತ್ತದೆ.

ಕೂತು ಉಂಡರೆ ಕುಡಿಕೆ ಹೊನ್ನು ಸಾಲ ಎಂಬ ಗಾದೆ ನಂಬಿದ ನಯಸೇನ ಪುರುಷನು ತನಗೆ ಸಾಕಷ್ಟು ಧನವಿದೆಯೆಂದು ಸುಮ್ಮನೇ ಕೂಡಲಾಗದು. ವ್ಯಾಪಾರ ಮಾಡುತ್ತ ಮತ್ತಷ್ಟು ಧನಗಳಿಸಬೇಕು ಏಕೆಂದರೆ ಧನದಿಂದಲೇ ಇಹಪರಗಳೆರಡೂ ಸಾಧ್ಯವೆಂದು ಅವರು ನಂಬಿದ್ದರು" ಪುರುಷಾರ್ಥಗಳಲ್ಲಿ ಅರ್ಥಸಾಧನೆಯೂ ಒಂದು. ಬದುಕಿಗೆ ಧರ್ಮ, ಕಾಮ, ಮೋಕ್ಷಗಳಷ್ಟೇ ಅರ್ಥವೂ ಸಹ ಮುಖ್ಯವಾದುದು ಎಂಬುದು ಭಾರತೀಯರ ನಂಬಿಕೆ. ಇದು ಆರ್ಥಿಕತೆಯ ತತ್ತ್ವವೂ ಆಗಿದೆ.

ವ್ಯಾಪಾರಸ್ಥರು ಲಾಭದಾಸೆಗಾಗಿ ಶುದ್ಧ ಚಿನ್ನದಲ್ಲಿ ತುಸು ಬೆಳ್ಳಿಯನ್ನು ಬೆರಸುತ್ತಿದ್ದರು. ಕಲಬೆರಕೆಯ ಚಿನ್ನವನ್ನೇ ಶುದ್ಧಚಿನ್ನವೆಂದು ಗ್ರಾಹಕರಿಗೆ ವಂಚಿಸಿ ಮಾರುತ್ತಿದ್ದರು. ವ್ಯಾಪಾರದಲ್ಲಿ ಲಾಭದಂತೆ ನಷ್ಟವೂ ಸಂಭವಿಸುತ್ತಿತ್ತು. ವ್ಯಾಪಾರಕ್ಕೆ ಹೋದಾಗ ವರ್ತಕರನ್ನು ಕೆಲವೊಮ್ಮೆ ಕಳ್ಳರು ದೋಚುತ್ತಿದ್ದರು. ಎಷ್ಟೇ ಚಾಣಾಕ್ಷತೆ ಮೆರೆದರೂ ಒಮ್ಮೊಮ್ಮೆ ಮೂಲಧನಕ್ಕೇ ಸಂಚಕಾರ ಬರುತ್ತಿತ್ತು. ಕೆಲವೊಮ್ಮೆ ಕೊಟ್ಟ ಸಾಲವೂ ಮರಳದಾಗುತ್ತಿತ್ತು. ಇಂಥ ಸಂದರ್ಭದಲ್ಲೆಲ್ಲ ವ್ಯಾಪಾರಸ್ಥರು ಅದನ್ನೇ ನೆನೆಯುತ್ತ ಕೂಡುತ್ತಿದ್ದರು. ಕೊಟ್ಟ ಸಾಲ ಮರಳಿ ಬಂದಾಗ ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಹೀಗೆ ವರ್ತಕರು ಕೆಲವೊಮ್ಮೆ ಆರ್ಥಿಕ ಸಂಕಷ್ಟಕ್ಕೊಳಗಾದರೆ ಇನ್ನೂ ಕೆಲವೊಮ್ಮೆ ವ್ಯಾಪಾರದಲ್ಲಿ ಅಪಾರ ಲಾಭವನ್ನೂ ಅನುಭವಿಸುತ್ತಿದ್ದರು ಎಂಬುದನ್ನು ನಯಸೇನ ಅಲ್ಲಲ್ಲಿ ಉಲ್ಲೇಖಿಸುತ್ತಾನೆ.

ನಯಸೇನ ಧರ್ಮಾಮೃತದಲ್ಲಿ ಅಲ್ಲಲ್ಲಿ ಉಲ್ಲೇಖಿಸಿದ ಕಮ್ಮಾರ, ಬಡಗಿ, ಅಕ್ಕಸಾಲಿಗ, ತೆಲ್ಲಿಗರು, ಕಂಚುಗಾರ, ಮಾಲೆಗಾರ, ತೊಟ್ಟಿರು, ಜೇಡರು, ಅಂಬಿಗ; ಕುಟುಂಬ ಮುಂತಾದ ದುಡಿಯುವ ವರ್ಗದವರೆಲ್ಲ ಅರ್ಥವ್ಯವಸ್ಥೆಗೆ ತಮ್ಮದೇ ಕೊಡುಗೆ ನೀಡಿ ಸಮಾಜಕ್ಕೆ ಆರ್ಥಿಕವಾಗಿ ಸಹಕಾರಿಯಾಗಿದ್ದಾರೆ.

ಸಾಮಾನ್ಯನ ವಿವಿಧ ಮುಖಗಳು:

ಜೈನಧರ್ಮದಲ್ಲಿ ಅಚಲ ನಿಷ್ಠೆಯುಳ್ಳ ಗುಣಪಾಲಸೆಟ್ಟಿ ಮತ್ತು ಧನಶ್ರೀ ಅವರ ಮಗಳು ಸುಬಂಧುಶ್ರೀ. ವಿಶ್ವಂಧರ ಮಹಾರಾಜ ಒಂದು ದಿನ ಸುಬಂಧುಶ್ರೀಯನ್ನು ನೋಡಿ ಅವಳ ಮೇಲೆ ಮೋಹಿತನಾಗಿ ಅವಳನ್ನು ಮದುವೆ ಮಾಡಿಕೊಳ್ಳಬಯಸುತ್ತಾನೆ. ಇದನ್ನು ಕೇಳಿದ ಗುಣಪಾಲಸೆಟ್ಟಿ, ಧನಶ್ರೀ, ಸುಬಂಧುಶ್ರೀ ಮೂವರು ಆಶ್ಚರ್ಯಕ್ಕೊಳಗಾಗುತ್ತಾರೆ. ಮಗಳನ್ನು ಜೈನನಲ್ಲದ ವ್ಯಕ್ತಿಗೆ ಮದುವೆ

ಮಾಡಿಕೊಡಲು ಮನಸ್ಸಿಲ್ಲದೆ, ರಾಜನಿಗೆ ಇಲ್ಲ ಎನ್ನಲಾಗದೆ ಸಂದಿಗ್ಧತೆಯಲ್ಲಿ ಸಿಕ್ಕುತ್ತಾರೆ. ಅದಕ್ಕೆ ಗುಣಪಾಲಸೆಟ್ಟಿ ಆ ಊರಿನಿಂದಲೇ ಹೊರಡುವ ನಿರ್ಧಾರ ಮಾಡುತ್ತಾನೆ; ತಾನು ಮತ್ತು ಮಗಳು ಇಬ್ಬರೂ ಊರನ್ನು ಬಿಟ್ಟು ಹೋಗುತ್ತಾರೆ. ಧನಶ್ರೀ ಗರ್ಭಿಣಿಯಿರುವ ಕಾರಣಕ್ಕಾಗಿ ಗುಣಪಾಲಸೆಟ್ಟಿಯ ಗೆಳೆಯ ಶ್ರೀದತ್ತಸೆಟ್ಟಿಯ ಮನೆಯಲ್ಲಿ ಗುಪ್ತವಾಗಿ ಅವಳನ್ನು ಬಿಟ್ಟು ಖರ್ಚಿಗೆ ಸಾಕಷ್ಟು ಹಣ ಕೊಟ್ಟು ಹೋಗುತ್ತಾನೆ.

ಸ್ವಲ್ಪದಿನಗಳ ನಂತರದಲ್ಲಿ ಶ್ರೀದತ್ತಸೆಟ್ಟಿಯ ಮನೆಗೆ ಶಿವಗುಪ್ತ ಭಟಾರರು, ತ್ರಿಗುಪ್ತ ಭಟಾರರು ಭಿಕ್ಷೆಗೆಂದು ಬರುತ್ತಾರೆ. ಆಗ ಶ್ರೀದತ್ತಸೆಟ್ಟಿಯ ಮನೆಯವರೆಲ್ಲ ಮುನಿಗಳಿಗೆ ವಂದನೆ ಸಲ್ಲಿಸಲು ಧನಶ್ರೀಯೂ ವಂದನೆ ಸಲ್ಲಿಸಿ ಒಳಹೋಗುತ್ತಾಳೆ. ಆಗ ತ್ರಿಗುಪ್ತ ಭಟ್ಟಾರರು ಧನಶ್ರೀಯನ್ನು ನೋಡಿ ಎಲ್ಲ ಮಂಗಳ ಲಕ್ಷಣಗಳನ್ನೂ ಹೊಂದಿದ ಇವಳು ಹೀಗೆ ಅನ್ಯರಮನೆಯಲ್ಲಿರುವುದೇಕೆ, ಏನು ? ಎಂಬ ಪ್ರಶ್ನೆ ಕೇಳುತ್ತಾನೆ. ಅದಕ್ಕೆ ಶಿವಗುಪ್ತಾಚಾರ್ಯರು ಅವಳ ವೃತ್ತಾಂತವನ್ನೆಲ್ಲ ಹೇಳಿಯಾದ ಮೇಲೆ ಮುಖ್ಯವಾದೊಂದು ವಿಚಾರ ಹೇಳುತ್ತಾರೆ.

"...... ಇಂತೀ ಧನಶ್ರೀಯ ಗರ್ಭದ ಕೂಸೀ ಮಂಡಳಕ್ಕೆಲ್ಲಮೆಱೆಯನಕ್ಕುಮ್...."(ಪುಟ-೩೫೭, ಗದ್ಯ)

- ಎಂದು ಮುನಿಗಳು ತಮ್ಮ ತಮ್ಮಲ್ಲೇ ಮಾತಾಡಿಕೊಳ್ಳುತ್ತಿರುವದನ್ನು ಕೇಳಿಸಿಕೊಂಡ ಶ್ರೀದತ್ತಸೆಟ್ಟಿ ವಿನಾಕಾರಣವಾಗಿ ಆ ಗರ್ಭಸ್ಥ ಶಿಶುವಿನ ಮೇಲೆ ಕೋಪಗೊಂಡನು. ಅಲ್ಲಿಂದಲೇ ಆ ಮಗವನ್ನು ಹೇಗಾದರೂ ಮಾಡಿ ಮುಗಿಸಬೇಕೆಂದು ದ್ವೇಷ ಸಾಧಿಸಲಾರಂಭಿಸುತ್ತಾನೆ. ಮುನಿಗಳೆಲ್ಲ ಹೊರಟ ಮೇಲೆ ಶ್ರೀದತ್ತ ಸೆಟ್ಟಿ ಮನದಲ್ಲಿ ಹೀಗಂದುಕೊಳ್ಳುವನು.

ಈ ಸಸಿವದನೆಯ ಗರ್ಭದ
ಕೂಸೀ ದೇಶಕ್ಕೆ ಮುಖ್ಯನಪ್ಪಂ ಗಡ ನಾ
ನಾ ಸಿಸುವನುಪಾಯದೊಳೆ ವಿ
ನಾಶಂ ಮಾಡಲ್ಕೆ ವೇೞ್ಕುಮೆಂದತಿ ಮುಳಿಸಿಂ (ಪು-೩೫೭, ಪ-೮೬)

- ಎಂದು ನಿರ್ಧರಿಸುವನು. ಸ್ನೇಹಿತನ ಮೇಲಿನ ಅತೀವ ನಂಬಿಕೆಯಿಂದ ಗುಣಪಾಲಸೆಟ್ಟಿ ತನ್ನ ಗರ್ಭಿಣಿ ಹೆಂಡತಿಯನ್ನು ಅವನ ಮನೆಯಲ್ಲಿ ಬಿಟ್ಟು ಹೋಗಿರುತ್ತಾನೆ. ಆದರೆ ಯಾವಾಗ ಶ್ರೀದತ್ತಸೆಟ್ಟಿಗೆ ಹುಟ್ಟಲಿರುವ ಮಗು ದೇಶಕ್ಕೇ ಒಡೆಯನಾಗುವನೆಂಬುದನ್ನು ಕೇಳಿಸಿಕೊಳ್ಳುತ್ತಾನೋ ಅಲ್ಲಿಂದಲೇ ಆ ಗರ್ಭಸ್ಥ ಶಿಶುವಿನ ಮೇಲೆ ಅವರ ಹಗೆ ಪ್ರಾರಂಭಗೊಳ್ಳುತ್ತದೆ. ಅದಕ್ಕೇ ಧನಶ್ರೀಯ ಹೆರಿಗೆಯಿಂದಲೇ ಅವನ ಕುಟಿಲೋಪಾಯಗಳು ಪ್ರಾರಂಭಗೊಳ್ಳುತ್ತವೆ. ಧನಶ್ರೀಯನ್ನು ನೋಡಿಕೊಳ್ಳಲೆಂಬಂತೆ ಇಬ್ಬರು ದಾಸಿಯರನ್ನು ನೇಮಿಸುತ್ತಾನೆ. ಆ ದಾಸಿಯರಿಗೆ ಧನಶ್ರೀಯ ಸ್ನೇಹಿತರಾಗಿ ನಟಿಸಬೇಕೆಂದು, ಧನಶ್ರೀಯ ಹೆರಿಗೆಯಾದ ಕೂಡಲೇ ಮೊದಲು ತನಗೇ ಹೇಳಬೇಕೆಂದು ತಿಳಿಸುವನು. ಧನಶ್ರೀ ಒಂದು ದಿನ ಗಂಡು ಮಗುವನ್ನು ಹೆರಲು ದಾಸಿಯರು ಓಡಿ ಮೊದಲು ಶ್ರೀದತ್ತಸೆಟ್ಟಿಗೆ ಸುದ್ದಿ ಮುಟ್ಟಿಸುತ್ತಾರೆ. ಕೂಸನ್ನು ಕೊಲ್ಲಬೇಕೆಂದು ಅವನು ಮಾಡಿದ ನಿರ್ಧಾರದಂತೆ ಓಡಿ ಬಂದು ಕೂಸನ್ನ ನೋಡಿ ಹಿತೈಷಿಯ ರೀತಿಯಲ್ಲಿ ವಾತ್ಸಲ್ಯದಿಂದ ಧನಶ್ರೀಯ ಮೈದಡವಿ ಮೋಸದ ನಾಟಕವಾಡುತ್ತಾನೆ.

ಕುವಳಯ ನೇತ್ರೆಗೆ ಗರ್ಭ
ಸ್ರವಮಾದುದು ಕೆಟ್ಟೆನೆನಗೆ ಕೈಲೆಡೆಯೆಂದೀ

ಧವಳಾಕ್ಷಿಯನಣ್ಣವಣಿ
ಗ್ಭವನಿರಿಸಿದನಕಟ ಪೊಲ್ಲದಾಯ್ತೆಂದಾಗಳ್ (ಪು-೩೫೮, ಪ-೮೮)

- ಎನ್ನುತ್ತ ಧನಶ್ರೀಯನ್ನು ಹಾಸಿಗೆಯ ಮೇಲೆ ಮಲಗಿಸಿದನು. ಹತ್ತಿರದಲ್ಲಿದ್ದ ಎಲ್ಲರನ್ನೂ ಕೋಣೆಯಿಂದ ಹೊರಹಾಕಿ ಕೂಸು ಸತ್ತಿತೆಂದು ಸುಳ್ಳು ಹೇಳಿ ಉಪಾಯದಿಂದ ಕೂಸನ್ನು ತೆಗೆದುಕೊಂಡು ಹೊರಹೋದನು. ಕೂಸನ್ನು ಒಯ್ದು ಹೊಲೆಯನೊಬ್ಬನ ಕೈಯಲ್ಲಿ ಕೊಲ್ಲುವದಕ್ಕೆಂದು ಕೊಡುವನು. ಅವನಿಗೆ ಕೊಲ್ಲಲು ಸಾಕಷ್ಟು ಹಣವನ್ನು ಕೊಡುವನು.

ಸಾಮಾನ್ಯನ ಹೊಟ್ಟೆಕಿಚ್ಚೇ ಅಂಥದ್ದು. ಸಂಪತ್ತು ಅನೇಕ ಸಲ ಸಾಮಾನ್ಯನ ತಲೆಕೆಡಿಸುತ್ತದೆ. ತನಗಿಲ್ಲದ ಐಶ್ವರ್ಯ ಮತ್ತೊಬ್ಬನಿಗೂ ಬೇಡವೆನ್ನುವ ಸಣ್ಣತನವನ್ನು ಸಾಮಾನ್ಯನಲ್ಲಿ ಸಾಕಷ್ಟು ಸಲ ಕಾಣುತ್ತೇವೆ. ಗೆಳೆಯ ತನ್ನ ಮೇಲೆ ಇಟ್ಟ ನಂಬಿಕೆಯನ್ನೂ ಪರಿಗಣಿಸದೆ ಯಾವ ಕಾರಣವೂ ಇಲ್ಲದೆ ಅದೇ ಹುಟ್ಟಿದ ಮಗುವನ್ನು ಕೊಲ್ಲಿಸುವಂಥ ಕ್ರೂರ ತನದ ಪ್ರಯತ್ನ ಮಾಡುತ್ತಾನೆ. ಅವನಿಗೆ ಈ ಪಾಪದ ಕೆಲಸದಲ್ಲಿ ಸಹಾಯ ಮಾಡುವ ದಾಸಿಯರೂ ಸಾಮಾನ್ಯರೇ. ಅವರಿಗೂ ತಮಗೆ ಬರುವ ದುಡ್ಡು ಮುಖ್ಯವೇ ಹೊರತು ಅಮಾಯಕ ಜೀವಗಳ ಯೋಚನೆ ಅವರಿಗೂ ಇಲ್ಲ.

ಇತ್ತ ಮಗುವನ್ನು ಕೊಲ್ಲಲು ಕೊಟ್ಟ ಹೊಲೆಯನಿಗೆ ನಗುತ್ತಿರುವ, ಕಾಂತಿಯಿಂದ ಹೊಳೆಯುತ್ತಿರುವ ಆ ಮುದ್ದು ಮಗುವಿನ ಮುಖ ನೋಡಿ ಮಗುವಿನ ಮೇಲೆ ಪ್ರೀತಿ ಕರುಣೆ ಎಲ್ಲವೂ ಉಂಟಾಗುತ್ತದೆ. ಆಗ ಕೊಲೆಯ ಯೋಚನೆಯನ್ನು ಬಿಟ್ಟು, ಹಳ್ಳದಲ್ಲಿ ಮಳಲನ್ನು ತೋಡಿ ಎಳೆಯ ಮಾವಿನ ಚಿಗುರನ್ನು ಹಾಸಿ ಅದರ ಮೇಲೆ ಕೂಸನ್ನು ಮಲಗಿಸಿ ತಾನು ಹೊರಟು ಹೋಗುತ್ತಾನೆ. ಮಗುವನ್ನು ಕೊಂದರೆ ಆ ಪಾಪ ತನ್ನನ್ನು ಸುಮ್ಮನೆ ಬಿಡುವದಿಲ್ಲವೆಂಬ ತಿಳುವಳಿಕೆ ಆ ಹೊಲೆಯನದು.

ಜಾತಿ, ಧರ್ಮಗಳಿಗನುಗುಣವಾಗಿ ಮನುಷ್ಯನನ್ನು ಅಳೆಯುವ ಮಾನದಂಡಗಳು ಅನೇಕ ಕಡೆ ಹೀಗೆ ಬಿದ್ದು ಹೋಗುತ್ತವೆ. ಶ್ರೀದತ್ತಸೆಟ್ಟಿ, ಅವನು ಕೊಲ್ಲಲು ಕಳಿಸಿರುವ ಹೊಲೆಯ ಇಬ್ಬರೂ ಸಾಮಾನ್ಯರೇ ಆದರೆ ಪರಂಪರಾಗತವಾಗಿ ಬಂದ ತಿಳುವಳಿಕೆಯನ್ನು ಈ ಕಥೆ ಒಡೆಯುತ್ತದೆ. ಇಲ್ಲಿ ಒಬ್ಬ ಅಹಿಂಸೆಯನ್ನೇ ಆದರ್ಶವನ್ನಾಗಿಟ್ಟುಕೊಂಡ ಧರ್ಮದ ಅನುಯಾಯಿ, ಅವನೇ ಮಗುವನ್ನು ಕೊಲ್ಲಿಸಲು ಯತ್ನಿಸುವನು. ಆದರೆ ಸಮಾಜ ಅಂದುಕೊಂಡಂತೆ ಹಿಂಸೆಯನ್ನೇ ತಮ್ಮ ಬದುಕನ್ನಾಗಿಸಿಕೊಂಡ ಕೆಳಜಾತಿಯವನಾದ ಹೊಲೆಯನೆ ಪಾಪಕ್ಕಂಜಿ ಮಗುವನ್ನು ಕೊಲ್ಲಲು ಮನಸ್ಸಾಗದೆ ಅದನ್ನು ಕಾಡಿನಲ್ಲಿ ಬೆಚ್ಚಗಿರಿಸಿ ಹೋಗಿ ಮಾನವೀಯತೆ ಮೆರೆಯುತ್ತಾನೆ. ಅಂತೆಯೇ ಯಾವ ಸಾಮಾನ್ಯನೂ ತನ್ನಷ್ಟಕ್ಕೆ ತಾನು ಒಳ್ಳೆಯವನೂ ಅಲ್ಲ, ಕೆಟ್ಟವನೂ ಅಲ್ಲ ಪರಿಸ್ಥಿತಿ, ಸಂದರ್ಭ, ಒತ್ತಡಗಳು ಅವನನ್ನು ಬದಲಾಯಿಸುತ್ತವೆ.

ಮುಂದೆ ಹೊಲೆಯ ಕಾಡಲ್ಲಿ ಮಗು ಬಿಟ್ಟು ಹೋಗುತ್ತಾನೆ. ಶ್ರೀದತ್ತಸೆಟ್ಟಿಯ ಮೈದುನ ಇಂದ್ರದತ್ತಸೆಟ್ಟಿ ವ್ಯಾಪಾರಕ್ಕೆ ಹೋಗುವಾಗ ಅದೇ ಕಾಡಿನಲ್ಲಿ ಬೀಡು ಬಿಟ್ಟಿದ್ದನು. ಆತನ ಬೀಡಿನವರು ಮಗುವನ್ನು ಎತ್ತಿಕೊಂಡು ಮಕ್ಕಳಿಲ್ಲದ ಇಂದ್ರದತ್ತಸೆಟ್ಟಿಗೆ ಕೊಟ್ಟರು. ಅವನು ತುಂಬ ಖುಷಿಯಿಂದ ಆ ಮಗುವನ್ನು ಮನೆಗೆ ಒಯ್ದು ಶ್ರೀದತ್ತ ಸೆಟ್ಟಿಯ ತಂಗಿ, ಇಂದ್ರದತ್ತಸೆಟ್ಟಿಯ ಹೆಂಡತಿ ರಾಧೆಯ ಕೈಗೆ ಕೊಟ್ಟನು. ಕೂಸು ಕೊಟ್ಟವರಿಗೆ ಗುಟ್ಟಾಗಿ ಬೇಡಿದಷ್ಟು ದುಡ್ಡು ಕೊಟ್ಟು ತನ್ನ ಹೆಂಡತಿಯು ಗೂಢಗರ್ಭದಿಂದ ಗಂಡು ಮಗು ಹೆತ್ತಳು ಎಂದು ಸುದ್ದಿ ಹಬ್ಬಿಸಿ ಉತ್ಸವ, ಜಿನಾಭಿಷೇಕ, ಪೂಜೆ ಮಾಡಿಸಿ ಸಂತೋಷದಿಂದಿದ್ದನು. ತಂಗಿ ಒಮ್ಮಿಂದೊಮ್ಮೆಲೆ ಗಂಡು ಮಗು ಹೆತ್ತಳು ಎಂಬ ಸುದ್ದಿ ಕೇಳಿ ಶ್ರೀದತ್ತಸೆಟ್ಟಿಯ ಆಶ್ಚರ್ಯಗೊಂಡು ಆ ಮಗು ಧನಶ್ರೀಯದೇ ಇರಬಹುದೇ ಎಂಬ ಅನುಮಾನದಿಂದ

ಪರೀಕ್ಷಿಸಲು ತಂಗಿ ಮನೆಗೆ ಹೋಗುತ್ತಾನೆ. ಹೋಗಿ ನೋಡಿದರೆ ಆ ಮಗು ಗುಣಪಾಲಸೆಟ್ಟಿಯಲ್ಲಿ ಅಚ್ಚೊತ್ತಿದ ಹಾಗೇ ಇತ್ತು. ಇದು ಧನಶ್ರೀಯ ಮಗುವೇ ಎಂಬುದು ಶ್ರೀದತ್ತಸೆಟ್ಟಿಗೆ ಖಾತ್ರಿಯಾಯಿತು. ಮತ್ತೆ ಈ ಮಗುವನ್ನು ಕೊಲ್ಲುವೆನೆಂದು ಸಂಕಲ್ಪಿಸುತ್ತಾನೆ. ತನ್ನ ತಂಗಿ ಮತ್ತು ಅಳಿಯನನ್ನು ಉತ್ಸವ ನಡೆಸುವ ನೆಪದಿಂದ ತನ್ನೂರಿಗೆ ಕರೆದುಕೊಂಡು ಹೋಗುವದಾಗಿ ಇಂದ್ರದತ್ತಸೆಟ್ಟಿಗೆ ಹೇಳುವನು. ತಂಗಿ, ಅಳಿಯನನ್ನು ಕರೆದುಕೊಂಡು ಬಂದು ಸುಳ್ಳು ಉತ್ಸಾಹದ ನಾಟಕವಾಡುವನು. ನಂತರ ಒಂದು ದಿನ ಒಬ್ಬ ಮಾದಿಗನಿಗೆ ಸಾಕಷ್ಟು ಹಣ ಕೊಟ್ಟು ಆ ಮಗುವನ್ನು ಕೊಲ್ಲಲು ನೇಮಿಸುತ್ತಾನೆ. ಮನೆಯವರಿಗೆಲ್ಲ ಕೂಸು ಸತ್ತು ಹೋಯಿತೆಂದು ನಂಬಿಸಿ ಅದನ್ನು ಮಾದಿಗನ ಕೈಯ್ಯಲ್ಲಿ ಕೊಡುವನು. ಆ ಮಗುವನ್ನು ನೋಡಿಕೊಳ್ಳಲು ಒಬ್ಬ ದಾದಿಯನ್ನು ನೇಮಿಸಿಕೊಡುವನು. ಮಾದಿಗನಿಗೆ ಮಗುವನ್ನು ಕೊಲ್ಲೆಂದು ಹೇಳಿಕಳಿಸುವನು. ಇತ್ತ ತನ್ನ ಕಪಟ ತಂಗಿ ರಾಧೆಗೆ ಹೆಂಡತಿ ವಿಶಾಖೆಗೆ, ಮಗ ಮಹಾಬಲನಿಗಾರಿಗೂ ತನ್ನ ಮೇಲೆ ಸಂಶಯ ಬರಬಾರದೆಂದು ಅತಿಯಾದ ಪ್ರತಾಪದಿಂದ ಗೋಳಾಡಿದಂತೆ ನಟಿಸಿದನು. ಮತ್ತೊಂದೆಡೆ ಮಾದಿಗನು ಕೂಸನ್ನು ಕೊಲ್ಲಲು ಅಡವಿಗೆ ಒಯ್ದನು.

> ಮಾದೆಗಂ ಕೂಸನಡವಿಗೊಯ್ದು ಗಂಟಲಂ ಮೆಟ್ಟಿ ಕೊಲ್ವೆನೆಂದು ಕೂಸಂ
> ಪೆಗಲಿಂ ನೆಲಕ್ಕಿಟಿಪುವುದಮಿಟಿಯಲೊಲ್ಲದೆ ಮಾದಿಗನ ಪಱಿಗಡ್ಡ ಮನೆ
> ಗಡ್ಡಮನೆಡಗಯ್ಯೊಳ್ ಪಿಡಿದು ಬಲದ ಕಯ್ಯೊಳ್ ಮೊಗಮಂ ಪೊಯ್ಯುತ್ತುಂ
> ಕುಂಕುಮದುರುಳಿಯನನುಕರಿಸಿರ್ಪ ಮಡಂಗಳಿಂದೆರ್ದೆಯ ನೊದೆಯು
> ತ್ತುಮಿರೆ ದುರಾತ್ಮಂ ಶಿಶುವಿನ ರೂಪುಮಂ ಗಾಡಿಯುಮಂ ವಿಳಾಸಮುಮಂ
> ಮುದ್ದಾಟಮುಮಂ ನೋಡಿ ಕರುಣಮುಂ ಸ್ನೇಹಮುಂ ತಿಣ್ಣಮಾಗೆ ಕೊಲಲಾರದೆ
> ತೊಱೆಯಪುಳಿನಸ್ಥಳದೊಳ್ ಮಳಲ ಪಾಸಂ ಮಾಡಿ ಮೆಲ್ಲನಲ್ಲಿ ಪಟ್ಟಿರಿಸಿ ನಿನ್ನ
> ಮೆಚ್ಚಿದಂತಾಗೆಂದು ಪೋದನನ್ನೆಗಂ (ಪು–೩೬೨, ಗದ್ಯ)

– ಹೀಗೆ ಮಗುವಿಗೆ ಮುದ್ದಾದ ಮುಖ ನೋಡಿ ಆ ಮಾದಿಗನ ಮನಮಿಡಿಯುತ್ತದೆ. 'ಕೊಲುವವನೇ ಮಾದಿಗ' ಎಂಬ ಸಿದ್ಧಾಂತ ಕಳಚಿ ಬೀಳುತ್ತದೆ. ಜಾತಿ, ವೃತ್ತಿ ಯಾವುದೇ ಇರಲಿ ಮನುಷ್ಯನಲ್ಲಿ ಅಂತಃಕರಣ ಮಿಡಿಯುತ್ತಿರುತ್ತದೆ. ಯಾವಾಗಲೂ ಎಲ್ಲರನ್ನೂ ಸಾರಾಸಗಟಾಗಿ ಒಂದೇ ತಟ್ಟೆಯಲ್ಲಿಟ್ಟು ತೂಗುವದು ತಪ್ಪಾಗುತ್ತದೆ. ಯಾವ ಜಾತಿ, ಧರ್ಮವೇ ಆಗಲಿ ಎಲ್ಲದರಲ್ಲಿ ಒಳ್ಳೆಯ, ಕೆಟ್ಟ ಮನುಷ್ಯವರ್ಗ ಇದ್ದೇ ಇರುತ್ತದೆ.

ಆ ಮಾದಿಗನು ಕೊಲಲಾಗದೆ ನಿನಗಿಷ್ಟ ಬಂದಂತಾಗು ಎಂದು ಆ ಮಗುವನ್ನು ಅಡವಿಯಲ್ಲೇ ಬಿಟ್ಟು ಹೋಗುವನು. ಹೊಳೆಗೆ ನೀರು ಕುಡಿಯಲು ಬಂದ ಹಸುಗಳು ಆಡುತ್ತಿದ್ದ ಈ ಮಗುವನ್ನು ನೋಡಿ ಅವನನ್ನು ಮೂಸುತ್ತ, ಕೊನೆ ಬಾಲವನ್ನೆತ್ತಿ ಕೂಗುತ್ತಾ ಆನಂದದಿಂದ ಮಗುವಿನ ಸುತ್ತ ಮುತ್ತಿಕೊಂಡಿದ್ದವು. ಇದನ್ನು ನೋಡಿದ ದನಕಾಯುವ ಹುಡುಗರು ಇಲ್ಲೇನೋ ಆಶ್ಚರ್ಯವಿರಲೇಬೇಕು ಎಂದು ಸುತ್ತಗಟ್ಟಿದ್ದ ಹಸುಗಳನ್ನು ಹೊಡೆದು ನೋಡುವರು. ಅಲ್ಲಿ ಅತ್ಯಂತ ತೇಜಸ್ಸಿನಿಂದ ಕಂಗೊಳಿಸುತಿದ್ದ, ಆನಂದದಿಂದ ಆಡಿಕೊಳ್ಳುತ್ತಿದ್ದ ಬಾಲಕನನ್ನು ಕಂಡರು. ಪ್ರೀತಿಯಿಂದ ಮಗುವನ್ನೆತ್ತಿಕೊಂಡು ಗೋವಿಂದನೆಂಬ ದೊಡ್ಡ ಗೋಪಾಲಕನಿಗೆ ಕೊಡುವರು. ಅವನು ತುಂಬ ಖುಷಿಯಿಂದ ದನಕಾಯುವವರಿಗೆ ಬಹುಮಾನ ಕೊಟ್ಟು ತನ್ನ ಹೆಂಡತಿ ನಂದೆಯೆಂಬ ಗೊಲ್ಲತಿಯ

ಕೈಯಲ್ಲಿ ಮಗು ಕೊಟ್ಟು, ಗೊಲ್ಲರ ಹಟ್ಟಿಯಲ್ಲಿ ಮಗು ದೊರೆಯಿತೆಂದು ಉತ್ಸವ ಮಾಡಿ ಧನಕೀರ್ತಿ ಎಂಬ ಹೆಸರಿಟ್ಟನು ದಿನಕಳೆದಂತೆ ಧನಕೀರ್ತಿ ಬೆಳೆದು ದೊಡ್ಡವನಾದಂತೆ ಚಂದ್ರನಂತೆ ಸುಂದರನಾಗಿ ಬೆಳೆದು ಗೋಕುಲಕ್ಕೆ ಒಡೆಯನಾಗಿದ್ದನು.

ಮುಂದೊಂದು ದಿನ ಶ್ರೀದತ್ತ ಮಗಳ ಮದುವೆಗೆ ತುಪ್ಪ ಒಯ್ಯಲು ಗೊಲ್ಲರಹಟ್ಟಿಗೆ ಬಂದಿದ್ದನು. ಆಗ ಧನಕೀರ್ತಿಯನ್ನು ನೋಡಿ ಇವನು ಗುಣಪಾಲಸೆಟ್ಟಿಯ ಮಗನೇ ಹೌದೆಂದು ನಿರ್ಧರಿಸುವನು. ಶ್ರೀದತ್ತ ಮಗುವನ್ನು ಕೊಲ್ಲಲು ಧನಕೊಟ್ಟು ವಹಿಸಿಕೊಟ್ಟ ಮಾದೆಗನು ತನಗೆ ಅನ್ಯಾಯ ಮಾಡಿ ಗೋಪಾಲನಿಂದ ಹಣವನ್ನು ಇಸಿದುಕೊಂಡಿರಬೇಕು ಎಂದು ಮನದಲ್ಲಿ ಬಯ್ದುಕೊಳ್ಳುವನು. ಮತ್ತೆ ಅವನನ್ನು ಕೊಲ್ಲುವ ಉಪಾಯ ಮಾಡಿ ತಾನೊಂದು ಪತ್ರ ಬರೆದಿದ್ದಾಗಿ ಅದನ್ನು ನಂಬಿಗಸ್ಥನ ಕೈಲಿ ಕೊಡಬೇಕು ಧನಕೀರ್ತಿಯನ್ನು ಕಳಿಸಬೇಕೆಂದು ಗೋವಿಂದನಲ್ಲಿ ಬೇಡಿಕೊಳ್ಳವನು. ಅವನು ಒಪ್ಪಿ ಕಳಿಸುವನು. ಶ್ರೀದತ್ತಸೆಟ್ಟಿ ಮಗನಿಗೆ ಹೀಗೆ ಪತ್ರಬರೆಯುತ್ತಾನೆ.

ಎನಗೆ ಕೂರ್ಪೊಡೆ ಬೇಗದಿಂ ತಡವಿಲ್ಲದಿಂದೆ ಮಹಾಬಲಾ
ಮನೆಯ ಪಿತ್ತಿಲೊಳೀತನಂ ಪಿಡಿದೊಯ್ದು ಭೋಂಕನೆ ಕೊಂದು ನೆ
ಟ್ಟನೆ ಪೆಱರ್ಗನುರಾಗದಿಂದಮೆ ಪೇೞದೊರ್ಮೆಯೆ ಗುಪ್ತದಿಂ
ಮನದೆಗೊಂಡುೞ ಪೂೞ್ವುದೆಂದು ಕಷಾಯದಿಂ ಬರೆದೋಲೆಯಂ

(ಪು-೩೬೪, ಪ-೧೧೨)

– ಧನಕೀರ್ತಿ ಆ ಪತ್ರ ತೆಗೆದು ಬೆಳಿಗ್ಗೆ ಹೊರಡುತ್ತಾನೆ. ಮಾರ್ಗಯಾಸದಿಂದ ಸಿಂಪಾನದಿಯನ್ನು ಪ್ರವೇಶಿಸಿ ಮೈ ತೊಳೆದುಕೊಂಡು ದಾಹನೀಗುವಂತೆ ನೀರು ಕುಡಿದು ಅಲ್ಲೇ ಇದ್ದ ಮಾವಿನ ಮರದ ಕೆಳಗೆ ನಿದ್ದೆ ಹೋಗುತ್ತಾನೆ. ಅದೇ ಸಮಯಕ್ಕೆ ಅಲ್ಲಿಗೆ ಬಂದ ಮೃಗಸೇವೆ ಎಂಬ ವೇಶ್ಯೆಗೆ ಧನಕೀರ್ತಿಯನ್ನು ನೋಡಿ ಸ್ನೇಹಭಾವ ಉಂಟಾಯಿತು. ಥಟ್ಟನೆ ಮೃಗಸೇವೆ ಧನಕೀರ್ತಿಯ ಹತ್ತಿರವಿದ್ದ ಪತ್ರವನ್ನು ನೋಡಿ ಮುದ್ರೆಯೊಡೆದು ಪತ್ರ ಓದಿ ಶ್ರೀದತ್ತಸೆಟ್ಟಿಯ ಕುತಂತ್ರ ಅರಿಯುತ್ತಾಳೆ. ನಂತರ ಆ ಪತ್ರವನ್ನು ಹರಿದು ನದಿಗೆ ಹಾಕಿ ಮನೆಯಿಂದ ಹೊಸದಾದ ಪತ್ರಕಂಠ ತರಿಸಿ ಹೀಗೆ ಬರೆಯುವಳು

"....... ಮಹಾಬಲ ನನಗೆ ಕೂರ್ಪನಪ್ಪೊಡೆ ಈ ವೋಲೆಗಂಡಾ ಕ್ಷಣದೊಳ್ ಶೀಘ್ರಂ ತನ್ನ ತಂಗೆಯಪ್ಪ ಶ್ರೀಮತಿಯನೀತನೊಳ್ ತಡೆಯದಿಂದೆ ನೆರಪುವುದು ನೆರಪದೊಡೆನ್ನಾಣೆ ಕಡೆಗಣಿಸವೇಡೆಂದು ಬರೆದು....." (ಪು-೩೬೫, ಗದ್ಯ) ಮುಂಚಿನಂತೆಯೇ ಓಲೆಯನ್ನ ಮುದ್ರಿಸಿ. ಧನಕೀರ್ತಿಯ ಹತ್ತಿರ ಇರಿಸುತ್ತಾಳೆ. ಧನಕೀರ್ತಿ ಊರಲ್ಲಿ ಬಂದು ಶ್ರೀದತ್ತಸೆಟ್ಟಿಯ ಮಗ ಮಹಾಬಲನನ್ನು ಕಂಡು ಶ್ರೀದತ್ತಸೆಟ್ಟಿ ಕೊಟ್ಟ ಪತ್ರವನ್ನು ಕೊಡುವನು. ಮಹಾಬಲ ಅದನ್ನು ಓದಿ ಸಂತೋಷಗೊಂಡು ತನ್ನ ತಾಯಿಗೆ ವಿಷಯ ತಿಳಿಸುವನು. ತಂದೆಗೆ ಆಜ್ಞಾಧಾರಕನಾದ ಮಗ ತಂದೆಯ ಮಾತನ್ನು ಮೀರದೆ ಕೂಡಲೆ ಜ್ಯೋತಿಷಿಯನ್ನು ಕರೆಸಿ ಮದುವೆಗೆ ಒಳ್ಳೆಯ ದಿನ ನೋಡಿ ಮದುವೆ ಮಾಡಿದರು.

ಧನಕೀರ್ತಿಯನ್ನು ಹೇಗಾದರೂ ಮಾಡಿ ಕೊಲ್ಲಲೇ ಬೇಕೆಂದು ಶ್ರೀದತ್ತಸೆಟ್ಟಿ ಎಷ್ಟೇ ಹೊಂಚು ಹಾಕಿದರೂ ಸಾಧ್ಯವಾಗುತ್ತಿಲ್ಲ. ಈ ಸಾರಿ ಹೊರಗಿನವರಿಗೆ ಯಾರಿಗೂ ಹೇಳುವದು ಬೇಡವೆಂದು ಮಗನಿಗೆ ಕೊಲ್ಲೆಂದು ಪತ್ರ ಬರೆದರೂ ವೇಶ್ಯೆಯ ಉಪಾಯದಿಂದ ಧನಕೀರ್ತಿ ಬದುಕುಳಿಯುವನು. ತನಗೆ ಏನೂ ಸಂಬಂಧವಿಲ್ಲದ ಪುರುಷನ ಪ್ರಾಣ ರಕ್ಷಣೆಯನ್ನು ಮಾಡುವ ಒಬ್ಬ ಸಾಮಾನ್ಯ ವೇಶ್ಯೆಯ ಮನಸ್ಸು

ಪರಿಶುದ್ಧವಾದದ್ದು. ಅವಳು ತಾನು ಮಾಡುವ ಈ ಕೆಲಸವನ್ನು ಯಾವ ಫಲಾಪೇಕ್ಷೆ ಇಲ್ಲದೇ ಮಾಡುತ್ತಾಳೆ ಮತ್ತು ಅವಳಿಗೆ ಸಮಾಜದೆದುರು ತಾನು ಎತ್ತರಕ್ಕೇರುವ ಶ್ರೀದತ್ತನನ್ನು ಕೀಳರಿಮೆಗೆ ತಳ್ಳುವ ಯಾವ ಉದ್ದೇಶವಿಲ್ಲದ ಶುದ್ಧ ಮಾನವೀಯ ಪ್ರೀತಿಯನ್ನು ಮೆರೆಯುವ ಸಾಮಾನ್ಯಳಾಗಿದ್ದಾಳೆ.

ಧನಕೀರ್ತಿ–ಶ್ರೀಮತಿಯರ ಮದುವೆಯಾದ ಎರಡು ಮೂರು ದಿನಕ್ಕೆ ಶ್ರೀದತ್ತಸೆಟ್ಟಿ ಗೊಲ್ಲರಹಟ್ಟಿಯಿಂದ ಧನಕೀರ್ತಿಯನ್ನು ತಾನು ಮೋಸದಿಂದ ಕೊಂದೆನೆಂಬ ಸಂತೋಷದಲ್ಲೇ ಮನೆಗೆ ಬರುತ್ತಾನೆ. ಆದರೆ ವಾಸ್ತವವೇ ಬೇರೆಯಾಗಿತ್ತು. ತಾನು ಕೊಲ್ಲಬೇಕೆಂದು ಮೋಸದಿಂದ ಕಳಿಸಿದವ ತನ್ನ ಮಗಳ ಗಂಡನಾಗಿದ್ದನ್ನು ನೋಡಿ ಆಶ್ಚರ್ಯವಾಗುತ್ತದೆ.

ಧನಕೀರ್ತಿ ತನ್ನ ಮಗಳ ಗಂಡನಾದಾಗ್ಯೂ ಶ್ರೀದತ್ತ ಮಗಳು ವಿಧವೆಯಾದರೂ ಸರಿ ತಾನು ಮಾತ್ರ ಅವನನ್ನು ಕೊಂದೇ ಕೊಲ್ಲುವೆನೆಂದು ನಿರ್ಧರಿಸುವನು.

ಕ್ರೂರನಪ್ಪನನೋರ್ವನಂ ಕ್ಷಣದಿಂ ತಳಾಜಿನ ನಂಟನಂ
ಬೀರನಂ ಕರೆದೊಯ್ಯನಾತನ ಬೇಡಿದರ್ಥಮನಿತ್ತು ಸಂ
ಹಾರಿಸಿಂದುರಗಾಲಯಕ್ಕೆ ನಿವೇದ್ಯಮಂ ಶುಚಿಯಾಗಿವಿ
ಸ್ತಾರದಿಂದಿರುಳಣ್ಣತಂದವನಂ ವಿಚಾರಿಸದಾಕ್ಷಣಂ (ಪು–೩೬೭, ಪ–೧೨೪)

–ಹೀಗೆ ಧನಕೀರ್ತಿಯನ್ನು ಕೊಲ್ಲಲು ಎಲ್ಲ ಏರ್ಪಾಡುಮಾಡಿ ತಳವಾರನಿಗೆ ನಾಗದೇವಾಲಯದಲ್ಲೇ ಇರಲು ಹೇಳಿ ತಾನು ಮನೆಗೆ ಬಂದು ಮನೆಯವರಿಗೆ ತಿಳಯದ ಹಾಗೆ ಧನಕೀರ್ತಿಯನ್ನು ನಾಗದೇವಾಲಯಕ್ಕೆ ಹರಕೆ ಎಂದು ನಟಿಸಿ ಅನ್ನವನ್ನು ಇಟ್ಟುಬರಲು ಕಳಿಸುವನು. ದಾರಿಯಲ್ಲಿ ಧನಕೀರ್ತಿ ನೈವೇದ್ಯ ಒಯ್ಯುತ್ತಿದ್ದುದನ್ನು ನೋಡಿ ತಂದೆಯ ಮೇಲೆ ಕೋಪಗೊಂಡು

ಮರುಳೀ ಮದವಣಿಗನನಾ
ದರಿಸದೆ ದೇಸಿಗನನಟ್ಟುವಂತಿರೆ ಮತ್ತೋರ್ವ
ರ್ವರನಟ್ಟದಿವನ ಕಯ್ಯೊಳ್
ಚರುವಂ ಕೊಟ್ಟಟ್ಟಿ ಪೊಲ್ಲಗೆಯ್ದಂ ಮೂರ್ಖಂ (ಪು–೩೬೭, ಪ–೧೨೬)

– ಎಂದು ಧನಕೀರ್ತಿ ಒಯ್ಯುತ್ತಿದ್ದ ನೈವೇದ್ಯವನ್ನು ತಾನು ತೆಗೆದುಕೊಂಡು ನಾಗಾಲಯಕ್ಕೆ ಒಯ್ಯುತ್ತಾನೆ.

ಅವರಿವರೆಂದು ಭಾವಿಸದೆ ನೋಡದೆ ಭೋಂಕನೆ ಬಾಗಿಲಲ್ಲಿ ನಿಂ
ದವನಮದೊರ್ತ್ತಿ ಸಾರ್ಚಿ ತಲೆಯಂ ಪಿಡಿದೊತ್ತಿ ಧರಿತ್ರಿಗಿಕ್ಕಿ ಮ
ತ್ತವಯವದಿಂ ಕಱುತ್ತಿಱಿದು ಕೊಂದು ಮಹಾಬಲನಂ ತಳಾಜಿನಂ
ತವಿತಥಮಪ್ಪ ಪನ್ನಗನಿವಾಸದಿನೋಡಿದನಂಜಿ ನಿರ್ದಯಂ

(ಪು–೩೬೮, ಪ–೧೨೭)

– ಹೀಗೆ ಯಾರೆಂದು ಯೋಚಿಸದೇ ಮಹಾಬಲನ್ನು ಕೊಂದು ತನ್ನ ಕೆಲಸವಾಯಿತೆಂದು ನಾಗದೇವಾಲಯದಿಂದ ಓಡಿಹೋಗುವನು. ಧನಕೀರ್ತಿಯನ್ನು ಮನೆಯಲ್ಲಿ ನೋಡಿದ ಶ್ರೀದತ್ತಸೆಟ್ಟಿಗೆ ಆಶ್ಚರ್ಯವಾಗಿದ್ದು, ತನ್ನ ಮಗ ಮಹಾಬಲನೇ ನೈವೇದ್ಯ ತೆಗೆದುಕೊಂಡು ನಾಗದೇವಾಲಯಕ್ಕೆ

ಹೋದನೆಂದು ಕೇಳಿ ಆಘಾತವಾಗಿ ಯಾರಿಗೂ ಹೇಳದೆ ತಾನೊಬ್ಬನೇ ದೇವಸ್ಥಾನಕ್ಕೆ ಹೋಗಿ ಸತ್ತುಬಿದ್ದಿದ್ದ ಮಗನನ್ನು ನೋಡಲು ಅತೀವ ದುಃಖ ಪಡುವನು. ಮನೆಗೆ ಬಂದು ಕಳ್ಳರು ತನ್ನ ಮಗನನ್ನು ಕೊಂದರೆಂದು ಸುಳ್ಳು ಸುದ್ದಿ ಹಬ್ಬಿಸುವನು.

ತಾನೊಂದು ಬಗೆದರೆ ದೈವವೊಂದು ಬಗೆಯಿತು ಎಂಬಂತೆ ಸ್ನೇಹಿತನ ಮಗನನ್ನು ಕೊಲ್ಲಬಯಸಿದವನಿಗೆ ತನ್ನ ಮಗನೇ ಹತನಾದುದು ಹತಾಶೆಯನ್ನೂ ಕ್ರೌರ್ಯವನ್ನೂ ಅವನಲ್ಲಿ ದ್ವಿಗುಣಗೊಳಿಸುತ್ತದೆ. ಸಾಮಾನ್ಯನ ಸ್ವಭಾವವೇ ಹಾಗೆ, ಹತಾಶೆ ಮನುಷ್ಯನಲ್ಲಿಯ ಕ್ರೌರ್ಯ, ಹಟವನ್ನು ಹೆಚ್ಚಿಸುತ್ತದೆ.

ಕೊಲ್ಲೆಂದು ಹೇಳಿದ ಎಲ್ಲರೂ ಹಣಪಡೆದು ಕೊಲ್ಲಲು ಇಷ್ಟಪಡದೆ ಮಗುವಿನ ಮೇಲೆ ಪ್ರೀತಿಯುಂಟಾಗಿ ಕೊಲ್ಲದೇ ಹಾಗೆ ಹೋದರು. ತಳವಾರನಾದರೋ ಹಿಂದು ಮುಂದು ಯೋಚಿಸದೇ ಧನಕೀರ್ತಿಯ ಬದಲಾಗಿ ಮಹಾಬಲನನ್ನೇ ಕೊಲ್ಲುವನು. ಇಷ್ಟೆಲ್ಲ ಆದರೂ ಶ್ರೀದತ್ತಸೆಟ್ಟಿಗೆ ಇನ್ನುವರೆಗೂ ಧನಕೀರ್ತಿಯನ್ನು ಕೊಲ್ಲುವ ಮನಸ್ಥಿತಿಯೇ ಇತ್ತು. ಅದಕ್ಕೆ ಈ ಸಾರಿ ಹೆಂಡತಿಗೇ ಕೊಲ್ಲುವದಕ್ಕೆ ಹೀಗೆ ಹೇಳುವನು.

ಮನದೊಳಾಲೋಚಿಸಿ ವಿಶಾಖೆಯಂ ಕರೆದು ಏಕಾಂತದೊಳ್ ಧನಕೀರ್ತಿಯ ಪ್ರಪಂಚಮನೆಲ್ಲ ಮನಜೆಪಿ ನೀನೀತನಳಿಯನೆಂದು ಮೋಹಿಸದೆನಗೆ ಕೂರ್ಪೊಡೆನ್ನ ಮಾತನಂತಿಂತೆನ್ನದುದಾಸೀನಂ ಮಾಡದೆನ್ನ ಮನದಟಲುಂ ಮಹಾಬಲನ ಪಗೆಯುಂ ಪೋಪಂತು ವಿಷಪ್ರಯೋಗದಿಂದೊರ್ವರುಮಱಿಯದಂತಿರಿದು ನಾಳಿನೊಳಗೆ ತಡೆಯದೆ ಕೊಲಲ್ವೇೞ್ಕುಂದುಕಯ್ಯಂ ಮುಗಿದು ಪ್ರಾರ್ಥಿಸುವದುಂ"(ಪು-೩೬೯, ಗದ್ಯ)

ಧನಕೀರ್ತಿಯನ್ನು ಕೊಲ್ಲುವ ಮೂಲಕ ತನ್ನ ಮನದ ಬೇಗುದಿಯನ್ನೂ ಹೋಗಲಾಡಿಸಬೇಕೆಂದು ಶ್ರೀದತ್ತಸೆಟ್ಟಿ ಹೆಂಡತಿಗೆ ಕೈಮುಗಿದು ಬೇಡಿಕೊಳ್ಳುವನು. ಶ್ರೀದತ್ತಸೆಟ್ಟಿ ಹೆಂಡತಿಗೆ ಕೊಲ್ಲೆಂದು ಹೇಳುವದರಲ್ಲಿಯೂ ಪುರುಷ ಪ್ರಧಾನ ಸಮಾಜದ ಯಜಮಾನಿಕೆಯ ಸೌಮ್ಯತರನಾದ ಆಜ್ಞೆಯ ರೂಪವಿದೆ.

ಜೊತೆಗೆ ಶ್ರೀದತ್ತಸೆಟ್ಟಿ ಧನಕೀರ್ತಿಯನ್ನು ಕೊಲ್ಲಬೇಕೆಂದುಕೊಂಡಾಗಿನಿಂದಲೂ ಕೊಲ್ಲುವ ಕೆಲಸವನ್ನು ಹೊಲೆಯ, ಮಾದಿಗ ಮಗ ಮಹಾಬಲ, ತಳವಾರ, ಹೆಂಡತಿ ವಿಶಾಖೆ ಹೀಗೆ ಬೇರೆ ಬೇರೆಯವರಿಗೆ ವಹಿಸಿದನೇ ಹೊರತಾಗಿ ತಾನು ಕೊಲೆ ಮಾಡಲೊಲ್ಲ. ಜೈನ ಧರ್ಮದ ಅಹಿಂಸಾತತ್ತ್ವದ ಜ್ಞಾನ ಮತ್ತು ಕೊಲೆಯಂಥ ಕ್ರೂರ ಕೆಲಸ ಮಾಡಿದರೆ ಪಾಪ ತಗುಲುತ್ತದೆ ಎಂಬ ತಿಳುವಳಿಕೆಗಳೆರಡೂ ಸೇರಿ ಅವನು ತಾನು ಕೊಲ್ಲದೆ, ಮತ್ತೊಬ್ಬರಿಂದಲೇ ತನ್ನ ಕೆಲಸವನ್ನು ಸಾಧಿಸಿಕೊಳ್ಳಬಯಸುತ್ತಾನೆ. ಪಾಪ ತಟ್ಟಿದರೆ ಬೇರೆಯವರಿಗೇ ತಟ್ಟಲೆಂಬಂಥವರ ಮನೋಭಾವವಿದು.

ವಿಶಾಖೆಯು ಗಂಡನ ಮಾತನ್ನು ಅಲಕ್ಷ ಮಾಡದೇ ಅತ್ಯಂತ ವಿಷಪೂರಿತವಾದ ಲಡ್ಡುಗೆಗಳನ್ನು ಮಾಡಿ ಶ್ರೀಮತಿಗೆ 'ನಿನ್ನವರಂಗೆ ನೀನನುರಾಗದಿಂ ತಡೆಯದಿಕ್ಕುವುದು' ಎಂದು ಹೇಳಿ ನೆರೆಮನಗೆ ಹೋಗುವಳು. ಧನಕೀರ್ತಿ ಮೆನಗೆ ಬಂದು ಊಟಕ್ಕೆ ಕೊಡಬೇಕೆನ್ನುವಷ್ಟರಲ್ಲಿ ಶ್ರೀದತ್ತಸೆಟ್ಟಿಯೂ ಹಸಿದು ಊಟಕ್ಕೆ ಬರುವನು. ಆಗ ಶ್ರೀಮತಿಯ ಮನಸ್ಸು ಯೋಚಿಸುವ ರೀತಿ ಕೌಟುಂಬಿಕ ರೀತಿನೀತಿಗಳನ್ನು ತಿಳಿಸುತ್ತದೆ.

ದೊಡ್ಡಿದುವಾಗಿ ನುಣ್ಪೆಸೆದು ಸರ್ಕರೆಯೊಳ್ ಸಮನಪ್ಪ ಪೆಂಪಿನಾ
ಲಡ್ಡುಗೆಯಂ ಮನೋಮುದದಿಂದೆನ್ನ ವರಂಗಳಿಪಿಂದೆ ಮುನ್ನಮಾರಿ
ಬಡ್ಡಿಸಿದಂದು ನೋಡ ಪದೆದೀಗಳೆ ಡೊಂಬಿತಿಜೋಡೆ ಸೋಲದಿಂ
ಬಡ್ಡಿಸಿದಪ್ಪಳೆಂದು ನೆಱೆ ದೂರುವರೆನ್ನನವಜ್ಞೆಯಿಂ ಪೆಱರ್ (ಪು-೩೬೯, ಪ-೧೩೪)

– ಎಂದು ಯೋಚಿಸಿ ಸಣ್ಣ ಲಡ್ಡುಗೆಗಳನ್ನು ಧನಕೀರ್ತಿಗೂ, ದೊಡ್ಡ ಲಡ್ಡುಗೆಗಳನ್ನು ತಂದೆ ಶ್ರೀದತ್ತಸೆಟ್ಟಿಗೂ ಬಡಿಸಿದಳು. ಇಬ್ಬರೂ ರುಚಿಗೆ ಸಂತೋಷಪಟ್ಟು ಹೊಟ್ಟೆತುಂಬ ತಿಂದರು. ಶ್ರೀದತ್ತನು ವಿಷವೇರಿ ನಿಲ್ಲಲಾಗದೆ ನಿಶಕ್ತನಾಗಿ ಕಣ್ಣು ತಿರುಗಿ ಪ್ರಜ್ಞಾಹೀನನಾಗಿ ಬಿದ್ದು ಪ್ರಾಣ ಬಿಟ್ಟನು. ತಂದೆಯು ಒಮ್ಮಿಂದೊಮ್ಮೆಲೆ ಹೀಗೆ ಸತ್ತು ಹೋದುದನ್ನು ಕಂಡ ಶ್ರೀಮತಿ ಹುಯ್ಯಲಿಡಲಾರಂಭಿಸುತ್ತಾಳೆ. ಶ್ರೀಮತಿಯ ಅಳುವಿನ ಧ್ವನಿ ಕೇಳಿದ ವಿಶಾಖೆ ಅಳಿಯನೇ ಸತ್ತನೆಂದು, ತನ್ನ ಗಂಡ ಎಷ್ಟು ದುಡ್ಡು ಖರ್ಚು ಮಾಡಿದರೂ ಆಗದಿದ್ದ ಕಾರ್ಯ ತನ್ನಿಂದ ಸುಲಭವಾಗಿ ಆಯಿತೆಂದು ಮನದಲ್ಲೇ ಸಂತೋಷಪಟ್ಟು ತೋರಿಕೆಗೆ ದುಃಖದಿಂದ ಗೋಳಾಡುತ್ತಾ ಓಡಿಬರುವಳು. ಮನೆಗೆ ಬಂದು ನೋಡಲು ತನ್ನ ಗಂಡ ಶ್ರೀದತ್ತಸೆಟ್ಟಿಯೇ ಸತ್ತು ಬಿದ್ದಿದ್ದು, ಅಳಿಯ ಧನಕೀರ್ತಿ ಅಲ್ಲೇ ಕುಳಿತಿದ್ದನ್ನು ಕಂಡು ವಿಶಾಖೆಗೆ ಆಘಾತವಾಗುತ್ತದೆ.

ಧನಕೀರ್ತಿಯನ್ನು ಶ್ರೀದತ್ತಸೆಟ್ಟಿ ಹುಟ್ಟಿದಾರಭ್ಯದಿಂದ ಕೊಲ್ಲಬಯಸಿದ. ಆದರೆ ಕೊಲೆಯಿಲ್ಲದ ಜೈನಧರ್ಮವನ್ನು ಅವನು ನಂಬಿದ್ದರಿಂದ 'ಧರ್ಮೋ ರಕ್ಷತಿ ರಕ್ಷಿತಃ' ಎಂಬಂತೆ ಧರ್ಮ ಅವನನ್ನು ಎಷ್ಟೆಲ್ಲ ಕುತ್ತುಗಳಿಂದ ನಿರಂತರವಾಗಿ ಕಾಪಾಡುತ್ತಲೇ ಬರುತ್ತದೆ. ಶ್ರೀದತ್ತಸೆಟ್ಟಿ ಏನೆಂದು ಅರಿಯದ ಧನಕೀರ್ತಿಯನ್ನು ಕೊಲ್ಲ ಬಯಸಿದ ಕಾರಣಕ್ಕಾಗಿ ಮಗನನನ್ನು ಕಳೆದುಕೊಂಡು ಕೊನೆಗೆ ತಾನೂ ಸಾಯುತ್ತಾನೆ. ಅದಕ್ಕೆ ಹೇಳುವದು ವಿಧಿಯಾಟದ ಮುಂದೆ ಮನುಷ್ಯ ಪ್ರಯತ್ನ ಜಯಿಸಲಾರದೆಂದು.

ಈ ಇಡೀ ವೃತ್ತಾಂತದಲ್ಲಿ ಬರುವ ಪ್ರತಿಯೊಬ್ಬ ವ್ಯಕ್ತಿಯೂ ಸಾಮಾನ್ಯರೇ. ಈ ಕತೆ ಸಮಾಜದಲ್ಲಿ ಸಾಮಾನ್ಯನ ಅನೇಕ ಮುಖಗಳನ್ನು ನಮ್ಮೆದುರು ತೆರೆದಿಡುತ್ತದೆ. ಇಲ್ಲಿ ಬರುವ ಗುಣಪಾಲಸೆಟ್ಟಿ, ಧನಶ್ರೀ, ಸುಬಂಧುಶ್ರೀ, ಧನಕೀರ್ತಿ ಇವರುಗಳೆಲ್ಲ ಎಂಥ ಪರಿಸ್ಥಿತಿಯಲ್ಲೂ ಧರ್ಮನಿಷ್ಠೆಯನ್ನು ಬಿಡದ ಧರ್ಮ ಪಾರಿಪಾಲಕರು. ಶ್ರೀದತ್ತ, ವಿಶಾಖೆಯರು ಏನೂ ಮಾಡದ ವ್ಯಕ್ತಿಯೊಂದಿಗೆ ಹಗೆ ಸಾಧಿಸುವವರು. ಮಹಾಬಲ ಆಜ್ಞಾಧಾರಕ ಮಗನಾದರೆ, ಶ್ರೀಮತಿ ಕುಟುಂಬ – ಸಮಾಜದ ರೀತಿ ನೀತಿಗಳನ್ನರಿತು ಬದುಕುವ ಹೆಣ್ಣು. ಹೊಲೆಯ, ಮಾದಿಗರು ಜನ್ಮತಃ ಕೆಳಜಾತಿಯವರು ನಿಜ ಆದರೆ ಮಾನವೀಯತೆಯಿಂದ ಎತ್ತರಕ್ಕೇರುವರು. ಇಲ್ಲಿ ಬರುವ ತಳವಾರ ವಿವೇಚನಾ ಶೂನ್ಯನಾಗಿ ದುಡ್ಡಿಗಾಗಿ ಯಾರ್‍ಯಾರನ್ನೋ ಕೊಲೆ ಮಾಡುವವ. ಹೀಗೆ ಸಾಮಾನ್ಯನ ಹಲವು ಮುಖಗಳು ಈ ಕೃತಿಯೊಳಗೆ ಇಣುಕುತ್ತವೆ. ಇಲ್ಲಿ ಎಲ್ಲರಿಗೂ ತಮ್ಮ ತಮ್ಮದೆ ಆದ ಬದುಕಿನ ದೃಷ್ಟಿಕೋನಗಳಿವೆ. ಇಲ್ಲಿ ತಮ್ಮ ಧರ್ಮ, ಜಾತಿಗಳಿಗೆ ಅಪವಾದವೆನ್ನುವಂತೆ ನಡೆದುಕೊಳ್ಳುವ ಪಾತ್ರಗಳಿವೆ. ಇದನ್ನೆಲ್ಲ ನೋಡಿದರೆ ಪ್ರತಿಯೊಬ್ಬ ಸಾಮಾನ್ಯನಿಗೂ ತನ್ನದೇ ಆದ ವ್ಯಕ್ತಿ ವಿಶಿಷ್ಟ ಗುಣಗಳಿರುತ್ತವೆ. ಯಾರನ್ನೂ ಜಾತಿ, ಧರ್ಮ, ಲಿಂಗಾಧಾರಿತವಾಗಿ ಹೀಗೇ ಎಂದು ನಿರ್ಧರಿಸಲಾಗುವುದಿಲ್ಲ.

ಅನಾಥ ಮಗು ಮತ್ತು ಧರ್ಮಪ್ರತಿಷ್ಠಾಪನೆ:

ಸಮುದ್ರದತ್ತನೆಂಬ ಶ್ರೀಮಂತ ವರ್ತಕ, ಅವನ ಹೆಂಡತಿ ಧನದೆಯೆಂಬುವಳು. ಸಮುದ್ರದತ್ತಶೆಟ್ಟಿಯ ಆರೋಗ್ಯ ಇದ್ದಕ್ಕಿದ್ದಂತೆ ಹದಗೆಡಲು ಆರಂಭವಾಗುತ್ತಿದ್ದಂತೆ ಅವನ ಐಶ್ವರ್ಯವೂ

ಕರಗತೊಡಗಿತು. ಬಡತನ ಆವರಿಸಿದ ಆ ದಂಪತಿಗೆ, ಸಮುದ್ರದತ್ತ ಸೆಟ್ಟಿಗೆ ಬಂದ ಮಾರಕರೋಗ ಮತ್ತಷ್ಟು ತಲ್ಲಣಗೊಳಿಸಿತು. ಒಪ್ಪತ್ತಿನ ಊಟಕ್ಕೂ ಪರದಾಡುವ ಸ್ಥಿತಿಯಲ್ಲಿಯೇ ಧನದೆಯು ಗರ್ಭಿಣಿಯಾಗುತ್ತಾಳೆ. ಮಗು ಹುಟ್ಟುವ ಮುಂಚೆಯೇ ಸಮುದ್ರದತ್ತಸೆಟ್ಟಿ ತೀರಿ ಹೋಗುತ್ತಾನೆ, ಅದೇ ಚಿಂತೆಯಲ್ಲಿಯೇ ದಿನಕಳೆದು ಧನದೆಗೆ ಹೆರಿಗೆಯಾಗಿ ಹೆಣ್ಣು ಮಗು ಹುಟ್ಟುತ್ತದೆ. ಕೆಲವೇ ದಿನಗಳಲ್ಲಿ ಧನದೆಯೂ ತೀರಿ ಮಗು ಅನಾಥವಾಗುತ್ತದೆ.

ಕೂಸನಾಥೆಯಾಗಿ ಪೂರ್ವಕೃತ ಕರ್ಮಫಲಮನನುಭವಿಸುತ್ತುಂ ಕೂಟ್ಟಿಡೆಯದೆ
ಪೊಟಲೊಳಗೆಂಜಲಗೂಟನಾಯ್ದಲಸಿ ಕುಱುಕುತ್ತುಂ ಬೀದಿಯೊಳ್ ಪೆಱರ್ಮೆ
ಲೀಡಾಡಿದ ಪಣ್ಬಲಂಗಳಂ ಮೆಲುತುಂ ಕಾಲಮಂ ಕಳೆಯುತ್ತುಮಿರ್ಪುದು

(ಪು–೨೮೧, ಗದ್ಯ)

ಈ ಅನಾಥ ಹುಡುಗಿ ತಿಪ್ಪೆಯಲ್ಲಿ ಬಿದ್ದಿರುವ ಎಂಜಲನ್ನದ ಅಗುಳುಗಳನ್ನು ಆರಿಸಿ ತಿನ್ನುತ್ತಿದ್ದಳು. ಭಿಕ್ಷೆ ಮುಗಿಸಿ ಬರುತ್ತಿರುವ ಮುನಿಗಳು ಈ ಹುಡುಗಿಯನ್ನು ಕಂಡು ಇಷ್ಟು ಕಷ್ಟಪಡುತ್ತಿರುವ ಈ ಹುಡುಗಿ ಮುಂದೊಂದು ದಿನ ಆ ಊರಿನ ಪೂತಿವಾಹನ ಮಹಾರಾಜನಿಗೆ ರಾಣಿಯಾಗುವಳೆಂದು ಹೇಳಿದರು. ಆ ಮಾತನ್ನು ಕೇಳಿಸಿಕೊಂಡ ಬೌದ್ಧ ಧರ್ಮದ ಅನುಯಾಯಿ 'ಬುದ್ಧಾತ್ಮ'ವೆಂಬುವನು ಜೈನಯತಿಗಳ ಮಾತು ಕೇಳಿಸಿಕೊಂಡು ಅವರ ಮಾತು ಸುಳ್ಳಾಗುವದಿಲ್ಲವೆಂದುಕೊಂಡು ಆ ಅನಾಥ ಹುಡುಗಿಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ 'ಬುದ್ಧದಾಸಿ' ಎಂಬ ಹೆಸರಿಟ್ಟು ಅವಳನ್ನು ಬೆಳೆಸಿದನು. ಒಂದು ದಿನ ಅವಳನ್ನು ನೋಡಿದ ಪೂತಿವಾಹನ ಮಹಾರಾಜ ಅವಳ ಸೌಂದರ್ಯಕ್ಕೆ ಮನಸೋತು ಬಿಡದೆ ಆ 'ಬುದ್ಧದಾಸಿ'ಯನ್ನು ಮದುವೆಯಾಗುತ್ತಾನೆ. ಬೇರೆ ರಾಣಿಯರನ್ನು ನೋಡದೆ, ಬುದ್ಧದಾಸಿಯನ್ನು ಒಂಚೂರು ಬಿಡದೆ ಅವಳ ಹತ್ತಿರವೇ ಇರುತ್ತಾನೆ. ಅವಳ ಮಾತೇ ಕೇಳುತ್ತಾನೆ. ಇದನ್ನೇ ದಾಳವಾಗಿಸಿಕೊಂಡು ಆ ರಾಜ್ಯದಲ್ಲಿ ನಡೆಯುತ್ತಿದ್ದ ಜಿನಪೂಜೆಗೆ ವಿಘ್ನತಂದು ತಂದೆ ಬುದ್ಧಾತ್ಮನ ಮಾತಿನಂತೆ ಬುದ್ಧನ ಉತ್ಸವ ನಡೆಸುತ್ತಾಳೆ.

ಇದೆಲ್ಲವನ್ನೂ ಗಮನಿಸಿದರೆ ಅನಾಥಳಾದ ಅನ್ಯಧರ್ಮೀಯ ಹುಡುಗಿಯನ್ನು ಸಾಕಿ ಸಲುಹಿದ ಬೌದ್ಧ ಧರ್ಮೀಯ 'ಬುದ್ಧಾತ್ಮ' ಬರೀ ಮಾನವೀಯತೆಯಷ್ಟರಿಂದಲೇ ಅವಳನ್ನು ಬೆಳೆಸಲಿಲ್ಲ. ಅವನಿಗೆ ಆ ನಾಡಲ್ಲಿ ತನ್ನ ಬೌದ್ಧ ಧರ್ಮವನ್ನು ಪ್ರತಿಷ್ಠಾಪಿಸುವ ಇರಾದೆ ಮುಖ್ಯವಾಗಿತ್ತು. ಮುಂದೊಂದು ದಿನ ಪೂತಿವಾಹನ ರಾಜನ ಹೆಂಡತಿಯಾಗುವಳೆಂದು ಜೈನಯತಿಗಳು ಮಾತನಾಡಿದ್ದನ್ನು ಕೇಳಿಸಿಕೊಂಡೇ ಆ ಹುಡುಗಿಯನ್ನು ಸಾಕುವ, ಆ ಮೂಲಕ ತನ್ನ ಧರ್ಮ ಪ್ರತಿಷ್ಠಾಪಿಸುವ ದೂರಾಲೋಚನೆ ಬುದ್ಧಾತ್ಮನದಾಗಿತ್ತು. ಅಂತೆಯೇ ಬುದ್ಧದಾಸಿ ಬೆಳೆದು ಪೂತಿವಾಹನನ ಹೆಂಡತಿಯಾದ ನಂತರ ಅವಳ ಮೂಲಕ ಬುದ್ಧಾತ್ಮ ತನ್ನ ಬೌದ್ಧ ಧರ್ಮ ಪ್ರತಿಷ್ಠಾಪನೆಗೆ ಕಾರ್ಯ ನಿರತನಾಗುತ್ತಾನೆ.

ನಯಸೇನನ ಕಾಲಕ್ಕಾಗಲೇ ಅವಸಾನದ ಅಂಚಿನಲ್ಲಿದ್ದ ಬೌದ್ಧ ಧರ್ಮವನ್ನು ಮತ್ತೆ ಮುಖ್ಯವಾಹಿನಿಗೆ ತರುವ ಪ್ರಯತ್ನವನ್ನು ಸಾಮಾನ್ಯನೊಬ್ಬ ಮಾಡುತ್ತಾನೆ. ಯಾವುದೇ ಧರ್ಮ ಒಂದು ನಾಡಿನಲ್ಲಿ ನೆಲೆಯೂರಲು ಪಸರಿಸಲು ಪ್ರಭುತ್ವದ ಸಹಕಾರ ಅಗತ್ಯವೆಂಬ ತಿಳುವಳಿಕೆ ಬುದ್ಧಾತ್ಮನಿಗಿತ್ತು. ಆ ದೂರಾಲೋಚನೆಯನ್ನಿಟ್ಟುಕೊಂಡೇ ಗೊತ್ತಿಲ್ಲದ ಅನ್ಯಧರ್ಮೀಯ ಅನಾಥೆಯೊಬ್ಬಳನ್ನು ಸಾಕುತ್ತಾನೆ. ಆ ಮೂಲಕ ತನ್ನ ಕಾರ್ಯಸಾಧನೆಗೆ ಅಣಿಯಾಗುತ್ತಾನೆ.

ಗಂಡ – ಹೆಂಡತಿ ಮತ್ತು ಸಂಶಯ:

ಧರ್ಮಾಮೃತದ ಧನ್ವಂತರಿ ಕಥೆಯಲ್ಲಿ ಧನ್ವಂತರಿ ಎಂಬ ಕಳ್ಳನಿರುತ್ತಾನೆ. ಧನ್ವಂತರಿಯು ಗರ್ಭಿಣಿಯಾದ ತನ್ನ ಹೆಂಡತಿಯನ್ನು ಪರೀಕ್ಷಿಸುವ ಪ್ರಸಂಗವೊಂದನ್ನು ಈ ಕತೆಯಲ್ಲಿ ಕಾಣುತ್ತೇವೆ. ಧನ್ವಂತರಿ ಕಳಿಂಗದೇಶಕ್ಕೆ ಹೋಗಿ ಕದ್ದು ಅಲ್ಲಿಯೇ ಆರು ತಿಂಗಳವರೆಗೆ ಇದ್ದು ಹಿಂದಿರುಗುತ್ತಾನೆ. ಆಗ ಅವನಿಗೆ ಒಂದು ವಿಷಯ ಪರೀಕ್ಷಿಸಬೇಕೆನಿಸುತ್ತದೆ. ಅದೇನೆಂದರೆ

"ಪೆರರ ಪೆಂಡಿರ್ಗಮರ್ಥಕ್ಕಮಳಿಪಿ ಕಾಲಂ ಪೋದುದೆನಗೆ, ಎನ್ನ ಪೆಂಡಿರ್ಗ ಮರ್ಥಕ್ಕೆಮೆಳಸುವರಾನುವೊಳವೋ ಮೇಣಿಲ್ಲವೋ ಚೋದ್ಯಮನಿದನಾರಯಲ್ವೇಟ್ಟುಕುಮ್"(ಪು-೬೩, ಗದ್ಯ).

ಎಂದುಕೊಂಡು ನಾಲ್ಕೈದು ದಿನ ತಡೆದು ಗಜಪುರಕ್ಕೆ ಹೋಗುವದಾಗಿ ಹೇಳಿ ಹೋಗುತ್ತಾನೆ. ಹೆಂಡತಿ ಮೇಲಣ ಅನುಮಾನದಿಂದಾಗಿ ರಾತ್ರಿ ಮಾಳಿಗೆಯಿಂದ ಮನೆಯೊಳಗೆ ಇಳಿಯುತ್ತಾನೆ. ಮನೆಯಲ್ಲಿ ತಾಯಿ ಮತ್ತು ಹೆಂಡತಿ ಇಬ್ಬರೂ ಒಟ್ಟಿಗೇ ಮಲಗಿದ್ದನ್ನು ನೋಡಿ ತಿಳಿದುಕೊಳ್ಳದೆ, ಹೆಂಡತಿಯ ಮೇಲೆ ಅನುಮಾನ ಪಟ್ಟು ಕೊಲ್ಲಲನುವಾಗುತ್ತಾನೆ. ಅಷ್ಟರಲ್ಲಿ ಜೈನ ಮುನಿಗಳು ಕೊಟ್ಟ "ನೀನಾವ ಪ್ರಾಣಿಗಾದೊಡಂ ಮುನಿವಲ್ಲಿ ಪೆಱಗೇಟಡಿಯಂ ಪಿಂಗಿ ಬಟಿಕ್ಕಂ ನಿನ್ನ ಮೆಚ್ಚಿದಂತೆ ಮಾಡೆಂಬುದುಮ್"(ಪು-೬೩, ಗದ್ಯ).

ವ್ರತದ ನೆನಪಾಗಿ ಏಳು ಹೆಜ್ಜೆ ಹಿಂದೆ ಹೋಗುವನು. ಅಷ್ಟರಲ್ಲಿ ಅವನ ಹೆಂಡತಿ 'ಅತ್ತೆ ಉಬ್ಬಸವಾಗುತ್ತಿದೆ ಅತ್ತ ಸರಿಯಿರಿ' ಎಂದು ನುಡಿದು ಹೊದ್ದಿದ್ದ ಸೀರೆಯನ್ನು ತೆಗೆದಾಗ ಅತ್ತೆ-ಸೊಸೆಯರನ್ನು ಕಂಡು ಬೆರಗಾಗುತ್ತಾನೆ. ಧನ್ವಂತರಿಗೆ ತಾನು ಪಡೆದ ವ್ರತದ ನೆನಪಾಗಿ ನಡೆಯಬಹುದಾಗಿದ್ದ ಅಚಾತುರ್ಯ ತಪ್ಪುತ್ತದೆ. ಆದರೆ ಸಾಮಾನ್ಯ ಗಂಡ-ಹೆಂಡತಿಯರ ಮಧ್ಯದ ಅನುಮಾನವೆಂಬ ಭೂತದ ಕಾರಣಕ್ಕಾಗಿ ಅವಸರದಲ್ಲಿ ಪರೀಕ್ಷಿಸಿ ನೋಡುವ ವ್ಯವಧಾನವಿಲ್ಲದೆ ಎಷ್ಟೋ ಸಂಸಾರಗಳು ಬಲಿಯಾಗುತ್ತಿರುವದು ದಿನ ನಿತ್ಯದ ಸತ್ಯ. ಕಾಲ ಯಾವುದೇ ಆಗಿದ್ದರು, ಎಷ್ಟೇ ಬದಲಾಗಿದ್ದರೂ ಅವತ್ತಿನಿಂದ ಇವತ್ತಿನವರೆಗೆ ಈ ಅನುಮಾನ ಸಂಸಾರವನ್ನು ಸುತ್ತುತ್ತಲೇ ಇರುತ್ತದೆ.

ಸಮಾಜದಲ್ಲಿ ವೇಶ್ಯೆಯ ಸ್ಥಾನಮಾನ:

ಲಲಿತಾಂಗ ಕತೆಯಲ್ಲಿನ ಅನಂಗಸುಂದರಿ ಎಂಬ ವೇಶ್ಯೆ ಒಂದು ದಿನ ಅಂಜನಚೋರನಿಗೆ ಅವನ ಅದೃಶ್ಯವಿದ್ಯೆಯಿಂದ ಪಟ್ಟದ ರಾಣಿಯ ಹಾರದಲ್ಲಿ ಹೊಳೆಯುತ್ತಿದ್ದ ರತ್ನದ ಪದಕ ತನಗೆ ಬೇಕೆಂದು ಹಟ ಹಿಡಿಯುತ್ತಾಳೆ. ಅದಕ್ಕೆ ಅಂಜನ ಚೋರನ ಮೇಲೆ ಸಿಟ್ಟಾಗಿ "................ ಮುಳಿದು ಪಾಸಿನ ಮೇಲಿಂ ನೆಲಕ್ಕೆ ಬೀಳಲೊದೆದು, ಕಾಲೊಳಂ ಕೈಯೊಳಂ ಮೂಡೆಗಟ್ಟುವಂತೆ ಮೋದಿ, ಕೋಪಾನಳನಿಂ ಕಣ್ಗಾಣದೆ ಕೆಲದೊಳಿರ್ದ ಜಂತದ ಪಾವುಗೆಯಿಂದಮಿಟ್ಟು(ಪು-೫೦, ಗದ್ಯ) ಎಂಬ ಪದ್ಯವನ್ನು ಓದಿದಾಗ ಆಶ್ಚರ್ಯವೆನ್ನಿಸುತ್ತದೆ. ಅಂದು ಸ್ತ್ರೀಗೆ ಸಾಮಾಜಿಕ, ಕೌಟುಂಬಿಕ ವಲಯಗಳಲ್ಲೆಲ್ಲ ತನ್ನ ವೈಯಕ್ತಿಕ ಅಭಿಪ್ರಾಯಗಳನ್ನು ವ್ಯಕ್ತಪಡಿಸುವದು ದುಸ್ತರದ ಸಂಗತಿಯಾಗಿತ್ತು. ಅಂಥದರಲ್ಲಿ ಸಾಮಾಜಿಕವಾಗಿ ಅಸ್ತಿತ್ವವನ್ನೇ ಪ್ರಶ್ನಿಸುವಂತಹ ವೇಶ್ಯೆಯೊಬ್ಬಳು ತನ್ನಲ್ಲಿ ಒಲಿದು ಬಂದ ಪುರುಷನೊಬ್ಬನನ್ನು ಹಾಸಿಗೆಯ ಮೇಲಿನಿಂದ ನೆಲಕ್ಕೆ ಒದ್ದು ದಂತದ ಪಾದುಕೆಗಳಿಂದ ಅಂಜನ ಚೋರನಾದ ರಾಜಕುಮಾರ ಲಲಿತಾಂಗನನ್ನು ಹೊಡೆದಳೆಂದು ಹೇಳುವದನ್ನು ನೋಡಿದಾಗ ಸಮಾಜ ಕುಟುಂಬಗಳ ಬಂಧನದಲ್ಲಿ ಮರ್ಯಾದೆಗಂಜಿ ಬದುಕುತ್ತಿದ್ದ ಹೆಣ್ಣಿಗೂ, ವೇಶ್ಯೆಯ ಬದುಕಿನ ರೀತಿಗೂ ತುಂಬ ಭಿನ್ನವಾಗಿದ್ದನ್ನು

ಕಾಣುತ್ತೇವೆ. ವೇಶ್ಯೆ ತನ್ನಲ್ಲಿ ಬಂದ ವಿಟನಿಗೆ ತನಗೇನು ಬೇಕೋ ಅದನ್ನು ಅತ್ಯಂತ ಹಕ್ಕಿನಿಂದ ಕೇಳಿ ಪಡೆದುಕೊಳ್ಳುವದನ್ನು ಎಲ್ಲ ಕಾಲಕ್ಕೂ ಕಾಣುತ್ತೇವೆ. ಅದನ್ನೇ ನಯಸೇನ ಕೂಡ ಚಿತ್ರಿಸಿದ್ದಾನೆ.

ಅನಂತಮತಿಯ ಕತೆಯಲ್ಲಿ ವೈಶ್ಯನ ಹೆಂಡತಿ ಅನಂತಮತಿಯನ್ನು ಕುಂಟಣಿಗೆ ಮಾರುತ್ತಾಳೆ. ಆ ಕುಂಟಣಿ ಅನಂತಮತಿಯನ್ನು ವೇಶ್ಯಾವೃತ್ತಿಗೆ ಎಳೆಸಲು ಆ ವೃತ್ತಿಯಲ್ಲಿನ ಸುಖ ವೈಭವಗಳನ್ನು ವರ್ಣಿಸುವ ಪರಿಯನ್ನು ನೋಡಬೇಕು.

ಪೊಸದುಡುಗೆ ನಿಚ್ಚ ನಿಚ್ಚಂ
ಪೊಸಗಂಡರ್ ಚೆಲ್ವರಪ್ಪ ಪೊಸವಸ್ತ್ರಂ ಭಾ
ವಿಸುವಂದು ಮೆಯ್ಯುಸುಖಂ ರಂ
ಜಿಸೆ ಬೆಲೆವೆಣ್ಣಕ್ಕುಮುಟಿದ ಸತಿಯರ್ಗುಂಟೇ (ಪು-೮೮, ಪ-೮೧)

ಎಂದು ಹೇಳುತ್ತ ಮುಗ್ಧ ಹುಡುಗಿಯನ್ನು ವೇಶ್ಯಾವೃತ್ತಿಯೆಡೆಗೆ ಆಕರ್ಷಿಸಲೆತ್ನಿಸುತ್ತಾಳೆ. ಸೂಳೆಯರು ಸಾಮಾನ್ಯರಲ್ಲ, ಅವರು ಭೂಮಂಡಲವನ್ನೇ ತಮ್ಮ ಅಂಕೆಯಲ್ಲಿಟ್ಟುಕೊಳ್ಳಬಲ್ಲ ಶಕ್ತಿವಾನರು ಎಂದು ನಾನಾ ತೆರನಾಗಿ ವೇಶ್ಯಾವೃತ್ತಿಯನ್ನು ವೈಭವೀಕರಿಸುವಳು. ಕುಂಟಣಿ ಒಬ್ಬ ತಲೆಹಿಡುಕಿ. ಏನೂ ಅರಿಯದ ಮುಗ್ಧ ಹುಡುಗಿಯರನ್ನು ಕೊಂಡುಕೊಂಡು ಮರಳು ಮಾಡಿ ಹೆದರಿಸಿ ವೇಶ್ಯಾ ವೃತ್ತಿಗೆಳಿಸುವದು ಅವಳ ಉದ್ದೇಶ. ಇಂಥವರಿರುವುದು ಕುಂಟಣಿಯರು ಧರ್ಮಾಮೃತದ ಕಾಲಕ್ಕಷ್ಟೇ ಅಲ್ಲ ಇವತ್ತಿಗೂ ಇದೊಂದು ಸಾಮಾಜಿಕ ಸಮಸ್ಯೆಯಾಗಿ ಸಮಾಜವನ್ನು ಕಾಡುತ್ತಿದೆ.

ಹರಿಶ್ಚಂದ್ರ ಕಾವ್ಯ

ರಾಘವಾಂಕನ ಹೊತ್ತಿಗೆ ವಚನ ಚಳುವಳಿ ಮುಗಿದು ಹೋಗಿತ್ತು. ಶರಣರ ಆದರ್ಶ ಕಲ್ಪನೆಗಳು ಮತ್ತು ಪರಂಪರಾಗತ ಸಾಮಾಜಿಕ ತಿಳುವಳಿಕೆಗಳ ಮುಖಾಮುಖಿ ಸಂಚಲನ ಮೂಡಿಸಿತ್ತು. ಶರಣರ ಉದ್ದೇಶ ಆ ಪೂರ್ವದ ಸಾಮಾಜಿಕ ಕಂದಾಚಾರಗಳನ್ನು ಹೋಗಲಾಡಿಸಿ ಸಮಾನ ಪಾತಳಿಯ ಮೇಲೆ ನವಸಮಾಜವೊಂದನ್ನು ನಿರ್ಮಿಸುವುದಾಗಿತ್ತು. ಸಮಾಜದಲ್ಲಿ ಹುದುಗಿದ್ದ ಲಿಂಗತಾರತಮ್ಯ, ಉದ್ಯೋಗ ತಾರತಮ್ಯ ಜಾತಿಭೇದ ಭಾವನೆಗಳನ್ನು ಕಳೆದೊಗೆದು ಎಲ್ಲರನ್ನೂ ಒಂದುಗೂಡಿಸಬೇಕೆಂಬ ಶರಣರ ಬಯಕೆ ವಿಶಾಲ ವ್ಯಾಪ್ತಿಯನ್ನು ಪಡೆದಿತ್ತು. ವಿಶೇಷವಾಗಿ ಜಾತಿ ಪರಿಕಲ್ಪನೆ ಮನುಷ್ಯ ಮಧ್ಯದಲ್ಲಿ ಗೋಡೆಗಳನ್ನು ನಿರ್ಮಿಸಿ ಎಲ್ಲರನ್ನೂ ಅಗಲಿಸಿದ್ದು ಶರಣರ ಕಣ್ಣಲ್ಲಿ ಮಹಾಪರಾಧವಾಗಿ ಅವನ್ನು ಮಟ್ಟಹಾಕಲು ಶರಣರು ಯತ್ನಿಸಿದರು. ಇದು ವಚನಸಾಹಿತ್ಯ ನಿರ್ಮಾಣ ಮತ್ತು ವಿಧಾಯಕ ಸಾಮಾಜಿಕ ಆಂದೋಲನದ ಮೂಲಕ ಮುಂದುವರೆಯಿತು. ಆದರೆ ಸಾವಿರಾರು ವಿಷದ ಬೇರುಗಳನ್ನು ಕೀಳುವುದು ಅಷ್ಟು ಸುಲಭವಾಗಿರಲಿಲ್ಲ. ಒಂದು ಕಡೆಗೆ ಜಾತಿವಿಭೇದವನ್ನು ಮೈಗೂಡಿಸಿಕೊಂಡ ಬಹುಸಂಖ್ಯಾತ ಜನಸಮುದಾಯ ಇನ್ನೊಂದು ಕಡೆಗೆ ಈ ಭೇದವೇ ಕೃತ್ರಿಮವಾದದ್ದು ಎಂದು ಕರೆ ನೀಡಿದವರಲ್ಲಿ ಉಂಟಾದ ಘರ್ಷಣೆ ೧೨ನೆಯ ಶತಮಾನಕ್ಕಷ್ಟೇ ಅಲ್ಲ, ಮುಂದಿನ ದಿನಗಳಲ್ಲೂ ಮುಂದುವರಿಯಿತು. ಹರಿಶ್ಚಂದ್ರ ಕಾವ್ಯದ ಹಲವು ಪುಟಗಳಲ್ಲಿ ಚಾಚಿಕೊಂಡಿರುವ ಮತಚರ್ಚೆಯನ್ನು ನೋಡಿದರೆ ತರುವಾಯದ ಕಾಲಘಟ್ಟಗಳಲ್ಲಿಯೂ ಇದು ಮುಂದುವರೆದುಕೊಂಡು ಬಂದಿರುವುದು ಸ್ಪಷ್ಟವಾಗಿದೆ.

ಹೊಲತಿಯರ ಪ್ರಸಂಗ:

ಹರಿಶ್ಚಂದ್ರ–ಹೊಲತಿಯರ ಜಾತಿ ಸಂಬಂಧದ ಚರ್ಚೆ, ಘರ್ಷಣೆ ಕನ್ನಡ ಕಾವ್ಯ ಪರಂಪರೆಯಲ್ಲೇ ಒಂದು ಅಪರೂಪದ ಪ್ರಸಂಗವಾಗಿ ನಿಂತಿದೆ. ಪ್ರಾಜ್ಞನಾದ ಹರಿಶ್ಚಂದ್ರ ಮತ್ತು ಅತ್ಯಂತ ಸಹಜಸ್ವಭಾವದ ನರ್ತಕಿಯರು ಈ ವಿಷಯದಲ್ಲಿ ಕೈಗೊಳ್ಳುವ ಸುದೀರ್ಘ ಸಂವಾದ ವಿಚಾರಾರ್ಹವಾಗಿದೆ. ಹರಿಶ್ಚಂದ್ರನ ತಿಳುವಳಿಕೆಗಳಿಗೆ ಪೂರ್ವ ಸಂಸ್ಕಾರದ ಭಾರವಿದೆ. ಹೊಲತಿಯರಿಗೆ ವಾಸ್ತವದ ಪರಿಜ್ಞಾನವಿದೆ. ಹೊಲತಿಯರು ವಿಶ್ವಾಮಿತ್ರನ ಹೂಂಕಾರದಿಂದ ಉದ್ಭವಿಸಿದವರು, ಬೇಕೆಂತಲೇ ಹರಿಶ್ಚಂದ್ರನನ್ನು ಕಾಡಬೇಕೆಂಬ ಏಕೈಕ ಉದ್ದೇಶದಿಂದ ಬಂದವರು. ಆದರೂ ಅವರ ವಾದ ಸರಣಿ ತರ್ಕಬದ್ಧವಾಗಿಯೇ ಮುಂದುವರಿಯುತ್ತದೆ.

ಬೇಟೆಗೆ ಬಂದಿದ್ದ ಹರಿಶ್ಚಂದ್ರ ವಿಶ್ರಾಂತಿಗೆಂದು ತಂಗಿದ್ದಾಗ ಅನಾಮಿಕ ಸತಿಯರು ಬಂದು ಗಾಯನ ಮಾಡಿ ಹರಿಶ್ಚಂದ್ರನನ್ನು ರಂಜಿಸಿದರು. ಅವನು ಮನವುಕ್ಕಿ ಆಭರಣಗಳ ಉಡುಗೊರೆ ಕೊಡಹೋದರೆ ಗಾನರಾಣಿಯರು ಉಡುಗೊರೆಯನ್ನು ಸ್ವೀಕರಿಸಲಿಲ್ಲ; ಅವರು ಉಡುಗೊರೆಯ ಬದಲಾಗಿ ಬೇಡಿದ್ದು ಮುತ್ತಿನ ಸತ್ತಿಗೆಯನ್ನು. ಇದು ಪ್ರಭುತ್ವದ ಚಿಹ್ನೆ, ಇದಕ್ಕೆ ತನ್ನದೇ ಆದ ಮಹತ್ವವುಂಟು ಕೊಡಲಾರೆ ಎಂದ ಹರಿಶ್ಚಂದ್ರ. ಬೇಡಿದುದನ್ನು ಕೊಡುವ ದೊಡ್ಡತನ ದೊರೆಯಲ್ಲಿರಬೇಕು ಎಂದು ಛೇಡಿಸುವ ಸತಿಯರು ಬಲಿಚಕ್ರವರ್ತಿ, ದಧೀಚಿ ಮುಂತಾದ ದಾನಿಗಳನ್ನು ಉದಾಹರಿಸುತ್ತಾರೆ. ಅವರು ಏನೆಂದರೂ ಹರಿಶ್ಚಂದ್ರ ಸತ್ತಿಗೆಯನ್ನು ಕೊಡಲಿಲ್ಲ. ಕೊನೆಗೆ ಅವರು ಸತ್ತಿಗೆಯನ್ನು ಕೊಡದಿದ್ದರೆ ಬೇಡ, ನಮ್ಮನ್ನು ಮದುವೆಯಾಗು ಎಂದು ಬಿಟ್ಟರು ! ಅನಾಮಿಕ ಸತಿಯರ ಈ ಮಾತಿನೊಂದಿಗೆ ಮುಂದೆಲ್ಲ ನಡೆಯುವ ಸಂವಾದ ಕೇವಲ ಹರಿಶ್ಚಂದ್ರ–ಹೊಲತಿಯರ ವೈಯಕ್ತಿಕ ಪ್ರಶ್ನೆ, ಪ್ರತಿಷ್ಠೆಯಾಗದೆ ಸಾಮಾಜಿಕ ಚರ್ಚೆಯ ವ್ಯಾಪ್ತಿಯನ್ನು ಪಡೆಯುತ್ತದೆ.

ಸತ್ತಿಗೆಯನ್ನು ದಾಟಿ, ತಮ್ಮನ್ನು ಮದುವೆಯಾಗು ಎಂಬ ಹೊಲತಿಯರ ಬೇಡಿಕೆ ಹರಿಶ್ಚಂದ್ರನಲ್ಲಿ ಕೋಪ ಉಕ್ಕಿಸಿತು. ಪ್ರಾಚೀನಕಾಲದ ಸೂರ್ಯವಂಶ ನಮ್ಮದು, ತಮಗಾರೂ ಕನ್ಯೆ ಕೊಡುವೆವೆಂಬ ಧೈರ್ಯ ತೋರುವ ಭೂಪರಿಲ್ಲ ಎಂದು ಅವರನ್ನು ತಿರಸ್ಕರಿಸುತ್ತಾನೆ.

> ಲಲಿತ ವಸುಮತಿ ಹುಟ್ಟುವಂದು ಹುಟ್ಟಿದ ಸೂರ್ಯ
> ಕುಲದ ರಾಯರ್ಗೆ ವಂಶದೊಳು ಕೀರ್ತಿಯೊಳು ಭುಜ
> ಬಲದೊಳೊರೆದೊರೆಯೆನಿಸಿ ಕನ್ನಿಕೆಯರಂ ಕೊಡುವ ಭೂಪರಿಲ್ಲಿಂದುತನಕ
> ಹೊಲತಿಯರು ಬಂದಾವು ಸತಿಯ ರಾದಪ್ಪೆವೆಂ
> ಬುಲಿಹವೆಂಬುದು ಬಂದ ಕಾಲ ಗುಣವೋ ನಿಂದ
> ನೆಲದ ಗುಣವೋ ನೋಡು ನೋಡೆಂದು ಕಡುಮುಳಿದು ಕೋಪಿಸಿದನವನೀಶನು
>
> (೭–೧೬)

–ಹರಿಶ್ಚಂದ್ರನಿಗೆ ಇಲ್ಲಿ ಮುಖ್ಯವಾಗಿ ತೋರುವುದು ಕುಲದ ಪ್ರತಿಷ್ಠೆ. ನಂತರದ್ದು ಅವರು ಹೊಲತಿಯರಾಗಿರುವುದು. ತಾವು ಸಾಮಾನ್ಯರೊಂದಿಗೆ ಕೂಡಬಾರದು, ಸಂಬಂಧ ಬೆಳೆಸಬಾರದು ಎಂಬ ಪ್ರಭುಗಳನೇಕರ ಪ್ರತಿನಿಧಿಯಂತೆ ತೋರುತ್ತಾನೆ ಹರಿಶ್ಚಂದ್ರ. ಏಕಕಾಲಕ್ಕೆ ಪ್ರಭುತ್ವದ ಪ್ರತಿಷ್ಠೆ, ಸಾಮಾಜಿಕ ನಿರ್ಬಂಧ ಎರಡೂ ಇಲ್ಲಿ ಕೂಡಿರುವುದರಿಂದ ಹರಿಶ್ಚಂದ್ರನ ಪಾಲಿಗೆ ಇದು ಸಮಸ್ಯೆಯಾಗಿ ನಿಲ್ಲುತ್ತದೆ.

ಆದರೆ ಗಾಯಕಿಯರು ತುಂಬ ಸಹಜವಾಗಿ ಕ್ಷೀರ, ಜೇನು, ಕಸ್ತೂರಿಗಳ ಉದಾಹರಣೆ ಕೊಟ್ಟು ಅವು ಹುಟ್ಟುವ ಮೂಲವನ್ನು ನೋಡದೆ ಅವುಗಳಿಗಿರುವ ಗುಣವನ್ನು ಮಾತ್ರ ಗ್ರಹಿಸಬೇಕೆನ್ನುತ್ತಾರೆ.

ಪಾವನ ಕ್ಷೀರಮಂಕೊಡುವ ಕೆಚ್ಚಲಮಾಂಸ
ವಾವಲೇಸಿನಿದುಳ್ಳ ಮಧುವನೊಸೆದೀವ ನೊಳ
ಏವಲೇಸಧಿಕ ಕಸ್ತೂರಿಯಂಕೊಡುವ ಮೃಗನಾಭಿತಾಸಾವಲೇಸು
ದೇವರಿಗೆ ಸಲ್ಲವೆ ಉತ್ತಮಗುಣಂಗಳಿ
ರ್ದಾವ ಕುಂದಂ ಕಳೆಯಲಾಜಿವವನೀಶ ಕೇಳ್
ಭಾವಿಸುವೊಡಿಂತೆಮ್ಮ ರೂಪು ಜವ್ವನವಿರಲು ಕುಲದ ಮಾತೇಕೆಂದರು(೭-೧೭)

-ಇದುಕ್ಕುತ್ತರವಾಗಿ ಹರಿಶ್ಚಂದ್ರ ಅಷ್ಟೇ ಪ್ರಬಲವಾದ ಬೇರೆ ಉದಾಹರಣೆಗಳನ್ನು ಕೊಡುತ್ತಾನೆ: ಬಚ್ಚಲು ನೀರು ಎಷ್ಟು ತಿಳಿಯಾದರೂ ಸ್ನಾನಕ್ಕೆ ಯೋಗ್ಯವಲ್ಲ. ನಾಯಿಯ ಹಾಲು ಕುಡಿಯಲು ಯೋಗ್ಯವಲ್ಲ. ಸ್ಮಶಾನದಲ್ಲಿ ಬೆಳೆದಿರುವ ಹೂವು ಮುಡಿದುಕೊಳ್ಳಲು ಯೋಗ್ಯವಾಗುವುದೇ? ನೀವು ಹೊಲತಿಯರೇ ಆಗಿರುವಾಗ ನಿಮ್ಮ ಸೊಕ್ಕಿದ ಯೌವ್ವನ, ಸೌಂದರ್ಯದ ರೂಪು ಯಾವುದಕ್ಕೆ ಯೋಗ್ಯ? ಹೀಗಿರಲಾಗಿ ನಿಮ್ಮೊಂದಿಗೆ ಹೇಗೆ ಕೂಡುವುದು? ಹೊಲತಿಯರು ಮುಟ್ಟಬಾರದವರು. ಅವರೊಂದಿಗೆ ತಮ್ಮಂಥ ಶ್ರೇಷ್ಠರು ಸಂಪರ್ಕ ಬೆಳೆಯಿಸಬಾರದು; ಹಾಗೆ ಬೆಳೆಯಿಸುವುದು ತಮ್ಮ ಘನತೆಗೆ ಕುಂದು ಎನ್ನುವುದು ಹರಿಶ್ಚಂದ್ರನ ವಾದ.

ಪ್ರಸ್ತುತ ಸಂದರ್ಭವನ್ನೇ ಆಧರಿಸಿ ಹೊಲತಿಯರು ಮಾತು ಮುಂದುವರಿಸುತ್ತಾರೆ: ಇದುವರೆಗೆ ನಮ್ಮ ಹಾಡುಗಳನ್ನು ಕೇಳಿದಿರಿ, ನಿಮ್ಮ ಕಿವಿಗೆ ಹೊಲೆತನವಿಲ್ಲ, ನಮ್ಮೊಂದಿಗೆ ಮಾತಾಡಿ ನಮ್ಮ ಹೊಗಳಿದಿರಿ ನಿಮ್ಮ ಬಾಯಿಗೆ ಹೊಲೆಯಿಲ್ಲ. ನಮ್ಮ ರೂಪು ಕಂಡು ಸಂತೋಷಪಟ್ಟಿರಿ, ಕಣ್ಣಿಗೆ ಹೊಲೆಯಿಲ್ಲ. ನಮ್ಮ ಮೈಮುಡಿಗಳಿಂದ ತೇಲಿಬಂದ ಸುವಾಸನೆಯನ್ನು ಮೂಸಿದಿರಿ ಮೂಗಿಗೆ ಹೊಲೆಯಾಗಲಿಲ್ಲ. ಹೀಗೆ ನಿಮ್ಮ ಕಿವಿ, ಬಾಯಿ(ನಾಲಿಗೆ), ಕಣ್ಣು, ಮೂಗು ಹೀಗೆ ನಾಲ್ಕೂ ಇಂದ್ರಿಯಗಳಿಗೆ ಹೊಲೆಯಾಗದಿರುವಾಗ ಮುಟ್ಟುವ ಚರ್ಮಕ್ಕೆ ಹೊಲೆಯೇ ? ಪಂಚೇಂದ್ರಿಯಗಳಲ್ಲಿ ನಾಲ್ಕು ಅಧಮ, ಒಂದು ಅಧಿಕವೆ?(೭-೧೯). ಹೊಲತಿಯರಾಡುವ ಈ ಮಾತು ತುಂಬ ತರ್ಕಬದ್ಧವಾಗಿದೆ. ಆದರಿದಕ್ಕೆ ಹರಿಶ್ಚಂದ್ರ ಕೊಡುವ ಸಮುಝಾಯಿಷಿಯೂ ಅಷ್ಟೇ ತರ್ಕಬದ್ಧವಾಗಿದೆ. ನಯನ, ಕರ್ಣ, ಘ್ರಾಣೇಂದ್ರಿಯಗಳು ಮುಟ್ಟಲ್ಪಡುವವಲ್ಲ. ಕೆಂಡ ಚರ್ಮಕ್ಕೆ ತಾಗಿದರೆ ಸುಟ್ಟು ಹೋಗುತ್ತದೆ. ಆದ್ದರಿಂದಲೇ ತಾನು ಹೊಲತಿಯರನ್ನು ಸ್ವೀಕರಿಸಲಾರ, ಮುಟ್ಟಲಾರ. ಮತ್ತೆ ಮುಂದುವರಿದು ಹೇಳುತ್ತಾನೆ - ಕುಲಜರು ಅಧಮ ಸತಿಯರನ್ನು ನೋಡಬಾರದು, ನುಡಿಸಬಾರದು, ಮನ್ನಿಸಬಾರದು, ಅವರಿಗೆ ಏನನ್ನೂ ಕೊಡಬಾರದು. ಹೀಗಿದ್ದರೂ ನಿಮಗೆ ಬಹುಮಾನವನ್ನಿತ್ತೆ. ಆದರೆ ನೀವು ಹೆಂಡತಿಯರಾಗುವೆವು ಎನ್ನುತ್ತೀರಿ.

ಏಗೆಯ್ದಡಂ ಕುಲಜರಧಮ ಸತಿಯರ ನೋಡ
ಲಾಗದಱಿಯದೆ ಪಾಪದಿಂ ನೋಡಿದಡೆ ನುಡಿಸ
ಲಾಗಡೆಂತಕ್ಕೆ ನುಡಿಸಿದಡೆ ಮನ್ನಿಸಲಾಗದನುಗೆಟ್ಟು ಮನ್ನಿಸಿದಡೆ

ಮೇಗೇನುವಂ ಕರೆದುಕೊಡಲಾಗದಿತ್ತಡವ
ರೇಗಯ್ಯಲೊಪ್ಪದೆನಗಿಂತು ನೀವಂಗನೆಯ
ರಾಗಿಪ್ಪೆವೆಂದಿರ್ಪೆ ಸಲ್ಲದೊಡತಿಯರಪ್ಪೆವೆನಲು ತೀರದೆಯೆಂದನು (೭-೨೧)

-ಹರಿಶ್ಚಂದ್ರ ಯಾವ ರೀತಿಯಿಂದ ತಿಳುವಳಿಕೆ ಹೇಳಿದರೂ ಅವರು ಒಪ್ಪಲು ಸಿದ್ಧರಿಲ್ಲ. ಅವರು ಮತ್ತೆ ಮುಂದುವರಿದು ಶಾಪದಿಂದ ನಾವು ದುಷ್ಕುಲದಲ್ಲಿ ಹುಟ್ಟಿದೆವು, ನಿನ್ನ ಸಂಗದಿಂದ ಸತ್ಕುಲಜರಾಗಬೇಕೆಂಬ ಅಪೇಕ್ಷೆ ನಮ್ಮದು ಎಂದರೆ ರಾಜನು ನಿಮಗಾಗಿ ನಾನು ನನ್ನ ಕುಲವನ್ನು ಕೆಡಿಸಿಕೊಳ್ಳಲೇ? ಎನ್ನುತ್ತಾನೆ. ಪಾಪಿಗಳ ಪಾಪ ತೊಳೆಯುವ ಗಂಗೆಗೆ ಪಾಪಲೇಪನವುಂಟೇ ಎಂದರೆ ಕುಲಧರ್ಮವು ಹಾಗಲ್ಲ ಕೊಡ ಹಾಲು ಕೆಡಿಸಲು ಹುಳಿ ಎಷ್ಟು ಬೇಕು? ಎಂಬುದು ಹರಿಶ್ಚಂದ್ರನ ಮಾರುತ್ತರ. ಕೊನೆಗೆ ಅವರು ನೀನೊಲಿದಂತೆ ಮಾಡು, ನಾವಂತೂ ನಿನ್ನ ಬೆನ್ನು ಬಿಡುವವರಲ್ಲ ಎಂದರೆ ಹರಿಶ್ಚಂದ್ರ ನನ್ನೊಂದಿಗೆ ಬಂದು ಮಾಡುವುದೇನು? ನಮ್ಮಲ್ಲಿ ಈಗಾಗಲೇ ಅನೇಕ ಜನ ಹೊಲೆಯರಿದ್ದಾರೆ ಎಂದರೆ ನಮ್ಮನ್ನು ಮರಳ್ಗೊಳಿಸಿ ಈಗ ತಿರಸ್ಕರಿಸುತ್ತಿದ್ದಾನೆಂದು ಇಳೆಯೊಳಗೆ ಸಾರುತ್ತ ಹೋಗುತ್ತೇವೆ ಎಂದಾಗ ಹರಿಶ್ಚಂದ್ರನಿಗೆ ವಿಪರೀತ ಸಿಟ್ಟುಬಂದು ಮಂತ್ರಿಯೊಡಗೂಡಿ ಚಮ್ಮಟಿಯಿಂದ ಹೊಡೆದು ಓಡಿಸುತ್ತಾನೆ.

ಇದುವರೆಗೆ ವಿವರಗೊಂಡ ಇಡೀ ಸಂದರ್ಭ ಜಾತಿಶ್ರೇಣಿಯ ಪರ ಮತ್ತು ವಿರೋಧಿ ನಿಲುವುಗಳನ್ನು ಸಮಾನಾಂತರ ನೆಲೆಯಲ್ಲಿ ಪ್ರತಿಪಾದಿಸುತ್ತದೆ. ಇದು ಕೇವಲ ಹರಿಶ್ಚಂದ್ರನ ಕಾಲದ ವಿಷಯವನ್ನು ಹೇಳದೆ ರಾಘವಾಂಕನ ಕಾಲದ ಜಾತಿ ಸಮಸ್ಯೆಯನ್ನು ಬಿಂಬಿಸುತ್ತದೆ. ಹರಿಶ್ಚಂದ್ರನಿಗೆ ಮದುವೆಯಾಗಿತ್ತು, ಆದ್ದರಿಂದ ಅವನು ಅವರನ್ನು ತಿರಸ್ಕರಿಸಿದ ಎಂದು ಹೇಳಲು ಇಲ್ಲಿ ಅವಕಾಶವಿದ್ದರೂ ಅದಿಲ್ಲಿ ಉಕ್ತಗೊಂಡಿಲ್ಲ; 'ಸೂರ್ಯ ಕುಲದ ರಾಯರನ್ನು ಹೀಗೆ ಕೇಳಬಹುದೇ' ಎಂಬುದಿಲ್ಲಿ ಮುಖ್ಯವಾಗಿ ಪ್ರತಿಪಾದಿಸಲ್ಪಟ್ಟಿದೆ. ಆದ್ದರಿಂದ ಇದು ಜಾತಿ ಸಂಘರ್ಷವೇ ಆಗಿ ವಿವರಗೊಳ್ಳುತ್ತದೆ. ಅನಾಮಿಕ ಸತಿಯರು ತಮ್ಮ ನಿಲುವನ್ನು ತಾವು ಸಮರ್ಥಿಸಿಕೊಳ್ಳುವುದು ತುಂಬ ಸಹಜವಾಗಿದೆ. ಹರಿಶ್ಚಂದ್ರ ಅವರ ಜಾತಿ ಕಾರಣವಾಗಿಯೇ ಅವರನ್ನು ಮತ್ತೆ ಮತ್ತೆ ಅಂದು ದೂರಸರಿಸುವುದು ಶ್ರೇಣೀಕೃತ ಸಮಾಜದ ಮೇಲುಸ್ತರದವರ ರೀತಿಯಾಗಿ ತೋರುತ್ತದೆ. ಹೀಗೆ ರಾಘವಾಂಕ ಕೇವಲ ಜಾತಿ ಕುರಿತಾದ ತನ್ನ ಸಮಕಾಲೀನ ಧೋರಣೆಗಳನ್ನು ಹೇಳುವುದಿಲ್ಲ; ನಿಮ್ನ ವರ್ಗದವರ ಪರವಾಗಿ ವಾದಿಸುತ್ತಿದ್ದಾನೆ ಅಥವಾ ವಿಷಯವನ್ನು ಪ್ರಜ್ಞಾಪೂರ್ವಕ ಚರ್ಚೆಗೆ ಒಳಪಡಿಸುತ್ತಿದ್ದಾನೆ ಅನ್ನಿಸುತ್ತದೆ.

ಸೂರ್ಯವಂಶದ ತಾನು ಹೊಲತಿಯರನ್ನು ವರಿಸಲಾರೆ ಎಂಬ ಹರಿಶ್ಚಂದ್ರನ ನಿಲುವು ಅಚಲವಾಗಿದೆ. ಇದಕ್ಕಾಗಿ ಅವನು ತನ್ನ ರಾಜ್ಯವನ್ನು ಕಳೆದುಕೊಳ್ಳುವ ಪ್ರಸಂಗ ಪ್ರಾಪ್ತವಾದರೂ ಅಳುಕಲಿಲ್ಲ. ಅನಾಮಿಕ ಸತಿಯರು ಹರಿಶ್ಚಂದ್ರನ ಮೇಲೆ ದೂರು ಒಯ್ದರೆ ವಿಶ್ವಾಮಿತ್ರ ನಮಸ್ಕರಿಸಿದ ಹರಿಶ್ಚಂದ್ರನನ್ನು ಒದೆದು ತರಾಟೆಗೆ ತೆಗೆದುಕೊಳ್ಳುತ್ತಾನೆ. ಉಚ್ಚವರ್ಣದೊಂದಿಗೆ ಪ್ರಭುತ್ವ ಬೆಳೆಯಿಸಿಕೊಂಡು ಬಂದಿರುವ ಆದರದ ವಿಪರೀತತೆಯನ್ನು ಇಲ್ಲಿ ಕಲ್ಪಿಸಿಕೊಳ್ಳಬಹುದು.

ಮತ್ತೊಮ್ಮೆ ಕುಲಾಚಾರದ ಪ್ರಶ್ನೆ ಹರಿಶ್ಚಂದ್ರ ವಸಿಷ್ಠರಿಂದ ಚರ್ಚೆಗೊಳಗಾದದ್ದು ೮ನೆಯ ಸಂಧಿಯ ಪೂರ್ವಾರ್ಧದಲ್ಲಿ ವಿವರಗೊಂಡಿದ್ದರೆ ಅದರ ಘೋರ ಪರಿಣಾಮ ಅದೇ ಸಂಧಿಯ ಉತ್ತರಾರ್ಧದಲ್ಲಿ ತೋರಿಬರುತ್ತದೆ. ಮೊದಲೇನೋ ಅನಧಿಕೃತವಾಗಿ ತನ್ನ ವನಪ್ರವೇಶ ಮಾಡಿದ್ದಕ್ಕೆ, ಗಿಡಮರ. ಕೊಳಗಳಿಗೆ ಹಾನಿ ಮಾಡಿದ್ದಕ್ಕೆ, ಬೇಟೆಯಾಡುತ್ತ ಕಾಡು ಹಂದಿಯನ್ನು ನೋಯಿಸಿದ್ದಕ್ಕೆ ಕೋಪಗೊಂಡು ವಿಶ್ವಾಮಿತ್ರ ಹರಿಶ್ಚಂದ್ರನನ್ನು ಜರಿದ. ತರುವಾಯ "ತನ್ನ ಕೋಮಲ ಕನ್ಯೆಯರನ್ನು ಅರಿದರಿದೂ ಸಾಯ

ಹೊಡೆಬಹುದೇ"? ಎಂದು ಮುಖ್ಯ ವಿಷಯಕ್ಕೆ ಬಂದ. "ನಿಮ್ಮ ಸಂಬಂಧಿಗಳು ಎಂದು ಹೇಳಿದ್ದಕ್ಕೆ ಬಿಟ್ಟಿದ್ದೇನೆ. ಮೂಗು ಕೊಯ್ದು ಹೊಟ್ಟೆ ಕಟ್ಟಿ ಬಟ್ಟಬಯಲಲ್ಲಿ ಹೆಂಟ ಎಳಸುತ್ತಿದ್ದೆ" ಎಂದನು ಹರಿಶ್ಚಂದ್ರ. "ಅವರು ಮಾಡಿದ ತಪ್ಪಾದರೂ ಏನು"? ಎಂದು ವಿಶ್ವಾಮಿತ್ರ ಕೇಳಿದರೆ "ಅವರು ನನ್ನ ಮೇಲಿರ್ದ ಸತ್ತಿಗೆಯನ್ನು ಕೊಡು ಇಲ್ಲದಿದ್ದರೆ ನಮಗೆ ಗಂಡನಾಗು ಎಂದರು ಅದಕ್ಕೇ ಹೊಡಿದೆ" ಎಂದು ನಿಜ ಸಂಗತಿಯನ್ನು ಹೇಳುತ್ತಾನೆ. "ಆಗುವುದಿಲ್ಲ ಎಂದು ಹೇಳಬಹುದಿತ್ತಲ್ಲ ಹೊಡೆದದ್ದೇಕೆ"? ಎಂದರೆ ಹರಿಶ್ಚಂದ್ರ "ದೇಶದಲ್ಲೆಲ್ಲ ಇದನ್ನು ಸಾರಿ ಸಾರಿ ನಿನಗೆ ಕೆಟ್ಟ ಹೆಸರು ತರುತ್ತೇವೆ ಎಂದರು" ಎಂದ. ಅದಕ್ಕೆ ವಿಶ್ವಾಮಿತ್ರ "ಹೊಡೆದ ಕೈಗಳನ್ನು ಕತ್ತರಿಸುತ್ತೇನೆ ನಿನ್ನನ್ನು ನಂಬಿದ ದೇಶವನ್ನು ಸುಡುತ್ತೇನೆ." ಎಂದು ಹೆದರಿಸಿದ. ವಿಶ್ವಾಮಿತ್ರನ ಕೋಪಕ್ಕೆ ಹೆದರಿದ ಹರಿಶ್ಚಂದ್ರ ಕ್ಷಮೆ ಕೇಳಿದರೂ ಬಗ್ಗದ ವಿಶ್ವಾಮಿತ್ರ ಹೇಳುತ್ತಾನೆ.

"ನನ್ನ ಕುಮಾರಿಯರ ಮದುವೆಯಾಗು ಎಲ್ಲಾ ವಿರೋಧವನ್ನು ಬಿಡುವೆ"

"ಪ್ರತ್ಯಕ್ಷ ನೀವೆನ್ನನ್ನು ಕರೆದು ಚಂಡಾಲ ಸತಿಯರನ್ನು ಕೂಡಿರೆಂದು ಹೇಳುವರೇ?"

"ಗುರುವೆಂದು ಶಿವನೆಂದು ನಿಮ್ಮಡಿಗಳೆಂದು ನೀ ವಿವರಿಸಿದಂತಿರುವೆನೆಂದು ನೀವೆಂದಂತೆ ನಡೆವೆನೆಂದು ಹೇಳಿ ಈ ಉತ್ತಮಿಕೆಯ ಮಾತಾಡುತ್ತಿರುವೆ"!

"ಹೊಲತಿಯರನಿರಿಸಿಕೋ ಎಂದು ನೀ ಕರುಣಿಸಲುಬಹುದು ನಾನದನ್ನು ಒಪ್ಪಿಕೊಳ್ಳಬಹುದೆ?"

"ಗುರುವಾಜ್ಞೆಯಲ್ಲಿ ಕೆಲವನ್ನು ಮಾಡುವುದು ಕೆಲವನ್ನು ಬಿಡುವುದು ಯೋಗ್ಯವೆ"?

"ನನ್ನ ರೀತಿಯನ್ನು ಪರೀಕ್ಷಿಸಲು ನೀವಿದನ್ನೆಲ್ಲ ಹೇಳುತ್ತಿದ್ದೀರಿ ನಿಮ್ಮ ಮನಸ್ಸನ್ನು ನಾನರಿಯದವನೇ"?

"ನಿನ್ನ ಮನವನ್ನು ಪರೀಕ್ಷಿಸಲೆಂದೇನು ನುಡಿಯುತ್ತಿಲ್ಲ. ಇರುವ ತಾತ್ಪರ್ಯವನ್ನೇ ನುಡಿದೆವು. ನಿನ್ನ ಚಿತ್ತದಲ್ಲಿ ಶಂಕಿಸದೆ ಮದುವೆಯಾಗು"

"ಉತ್ತಮದ ರವಿಕುಲದಲ್ಲಿ ಹುಟ್ಟಿ ಚಂಡಾಲ ಸತಿಯರನ್ನು ಬಯಸಿ ನರಕಾವಳಿಗೆ ಅನಿಮಿತ್ತ ಹೋಗಲಾರೆ"

"ವಿವಿಧ ವೇದಾರ್ಥದೊಳು ನಡೆದು ಹುಸಿಯನ್ನು ಬಿಟ್ಟು, ಲೋಭವನ್ನು ತೊರೆದರೂ ಅರಸರಿಗೆ ನರಕವೆಂಬುದು ತಪ್ಪದು. ಇಂತಿರುವಾಗ ಇಂದು ವದನೆಯರ ಸಂಗದಿಂದ ಈಗೊದಗುವ ಸೌಖ್ಯವನ್ನು ಅನುಭವಿಸು"

"ಹೊಲೆಯರ ಸಂಗವನ್ನು ಮಾಡಿ ನಿಷ್ಕಾರಣವಾಗಿ ಘೋರ ನರಕಾವಳಿಯೊಳು ಬಿದ್ದು ಹೊರಳುವವನಲ್ಲ".

"ಸತಿಯರು ಹೊಲೆಯರೆಂದು ನೆವವೇಕೆ? ಅವರ ಹಡೆದ ನನ್ನನೇ ಹೊಲೆಯನೆಂದಾಡಿದಂತಾಯಿತು".

"ಜಲದ ನಡುವೆ ಬಿಂಬಿಸುವ ರವಿಹೊಲೆಯನೆ"?

"ಜಗಚ್ಚಕ್ಷುವೆನಿಸಿದ ಸೂರ್ಯಕುಲ ಲಲಾಮ ಹರಿಶ್ಚಂದ್ರನು ವಿಶ್ವಾಮಿತ್ರ ಮುನಿಸುತೆಯರನ್ನು ಮದುವೆಯಾದ ಎಂಬೊಂದು ತೇಜವನ್ನು ಕೊಡು ಕೈಮುಗಿದು ಬೇಡಿಕೊಳ್ಳುತ್ತೇನೆ".

"ಹೀಗೆ ಎಡೆವಿಡದೆ ಬೇಡಿ ಕಾಡುವಿರಾದರೆ ಕಡೆಗೆ ನನ್ನ ಸರ್ವಸ್ವವನ್ನಾದರೂ ಕೊಡುತ್ತೇನೆ. ನಿಮ್ಮ ಮಕ್ಕಳನ್ನು ವರಿಸಲಾರೆ"

"ತಥಾಸ್ತು" !

–ಬೇಡಿದರೆ ಸರ್ವಸ್ವವನ್ನೇ ಕೊಡುವೆನೆಂದ ಹರಿಶ್ಚಂದ್ರನ ಸಹಜವಾದ ಮಾತನ್ನೇ ವಿಶ್ವಾಮಿತ್ರ ಹಿಡಿದು ಅವನ ರಾಜ್ಯದೈಸಿರಿಯನ್ನೆಲ್ಲ ಕಬಳಿಸಿದ. ವಿಶ್ವಾಮಿತ್ರನ ಮುಂದಿನ ನಡೆಯೆಲ್ಲ ಹರಿಶ್ಚಂದ್ರನ ಬದುಕಿಗೆ ದುರಂತವನ್ನು ತಂದಿತು.

ಇಲ್ಲಿಯ ಸಂಭಾಷಣೆಯಲ್ಲಿ ವಿಶ್ವಾಮಿತ್ರನ ಬೇಡಿಕೆಗೆ ಸ್ಪಂದಿಸದ ಹರಿಶ್ಚಂದ್ರನ ನಿಶ್ಚಲತೆ ನಿಮ್ನವರ್ಗವನ್ನು ದೂಷಿಸುತ್ತ ಹೇಗೆ ದೂರವಿಡುತ್ತ ಹೋಗುತ್ತದೆಂಬುದು ಗಮನಾರ್ಹ ಸಂಗತಿ. ನಿಮ್ಮ ಮಕ್ಕಳನ್ನು ಮದುವೆಯಾಗುವುದಿಲ್ಲ ಎನ್ನುವುದು ಬೇರೆ; ಅವರು ಹೊಲತಿಯರೆಂದು ಮತ್ತೆ ಮತ್ತೆ ಉಚ್ಚರಿಸಿ ಅವಮಾನಿಸುವುದು ಬೇರೆ. ಸತ್ಯವಂತನಾದ ಹರಿಶ್ಚಂದ್ರ ಹೀಗೆಲ್ಲ ಕುಲವೆತ್ತಿ ಹಿಂಸಿಸುವುದು ಸರಿಯೇ ? ಎಂಬ ಮಾತಿಲ್ಲಿ ಅಪ್ರಸ್ತುತ. ಈ ಹಿಂದೆಯೇ ಸ್ಪಷ್ಟಪಡಿಸಿರುವಂತೆ ರಾಘವಾಂಕನಿಗೆ ಹರಿಶ್ಚಂದ್ರನ ಮುಖಾಂತರ ಕುಲಭೇದದ ವಾಸ್ತವವನ್ನು ವಿವರಿಸಬೇಕಾಗಿದೆ.

ವಿಶ್ವಾಮಿತ್ರ ಅನಾಮಿಕ ಸತಿಯರನ್ನು ಮದುವೆಯಾಗಲು ಕೊನೆಯವರೆಗೂ ಹರಿಶ್ಚಂದ್ರನನ್ನು ಕಾಡುತ್ತಾನೆ. ಹರಿಶ್ಚಂದ್ರನು ತನ್ನ ಸರ್ವಸ್ವವನ್ನೆಲ್ಲ ಮುನಿಗೊಪ್ಪಿಸಿ ಹೊರಟ ಉದ್ವಿಗ್ನಸಂದರ್ಭದಲ್ಲಿ ಎಲ್ಲರೂ ಗೋಳಾಡುತ್ತಿರುವಾಗ ವಿಶ್ವಾಮಿತ್ರ ಹರಿಶ್ಚಂದ್ರನ ಕೈಹಿಡಿದು ಆಶೆಯ ಬಲೆಯೊಡ್ಡುತ್ತಾನೆ.

ಈ ಕೋಶವೀ ಕಾಂತೆಯೀ ಕುವರನೀ ಮಂತ್ರಿ
ಯೀ ಕಾಮಿನೀಜನಂ ಮರುಗದಂತರಸಾಗ
ಬೇಕಾದಡೆನ್ನ ಮಕ್ಕಳ ಮದುವೆಯಾಗು ಕಾಡದೆ ಬಿಟ್ಟು ಹೋಹೆನೆಂದ (೮–೭೫)

ದಟ್ಟ ಕಾನನದಲ್ಲಿ ಹಾವು, ಚೇಳು, ಹುಲಿ, ಕರಡಿಗಳ ಮಧ್ಯೆ ಸತಿ–ಸುತ–ಮಂತ್ರಿಯೊಂದಿಗೆ ಕಷ್ಟಪಡುತ್ತಿದ್ದ ಹರಿಶ್ಚಂದ್ರನಿಗೆ ತೆರಕಾರ ನಕ್ಷತ್ರಕ ಹೇಳಿದ್ದೂ ಇದನ್ನೇ: "ನೀನಡವಿಗುಜಿಯಾಗಲೇಕೆ ಇವರ ನೋಯಿಸಲೇಕೆ ಕಡು ಮೂರ್ಖತನವ ಬಿಟ್ಟನ್ನಾದೊಡಂ ಮುನಿಪನೆಂದುದಂ ಮಾಡು". ಇದು ನಕ್ಷತ್ರನದು ಎನ್ನುವುದಕ್ಕಿಂತ ನಕ್ಷತ್ರಕನ ಮುಖಾಂತರ ಬಂದ ಕೌಶಿಕನ ಮಾತು.

ಚಂದ್ರಮತಿ ಕಾಶಿರಾಜನ ಮಗನನ್ನು ಕೊಂದ ಅಪವಾದಕ್ಕೆ ಗುರಿಯಾಗಿ ರಾಜಾಜ್ಞೆಯಂತೆ ಅವಳ ವಧೆಗೆ ಹರಿಶ್ಚಂದ್ರ ಸಿದ್ಧನಾದ ಸಂದರ್ಭದಲ್ಲಿ ಕೊನೆಯ ಪ್ರಯತ್ನವೆಂಬಂತೆ ಆಕಾಶದಲ್ಲಿ ನಿಂತುಕೊಂಡು ಕೌಶಿಕಮುನಿ ಹೇಳುತ್ತಾನೆ:

.................................ಹೊಡೆಯಬೇಡೆನ್ನನಂ
ದನೆಯರಂ ಮದುವೆಯಾದಡೆ ಸತ್ತಮಗನನೆತ್ತುವೆನಿವಳ ತಲೆಗಾವೆನು
ವಿನಯದಿಂ ಕೊಂಡ ಧನಮಂ ಕೊಟ್ಟು ನಿನ್ನ ಬಂ

ಧನ ಮೋಕ್ಷಮಂ ಮಾಡಿ ರಾಜ್ಯಮಂ ಪೊಗಿಸಿ ಮು
ನ್ನಿನ ಪರಿಯಲಿರಿಸುವೆಂ (೧೩-೧೬)

ವಿಶ್ವಾಮಿತ್ರನು ಎಷ್ಟೇ ಕಾಡಿದರೂ ಎಷ್ಟೇ ಆಮಿಷ ತೋರಿಸಿದರೂ ಕೊನೆಯವರೆಗೂ ಹರಿಶ್ಚಂದ್ರನು ತನ್ನ ಕುಲಗೌರವವನ್ನು ಕಾಪಾಡಿಕೊಂಡು ಬಂದ. ಹೊಲತಿಯರನ್ನು ಮದುವೆಯಾಗಿ ಜಾತಿನಿರಸನ ನೀತಿಯನ್ನು ಹರಿಶ್ಚಂದ್ರ ಕಾಪಾಡಿಕೊಳ್ಳಬೇಕಿತ್ತು ಎಂದು ವಾದಿಸುವುದು ಪ್ರಸ್ತುತ ಪ್ರಬಂಧ ಭಾಗದ ಉದ್ದೇಶ ಖಂಡಿತವಾಗಿಯೂ ಅಲ್ಲ. ಅವನು ಸತ್ಯಸಂಧನಾಗಿ ಎಂಥ ಕಷ್ಟಕಾಲದಲ್ಲಿಯೂ ಮಾತಿಗೆ ತಪ್ಪದ ಆದರ್ಶವನ್ನು ಕಾಪಾಡಿಕೊಂಡು ಬಂದಿದ್ದು ಉಪಮಾನವಿಲ್ಲದ ಅವನ ಮೌಲ್ಯ ನಿಷ್ಠೆಯನ್ನು ಪ್ರತಿಪಾದಿಸುತ್ತದೆ. ಈ ಪ್ರಸಂಗದಲ್ಲಿ ರಾಘವಾಂಕನಿಗೆ ಅಷ್ಟೇ ಮುಖ್ಯವಾಗಿ ಹೇಳಬೇಕೆಂದಿರುವುದು ತನ್ನ ಕಾಲದ ಜಾತಿವಿಭೇದ ಭಾವನೆಗಳನ್ನು; ಅವುಗಳಡಿಯಲ್ಲಿ ಜನಸಾಮಾನ್ಯರು ಅನುಭವಿಸಿದ ಮಾನಸಿಕ ಹಿಂಸೆಯನ್ನು. ಇದು ಇನ್ನೂ ನಿಖರವಾಗಿ ತೋರುವುದು ಹರಿಶ್ಚಂದ್ರ ಚಾಂಡಾಲನ ಸೇವಕನಾದ ಸಂದರ್ಭದಲ್ಲಿ; ಚಂದ್ರಮತಿ ವಿಪ್ರನ ದಾಸಿಯಾದ ಸಂದರ್ಭದಲ್ಲಿ.

ಹರಿಶ್ಚಂದ್ರ ಚಾಂಡಾಲನ ಕಿಂಕರನಾಗಿ:

ಬದುಕು ತಂದಿಕ್ಕುವ ಅನಿವಾರ್ಯತೆಗಳು ಮನುಷ್ಯನನ್ನು ಎಲ್ಲಿಗೆ ತಂದು ನಿಲ್ಲಿಸುತ್ತವೆಯೋ ಹೇಳಲು ಬಾರದು. ಕುಲದ ಕಾರಣವಾಗಿ ಹೊಲತಿಯರನ್ನು ಹೀಯಾಳಿಸಿ ದೂರ ಸರಿಸಿದ ಹರಿಶ್ಚಂದ್ರ ಚಾಂಡಾಲನೊಬ್ಬನ ಕಿಂಕರನಾಗಿ ಅವನ ಸೇವೆಗೆ ನಿಂತುದು ವಿಪರ್ಯಾಸ ಮತ್ತು ಅನಿವಾರ್ಯತೆ. ಹೊಲತಿಯರು ಎಷ್ಟೇ ಬೇಡಿಕೊಂಡರೂ ಎಷ್ಟೇ ವಾದಿಸಿದರೂ ಹರಿಶ್ಚಂದ್ರ ಅವರ ವಾದವನ್ನು ಪುರಸ್ಕರಿಸದಿರುವುದು ಹರಿಶ್ಚಂದ್ರನಲ್ಲಿ ಆಳವಾಗಿ ಬೇರೂರಿದ ಕುಲಪ್ರತಿಷ್ಠೆಯನ್ನು ಹೇಳುತ್ತದೆ. ಅದು ಎಷ್ಟು ಆಳವಾಗಿ ಬೇರೂರಿದೆ ಎಂದರೆ ತನ್ನನ್ನು ಮಾರಿಕೊಳ್ಳುವುದಾಗಿ ಘೋಷಿಸಿಕೊಂಡು ಕಾಶಿಯ ಬೀದಿಗಳಲ್ಲಿ ಹೋಗುತ್ತಿರುವಾಗಲೂ ಅದು ಸ್ಫೋಟಗೊಳ್ಳುತ್ತದೆ.

"ನಾನು ಸೂರ್ಯವಂಶದ ತ್ರಿಶಂಕುರಾಜನ ಹಿರಿಯ ಮಗನಾದ ಹರಿಶ್ಚಂದ್ರ. ಈಗ ನನ್ನನ್ನು ಮಾರಿಕೊಳ್ಳುತ್ತೇನೆ. ನನ್ನನ್ನು ಯಾರಾದರೂ ಖರೀದಿಸಿ ನನ್ನ ಸೇವೆ ತೆಗೆದುಕೊಳ್ಳಬಹುದು" ಎಂದು ಹರಿಶ್ಚಂದ್ರನು ಬೀದಿ ಬೀದಿಗಳಲ್ಲಿ ಸಾರಿಕೊಂಡು ಹೊರಟನು. ಇದು ಚಾಂಡಾಲ ವೀರಬಾಹುಕನ ಕಿವಿಗೆ ಬಿದ್ದು ತನ್ನ ಸೇವಕನನ್ನು ಕಳುಹಿಸಿದ. ಅವನು ಬಂದು "ನಮ್ಮ ವೀರಬಾಹುಕ ನಿನ್ನನ್ನು ಕೊಳ್ಳುತ್ತಾನೆ ಬೆಲೆಯೇನು?" ಎಂದು ಕೇಳಿದನು. ಸೇವಕನ ಈ ರೀತಿ, ಮಾತಿಗೆ ಅರಸನ ಕೋಪ ಕೆರಳಿತು. "ಸೂರ್ಯವಂಶದಲ್ಲಿ ಹುಟ್ಟಿ, ವಸಿಷ್ಠಮುನಿಯ ಕಾರುಣ್ಯವನ್ನು ಪಡೆದವನು ನಾನು, ಇಂತಹ ನನಗೆ ಅಂಜದೆ ಅಳುಕದೆ ನನ್ನೆದುರು ಬಂದು ಇವನು ತನ್ನೊಡೆಯನಿಗೆ ದಾಸನಾಗು ಎಂದು ಕೇಳುತ್ತಿದ್ದಾನೆ"!

ಮೃಡಮೂರ್ತಿ ವಾಸಿಷ್ಠಮುನಿಯ ಕಾರುಣ್ಯಮಂ
ಪಡೆದೆನ್ನನೀ ಹೊಲೆಯ ಮಾರುಗೊಂಡಪನೆಂಬ
ನುಡಿವ ಬಲುಹಂ ನೋಡು ನೋಡೆಂದು ಕಡುಮುಳಿದು
ಕೋಪಿಸಿದನವನೀಶನು(೧೧-೧೮)

ನಡುಗದೆ ಅಂಜದೆ ಹೆದಱದೋಸರಿದಕಟಕಟ
ಕಡೆಯ ಹೊಲೆಯುಂ ಮೇರೆದಪ್ಪಿ ಬಂದೆನ್ನ ತ
ನ್ನೊಡೆಯಂಗೆ ದಾಸನಾಗೀಗಳೆಂಬುದಿದು ಕಾಲಗುಣವೋ ಎನ್ನನು
ಎಡೆಗೊಂಡ ಕರ್ಮಫಲವೋ............................ (೧೧-೧೯)

ತನ್ನ ಸೇವಕನನ್ನು ಜರಿಯುತ್ತಿರುವುದನ್ನು ಕೇಳಿ

ವೀರಬಾಹುಕ: "ಯಾರನ್ನು ನೀನುಬಯ್ಯುತ್ತಿರುವುದು"ಎಂದ

ಹರಿಶ್ಚಂದ್ರ: "ನಿನ್ನ ಸೇವಕನನ್ನು

ವೀರಬಾಹುಕ: "ಅದೇಕೇ?"

ಹರಿಶ್ಚಂದ್ರ: ಎನ್ನನ್ನು ತಿಳಿತಿಳಿದೂ ಹೊಲೆಯನಿಗೆ ಆಳಾಗುಬಾ ಎಂದು ನುಡಿದನು, ಮೇಲು ಕೀಳೆನ್ನದೆ ಹೀಗೆ ನುಡಿಯಬಹುದೆ?

ವೀರಬಾಹುಕ: ಮೇಲಾರು? ಕೀಳಾರು? ಹದುಳದಿಂದಿರುವ ನಾನು ಚಾಂಡಾಲನೋ ಹುಸಿ ಹೊಲೆಯನ್ನು ಹೊರುವ ನೀನು ಚಾಂಡಾಲನೊ ?

ಹರಿಶ್ಚಂದ್ರ: ನಾನು ಹುಸಿದುದೇನು ?

ವೀರಬಾಹುಕ: ಹೊನ್ನುಳ್ಳಯಾರಾದರೂ ಧನಿಕರು ಕೊಳ್ಳುವವರು ಬನ್ನಿ ನನ್ನನ್ನು ಮಾರಿಕೊಳ್ಳುತ್ತೇನೆ ಎಂದೆ.

ಹರಿಶ್ಚಂದ್ರ: ಹೌದು ಹಾಗೆಂದದ್ದು ದಿಟ.

ವೀರಬಾಹುಕ: ಸತ್ಯವಂತನೆಂದು ಬಗೆದು ನಾನು ಬೇಡಿದೆ. ಉತ್ತಮ ದ್ವಿಜರು ಕೊಂಡುಕೊಳ್ಳಿ ಎಂದು ನೀನಾಡಿದೆಯಾ? ಹೇಳು ಭೂಪಾಲ, ನಿನ್ನ ನುಡಿ ನಿನಗೆ ಹಗೆಯಾಯಿತು. ನಾನು ಕಂಡದ್ದನ್ನೇ ಮಾತನಾಡಿದ್ದೇನೆ. ಈ ಹೊಲೆಯ ಹುಸಿಯನ್ನು ಹೊರುವವನು ಹೊಲೆಯನಲ್ಲದೆ ಬೇರಾರು? ಅರಸುತನಕೆಡುವಂತೆ ಹುಸಿಯಾಡುತ್ತೀ ನಿನಗೆ ನರಕ ತಪ್ಪಿದ್ದಲ್ಲ. ನಿನ್ನೊಡನೆ(ನಿನ್ನಂಥವನೊಡನೆ) ನುಡಿದು ನಾನು ದೋಷ ಹೊರಲಾರೆ.

- ಎಂದು ಹೇಳಿದ ವೀರಬಾಹುಕನು ಹಿಂದಿರುಗಿ ನಡೆದುಬಿಟ್ಟನು.

ವೀರಬಾಹುಕನ ಸೇವಕ ಮತ್ತು ವೀರಬಾಹುಕನೊಂದಿಗೆ ಹರಿಶ್ಚಂದ್ರ ನಡೆಸಿದ ಈ ಸಂವಾದದಲ್ಲಿ ಅನೇಕ ವಿಚಾರಾರ್ಹ ಅಂಶಗಳಿವೆ. ೧. ಚಾಂಡಾಲ ವೀರ ಬಾಹುಕನ ಸೇವಕನಾದವನು ತನ್ನ ಒಡೆಯನ ಸೇವೆಗಾಗಿ ಹರಿಶ್ಚಂದ್ರನನ್ನು ಕೇಳುತ್ತಿದ್ದಾನೆ. ೨. ಅವನು ತಿಳಿದೂ ತಿಳಿದೂ ರಾಜನಾದ ನನ್ನನ್ನು ಚಂಡಾಲನ ಸೇವೆಗಾಗಿ ಕರೆದು ಅವಮಾನಿಸುತ್ತಿದ್ದಾನೆ. ಮೇಲು ಕೀಳೆನ್ನದೆ ಹೀಗೆ ನುಡಿಯಬಹುದೆ ? ಎನ್ನುವ ಹರಿಶ್ಚಂದ್ರನ ಮಾತು ೩. ಹರಿಶ್ಚಂದ್ರ ಸಂಪತ್ತುಳ್ಳವರು ಯಾರಾದರೂ ಕೊಳ್ಳಿರೆಂದನೇ ಹೊರತು ಉತ್ತಮ ಕುಲದವರೇ ಕೊಳ್ಳಿರೆಂದು ಹೇಳಲಿಲ್ಲ.

ಹೀಗೆ ಪ್ರಧಾನವೆನ್ನಿಸುವ ಈ ಮೂರು ಅಂಶಗಳಲ್ಲಿ ಮುಖಾಮುಖಿಯಾಗಿರುವುದು ಕುಲಪ್ರತಿಷ್ಠೆ ಮತ್ತು ವಾಸ್ತವ ಸ್ಥಿತಿ. ಹೊಲತಿಯರೆದುರಿನಲ್ಲಿ ಕೋಪವನ್ನು ಪ್ರಕಟಿಸುವ ಹರಿಶ್ಚಂದ್ರನಿಗೆ ಕಾಶಿಯಲ್ಲಿ ತನ್ನನ್ನು ಮಾರಿಕೊಳ್ಳುವುದನ್ನು ಘೋಷಿಸುವ ಸಂದರ್ಭದಲ್ಲಿ ಕೀಳರಿಮೆ ಉಂಟಾಗಿದೆ. ಚಾಂಡಾಲನಾದ ವೀರಬಾಹುಕನ ಸೇವಕ ಬಂದು ತನ್ನ ಬೆಲೆ ಕೇಳುವ ಹೊತ್ತಿಗೆ ಕೋಪ, ಕೀಳರಿಮೆ ಎರಡೂ ಸೇರಿಕೊಂಡು ಹರಿಶ್ಚಂದ್ರ ಕ್ರುದ್ಧನಾಗಿಬಿಡುತ್ತಾನೆ. ಅಂತೆಯೇ ಪಲ್ಲಟಿಸುವ ಈ ಚಿತ್ರ ವೃತ್ತಿಯಿಂದಾಗಿ ವೀರಬಾಹುಕನೊಂದಿಗೆ ವಾದಕ್ಕಿಳಿಯುತ್ತಾನೆ. ಚಂಡಾಲನ ಸೇವಕ ಅರಿತೂ ಅರಿತೂ ತನ್ನ ಬೆಲೆ ಕೇಳಿ ಅವಮಾನಿಸುತ್ತಿದ್ದಾನೆ ಎನ್ನುವುದು ಹರಿಶ್ಚಂದ್ರನ ತಿಳುವಳಿಕೆ. ತನ್ನನ್ನು ಯಾರಾದರೂ ಕೊಂಡುಕೊಳ್ಳಿ ಎಂದು ಹರಿಶ್ಚಂದ್ರ ಸಾರಿಕೊಂಡು ಬೀದಿಯಲ್ಲಿ ಹೋಗುತ್ತಿದ್ದರೆ ಅವನ ಬೆಲೆಯನ್ನು ವೀರಬಾಹುಕನ ಸೇವಕ ಕೇಳಿದ್ದು ಅತ್ಯಂತ ಸಹಜವಾಗಿದ್ದರೂ ಅವನು ತನ್ನನ್ನು ಬೇಕೆಂತಲೇ ಅವಮಾನಿಸುತ್ತಿದ್ದಾನೆ ಎಂಬುದಕ್ಕೆ ಯಾವ ಆಧಾರವೂ ಇಲ್ಲ.

ಹರಿಶ್ಚಂದ್ರ ತನ್ನನ್ನು ಯಾರಾದರೂ ಕೊಂಡುಕೊಳ್ಳಿ ಎಂದು ಹೇಳುತ್ರ ಹೋಗುವಾಗ ಶ್ರೇಷ್ಠ ಕುಲದವರು ಮಾತ್ರ ತನ್ನನ್ನು ಖರೀದಿಸಬೇಕೆಂದೇನೂ ಹೇಳಲಿಲ್ಲ. ಅದನ್ನೇ ವೀರಬಾಹುಕ ಮುಖ್ಯವಾಗಿ ಹಿಡಿದು 'ದ್ವಿಜರು(ಮಾತ್ರ)ಕೊಂಬುದೆಂದು ಮುನ್ನ ನೀನಾಡಿದ್ದುಂಟೇ ಹೇಳು ಭೂಪಾಲ'? ಎಂದು ಗಟ್ಟಿಯಾಗಿ ಪ್ರಶ್ನಿಸಿದಾಗ ಹರಿಶ್ಚಂದ್ರನಿಗೆ ಅದನ್ನು ಒಪ್ಪಿಕೊಳ್ಳದೆ ಬೇರೆ ದಾರಿಯಿರಲಿಲ್ಲ. ಮೊದಲು ಯಾರಾದರೂ ಕೊಳ್ಳಬಹುದೆಂದು ಹೇಳಿ ಈಗ ಕೊಳ್ಳಲಿರುವ ತಾನು ಚಾಂಡಾಲನೆಂದು ಅರಿತು ಮಾರಿಕೊಳ್ಳಲು ಸಿದ್ಧನಿಲ್ಲದಿರುವುದು ವೀರಬಾಹುವಿನ ಕುಲವನ್ನು ಚುಚ್ಚಿದಂತಾಗುತ್ತದೆ. ಹಾಗೇ ವಿಪ್ರರಿಗೆ ನನ್ನನ್ನು ಮಾರಿಕೊಳ್ಳುತ್ತೇನೆ ಎಂದು ಮೊದಲೇ ಹೇಳಬಹುದಾಗಿತ್ತು ಎನ್ನುವಲ್ಲಿ ವೀರಬಾಹುಕನಿಗೆ ಮೇಲ್ವರ್ಗದವರನ್ನು ಕುರಿತಾಗಿ ತಣ್ಣನೆಯ ಪ್ರತಿಭಟನೆಯಿದೆ.

ಸಾಲದ ಒತ್ತಡದಲ್ಲಿದ್ದ ಹರಿಶ್ಚಂದ್ರ ಮುನಿಸಿಕೊಂಡು ಹಿಂತಿರುಗುತ್ತಿದ್ದ ವೀರಬಾಹುಕನನ್ನು ಕರೆದು "ಸೂರ್ಯವಂಶಕ್ಕೆ ಕುಂದುಬಂದರು ಸರಿಯೆ ನಿನ್ನ ದಾಸನಾಗುತ್ತೇನೆ. ನನ್ನ ಸಾಲವನ್ನು ತೀರಿಸು" ಎನ್ನುತ್ತಾನೆ. ವೀರಬಾಹುಕ ಹರಿಶ್ಚಂದ್ರನ ಮಾತನ್ನು ಒಡಂಬಟ್ಟು ಅವನ ಸಾಲ ತೀರಿಸಿಯಾದಮೇಲೆ ಅವನನ್ನು ತನ್ನ ಮನೆಗೆ ಕರೆದುಕೊಂಡು ಬಂದ. ಹೀಗೆ ಹರಿಶ್ಚಂದ್ರನೊಂದಿಗೆ ವೀರಬಾಹುಕ ತನ್ನ ಮನೆಗೆ ಬಂದಾದ ಮೇಲೆ ಹರಿಶ್ಚಂದ್ರನೊಡನೆ ನಡೆದುಕೊಂಡ ರೀತಿ ಶ್ರೇಣಿಕೃತ ಸಮಾಜದ ವಿಭೇದವನ್ನು ಇನ್ನೊಂದು ರೀತಿಯಲ್ಲಿ ಸ್ಫುಟಗೊಳಿಸುತ್ತದೆ. ವೀರಬಾಹುಕನು ಮಂಚದ ಮೇಲೆ ಕುಳಿತುಕೊಂಡು ಮದ್ಯ ಕುಡಿಯುತ್ತ ನೆಲದ ಮೇಲೆ ಕುಳಿತುಕೊಂಡ ಹರಿಶ್ಚಂದ್ರನ ಹೆಗಲ ಮೇಲೆ ತನ್ನ ಕಾಲುಗಳನ್ನು ಹಾಕಿದನು.

> .... ಮದ್ಯವನೀಂಟುತಿರ್ಪ ಪತಿಯಂ ಕಂಡು
> ನೆಲದಲ್ಲಿ ಕುಳ್ಳಿರ್ದ ರವಿಕುಲನ ಹೆಗಲಮೇ
> ಲೆತ್ತಿ ನೀಡಿದನು ಕಾಲಂ ಕಾಲನೊಂದೆರಡು ಕುಲಗಿರಿಯ ಭಾರವೆನಲು
>
> (೧೧-೩೧)

- ಹರಿಶ್ಚಂದ್ರನು ತನ್ನನ್ನು ಚಾಂಡಾಲನೆಂದು ಕೀಳಾಗಿ ಕಂಡನೆಂದು ವಾದಿಸುವ ವೀರಬಾಹುಕ ತನ್ನ ಸೇವಕನನ್ನು ಈ ರೀತಿ ನಡೆಸಿಕೊಳ್ಳುತ್ತಿದ್ದಾನೆ. ತಾನು ಇವನನ್ನು ಖರೀದಿಸಿದ ಮೇಲೆ ಇವನು ತನ್ನ ಸೇವೆ ಮಾಡಿಕೊಂಡಿರುವ ಸೇವಕ, ಅವನ ಮೇಲೆ ತನ್ನ ಅಧಿಕಾರವಿದೆಯೆಂದು ಭಾವಿಸುವ ವೀರಬಾಹುಕನ ನಡತೆ ಶ್ರೇಣಿ ಭಾವ ಕೆಳಮುಖಕ್ಕೆ ಚಲಿಸಿದಂತೆ ಹೇಗೆ ತನ್ನ ಬಲಪ್ರಯೋಗವನ್ನು ವರ್ಗಾಯಿಸುತ್ತದೆ

ಎಂಬುದನ್ನು ಹೇಳುತ್ತದೆ. ಈ ಬಲಪ್ರಯೋಗ ಕೇವಲ ದೈಹಿಕವಾಗಿಯೇ ಇರಬೇಕೆಂದೇನೂ ಇಲ್ಲ. ಅದು ಮೇಲುಸ್ತರ ಕೊಡುವ ಮಾನಸಿಕ ಹಿಂಸೆಯೂ ಆಗಿರಬಹುದು. ಮಂಚದ ಮೇಲೆ ಕುಳಿತ ವೀರಬಾಹುಕನ ಶ್ರೇಣಿ ಭಾವ ನೆಲದ ಮೇಲೆ ಕುಳಿತ ಅಸಹಾಯಕ ಹರಿಶ್ಚಂದ್ರನ ಮಾನಸಿಕ ಸ್ಥಿತಿಯನ್ನು ಗ್ರಹಿಸಲಾರದು.

ಹರಿಶ್ಚಂದ್ರ ಹೊಲತಿಯರನ್ನು ಮದುವೆಯಾಗಲು ನಿರಾಕರಿಸುವದು ಮತ್ತು ಚಾಂಡಾಲನಲ್ಲಿ ಕಿಂಕರನಾಗುವದಕ್ಕೆ ಒಪ್ಪಿಕೊಳ್ಳುವದು ಎರಡೂ ಅಂಶಗಳು ಸಮಾಜದ ಕುಲನೀತಿಯನ್ನು ಹೇಳುತ್ತವೆ. ಇಲ್ಲಿ ಹರಿಶ್ಚಂದ್ರನ ಮೂಲಕ ರಾಘವಾಂಕ ವರ್ಣಸಂಕರವನ್ನು ತರುತ್ತಾನೆ. ಆದರೆ ಈ ವರ್ಣಸಂಕರ ವೃತ್ತಿಯ ಮೂಲಕವಾಗುವದಕ್ಕೆ ಮಾತ್ರ ಒಪ್ಪಿಗೆಯಿದೆ. ಅದೇ ಮದುವೆಯಿಂದಾಗುವ ವರ್ಣಸಂಕರವನ್ನು ನಿರಾಕರಿಸಲಾಗುತ್ತದೆ. ಕಾರಣ ಮದುವೆ ರಕ್ತಸಂಬಂಧವನ್ನು ಪೀಳಿಗೆಯಿಂದ ಪೀಳಿಗೆಗೆ ರವಾನಿಸುತ್ತದೆ. ಆದ್ದರಿಂದ ವರ್ಣಸಂಕರದ ಮೂಲಕ ಮದುವೆಯಾದರೆ ರಕ್ತಕೆಡುತ್ತದೆ, ಕುಲಕೆಡುತ್ತದೆ ಎಂಬ ಮನೋಭಾವ ಎಲ್ಲಾ ಕಾಲಕ್ಕೂ ಕೆಲಸ ಮಾಡುತ್ತಲೇ ಇದೆ. ಇದೇ ಮನೋಭಾವ ಹರಿಶ್ಚಂದ್ರನಲ್ಲೂ ರಾಘವಾಂಕನ ಕಾಲದಲ್ಲೂ ಇದ್ದಿರಲು ಸಾಕು.

ಚಂದ್ರಮತಿ ದಾಸಿಯಾಗಿ:

ಹರಿಶ್ಚಂದ್ರ ತನ್ನ ಸರ್ವಸ್ವವನ್ನೆಲ್ಲ ಕೌಶಿಕನಿಗೆ ಒಪ್ಪಿಸಿದ ಮೇಲೆ ಕೊಡುವ ಸಾಲಕ್ಕಾಗಿ ಚಂದ್ರಮತಿ ವಿಪ್ರನಲ್ಲಿ ದಾಸಿಯಾಗಬೇಕಾಯಿತು. ಅವಳ ಮುಂಚಿನ ರಾಣಿತ್ವ ಕಳೆದುಹೋಗಿ ಅವಳು ದಾಸಿತ್ವವನ್ನು ವಹಿಸಿಕೊಂಡ ಮೇಲೆ ಸಾಮಾನ್ಯ ಮನುಷ್ಯಳೇ ಆಗಿಬಿಡುತ್ತಾಳೆ. ಅವಳು ದಾಸಿಯಾದ ಮನೆಯ ಪರಿಸರವೂ ಹಾಗಿದೆ. ವಿಪ್ರನಿಗೆ ದಾಸಿಯಾಗಿ ಬರುವ ಚಂದ್ರಮತಿ ಮಾನಸಿಕ ಸಿದ್ಧತೆ ಮಾಡಿಕೊಂಡಿದ್ದಾಳೆ. ತಾನು ಅವರು ನಿರ್ವಹಿಸಿಕೊಡುವ ಕೆಲಸವನ್ನು ಮಾಡಬೇಕು ನಿಜ. ಆದರೆ ಅವಳ ಒಡೆಯರ ಮನೆಯೇ ಅಮಾನವೀಯವಾಗಿತ್ತು. ಚಂದ್ರಮತಿಯನ್ನು ಒತ್ತೆಯಾಗಿಟ್ಟುಕೊಂಡಿದ್ದ ಯಜಮಾನನ ಮನೆಯ ಕಠೋರತೆಯನ್ನು ರಾಘವಾಂಕ ಹೀಗೆ ಬಣ್ಣಿಸುತ್ತಾನೆ: ಅವರ ನಿಳಯ ರಕ್ಕಸಿಯ ಮಾಡು, ಹಾವಿನ ಹೇಳಿಗೆ ಅಂತಕನ ನಗರ, ಮೃತ್ಯುವಿನ ಬಾಣಸದ ಹಂತಿ, ಮಾರಿಯ ಮೂರಿಯಾಟದೆಡೆ (೧೨-೨) ಹೀಗಿರುವ ಮನೆಯಲ್ಲಿ ವಾಸಿಸುವವರ ಸ್ವಭಾವ ಪರಿಚಯ ಇನ್ನೂ ಕಠೋರ.

ಒಡೆಯನತಿ ಕೋಪಿ ಹೆಂಡತಿ ಮಹಾಮೂರ್ಖೆ ಮಗ
ಕಡು ಧೂರ್ತ ಸೊಸೆಯಾದಡಧಿಕ ನಿಷ್ಠುರೆ ಮನೆಯ
ನಡೆವವರು ದುರ್ಜನರು ನೆರೆಮನೆಯವರು ಮಿಥ್ಯವಾದಿಗಳು ಪಶುಗಳಗಡು
ಅಡಿಗಡಿಗೆ ಕೋಪಿಸುವ ಸಾಯೆ ಸೆದೆಬಡಿವ ಕಾ
ಳ್ಗೆಡೆವ ಕರಕರಿಪ ಸೆಣಸುವ ತಪ್ಪ ಸಾಧಿಸುವ
ಕೆಡೆಯೊದೆವ ಮಾರಿಗಾಜಿದೆ ಸತ್ತು ಹುಟ್ಟುತಿಹರವನಿಪನ ಸತಿಪುತ್ರರು(೧೨-೩)

– ಮನೆಮಂದಿಯಷ್ಟೇ ಅಲ್ಲ, ಅವರ ಮನೆಯ ದನಕರುಗಳು ಸಹಿತ ತುಂಟ ಸ್ವಭಾವದವಾಗಿರುವುದಿಲ್ಲಿ ವಿಶೇಷ.

ಮನೆಯವರ ಕಷ್ಟ ನಿಷ್ಠುರಗಳ ಮಧ್ಯ ಬಾಳುತ್ತಿದ್ದ ಚಂದ್ರಮತಿಯು ಪ್ರತಿದಿನವೂ ಮಾಡುವ ಕೆಲಸಗಳೆಲ್ಲ ಸಾಮಾನ್ಯ ಮಹಿಳೆಯ ಕೆಲಸಗಳೇ ಆಗಿದ್ದವು. ಎಡೆಬಿಡದೆ ಹಲವು ಸಲ ಒಡೆಯನ ಮನೆಗೆ ನೀರು ತರಬೇಕು, ಭತ್ತವನ್ನು ಕುಟ್ಟಬೇಕು. ಇಷ್ಟೆಲ್ಲ ಕೆಲಸ ಮಾಡುವ ಚಂದ್ರಮತಿ ಅವರಿಕ್ಕಿದಷ್ಟೇ

ಊಟಮಾಡಬೇಕು. ಮಗ ಲೋಹಿತಾಶ್ವನು ಉದಯ ಕಾಲದಲೆದ್ದು ದಟ್ಟ ಅರಣ್ಯಕ್ಕೆ ಗೆಳೆಯರೊಂದಿಗೆ ಹೋಗಿ ಹುಲ್ಲು ತೆಗೆದುಕೊಂಡು ಸಂಜೆಯ ವೇಳೆಗೆ ಹಿಂದಿರುಗುತ್ತಿದ್ದನು. ಹಗಲಿರುಳು ಕೆಲಸ ಮಾಡುವ ಚಂದ್ರಮತಿ ಕುದ್ದು ಹೋಗುತ್ತಿದ್ದಳು. ಹೀಗಿದ್ದರೂ ಮನೆಯಲ್ಲಿ ಕಸವು ಬಿದ್ದಿದ್ದರೆ ಯಜಮಾನನು ಕೋಪಗೊಳ್ಳುವನು. ದನಗಳನ್ನು ಕಟ್ಟ ಹೋದರೆ ಅವು ಒದೆಯುತ್ತಿದ್ದವು. ಬೆನ್ನನ್ನು ಸರಿಯಾಗಿ ಒರೆಸು ಎಂದು ಸೊಸೆಯು ಹೊಡೆಯುತ್ತಿದ್ದಳು. ಗೃಹಸ್ಥನ ಮಗನು ತನ್ನ ಕಾಲನ್ನು ಸರಿಯಾಗಿ ಉಜ್ಜಿ ತೊಳೆಯಲಿಲ್ಲವೆಂದು ಒದೆಯುತ್ತಿದ್ದನು. ನೆರೆಮನೆಯ ಚಾಡಿಕೋರರು ಚಂದ್ರಮತಿಯನ್ನು ಕಳ್ಳಿಯೆಂದು ಅಪವಾದ ಹೊರಿಸುತ್ತಿದ್ದರು.

ಚಂದ್ರಮತಿಯ ಬದುಕಿನ ತಲ್ಲಣವೆಂತಹದು ಎಂದರೆ–ಹೆದರಿ ಕಣ್ಗೆಟ್ಟು ಓಡಬಾರದು, ಇರಬಾರದು, ಸಾಯಬಾರದು, ಬದುಕಬಾರದು. ಇವಳ ಸಹನೆಗೆ ಕಾರಣವೆಂದರೆ ತನ್ನೊಡಲಿಗೆ ಬರುವ ದುಃಖಗಳಿಗೆ ಸಾಕ್ಷಿಯಾಗಿ ಅರಸ ಹರಿಶ್ಚಂದ್ರನ ಸತ್ಯವನ್ನು ಸಲುಹಬೇಕೆಂಬುದೇ ಆಗಿತ್ತು. ಚಂದ್ರಮತಿ ಮತ್ತು ಹರಿಶ್ಚಂದ್ರರ ಬದುಕಿನ ಉದಾತ್ತತೆ, ಉದ್ದೇಶವೇನೇ ಇರಲಿ ಈ ಕ್ಷಣದಲ್ಲಿ ವಿಪ್ರನ ಮನೆಯಲ್ಲಿ ಅವಳು ದೇಸಿಗಳಾಗಿ ಎಲ್ಲ ಕಷ್ಟ ನಿಷ್ಠುರಗಳನ್ನು ಸಹಿಸಿಕೊಂಡು ಬಾಳುವುದು ಪ್ರಸ್ತುತ ಆಶಯಕ್ಕೆ ಮುಖ್ಯವೆನಿಸುತ್ತದೆ.

ಚಂದ್ರಮತಿಯ ಬದುಕಿನಂತೆಯೇ ಬಾಲಕನ ನಿತ್ಯದ ಬವಣೆಯಿದೆ. ಲೋಹಿತಾಶ್ವನು ದಿನವೂ ಬೆಳಗಿನಲ್ಲಿ ಹುಲುಹಳ್ಳಿಗೆಂದು ಹೋದವನು ಹಲವು ಬಗೆಯ ಉರುವಲಗಳನ್ನೂ ತರಬೇಕಿತ್ತು. ಅವನ್ನು ಆಯ್ದು ಹೊರೆಕಟ್ಟಿ ಹೊತ್ತು ಓರಿಗೆಯ ಮಕ್ಕಳೊಡನೆ ಬರುತ್ತಿದ್ದರೆ ಮಧ್ಯಾಹ್ನದ ಉರಿ ಬಿಸಿಲಲ್ಲಿ ಎದೆಬಿರಿದು ಶಕ್ತಗುಂದಿ ಬಾಯಾರಿ ನಡೆಗೆಟ್ಟು ಕುಸಿಯುತ್ತಿದ್ದನು. ಹಣೆಯಿಂದ ಬೆವರು ಸುರಿಯುತ್ತಿದ್ದಂತೆ ನೆತ್ತಿ ಹೊತ್ತಿ ತೇಕುತ್ತಿದ್ದನು. ಬಡವರ ಮಕ್ಕಳ ದಾರುಣವಾದ ಬದುಕು ಲೋಹಿತಾಶ್ವನ ಮುಖಾಂತರ ಇಲ್ಲಿ ಸಾಂದ್ರಗೊಂಡಿದೆ. ಒಂದು ಕಡೆ ತಾಯಿ ಕಷ್ಟಪಟ್ಟು ಮನೆಯಲ್ಲಿ ದುಡಿಯುತ್ತಿದ್ದರೆ ಇನ್ನೊಂದು ಕಡೆ ಅದೇ ತಾಯಿಯ ಮಗ ಅರಣ್ಯಕ್ಕೆ ಹೋಗಿ ಕಷ್ಟಪಡುತ್ತಾನೆ. ಬಡ ಕುಟುಂಬಗಳ ಸಾಂಸಾರಿಕ ಹೊಂದಾಣಿಕೆಯೇ ಇದು. ತಂದೆ–ತಾಯಿ–ಮಕ್ಕಳೆಲ್ಲ ಹಗಲಿರುಳು ದುಡಿದಾಗ ಮಾತ್ರ ಒಡಲ ಅನ್ನದ ಚಿಂತೆಯನ್ನು ಪರಿಹರಿಸಿಕೊಳ್ಳಬಹುದು. ರಾಘವಾಂಕ ಕೊಡುವ ಈ ನುಡಿ ಚಿತ್ರಣವನ್ನು ಇಂದಿಗೆ ನಾವು ಅನ್ವಯಿಸಿಕೊಂಡರೆ ಬಡವರ ವಾಸ್ತವ ಬದುಕು ಎಂದಿಗೂ ಕೊನೆಯಿಲ್ಲದ್ದು ಅನ್ನಿಸುತ್ತದೆ. ಚಂದ್ರಮತಿ, ಲೋಹಿತಾಶ್ವರಂತೆಯೇ ಅನೇಕ ಕುಟುಂಬಗಳು ಊಳಿಗ ಪದ್ಧತಿಯನ್ನು ಒಪ್ಪಿಕೊಂಡು ಬದುಕುತ್ತಿರುವ ರೀತಿ ಅಷ್ಟೇ ಕಠೋರವಾಗಿದೆ. ಇವರೆಲ್ಲ ಒಡೆಯನೆದುರು ಚಕಾರವೆತ್ತದೆ ಸುರಿಸುವ ಬೆವರು ಬಡವರಾದವರ ಶ್ರಮವನ್ನು ಸಾಕ್ಷೀಕರಿಸುತ್ತದೆ. ಯಜಮಾನ ಸಂಸ್ಕೃತಿ ಎಲ್ಲಾ ಕಾಲಕ್ಕೂ ಒಂದಿಲ್ಲೊಂದು ರೀತಿಯಲ್ಲಿ ಬಡವರನ್ನು ಹಿಂಸಿಸುತ್ತಲೇ ಬಂದಿದೆ.

ಲೋಹಿತಾಶ್ವನು ಅಡವಿಯಲ್ಲಿ ಹಾವು ಕಡಿದು ಮಡಿದು ಬಿದ್ದರೆ ಚಂದ್ರಮತಿಯ ದುಃಖಕ್ಕೆ ಸ್ಪಂದಿಸದ ದಯಾಹೀನತೆ ವಿಪ್ರ ಯಜಮಾನನದು. ಅಡವಿಗೆ ಹೋದ ಮಗನು ದಿನದ ಹೊತ್ತಿಗೆ ಬರದಿರುವುದು ಚಂದ್ರಮತಿಯನ್ನು ಕಳವಳಕ್ಕೀಡು ಮಾಡಿತು. ಮತ್ತೆ ಮತ್ತೆ ಬಾಗಿಲಲ್ಲಿ ನಿಂತು ಮಗನ ದಾರಿ ನೋಡುವ ಚಂದ್ರಮತಿಗೆ ಹಲವು ಸಂಶಯಗಳು ಕಾಡುತ್ತವೆ.

ಅಡವಿಯೊಳು ಹೊಲಬುಗೆಟ್ಟನೊ ಗಿಡುವಿನೊಳು ಹುಲಿ
ಹಿಡಿದುದೋ ಕಳ್ಳರೊಯ್ದರೋ ಭೂತ ಸಂಕುಲಂ

ಹೊಡೆದುವೋ ನೀರೊಳದ್ದನೊ ಮರದ ಕೊಂಬೇಱಿ ಬಿದ್ದನೋ ಫಣಿತಿಂದುದೊ
ಕಡು ಹಸಿದು ನಡೆಗೆಟ್ಟು ನಿಂದನೋ ಎಂದಿಂತು
ಮಡದಿ ಹಲವಂ ಹಲಬುತಂಗಣದೊಳಿರೆ ಹೊತ್ತಿ
ಹೊಡಕರಿಸಿದಳು ಕರ್ಬೊಗೆಯಂತೆ ಕವಿದ ಕತ್ತಲೆಯೊಳಗೆ ನಿಂದಿರ್ದಳು

(೧೨-೧೫)

– ಇಷ್ಟಲ್ಲದೆ ಹಾದಿಯಲ್ಲಿ ಯಾರಾದರೂ ಹಾದು ಹೋಗುತ್ತಿದ್ದರೆ ಲೋಹಿತಾಶ್ವಾ ಎನ್ನುತ್ತಾಳೆ. ಹಾದಿಯಲ್ಲಿ ಯಾರಾದರೂ ನಿಂತಿದ್ದರೆ ಲೋಹಿತಾಶ್ವನೆಂದು ಭ್ರಮಿಸುತ್ತಾಳೆ. ಗಾಳಿ ಗಿರಿಕೆಂದರೂ ಲೋಹಿತಾಶ್ವಾ ಎಂದು ಕರೆಕರೆದು ಹಲಬುವ ಚಂದ್ರಮತಿ ಬೀದಿಗರುವಿನಂತಾಗಿದ್ದಾಳೆ, ಮಂದಮತಿಯಾಗಿದ್ದಾಳೆ.

ಎಲ್ಲವನ್ನೂ ಕಳೆದುಕೊಂಡು ಪರದೇಶಿಯಾಗಿದ್ದ ಚಂದ್ರಮತಿಗೆ ಇರುವ ಆಸರೆಯೆಂದರೆ ಮಗ ಲೋಹಿತಾಶ್ವ ಮಾತ್ರ. ತನ್ನ ದುಃಖಕ್ಕೆ ಯಾರೂ ಇಲ್ಲದ ಹೊತ್ತಿನಲ್ಲಿ ಸಾಮಾನ್ಯ ತಾಯಿಯೊಬ್ಬಳು ತಾಳುವ ತಲ್ಲಣ ಅವಳಿಗೆ ಮಾತ್ರ ಮೀಸಲು. ಕೊನೆಗೂ ಒಬ್ಬ ಬಂದು "ನಿನ್ನ ಮಗನೊಂದು ಉಗ್ರ ಹಾವು-ಕಚ್ಚಿ-ಮಡಿದಿದ್ದಾನೆ ಎಂದಾಗ ಬುದ್ಧಿ ಭ್ರಮೆಯಾದಂತೆ "ಏಕೆ ಕಚ್ಚಿತು? ಯಾವ ಕಡೆಗೆ"? ಎನ್ನುತ್ತಾಳೆ. ಹೇಳಿದವನಿಂದ ಮಗನು ಬಿದ್ದಿರುವ ಹುತ್ತಿನ ಠಾವು ಅರಿತುಕೊಂಡು ಅಲ್ಲಿಗೆ ಹೋಗಲು ಪಡೆಯುವ ಅಪ್ಪಣೆಗಾಗಿ ಒಡೆಯನ ಮುಂದೆ ಬಂದು ಅವನ ಪಾದದ ಮೇಲೆ ಬಿದ್ದು ಹೇಳುತ್ತಾಳೆ:

"ಅರಣ್ಯದೊಳೆನ್ನ ಮಗನು ಉಗ್ರ ಕಾಳೋಗರಂ ಕಚ್ಚಿ ಮಡಿದನು"
"ಲೇಸಾಯ್ತು ಮಡಿದಡೆ ಮಡಿದ"
"ಬಂಟರನು ಕೊಟ್ಟು ಅರಸಿಸೈ ತಂದೆ"
"ನಡುವಿರುಳು ಬಂಟರುಂಟೇ ನಿದ್ದೆಗೆಯ್ಯಬೇಕೇಳು ಕಾಡದಿರು"
"ನರಿಗಳೆಳೆಯದ ಮುನ್ನ ದಹಿಸಬೇಡವೆ ತಂದೆ ಕರುಣಿಸು"
"ದುರ್ಮರಣವಟ್ಟ ಶೂದ್ರನನು ಸಂಸ್ಕರಿಸುವವರಾವಲ್ಲ"
"ನಾನಾದೊಡಂ ಹೋಗಿ ಕಂಡು ಮಗನ ಉರಿಗಿತ್ತು ಬಪ್ಪೆನೇ"
"ಕೆಲಸಮಂ ಬಿಟ್ಟು ಹರಿಯದೆ ಇದ್ದುದನೆಯ್ದೆ ಗೆಯ್ದು ಹೋಗು"

– ಯಜಮಾನನ ಆಣತಿಯಂತೆ ಇರುವ ಕೆಲಸವನ್ನೆಲ್ಲ ಬೇಗ ಬೇಗನೆ ಮುಗಿಸಿ ಮಗ ಮಡಿದ ಕಡೆಗೆ ಚಂದ್ರಮತಿ ಹೊರಟಳು. ಮಗಮಡಿದ ಸಂದರ್ಭದಲ್ಲಿ ಯಜಮಾನನಲ್ಲಿ ಬೇಡಿಕೊಳ್ಳುವ ತಾಯಿಯ ದಾರುಣತೆ, ಅದಕ್ಕೆ ಸಮಾನಾಂತರವಾಗಿ ಯಜಮಾನ ತೋರುವ ನಿರ್ದಯತೆ ಎರಡೂ ಸಮಾನಾಂತರ ರೇಖೆಗಳ ಮೇಲೆ ಚಲಿಸುತ್ತವೆ.

ಸ್ಮಶಾನದಲ್ಲಿಯೂ ಚಂದ್ರಮತಿಯ ಅಸಹಾಯಕತೆಯೇ ಮುಂದುವರಿಯುತ್ತದೆ. ಮಗನ ಕಳೇವರವನ್ನು ದಹಿಸಬೇಕೆಂದರೆ ಕಟ್ಟಿಗೆಯಿಲ್ಲ. ಗಳಗಳನೆ ಮುನ್ನ ಬೆಂದುಳಿದಿರ್ದ ಕರಿಗೊಳ್ಳಿಗಳನೆಲ್ಲವಂ ಸಿದುಗಿ ತಂದೊಟ್ಟಿ ಮೇಲೆ ಮಂಗಳಮಯ ಕುಮಾರನನ್ನು ಮಲಗಿಸಿ ಬಾಯಳಿದು ಮೊರೆಯಿಟ್ಟಳು. ಅವಳ ಧ್ವನಿಯನ್ನು ಕೇಳಿ ಹರಿಶ್ಚಂದ್ರ ಅವಳೆಡೆಗೆ ಧಾವಿಸಿ ಬಂದನು.

ನಟ್ಟಿರುಳು ಸುಡುಗಾಡೊಳೊಬ್ಬಳೋರಂತೆ ಬಾ
ಯ್ಬಿಟ್ಟು ಹಲುಬುವ ವೀರನಾರಿಯಾವಳೋ ಮೀರಿ
ಸುಟ್ಟಿಯಾದರೆ ನಿನಗೆ ವೀರಬಾಹುಕನಾಣೆ ಕದ್ದು ಸುಡಬಂದೆ ನಿನ್ನ
ನಿಟ್ಟೆಲುವ ಮುಜಿವೆನೆಂದುರವಣಿಸಿ ಜರಿಯುತ್ತ
ದಟ್ಟಿಸುತ ಬಂದು ಹಿಡಿದಿರ್ದ ಕಿಚ್ಚಂ ಕೆದಜಿ
ಮುಟ್ಟಿಗೆಯ ಮೇಲಿರ್ದ ಸುತನ ಹಿಂಗಾಲ್ವಿಡಿದು ಸೆಳೆದು ಬಿಸುಟಂ ಭೂಪನು
(೧೨-೩೬)

– ಒಂದು ಕಡೆ ಚಂದ್ರಮತಿಯ ಅಸಹಾಯಕತೆ, ಇನ್ನೊಂದೆಡೆ ಹರಿಶ್ಚಂದ್ರನ ಕರ್ತವ್ಯ ಪ್ರಜ್ಞೆ. 'ಕುಲವ ನೋಡದೆ ಬೇಡಿಕೊಳ್ಳುತ್ತೇನೆ ನಿನ್ನ ಮಗನೆಂದು ತಿಳಿ, ಸುಡಲು ಅನುಮತಿಯಿತ್ತು ರಕ್ಷಿಸು' ಎಂಬಲ್ಲಿ ದುಃಖದಲ್ಲಿ ಕುಲಪ್ರಶ್ನೆಯಿಲ್ಲದಿರುವುದನ್ನು ಗಮನಿಸಬೇಕು. ಹರಿಶ್ಚಂದ್ರ ಹೆಣದ ಬಟ್ಟೆ ಮತ್ತು ಸ್ಮಶಾನದ ಬಾಡಿಗೆ ಕೊಟ್ಟಲ್ಲದೆ ಸುಡಲು ಅವಕಾಶ ಕೊಡುವುದಿಲ್ಲ ಎಂದರೆ ಚಂದ್ರಮತಿ.

ಕೊಡಲೇನುವಿಲ್ಲವಿಂದೆನಗೆ ಲೋಗರ ಮನೆಯ
ಬಡದಾಸಿ ಕರುಣಿಸೆನೆ ನಿನ್ನ ಕೊರಳಿನೊಳಿರ್ದ
ಕಡುಚೆಲುವ ತಾಳಿಯನದನ್ನಡವಿರಿಸಿ ನೀಬಿಡಿಸಿಕೋ ಬಳಿಕ (೧೨-೩೮)

– ಹರಿಶ್ಚಂದ್ರ ಬಾಡಿಗೆ ಬೇಡಿದರೆ ತಾನು ಲೋಗರ ಮನೆಯ ಬಡದಾಸಿ ಕೊಡಲು ಏನೂ ಇಲ್ಲ ಎಂದು ಚಂದ್ರಮತಿ ಗೋಗರೆಯುವುದು ಕಡುಬಡವರ, ಅನಾಥರ ಬದುಕನ್ನೇ ಹೇಳುತ್ತದೆ.

ಲೋಹಿತಾಶ್ವನ ಹೆಣವನ್ನು ಸುಡಲು ಅನುಮತಿಸದೆ 'ನಿನ್ನ ಒಡೆಯನಲ್ಲಿ ಬೇಡಿ ತೆಗೆದುಕೊಂಡು ಬಾ' ಎಂದ ಹರಿಶ್ಚಂದ್ರನ ಸೂಚನೆಯನ್ನವಲಂಬಿಸಿ ಚಂದ್ರಮತಿ ಹೊರಟಾಗ ದಾರಿಯಲ್ಲಿ ಕಾಶಿರಾಜನ ಮಗನನ್ನು ಕೊಂದ ಅಪವಾದ ತಗಲುವುದು, ಅವಳು ಮಾಡದ ತಪ್ಪಿಗೆ ಶಿಕ್ಷೆ ಅನುಭವಿಸಲು ಸಿದ್ಧಳಾಗುವುದು, ಸ್ಮಶಾನದಲ್ಲಿ ಶಿವನ ಸಾಕ್ಷಾತ್ಕಾರ – ಇವೆಲ್ಲ ತರುವಾಯದ ಬೆಳವಣಿಗೆಗಳು. ನಮಗೆ ಪ್ರಸ್ತುತ ಮುಖ್ಯವೆನಿಸುವುದು ಅನಾಥ ಸ್ಥಿತಿ – ಚಂದ್ರಮತಿ, ತನ್ನ ವಿಪ್ರ ಯಜಮಾನನ ಮನೆಯಲ್ಲಿ ಪಟ್ಟ ಕಷ್ಟ, ಮಗನ ಸಾವಿನ ಸಂದರ್ಭದಲ್ಲಿಯೂ ಅವಳು ಪಟ್ಟ ಮಾನಸಿಕ ಹಿಂಸೆ ಇವೆಲ್ಲ ದುರ್ದೆಸೆಗೊಳಗಾದ ಅನಾಥರ ಬದುಕಿನ ಚಿತ್ರಗಳೇ.

ಹರಿಶ್ಚಂದ್ರ ಮತ್ತು ಚಂದ್ರಮತಿಯರನ್ನು ಸಾಮಾಜಿಕವಾಗಿ ನೋಡುವುದೆಂದರೆ ಜನ ಸಾಮಾನ್ಯರ ಭಾವನೆ, ರೀತಿಗಳನ್ನು ಸಾಮಾಜಿಕ ನೆಲೆಯಲ್ಲಿ ಗುರುತಿಸಿದ ಹಾಗೆಯೇ. ಹರಿಶ್ಚಂದ್ರನು ಹೊಲತಿಯರ ಸಂಗಡ ಮತ್ತು ವಿಶ್ವಾಮಿತ್ರನ ಸಂಗಡ ಕುಲ ಸಂಬಂಧವಾಗಿ ನಡೆಸುವ ವಾದ ಸಾಮಾಜಿಕ ನಂಬಿಕೆ ನಡುವಳಿಕೆಗಳ ಅಂತರವನ್ನೇ ಹೇಳುತ್ತದೆ. ಚಂದ್ರಮತಿಯ ಕಠಿಣ ಬದುಕಂತೂ ಕಡು ಬಡತನದಲ್ಲಿ ಒದ್ದಾಡುವ ಹೆಣ್ಣುಮಗಳನ್ನೇ ಪ್ರತಿನಿಧಿಸುತ್ತದೆ. ಅವಳನ್ನು ಸೇವಿಕೆಯನ್ನಾಗಿ ನೇಮಿಸಿಕೊಂಡವರು ಉಚ್ಚವರ್ಗದವರು ಎನ್ನುವ ಮಾತನ್ನು ಮತ್ತೊಮ್ಮೆ ಮನದಂದರೆ ಸಾಮಾಜಿಕ ತಾರತಮ್ಯ ಇನ್ನೂ ಸ್ಪಷ್ಟವಾಗಿ ಕಾಣುತ್ತದೆ.

ಒಟ್ಟಿನಲ್ಲಿ ಹರಿಶ್ಚಂದ್ರ ಮತ್ತು ಚಂದ್ರಮತಿಯರ ಮುಖಾಂತರ ಜನಸಾಮಾನ್ಯರನ್ನು ಸಾಮಾಜಿಕ ನೆಲೆಯಲ್ಲಿ ನೋಡುವ ರಾಘವಾಂಕನ ದೃಷ್ಟಿ ಸಾಕಷ್ಟು ವೈಚಾರಿಕದೃಷ್ಟಿಯಿಂದ ಕೂಡಿದೆ. ಹರಿಶ್ಚಂದ್ರ ಹೊಲತಿಯರ ಸಂವಾದದಲ್ಲಿ ಅಸ್ಪೃಶ್ಯರು ನಿರಂತರ ಶೋಷಣೆಗೊಳಗಾಗಿರುವ ವಿಷಯವಿದೆ. ವೀರಬಾಹುಕನ ಪ್ರಸಂಗದಲ್ಲಿ "ವರ್ಣಾಶ್ರಮದ ಚೌಕಟ್ಟನ್ನು ಪಲ್ಲಟಿಸಿ ಹೊಲೆಯನಿಗೆ ಕ್ಷತ್ರಿಯನು ಆಳಾಗುವಂತೆ ಏರ್ಪಡಿಸುವುದು ಸಾಮಾನ್ಯ ಸಂಗತಿಯೇನಲ್ಲ" (ಹರಿಹರ-ರಾಘವಾಂಕ ಮತ್ತು ಜಾನಪದ ಪು-೪೪). ಹೀಗೆಯೇ ಚಂದ್ರಮತಿಯ ವಿಷಯದಲ್ಲಿ ವಿಜೃಂಭಿಸುವ ಯಜಮಾನ ಸಂಸ್ಕೃತಿಯ ಅಹಂಕಾರ ಸ್ಪಷ್ಟವಾಗಿಯೇ ಗೋಚರವಾಗುತ್ತದೆ. ರಾಘವಾಂಕ ಕೇವಲ ಕಥೆ ಹೇಳವುದಿಲ್ಲ; ಅದರೊಂದಿಗೆ ಇಂಥ ಸಾಮಾಜಿಕ ಅಂಶಗಳನ್ನು ದಾಖಲಿಸುವ ಮೂಲಕ ವಿಶಿಷ್ಟ ಕವಿಯಾಗಿ ತೋರುತ್ತಾನೆ.

ಕುಮಾರವ್ಯಾಸ ಭಾರತ

ಕುಮಾರವ್ಯಾಸ ಭಾರತದ ಸಾಮಾಜಿಕ ನೆಲೆಯ ಅವಲೋಕನದಲ್ಲಿ ಚಾತುರ್ವರ್ಣ ವ್ಯವಸ್ಥೆಯನ್ನು ಪ್ರಧಾನವಾಗಿ ಪರಿಗಣಿಸಲಾಗಿದೆ. ಚಾತುರ್ವರ್ಣ ವ್ಯವಸ್ಥೆಯ ಸ್ವರೂಪ, ಸಂರಚನೆಯನ್ನು ಮೊದಲು ನೋಡಿಕೊಂಡು ಆ ಪರಿಣಾಮವಾಗಿ ಸಾಮಾಜಿಕ ಜೀವನದಲ್ಲಿ ಉಂಟಾದ ಶ್ರೇಣಿಯ ತಾರತಮ್ಯದ ವಿವೇಚನೆಗೆ ಗಮನ ಹರಿಸುವುದು ಸರಿಯಾದ ಕ್ರಮವೆನಿಸುತ್ತದೆ. ತರುವಾಯದ ಹಂತದಲ್ಲಿ ಇಂಥ ತಾರತಮ್ಯಕ್ಕೆ ಒಳಗಾದವರ ಬದುಕಿನ ರೀತಿ, ಮಾನಸಿಕ ಹಿಂಸೆ ಗಮನಾರ್ಹ ಅಂಶಗಳೆನಿಸುತ್ತವೆ. ಯಯುತ್ಸು, ಏಕಲವ್ಯ, ವಿದುರ, ಕರ್ಣನಂಥವರು ಒಂದಿಲ್ಲೊಂದು ರೀತಿಯಲ್ಲಿ ಜಾತಿನಿಂದನೆ ಹಲ್ಲೆಗೆ ಒಳಗಾದವರೇ. ಅದರಲ್ಲೂ ವಿದುರ, ಕರ್ಣನ ಕುಲವೆತ್ತಿ ಅನೇಕರು ಮಾತನಾಡುತ್ತಾರೆ. ಇವು ವಿದುರ, ಕರ್ಣನಂಥ ಲಕ್ಷಾವಧಿ ಜನರು ಪಡೆದ ಹಿಂಸೆಗೆ ಉದಾಹರಣೆಗಳು ಮಾತ್ರ. ಸಮಷ್ಠಿ ರೂಪಕ್ಕೊದಗಿದ ಕೀಳು ಭಾವ ವಿದುರ, ಕರ್ಣ ಪಾತ್ರಗಳ ಮೂಲಕ ದಟ್ಟವಾಗಿ ಹರಿದಿದೆ.

ಚಾತುರ್ವರ್ಣ ವ್ಯವಸ್ಥೆ:

ಮಹಾಭಾರತದ ಕಾಲಕ್ಕೆ ಸಮಾಜವನ್ನು ನಾಲ್ಕು ಹೋಳಾಗಿ ಗುರುತಿಸಲಾಗುತ್ತಿತ್ತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬೀ ವಿಭಜನೆ ಪ್ರಧಾನವಾಗಿ ಉದ್ಯೋಗವನ್ನವಲಂಬಿಸಿದ್ದು. ಇದು ಕುಮಾರವ್ಯಾಸ ಭಾರತದಲ್ಲಿ ಹಲವು ಕಡೆ ಪ್ರಸ್ತಾಪಿಸಲ್ಪಟ್ಟಿದೆ. ಪಾಂಡವರು ವನವಾಸವನ್ನನುಭವಿಸುತ್ತ ಕಾಮ್ಯಕವನಕ್ಕೆ ಬಂದು ವಾಸಮಾಡಿರುವಾಗ ಮಾರ್ಕಂಡೇಯ ಮುನಿ ಅಲ್ಲಿಗೆ ಬಂದು ಧರ್ಮೋಪದೇಶ ಮಾಡುತ್ತ ಆನುಷಂಗಿಕವಾಗಿ ಕೃತಯುಗದ ಕಾಲಕ್ಕೆ ಅಸ್ತಿತ್ವದಲ್ಲಿದ್ದ ಸಾಮಾಜಿಕ ರೀತಿಯನ್ನು ವಿವರಿಸುತ್ತಾನೆ. ಬ್ರಾಹ್ಮಣರು ಹೀನವೆನಿಸಿದ ಯಾಚನಾವೃತ್ತಿಯನ್ನು ಬಿಟ್ಟು ಯಜ್ಞವಿಧಾನ, ವೈದಿಕ ವಿಧಿಗಳ ಅನುಷ್ಠಾನ, ಯಮ-ನಿಯಮಗಳ ಅನುಸರಣೆಯಲ್ಲಿ ತೊಡಗಿದ್ದರು. ರಾಜರು ಶತ್ರುಗಳಿಂದ ತಮ್ಮ ರಾಜ್ಯವನ್ನು ಸಂರಕ್ಷಿಸಿಕೊಳ್ಳುತ್ತ, ಬ್ರಾಹ್ಮಣರಿಗೆ ಸಂಪತ್ತನ್ನು ನೀಡುತ್ತ, ತಮ್ಮ ಸತಿಜನಕ್ಕೆ ಯೌವನವನ್ನು ಒದಗಿಸುತ್ತ ಪ್ರಜೆಗಳಿಗೆ ರಕ್ಷಣೆ ನೀಡುತ್ತ ನಡೆದುಕೊಳ್ಳುತ್ತಿದ್ದರು. ವೈಶ್ಯರು ವಾಣಿಜ್ಯ ವ್ಯವಹಾರದಲ್ಲಿ ತೊಡಗಿ ಪ್ರೌಢರು, ಮೂಢರು, ಯಾರೇ ವ್ಯಾಪಾರಕ್ಕೆ ಬಂದರೂ ತಮ್ಮ ಮೂಲಧನಕ್ಕೆ ಅನುಗುಣವಾದ ರೀತಿಯಲ್ಲಿ ಲಾಭ ಪಡೆಯುತ್ತಿದ್ದರು. ಶೂದ್ರರು ಕೃಷಿ ವ್ಯವಸಾಯದಲ್ಲಿ ತೊಡಗಿ ದ್ವಿಜರ ಶುಶ್ರೂಷೆ ಮಾಡುತ್ತ ಜೀವನ ನಿರ್ವಹಣೆ ಮಾಡುತ್ತಿದ್ದರು. ಮಾರ್ಕಂಡೇಯ ಮುನಿಯ ವಿವರವನ್ನು ನೋಡಿದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ -ನಾಲ್ಕು ವರ್ಣಗಳವರಿಗೆ ತಮ್ಮವೇ ಆದ ಕಾರ್ಯ ವಿಧಾನಗಳಿವೆ.

ದ್ವಾಪರಯುಗದಲ್ಲಿಯೂ ಪ್ರಸ್ತುತ ಚಾತುರ್ವರ್ಣ ವ್ಯವಸ್ಥೆ ಮುಂದುವರೆದಿರುವ ವಿಷಯ ಕುಮಾರವ್ಯಾಸ ಭಾರತದ ಆದಿಪರ್ವದ ೧೬ನೆಯ ಸಂಧಿಯಲ್ಲಿ ದೊರೆಯುತ್ತದೆ. ಇಂಥ ವಿಷಯ ಪ್ರಸ್ತಾವನೆಗೆ ಕಥೆಯ ಒಡಲಲ್ಲಿಯೇ ಕುಮಾರವ್ಯಾಸ ಅವಕಾಶಮಾಡಿಕೊಳ್ಳುವ ರೀತಿಗೂ ಇದು ಒಳ್ಳೆಯ ಉದಾಹರಣೆಯಾಗಬಲ್ಲದು. ದ್ರೌಪದಿ ಸ್ವಯಂವರ ಮುಗಿದ ಮೇಲೆ ಯುದ್ಧಸಾರಿದ ಕೌರವರನ್ನು ಜಯಿಸಿದ ಬ್ರಾಹ್ಮಣರು (ಮಾರು ವೇಷದ ಪಾಂಡವರು) ಬ್ರಾಹ್ಮಣರಾಗಿರಲಿಕ್ಕಿಲ್ಲ ಎಂಬ ಸಂಶಯ ದ್ರುಪದ ರಾಜಕುಮಾರನಿಗೆ ಮೂಡಿ ಕಾಶ್ಯಪ ಮುನಿಯೊಡನೆ ಪಾಂಡವರು ಇಳಿದುಕೊಂಡಿದ್ದ ಕುಲಾಲ ಗೃಹಕ್ಕೆ ಬಂದು ಮರೆಯಲ್ಲಿ ನಿಂತು ಅವರ ಸಂಭಾಷಣೆಯನ್ನು ಕೇಳಿದನು. ತಿರುಗಿ ತಂದೆಯಲ್ಲಿಗೆ ಬಂದು "ಅವರು(ಬ್ರಾಹ್ಮಣ ವೇಷದವರು) ಶಸ್ತ್ರಾಸ್ತ್ರ ವಿಷಯ ಕುರಿತಾಗಿಯೂ ಗಜ-ಹಯ-ರಥಗಳ ಕುರಿತಾಗಿಯೂ ರಾಜನೀತಿಗಳ ವಿಷಯವಾಗಿಯೂ ಮಾತನಾಡುತ್ತ ರಾತ್ರಿಯನ್ನು ಕಳೆದರು" ಎಂದು ಹೇಳಿದನು. ಅವನ ಮಾತಿಗೆ ಮುಂದುವರಿಕೆಯಾಗಿ ಕಶ್ಯಪ ಮುನಿ ಹೇಳುವ ಮಾತು ಅಂದಿನ ಚಾತುರ್ವರ್ಣದ ರೀತಿಯನ್ನು ವಿಶದಪಡಿಸುತ್ತದೆ. "ಬ್ರಾಹ್ಮಣರಾದವರು ನವರಸಭೋಜನದ ಮಾತು ಮತ್ತು ವೇದಾಂಗಗಳಿಗೆ ಸಂಬಂಧಿಸಿದ ಅರ್ಥ ತರ್ಕಗಳನ್ನು ಕುರಿತು ಮಾತನಾಡುತ್ತಾರೆ. ಅರಸರಾದವರಿಗೆ ಆಯುಧ, ಗಜ-ತುರಗ-ರಥಗಳ ಏರಾಟ, ಶಸ್ತ್ರಾಸ್ತ್ರಗಳ ಮಾತು ಒಪ್ಪುತ್ತವೆ. ವೈಶ್ಯರು ಧನವರ್ಧನ, ಲಾಭಹಾನಿ, ವಿಷಯ ಮಾತನಾಡುತ್ತಾರೆ. ಶೂದ್ರರಾದವರಿಗೆ ಕೃಷಿಯ ಮಾತುಗಳು ಒಪ್ಪುತ್ತವೆ" ಎಂದು ಹೇಳಿ ಇವೆಲ್ಲ'ಜಾತಿಧರ್ಮ'ದ ವಿಷಯ ಎನ್ನುತ್ತಾನೆ.

> ಆರನಾದರು ಜಾತಿ ಧರ್ಮದ
>
> ಸೇರುವೆಗಳೇ ಹೇಳುವವು ನ
>
> ಮ್ಮಾರಯಿಕೆಗಿವರಿಂದು ಕ್ಷತ್ರಿಯರೆಂದು ಮುನಿ ನುಡಿದ(ಆದಿ-೧೬-೨೪)

ಎಂಬಲ್ಲಿ ಚಾತುರ್ವರ್ಣದ ವಿಷಯ ಬೇರೆಬೇರೆ ಜಾತಿಯವರು ರೂಢಿಸಿಕೊಂಡಿರುವ ನಿಯಮಗಳು ಎಂಬುದಾಗಿ ತೋರುತ್ತದೆ. ಮಾರ್ಕಂಡೇಯ ಮುನಿ ಮತ್ತು ಕಶ್ಯಪ ಮುನಿಯ ವಿವರಣೆಯಲ್ಲಿ ಅಂತ್ಯವರ್ಣದವರು ಒಕ್ಕಲುತನವನ್ನವಲಂಬಿಸಿದ ಶ್ರಮಿಕ ವರ್ಗದವರಾಗಿ ತೋರುತ್ತಾರೆ. ಅರಣ್ಯಪರ್ವದ ೧೪ನೆಯ ಸಂಧಿಯ ಕೊನೆಯಲ್ಲಿ ಮಾರ್ಕಂಡೇಯ ಮುನಿ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ(ಯತಿ) ಎಂದು ನಾಲ್ಕು ಆಶ್ರಮಗಳ ಬಗೆಗೆ ಹೇಳುತ್ತಾನೆ. ಆದರೆ ಅವು ನಾಲ್ಕೂ ವರ್ಣದವರಿಗೆ ಸಂಬಂಧಿಸಿದಂತೆ ತೋರುತ್ತವೆ.

ವರ್ಣಾಶ್ರಮ ನಿಯಮಗಳು ಒಂದು ಕಾಲಕ್ಕೆ ಕಟ್ಟುನಿಟ್ಟಾಗಿ ಪಾಲಿಸಲ್ಪಡುತ್ತಿದ್ದವು. ಇಂದ್ರಕೀಲ ಪರ್ವತಕ್ಕೆ ಅರ್ಜುನನು ಹೊರಟು ನಿಂತ ಸಂದರ್ಭದಲ್ಲಿ ಧರ್ಮರಾಜ ಕೆಲವು ಉಪದೇಶಪರ ಮಾತುಗಳನ್ನು ಹೇಳುತ್ತಾನೆ. ಅವುಗಳಲ್ಲಿ ಚಾತುರ್ವರ್ಣ ಪಾಲನೆಯೂ ಒಂದಾಗಿ ತೋರುತ್ತದೆ. "ಭ್ರಾತೃಮಿತ್ರ ವಿರೋಧಕರಿಗೆ, ಮಾತಾ ಪಿತೃರಿಗೆ ವಿಘಾತವನ್ನುಂಟು ಮಾಡುವವರಿಗೆ, ಖಳನಿಗೆ ಪರಲೋಕವಿಲ್ಲ" ಎಂದು ಹೇಳುತ್ತ "ಉತ್ತಮ ಜಾತಿಯನ್ನು ವಿನಾಶಗೈಯುವವನಿಗೆ, ವರ್ಣಾಶ್ರಮ ದೂಷಕನಿಗೆ, ಜಾತಿ ಸಂಕರ ಮಾಡುವವನಿಗೆ ಪರಲೋಕವಿಲ್ಲ" ಎಂದು ಹೇಳುತ್ತಾನೆ. ಅಂದರೆ ಧರ್ಮರಾಜನು ಕೂಡ ವರ್ಣ ಪದ್ಧತಿಯನ್ನು ಒಪ್ಪಿಕೊಂಡಿದ್ದಾನೆ. ಪ್ರಜೆಗಳನ್ನು ಪರಿಪಾಲಿಸುವ ಎಲ್ಲ ರೀತಿ-ನೀತಿಗಳಿಗೆ ರಾಜಕೀಯ ಸಂಕಲ್ಪ ಬೇಕು. ಇದು ಧಾರ್ಮಿಕ ವಲಯಕ್ಕೂ ವಿಸ್ತರಿಸಿಕೊಳ್ಳುತ್ತದೆ. ರಾಜನ ನಂಜಿಕೆ, ಅನುಸರಣೆಗಳು ಕಟ್ಟಪ್ಪಣೆಯ ರೂಪದಲ್ಲಿ ಬಂದಾಗ ಸಾಮಾಜಿಕ ವಿಧಿವಿಧಾನಗಳು

ತಂತಾನೇ ಹೊಂದಿಕೊಳ್ಳುತ್ತವೆ. ಅಂತೆಯೇ ಧರ್ಮರಾಯನು ವರ್ಣಾಶ್ರಮವನ್ನು ನಂಬಿರುವುದಕ್ಕೆ ಅರ್ಥವಿದೆ. ಸಭಾಪರ್ವದಲ್ಲಿ ನಾರದ ಮುನಿಯು ಧರ್ಮನನ್ನು "ಜಾತಿ-ಸಂಕರವಿಲ್ಲವಲ್ಲವೇ ? ಸಮಾಜದಲ್ಲಿ ಕನಿಷ್ಠ ರಾದವರನ್ನು ಶ್ರೇಷ್ಠರಾದವರನ್ನು ನಿರ್ಣಯಿಸಲಾಗಿದೆಯಲ್ಲವೆ ? ತಮ್ಮ ತಮ್ಮ ಕುಲಕ್ಕೆ ವಿಹಿತವಾಗುವ ರೀತಿಯಲ್ಲಿ ಎಲ್ಲರೂ ನಡೆದುಕೊಳ್ಳುತ್ತಿದ್ದಾರಲ್ಲವೆ?"ಎಂದು ಪ್ರಶ್ನಿಸಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಹೀಗಿದ್ದರೂ ಇದೇನು ತೀರ ಕಂದಾಚಾರದ ವರ್ಗೀಕರಣವಾಗಿ ತೋರುವುದಿಲ್ಲ. ಉದಾಹರಣೆಗೆ ಉತ್ತಮ ಗುಣಗಳು ಯಾವನಲ್ಲಿರುತ್ತವೆಯೋ ಅವನೇ ವಿಪ್ರನೆಂದು ಗುರುತಿಸಲ್ಪಡುತ್ತಾನೆ ಎಂಬುದನ್ನು ಉರಗ ಪ್ರಸಂಗದಲ್ಲಿ ಧರ್ಮರಾಯ ಹೇಳುತ್ತಾನೆ.

ಉರಗ ಕೇಳ್ ಪಿತೃಮಾತೃ ವಂಶೋ
ತ್ಕರ ವಿಶುದ್ಧ ಸದಾಗ್ನಿ ಹೋತ್ರದ
ಭರದಮಸ್ವಾಧ್ಯಾಯ ಸತ್ಯವಹಿಂಸೆ ಪರಿತೋಷ
ವರಗುಣಂಗಳಿವಾವನಲಿ ಗೋ
ಚರಿಸಿದಾತನೆ ವಿಪ್ರನೆಂಬರು
ಹಿರಿಯರೆಂದನು ಧರ್ಮಸುತ ನಹುಷಂಗೆ ವಿನಯದಲಿ.

(ಅರಣ್ಯ-೧೩-೫೦)

ಮಾತಾ ಪಿತೃವಂಶೋತ್ಕರ ವಿಶುದ್ಧಿ, ಸತ್ಯ, ಅಹಿಂಸೆ ಮುಂತಾದ ಉತ್ತಮಾಂಶಗಳನ್ನು ಹೊಂದಿದವನು ಬ್ರಾಹ್ಮಣ ಎನ್ನುವದರೊಂದಿಗೆ "ಸತ್ಯವುಳ್ಳೊಡೆ ಶೂದ್ರನವನಿಂದತ್ಯಧಿಕನಾ ದ್ವಿಜರೊಳಗೆ" ಎನ್ನುವ ಹೇಳಿಕೆಯಲ್ಲಿ ಸತ್ಯಾವಲಂಬಿಯರಾದ ಶೂದ್ರನೂ ದ್ವಿಜನಾಗಬಲ್ಲ ಎಂಬುದಿದೆ. ಕುಮಾರವ್ಯಾಸನ ಇದುವರೆಗಿನ ವಿವರಣೆಯನ್ನು ನೋಡಿದರೆ ಇಲ್ಲಿ ಬ್ರಾಹ್ಮಣತ್ವದ ಉತ್ತಮಾಂಶಗಳೊಂದಿಗೆ ಶೂದ್ರನನ್ನೂ ಉನ್ನತೀಕರಿಸಿರುವುದು ಸ್ಪಷ್ಟವಾಗಿದೆ.

ಕುಮಾರವ್ಯಾಸ ಕಾವ್ಯದಲ್ಲಿ ಹೀಗೆಲ್ಲ ತೋರುವ ಚಾತುರ್ವರ್ಣ ವ್ಯವಸ್ಥೆ ಸಾಮಾಜಿಕ ವ್ಯವಸ್ಥೆಯ ಬಹುಮುಖ್ಯ ಘಟಕವೆನಿಸಿರುವ ಮದುವೆ ವಿಷಯದಲ್ಲಿ ಪ್ರಸ್ತಾಪಿಸಲ್ಪಟ್ಟಿರುವುದು ಗಮನಾರ್ಹ ಅಂಶವೆನ್ನಿಸುತ್ತದೆ. ಪಾಂಚಾಲಿಯ ಸ್ವಯಂವರ ಸಂದರ್ಭದಲ್ಲಿ ಧನುವನ್ನೆತ್ತಲು ಕ್ಷತ್ರಿಯರೆಲ್ಲ ವಿಫಲರಾದಾಗ ತರುವಾಯದ ಅವಕಾಶವನ್ನು ವಿಪ್ರರಿಗೆ ಕೊಡಲಾಯಿತು. ಕ್ಷತ್ರಿಯರು ಕ್ಷತ್ರಿಯರೊಡನೆ ಸಂಬಂಧ ಬೆಳೆಸುತ್ತಾರೆ. ಅದು ಸಾಧ್ಯವಾಗದಿದ್ದ ಸಂದರ್ಭದಲ್ಲಿ ಬ್ರಾಹ್ಮಣನಿಗೆ ಕನ್ಯೆಯನ್ನು ಕೊಡಬಹುದು. ರೂಢಿಯಲ್ಲಿರುವಂತೆ ಪುರುಷರು ಅನುಲೋಮ ಪದ್ಧತಿಯಿಂದಲೂ ಸ್ತ್ರೀಯರು ವಿಲೋಮ ಪದ್ಧತಿಯಿಂದಲೂ ಮದುವೆ ಮಾಡಿಕೊಳ್ಳಬಹುದೆಂಬ ಶಾಸ್ತ್ರಸಮ್ಮತ ವಿಚಾರವನ್ನು ಕುಮಾರವ್ಯಾಸನ ಪದ್ಯ ಹೇಳುತ್ತದೆ(ಆದಿ-೧೫-೨). ಇಲ್ಲಿಯ ವೈವಾಹಿಕ ಸಂಬಂಧದಲ್ಲಿ ವೈಶ್ಯರಾಗಲಿ, ಶೂದ್ರರಾಗಲಿ ಉಲ್ಲೇಖಿಸಲ್ಪಟ್ಟಿಲ್ಲ.

ವಿವಾಹದ ವಿಷಯದಲ್ಲಿ ಮಕ್ಕಳು ತಂದೆಯನ್ನು ಅವಲಂಬಿಸಿದ್ದರು. ವಿಶೇಷವಾಗಿ ತಂದೆಯ ಅನುಮೋದನೆಯ ನಂತರವೇ ಹೆಣ್ಣುಮಕ್ಕಳು ವಿವಾಹ ಬಂಧನಕ್ಕೊಳಪಡುವುದು ಸಾಮಾನ್ಯರಲ್ಲಿ ರೂಢಿಗತವಾಗಿತ್ತು. ಆ ತಂದೆಯಾದರೋ ಮಗಳ ಭವಿಷ್ಯದ ಕ್ಷೇಮವನ್ನು ನೆನೆದೇ

ಮುಂದಡಿಯಿಡುತ್ತಿದ್ದನು. ಯಮುನಾತೀರದಲ್ಲಿ ಭೆಟ್ಟಿಗಾಗಿ ಬಂದ ಶಂತನು ಮಹಾರಾಜನು ಯೋಜನಗಂಧಿಯೆನಿಸಿದ ಸತ್ಯವತಿಯನ್ನು ಮೋಹಿಸಿದನು. ಕಾಮಪರವಶನಾದ ಶಂತನು "ಅರಮನೆಗೆ ನಡೆ" ಎನಲು ನನಗೆ ತಂದೆಯ ಒಪ್ಪಿಗೆ ಮುಖ್ಯ ಎನ್ನುವ ರೀತಿಯಲ್ಲಿ "ತಂದೆಯ ಪರಮ ವಚನವಲಂಘ್ಯ" ಎಂದುಬಿಟ್ಟಳು. ಮನೆಗೆ ಮರಳಿದ ಶಂತನು ವಿರಹವೇದನೆಯಿಂದ ಹಾಸಿಗೆ ಹಿಡಿದು ಮರಣ ಮುಖನಾದನು. ತಂದೆಯ ಅನುತಾಪವನ್ನು ನೋಡಲಾರದೆ ಭೀಷ್ಮನು ಯಮುನಾ ತೀರಕ್ಕೆ ಬಂದು ಸತ್ಯವತಿಯ ತಂದೆಯನ್ನು ಕರೆಯಿಸಿ "ಅರಸಿಯಾಗಲಿ ನಿನ್ನಮಗಳು ನಮ್ಮ ಅಯ್ಯಂಗೆ" ಎಂದರೆ ಅವನು ತನ್ನ ಅನುಮಾನವನ್ನು ಮುಂದಿಟ್ಟನು: "ನನ್ನ ಮಗಳು ನಿಮ್ಮ ತಂದೆಗೆ ಅರಸಿಯಾದರೆ ಅವಳ ಮಕ್ಕಳು ರಾಜರಾಗುತ್ತಾರೆಯೇ? ಅವರಿಗೆ ಅರಸುತನ ಸಲ್ಲಿಸುವ ವಚನವನ್ನು ನೀನು ಕೊಡುವುದಾದರೆ ಸರಿ; ಬರಿ ಅರಸುತನ ನಮಗೇಕೆ?" ಎಂದನು.

ಅನುಲೋಮ ಪದ್ಧತಿಯ ವಿವಾಹ ಸಮಾಜ ಸಮ್ಮತವಾಗಿತ್ತು ಎಂಬುದು ಶಂತನು ಮತ್ತು ಸತ್ಯವತಿಯರ ವಿವಾಹದಿಂದ ಸತ್ಯವಾಗುತ್ತದೆ. ಕ್ಷತ್ರಿಯನಾದ ಶಂತನು ನಾವೆ ನಡೆಸುವ ಸತ್ಯವತಿಯನ್ನು ಮೋಹಿಸಿ ವಿರಹವೇದನೆಗೆ ತುತ್ತಾದಾಗ ಮಗ ಭೀಷ್ಮ ಸತ್ಯವತಿಯಿರುವಲ್ಲಿಗೆ ಬಂದು ಅವಳನ್ನು ಆದರದಿಂದ ಕರೆದೊಯ್ದು ತಂದೆಗೆ ವಿವಾಹ ಮಾಡಿಸಿದುದನ್ನು ಈ ಪದ್ಯಾರ್ಥ ಹೇಳುತ್ತದೆ.

ತರಿಸಿದನು ದಂಡಿಗೆಯ ದಂಡಿಯ
ಚರರ ನೆಲನುಗ್ಗಡಣೆಯಲಿ ಸರ
ಸಿರುಹ ಮುಖಿಯನು ತಂದು ಮದುವೆಯ ಮಾಡಿದನು ಪಿತಗೆ

(ಆದಿ-೨-೨೯)

ಇದುವರೆಗೆ ವಿವರಗೊಂಡ ಈ ಸಂದರ್ಭ ಜನಸಾಮಾನ್ಯರು, ಮಕ್ಕಳ ಅಭ್ಯುದಯವನ್ನು ಹಾರಯಿಸುವ ರೀತಿಯನ್ನು ಹೇಳುತ್ತದೆ. ತನ್ನ ಮಗಳು ಅರಸು ಮನೆಯಲ್ಲಿ ಕೇವಲ ಉಪಭೋಗದ ವಸ್ತುವಾಗಿ ಉಳಿಯಬಾರದು, ಅವಳಿಗೂ ಒಂದು ಕೌಟುಂಬಿಕ, ಸಾಮಾಜಿಕ ಸ್ಥಾನಮಾನ ದೊರೆಯಬೇಕೆಂದು ಸತ್ಯವತಿಯ ತಂದೆ ಅಳುಕದೆ ಹೇಳಿ ತನ್ನ ಮಗಳು ಕುರುವಂಶದ ರಾಣಿಯಾಗುವಂತೆ ಮಾಡಿದ್ದು ಜನಸಾಮಾನ್ಯರ ನಡವಳಿಕೆಯ ಒಂದು ಅಪರೂಪದ ಉದಾಹರಣೆಯಾಗಿ ನಿಲ್ಲುತ್ತದೆ.

ಸಾಮಾಜಿಕ ಶ್ರೇಣಿ:

ಚಾತುರ್ವರ್ಣಗಳು ಸಮಾಜದ ವಿಭಾಗಗಳಾಗಿದ್ದರೂ ಅಲ್ಲಿ ಉಂಟಾಗಿರುವ ಶ್ರೇಣಿಕೃತ ತಾರತಮ್ಯ ಹಲವು ವಿಧವಾಗಿರುವುದನ್ನು ಕಾಣುತ್ತೇವೆ. ಇರುವ ವ್ಯವಸ್ಥೆಯನ್ನು ಒಪ್ಪಿಕೊಂಡು ನಾಲ್ಕೂ ವರ್ಣದವರು ತಮ್ಮಷ್ಟಕ್ಕೆ ತಾವು ಬಾಳುತ್ತಿದ್ದಾರೆ ಎಂದು ಮೇಲ್ನೋಟಕ್ಕೆ ಅನ್ನಿಸಿದರೂ ಇರುವ ಭೇದ ಭಾವಗಳು ಸಂಪೂರ್ಣವಾಗಿ ಮರೆಯಾಗಿರುವಂತಹವಲ್ಲ. ಸಾಮಾನ್ಯರನ್ನು ದೂರವಿರಿಸಿ ಅವರನ್ನು ಕೆಳನೆಲೆಯಲ್ಲಿಯೇ ಕಾಣುವ ಮೇಲು ವರ್ಣದವರ ನಡುವಳಿಕೆ ಸಾಮಾನ್ಯರಿಗೆ ಪ್ರಶ್ನಾರ್ಹವೆನ್ನಿಸುವುದಿಲ್ಲ; ಆದರೆ ಇಂದಿಗೆ ಆಲೋಚಿಸಬೇಕಾದ ವಿಷಯವೆನ್ನಿಸುತ್ತದೆ. ಇಂತಹ ಹಲವು ಉದಾಹರಣೆಗಳು ಮಹಾಭಾರತದಲ್ಲಿವೆ.

ಮಹಾಭಾರತದ ಕಾಲಕ್ಕೆ ಕುಲಪ್ರಶ್ನೆಯನ್ನು ಕೇಳುವುದು ತುಂಬ ಸಹಜವಾದ ಒಂದು ರೀತಿಯಾಗಿತ್ತು, ಕೆಲ ಸಂದರ್ಭಗಳಲ್ಲಂತೂ ಜಾತಿ – ಪ್ರಶ್ನೆಯೊಂದಿಗೇ ಮಾತು ಪ್ರಾರಂಭವಾಗುವುದಿತ್ತು.

ಅರಣ್ಯ ಪರ್ವದಲ್ಲಿ ಭೀಮನು ಉರಗನ ಬಲವಾದ ಹಿಡಿತಕ್ಕೆ ಸಿಲುಕಿರುವಾಗ ಅಲ್ಲಿಗೆ ಬಂದ ಧರ್ಮರಾಜನು ಆತಂಕಗೊಂಡು ಉರಗನನ್ನು "ಯಾರು ನೀನು ? ಭೀಮನು ಅಪರಾಧಿಯೋ ಅಥವಾ ನೀನು ದಯಾಹೀನನೇ ಈ ಪರಪೀಡನೆ ನಿನಗೇಕೆ?" ಎಂದು ಕೇಳಿದರೆ ಉರಗ ಕೇಳುವ ಮೊದಲ ಪ್ರಶ್ನೆಯೇ ವರ್ಣಸಂಬಂಧಿಯಾದುದು

ಏನಹನು ನಿನಗೀತ ನೀನಾ
ರೇನು ನಿನ್ನಭಿಧಾನ ವಿಪ್ರನ
ಸೂನುವೋ ಕ್ಷತ್ರಿಯನೋ ವೈಶ್ಯನೋ ಶೂದ್ರ ಸಂಭವನೋ
ಏನು ನಿನಗೀ ವನಕೆಬರವುನಿ
ದಾನವನು ಹೇಳೆನಲು ಕುಂತೀ
ಸೂನು ನುಡಿದನು ತನ್ನ ಪೂರ್ವಾಪರದ ಸಂಗತಿಯ (ಅರಣ್ಯ -೧೩-೪೪)

ಧರ್ಮರಾಯನು ವನಕ್ಕೇಕೆ ಬಂದನೆನ್ನುವ ಮೊದಲು ಉರಗ ಕೇಳುವ ಕುಲಸಂಬಂಧಿ ಪ್ರಶ್ನೆ ಅಂದಿಗೆ ತುಂಬ ಸಹಜವಾಗಿದೆ. ಬಹುಶಃ ಮನುಷ್ಯನ ವರ್ಣ ಮುಂದಿನ ಆಗುಹೋಗುಗಳನ್ನು ನಿರ್ಣಯಿಸುವಂತೆ ತೋರುತ್ತದೆ.

ಈ ಮುಂಚೆ ಹೇಳಿದಂತೆ ಸಮಾಜದ ಈ ವರ್ಣವಿಧಾನದ ನಿರ್ಣಯ ಸಾಮಾನ್ಯ ಮನುಷ್ಯನಲ್ಲಿ ತಾರತಮ್ಯವನ್ನು ಉಂಟುಮಾಡುತ್ತದೆ. ಅಂಬಿಕೆ, ಅಂಬಾಲಿಕೆಯರಿಗೆ ಕ್ರಮವಾಗಿ ಧೃತರಾಷ್ಟ್ರ, ಪಾಂಡು ಜನಿಸಿದಂತೆ ವಿಲಾಸಿನಿಯಲ್ಲಿ ವಿದುರನು ಜನ್ಮ ತಾಳಿದನು. ಶುಕ್ಲಪಕ್ಷದ ಚಂದ್ರನಂತೆ ಕುಮಾರನು ಬೆಳೆಯುತ್ತಿರಲಾಗಿ ಕುಲವಿಹಿತ ಚೌಲೋಪನ ಆಚರಣೆಯನ್ನು ಧೃತರಾಷ್ಟ್ರ, ಪಾಂಡು ಇಬ್ಬರಿಗೂ ಮಾಡಿಸಲಾಯಿತು. ವಿಲಾಸಿನಿಯ ಪುತ್ರನಾಗಿ ಜನಿಸಿದ ವಿದುರನಿಗೆ ಮಾತ್ರ ಈ ಚೌಲೋಪನ ಭಾಗ್ಯವಿಲ್ಲ ! ಕ್ಷತ್ರಿಯೋಚಿತವಾದ ಈ ಚೌಲನ ಕಾರ್ಯಕ್ರಮದ ಸಂಭ್ರಮ ಶೂದ್ರಕುಲದ ವಿದುರನಿಗಿಲ್ಲದಿರುವುದು ಇಂತಹ ಸಂಭ್ರಮ ಸಡಗರದಿಂದ ದೂರ ಉಳಿಯುವ ಶೂದ್ರರೆಲ್ಲರ ಕತೆಯನ್ನೇ ಹೇಳುತ್ತದೆ. ಇಂತಹ ಸಾಮಾಜಿಕ ಅಂತರ ಅಲಕ್ಷಿತ ಸಮುದಾಯವೊಂದರ ವಿಷಾದವೇ ಆಗಿ ನಿಲ್ಲುತ್ತದೆ.

ಜೂಜಿನ ಸಂದರ್ಭದಲ್ಲಿ ದ್ರೌಪದಿಗಾದ ಅವಮಾನ ಧೃತರಾಷ್ಟ್ರನಲ್ಲಿ ಖೇದವನ್ನುಂಟು ಮಾಡಿತು. ಮನನೊಂದ ಧೃತರಾಷ್ಟ್ರನು ವರಕೇಳಿಕೊಳ್ಳಲು ದ್ರೌಪದಿ ಎರಡು ವರಗಳನ್ನು ಬೇಡಿ ಪಡೆದಳು: ಒಂದನೆಯ ವರದಿಂದ ಭೂಮೀಶ್ವರರ ದಾಸ್ಯ ತೊಲಗಬೇಕು. ಎರಡನೆಯ ವರದಿಂದ ಭೀಮ ಮತ್ತು ನಕುಲ-ಸಹದೇವರಿಗೆ ಶಸ್ತ್ರಾಸ್ತ್ರ ಗಜತುರಗ ರಥಗಳನ್ನು ಕೊಡಬೇಕೆಂದಾಯಿತು. ಧೃತರಾಷ್ಟ್ರನಿಗೆ ಇಷ್ಟರಿಂದಲೇ ಸಮಾಧಾನವಾಗಲಿಲ್ಲ. ಮೂರನೆಯ ವರವನ್ನು ಕೊಡುತ್ತೇನೆ ಕೇಳು ಎಂದರೆ ದ್ರೌಪದಿ ಮೂರನೆಯ ವರವನ್ನು ನಿರಾಕರಿಸಿ ವರದ ವಿಷಯದಲ್ಲಿರುವ ಧರ್ಮ ಸಮ್ಮತ ಮಾತು ಹೇಳುತ್ತಾಳೆ. ವರವು ವೈಶ್ಯನಿಗೆ ಒಂದು, ಕ್ಷತ್ರಿಯ ಸತಿಗೆ ಎರಡು, ನೃಪತಿಗೆ ಮೂರು ಭೂಮೀಶ್ವರರಿಗೆ ನೂರು ಎಂದು ಮೂರನೆಯ ವರವನ್ನು ಬೇಡದೇ ಹೋಗುತ್ತಾಳೆ. ಇಲ್ಲಿ ವರಬೇಡಲು ಬ್ರಾಹ್ಮಣನಿಗೆ ಅವಕಾಶವಿದೆ, ಕ್ಷತ್ರಿಯನಿಗೆ ಅವಕಾಶವಿದೆ, ಕ್ಷತ್ರಿಯ ಸತಿಗೂ ಅವಕಾಶವಿದೆ. ಆದರೆ ಶೂದ್ರನಿಗೆ ಅಂಥ ಅವಕಾಶವಿಲ್ಲ. ಬ್ರಾಹ್ಮಣರನ್ನು ಮೊದಲು ಮಾಡಿಕೊಂಡು ಬರುವ ವರದ ಸಂಖ್ಯಾನುಪಾತವೂ ಕ್ರಮೇಣ ಇಳಿಕೆ

ಕ್ರಮವನ್ನು ಪಡೆಯುತ್ತದೆ. ಮುಖ್ಯವಾಗಿ ಇಲ್ಲಿ ಎದ್ದು ತೋರುವ ಅಂಶವೆಂದರೆ ಶೂದ್ರರು ವರಬೇಡಲು ಅಥವಾ ಪಡೆಯಲು ಅರ್ಹರಲ್ಲ ಎಂಬುದು.

ಚಾತುರ್ವರ್ಣವು ಧರ್ಮಸಮ್ಮತವಾಗಿ ಸಾಮಾಜಿಕವಾಗಿ ಮನ್ನಣೆ ಪಡೆದಿದ್ದರೂ ದುರ್ಯೋಧನನಂಥ ಕಠೋರ ಪ್ರಭುತ್ವವಾದಿಗಳಿಂದ ಇದರ ಉಲ್ಲಂಘನೆಯೂ ಆಗಿದೆ. ಅರ್ಜುನನು ಧನು ಸ್ಪರ್ಧೆಯಲ್ಲಿ ಗೆದ್ದು ದ್ರೌಪದಿಯನ್ನು ವರಿಸಿದ ಮೇಲೆ ಛದ್ಮವೇಷದಲ್ಲಿದ್ದ ಅರ್ಜುನನನ್ನು ಬ್ರಾಹ್ಮಣನೆಂದು ಭಾವಿಸಿ ಅವನನ್ನು ಬೈಯುತ್ತಾನೆ. ಇಂಥದೊಂದು ಉಲ್ಲಂಘನೆ ದ್ರೋಣನ ವಿಷಯದಲ್ಲಿ ದ್ರುಪದಿನಿಂದಾದುದನ್ನು ಈ ಹಿಂದೆ ಉಲ್ಲೇಖಿಸಲಾಗಿದೆ. ಆದರಿದು ವೈಯಕ್ತಿಕ ಮಟ್ಟದ್ದು ಮತ್ತು ತಾತ್ಕಾಲಿಕವಾದುದು. ಜನಸಾಮಾನ್ಯರ ನಡುವಳಿಕೆ ಮಾತ್ರ ಮೇಲುವರ್ಗದವರ ವಿಷಯದಲ್ಲಿ ಮುಗ್ಧವಾಗಿಯೇ ಇದೆ.

ವರ್ಣವ್ಯವಸ್ಥೆ ಒಮ್ಮೊಮ್ಮೆ ವೈಯಕ್ತಿಕ ಮಟ್ಟದಲ್ಲಿ ಅತ್ಯಂತ ಕಠೋರ ರೀತಿಯಲ್ಲಿ ಆಚರಿಸಲ್ಪಡುತ್ತಿದ್ದುದಕ್ಕೆ ರೋಮೇಶನಿಗೆ ಸಂಬಂಧಿಸಿದ ಒಂದು ಘಟನೆಯನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಪಾಂಡವರು ವನವಾಸದ ದಿನಗಳಲ್ಲಿ ಒಂದುದಿನ ಗಂಧಮಾದನ ಗಿರಿಯ ತಪ್ಪಲಲ್ಲಿ ಮಳೆಗೆ ಸಿಲುಕಿ ಪಡಬಾರದ ಕಷ್ಟಪಟ್ಟರು. ಪಾಂಡವರಾದಿಯಾಗಿ ಅವರೊಡನಿದ್ದ ಋಷಿಗಳು ನಿಯೋಗಿಗಳೆಲ್ಲ ಕಾಲಲ್ಲಿಯ ಶಕ್ತಿ ಕಳೆದುಕೊಂಡು ನಡೆಯಲಸಾಧ್ಯವಾಯಿತು. ಇಂಥ ಕಠಿಣ ಸಮಯದಲ್ಲಿ ಧರ್ಮರಾಜನು ಘಟೋತ್ಕಚನನ್ನು ನೆನೆದರೆ ಅವನು ತನ್ನ ಅನುಚರರೊಂದಿಗೆ ಪ್ರತ್ಯಕ್ಷನಾದನು. ಧರ್ಮರಾಜನು ಇರುವ ಸಂಗತಿಯನ್ನು ವಿವರಿಸಿ ಅವನೊಂದಿಗಿದ್ದ ಎಲ್ಲರನ್ನು ಹೊತ್ತು ಸಾಗಿಸಲು ಹೇಳಿ ಘಟೋತ್ಕಚ ಮೊದಲು ಮಾಡಿ ಎಲ್ಲರೂ ಪಾಂಡವರನ್ನೂ ಅವನೊಂದಿಗಿದ್ದವರನ್ನೂ ಹೆಗಲ ಮೇಲೆ ಹೊತ್ತುಕೊಂಡರು. ಈ ಹೊತ್ತಿನಲ್ಲಿ ರೋಮೇಶ ಮುನಿಮಾತ್ರ ಅಸುರ ಸ್ಪರ್ಶವನ್ನೊಲ್ಲದೆ ಗಗನೇಚರ ಗತಿಯಿಂದಲೇ ಇವರೊಂದಿಗೆ ಹೊರಟನು. ರೋಮೇಶನ ಈ ನಡುವಳಿಗೆ ಉತ್ತಮ ಕುಲದ ರಕ್ಷಣೆಯಾಗಿ ತೋರುತ್ತದೆ. 'ಅಸುರ ದೇಹ ಸ್ಪರ್ಶ ಅಸಮಂಜಸವಲಾ' ಎಂದು ಅವರನ್ನು ದೂರವೇ ಇರಿಸುವ ರೋಮೇಶ ಮುನಿಯ ಈ ನಡುವಳಿಕೆ ಘಟೋತ್ಕಚ ಅಥವಾ ಅವನಪರಿವಾರದಲ್ಲಿ ಎಣಿಸಿದ ಶ್ರೇಣಿಕೃತ ತಾರತಮ್ಯವೆನಿಸುತ್ತದೆ.

ಕುರುಕ್ಷೇತ್ರ ಯುದ್ಧಾನಂತರದಲ್ಲಿ ವೇದವ್ಯಾಸ ಮುನಿಯ ಮಾರ್ಗದರ್ಶನದಂತೆ ಗಾಂಧಾರಿ ಮೊದಲು ಮಾಡಿಕೊಂಡು ದುರ್ಯೋಧನನ ಅರಸಿಯರು, ಕೌರವೇಶ್ವರನ ಬೆಂಬಲಕ್ಕೆ ನಿಂತು ಮಡಿದ ಬೇರೆಬೇರೆ ಅರಸರ ರಾಣಿಯರು 'ಬಾಯಿನ'ವನ್ನು ಕೊಡಿಸುವ ನೆಪದಲ್ಲಿ ರಣಭೂಮಿಯ ದರ್ಶನಕ್ಕೆ ಏಕಾಂಬರಧಾರಿಗಳಾಗಿ ಪಟ್ಟಣದ ಬೀದಿಗಳಲ್ಲಿ ನಡೆಯುತ್ತಿದ್ದರೆ ಅವರನ್ನು ಚಾಂಡಾಲರಾದಿಯಾಗಿ ಸರ್ವಜನವೂ ನೋಡುವಂತಾಯಿತು.

> ಗಾಳಿಯರಿಯದು ಮುನ್ನ ರವಿಕಿರ
> ಣಾಳಿ ಸೋಂಕದಪೂರ್ವರೂಪಿನ
> ಮೇಲೆ ಬೀಳುವವೆಂಬವೊಲು ಕಡುವಿಸಿಲು ಬಿರುಗಾಳಿ

ತೂಳಿದವು ತರುಣಿಯರನಾವವ

ರಾಲಿಯರಿಯದ ನೆಲೆಯನಾ ಚಾಂ

ಡಾಲಜನ ಪರಿಯಂತ ಕಂಡುದು ರಾಜರಾಣಿಯರ (ಗದಾ-೧೧-೨೦)

ಇದುವರೆಗೆ ಗಾಳಿ, ರವಿಕಿರಣಗಳೂ ಸೋಂಕದ ಈ ಅಪೂರ್ವ ರೂಪಿನ ರಾಣಿಯರನ್ನು ಸಾಮಾನ್ಯ ಜನವರ್ಗ ಇದುವವೆಗೆ ನೋಡಿಯೇ ಇರಲಿಲ್ಲ, ಅಂದರೆ ಪರಿಶಿಷ್ಟರಿಂದ ದೂರವಿರುವ ಅರಮನೆಯ ಸ್ತ್ರೀಲೋಕವಿದು. ಇಂಥದೊಂದು ದಾರುಣ ಸಂದರ್ಭದಲ್ಲಿ ಅನಿವಾರ್ಯವಾಗಿ ಅರಮನೆಯ ನೆರಳಿನಿಂದ ಹೊರಬಂದ ಇವರನ್ನು ಎಲ್ಲರೂ ನೋಡುವಂತಾಯಿತು, ದುಃಖ ಎಲ್ಲರನ್ನೂ ಸಮಾನನೆಲೆಗೆ ತಂದು ನಿಲ್ಲಿಸುತ್ತದೆ; ಎಲ್ಲ ವರ್ಣದವರನ್ನೂ ಒಂದು ಮಾಡುತ್ತದೆ ಎಂಬ ಮಾತಿಗೊಂದು ಸಾಕ್ಷಿಯೆಂಬಂತಿದೆ ಈ ಪ್ರಸಂಗ. ಇಲ್ಲಿ ಮುಖ್ಯವಾಗಿರುವ ಅಂಶವೆಂದರೆ ಮೇಲು ವರ್ಗದ ಸ್ತ್ರೀಯರನ್ನು ಅಪಾತ್ರರೆನಿಸಿದ ಚಾಂಡಾಲರು ಅಥವಾ ಶೂದ್ರರು ನೋಡಬಾರದು. ನಿಮ್ನ ವರ್ಗದ ಅನೇಕ ಹೆಣ್ಣುಮಕ್ಕಳು ಅರಸರ ಉಪಭೋಗಕ್ಕೋ ಅಂತಃಪುರದ ಸೇವೆಗೋ ಇರುವಾಗ ಅದೇ ವರ್ಗದ ಪುರುಷ ಸಮುದಾಯ ಅಂತಃಪುರದ ರಾಣಿಯರನ್ನು ನೋಡುವಂತಾದುದು ಅನಪೇಕ್ಷಿತವೆನಿಸುವುದು ತಳವರ್ಗದವರನ್ನು ಕೀಳಾಗಿ ಕಾಣುವ ರೀತಿಯೆನಿಸುತ್ತದೆ.

ಶ್ರೇಣಿಕೃತ ಸಮಾಜದ ಸ್ವರೂಪ ಹಾಗೂ ಪರಿಣಾಮಗಳನ್ನು ವಾಸ್ತವ ರೀತಿಯಲ್ಲಿ ನಮ್ಮೆದುರು ನಿಲ್ಲಿಸುತ್ತಾನೆ ಕುಮಾರವ್ಯಾಸ. ಅಂದರೆ ಕುಮಾರವ್ಯಾಸ ಸಾಮಾನ್ಯ ಮುನಷ್ಯರನ್ನು ಮರೆಯದೆ ಅವರನ್ನು ಅನುಲಕ್ಷಿಸುತ್ತಲೇ ಮುಂದುವರಿದಿದ್ದಾನೆ. ಕಾಳಗ ಪ್ರಧಾನವಾದ ಕೌರವ-ಪಾಂಡವ ಕಥೆಯಲ್ಲಿ ಇವರನ್ನು ಕಂಡರಿಸುವ ಪ್ರಮಾಣ ಕಡಿಮೆಯಿರಬಹುದು ಅಷ್ಟೇ. ರಾಜಸೂಯ ಯಾಗದಲ್ಲಿ ಸಾಮಾನ್ಯ ಜನವರ್ಗಕ್ಕೆ ಸಂದ ಗೌರವವನ್ನು ಈ ಪದ್ಯ ಹೇಳುತ್ತದೆ.

ಧರಣಿಪತಿಕೇಳ್ ಶೂದ್ರ ಮೊದಲಾ

ಗಿರೆ ಸಮಸ್ತ ಪ್ರಜೆ ವಿಧಾವಂ

ತರಿಗೆ ಭೋಜನ ಗಂಧ ಮಾಲ್ಯಾಂಬರ ವಿಲೇಪನದ

ಉರು ನಿಯೋಗಗಳಿಂದ್ರ ಸೇನನು

ವರ ವಿಶೋಕನು ರುಗ್ಮನತಿಬಂ

ಧುರ ಸಮೀರಪತಾಕಸೇನನು ಸೂತರೈವರಿಗೆ (ಸಭಾ-೭-೧೯)

ಭೋಜನ, ಗಂಧ ಮೌಲ್ಯಾಂಬರ ವಿಲೇಪನಗಳಿಂದ ಶೂದ್ರ ವೊದಲಾಗಿ ಸಮಸ್ತ ಪ್ರಜೆಗಳನ್ನು ಸನ್ಮಾನಿಸಿದುದು ಅಪರೂಪದ ಉದಾಹರಣೆ. ಆದರೆ ಈ ಸನ್ಮಾನದ ಉಸ್ತುವಾರಿಯನ್ನು ವಹಿಸಿಕೊಟ್ಟುದು ಇಂದ್ರಸೇನ, ವಿಶೋಕ, ರುಗ್ಮ, ಸಮೀರ ಪತಾಕಸೇನನೆಂಬ ಐವರು ಸೂತಕುಲದವರಿಗೆ. ಅಂದರೆ ಜನಸಾಮಾನ್ಯರನ್ನು ನಿಮ್ನ ವರ್ಗದವರೆ ಸನ್ಮಾನಿಸಬೇಕೆಂಬ ಕಟ್ಟುಪಾಡು ಇಲ್ಲಿರುವುದು ಸ್ಪಷ್ಟವಾಗುತ್ತದೆ. ರಾಜಪ್ರಭುತ್ವದ ಸೂಕ್ಷ್ಮಮತಿ ಎಂಥದೆಂದರೆ ಒಂದು ಕಡೆಗೆ ಸಾಮಾನ್ಯ ಜನವರ್ಗವನ್ನು ಸನ್ಮಾನಿಸಿದಂತೆ ಮಾಡಿ ಅವರ ಆದರವನ್ನೂ, ಗಳಿಸಿಕೊಳ್ಳಬೇಕು. ಇನ್ನೊಂದು ಕಡೆಯಲ್ಲಿ ಕುಲದ ಅಂತರವನ್ನೂ ಕಾಯ್ದುಕೊಳ್ಳಬೇಕು ! ವಿಶೇಷವೆಂದರೆ ಇಂಥ ತಾರತಮ್ಯದ ಅನೇಕ ಪ್ರಸಂಗಗಳು ಒಪ್ಪಿತ ವ್ಯವಸ್ಥೆಯ ಒಂದೊಂದು ಕವಲಾಗಿ ತುಂಬ ಸಹಜವಾಗಿ ನಡೆದು ಹೋಗುತ್ತವೆ.

ಗದಾಪರ್ವದ ಆರಂಭದಲ್ಲಿ ಧರ್ಮರಾಜನ ಪಟ್ಟಾಭಿಷೇಕ ಮಹೋತ್ಸವಕ್ಕೆ ಮೇಲುವರ್ಣದವರು ಮೊದಲಾಗಿ ಚಾಂಡಾಲರು ಕೊನೆಯಾಗಿ ಸಮಸ್ತ ಭೂಜನ ಜಾಲವು ಹಸ್ತಿನಪುರಿಗೆ ಬಂದ ವಿಷಯವಿದೆ. ಎಲ್ಲಾ ಕಡೆಯಿಂದಲೂ ಬಂದು ಇಂಥ ಮಹೋತ್ಸವದಲ್ಲಿ ಭಾಗವಹಿಸುವ ಸಾಮಾನ್ಯ ಜನಸ್ತೋಮಕ್ಕೆ ವಿಶೇಷ ಕಾರ್ಯಭಾರವೇನೂ ಇಲ್ಲಿರುವುದಿಲ್ಲ. ಇವರಲ್ಲಿ ಬಹಳಷ್ಟು ಜನ ಬಂದಿರುವುದು ತಮ್ಮ ಸಂತೋಷಕ್ಕೆ; ಇವರೆಲ್ಲ ಉತ್ಸವದ ವಿವಿಧ ಕಾರ್ಯಕ್ರಮಗಳನ್ನು ತಮ್ಮಷ್ಟಕ್ಕೆ ತಾವು ಸುಖಿಸುತ್ತಾರೆ ಮರಳಿ ತಮ್ಮೂರಿಗೆ ಹೋಗುತ್ತಾರೆ ಅಷ್ಟೇ.

ಸಾಮಾಜಿಕ ಶ್ರೇಣಿಯಿಂದಾಗಿ ಉದ್ಭವಿಸಿದ ಮಾನಸಿಕ ಕ್ಷೋಭೆ ಇಂದಿನ ಅರ್ಥದಲ್ಲಿ ಅಂದಿನ ಸಾಮಾನ್ಯ ಜನವರ್ಗವನ್ನು ಕಾಡಲಿಲ್ಲ ಎಂದು ತೋರುತ್ತದೆ. ಚಾತುರ್ವರ್ಣದ ವಿಭಾಗ ಕ್ರಮವನ್ನಾಗಲಿ ಅವರಿಂದುಂಟಾದ ಸಾಮಾಜಿಕ ಶ್ರೇಣಿಯನ್ನಾಗಲಿ ತಳವರ್ಗದವರು ಇದು ಒಂದು ವ್ಯವಸ್ಥೆಯೆನ್ನುವಂತೆ ಒಪ್ಪಿಕೊಂಡು ಬಿಟ್ಟಿದ್ದಾರೆ. ಸಮಾಜದಲ್ಲಿ ಉನ್ನತವರ್ಗಗಳು ತಮ್ಮ ಸೇವೆಗಾಗಿ ನಮ್ಮನ್ನು ಬಳಸಿಕೊಳ್ಳುತ್ತಿವೆ. ನಾವೇಕೆ ಅವರ ಬಲವಂತದ ಸೇವೆಯನ್ನು ಒಪ್ಪಿಕೊಳ್ಳಬೇಕು ಎಂಬಂತಹ ಯಾವ ಭಾವನೆಯೂ ಇವರಿಗಿಲ್ಲ. ಮೂಲತಃ ವ್ಯವಸ್ಥೆಯನ್ನು ಜೀವನದ ಒಂದು ಭಾಗವಾಗಿ ಸ್ವೀಕರಿಸಿದಾಗ ಅದನ್ನು ಪ್ರತಿರೋಧಿಸದೆ ಅದರೊಂದಿಗೆ ಪ್ರವಹಿಸುವುದೇ ಅವರಿಗೆ ಸಹಜವಾಗಿರುವ ಜೀವನ ಮಾರ್ಗವಾಗಿ ತೋರುತ್ತದೆ.

ಶ್ರೇಣೀಕೃತ ಸಮಾಜದಲ್ಲಿ ಏಕಲವ್ಯ, ಯುಯುತ್ಸು, ವಿದುರ, ಕರ್ಣನಂಥವರೆಲ್ಲ ಸಾಮಾಜಿಕ ನ್ಯಾಯ ಪಡೆಯದೇ ಹೋಗುತ್ತಾರೆ. ಇಷ್ಟು ದೊಡ್ಡದಾದ ಕುಮಾರವ್ಯಾಸ ಭಾರತದಲ್ಲಿ ಏಕಲವ್ಯನ ವಿಷಯಕ್ಕೆ ಬರುವವು ಪದ್ಯವೊಂದರ ಎರಡು ಚರಣಗಳು ಮಾತ್ರ. ಬೇಡಕುಲ ಸಂಜಾತನಾದ ಏಲವ್ಯನು ಅರ್ಜುನನಿಗೆ ಪ್ರತಿಸ್ಪರ್ಧಿಯಗಿ ಬೆಳೆಯುತ್ತಾನೆ ಅರ್ಜುನನೊಡನೆ ಸೆಣಸುತ್ತಾನೆ ಎಂಬ ಮತ್ಸರಕ್ಕೆ ದ್ರೋಣನು ಏಕಲವ್ಯನ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಪಡೆದನು. "ಸೆಣಸಿದೊಡೇಕಲವ್ಯಕನ ಬೆರಳಕೊಂಡನು ಪಾರ್ಥನನು ಪತಿಕರಿಸಿದನು"(ಆದಿ-೨-೭)ಎಂಬುದಿಷ್ಟೇ ಇಲ್ಲಿಯ ವಿಷಯ. ಯುಯುತ್ಸು ಪಾತ್ರವೂ ಅಷ್ಟೇ; ಧೃತರಾಷ್ಟ್ರನ ದಾಸಿಪುತ್ರನಾಗಿ ಜನಿಸಿದ ಯುಯುತ್ಸುವಿನ ವಿಷಯಕವಾಗಿ ಬರುವುದು ಅತ್ಯಲ್ಪ ವಿಷಯ. ಅವನು ಕೌರವರಲ್ಲಿ ನೂರಾ ಒಂದನೆಯವನಾಗಿ ಗುರುತಿಸಲ್ಪಟ್ಟಿರುವುದೇ ಹೆಚ್ಚು. ಅಂತೆಯೇ ಧರ್ಮರಾಜನ ಪಟ್ಟಾಭಿಷೇಕದ ನಂತರ ಯುಯುತ್ಸುವನ್ನು ಸರ್ವಾಧಿಕಾರದಲ್ಲಿ ನೇಮಿಸಿದ್ದು ಇನ್ನೊಂದು ಹೆಚ್ಚುಗಾರಿಕೆ. ಹಾಗೆ ನೋಡಿದರೆ ದಾಸಿಪುತ್ರ ವಿದುರ ಮತ್ತು ಸೂತಪುತ್ರನೆನಿಸಿದ ಕರ್ಣ ಪಾತ್ರಗಳಿಗೆ ವಿಪುಲ ಅವಕಾಶ ಕುಮಾರವ್ಯಾಸ ಭಾರತದಲ್ಲಿ ದೊರೆತಿದೆ.

ವಿದುರ:

ಕೃಷ್ಣ ದ್ವೈಪಾಯನನಂಥ ಶ್ರೇಷ್ಠ ಮುನಿಗೆ ಮಗನಾಗಿ ಹುಟ್ಟಿಯೂ ತಾಯಿ ಕಡೆಯಿಂದ ದಾಸಿಪುತ್ರನೆನಿಸಿ ಶೂದ್ರನಾಗಿ ಬಾಳಿದವನು ವಿದುರ. ವಿದುರ ಅಗಾಧ ಜ್ಞಾನಿ, ನೀತಿವಂತ, ಅಪಾರ ಸಹನೆಯುಳ್ಳವ – ಏನಿದ್ದರೂ ಸಮಾಜದ ಕೀಳುಕಣ್ಣಿಗೆ ಗುರಿಯಾಗಿ ಬಾಳಿದ್ದು ಸಾಮಾಜಿಕ ಮೌಲ್ಯಗಳ ವಿಡಂಬನೆಯಾಗಿ ತೋರುತ್ತದೆ. ವ್ಯಾಸನ ವಿಕಾರ ರೂಪವನ್ನು ಸಹಿಸಿಕೊಂಡು ಅನನ್ಯಭಕ್ತಿಯಿಂದ ಮುನಿಯ ಸೇವೆ ಮಾಡಿ ಅಂಬಿಕೆ ವಿದುರನನ್ನು ಪಡೆದಳು. ವಿದುರ ಜೀವನ ಪರ್ಯಂತ ಪಾಲಿಸಿಕೊಂಡು ಬಂದ ಸಂಯಮ ತಾಯಕಡೆಯಿಂದ ಬಂದುದು. ತನ್ನೊಂದಿಗೇ ಹುಟ್ಟಿದ ಪಾಂಡು, ಧೃತರಾಷ್ಟ್ರರು ಅರಮನೆಯ ಎಲ್ಲಾ ಸಂತೋಷ, ಸಡಗರಗಳನ್ನು ಪಡೆಯುತ್ತ ಬೆಳೆಯುತ್ತಿದ್ದರೆ ವಿದುರನಿಗೆ ಯಾವ ಸೌಭಾಗ್ಯಗಳೂ ಇಲ್ಲ. ಬಾಲ್ಯದಲ್ಲಿ ಧೃತರಾಷ್ಟ್ರ, ಪಾಂಡವರಿಗೆ ದೊರೆತ ಯಾವ ಸಾಮಾಜಿಕ ಸಂಸ್ಕಾರಗಳೂ

ವಿದುರನಿಗಿಲ್ಲ. ಅವನ ತಾಯಿ ಮಮತೆ ಹೇಗಿದ್ದಿತೊ ಅವನ ಸಂಬಂಧಿಕರ ಪ್ರೀತಿ ಹೇಗಿದ್ದಿತೋ ಎಲ್ಲ ಉಲ್ಲೇಖಗಳಿಗೆ ಎರವಾಗಿ ಬಡವನಾಗಿಯೇ ವಿದುರ ಬೆಳೆದ. ವಿದುರನ ವಿಷಯದಲ್ಲಿ ನಮಗೆ ಮತ್ತೆ ಮತ್ತೆ ಕಿವಿಗೆ ಬೀಳುವ ಅಂಶಗಳೆಂದರೆ ಅವನು ಕೃಷ್ಣ ಭಕ್ತನಾಗಿದ್ದ, ಜ್ಞಾನಿಯಾಗಿದ್ದ, ಗುಣಗ್ರಾಹಿಯಾಗಿದ್ದ.

ಕೃಷ್ಣನಲ್ಲಿ ವಿದುರನಿಗೆ ಅನನ್ಯ ಭಕ್ತಿ. ಕೃಷ್ಣ ಬೆಳೆಯಿಸಿಕೊಂಡು ಬಂದ ಪಾಂಡವರ ಪ್ರೀತಿ ಮತ್ತು ಅವನ ಅಲೌಕಿಕ ನಡುವಳಿಕೆಗಳು ವಿದುರನನ್ನು ಕೃಷ್ಣನ ಸಮೀಪಕ್ಕೆ ತಂದಿವೆ. ಜಾತಿ ಅಂತಸ್ತು, ಸಿರಿತನ–ಬಡತನ ಇವು ಯಾವವೂ ಭಕ್ತಿ–ಭಾವನೆಯನ್ನು ತಡೆದು ನಿಲ್ಲಿಸಲಾರವು ಎಂಬುದಕ್ಕೆ ವಿದುರ ಒಳ್ಳೆಯ ಉದಾಹರಣೆಯಾಗಿದ್ದಾನೆ. ಸಂಧಿಕಾರ್ಯಕ್ಕಾಗಿ ಕೃಷ್ಣ ಹಸ್ತನಾವತಿಗೆ ಬರುತ್ತಾನೆಂದರೇ ಇವನಿಗೆ ಆವೇಶ ಶುರುವಾಗುತ್ತದೆ. ವಿದುರನ ಕೃಷ್ಣಭಕ್ತಿ ಎಂಥದು ಎಂಬುದನ್ನು ಸಾದರ ಪಡಿಸಲು ಉದ್ಯೋಗ ಪರ್ವದ ಇದೊಂದು ಪ್ರಸಂಗದ ಉದಾಹರಣೆ ಸಾಕೆನಿಸುತ್ತದೆ. ರಾಜರ ಆತಿಥ್ಯದ ಕೋರಿಕೆಯನ್ನು ನಿರಾಕರಿಸಿ ಶ್ರೀಕೃಷ್ಣ ವಿದುರನ ಮನೆ ಬಾಗಿಲಿಗೆ ಬರುವ ಹೊತ್ತು ವಿದುರನ ಭಕ್ತಿಯನ್ನು ಪ್ರಮಾಣಿಕರಿಸುತ್ತದೆ. ತನ್ನ ಪ್ರೀತಿಯ ಕೃಷ್ಣ ಮನೆ ಬಾಗಿಲಿಗೆ ಬಂದಿದ್ದಾನೆ ಅವನನ್ನು ಆದರಿಸಿ ಒಳಗೆ ಬರಮಾಡಿಕೊಳ್ಳಬೇಕು ಎಂಬುದನ್ನೂ ಲಕ್ಷಿಸದೆ ಮೈಮರೆತು ವಿದುರನು ಕೃಷ್ಣ ಮಹಿಮೆಯನ್ನು ಹೊಗಳತೊಡಗಿದನು: ಸದಾಕಾಲ ತನ್ನನ್ನು ನೆನೆಯುವ ಸನಕಾದಿಗಳಿಗೆ ಒಲಿಯದ ಮಹಾಮಹಿಮನು ತನ್ನ ಮನೆಗೆ ಬರುತ್ತಿದ್ದಾನೆ. ವೇದದರಿಕೆಗೆ ಅಳವಡದ, ಉಪನಿಷತ್ತಿನ ದಿವ್ಯಸುತ್ತಿಯ ಗಡನೆಗೆ ಅಳವಡದ ಮುನಿಗಳ ಮುಖಕೆ ಮನಗುಡದ ಅನಾದಿ ಸಿದ್ಧನು ತನ್ನ ಮನೆಗೆ ಬರುತ್ತಿದ್ದಾನೆ ! ವಿದುರನು ಆವೇಶಗೊಂಡು ಬೀದಿಯ ತುಂಬ ಓಡಾಡಿದ್ದನ್ನು ಕುಮಾರವ್ಯಾಸ ಹೀಗೆ ಹಿಡಿದಿಟ್ಟಿದ್ದಾನೆ.

ನೋಡಿದನು ಮನದಣಿಯೆ ಮಿಗೆ ಕೊಂ
ಹಾಡಿದನು ಬೀದಿಯಲಿ ಹರಿದೆಡೆ
ಯಾಡಿದನು ಭ್ರಮೆಯಾಯ್ತು ವಿದುರಂಗೆಂಬ ಗಾವಳಿಯ
ಕೂಡೆ ಕುಣಿದನು ಮನೆಯ ಮುರಿದೀ
ಡಾಡಿದನು ಮೈಮರೆದ ಹರುಷದ
ಗಾಡಿಯಲಪ್ರತಿಮನೆಸೆದನು ಬಕುತಿ ಕೇಳಿಯಲಿ (ಉದ್ಯೋಗ–೮–೧೧)

ಮುರಾರಿ ಒತ್ತಾಯಪೂರ್ವಕ ತಾನೇ ವಿದುರನನ್ನು ಅವನ ಮನೆಯೊಳಗೆ ಕರೆದೊಯ್ಯುವನು. ವಿದುರನ ಕಣ್ಣುಗಳು ಕೃಷ್ಣ ಪದಾಬ್ಜದಲ್ಲಿ ತೊಡಗಿಕೊಂಡವು. ಮಾತುಬಾರದ ಮೌನದಲ್ಲಿ ವಿದುರನುಳಿದನು. ಕೃಷ್ಣನಿಗೆ ಕೊಡಲು ವಿದುರನ ಮನೆಯಲ್ಲಿ ಏನಿದ್ದೀತು ? 'ಪಾಲ್ಗಡಲೊಳಗೆ ಮಲಗುವ ವಿಷ್ಣು ವಿದುರನ ನಿಳಯದೊಳಗೊಕ್ಕುಡಿತೆ ಹಾಲಲಿ ಹಸಿವನೂಕಿದನು!'

ಕೃಷ್ಣ ಭಕ್ತಿಯನ್ನು ಅಳವಡಿಸಿಕೊಂಡು ಶ್ರೇಷ್ಠ ಭಕ್ತನಾಗಿರುವಂತೆಯೇ ವಿದುರ ಜ್ಞಾನಿಯೂ ಆಗಿದ್ದ. ಉದ್ಯೋಗ ಪರ್ವದ ಮೂರನೆಯ ಸಂಧಿ ವಿದುರ ನೀತಿಗಾಗಿಯೇ ಮೀಸಲಾಗಿದೆ. ೧೩೭ ಪದ್ಯಗಳನ್ನೊಳಗೊಂಡ ಈ ಸುದೀರ್ಘ ಸಂಧಿಯಲ್ಲಿ ಕೇವಲ ನೀತಿಯಿಲ್ಲ ಅಗಾಧ ಜ್ಞಾನವೂ ತುಂಬಿಕೊಂಡಿದೆ. ಮನುಷ್ಯನ ಸನ್ನಡತೆಗೆ ಜ್ಞಾನ ಬೇಕು; ಅದರೊಂದಿಗೆ ನೀತಿ ಬೇಕು. ವಿದುರ ಎರಡನ್ನೂ ಹೊಂದಿದವನಾಗಿದ್ದ. ಜ್ಞಾನ ಎಂಬುದು ಕೇವಲ ಮೇಲುವರ್ಣದವರ ಸೊತ್ತಲ್ಲ. ಹಲವು ಮುಖಗಳಿಂದ ಜ್ಞಾನವನ್ನು ಆರ್ಜಿಸಿಕೊಂಡು ಯಾರು ಬೇಕಾದರೂ ಜ್ಞಾನಿಯಾಗಬಹುದು: ಅದಕ್ಕೆ ಕುಲದ ಲೇಪನವಿಲ್ಲ.

ಧೃತರಾಷ್ಟ್ರನಿಗೆ ವಿದುರ ಹೇಳುವ ನೀತಿಮಾತುಗಳೆಲ್ಲ 'ವಿದುರ ನೀತಿ'ಯೆಂದೇ ಪ್ರಸಿದ್ಧವಾಗಿವೆ. ವಿದುರನಾಡುವ ಈ ಮಾತುಗಳಲ್ಲಿ ನೀತಿ ಲೋಕೋಕ್ತಿ, ವ್ಯವಹಾರಿಕ ತಿಳುವಳಿಕೆ, ಜ್ಞಾನ, ತಾತ್ವಿಕ ವಿಷಯ ಎಲ್ಲವೂ ತುಂಬಿಕೊಂಡಿವೆ. ಅಲ್ಲಲ್ಲಿ ಲೋಕ ವಿಡಂಬನೆಯೂ ಉಂಟು.

ನೀತಿ – ಲೋಕದ ಜನರಿಗೆ ಯಾವುದು ಹಿತವೋ ಅದನ್ನು ಮೆಚ್ಚಿ ನಡೆಯುವವನು, ಜನಕ್ಕೆ ನಿಂದೆಯೆನಿಸುವುದನ್ನು ಆಚರಿಸದಿರುವವನು ನಾಸ್ತಿಕರ ಬಳಿಯಲ್ಲಿ ಸುಳಿಯದಿರುವವನು, ತತ್ವ ವಿಜ್ಞಾನಗಳನ್ನು ಅವಲಂಬಿಸಿರುವವನು ಯಾವನೋ ಅವನೇ ಭೂಮಿಯಲ್ಲಿ ಉತ್ತಮನು. (ಉದ್ಯೋಗ–೩–೩೬)

ಲೋಕೋಕ್ತಿ– ಕೊಳಕುಬಟ್ಟೆ ಹಾಕಿಕೊಂಡಿರುವವನು, ಹಲ್ಲಿನಲ್ಲಿ ಹೊಲಸನ್ನಿಟ್ಟುಕೊಂಡಿರುವವನು ಅತಿಯಾಗಿ ಊಟ ಮಾಡುವವನು, ನಿಷ್ಠುರವಾದ ಮಾತನಾಡುವವನು, ಉದಯಾಸ್ತ ಸಮಯಗಳಲ್ಲಿ ಮಲಗಿರುವವನು – ಇಂಥವನು ಅವನು ಕಮಲಲೋಚನ ನೆನಿಸಿದ ವಿಷ್ಣುವೇ ಆಗಿದ್ದರೂ ಅವನನ್ನು ಭಾಗ್ಯಸಿರಿಯು ಬಿಟ್ಟು ಹೋಗುತ್ತಾಳೆ.(ಉದ್ಯೋಗ–೩–೫೭)

ವ್ಯವಹಾರಿಕ ತಿಳುವಳಿಕೆ – ಯಾವುದೇ ಕಾರ್ಯವನ್ನು ಕೈಗೊಳ್ಳುವ ಮೊದಲು ನಾಲ್ವರಿಗೆ ತಿಳಿಸಿ ಅವರ ಸಲಹೆಯನ್ನು ಪಡೆಯಬೇಕು. ತರುವಾಯ ಇಬ್ಬರಲ್ಲಿ ಆ ಮೇಲೆ ಒಬ್ಬರಲ್ಲಿ ಆಲೋಚಿಸಬೇಕು. ಆ ಬಳಿಕ ತಾನೊಬ್ಬನೇ ತನ್ನಲ್ಲಿ ತಾನು ವಿಚಾರಮಾಡಿ ನಿರ್ಧಾರ ತೆಗೆದುಕೊಂಡು ಅದರಂತೆ ಕೆಲಸ ಮಾಡಬೇಕು. ಹಾಗೆ ತಾನೇ ನಿರ್ಧಾರ ತೆಗೆದುಕೊಕೊಂಡು ಮಾಡುವ ಕಾರ್ಯಕ್ಕೆ ನಿಂದನೆ ಎಂಬುದಿರುವುದಿಲ್ಲ.

(ಉದ್ಯೋಗ–೩–೨೯)

ಜ್ಞಾನ– ಘಟಿಸಿ ಹೋಗಿರುವ ವಿಷಯವನ್ನು ಸ್ಥೂಲ ಸೂಕ್ಷ್ಮಗಳಿಂದ ಅರಿಯಬಲ್ಲವನೂ ಉತ್ಸವ ಶೀಲನೂ ಕ್ರೋಧವನ್ನು ಕಳೆದುಕೊಂಡವನೂ ಕಾಲವಿಳಂಬ ಮಾಡದೆ ಕಾರ್ಯಗಳನ್ನು ಸೂತ್ರರೂಪದಲ್ಲಿ ಹೊಂದಿಸುವವನೂ ವೃದ್ಧ ಸೇವನೂ ಸತ್ಯವಾಕ್‌ಶುಚಿಯೂ ಕಾಲದ ಆಗು ಹೋಗುಗಳನ್ನು ಬಲ್ಲವನೂ ವಿನೀತನಾದವನೂ ವ್ಯಸನಮುಕ್ತನೂ ಪಂಡಿತನೂ ರಹಸ್ಯ ಪಾಲಕನೂ ಸತ್ಕೃತಿ ಪಾಲಕನೂ ಆದ ಮಂತ್ರಿ ನಿನ್ನಲ್ಲಿ ಉಂಟೆ ? (ಆಂದರೆ ಈ ಗುಣಗಳನ್ನು ಪಡೆದವನು ಮಂತ್ರಿ) (ಉದ್ಯೋಗ–೩–೮೭)

ತಾತ್ವಿಕತೆ– ಇಂದ್ರಿಯ ನಿಗ್ರಹ ಮಾಡಿಕೊಂಡು ಕರ್ಮದ ಬಂಧನವನ್ನು ಕಳಚಿ ವಿಷಯದ ದಂದುಗವನ್ನು ಹೋಗಲಾಡಿಸಿ, ಮಾಯಾ ಪಾಶವನ್ನು ಹರಿದೊಗೆದು ಸುಖ–ದುಃಖಗಳ ದ್ವಂದ್ವವಿಲ್ಲದವನಾಗಿ ವಿಶ್ವದಲ್ಲಿ ಒಂದಾಗಿ ಮೆರೆಯಲು ಬಲ್ಲವನು ಗುರುವೆನಿಸುವನು.

(ಉದ್ಯೋಗ–೩–೮೩)

ಲೋಕವಿಡಂಬನೆ– ಸಿರಿಯುಳ್ಳವನೇ ಕುಲವಂತ, ಸಿರಿಯುಳ್ಳವನೇ ಪಂಡಿತ, ಸಿರಿಯುಳ್ಳವನೇ ಮಹಾತ್ಮನು, ಸಿರಿಯುಳ್ಳವನೇ ಸಕಲ ಗುಣಯುತನು, ಸಿರಿಯುಳ್ಳವನೇ ಸುಶೀಲನು ಸಿರಿಯಿಲ್ಲದವನು ಶಿವನಾದರೂ ಸರಿಯೆ ಲೋಕ ಅವನನ್ನು ಲಕ್ಷಿಸಲಾರದು. (ಉದ್ಯೋಗ–೩–೩೮)

ಮೇಲೆ ಉಲ್ಲೇಖಿಸಿದ್ದರಲ್ಲಿ ವಿದುರನ ಜ್ಞಾನಕ್ಕೆ ಸಂಬಂಧಿಸಿದಂತೆ ಮಂತ್ರಿ ಗುಣಗಳನ್ನು ಮಾತ್ರ ಹೇಳಲಾಗಿದೆ. ಇನ್ನೂ ಮುಂದುವರಿದು ವಿದುರ ಸೇನಾಪತಿ. ಸಂಧಿವಿಗ್ರಹಿ. ಚಾಮರದವ. ಛತ್ರದವ

ಚದುರಂಗ ಬಲ, ಶಕುನ ಹೀಗೆ ಎಲ್ಲರನ್ನೂ, ಎಲ್ಲವನ್ನೂ ಬಲ್ಲವನಾಗಿದ್ದಾನೆ, ಶೂದ್ರರನ್ನು ವಿದ್ಯೆಯಿಂದ ದೂರವಿಟ್ಟ ಕಾಲದಲ್ಲಿ ವಿದುರನಿಗೆ ಇಂಥ ಜ್ಞಾನ, ಲೋಕಾನುಭವಗಳು ಹೇಗೆ ಪ್ರಾಪ್ತವಾದವು ? ಗುರುವಾರು ? ಯಾವುದೂ ಸ್ಪಷ್ಟವಿಲ್ಲ.

ವಿದುರ ಪಾಂಡವ ಪಕ್ಷಪಾತಿ; ನಿರಂತರ ಅವರ ಅಭ್ಯುದಯವನ್ನು ಹಾರೈಸಿ ಅವರಿಗೆ ಕಷ್ಟಬಂದಾಗಲೆಲ್ಲ ಅದರ ಪರಿಹಾರಕ್ಕಾಗಿ ಪ್ರಯತ್ನಪಡುತ್ತಾನೆ. ದುರ್ಯೋಧನನು ಪಾಂಡವರನ್ನು ವಾರಣಾವತಕ್ಕೆ ಕಳಿಸಿ ಅರಗಿನ ಮನೆಯಲ್ಲಿ ಅವರು ಬೆಂದು ಹೋಗುವ ಕುತಂತ್ರ ಮಾಡಿದನು. ದುರ್ಯೋಧನನು ಪುರೋಚನನೆಂಬುವವನ್ನು ಕಳುಹಿಸಿ ಇದಕ್ಕಾಗಿಯೇ ಅವನಿಂದ ಅರಗಿನ ಮನೆಯನ್ನು ಕಟ್ಟಿಸಿದರೆ ವಿದುರನು ಪ್ರತಿ ತಂತ್ರ ಹೂಡಿ ಖನಕನನ್ನು ವಾರಣಾವತಕ್ಕೆ ಕಳಿಸಿದನು. ಖನಕನು ಕೊರೆದ ಸುರಂಗ ಮಾರ್ಗದ ಮುಖಾಂತರ ಪಾಂಡವರು ಪಾರಾದರೆ ಅದೇ ಅರಗಿನ ಮನೆಯಲ್ಲಿ ಪುರೋಚನನು ಸತ್ತುಹೋದನು, ಇಷ್ಟೆಲ್ಲಾ ಪ್ರಕ್ರಿಯೆಯಲ್ಲಿ ನಮಗೆ ಪ್ರಮುಖವಾಗಿ ತೋರುವುವು ಎರಡು ಅಂಶಗಳು. ಒಂದು – ಪಾಂಡವರು ಬದುಕಿ ಉಳಿದುದು; ಇನ್ನೊಂದು – ವಿದುರನ ಸಹಾಯ. ವಿದುರ ಕೇವಲ ನೀತಿ ಹೇಳುವವನಲ್ಲ; ಪ್ರಾಣರಕ್ಷಕನೂ ಆಗಿದ್ದಾನೆ. ಆದರೆ ವಿದುರನಿಗೆ ಧರ್ಮರಾಜನನ್ನು ಜೂಜಿನ ವ್ಯಸನದಿಂದ ತಪ್ಪಿಸುವುದಾಗಲಿಲ್ಲ. ಧೃತರಾಷ್ಟ್ರನು ವಿದುರನ ಮೂಲಕ ಪಾಂಡವರನ್ನು ಆಹ್ವಾನಿಸಿದ. ಧೃತರಾಷ್ಟ್ರನ ಆಹ್ವಾನವನ್ನು ಹೇಳಿ ಧರ್ಮರಾಜನನ್ನು ಈ ಜೂಜು ಬೇಡವೆಂದು ಎಚ್ಚರಿಸುತ್ತಾನೆ. ಆದರೆ ಧರ್ಮರಾಜ ದ್ಯೂತ ವ್ಯಸನಾಧೀನನಾಗಿ ವಿದುರನ ಮಾತಿಗೆ ಕಿವಿಗೊಡಲಿಲ್ಲ. ಮುಂದೆಲ್ಲ ಆಗಬಾರದ ಅನಾಹುತಗಳು ನಡೆದುಹೋದವು.

ಬುದ್ಧಿವಾದ ಹೇಳುವ ವಿಷಯದಲ್ಲಿ ವಿದುರನದು ನಿಷ್ಠುರ ಸ್ವಭಾವ. ಪ್ರಭುತ್ವದ ದಮನೀಯ ಮನಸ್ಸುಗಳ ಮಧ್ಯ ಬಾಳುವ ವ್ಯಕ್ತಿಯೊಬ್ಬನಿಗೆ ಅದೂ ಶೂದ್ರನಾದವನಿಗೆ ನಿಷ್ಠುರತೆಯನ್ನು ಉಳಿಸಿಕೊಳ್ಳುವುದು ಕಷ್ಟ. ಆದರೆ ಯಾವತ್ತಿಗೂ ಸತ್ಯದ ಪ್ರತಿಪಾದಕನಾಗಿಯೇ ವ್ಯಕ್ತಿತ್ವ ರೂಢಿಸಿಕೊಂಡ ವಿದುರ ಮುಖನೋಡಿ ಮಾತನಾಡಲಾರ, ಅವನ ದೃಷ್ಟಿಯಲ್ಲಿರುವುದು ನ್ಯಾಯವೊಂದೇ "ಕೌರವರೊಂದಿಗೆ ಜೂಜಾಡಲು ಪಾಂಡವರನ್ನು ಕರೆದುಕೊಂಡು ಬಾ" ಎಂದು ಧೃತರಾಷ್ಟ್ರ ವಿದುರನಿಗೆ ಹೇಳಿದಾಗ ಅದರ ಮುಂದಿನ ದುರಂತವನ್ನು ನೆನೆಸಿಕೊಂಡಂತೆ ವಿದುರ "ನಿನ್ನ ಮಾತು ಹೊಲಸಿನ ಗಂಧವಾಗಿದೆ" ಎಂದು ಬೈದುಬಿಡುತ್ತಾನೆ. ದ್ಯೂತದಾಟದಲ್ಲಿ ಪಾಂಡವರು ಸೋಲುತ್ತ ಬಂದಾಗ ವಿದುರ ಕೌರವನನ್ನು ತಡೆಯುತ್ತಾನೆ "ಇನ್ನು ಪಗಡೆಯಾಟ ಸಾಕು ಏಳು ನೃಪತಿ ಗೆದ್ದು ತೆಗೆದುಕೊಂಡ ಸಂಪತ್ತು ಉಳಿಯುತ್ತದೆಯೇ ? ಸೋತವರು ಅಳುಕಿ ಸುಮ್ಮನಿರುವುದಿಲ್ಲ. ನೆಲವನ್ನು ಏಕಛತ್ರದಲ್ಲಿ ನಿಲ್ಲಿಸು". ಕೌರವ ತನ್ನ ಸ್ವಭಾವಕ್ಕೆ ತಕ್ಕಂತೆ ವಿದುರನನ್ನು ಜರಿಯುತ್ತಾನೆ: "ಕೇಳಿದರೆ ಹಿತ–ಅಹಿತಗಳನ್ನು ಹೇಳಬೇಕು ಈಗ ನಿನ್ನನ್ನು ಯಾರು ಕೇಳಿದರು ?" ಇಷ್ಟು ಅನ್ನಿಸಿಕೊಂಡು ವಿದುರ ದುರ್ಯೋಧನನ ನಡತೆಯನ್ನು ವಿರೋಧಿಸಿ ಮತ್ತೆ ಮತ್ತೆ ಮಾತನಾಡುತ್ತಾನೆ. ಇಡೀ ಸಭೆಯಲ್ಲಿ ಕೌರವನ ಮೋಸದ ದ್ಯೂತವನ್ನು ಪ್ರತಿರೋಧಿಸಿದವನು ವಿದುರನೊಬ್ಬನೇ. ದ್ರೋಣ, ಭೀಷ್ಮರಂಥವರೆಲ್ಲ ಸುಮ್ಮನಿರುವಾಗ ಇವನದೇನು ಅನ್ನುವುದು ದುರ್ಯೋಧನನ ಇಂಗಿತ; ಅದನ್ನು ಅಂದೂ ತೋರಿಸುತ್ತಾನೆ. ದುರ್ಯೋಧನನನ್ನು ಖಂಡಿಸಿ ವಿದುರ "ಈಗ ನೀನು ಮಣಿಯುವುದಿಲ್ಲ ರಣಾಂಗಣದಲ್ಲಿ ನೀನು, ನಿನ್ನವರೂ ತಕ್ಕ ಫಲವನ್ನು ಅನುಭವಿಸುತ್ತೀರಿ" ಎಂದು ಕೊನೆಯ ಎಚ್ಚರಿಕೆಯನ್ನು ಕೊಡುತ್ತಾನೆ.

ಮಣಿಯೆ ನೀನಿಲ್ಲೀಯನರ್ಥವ
ಕುಣಿಕೆಗೊಳಿಸಿದನೀ ಸಹಿತ ನಿ
ನ್ನೆಣೆಗಳಹ ಸೈಂಧವನನೀ ರಾಧೇಯ ಶಕುನಿಗಳ
ರಣದೊಳಗೆ ಭೀಮಾರ್ಜುನರ ಮಾ
ರ್ಗಣದ ಧಾರೆಗೆ ವೀರ ನಾರಾ
ಯಣನೆ ಸೇರಿಸಿಕೊಡುವನರಿದಿರುಯೆಂದನಾ ವಿದುರ (ಸಭಾ–೧೩–೭೮)

ದುರ್ಯೋಧನನಂಥ ಕಠಿಣನನ್ನು ಎದುರಿಸಿ ವಿದುರನಾಡುವ ಮಾತುಗಳೆಲ್ಲ ನ್ಯಾಯ ನಿಷ್ಠುರವಾಗಿವೆ.

ಉದ್ಯೋಗ ಪರ್ವದ ೮ನೆಯ ಸಂಧಿಯಲ್ಲಿ ವಿದುರನನ್ನು ಕುರಿತಾಗಿ ಕೌರವನು ಮಾಡಿದ ನಿಂದನೆಯಂತೂ ಶೂದ್ರರ ಮೇಲಿನ ಮಾನಸಿಕ ಹಲ್ಲೆಯಾಗಿ ತೋರುತ್ತದೆ. ಭೇಟಿಯಾಗಲು ಕೌರವನ ಸಮಯವನ್ನು ಕೇಳಿಕೊಂಡು ಬರಲು ಕೃಷ್ಣ ವಿದುರನನ್ನು ಕಳಿಸಿದರೆ ರವಿಸುತನೊಂದಿಗೆ ಚಪ್ಪಾಳೆಯಿಕ್ಕಿ ಕೌರವ ವಿದುರನನ್ನು ಅಪಹಾಸ್ಯಗೈಯ್ಯುತ್ತಾನೆ: "ರೂಢಿಯೊಳಗೆ ಆಚಾರವಡಗಿತು ಜಾರೆಯಿಂದ ಜನಿಸಿದವರನ್ನು ಈ ಬೀಡಾಡಿ ಕೂಡಿಕೊಂಡನು". ಕೃಷ್ಣ ತನ್ನ ಅರಮನೆಗೆ ಬಾರದೆ ವಿದುರನಲ್ಲಿ ಉಂಡದ್ದೂ ಕೌರವನ ಕೋಪವನ್ನು ಕೆರಳಿಸಿದೆ. "ಕೃಪ, ದ್ರೋಣ, ಭೀಷ್ಮರಿರುವಾಗ ಅವರನ್ನೆಲ್ಲ ಬಿಟ್ಟು ವಿದುರನಲ್ಲಿ ಉಂಡಿರಿ" ಎಂದು ಕೃಷ್ಣನನ್ನು ಹಂಗಿಸುತ್ತ ವಿದುರನನ್ನೂ ಜರಿಯುತ್ತಾನೆ.

ಈ ಕೃಪನನೀ ದ್ರೋಣನೀ ಗಂ
ಗಾಕುಮಾರನ ಮನೆಯ ಹೋಗದವಿ
ವೇಕಿತೊತ್ತಿನ ಮಗನ ಮನೆಯಲಿ ಹಸಿವ ನೂಕಿದಿರಿ (ಉದ್ಯೋಗ–೮–೬೫)

ಹೀಗೆ ವಿದುರನ ವಿಷಯದಲ್ಲಿ ದುರ್ಯೋಧನನು ಬಳಸುವ ಅನಾಗರಿಕ ಶಬ್ದಗಳು ಪ್ರಭುತ್ವವು ನ್ಯಾಯಕ್ಕೆ ಕೊಡುವ ಶಿಕ್ಷೆಯಾಗಿ ತೋರುತ್ತವೆ. ವಿದುರನನ್ನು ಬೀಡಾಡಿ, ತೊತ್ತಿನ ಮಗ ಎಂದು ಕರೆದಂತೆಯೇ ವಿದುರನಿಗೆ ಪ್ರಿಯವಾದ ಕೃಷ್ಣ, ಪಾಂಡವರು, ಕುಂತಿಯನ್ನು ಜಾರ, ಜಾರೆಯರ ಮಕ್ಕಳು ಎಂಬಂತಹ ಅಶಿಷ್ಟ ಪದಗಳಿಂದ ಅವಮಾನಿಸುತ್ತಾನೆ. ಸಾತ್ವಿಕನ ಸಹನೆಗೂ ಒಂದು ಮಿತಿಯುಂಟು, ದುರ್ಯೋಧನ ಮಾಡಿದ ಅವಮಾನದಿಂದಾಗಿ ವಿದುರನ ಕೋಪ ಹೊತ್ತಿಕೊಂಡಿತು. ಮುಂದೊಂದು ದಿನ ಭೀಮ ತನ್ನ ಗದಾಘಾತದಿಂದ ದುರ್ಯೋಧನನ ತೊಡೆ ಮುರಿಯುವ ಸಂದರ್ಭಕ್ಕೆ ಇರಲೆಂದು ವಿದುರನು ತಾನು ಕಾಯ್ದಿರಿಸಿಕೊಂಡಿದ್ದ ಧನಸ್ಸನ್ನು ಮುರಿದು ಹಾಕಿದನು. ದುರ್ಯೋಧನ ಎಷ್ಟೇ ಕೆಟ್ಟವನಾಗಿದ್ದರೂ – ಅನ್ನದ ಋಣಕ್ಕೆ ಇರಬೇಕು – ಅವನ ರಕ್ಷಣೆಯನ್ನು ಹಾರೈಸಿದವನು ವಿದುರ. ಅಂತಹ ವಿದುರನ ಪ್ರಾಮಾಣಿಕತೆಯನ್ನು ಉಳಿಸಿಕೊಳ್ಳುವ ಯೋಗ ದುರ್ಯೋಧನನಿಗಿಲ್ಲ. ಕೆಳಸ್ತರದವರ ಪ್ರಾಮಾಣಿಕತೆ, ನಂಬಿಕೆ ಯಾವಾಗಲೂ ಒಮ್ಮುಖವಾಗಿರುತ್ತವೆ. ಆದರೆ ಮೇಲಸ್ತರ ಇವರನ್ನು ನಂಬದೇ ಹೋಗುವುದು ವಿಪರ್ಯಾಸ.

ವಿದುರ ಸಾಮಾಜಿಕ ಸ್ತರದಲ್ಲಿ ಅಸಹನೀಯ ಅವಮಾನಕ್ಕೆ ಒಳಗಾಗುತ್ತಾನೆ. ತನ್ನ ಮೌಲ್ಯಗಳ ಅಂಕೆಗೆ ಮೇಲುಸ್ತರದವರು ಒಳಪಡುವುದಿಲ್ಲ. ಇದು ಜೀವನದುದ್ದಕ್ಕೂ ವಿದುರ ಅನುಭವಿಸಿಕೊಂಡು

ಬಂದದ್ದು. ವಿಚಿತ್ರವೆಂದರೆ ವಿದುರ ಜಾತಿ ಶ್ರೇಣಿಯನ್ನು ಒಪ್ಪಿಕೊಳ್ಳುತ್ತಾನೆ. ಸಂಧಿಗೆ ಮೊದಲು ಧೃತರಾಷ್ಟ್ರನು ವಿದುರ ನೀತಿಯನ್ನೆಲ್ಲ ಕೇಳಿದ ಮೇಲೆ ಇನ್ನು ಮುಂದೆ ಆತ್ಮವಿದ್ಯೆಯ ವಿಷಯವನ್ನು ಉಪದೇಶಿಸು ಎಂದು ಕೇಳಿಕೊಳ್ಳುತ್ತಾನೆ. ಆದರೆ ವಿದುರ "ಪರತತ್ವ ವಿದ್ಯಾ ವಿವರ ಅನ್ಯಜಾತಿಗನಾದ ನನಗೆ ಸಲುವುದೇ" ಎಂದು ಅವನ ಕೇಳಿಕೆಯನ್ನು ನಿರಾಕರಿಸುತ್ತಾನೆ. ವ್ಯವಸ್ಥೆ ಹೇಗೆ ಒಬ್ಬ ಪ್ರಜ್ಞಾವಂತನ ಮತಿಯನ್ನು ಮಸಳಿಸುವಂತೆ ಮಾಡುತ್ತದೆಂಬುದಕ್ಕೆ ವಿದುರ ಒಂದು ಒಳ್ಳೆಯ ಉದಾಹರಣೆ. ಬಹುಪಾಲು ಜನರ ಮಾನಸಿಕ ಒತ್ತಡ ರೂಪಿಸಿದ ಸಮೂಹಸನ್ನಿ ಇದಾಗಿರಬೇಕು; ಮನಃಪೂರ್ವಕ ಅಭಿವ್ಯಕ್ತಿ ಇದಾಗಿರಲಿಕ್ಕಿಲ್ಲ.

ವಿದುರ ಶೂದ್ರನಾಗಿದ್ದರೂ ಅವನ ಪ್ರಾಮಾಣಿಕ ಅಂತಸ್ಸತ್ವವನ್ನು ಧೃತರಾಷ್ಟ್ರ ಬಲ್ಲವನಾಗಿದ್ದಾನೆ. ವಿದುರ ಏನು ಹೇಳಿದರೂ ಸತ್ಯವನ್ನೇ ಹೇಳುತ್ತಾನೆನ್ನುವುದನ್ನು ಧೃತರಾಷ್ಟ್ರನ ಒಳಮನಸ್ಸು ಒಪ್ಪಿಕೊಂಡಿದೆ. ಮಗನನ್ನು ಓಲೈಸುವ ಭರದಲ್ಲಿ, ಪಾಂಡವರು ವಿದುರನಲ್ಲಿರಿಸಿದ ಪ್ರೀತಿ-ವಿಶ್ವಾಸಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಾನೆ ಧೃತರಾಷ್ಟ್ರ. ವಿದುರನ ಮುಖಾಂತರವೇ ಪಾಂಡವರನ್ನು ಇಂದ್ರಪ್ರಸ್ಥದಿಂದ ಹಸ್ತಿನಾವತಿಗೆ ಬರಮಾಡಿಕೊಳ್ಳುತ್ತಾನೆ. ವಿದುರನ ಮುಖಾಂತರವೇ ಜೂಜಿಗೂ ಆಹ್ವಾನಿಸುತ್ತಾನೆ. ಆದರೂ ಮಗನ ಎದುರಲ್ಲಿ ಧೃತರಾಷ್ಟ್ರನಾಡುವ ಮಾತು ನಿಷ್ಕಪಟವಾದುದು.

ಪಾರಲೌಕಿಕದುಳಿವನೈಹಿಕ
ದೋರೆ ಪೋರೆಯನಿಂದು ಬಲ್ಲವ
ರಾರು ಹೇಳಾ ವಿದುರನಲ್ಲದೆ ನಮ್ಮ ಪೈಕದಲಿ
ಸಾರವಾತನ ಮಾತು ನಯ ವಿ
ಸ್ತಾರ ಸಹಿತಿಹುದಲ್ಲಿ ನಂಬುಗೆ
ದೂರವಿಲ್ಲೆನಗರಿಯೆ ನೀ ನಿಲ್ಲೆಂದನಂಧನೃಪ (ಸಭಾ-೧೨-೬೪)

ವಿದುರ ಪಾರಲೌಕಿಕವನ್ನು ಬಲ್ಲವನಾಗಿದ್ದಾನೆ, ಐಹಿಕದ ಓರೆಕೋರೆಗಳನ್ನೂ ಬಲ್ಲವನಾಗಿದ್ದಾನೆ, ಸಾರವಾತನ ಮಾತು - ಹೀಗೆಲ್ಲ ಸಂಚಯಗೊಳ್ಳುವ, ಧೃತರಾಷ್ಟ್ರನಾಡುವ ಮಾತು ವಿದುರನ ವ್ಯಕ್ತಿತ್ವಕ್ಕೆ ಬರೆದ ಭಾಷ್ಯದಂತಿದೆ.

ಜೀವನದುದ್ದಕ್ಕೂ ನಂಜುಂಡ ವಿದುರನ ವಿಷಯಕ್ಕೆ ಒದಗುವ ಒಂದು ಸಮಾಧಾನವೆಂದರೆ ಯುದ್ಧಾನಂತರನಡೆದ ಧರ್ಮರಾಯ ಪಟ್ಟಾಭಿಷೇಕದಲ್ಲಿ ಪಾಂಡವರು ಅವನನ್ನು ಸಾಮಾಜಿಕವಾಗಿ ಗುರುತಿಸಿದ್ದು. ಧರ್ಮರಾಜನ ಸಚಿವ ಮಂಡಲದಲ್ಲಿ ವಿದುರನಿಗೆ ಹಿರಿಯ ಸಚಿವಸ್ಥಾನ ಕೊಟ್ಟು ಪುರಸ್ಕರಿಸಿದ್ದು ವಿದುರನ ಇದುವರೆಗಿನ ನಿರ್ಮಲ ನಡೆಗೆ ಸಂದ ಗೌರವಾಗಿದೆ, ನಿಮ್ನ ವರ್ಗದವನಿಗೆ ದೊರೆತ ಸಾಮಾಜಿಕ ನ್ಯಾಯವಾಗಿದೆ.

ಕರ್ಣ:

ಸೂರ್ಯಮಂತ್ರದಿಂದ ಜನಿಸಿದ ಕೂಸು ಕರ್ಣನನ್ನು ಕುಂತಿ ಜನಾಪವಾದದ ಭೀತಿಯಲ್ಲಿ ಗಂಗಾನದಿಗೆ ಹಾಕುತ್ತಾಳೆ - ಇದು ಕರ್ಣ ಬದುಕಿನ ಮುಂದಿನ ಎಲ್ಲಾ ಅವಘಡಗಳಿಗೂ ಕಾರಣವಾಯಿತು. ಧರ್ಮ, ಭೀಮಾದಿಗಳಂತೆ ಕರ್ಣ ಜನಿಸಿದ್ದರೆ ಪಾಂಡವರಲ್ಲಿ ಹಿರಿಯವನಾಗಿರುತ್ತಿದ್ದ.

ಆದರೆ ಕುಂತಿ ಕನ್ಯೆತನದಲ್ಲಿ ಮಗುವನ್ನು ಪಡೆದದ್ದು ಅವನ ದುರಂತ ಬದುಕಿಗೆ ಕಾರಣವಾಯಿತು. ಅಂತೆಯೇ ಅವನು ಪಂಪ, ಕುಮಾರವ್ಯಾಸರಂಥ ಮಹಾಕವಿಗಳಿಂದ ಸಹಾನುಭೂತಿ ಪಡೆಯುತ್ತಾನೆ. ಕರ್ನಾಟ ಭಾರತ ಕಥಾಮಂಜರಿಯಲ್ಲಿ ಕರ್ಣಪರ್ವವೇ ದೀರ್ಘವಾದುದು; ೨೭ ಸಂಧಿಗಳ ವಿಸ್ತಾರವನ್ನು ಹೊಂದಿದೆ. ಉಳಿದ ಯಾವ ಪರ್ವಗಳೂ ಇಷ್ಟು ಸಂಧಿಗಳನ್ನು ಹೊಂದಿಲ್ಲ. ಕರ್ಣಪರ್ವ ಯುದ್ಧ ಪಂಚಕದ ಒಂದು ಭಾಗವಾಗಿ ಬಂದಿದ್ದರೂ ಅದು ಕೇವಲ ಯುದ್ಧ ವಿಷಯಗಳನ್ನು ಹೊಂದಿಲ್ಲ. ಬೇರೆ ಬೇರೆ ಕಾರಣಗಳಿಂದ ಕರ್ಣ ಬದುಕಿನ ಹಿನ್ನೋಟಗಳೆಷ್ಟೋ ಇಲ್ಲಿ ಬಂದಿವೆ.

ನದಿಯಲ್ಲಿ ತೇಲುವ ಮಗುವನ್ನು ಸೂತನೊಬ್ಬನು ಸಂರಕ್ಷಿಸಿ ಪತ್ನಿ ರಾಧೆಯ ಕೈಗೆ ಕೊಟ್ಟನು. ಹೀಗೆ ಮಗು ರಾಧೇಯನಾಗಿ, ಸೂತಕುಲದವನಾಗಿ ಬೆಳೆಯಿತು. ಪರದೇಶ ಮಕ್ಕಳನ್ನು ಅಪ್ಪಿಕೊಳ್ಳುವ, ಅಕ್ಕರತೆಯಿಂದ ಸಾಕುವ ಕರುಣಾದೃಷ್ಟಿ ಜನಸಾಮಾನ್ಯರಿಗೆ ಮಾತ್ರ ದಕ್ಕುವಂತಹದು. ಕುಂತಿಯಿಂದ ಪರಿತ್ಯಕ್ತ ಕರ್ಣ ರಾಧೆಯಿಂದ ಪೋಷಿಸಲ್ಪಟ್ಟನು. ತರುವಾಯ ಅವನು ಪ್ರತ್ಯಕ್ಷನಾಗುವುದು ಪ್ರೌಢಾವಸ್ಥೆ ತಾಳಿ ಹಸ್ತಿನಪುರಿಗೆ ಬಂದಾಗಲೇ. ಹೀಗೆ ಬಂದ ಕರ್ಣನನ್ನು ಕೌರವ ಮನ್ನಿಸಿ ಗೆಳೆಯನನ್ನಾಗಿ ಸ್ವೀಕರಿಸಿದ. ಈ ಮಧ್ಯ ಕರ್ಣ ಸೂತ ಕುಲದ ಪರಿಸರದಲ್ಲಿ ಹೇಗಿದ್ದ ? ಅಲ್ಲಿ ಅವನು ಎಂಥ ಆಚಾರ ವಿಚಾರಗಳನ್ನು ಬೆಳೆಯಿಸಿಕೊಂಡ ? ಅವನು ಅಲ್ಲಿ ಬೆಳೆಯುತ್ತಿರಬೇಕಾದರೆ ಆ ಪರಿಸರದಲ್ಲಿ ಅವನು ಕಂಡ ಸಂಸ್ಕೃತಿ ಎಂತಹದು ? ಯಾವುದೂ ನಮಗೆ ತಿಳಿಯುವುದಿಲ್ಲ. ಅವನು ತರುವಾಯದ ಬದುಕಿನಲ್ಲಿ ಪಡೆದ ಸದ್ಗುಣಗಳಿಗೆ ಅವನು ಸೂತರೊಂದಿಗೆ ಮೈಗೂಡಿಸಿಕೊಂಡು ಬಂದ ದೇಸಿಗುಣಗಳೇ ಕಾರಣವಾಗಿರಬೇಕು.

ದುರ್ಯೋಧನ ಕರ್ಣನನ್ನು ಗೆಳೆಯನನ್ನಾಗಿ ಸ್ವೀಕರಿಸಿದ್ದು ಕರ್ಣನ ಬದುಕಿಗೆ ಒದಗಿದ ದೊಡ್ಡ ತಿರುವಾಗಿ ತೋರುತ್ತದೆ. ಹಸ್ತಿನಾವತಿಗೆ ಬಂದ ಕರ್ಣನನ್ನು ದುರ್ಯೋಧನ ಕಂಡ ಮೇಲೆ ಅಂದು ಚಿಗುರೊಡೆದ ಅವರ ಸ್ನೇಹ ಎರಡು ಜೀವಗಳನ್ನು ಒಂದಾಗಿಸಿತು.

ಅಂದು ಮೊದಲಾಗವರ ಸಖ್ಯಕೆ
ಸಂದ ಕಾಣೆನು ಕರ್ಣಕುರುಪತಿ
ಗೊಂದೆ ಜೀವನವೊಂದೆ ಮನಮತವೊಂದೆ ಕೇಳೆಂದ ಆದಿ–೬–೪೩

ಬೇಟೆ ಕರ್ಣನ ಕೂಡೆ ಹಗಲಿರು
ಳಾಟ ಕರ್ಣನ ಕೂಡೆ ಷಡುರಸ
ದೂಟಕರ್ಣನ ಕೂಡೆ ಶಸ್ತ್ರಾಭ್ಯಾಸವವಗೂಡೆ
ತೋಟಿ ಮನದಲಿ ನಗೆಯ ಮಧುರದ
ನೋಟ ಕಣ್ಣಿನೊಳುಳಿದವರ ಕೂ
ಡಾಟಗಳು ತಾವಿಬ್ಬರೊಂದೆನಿಸಿದರು ಜಗವರಿಯೆ ಆದಿ–೬–೪೪

–ಹೀಗೆ ಕರ್ಣನನ್ನು ದುರ್ಯೋಧನ ಅಪ್ಪಿಕೊಂಡದ್ದು ಯಾಕೆ, ಯಾವ ಉದ್ದೇಶವಿರಬಹುದು ? ಎಲ್ಲಕ್ಕೂ ಕಾರಣಗಳು ಇರುವುದಿಲ್ಲ. ಗೆಳೆತನದಲ್ಲಿರುವುದು ಹೃದಯಸ್ಪಂದನೆಯೊಂದೇ.

ಕರ್ಣ-ದುರ್ಯೋಧನರ ಸಖ್ಯ ಒದಗಿದಂದು ಕರ್ಣನು ಸೂತಕುಲದವನೆಂಬುದು ದುರ್ಯೋಧನನಿಗೆ ಗೊತ್ತಾಯಿತೇ ಎಂಬುದು ಕಾವ್ಯದಲ್ಲಿ ಅಸ್ಪಷ್ಟವಾಗಿದೆ. ಆದರೆ ಧನುರ್ವಿದ್ಯಾ ಪ್ರದರ್ಶನದಂದು ಕೃಪ ಮತ್ತು ಭೀಮರು ಕರ್ಣನ ಸೂತಕುಲವನ್ನು ಸಾರ್ವಜನಿಕವಾಗಿ ಬಹಿರಂಗಗೊಳಿಸಿ ಅವಮಾನಿಸಿದ್ದು ದುರ್ಯೋಧನನ ಕಣ್ಣೆದುರಿನಲ್ಲಿಯೇ ನಡೆದಿದೆ. ಧನುರ್ವಿದ್ಯಾ ಪ್ರದರ್ಶನದಲ್ಲಿ ಎದುರಾಳಿ ಅರ್ಜುನನ್ನು ಸಮರ್ಥವಾಗಿ ಕರ್ಣ ಎದುರಿಸಿದಾಗ ಕೃಪನು ಮೆಲ್ಲಗೆ ನೆಪತೆಗೆದು "ನೃಪಹಾರದಲ್ಲಿ ನೀನು ನಾಯಕನೊ ಅನುನಾಯಕನೊ" ಎಂದು ಪ್ರಶ್ನೆ ಮುಂದಿಟ್ಟನು. ಕುಂತಿಗೆ ಆತನು ತನ್ನ ಮಗನೆನ್ನುವುದು ಹೊಳೆದರೂ ಅವಳು ಅಸಹಾಯಕಳು. ಕೃಪನ ಪ್ರಶ್ನೆ ಕರ್ಣನನ್ನು ಸಂದಿಗ್ಧತೆಗೆ ಸಿಲುಕಿಸಿ ಅವನು ಖಿನ್ನನಾದನು. ಸ್ನೇಹಿತನಿಗಾದ ಈ ಅಪಮಾನ ದುರ್ಯೋಧನನ್ನು ರೊಚ್ಚಿಗೆಬ್ಬಿಸಿ "ಈತ ಅರಸಲ್ಲೆಂದು ಕೃಪ ಪಳಿವಾತನೇ ತಪ್ಪೇನು ರಾಜ್ಯದೊಳಾತನರಸೆನಿಸುವೆನು ಕರೆನಮ್ಮಯ ಪುರೋಹಿತರ" ಎಂದು ಹೇಳಿ ಆಗಿಂದಾಗ ಮಂಗಳ ವಸ್ತುಗಳನ್ನು ತರಿಸಿ ಪಟ್ಟಾಭಿಷೇಕವನ್ನು ನೆರವೇರಿಸಿ ಅಂಗದೇಶದ ಅಧಿಪತಿಯನ್ನಾಗಿ ಮಾಡಿದನು.

ದುರ್ಯೋಧನನ ದೌರ್ಬಲ್ಯಗಳು ಮಹಾಭಾರತದ ತುಂಬ ಹರಡಿಕೊಂಡಿವೆ. ಆದರೆ ಈ ಹೊತ್ತಿನಲ್ಲಿ ಕರ್ಣನ ವಿಷಯದಲ್ಲಿ ಅವನಿರಿಸಿದ ಹೆಜ್ಜೆ ಅವನ ಬೇರೊಂದು ಮುಖವನ್ನು ಅನಾವರಣಗೊಳಿಸುತ್ತದೆ. ಪ್ರಭುತ್ವವು ತಳವರ್ಗವನ್ನು ಸುಲಭವಾಗಿ ಗ್ರಹಿಸದ ಹೊತ್ತಿನಲ್ಲಿ ದುರ್ಯೋಧನ ತೆಗೆದುಕೊಂಡ ಈ ಮಾನವೀಯ ನಿರ್ಣಯ ಮಹತ್ವದ್ದೆನಿಸುತ್ತದೆ. ಅದೂ ಅವನು ಸೂತಕುಲಕ್ಕೆ ಸೇರಿದವನು ಎಂಬುದು ಗೊತ್ತಾದ ಮೇಲೆಯೂ ಕರ್ಣನನ್ನು ಅಂಗದೇಶದ ಅರಸನನ್ನಾಗಿ ಮಾಡಿ ಆದರಿಸರುವುದು ಹಿಂದುಳಿದ ಸಮುದಾಯಕ್ಕೆ ಮಾಡಿದ ಮನ್ನಣೆಯಾಗಿದೆ. ರಾಜಕೀಯ ಸಂಕಲ್ಪ ಜನವರ್ಗದ ಕಲ್ಯಾಣ ಹಾರೈಸಿ ಬೇಕಾದಷ್ಟು ನಿರ್ಣಯಗಳನ್ನು ತೆಗೆದುಕೊಳ್ಳಬಹುದು. ಆದರೆ ಇಂಥ ಸಂಪ್ರದಾಯಗಳ ವಿಷಯದಲ್ಲಿ ಅದಕ್ಕೆ ಹಿಂಜರಿತ ಇದ್ದೇ ಇರುತ್ತದೆ. ಎಲ್ಲೋ ದುರ್ಯೋಧನನಂಥ ಗಟ್ಟಿಗರು ಮಾತ್ರ ಇಂಥದನ್ನು ಸಾಧಿಸಬಲ್ಲರು. ಇದು ಸೂತಕುಲ ಅಥವಾ ಅದರಂತಹ ಹಲವಾರು ಅಲಕ್ಷಿತ ಸಮುದಾಯಗಳ ಉನ್ನತೀಕರಣವಾಗಿದೆ.

ದುರ್ಯೋಧನನೇನೋ ಕರ್ಣನನ್ನು ಸತ್ಕರಿಸಿ ಅಂಗದೇಶದ ಅಧಿಪತಿಯನ್ನಾಗಿ ಮಾಡಿದ. ಅಷ್ಟು ಮಾತ್ರಕ್ಕೆ ದೊಡ್ಡವರ ಕಣ್ಣಲ್ಲಿ ಉಚ್ಚ ಕುಲದವನಾಗಿ ಮೇಲೇರಲಿಲ್ಲ. ಅವನು ಸೂತಕುಲದವನೆಂದು ಕುಲವೆತ್ತಿ ಅಪಮಾನಿಸುವ ಪ್ರಸಂಗಗಳು ಮತ್ತೆ ಮತ್ತೆ ನಡೆಯುತ್ತಲೇ ಹೋಗುತ್ತದೆ. ಭೀಷ್ಮ ಮೊದಲಗೊಂಡು ಹಲವು ಜನ ಬೇರೆ ಬೇರೆ ಪ್ರಸಂಗಗಳಲ್ಲಿ ಕರ್ಣನಕುಲವನ್ನು ಅವಮಾನಿಸುತ್ತಾರೆ.

ಭೀಷ್ಮ – ದುರ್ಯೋಧನನಿಗೆ ಪಟ್ಟಗಟ್ಟಿದ ಸಂದರ್ಭದಲ್ಲಿ ಅದನ್ನು ಕರ್ಣ ಪ್ರತಿಭಟಿಸಿ ಮಾತನಾಡಿದಾಗ ಭೀಷ್ಮನು "ಕರ್ಣಾಗಳಹ ಬೇಡ, ನಿನ್ನ ಕುಲವನ್ನು ನೋಡಿಕೊಳ್ಳದೆ ಮೇರೆದಪ್ಪಿ ಮಾತನಾಡುತ್ತಿರುವೆ" ಎಂದನು. (ಭೀಷ್ಮ – ೧–೩೯)

ಅಶ್ವತ್ಥಾಮ– ಗೋಗ್ರಹಣ ಸಂದರ್ಭಧಲ್ಲಿ ಕರ್ಣ ಕೃಪನ ಕುಲವೆತ್ತಿ ಬೈದರೆ ಅದಕ್ಕೆ ಪ್ರತಿಯಾಗಿ ಅಶ್ವತ್ಥಾಮ "ಖೂಳ ಸೂತನ ಮಗನೆ ಕೀಳು ಜಾತಿಗೆ ತಕ್ಕ ನುಡಿಗಳನ್ನಾಡಿದಿ ಕುಲವ ನಾಲಿಗೆ ಹೇಳಿತು" ಎಂದು ಜರಿದನು. (ವಿರಾಟ–೭–೧೫)

ಶಲ್ಯ– ಸರ್ಪಾಸ್ತ್ರವನ್ನು ಮರಳಿ ತೊಡು ಎಂದು ಕರ್ಣನಿಗೆ ಶಲ್ಯ ಒತ್ತಾಯಿಸಿದಾಗ ಅವನು ಒಪ್ಪದೇ ಹೋಗತ್ತಾನೆ. ಆಗ ಶಲ್ಯ "ಕಬ್ಬಿಲನ ಮಗನು ನೀನು, ನಿನ್ನನ್ನು ಕುರುಪತಿ ಕುಲಜನನ್ನಾಗಿ ಮಾಡಿದನು" ಎಂದು ಹಂಗಿಸಿದನು. (ಕರ್ಣ–೨೫–೩೯)

ಭೀಮ– ಭೀಮನು ಯುದ್ಧದಲ್ಲಿ ಕರ್ಣನಂದನರಲ್ಲೊಬ್ಬನನ್ನು ಉರುಳಿಸಿದ. ಸೇಡಿಗಾಗಿ ಹಾತೊರೆದು ಕರ್ಣ ಎದುರಾದರೆ ಭೀಮ "ಎದುರಿಸಿ ಹೋರಾಡೋಣವೆಂದರೆ ಸರಿಸಮನಲ್ಲ ವಿಜಾತಿಯಲ್ಲಿ ಸಂಭವಿಸಿದವನು ನೀನು ಸೂತನ ಮಗ" ಎಂದು ಅವಮಾನಿಸಿದನು. (ಕರ್ಣ–೧೦–೪೧)

ಧರ್ಮ– ಯುದ್ಧ ನಡೆಯುತ್ತಿರುವಂತೆ ಕರ್ಣನು ಧರ್ಮನಿಗೆ "ಏಳು ಕಲಿಯಾಗು ಕೆಲ ಬಲದ ಆಳುಗಳ ಸಹಾಯ ನಿರೀಕ್ಷಿಸಬೇಡ" ಎಂದರೆ ಧರ್ಮನು "ಸೂತಸುತಾ ನಾನು ಅಂಥವನೇ" ಎಂದು ಮಾರುತ್ತರ ಕೊಟ್ಟನು. (ಕರ್ಣ–೧೧–೨೫)

ಕೃಷ್ಣ– ಅರ್ಜುನನು ಕರ್ಣನನ್ನು ಕೊಲ್ಲಲು ಹಿಂದೇಟು ಹಾಕಿದಾಗ ಕೃಷ್ಣ ಅರ್ಜುನನಿಗೆ ಹೇಳುತ್ತಾನೆ "ಎಲೆ ಧನಂಜಯ ನೀನು ಹಿಮಕರ ಕುಲದ ಸುಕುಮಾರ ಲೋಕದ ಕುಲವಿಹೀನನು ಕರ್ಣನಿವ". (ಕರ್ಣ–೨೬–೪೧)

ಸೈನಿಕರು– ಧರ್ಮರಾಜನೊಂದಿಗೆ ಯುದ್ಧಕ್ಕೆ ತೊಡಗಲು ಕರ್ಣಮುನ್ನುಗ್ಗಿ ಬರುತ್ತಿದ್ದರೆ ಅವನನ್ನು ತರುಬಿದ ಮಹಾರಥರು "ನಿಲ್ಲು ಸೈರಿಸು ಸೂತ ಸುತಾ" ಎಂದರು.(ಕರ್ಣ–೧೧–೩೫)

ಹೀಗೆ ಹಲವು ಸಂದರ್ಭಗಳಲ್ಲಿ ಹಲವು ಜನ ಕರ್ಣನ ಜಾತಿಯನ್ನು ನಿಂದಿಸುತ್ತಲೇ ಹೋಗುತ್ತಾರೆ.

ಯಾರು ಎಷ್ಟೇ ನಿಂದಿಸಿ ಜರಿದರೂ ಕರ್ಣನ ಪರಾಕ್ರಮಕ್ಕೇನೂ ಭಂಗವುಂಟಾಗಲಿಲ್ಲ. ಅವನು ಒಡೆಯನ ಅಭ್ಯುದಯಕ್ಕಾಗಿ ಏಕಮುಖವಾಗಿ ಹೋರಾಡುತ್ತಲೇ ಬಂದಿದ್ದಾನೆ; ಎಂಥ ಸಂದಿಗ್ಧ ಸಮಯದಲ್ಲಿಯೂ ತನ್ನತನವನ್ನು ಉಳಿಸಿಕೊಂಡಿದ್ದಾನೆ. ಪರಾಕ್ರಮ ಕರ್ಣನ ಮೈಗುಣವಾಗಿ ತೋರುತ್ತದೆ. ಇದು ಮೊಟ್ಟ ಮೊದಲು ಅಭಿವ್ಯಕ್ತಗೊಂಡದ್ದು ಧನುರ್ವಿದ್ಯಾ ಪ್ರದರ್ಶನದಲ್ಲಿ. ಅರ್ಜುನ ಕಣಕ್ಕಿಳಿದು ತನ್ನ ಅಸ್ತ್ರವಿದ್ಯೆಯ ನಾನಾ ಕೌಶಲ್ಯಗಳನ್ನು ಪ್ರದರ್ಶಿಸುತ್ತಿದ್ದಂತೆ ಇನ್ನೇನು ಅರ್ಜುನನ ಕೈ ಮೇಲಾಯಿತೆಂದು ಎಲ್ಲರೂ ಹೊಗಳುತ್ತಿದ್ದಾಗ ಇದನ್ನು ತಡೆಯಲಾರದ ಕರ್ಣ ಒಮ್ಮೆಲೇ ಮೇಲೆದ್ದು ನೋಟಕರ ಪಕ್ಷಪಾತವನ್ನು ಖಂಡಿಸುತ್ತಾನೆ. ಸಾಯಕವ ತೂಗುತ್ತ ಅರ್ಜುನನಲ್ಲಿಗೆ ಬಂದು ಅವನು ಇದುವರೆಗೆ ತೋರಿದ ಎಲ್ಲಾ ಬಗೆಯ ಅಸ್ತ್ರ ವಿದ್ಯಾ ವಿನ್ಯಾಸವನ್ನು ಕರ್ಣ ಪ್ರದರ್ಶಿಸುತ್ತಾನೆ.

ಆವವಿಧದಲಿ ಪಾರ್ಥ ತೋರಿದ
ನಾವ ದಿವ್ಯಾಸ್ತ್ರ ಪ್ರಪಂಚವ
ಪಾವಕಾನಿಲ ವಾರಣಾದಿಯನ್ನೈದೆ ವಿರಚಿಸಿದ
ಆ ವಿಧಾನದಲಾ ವಿಹಾರದ
ಲಾವಿಬಂಧದಲರ್ಜುನನ ಬಾ
ಣಾವಳಿಯ ಬಿನ್ನಾಣವನು ತೋರಿದನು ಕಲಿಕರ್ಣ (ಆದಿ–೭–೪೯)

ಕರ್ಣನ ಪರಾಕ್ರಮವನ್ನು ಒರೆಗೆ ಹಚ್ಚುವ ಪ್ರಸಂಗಗಳು ಕುರುಕ್ಷೇತ್ರದಲ್ಲಿ ಮತ್ತೆ ಮತ್ತೆ ಸಂಭವಿಸುತ್ತವೆ. ಕರ್ಣನ ಪರಾಕ್ರಮದ ಪರಾಕಾಷ್ಠೆ ತೋರುವುದು ಕರ್ಣಪರ್ವದ ಕೊನೆಯಲ್ಲಿ. ಅರ್ಜುನೊಡನೆ ಸಮರಗೈಯುತ್ತ ಕರ್ಣ ಬರಿದಾಗುತ್ತ ಹೋಗುವಾಗಲೂ ಮತ್ತೆ ಮತ್ತೆ ತನ್ನನ್ನು ಯುದ್ಧಕ್ಕೆ ಅಣಿಗೊಳಿಸಿಕೊಳ್ಳುವುದು ಕರ್ಣನ ಬತ್ತದ ಶೌರ್ಯವನ್ನು ಸಂಕೇತಿಸುತ್ತದೆ. ಕರ್ಣನ ಕುಲವನ್ನೇ ಮುಂದು ಮಾಡಿಕೊಂಡು ಸಾರಥಿ ಶಲ್ಯ ರಥವಿಳಿದು ಹೋಗಿಬಿಟ್ಟ. ರಣಾಂಗಣದಲ್ಲಿ ರಥ ಹೂಳಿಕೊಂಡು ನಿಂತುಬಿಟ್ಟಿತು. ಕೈಯಲ್ಲಿ ನಿಶಿತಶರವಿಲ್ಲ. ಆದರೂ ಅರ್ಜುನನನ್ನು ಎದುರಿಸುತ್ತಾನೆ. ಕೊನೆಗೂ ಅರ್ಜುನನ ಮೂಡಿಗೆಯಲ್ಲಿದ್ದ ಅಂಜನಾಸ್ತ್ರ ಕರ್ಣಶಿರವನ್ನು ಬಲಿತೆಗೆದುಕೊಂಡಿತು. ಎಂಥ ಅಸಹಾಯಕ ಸ್ಥಿತಿಯಲ್ಲಿಯೂ ಹಿಂಜರಿಯದೆ ಯುದ್ಧ ಮಾಡಿದ ಕರ್ಣನನ್ನು ಅಮರಗಣ ಹೊಗಳುತ್ತದೆ. ಧರ್ಮರಾಜನೊಂದಿಗೆ ಹೋರಾಡುವ ಸಂದರ್ಭದಲ್ಲಿ ಕರ್ಣನನ್ನು ಕುಲದ ಕಾರಣವಾಗಿ ವಿರೋಧಿಸುವ ಶಲ್ಯನೂ ಅವನ ಶೌರ್ಯವನ್ನು ಮೆಚ್ಚಿಕೊಳ್ಳುತ್ತಾನೆ. ಆದರೆ ಒಂದು ಹಂತದಲ್ಲಿ ಕರ್ಣನನ್ನು ಕುರಿತಾದ ಅರ್ಜುನನ ಹೊಗಳಿಕೆ ಪ್ರಶ್ನಾರ್ಹವೆನಿಸುತ್ತದೆ.

ಕರ್ಣಪರ್ವದ ಇಪ್ಪತ್ತೆರಡನೆಯ ಸಂಧಿ. ಯುದ್ಧ ಸಾಗಿರುವಂತೆ ಕರ್ಣಾರ್ಜುನರಿಬ್ಬರೂ ಪ್ರಬಲರಾಗಿ ಹೋರಾಡಿದರು. ಕರ್ಣಪಾರ್ಥರ ಸಮರಾರಂಭದಿಂದ ಜಗತ್ರಯ ಅಳ್ಳಿರಿಯಿತು. ಕರ್ಣನ ಈ ಪರಿಯ ರಣತೇಜವನ್ನು ನೋಡುತ್ತಿರುವಂತೆ ಅರ್ಜುನನಿಗೆ ಸಂಶಯ ಮೂಡಿತು: "ಸೂತ ಜಾತಿಯೊಳೀ ಧನುರ್ವೇದಾತಿಶಯವೆಂತಾಯ್ತು? ಕ್ಷತ್ರಿಯೋಚಿತವಾದ ಈ ಅಧ್ಯಾಪನ ಯಾರಿಂದಾಯಿತು"? ಕರ್ಣನ ಪರಾಕ್ರಮದೊಂದಿಗೆ ಮತ್ತೆ ಅವನ ಜಾತಿ ತಳುಕು ಹಾಕಿಕೊಳ್ಳುತ್ತದೆ ಇಲ್ಲಿ. ಸಾಹಸವು ಕ್ಷತ್ರಿಯರಿಗೆ ಮಾತ್ರ ಉಚಿತವಾದುದು, ಸೂತ ಕುಲದವನಾದ ಕರ್ಣನಿಗೆ ಇದೆಲ್ಲ ಹೇಗೆ ಸಾಧ್ಯವಾಯಿತು ಎಂಬರ್ಥದ ಅರ್ಜುನನ ಊಹೆಗೆ ಯಾವ ತಳಬುಡವಿಲ್ಲ. ಶೌರ್ಯಾತಿಶಯ ಕುಲವನ್ನು ಹುಡುಕಿಕೊಂಡು ಬರುವುದಿಲ್ಲ. ಅದಕ್ಕೆ ಕ್ಷತ್ರಿಯ ವರ್ಗದ ಯಾವ ಮಾನ್ಯತಾ ಪತ್ರವೂ ಬೇಕಾಗಿಲ್ಲ.

ಇನ್ನೂ ಅಧಿಕಗೊಳ್ಳಬಹುದಾಗಿದ್ದ ಕರ್ಣನ ಪರಾಕ್ರಮದ ಅತಿಶಯವನ್ನು ಕುಲದ ಪ್ರಶ್ನೆಯೇ ಕಡಿತಗೊಳಿಸಿದ ಪ್ರಸಂಗವನ್ನು ಇಲ್ಲಿಯೇ ಉಲ್ಲೇಖಿಸುವುದು ಉಚಿತವೆನಿಸುತ್ತದೆ. ಹೇಗಾದರೂ ಮಾಡಿ ಶಸ್ತ್ರಾಸ್ತ್ರ ವಿದ್ಯೆಯನ್ನು ಕಲಿಯಬೇಕೆಂಬ ಕರ್ಣನ ವಿದ್ಯಾದಾಹ ಅವನಿಂದ ಸುಳ್ಳು ಹೇಳಿಸಿತು. ಬಹುಶಃ ಸುಳ್ಳು ಹೇಳಿದ ಪ್ರಸಂಗ ಕರ್ಣನ ಜೀವಮಾನದಲ್ಲಿ ಇದೊಂದೇ – ತಾನು ದ್ವಿಜನೆಂದು ಸುಳ್ಳುಹೇಳಿ ಪರಶುರಾಮನ ಗರಡಿಯನ್ನು ಹೊಕ್ಕನು. ಇಂದ್ರನ ಕುತಂತ್ರದಿಂದೊದಗಿದ ವಜ್ರಕೀಟೋತ್ಕರ ಪ್ರಸಂಗದಿಂದ ಇರುವ ಸತ್ಯ ಬಯಲಾಗಿ ಕರ್ಣನ ಇದುವರೆಗಿನ ವಿದ್ಯೆ, ಪರಾಕ್ರಮ ಶಾಪಕ್ಕೆ ಗುರಿಯಾಯಿತು.

ಧರಣಿಸುರನೆಂದೆನ್ನ ಠಕ್ಕಿಸಿ
ಶರವ ಬೇಡಿದೆ ಕಾಳಗದೊಳೀ
ಶರನಿರರ್ಥಕವಾಗಲೆಂದನು ಶಾಪಹಸ್ತದಲಿ (ಕರ್ಣ-೯-೩೨)

ಕುಲಸಂಬಂಧಿಯಾದ ಪರಶುರಾಮನ ಈ ಶಾಪ ಕರ್ಣನನ್ನು ತಟ್ಟದೇ ಹೋಗಿದ್ದರೆ ಅವನ ಭವಿಷ್ಯದ ಪರಾಕ್ರಮಕ್ಕೆ ಎಣೆಯಿರುತ್ತಿತ್ತೇ ?

ಸೂತಕುಲದನಾಗಿದ್ದ ತನ್ನನ್ನು ಎತ್ತಿಕೊಂಡು ಪೋಷಿಸಿದ ದುರ್ಯೋಧನನ ನಂಬಿಕೆಯನ್ನು ಕರ್ಣ ಕೊನೆಯವರೆಗೂ ಉಳಿಸಿಕೊಂಡ. ದುರ್ಯೋಧನನ ಸಂಪರ್ಕ ದೋಷದಿಂದ ಕರ್ಣ ಕೆಲವು ತಪ್ಪು ಮಾಡಿದ್ದಾನೆ. ಆದರೆ ದುರ್ಯೋಧನ ಅವನಲ್ಲಿಟ್ಟ ನಂಬಿಕೆಯನ್ನು ಎಂದೂ ಹುಸಿಗೊಳಿಸಲಿಲ್ಲ.

ಕೌರವನಿಂದ ಕರ್ಣನನ್ನು ಬೇರ್ಪಡಿಸಬೇಕೆಂದು ಹಲವು ಬಗೆಯ ಆಶೆಗಳನ್ನು ಕೃಷ್ಣ ಒಡ್ಡಿದರೂ ಆ ಯಾವ ಪ್ರಲೋಭನೆಗಳಿಗೂ ಕರ್ಣ ಬಲಿಯಾಗಲಿಲ್ಲ. ಕೃಷ್ಣ ಮೊಟ್ಟಮೊದಲು ಕರ್ಣನ ಜನ್ಮವೃತ್ತಾಂತವನ್ನು ಹೇಳಿ ಪಾಂಡವರಲ್ಲಿ ನೀನೇ ಹಿರಿಯನು ಎಂದ. ನಿನಗೆ ಹಸ್ತಿನಪುರದ ಘನತೆಯನು ಮಾಡುವೆನು ಎಂದ. ಕೌರವರು ಪಾಂಡವರು ನಿನ್ನನ್ನು ಓಲೈಸುವಂತೆ ಮಾಡುತ್ತೇನೆ ಎಂದ. ಯಾವದಕ್ಕೂ ಕರ್ಣ ಜಗ್ಗಲಿಲ್ಲ. ಕೃಷ್ಣನೊಡ್ಡಿದ ಯಾವ ಆಮಿಷಗಳೂ ಕರ್ಣನನ್ನು ಅಲುಗಿಸಲಿಲ್ಲ. ಕರ್ಣ ಉತ್ತರ ಕೊಡುತ್ತಾನೆ.

ಹಲವು ಮಾತೇನಖಿಳ ಜನಕೆ
ನ್ನುಳಿವು ಸೊಗಸದು ಕೌರವೇಶ್ವರ
ನೊಲುಮೆ ತಪ್ಪಿಸಿ ಭುವನದೊಳಗೆನಗಾಪ್ತ ಜನವಿಲ್ಲ
ಸಲಹಿದನ ಮನ್ನಣೆಯಲೆನಗ
ಗ್ಗಳಿಕೆಯಲ್ಲದೆ ಹೀನವೃತ್ತಿಯ
ಬಳಸಿ ನಡೆಸನು ಕೌರವೇಂದ್ರನನೆಂತು ಮರೆದಪೆನು (ಉದ್ಯೋಗ-೧೦-೧೭)

ನೋಡಿ ದಣಿಯನು ಬಿರುದ ಹೊಗಳಿಸಿ
ಹಾಡಿ ದಣಿಯನು ನಿತ್ಯಲುಚಿತವ
ಮಾಡಿತಣಿಯನು ಮಾನನಿಧಿಯನದೆಂತು ಮರೆದಪೆನು
ಕಾಡಲಾಗದು ಕೃಷ್ಣ ಖಾತಿಯ
ಮಾಡಲಾಗದು ಬಂದೆನಾದೊಡೆ
ರೂಢಿ ಮೆಚ್ಚದು ಕೌರವನ ಹಗೆ ಹರಿಬ ತನಗೆಂದ (ಉದ್ಯೋಗ-೧೦-೧೮)

ದುರ್ಯೋಧನನ ಮೇಲೆ ಕರ್ಣನಿಟ್ಟ ನಿಷ್ಠೆಗೆ ಉಳಿಸಿಕೊಂಡ ನಂಬಿಗೆಗೆ ಈ ಎರಡು ಪದ್ಯಗಳು ಸಾಕೆನಿಸುತ್ತವೆ. ಮೊದಲ ಪದ್ಯದಲ್ಲಿ ವ್ಯಕ್ತವಾಗಿರುವಂತೆ ಕರ್ಣನು ಮೊದಲ ಬಾರಿಗೆ ತನ್ನನ್ನು ಸಹಿಸಲಾರದವರ ಬಗೆಗೆ ಅಸಮಾಧಾನವನ್ನು ಹೊರಹಾಕಿದ್ದಾನೆ. ಕರ್ಣನನ್ನು ಸಹಿಸದವರ ಅಸಮಾಧಾನ ಅವನ ಸೂತಕುಲಕ್ಕೆ ಸಂಬಂಧಿಸಿದ್ದೇ. ಇಂಥವನನ್ನು ಕೌರವೇಶ್ವರ ಸಲುಹಿದ, ಯಾವ ಹೀನ ವೃತ್ತಿಗೂ ಬಳಸಿಕೊಳ್ಳದೆ ಮನ್ನಣೆ ಕೊಟ್ಟು ಬೆಳೆಸಿದ. ಅವನನ್ನು ಹೇಗೆ ಮರೆಯಲಿ ಎನ್ನುತ್ತಾನೆ ಕರ್ಣ. ತನ್ನನ್ನು ಹಾಡುತ್ತಾನೆ, ಹೊಗಳುತ್ತಾನೆ – ಇಂಥವನನ್ನು ಬಿಟ್ಟುಬಂದರೆ ರೂಢಿ ಮೆಚ್ಚದು ಎನ್ನುತ್ತಾನೆ. ತಳವರ್ಗದ ಮನುಷ್ಯನೊಬ್ಬನು ಬೆಳೆಯಿಸಿಕೊಂಡು ಬಂದ ನಿಷ್ಠೆಯಿಂದಾಗಿ ಇದರಿಂದಲೇ ಕರ್ಣ ಲೋಕೋತ್ತರ ವ್ಯಕ್ತಿ ಎನಿಸುತ್ತಾನೆ.

ಕರ್ಣನ ನಿಷ್ಠೆಯಷ್ಟೇ ದೊಡ್ಡದು ಅವನ ತ್ಯಾಗ. ಅವನ ದಾನಗುಣ ಬಾಲ್ಯದಲ್ಲಿಯೇ ತೋರ್ಪಡುತ್ತದೆ. ಮಗುವಾಗಿರುವಾಗಲೇ ಮನೆಯ ಹೊಸ್ತಿಲ ಮೇಲೆ ಕುಳಿತುಕೊಂಡು ಬೀದಿಯಲ್ಲಿ ಹೋಗುವವರನ್ನು ಕರೆದು ತನ್ನ ಲಲಿತರತ್ನದ ಬಾಲದೊಡಿಗೆಗಳನ್ನು ಕರ್ಣ ಕೊಡುತ್ತಾನೆ. ಬೇಡಿದವರಿಗೆ ಇಲ್ಲ ಎಂದವನಲ್ಲ – ಇದೆಲ್ಲ ಭೌತಿಕ ವಸ್ತುಗಳ ತ್ಯಾಗವಾಯಿತು. ಇದಕ್ಕಿಂತ ಮುಖ್ಯವಾಗಿ ತೋರುವುದು

ಅವನು ತನ್ನ ಒಡೆಯನಿಗಾಗಿ ತೋರುವ ತ್ಯಾಗ ಗುಣ. ಕರ್ಣನನ್ನು ಭೇದಿಸಿ ಪಾಂಡವರ ಕಡೆಗೆ ಸೆಳೆಯಲು ಕೃಷ್ಣ ತುಂಬ ಪ್ರಯತ್ನಪಟ್ಟ ಸಾಧ್ಯವಾಗಲಿಲ್ಲ. ಕೊನೆಗೆ ಬೇಸತ್ತ ಕರ್ಣ "ನಿನ್ನಯ ವೀರರೈವರ ನೋಯಿಸೆನು ರಾಜೀವ ಸಖನಾಣೆ" ಎಂದು ಮಾತುಕೊಟ್ಟ. ತಾಯಿ ಕುಂತಿಯೂ ಬಂದು ಪಾಂಡವರೆಡೆಗೆ ಕರೆದಳು. "ತಕ್ಕುದೇ ದಾತಾರನರಸಿಯೊಳೊಕ್ಕತನವಿರಲಾರು ಮೆಚ್ಚುವರಕ್ಕ ಹೇಳೌ"? ಎಂದು ಪ್ರಶ್ನಿಸಿದ. "ಹಿಂದೆ ದುರ್ಯೋಧನ ಯಾವುದನ್ನು ನೋಡಿ ಸಲುಹಿದ"? ಎಂದೂ ಕೇಳಿದ. ಕೊನೆಗೆ ಕುಂತಿ

ಆದೊಡೈವರು ಮಕ್ಕಳನು ತಲೆ
ಗಾಯ್ದುತೋರೈ ಕಂದ ನಿನಗಿ
ನ್ನೀದುರಾಗ್ರಹವೊಪ್ಪುವುದೆ ಕೌರವನ ಸೇವೆಯಲಿ
ಹೋದಬಾಣವ ಮರಳಿ ತೊಡದಿರು
ಮಾದುಕಳೆ ವೈರವನೆನಲ್ಕೆ ಹ
ಸಾದವೆಂದನು ಬೀಳುಕೊಟ್ಟನು ಬಂದನರಮನೆಗೆ

ಕುಂತಿ ತಾಯ್ತನವೆಂಬ ನಗದು ಹಣವನ್ನು ಕೊಟ್ಟು 'ಸರಳಿನ ಭಿಕ್ಷೆ'ಯನ್ನು ಕೊಂಡುಕೊಂಡಳು ಎಂದು ಕುವೆಂಪು ಈ ಪ್ರಸಂಗಕ್ಕೆ ಮರಗುತ್ತಾರೆ(ಕಾವ್ಯ ವಿಹಾರ). ಕುಂತಿಗೇನೋ ಇದು ಸುಲಭವಾಯಿತು. ಆದರೆ ತಾನು ಕೃಷ್ಣ, ಕುಂತಿಯರಿಗೆ ಕೊಟ್ಟ ಭಾಷೆಗಾಗಿ ತೆತ್ತ ಬೆಲೆ ದೊಡ್ಡದು; ಕೊನೆತನಕ ಅದನ್ನು ನಿಭಾಯಿಸಿದ್ದಾನೆ. ಕೊಲ್ಲುವ ಅವಕಾಶವಿದ್ದಾಗಲೂ ಭಾಷೆಗಾಗಿ ಧರ್ಮರಾಜನನ್ನು ಕರ್ಣ ಉಳಿಸಿದ. ಒಮ್ಮೆ ಗುರಿತಪ್ಪಿಸಿಕೊಂಡ ಸರ್ಪಾಸ್ತ್ರ ಇನ್ನೊಮ್ಮೆ ತೊಡು ತೊಡು ಎಂದು ಒತ್ತಾಯಿಸಿದಾಗಲೂ ಮರಳಿ ತೊಡಲಿಲ್ಲ. ಯಾಕೆಂದರೆ ಕರ್ಣನಿಗೆ ಜೀವಕ್ಕಿಂತಲೂ ಮುಖ್ಯವಾದುದು ಭಾಷೆ.

ಅಂಗದೇಶದ ಅಧಿಪತಿಯಾದರೂ ಅದರ ಮದ, ಮಮಕಾರಗಳು ಕರ್ಣನನ್ನು ತಬ್ಬಿದ ಉಲ್ಲೇಖ ಕನ್ನಡ ಭಾರತದಲ್ಲಿ ಎಲ್ಲಿಯೂ ಉಲ್ಲೇಖಗೊಂಡಿಲ್ಲ. ಸಾಮಾನ್ಯ ಮನುಷ್ಯನಾಗಿ ಸಾಮಾನ್ಯ ಕುಲದಲ್ಲಿ ಬೆಳೆದ ಪೂರ್ವ ಸಂಸ್ಕಾರ ಕರ್ಣನನ್ನು ಹಾಗೆ ಬೆಳೆಸಿದೆ. ಅಂತೆಯೇ ಕುಮಾರವ್ಯಾಸ ಹಲವುನಾಲಿಗೆಗಳಿಂದ ಹೊಗಳಿಸಿ ಸಾಮಾನ್ಯ ಕರ್ಣನಿಗೆ ಅಸಾಮಾನ್ಯ ಪಟ್ಟಗಟ್ಟಿದ್ದಾನೆ; ತನ್ಮೂಲಕ ಸಾಮಾನ್ಯ ಮನುಷ್ಯನ ಸಾಮಾಜಿಕ ನೆಲೆಯನ್ನು ಗೌರವಿಸಿದ್ದಾನೆ.

ಅಧ್ಯಾಯ - ೬

ಸಾಂಸ್ಕೃತಿಕ ನೆಲೆ : ಸಾಮಾನ್ಯ ಮನುಷ್ಯ

ಸಾಂಸ್ಕೃತಿಕ ನೆಲೆ : ಸಾಮಾನ್ಯ ಮನುಷ್ಯ

ಪ್ರವೇಶ:

ಇಲ್ಲಿರುವ ನಾಲ್ಕು ಕೃತಿಗಳು ಎರಡು ಧರ್ಮಕ್ಕೆ ಸೇರಿದಂಥವುಗಳು. ವಡ್ಡಾರಾಧನೆ ಮತ್ತು ಧರ್ಮಾಮೃತದಲ್ಲಿ ಶೇಖರಗೊಳ್ಳುವ ವಿಷಯಗಳು ಒಂದೇ ಮಾದರಿಯವು. ಆದರೆ ಹರಿಶ್ಚಂದ್ರ ಕಾವ್ಯ ವೀರಶೈವ ಧರ್ಮಕ್ಕೆ ಸೇರಿದ್ದೆಂದು ಸ್ಥೂಲವಾಗಿ ಹೇಳಿದರೂ ಅದಕ್ಕೆ ಸಂಬಂಧಿಸಿದ ಯಾವ ಸಾಮಾಜಿಕ, ಕೌಟುಂಬಿಕ ವಲಯಗಳ ಸಾಂಸ್ಕೃತಿಕ ವಿಷಯಗಳೂ ಹರಹು ಪಡೆದುಕೊಳ್ಳುವುದಿಲ್ಲ. ಕುಮಾರವ್ಯಾಸ ಭಾರತದಲ್ಲಿಯೂ ಅಷ್ಟೇ; ಜನಸಾಮಾನ್ಯರ ಸಾಮಾಜಿಕ ಕೌಟುಂಬಿಕ ಕ್ಷೇತ್ರದ ಸಾಂಸ್ಕೃತಿಕ ವಿಷಯಗಳು ವಿಶೇಷವಾಗಿ ವಿಸ್ತರಿಸಿಕೊಳ್ಳುವುದಿಲ್ಲ. ಇಂತಹ ವ್ಯತ್ಯಾಸಕ್ಕೆ ಕಾರಣಗಳು ಸ್ಪಷ್ಟವಾಗಿಯೇ ಇವೆ. ವಡ್ಡಾರಾಧನೆ ಮತ್ತು ಧರ್ಮಾಮೃತಗಳೆರಡೂ ಧರ್ಮನಿಷ್ಠ ಕಾವ್ಯಗಳು; ಇಲ್ಲಿಯ ಸಾಮಾನ್ಯ ಜನವರ್ಗದವರು ಜೈನ ಪರಿಸರದಲ್ಲಿ ಬಾಳಿದವರು. ಅಂತೆಯೇ ಇವರ ಕೌಟುಂಬಿಕ ಹಾಗೂ ಸಾಮಾಜಿಕ ಎರಡೂ ನೆಲೆಗಳಲ್ಲಿ ತೋರುವ ಸಂಪ್ರದಾಯ, ನಂಬಿಕೆ, ಆಚರಣೆಗಳೆಲ್ಲ ಮತ ಸಂಬಂಧಿ ವಿವರಣೆಯನ್ನೇ ಪಡೆಯುತ್ತವೆ. ಇನ್ನು ಬೇರೆ ಬೇರೆ ಉದ್ಯೋಗಗಳನ್ನವಲಂಬಿಸಿದ ಜನರಲ್ಲಿ ಜೈನಧರ್ಮದವರೂ ಇರಬಹುದು ಅಥವಾ ಅನ್ಯಧರ್ಮೀಯರು ಇದರಲ್ಲಿ ಸೇರಿರಬಹುದು. ಯಾವುದೇ ಮತಾವಲಂಬಿ ಇವರಾಗಿದ್ದರೂ ಇವರೆಲ್ಲ ಸಾಮಾನ್ಯರು ಎನ್ನುವುದು ಮುಖ್ಯವಾದದ್ದು; ಪ್ರಕೃತ ಆಶಯಕ್ಕೆ ಪೂರಕವಾದದ್ದು. ಒಟ್ಟಾರೆ ಶಿವಕೋಟ್ಯಾಚಾರ್ಯ ಮತ್ತು ನಯಸೇನರಿಬ್ಬರೂ ತಮ್ಮ ಸಮಕಾಲೀನ ಜನಸಾಮಾನ್ಯರಿಗೆ ಸಂಬಂಧಿಸಿದ ವಿಷಯಗಳನ್ನೆಲ್ಲ ಕ್ರೋಢಿಕರಿಸಿ ತಮ್ಮ ಕೃತಿಗಳ ಮೂಲತ ಹರಿಯಬಿಟ್ಟಿದ್ದಾರೆ. ಒಕ್ಕಲುತನ, ವ್ಯಾಪಾರದಂಥ ಮುಖ್ಯ ಉದ್ಯೋಗಗಳನ್ನಲ್ಲದೆ ಬೇರೆ ಉದ್ಯೋಗಗಳಿಗಂಟಿದ ಮಾಲೆಕಾರರು, ನೇಕಾರರು, ಬಡಿಗರು, ಗಾಣಿಗರು, ಬೇಡರು, ಡೊಂಬರು, ಗೊಲ್ಲರು, ಕೂಲಿಕಾರರ ವಿಷಯಗಳನ್ನೆಲ್ಲ ವಡ್ಡಾರಾಧನೆಕಾರ ಹೇಳುತ್ತಾನೆ. ಕಳ್ಳರು, ವೇಶ್ಯೆಯರ ಕುರಿತೂ ಶಿವಕೋಟ್ಯಾಚಾರ್ಯ ಮಾತನಾಡಿದ್ದಾನೆ. ನಯಸೇನನು ಈ ಎಲ್ಲ ವೃತ್ತಿ, ವೃತ್ತಿಯವರಿಗೆ ಸೇರಿದ ವಿಷಯಗಳನ್ನೆಲ್ಲ ವಿವರಿಸುವುದರೊಂದಿಗೆ ವಿದ್ಯಾಭ್ಯಾಸ ನ್ಯಾಯದಾನದ ವಿಷಯಗಳನ್ನೂ ಕಾವ್ಯದಲ್ಲಿ ತಂದಿದ್ದಾನೆ. ಪ್ರಾಣಿ ಪ್ರಪಂಚಕ್ಕೆ ಸೇರಿದ ವಿಷಯಗಳೂ ಧರ್ಮಾಮೃತದಲ್ಲಿ ಬಂದಿವೆ.

ವಡ್ಡಾರಾಧನೆ ಮತ್ತು ಧರ್ಮಾಮೃತದಲ್ಲಿ ಜನಸಾಮಾನ್ಯರಿಗೆ ಸಂಬಂಧಿಸಿದ ಇಷ್ಟೊಂದು ವಿಷಯಗಳು ಹರಿಶ್ಚಂದ್ರಕಾವ್ಯ ಮತ್ತು ಕನ್ನಡ ಭಾರತದಲ್ಲಿ ಸೇರಿಕೊಂಡಿಲ್ಲ. ಬೇಟೆಯೊಂದನ್ನುಳಿದು ಇತರ ಯಾವ ವೃತ್ತಿಗಳೂ ಇಲ್ಲಿ ವಿವರಣೆ ಪಡೆಯುವುದಿಲ್ಲ. ಬೇಟೆ ರಾಜರ ಹವ್ಯಾಸ ಎಂಬ ಕಾರಣಕ್ಕೋ ಅಷ್ಟಾದಶ ವರ್ಣನೆಗಳಲ್ಲಿ ಬೇಟೆಯೂ ಒಂದೆಂಬ ಕಾರಣಕ್ಕೋ ಬೇಟೆ, ಬೇಟೆಗೆ ಸಂಬಂಧಿಸಿದ ಅನೇಕ ವಿಷಯಗಳು ಈ ಎರಡೂ ಕಾವ್ಯಗಳಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಗದುಗಿನ ಭಾರತದಲ್ಲಿ ಕೃಷಿ ಮತ್ತು ಪಶುಪಾಲನೆಯ ವಿಷಯ ಒಂದೆರಡು ಕಡೆಗೆ ತಲೆದೋರಿವೆ.

ಮಾನಸಿಕ ಪ್ರಕ್ರಿಯೆಗೆ ಸಂಬಂಧಿಸಿದ ನಂಬಿಕೆ, ಸಂಪ್ರದಾಯಗಳಾಚೆಗೆ ತೋರುವ ಬೇರೊಂದು ಸ್ತರದ ವಿವೇಚನೆ ಸಾಂಸ್ಕೃತಿಕ ನೆಲೆಯಲ್ಲಿ ಮುಖ್ಯವೆನಿಸುತ್ತದೆ. ಆಯಾ ಕಾಲ, ಸಂದರ್ಭಗಳು ರೂಪಿಸಿದ ಜೀವನ ಮೌಲ್ಯಗಳು, ಶಿಷ್ಟಾಚಾರಗಳು ಮನುಷ್ಯ ಮನಸ್ಸು ಮಥಿಸಿ ಒಪ್ಪಿಕೊಂಡ ಫಲಿತಗಳು. ದಾನ. ದಯೆ. ಉಪಕಾರ. ಪ್ರತ್ಯುಪಕಾರ. ಪ್ರೀತಿ ಶಿಷ್ಟರಕ್ಷಣೆಯಂಥ ಹಲವಾರು ಮಾನವೀಯ ಗುಣಗಳು ಎಲ್ಲಾ ಕಾಲ ಇಚ್ಛಿಸುವ ಮೌಲ್ಯಗಳೇ. ಇವುಗಳ ಆಚರಣೆ. ಅನುಸರಣೆಯ ಅನುಪಾತಗಳು ಸಮುದಾಯದ

ಸಂಸ್ಕೃತಿ ನಡೆಯ ಗುಣಮಟ್ಟವನ್ನು ನಿರ್ಧರಿಸುತ್ತವೆ. ಮಾನವೀಯ ಮೌಲ್ಯಗಳು ಶಿಷ್ಟವರ್ಗದ ಮನುಷ್ಯರಿಗಿಂತ ದೇಸಿಲೋಕದಲ್ಲಿ ಹೆಚ್ಚು ದಟ್ಟವಾದ ಅಭಿವ್ಯಕ್ತಿ ಪಡೆಯುತ್ತವೆ. ಉನ್ನತ ವರ್ಗದವರು ಯಾವ ವಿಷಯಕ್ಕೆ ಸ್ಪಂದಿಸಿದರೂ ಅದಕ್ಕೊಂದು ಮುಂಧೋರಣೆ ಸ್ವಾರ್ಥ ಮೂಲದ ವಿವೇಚನೆ ತಳಕು ಹಾಕಿಕೊಳ್ಳುತ್ತದೆ. ಹಾಗಿಲ್ಲದ ಸಾಮಾನ್ಯರ ಅಭಿವ್ಯಕ್ತಿ ನೇರ ಮತ್ತು ಸರಳವಾದುದು. ಕಾಡುಪ್ರಾಣಿಗಳಿಂದ ತಮ್ಮನ್ನು ರಕ್ಷಿಸಬೇಕೆಂದು ಹರಿಶ್ಚಂದ್ರನಲ್ಲಿಗೆ ಬರುವ ಪ್ರಜೆಗಳ ವಿಷಯ ಸಾಮಾನ್ಯವೆನಿಸಿದರೂ ಪ್ರಜೆಗಳನ್ನು ನಿರಂತರ ರಕ್ಷಿಸಿಕೊಂಡಿರಬೇಕೆಂಬ ಅರಸನ ಕರ್ತವ್ಯ ಹಾಗೂ ಅರಸನ ರಕ್ಷಣೆಯಲ್ಲಿ ನಾವು ಸುರಕ್ಷಿತವಾಗಿರುತ್ತೇವೆ ಎಂಬ ಪ್ರಜೆಗಳ ವಿಶ್ವಾಸ–ಎರಡೂ ಅಂಶಗಳು ಸಾಂಸ್ಕೃತಿಕ ಚಹರೆಗಳೇ. ಸಾಮಾನ್ಯ ಪ್ರಜಾವರ್ಗವನ್ನು ರಕ್ಷಿಸಿಕೊಂಡು ಅವರನ್ನು ಸುಖವಾಗಿರಿಸಬೇಕೆಂಬ ರಾಜನ ಪ್ರಜ್ಞೆ ಕರ್ತವ್ಯವೂ ಹೌದು, ಮೌಲ್ಯವೂ ಹೌದು.

ಕುಮಾರವ್ಯಾಸ ಭಾರತದಲ್ಲಿ ಜೂಜಿನಲ್ಲಿ ಪಣಕ್ಕಿಟ್ಟು ಸೋಲಲ್ಪಟ್ಟ ದ್ರೌಪದಿಯನ್ನು ಸಭೆಗೆ ಎಳೆತರಲು ಕೌರವ ಆಜ್ಞೆ ಮಾಡಿದರೆ ದೊಡ್ಡವರೆನ್ನಿಸಿಕೊಂಡವರೆಲ್ಲ ಮೌನಕ್ಕೆ ಶರಣಾಗಿದ್ದರೆ ವಿದುರ ಮಾತ್ರ ಪ್ರತಿಭಟಿಸಿದ. ದುಶ್ಯಾಸನ ದ್ರೌಪದಿಯ ಅಂತಃಪುರಕ್ಕೆ ಬಂದು ಅವಳ ಮುಡಿ ಹಿಡಿದು ಎಳೆದಾಡಿದರೆ ಅದನ್ನು ಪ್ರತಿಭಟಿಸಿದವರು ಅಂತಃಪುರದ ದಾಸಿಯರು. ಇವೆಲ್ಲ ಸಂಸ್ಕೃತಿಯೊಂದು ರೂಪಿಸಿದ ಸಾಮಾನ್ಯ ಮನುಷ್ಯನ ಮಾದರಿಗಳು. ಇವರ ಮೌಲ್ಯಾಧಾರಿತ ಪ್ರಜ್ಞೆ ಮತ್ತು ನಡುವಳಿಕೆಗಳು ಪ್ರಭುತ್ವದ ಕಟ್ಟಳೆಯನ್ನು ಮೀರಿ ಹರಿಯುತ್ತವೆ. ಇದು ಜನ ಸಾಮಾನ್ಯರಲ್ಲಿ ಮಾತ್ರ ತೋರುವ ನಿರಪೇಕ್ಷ ಪ್ರಾಮಾಣಿಕತೆ. ಇಂತಹವುಗಳೆಲ್ಲ ಅಂದಂದಿನ ಸಾಂಸ್ಕೃತಿಕ ನೆಲೆಯಲ್ಲಿ ಮೂಡಿಕೊಂಡಿರುವ ಹೆಜ್ಜೆಗುರುತುಗಳೆನಿಸುತ್ತವೆ.

ವಡ್ಡಾರಾಧನೆ

ನಂಬಿಕೆಗಳು:

ಹುಟ್ಟು ನಿಸರ್ಗ ಸಹಜ ಜೈವಿಕ ಕ್ರಿಯೆ. ಆದರೆ ಹುಟ್ಟುವ ಮಗು ಗಂಡೋ, ಹೆಣ್ಣೋ ಎಂಬುದು ಮತ್ತು ಮಗುವಿನ ಜಾತಿ ಆ ಮಗುವಿನ ಹಿಂದಿನ ಜನ್ಮದ ಕರ್ಮಫಲದ ಮೇಲೆ ನಿರ್ಧರಿತವಾಗುತ್ತದೆ ಎಂಬ ನಂಬಿಕೆ ಜನಸಾಮಾನ್ಯರಲ್ಲಿದೆ. ಶಾಪ ಅಥವಾ ಪಾಪದ ಫಲವಾಗಿ ಜೀವ ಹೆಣ್ಣಾಗಿ ಹುಟ್ಟುತ್ತದೆ ಮತ್ತು ದಲಿತರ ಮನೆಯಲ್ಲಿ ಹುಟ್ಟುತ್ತದೆ ಎಂದು ಬಿಂಬಿಸಲಾಗುತ್ತದೆ. ಹೆಣ್ಣು ಜೀವ ಮತ್ತು ದಲಿತ ಜೀವ ಎರಡನ್ನೂ ಸಮಾಜ ಅತ್ಯಂತ ನಿಕೃಷ್ಟವಾಗಿ ಕಾಣುತ್ತದೆ. ಅವೆರಡೂ ಕೀಳು ಎಂಬುದನ್ನು ಸಮಾಜ ಜನಸಾಮಾನ್ಯರಿಗೆ ನಂಬಿಸಿದೆ. ಬರಿ ಮನುಷ್ಯ ಜನ್ಮದಲ್ಲಷ್ಟೇ ಅಲ್ಲ ಪ್ರಾಣಿಗಳಲ್ಲಿಯೂ ಹೆಣ್ಣಾಗಿ ಹುಟ್ಟುವದನ್ನು ವಡ್ಡಾರಾಧನೆಕಾರ ನಿಕೃಷ್ಟವಾಗಿ ಪರಿಗಣಿಸುತ್ತಾನೆ.

ಪರಾಳಕೂಟವೆಂಬ ಊರಿನಲ್ಲಿ ದೇವಿಲನೆಂಬ ವರ್ತಕ, ಅವನ ಹೆಂಡತಿ ಪೃಥ್ವಿಶ್ರೀ ಅವಳ ಗರ್ಭದಲ್ಲಿ ಒಂದು ಪಾಪಕರ್ಮ ಜೀವವು ಬಂದು ಸೇರಿಕೊಳ್ಳಲು ಏನೂ ಕಾರಣವಿಲ್ಲದೇ ಅವರ ಧನ–ಕನಕವೆಲ್ಲ ಹಾಳಾಯಿತು. ಕೂಸು ಹುಟ್ಟುವ ಮುಂಚೆಯೇ ತಂದೆ, ಮಗು ಎರಡು ವರ್ಷದ್ದಾಗುವಷ್ಟರಲ್ಲಿ ತಾಯಿ ಇಬ್ಬರೂ ತೀರಿ ಹೋದರು. ನಂತರ ಮಗು ಸಾಕಿದ ನೆಂಟರಿಷ್ಟರಿಗೂ ಸಾವೇ ಗತಿಯಾಗಿ, ಇದ್ದವರೆಲ್ಲ ತೀರಿ ಆ ಕುಲವೇ ನಾಶಹೊಂದಿತು. ಅದಕ್ಕೆ ಊರವರೆಲ್ಲ ಸೇರಿ ಈ ತರುವಲಿ ನಮ್ಮೂರೊಳಿರೆ

ನಮಗೆ ಸಾವುಂ ಕೇಡುಮಮೋಘಮಕ್ಕುಮಿವನನಟ್ಟಿ"(ವಡ್ಡಾರಾಧನೆ ಪು- ೭೬) ಎಂದು ನಂದಿಮಿತ್ರನನ್ನು ಊರಿಂದ ಹೊರಹಾಕುತ್ತಾರೆ.

ನಂದಿಮಿತ್ರ ಸ್ವತಃ ಯಾವ ತಪ್ಪನ್ನು ಮಾಡದಿದ್ದರೂ ವಿಧಿಯಾಟ ಮತ್ತು ಪಾಪಕರ್ಮ ಎಂಬ ಜನರ ನಂಬಿಕೆ ಎರಡೂ ಆ ಹುಡುಗ ಎಲ್ಲವನ್ನು ಕಳೆದುಕೊಂಡು ಊರೂರು ಅಲೆದು ಬದುಕಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿರುವದು ಈ ಸಮಾಜದ ಮೂಢನಂಬಿಕೆಗಳಿಗೆ ಸಾಕ್ಷಿವೆತ್ತಂತಿದೆ. ಯಾವ ಕಾರಣವೂ ಇಲ್ಲದೆ ಹೇಗೆ ಅಸಹಾಯಕ ಸಾಮಾನ್ಯನೊಬ್ಬನನ್ನು ಸಮಾಜ ಕ್ರೂರವಾಗಿ ನಡೆಸಿಕೊಳ್ಳುತ್ತದೆ ಎನ್ನುವದಕ್ಕೆ ಈ ಕಥೆಯ ನಂದಿಮಿತ್ರನೇ ಸಾಕ್ಷಿಯಾಗುತ್ತಾನೆ.

ಕಾರಣಿಕ ಎನ್ನುವದು ಜ್ಯೋತಿಷ್ಯವೇ. ಆದರೆ ಈ ಜ್ಯೋತಿಷ್ಯದ ಭಾಷೆ ಅಸ್ಪಷ್ಟವಾಗಿರುತ್ತದೆ. ಕಾರಣಿಕವನ್ನು ಹೇಳುವವನು ಒಬ್ಬ; ಒಗಟನ್ನು ಬಿಡಿಸಿ ಜನಭಾಷೆಯಲ್ಲಿ ಹೇಳುವವರು ಇನ್ನೊಬ್ಬರಿರುತ್ತಾರೆ. ಇದೇ ರೀತಿಯನ್ನು ವಡ್ಡಾರಾಧನೆಕಾರ ತನ್ನ ಭದ್ರಬಾಹು ಭಟ್ಟಾರರ ಕಥೆಯಲ್ಲಿ ಹೇಳುತ್ತಾನೆ.

ಒಂದು ದಿನ ಋಷಿಗಳೆಲ್ಲ ಭಿಕ್ಷೆಗೆ ಹೋದಾಗ ಭದ್ರಬಾಹು ಭಟ್ಟಾರರು ಭಿಕ್ಷೆಗೆಂದು ಒಂದು ಮನೆಗೆ ಹೋಗುತ್ತಾರೆ. ಆ ಮನೆಯಲ್ಲಿ ಯಾರೂ ಇರಲಿಲ್ಲವಾದರೂ ಮನೆಯ ಹೊರಗಿನ ಕೋಣೆಯಲ್ಲಿ ತೊಟ್ಟಿಲಲ್ಲಿ ಅಸ್ಪಷ್ಟವಾಗಿ ಮಗುವೊಂದು ಕಾಣುತ್ತಿರುತ್ತದೆ. ಆ ಮಗು ಭಟ್ಟಾರರಿಗೆ 'ಬೋಳಹ ಬೋಳಹ ಭಟ್ಟಾರಾ' ಎಂದರೆ 'ಹೋಗಿ ಭಟಾರರೇ ಹೋಗಿ' ಎನ್ನುತ್ತದೆ. ಆ ಮಗುವಿನ ಮಾತನ್ನೇ ಭಟ್ಟಾರರು ದಿವ್ಯವಾಕ್ಯವೆಂದು ಅರಿತು ಕಾಲಾವಧಿಯನ್ನು ಅಂದರೆ ಎಲ್ಲಿಯವರೆಗೆ ಹೋಗಬೇಕೆನ್ನುತ್ತಾರೆ. ಅದಕ್ಕೆ ಆ ಮಗು ಹನ್ನೆರಡು ವರ್ಷವೆಂದು ಉತ್ತರ ಕೊಡುತ್ತದೆ.

ಹೀಗೆ ಆ ಮಗುವಿನ ಜ್ಯೋತಿಷ್ಯವನ್ನು ನಂಬಿ ಎಲ್ಲ ಋಷಿಗಳನ್ನು ಕರೆದುಕೊಂಡು ೧೨ ವರ್ಷಗಳ ಕಾಲ ದಕ್ಷಿಣ ದಿಕ್ಕಿಗೆ ಸಂಚರಿಸುತ್ತಾ ಹೋಗುತ್ತಾರೆ. ಇದು ನಂಬಿಕೆ. ಋಷಿಗಳಾದಿಯಾಗಿ ರಾಜನಾದಿಯಾಗಿ, ಜನಸಾಮಾನ್ಯರೂ ನಂಬುವ ನಂಬಿಕೆ ಇದು.

ವಡ್ಡಾರಾಧನೆಯ ಸಿರಿದಿಣ್ಣ ಭಟಾರರ ಕಥೆಯಲ್ಲಿ ಬರುವ ದಾದಿ ವಿನಯಮತಿ ತನ್ನನ್ನು ಪೂಜಿಸಿ ಹೋದ ಶ್ರೀಯಾದೇವತೆಯಂತಾಗಬೇಕೆಂದು ಸಂಕಲ್ಪ ಮಾಡಿಕೊಂಡು ಸತ್ತು ಶ್ರೀಯಾದೇವಿಯಾಗಿಯೇ ಹುಟ್ಟುತ್ತಾಳೆ. ನಂತರ ಇಳಾಪಟ್ಟಣ ಬಂದು ಊರ ಜನರ ಕನಸಿನಲ್ಲಿ ಕಾಣಿಸಿಕೊಂಡು "ಆಂ ಶ್ರೀಯಾದೇವತೆಯೆಂ ನಿಮ್ಮ ಪೊಟಲ್ಗೆ ವಂದೆನೆನಗೆ ಶ್ರೀವಿಹಾರಮಂ ಮಾಡಿ ಎನ್ನ ಪ್ರತಿಮೆಯನಿಟ್ಟು ಪೂಜಿಸುತ್ತವೋಲಗಿಸುತ್ತುಮಿರಿಮಾನುಂ ನಿಮಗೆ ಬೇಡಿದ ವರವನೀವೆನ್" (ವಡ್ಡಾರಾಧನೆ ಪು- ೧೦೭)ಎಂದು ಹೇಳುತ್ತಾಳೆ. ಅವಳು ಹೇಳಿದಂತೆ ಶ್ರೀವಿಹಾರವನ್ನು ಮಾಡಿ, ಶ್ರೀಯಾದೇವತೆಯ ಪ್ರತಿಮೆಯನ್ನು ಸ್ಥಾಪಿಸಿ ಉತ್ಸವ ಪೂಜೆಮಾಡತೊಡಗಿದರು.

ಕನಸಿನಲ್ಲಿ ದೇವರುಗಳು ಬಂದು ಜನಸಾಮಾನ್ಯರಿಗೆ ಹೀಗೆ ಹೇಳುವರೆಂಬ ನಂಬಿಕೆ ಅದನ್ನು ಈಡೇರಿಸಲೇಬೇಕೆಂಬ ರೂಢಿ ಮುಂಚಿನಿಂದಲೂ ಬೆಳೆದುಕೊಂಡು ಬಂದಿದೆ. ಜನ ಅಂದಿನಿಂದ ಇಂದಿನವರೆಗೂ ಕನಸನ್ನು ನಂಬುತ್ತಾರೆ. ಕನಸಿನ ಬಗ್ಗೆ ಶಕುನಗಳಿವೆ. ದೇಶಾದ್ಯಂತ ಹೀಗೆ ಕನಸಿನಲ್ಲಿ ಬಂದು ಹೇಳಿದ ಕಾರಣಕ್ಕಾಗಿಯೇ ಅಸಂಖ್ಯಾತ ದೇಗುಲಗಳು ಭಾರತದಲ್ಲಿ ಹುಟ್ಟಿಕೊಂಡಿವೆ. ಹುಟ್ಟಿಕೊಳ್ಳುತ್ತಲೂ ಇವೆ.

ಸಂಪ್ರದಾಯ:

ಸುಕುಮಾರ ಸ್ವಾಮಿಯ ಕತೆಯಲ್ಲಿ ಬರುವ ಗಂಭೀರೆ ಎಂಬ ವೃದ್ಧೆಯ ಕತೆಯಿದೆ. ಗಂಭೀರೆಯ ಮಗಳು ಹರಿಣಿ ಗರ್ಭಿಣಿಯಾಗಿರುತ್ತಾಳೆ. ಹರಿಣಿಗೆ ಕಡುಬು ತಿನ್ನಬೇಕೆಂಬ ಬಯಕೆಯಾಗುತ್ತದೆ. ಅದಕ್ಕೆ ತಾಯಿ ಮಗಳ ಬಯಕೆ ತೀರಿಸಲು ನಾನಾ ಬಗೆಯ ಕಡುಬು, ಲಡ್ಡುಗೆ, ಮಂಡಿಗೆ ಮಂತಾದವುಗಳನ್ನು ಮಾಡಿಕೊಂಡು ಮಗಳ ಮನೆಗೆ ಹೋಗುತ್ತಾಳೆ.

ಮಗಳು ಬಸುರಾದಾಗ ತಾಯಿ ಬಯಕೆಯೂಟ ಒಯ್ಯುವದು ವಡ್ಡಾರಾಧನೆಯ ಕಾಲಕ್ಕಷ್ಟೇ ಅಲ್ಲ ಈ ಕಾಲದಲ್ಲೂ ಆ ಸಂಪ್ರದಾಯ ಮುಂದುವರೆದುಕೊಂಡು ಬಂದಿದೆ. ಇವತ್ತಿಗೂ ಗರ್ಭಿಣಿಯ ತವರಿನವರು ಬಯಕೆಯೂಟವನ್ನು ತರುವ ರೂಢಿ ಜನಸಾಮಾನ್ಯರಲ್ಲಿ ಉಳಿದುಕೊಂಡೇ ಬಂದಿದೆ.

ಸಾಮಾನ್ಯನ ವಿಶೇಷ ಸಂದರ್ಭದ ಸಿಹಿ ತಿಂಡಿಗಳಲ್ಲಿ ಕಡುಬು, ಲಡ್ಡುಗೆ ಮಂಡಿಗೆ ಸೇರಿಕೊಳ್ಳುತ್ತವೆ. ಇತ್ತೀಚಿಗೆ ಮಂಡಿಗೆ ವೈದಿಕ ಸಂಪ್ರದಾಯದವರು ವಿಶೇಷ ಸಂದರ್ಭಗಳಲ್ಲಿ ಮಾಡುವ ಸಿಹಿಯಾಗಿ ಉಳಿದುಕೊಂಡಿರುವದನ್ನು ಕಾಣುತ್ತೇವೆ.

ಭಾರತೀಯ ಕೌಟುಂಬಿಕ ವ್ಯವಸ್ಥೆ ಪಿತೃಪ್ರಧಾನವಾದದ್ದು. ಈ ಅಂಶ ನಾಮಕರಣದ ಸಂದರ್ಭದಲ್ಲಿಯೇ ಮನದಟ್ಟಾಗುತ್ತದೆ. ಮಗುವಿಗೆ ಹೆಸರಿಡುವಾಗ ತಂದೆಯ ವಂಶಸ್ಥರ ಹೆಸರುಗಳು ಅಥವಾ ತಂದೆಯ ಸಂಬಂಧಿಕರಿಂದ ಮಗುವಿನ ಹೆಸರನ್ನು ನಿರ್ಧರಿಸುತ್ತಿದ್ದರು. ಆದರೆ ಅಣ್ಣಿಕಾ ಪುತ್ರ ಕಥೆಯಲ್ಲಿ ಮಾತೃ ಸಂಸ್ಕೃತಿಯ ಛಾಯೆಯನ್ನು ಕಾಣುತ್ತೇವೆ.

ಮಗುವಿಗೆ ನಾಮಕರಣ ಮಾಡುವಾಗ ತಾಯಿಯ ಹೆಸರಿನಿಂದಲೇ ಮಗುವಿನ ಹೆಸರಿಡುವ ರೂಢಿಯನ್ನು ಇಲ್ಲಿ ಕಾಣುತ್ತೇವೆ. ಅದನ್ನು ವಡ್ಡಾರಾಧನೆಕಾರ 'ಅಣ್ಣಿಕೆಯ ಮಗನೆಂದಾತಂಗಣಿಕಾ ಪುತ್ರನೆಂದು'(ವಡ್ಡಾರಾಧನೆ ಪು-೭೦) ಹೆಸರಿಡಲಾಯಿತು ಎಂದು ಹೇಳುತ್ತಾನೆ. ಅತ್ಯಂತ ಪ್ರಭಾವ ಶಾಲಿಯಾದ ಪಿತೃ ಪ್ರಧಾನ ಸಂಸ್ಕೃತಿಯ ಒಡಲಲ್ಲೂ ಮಾತೃ ಸಂಸ್ಕೃತಿಯ ಅಂಶಗಳನ್ನು ಅಲ್ಲಲ್ಲಿ ಕಾಣುತ್ತೇವೆ.

ಅಪರಾಧ ಮತ್ತು ಶಿಕ್ಷೆ:

ಸುಕುಮಾರಸ್ವಾಮಿ ಕತೆಯಲ್ಲಿ ಬರುವ ವರಸೇನನೆಂಬುವನು ಅಕ್ಷಧೂರ್ತನನ್ನು ವಿನಾಕಾರಣ ಕೊಲೆಗೈಯುತ್ತಾನೆ. ಆದ್ದರಿಂದ ವರಸೇನನಿಗೆ ಮರಣದಂಡನೆ ವಿಧಿಸಲಾಗುತ್ತದೆ. ಮರಣ ದಂಡನೆ ವಿಧಿಸಿದ ವ್ಯಕ್ತಿಯನ್ನು ವಧಾಸ್ಥಳಕ್ಕೆ ಕರೆದೊಯ್ಯುವಾಗ ಅವನ ಸುತ್ತಲೂ ಜನರೆಲ್ಲ ಸುತ್ತಿ, ಅಪರಾಧಿಯನ್ನು ಹಿಂಗಟ್ಟು ಮುರಿಕಟ್ಟಿ, ತಮಟೆ ಬಡಿಯುತ್ತ ಎಳೆದೊಯ್ಯಲಾಗುತ್ತಿತ್ತು. ಆ ಮೂಲಕ ಜನಸಾಮಾನ್ಯರಲ್ಲಿ ಅಪರಾಧದ ಬಗ್ಗೆ ಭಯ ಮೂಡುವಂತೆ ಮಾಡಲಾಗುತ್ತಿತ್ತು.

ಇದೇ ಕತೆಯಲ್ಲಿ ಬರುವ ವೈನಯಿಕನೆಂಬ ಮೋಸಗಾರ ಕನ್ಯೆಯ, ಬಂಟನ, ವೃದ್ಧೆಯ ಕತೆಗಳನ್ನು ಹೇಳುತ್ತ, ಆ ಕತೆಗಳಿಗೆ ಚಿತ್ರಗಳನ್ನು ಬರೆದು ತೋರಿಸುತ್ತ ಕಲೆಯ ಮೂಲಕ ಭತ್ತ ಕದಿಯುತ್ತಿದ್ದನು. ಈ ವೈನಯಿಕನೊಂದಿಗಿರುವವನು ಜನ ಅತ್ತ ವೈನಯಿಕನ ಕತೆಗಳನ್ನು ಆಸಕ್ತಿಯಿಂದ ಕೇಳುತ್ತಿದ್ದಾಗ ಇತ್ತ ಇವನು ಅರವತ್ತು ಬಳ್ಳದ ಭತ್ತವನ್ನು ೨೦ಬಳ್ಳವೆಂದು ಅಳೆದು ಮೋಸಮಾಡುತ್ತಿದ್ದನು. ಮೂರನೆಯವನು ನೆಲದಲ್ಲಿ ರಂದ್ರ ಕೊರೆದು ಆ ನೆಲದ ಮೇಲೆ ದೊಡ್ಡರಾಶಿಯಾಗಿ ಕಾಣುವ ಭತ್ತ ರಂಧ್ರದಿಂದ ಸೋರಿ ನೆಲಮಾಳಿಗೆಗೆ ಬೀಳುತ್ತಿತ್ತು. ಹೀಗೆ ಈ ಮೂವರೂ ಒಂದಾಗಿ ಜನರಿಗೆ ಮೋಸ ಮಾಡಿ ಭತ್ತ ಕದಿಯುತ್ತಿದ್ದರು. ಇವರ ಮೋಸ ಬಯಲಾಗಿ ಅರಸನಿಗೆ ದೂರು ಹೋಯಿತು. ಅರಸ ಕಳವು ಹುಸಿ

ಎಂಬ ಅಪರಾಧಕ್ಕಾಗಿ ಮೂವರನ್ನೂ ಕೊಲ್ಲಲು ಆಜ್ಞಾಪಿಸುತ್ತಾನೆ. ಕಳವು, ಸುಳ್ಳು ಹೇಳಿದ್ದಕ್ಕೆಯೂ ಮರಣದಂಡನೆಯನ್ನು ಕೊಡುವದಷ್ಟೇ ಅಲ್ಲ ಅವರನ್ನು ಹಿಂಗಟ್ಟುಮುರಿ ಕಟ್ಟಿ ತಮಟೆ ಬಾರಿಸುತ್ತ ಶೂಲಕ್ಕೇರಿಸಲು ಎಳೆದೊಯ್ಯುತ್ತಿದ್ದರು.

ಸಣ್ಣ ಅಪರಾಧಗಳಿಗೂ ದೊಡ್ಡ ಶಿಕ್ಷೆಯನ್ನು ನೀಡುವ ಮೂಲಕ ಅಂದಿನ ರಾಜರು ಜನಸಾಮಾನ್ಯರಲ್ಲಿ ಅಪರಾಧದ ಕುರಿತು ಭಯವನ್ನು ಹುಟ್ಟುಹಾಕಿ ಆ ಮೂಲಕ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುತ್ತಿದ್ದರು.

ಸುಕುಮಾರ ಸ್ವಾಮಿ ಕತೆಯಲ್ಲಿ ಬರುವ ಮೋದಾಳಿಯ ಮದುವೆ ಸೋದರಮಾವನ ಮಗ ನಂದನೊಂದಿಗೆ ನಿಶ್ಚಯವಾಗಿತ್ತು. ಮುಂದೆ ಅವನು ಬಹಳ ದಿನಗಳ ಕಾಲ ಹಣಗಳಿಕೆಗಾಗಿ ಸುವರ್ಣ ದ್ವೀಪಕ್ಕೆ ಹೋಗುತ್ತಾನೆ. ಹೋಗುವಾಗ ೧೨ ವರ್ಷದೊಳಗೆ ತಾನು ಹಿಂದಿರುಗಿ ಬಾರದಿದ್ದರೆ ಮೋದಾಳಿಯನ್ನು ತನ್ನ ತಮ್ಮನಿಗೆ ಮದುವೆಮಾಡಬೇಕೆಂದು ಮಾವನಿಗೆ ಹೇಳಿ ಹೋಗಿರುತ್ತಾನೆ. ೧೨ ವರ್ಷಗಳು ಕಳೆದರೂ ನಂದ ಬರದಿದ್ದರಿಂದ ಅವನ ತಮ್ಮ ಬೋಧನಿಗೆ ಮದುವೆ ಮಾಡಬೇಕೆಂದು ನಿಶ್ಚಯವಾಗಿ ಇನ್ನೇನು ಧಾರೆ ಎರೆಯಬೇಕು, ಅಷ್ಟರಲ್ಲಿ ನಂದ ಹಿಂದಿರುಗಿ ಬಂದನು. ಆಗ ಅಣ್ಣ ತಮ್ಮನ ಹೆಂಡತಿ ತನಗೆ ಬೇಡವೆಂದು, ತಮ್ಮ ಅಣ್ಣನ ಹೆಂಡತಿ ತನಗೆ ಬೇಡವೆಂದೂ ಇಬ್ಬರೂ ಬಿಡುತ್ತಾರೆ. ಮೋದಾಳಿ ತವರಿನಲ್ಲೇ ಉಳಿಯುತ್ತಾಳೆ. ಹೀಗಿರುವಾಗ ಮೋದಾಳಿ ಅದೇ ಊರಿನ ನಾಗಸೂರ ಎಂಬುವನೊಂದಿಗೆ ಕಳ್ಳತನದಿಂದ ಅಕ್ರಮ ಸಂಬಂಧ ಹೊಂದಿರುತ್ತಾಳೆ. ಒಂದುದಿನ ಚಂಪಾ ನಗರಕ್ಕೆ ಬಂದಾಗ ತಳವಾರ ಅವರಿಬ್ಬರನ್ನೂ ಹಿಡಿದು ರಾಜನಿಗೆ ಒಪ್ಪಿಸಿದನು. ಅಕ್ರಮ ಸಂಬಂಧವಿಟ್ಟುಕೊಂಡಿರುವದಕ್ಕಾಗಿ ಅವರಿಬ್ಬರಿಗೂ ರಾಜ ಕಾದ ಕಬ್ಬಿಣದ ಪ್ರತಿಮೆಗಳನ್ನು ತಬ್ಬಿಕೊಳ್ಳಬೇಕೆಂಬ ಆಜ್ಞೆಯನ್ನು ಮಾಡಿದನು. ಅಂದಿನ ಸಮಾಜದಲ್ಲಿ ಅಕ್ರಮ ಸಂಬಂಧ ಉಳ್ಳವರಿಗೆ ಅಷ್ಟು ಘೋರ ಶಿಕ್ಷೆ ವಿಧಿಸುತ್ತಿದ್ದರು. ವಿವಾಹ ಮನುಷ್ಯನ ಮಾನಸಿಕ ಮತ್ತು ಶಾರೀರಿಕ ವಿಷಯಾಸಕ್ತಿಗಳಿಗೆ ಇಂಬುಕೊಟ್ಟು ವ್ಯಕ್ತಿಯ ಸಾಮಾಜಿಕ ಜೀವನವನ್ನು ಪರಿಪೂರ್ಣಗೊಳಿಸುತ್ತದೆ. ಹಾಗೆ ಯಾವುದೇ ಕಾರಣಕ್ಕೆ ಮದುವೆಯಾಗದ, ಮದುವೆಯಾಗಿಯೂ ಅತೃಪ್ತರಾಗಿರುವ ಜೀವಿಗಳು ಅಕ್ರಮ ಸಂಬಂಧಗಳಿಗೆ ಗಂಟು ಬೀಳುತ್ತವೆ. ಸಾಮಾಜಿಕ ಮತ್ತು ಕೌಟುಂಬಿಕ ಸ್ವಾಸ್ಥ್ಯವನ್ನು ಹಾಳುಗೆಡುವುತ್ತವೆ. ಏಕಕಾಲಕ್ಕೆ ಮೋದಾಳಿಯ ಅಕ್ರಮ ಸಂಬಂಧವನ್ನು ಪ್ರಶ್ನಿಸುವ ವಡ್ಡಾರಾಧನೆಕಾರ ಮೋದಾಳಿ ಅಣ್ಣ ತಮ್ಮರಿಬ್ಬರಿಂದಲೂ ತಿರಸ್ಕೃತಗೊಂಡು ತವರಿನಲ್ಲೇ ಉಳಿದಾಗ ಅವಳಿಗಾದ ಅನ್ಯಾಯದ ಬಗ್ಗೆ ಚಕಾರವೆತ್ತುವದಿಲ್ಲ.

ಧಾರ್ಮಿಕವಾಗಿ ಮಹತ್ವದ ಸಾಧನೆಯಾದ ತಪಸ್ಸಾಚರಣೆಯನ್ನು ಈಗ ವ್ಯಕ್ತಿ ಕೈಗೊಂಡಿದ್ದರೂ ಪೂರ್ವಾಶ್ರಮದಲ್ಲಿ ತಪಸ್ವಿಮಾಡಿದ ಪಾಪಕರ್ಮ ಅವನನ್ನು ಬಿಡದೇ ವೈರವನ್ನು ಹೇಗೆ ಸಾಧಿಸುತ್ತದೆ ಮತ್ತು ಎಂಥ ಉಗ್ರ ತಪಸ್ಸು ಕೂಡ ವೈರತ್ವದಿಂದ ಸಹಾನುಭೂತಿಯನ್ನ ಪಡೆಯುವಲ್ಲಿ ಹೇಗೆ ವಿಫಲವಾಗುತ್ತದೆ ಎನ್ನುವದನ್ನು ಗಜಕುಮಾರನ ಕಥೆ ವಿವರಿಸುತ್ತದೆ.

ಈ ಕತೆಯಲ್ಲಿ ಗಜಕುಮಾರನೆಂಬುವನು ಅಂತಃಪುರದ ಸ್ತ್ರೀಯರನ್ನುಳಿದ ಊರಿನ ಯಾವುದೇ ಸ್ತ್ರೀಯರೊಂದಿಗೆ ಇರಬಹುದೆಂಬುದಕ್ಕೆ ರಾಜನಿಂದ ಅಪ್ಪಣೆ ಪಡೆಯುತ್ತಾನೆ. ರಾಜನ ಮನ್ನಣೆಯಿಂದಾಗಿ ಗಜಕುಮಾರ ನಿರಾತಂಕವಾಗಿ ಎಲ್ಲರೊಂದಿಗೆ ಇರತೊಡಗಿದ. ಎಲ್ಲ ಹೆಣ್ಣುಗಳಂತೆ ಆ ಊರಿನ ಅಕ್ಕಸಾಲಿಗ ಪಂಗುಳನ ಹೆಂಡತಿ ವಸುಂಧರಿಗೆ ಆಸೆಪಟ್ಟು ಅವಳನ್ನು ತನ್ನ ಮನೆಗೆ ತೆಗೆದುಕೊಂಡು ಹೋಗಿ ಬಾಳುತ್ತಿರುತ್ತಾನೆ. ಇತ್ತ ಗಜಕುಮಾರನನ್ನು ಎದುರಿಸುವಲ್ಲಿ ದುರ್ಬಲನಾದ ಪಂಗುಳ ಹೆಂಡತಿಯ

ಅಗಲಿಕೆಯ ನೋವಿನಿಂದ ಬಳಲುತ್ತಿರುತ್ತಾನೆ. ಜೊತೆಗೆ ಗಜಕುಮಾರನ ಪ್ರತಿಯಾಗಿ ಮನಸ್ಸಿನಲ್ಲಿ ಅಪಾರವಾದ ವೈರವನ್ನು ಬೆಳೆಸಿಕೊಳ್ಳುವನು.

ಕಾಲ ಕಳೆದಂತೆ ಒಂದು ದಿನ ಅರಿಷ್ಟನೇಮಿ ಭಟಾರರು ಪರರ ಹೆಂಡತಿಯರನ್ನು ಕೂಡಿದರೆ ಉಂಟಾಗುವ ದುರ್ಗತಿಗಳನ್ನು ವಿವರಿಸಿ ಹೇಳಿದ್ದನ್ನು ಕೇಳಿದ ಗಜಕುಮಾರನಿಗೆ ವೈರಾಗ್ಯ ಮೂಡಿ ಎಲ್ಲವನ್ನೂ ತ್ಯಜಿಸಿ ೧೨ ವರ್ಷ ತಪಸ್ಸಿನಲ್ಲಿ ಕಳೆದು ಮತ್ತೆ ಒಂದು ದಿನ ತಾನು ಹಿಂದೆ ಬಾಳಿದ್ದ ಊರಿಗೆ ಬಂದನು. ಗಜಕುಮಾರ ಭಟ್ಟಾರರಾಗಿ ಊರಿಗೆ ಬಂದಿದ್ದ. ಭಟಾರರನ್ನು ಊರಿನ ಜನ ಎಲ್ಲ ಮರೆತು ಅತ್ಯಂತ ಶ್ರದ್ಧಾ ಭಕ್ತಿಗಳಿಂದ ಪೂಜಿಸಿದರು. ಆದರೆ ಪಂಗುಳನು ತನ್ನ ಹಗೆಯನ್ನು ತೀರಿಸಿಕೊಳ್ಳಲು ಇದೇ ಸರಿಯಾದ ಸಮಯವೆಂದು ಭಾವಿಸಿ ದ್ವೇಷ ಸಾಧನೆಗಾಗಿ ಸಕಲ ಸಿದ್ಧತೆಗಳನ್ನು ಮಾಡಿಕೊಂಡನು. ನಂತರ ಗಜಕುಮಾರನನ್ನು ಭಯಂಕರವಾಗಿ ಶಿಕ್ಷಿಸುವ ರೀತಿ ಹೀಗಿದೆ. "ಮಹಾಮುನಿಯಂ ಮಲರ್ಚಿ ಪಟ್ಟಿರಿಸಿಯುಗಃಸ್ಥಲಮಂ ನಾಭಿವರೆಗಂ ವಿದಾರಿಸಿ ಪಂದೊವಲ್ ಪೊರೆತಾಪಿನೆಗಂ ಸಮನ್ತವಯವ ಪ್ರದೇಶಂಗಳೊಳ್ ಕಾಯ್ದ ಕರ್ಬೊನ್ನ ಕೀಲ್ಗಳಂ ನೆಲನಂ ತಾಪಿನ ಮುರ್ಚಿಪೋಗಿಜೆದೊಡೆ". ಹೀಗೆ ಪಂಗುಳನು ತಪೋನಿರತನಾದ ಗಜಕುಮಾರ ಭಟಾರರನ್ನು ಭಯಾನಕವಾಗಿ ಕೊಲ್ಲುವನು.

ಹೀಗೆ ತಪೋನಿರತರಾದ ವ್ಯಕ್ತಿಗಳನ್ನು ಕೊಲ್ಲುವದು ಅವರ ಮೇಲೆ ಹಗೆತನ ಸಾಧಿಸುವದು ಧರ್ಮಸಮ್ಮತವಲ್ಲ ನಿಜ. ಆದರೆ ಕಥೆಯಲ್ಲಿ ಎಲ್ಲೂ ನಮಗೆ ಗಜಕುಮಾರನ ಬಗ್ಗೆ ಅನುಕಂಪವಾಗಲಿ ಪಂಗುಳನ ಕಾರ್ಯ ಅಪರಾಧವಾಗಲಿ ಎನಿಸುವದಿಲ್ಲ. ಪಂಗುಳನಂತಹ ಸಾಮಾನ್ಯನು ಸಹ ತನಗೆ ಅನ್ಯಾಯವಾದಾಗ ಎಷ್ಟು ಕ್ರೂರಿಯಾಗಬಲ್ಲ ಎಂಬುದನ್ನು ಕಥೆ ನಿದರ್ಶಿಸುತ್ತದೆ.

ಆಹಾರ ಪದ್ಧತಿ:

ಸುಕುಮಾರಸ್ವಾಮಿಯ ಕಥೆಯಲ್ಲಿ ಬರುವ ಸುಮಿತ್ರಸೆಟ್ಟಿ ಸತ್ತ ಮಗನನ್ನು ಕಾಯಲು ಸ್ಮಶಾನದಲ್ಲಿ ನಾಲ್ಕು ಜನ ಭಟರನ್ನು ನೇಮಿಸುತ್ತಾನೆ. ಅವರು ಆ ಸ್ಮಶಾನದಲ್ಲೇ ಅವತ್ತಿನ ತಮ್ಮ ಆಹಾರವನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಇದ್ದ ನಾಲ್ವರಲ್ಲಿ ಒಬ್ಬನು ಸತ್ತ ಹುಡುಗನನ್ನು ಕಾಯುತ್ತ ಕುಳಿತುಕೊಳ್ಳುತ್ತಾನೆ. ಒಬ್ಬ ಕುರಿಯನ್ನು ಕದ್ದು ತರುತ್ತಾನೆ. ಇನ್ನೊಬ್ಬ ಸೌದೆಯನ್ನು ತರುತ್ತಾನೆ. ಮತ್ತೊಬ್ಬ ಕಿಚ್ಚನ್ನು ತರುತ್ತಾನೆ. ನಂತರ ನಾಲ್ವರೂ ಸೇರಿ ಕುರಿಯನ್ನು ಕೊಂದು ಸುಟ್ಟು ತಿನ್ನುತ್ತಾರೆ. ಹೀಗೆ ಭಟರು ಎಲ್ಲೆಂದರಲ್ಲಿ ತಮ್ಮ ಆಹಾರವನ್ನು ತಾವೇ ಬೇಯಿಸಿಕೊಂಡು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು.

ವಡ್ಡಾರಾಧನೆಕಾರ ಹೇಳುವ ಬಡವನ ನಿತ್ಯದ ಆಹಾರ ಪಾರಕಿನ ಕೂಟು (ಹಾರದಕ್ಕಿಯ ಅನ್ನ) ಅವರೆ, ಎಣ್ಣೆ ಆಡಿನಳೆಯುಮಂ (ಆಡಿನ ಹಾಲು) ಆಗಿತ್ತು. (ವಡ್ಡಾರಾಧನೆ ಪು-೬೮).

ಮೃಷ್ಟಾನ್ನ(ರಾಜಕೂಟು) ಸಾಮಾನ್ಯನ ದಿವ್ಯಾನ್ನ ಮೃಷ್ಟಾನ್ನವನ್ನು ವಡ್ಡಾರಾಧನೆಕಾರ ಹೆಸರಿಸುತ್ತಾನೆ. ಅದೆಂದರೆ ಪೆಸಱ ತೊವೆಯುಂ ಬೆಣ್ಣೆಗಾಸಿದಾಮೋದ ಸುಗಂಧ ಪರಿಮಳಂ ನಾರ್ಪ ತುಪ್ಪಮುಂ ಪಲವುಂ ತೆಱದ ಬಾಡುಗಳುಂ ತುಯ್ಯಲುಂ ಪೂರಿಗೆಯಿಡ್ಡಲಿಗೆ ಸೋದಿಗೆ ಲಾವಣಿಗೆ ಘೃತಪೋರಂ ಲಡ್ಡುಗೆ ಮಂಡಗೆ" ಮುಂತಾದ ಭಕ್ಷ್ಯಗಳನ್ನು ಹೆಸರಿಸುತ್ತಾನೆ. ಈ ತೆರನಾದ ಬಗೆಬಗೆಯ ಆಹಾರ ರಾಜನಿಗೆ ನಿತ್ಯದ ರಾಜಕೂಟು ಆದರೆ ಸಾಮಾನ್ಯನಿಗೆ ಇಂಥ ಭೋಜನ ಎಂದೋ ಒಂದು ಸಲ ಸಿಕ್ಕರೂ ಅಪ್ಯಾಯಮಾನವೇ.

ಪ್ರಕೃತಿ ವಿಕೋಪ:

ಎಲ್ಲ ಕಾಲ ದೇಶಗಳ ಗಡಿಯನ್ನು ಮೀರಿ ಮಹಾಪೂರ ಗಾಳಿ, ಮಳೆ, ಬೆಂಕಿ, ಭೂಕಂಪ, ಬರದಂತಹ ಪ್ರಕೃತಿ ವಿಕೋಪಗಳು ಮನುಷ್ಯನನ್ನು ನಲುಗಿಸುತ್ತಲೇ ಬಂದಿರುತ್ತವೆ. ವಡ್ಡಾರಾಧನೆಕಾರನು ತಾನು ಕಂಡ ಕೇಳಿದ ಪ್ರಕೃತಿ ವಿಕೋಪಗಳ ವಿವರಗಳನ್ನು ತನ್ನ ಕಥೆಗಳಲ್ಲಿ ಅಲ್ಲಲ್ಲಿ ತರುತ್ತಾನೆ.

ಅಣ್ಣಿಕಾಪುತ್ರನ ಕಥೆಯಲ್ಲಿ "ಒಂದುತ್ಪಾತ ವಾತದಿಂದಂ ಗಂಗಾಮಹಾನದಿಯ ನಡುವೆ ಮಡುವಿನೊಳ್ ಭಯಂಕರವಾಗುತ್ತಿರ್ದ ತೆರೆಯನೊಡೆಯದಜಿಳೊಳ್ ಮುಬುಗಿದೊಡಾ"(ವಡ್ಡಾರಾಧನೆ ಪು–೭೨) ಎಂದು ಭೀಕರ ಮಹಾಪೂರದಲ್ಲಿ ನಾವೆ ಮುಳುಗುವದನ್ನು ಹೇಳುತ್ತಾನೆ.

ಬರ:

ಮಗು ಹೇಳಿದ ಜ್ಯೋತಿಷ್ಯದ ಪ್ರಕಾರ ೧೨ ವರ್ಷ ಕಾಲ ದೋಷದಿಂದ ಪ್ರಜೆಗಳಿಗೆ ಪೀಡೆಯುಂಟಾಗುತ್ತದೆ ಎಂಬುದನ್ನು ಭದ್ರಬಾಹು ಭಟಾರರು ತಮ್ಮ ಜ್ಞಾನದಿಂದ ತಿಳಿದುಕೊಳ್ಳುತ್ತಾರೆ. ಇದು ತಿಳಿದ ತಕ್ಷಣ ಭಿಕ್ಷೆಗೆ ಹೋದ ಭಟ್ಟಾರರು ಊಟ ಸ್ವೀಕರಿಸದೇ ಹಾಗೇ ಬಸದಿಗೆ ಮರಳುತ್ತಾರೆ. ನಂತರ ಋಷಿಗಳೆಲ್ಲರನ್ನೂ ಬಸದಿಗೆ ಕರೆಸಿಕೊಂಡು 'ಈ ನಾಡಿನಲ್ಲಿ ೧೨ ವರ್ಷಗಳ ಕಾಲ ಅನಾವೃಷ್ಟಿಯಾಗಿ ದುರ್ಭಿಕ್ಷೆಯಾಗುತ್ತದೆ. ಈ ನಾಡಿನಲ್ಲಿದ್ದ ಋಷಿಗಳಿಗೆಲ್ಲ ಬೇಗ ಬರಹೇಳಿ ಕಳಿಸಿ, ಎಲ್ಲರೂ ದಕ್ಷಿಣಾಪಥಕ್ಕೆ ಹೋಗೋಣ' ಎನ್ನುತ್ತಾರೆ.

ಋಷಿಗಳೂ ಸಹ ಸಾಮಾನ್ಯರೇ. ಸಾಮಾನ್ಯರು ಬರಗಾಲದಲ್ಲಿ ಹೊಟ್ಟೆಪಾಡಿಗಾಗಿ ಗುಳೆ ಹೋದಂತೆ ಋಷಿಗಳೂ ಸಹ ಕ್ಷಾಮಕಾಲದಲ್ಲಿ ದುರ್ಭಿಕ್ಷ ಸ್ಥಿತಿ ಉಂಟಾಗುತ್ತದೆಂದು ತಮ್ಮ ನಾಡನ್ನೇ ಬಿಡುತ್ತಾರೆ. ಇಂಥ ಕಾರಣಗಳಿಗಾಗೇ ಋಷಿಗಳನ್ನು ಸಾಮಾನ್ಯರು ಎಂದಿರುವದು.

ಹಾಗೆ ನೋಡಿದರೆ ಋಷಿಗಳಾದವರು ಬರಗಾಲದಂಥ ಪರಿಸ್ಥಿತಿಗಳಲ್ಲಿ ಜನರೊಡನೆ ಅವರ ಕಷ್ಟದಲ್ಲಿ ಭಾಗಿಯಾಗಿ ಜವಾಬ್ದಾರಿಯುತ ಸ್ಥಾನದಲ್ಲಿ ನಿಂತು ಜನರನ್ನು ಸಮಾಧಾನಿಸುತ್ತಿರಬೇಕು. ಆದರೆ ಜನಸಾಮಾನ್ಯರಂತೆ ಋಷಿಗಳೂ ಹೊಟ್ಟೆಪಾಡಿಗಾಗಿ ದೇಶಾಂತರ ಹೋಗುವದು ವಿಪರ್ಯಾಸವೇ ಸರಿ.

ಭದ್ರಬಾಹು ಭಟ್ಟಾರರ ಕಥೆ ಕ್ಷಾಮದಂತಹ ನೈಸರ್ಗಿಕ ವಿಕೋಪದ ಸಂದರ್ಭಗಳಲ್ಲಿ ಸಾಮಾನ್ಯರ ಪರಿಸ್ಥಿತಿ ಎಷ್ಟು ದಾರುಣತೆಯನ್ನು ಸೃಷ್ಟಿಸುತ್ತದೆ ಎನ್ನುವದನ್ನು ವಡ್ಡಾರಾಧನೆಕಾರ ಅತ್ಯಂತ ಹೃದಯಸ್ಪರ್ಶಿಯಾಗಿ ಚಿತ್ರಿಸುತ್ತಾನೆ.

ಸಿಂಧೂ ದೇಶದಲ್ಲಿ ಭಯಂಕರವಾದ ಕ್ಷಾಮ ತಲೆದೋರುತ್ತದೆ. ಅಂತಹ ಭೀಕರ ಬರಗಾಲ ಸನ್ನಿವೇಶವನ್ನೂ ವಡ್ಡಾರಾಧನೆಕಾರ 'ಮಾನಸರ್ ಮಾನಸರಂ ತಿಂಬಂತುಟಪ್ಪ ಮಹಾಘೋರಂ' (ವಡ್ಡಾರಾಧನೆ ಪು–೮೩) ಎಂದು ಹೇಳುತ್ತಾನೆ. ಬೇರೆಯವರು ಮೇಲೆ ಬಿದ್ದು ತಮ್ಮ ಅನ್ನವನ್ನು ಕಿತ್ತು ಕೊಳ್ಳುವರೆಂಬ ಭಯದಿಂದ ಜನರೆಲ್ಲ ಹಗಲು ಅಡಿಗೆ, ಊಟಮಾಡಲು ಹೆದರುತ್ತಿದ್ದರು ಎಂದು ಹೇಳುವಲ್ಲಿ ಬರಗಾಲದ ಭೀಕರತೆ ಕಣ್ಮುಂದೆ ಕಟ್ಟುತ್ತದೆ.

ವಸತಿ ಚಿತ್ರಣಗಳು:

ಋಷಿ ಸಮುದಾಯ ಯಾವಾಗಲೂ ದೇಶ ಸಂಚಾರದಲ್ಲೇ ಇರುತ್ತಿತ್ತು. ಅವರು ಗ್ರಾಮ. ನಗರ. ಖೇಡ. ಖರ್ವಡ. ಮಡಂಬ. ಪತ್ತನ. ದ್ರೋಣಾಮುಖಗಳಲ್ಲಿ ಸಂಚರಿಸುತ್ತ ಇರುತ್ತಿದ್ದರು. ಹಾಗೆ ಸಂಚರಿಸುವಾಗ ಅವರು ಯಾವುದೇ ಪಟ್ಟಣವಾದರೂ ಆ ಪಟ್ಟಣದ ಊರ ಹೊರಗಿನ

ಉದ್ಯಾನವನದಲ್ಲೋ, ಬಸದಿಗಳಲ್ಲೋ ವಾಸ್ತವ್ಯ ಹೂಡುತ್ತಿದ್ದುದನ್ನು ವಡ್ಡಾರಾಧನೆಕಾರ ತನ್ನ ಕಥೆಗಳಲ್ಲಿ ಅಲ್ಲಲ್ಲಿ ಹೇಳುತ್ತಾನೆ. ಋಷಿಗಳು ಊರಿನ ಸಂಸಾರದ ಜಂಟಾಟ ಬೇಡವೆಂಬ ಕಾರಣಕ್ಕೆ ಊರಿಂದ ಹೊರಗೇ ವಾಸಿಸುತ್ತಿದ್ದರೆಂದು ಮೇಲ್ನೋಟಕ್ಕೆ ಅನ್ನಿಸುತ್ತದೆ.

ಗೊಲ್ಲಗೇರಿ:

ಧರ್ಮಘೋಷಭಟಾರರ ಕಥೆಯ ಪ್ರಕಾರ ಗೊಲ್ಲಗೇರಿಯ ಲಕ್ಷಣಗಳನ್ನು ಹೀಗೆ ಹೇಳಬಹುದು. ಗೊಲ್ಲರು ಅಲೆಮಾರಿಗಳಾಗಿದ್ದರು. ಅವರು ಯಾವಾಗಲೂ ನದಿ ದಂಡೆಯಲ್ಲಿಯೇ ಬಿಡಾರ ಹೂಡುತ್ತಿದ್ದರು. ಇಷ್ಟೇ ಅಲ್ಲದೆ ಗೊಲ್ಲರ ಕೇರಿಗಳಿಗೆ ಸನ್ಯಾಸಿಗಳು ಭಿಕ್ಷೆಗೆ ಹೋಗುತ್ತಿದ್ದರು. ಗೊಲ್ಲರಂತೆ ತುರುಪಟ್ಟಿಗಳೂ ಪ್ರತ್ಯೇಕವಾಗಿ ಇದ್ದವೆಂದು ತೋರುತ್ತವೆ. ಬಹುತೇಕವಾಗಿ ಇವರು ಆಕಳುಗಳನ್ನು ಸಾಕುವವರಾಗಿದ್ದು ಇವರ ಓಣಿಗಳು ಒಂದೊಂದು ಕಡೆ ಪ್ರತ್ಯೇಕವಾಗಿರುತ್ತಿದ್ದವೆಂದೆನಿಸುತ್ತದೆ.

ಸಾಮಾನ್ಯರ ಸ್ವರ್ಗ-ನರಕದ ಕಲ್ಪನೆ:

ವಡ್ಡಾರಾಧನೆಕಾರ ವಿದ್ಯುಚ್ಚೋರ ರಿಸಿಯ ಕಥೆಯಲ್ಲಿ ದಾನ, ಪೂಜೆ, ಶೀಲ, ಉಪವಾಸ ಎಂಬ ಚತುರ್ವಿಧ ಧರ್ಮಗಳಲ್ಲಿ ನಡೆಯುವವರು ತಪಸ್ಸು ಮಾಡುವವರು ಸ್ವರ್ಗ, ಮೋಕ್ಷ, ಸುಖಪಡೆಯುವರು ಎಂದು ಹೇಳುವರು. ಅಂತೆಯೇ ವ್ರತ, ಶೀಲ, ಚಾರಿತ್ರ ಗುಣಗಳಿಲ್ಲದವರು ಜೀವಗಳನ್ನು ಕೊಲ್ಲುವವರು, ಬೇಟೆಯಾಡುವವರು ರಾಗ, ದ್ವೇಷ, ಲೋಭ ಕಾರಣಕ್ಕಾಗಿ ಸುಳ್ಳಾಡುವವರು, ಜೀವಗಳಿಗೆ ದುಃಖ ಉಂಟುಮಾಡುವವರು, ಕೊಲೆ ಮಾಡಿಸುವವರು ಮುಂತಾದ ಪಂಚಮಹಾ ಪಾತಕಗಳನ್ನು ಮಾಡುವವರು ನರಕದಲ್ಲಿ ಹುಟ್ಟುತ್ತಾರೆ ಎಂದು ವಡ್ಡಾರಾಧನೆಕಾರ ಹೇಳುವನು. ಇದು ವಡ್ಡಾರಾಧನೆಕಾರನ ಕಲ್ಪನೆಯಷ್ಟೇ ಅಲ್ಲ ಸಾಮಾನ್ಯರ ಸ್ವರ್ಗ-ನರಕದ ತಿಳುವಳಿಕೆ ಇದು, ನಾವು ಮಾಡಿದ ಕರ್ಮಕ್ಕನುಸಾರವಾಗಿ ಸ್ವರ್ಗ-ನರಕ ಲಭಿಸುತ್ತದೆ ಎನ್ನುವದು ಸಾಮಾನ್ಯರ ಸಾಮಾನ್ಯ ತಿಳುವಳಿಕೆ.

ಅಂತಿಮ ಯಾತ್ರೆ:

ಸಾವು ಮನುಷ್ಯ ಬದುಕಿನ ಕೊನೆಯ ಘಟ್ಟ. ವ್ಯಕ್ತಿಯ ಕೊನೆಯ ಕ್ಷಣಗಳ ಅಂತಿಮಯಾತ್ರೆಯನ್ನು ಎಲ್ಲ ಧರ್ಮಗಳೂ ತಮ್ಮ ತಮ್ಮದೇ ರೀತಿಯಲ್ಲಿ ಸಿಂಗರಿಸುತ್ತವೆ. ಅದನ್ನೇ ವಡ್ಡಾರಾಧನೆಕಾರ ತನ್ನ ಕಥೆಯಲ್ಲಿ ಹೀಗೆ ಹೇಳುತ್ತಾನೆ. "ನಂದಿಮಿತ್ರ ಕಿತ್ತಯ್ಯಂಗಳ್ ಮುಡಿಪಿದರೆಂಬುದಂ ಕೇಳ್ದರಸನುಂ ಮಹಾದೇವಿಯುಂ ಮಂತ್ರಿಯುಂ ಪೆರ್ಗಡೆಯುಂ ಮೊದಲಾಗಿ ಪೊಳಲೊಳಗುಳ್ಳ ಜನಮೆಲ್ಲಮರ್ಚನೆಗಳಂ ಕೊಂಡು ಬಂದರಸಂ ತಾಂ ಪಕ್ಕದಿರ್ದು ಕ್ಷಪಣಕನನಯ್ವ ವಿಮಾನಮುಮಂ ಮತ್ತಂ ಶೋಭೆಗೆಂದು ಪಲವು ವಿಮಾನಗಳುಮನೊಳ್ಪಿದುವಾಗಿ ಮಾಡಿಸಿ ಪಲವುಂ ನೇತ್ರದ ಪಟಿವುಲ್ಲವಂಗಳ್ ಧ್ವಜಪತಾಕೆಗಳುಮನೆತ್ತಿ ಚಾತುರ್ವರ್ಣ ಶ್ರವಣ ಸಂಘ ಸಹಿತಂ ಪಟುಪಟಹ ತುಣವ ಭಂಭಾ ಮರ್ದಳೆ, ಝಲ್ಲರಿ, ಮುಕುಂದ ತಾಳಕಾಹಳ, ಶಂಖ, ವಂಶ, ವೀಣಾಸ್ವರಂಗಳೆಸೆಯೆ ಕವಿವರರುಂ ಪೆಂಡವಾಸದೊಳ್ಪೆಂಡಿರ್ಕಳುಂ ವಿಮಾನಂಗಳ ಮುಂದಾಡುತ್ತ ದಮ್ಮಮುಮಂ ಪೊನ್ನುಮಂ ಕೇಳಿ ಮಾಡಿಮುಂದೆ ಸೂಸುತ್ತಮೆಯುದಂ"(ವಡ್ಡಾರಾಧನೆ ಪು-೮೪) ಈ ರೀತಿಯಾಗಿ ತಪಸ್ವಿಯೊಬ್ಬ ವ್ರತ ಒಡಿದು ಮೃತನಾದಾಗ ಅವನ ಅಂತಿಮ ಯಾತ್ರೆಯನ್ನು ಅತ್ಯಂತ ಗೌರವಪೂರ್ವಕವಾಗಿ ಶ್ರದ್ಧಾಭಕ್ತಿಗಳಿಂದ ಕೊಂಡೊಯ್ದು ಅಂತಿಮ ಸಂಸ್ಕಾರ ನೆರವೇರಿಸಲಾಗುತ್ತಿತ್ತು.

ಮಂತ್ರವಾದಿ: ಪ್ರಾಚೀನ ಕಾಲದಿಂದ ಇವತ್ತಿನವರೆಗೂ ಭಾರತದಾದ್ಯಂತ ಮಂತ್ರವಾದಿಗಳನ್ನು ಕಾಣುತ್ತೇವೆ. ಸಾಮಾನ್ಯನು ಯಾವತ್ತಿನಿಂದಲೂ ದೈವ, ದೆವ್ವದ ಮೇಲಿರುವಷ್ಟೇ ನಂಬಿಕೆ ವಿಶ್ವಾಸವನ್ನು ಈ

ಮಂತ್ರವಾದಿಗಳ ಮೇಲೆ ಇಟ್ಟಿದ್ದಾನೆ. ತನಗೊದಗುವ ರೋಗ, ಕಷ್ಟ, ನಷ್ಟಗಳಿಗೆ ಮನುಷ್ಯ ಮೊದಲು ಮೊರೆ ಹೋಗುತ್ತಿದ್ದುದು ಮಂತ್ರವಾದಿಗಳನ್ನೇ. ಇವತ್ತಿನ ಈ ತಂತ್ರಜ್ಞಾನ ಯುಗದಲ್ಲೂ ಮಂತ್ರವಾದಿಗಳಿನ್ನೂ ಜೀವಂತವಿದ್ದಾರೆಂದರೆ ಸಾಮಾನ್ಯರ ಸಮಾಜದಲ್ಲಿ ಅವರಿಗಿರುವ ಮಹತ್ವದ ಅರಿವಾಗುತ್ತದೆ. ವಡ್ಡಾರಾಧನೆಯ ಸುಕುಮಾರಸ್ವಾಮಿಯ ಕತೆಯಲ್ಲಿ ಗರುಡನಾಭಿ ಎಂಬ ಮಂತ್ರವಾದಿ ಬರುತ್ತಾನೆ. ರಾಜನ ಮಗ ಹಾವು ಕಚ್ಚಿ ಸತ್ತದ್ದರಿಂದ ಅಂತಿಮ ಸಂಸ್ಕಾರಕ್ಕಾಗಿ ಸ್ಮಶಾನಕ್ಕೆ ಒಯ್ದಾಗ ಗರುಡನಾಭಿ ಎಂಬ ಮಂತ್ರವಾದಿ ಆ ಹುಡುಗನನ್ನು ಹೋಗಿ ನೋಡುತ್ತಾನೆ. ನೋಡಿ "ಈತನನಾಂ ನಾಳೆಯಭಿಮಂತ್ರಿಸಿ ಬಾಟಿಸುವೆನಂಜದಿರಿಮಿಲ್ಲಿಯೇ ಇರುಳೀದಾಷ್ಟಿಕಂಗೆ ಜಾವಮಿರಿ" (ವಡ್ಡಾರಾಧನೆ ಪು-೧೪) ಎಂದು ಹೇಳುತ್ತಾನೆ. ಮರುದಿನ ಬೆಳಗಾಗುತ್ತಿದ್ದಂತೆ ಮಂತ್ರವಾದಿ ಆ ಹುಡುಗನನ್ನು ಮಂತ್ರ ಹೇಳಿ ಬದುಕಿಸಿದನು. ವಡ್ಡಾರಾಧನೆಕಾರನ ಕಾಲದಲ್ಲಿ ಮಂತ್ರವಾದಿಗಳ ಮೇಲೆ ಸಾಮಾನ್ಯರಿಟ್ಟ ವಿಶ್ವಾಸ ಅಚಲವಾಗಿತ್ತು.

ಪಗರಣಿಗ:

ಇದೊಂದು ಜನಪದ ಕಲಾ ಪ್ರಕಾರ. ಇದು ಪ್ರಾಚೀನ ಕಾಲದಲ್ಲಿ ಭಾರತದ ಉದ್ದಕ್ಕೂ ಪ್ರಚಾರದಲ್ಲಿತ್ತು. ರಾಣಿ ವೀರಶ್ರೀ, ಅವಳ ಅಣ್ಣ ಕಾರ್ತಿಕಸ್ವಾಮಿ ಜೊತೆ ನಿಂತದ್ದು ಕಂಡು ಅನುಮಾನ ಪಟ್ಟು ರಾಜ ಕಾರ್ತಿಕ ಸ್ವಾಮಿಯನ್ನು ಆಯುಧದಿಂದ ಕೊಚ್ಚಿ ಕೊಲೆ ಮಾಡುತ್ತಾನೆ. ರಾಣಿ ಬಿಡದೆ ಅಳತೊಡಗಿದಳು. ತಾ ಮಾಡಿದ ದುಡುಕುತನಕ್ಕೆ ದುಃಖಪಟ್ಟ ರಾಜನು ರಾಣಿ ಅಳು ನಿಲ್ಲಿಸಿ ನಗುವಂತೆ ಮಾಡಿದರೆ ಉಡುಗೊರೆ ಕೊಡುವದಾಗಿ ಡಂಗುರ ಸಾರಿದನು. ಅದರಂತೆ ಅನೇಕ ಜನ ಅನೇಕ ಪಗರಣದ ರೂಪು ಧರಿಸಿ ರಾಣಿಯ ಎದುರು ಆಡಿ ಹಾಡಿ ಕುಣಿದರೂ ಅವಳು ಅಳು ನಿಲ್ಲಿಸಲಿಲ್ಲ. ಒಂದು ದಿನ ಒಬ್ಬ ಕರಿಯ ಕೌಪೀನ ಹಾಕಿಕೊಂಡು ಮೈಗೆಲ್ಲಾ ಮಸಿ ಬಳಿದುಕೊಂಡು ಬೋಳು ತಲೆಯೊಂದಿಗೆ ಬಾಯಲ್ಲಿ ಕವಡೆಯನ್ನು ಹಲ್ಲಂತೆ ಜೋಡಿಸಿಕೊಂಡು, ಕುಂಚವನ್ನು ಗುಂಡಿಗೆಯನ್ನು ಹಿಡಿದುಕೊಂಡು ಬರುತ್ತಿರುವಾಗ ರಾಜ ರಾಣಿಗೆ ನಿಮ್ಮ ಅಣ್ಣಂದಿರಾದ ಭಟಾರರು ಬರುತ್ತಿದ್ದಾರೆ ನೋಡು ಎನ್ನಲು ರಾಣಿ ನೋಡಿ ಅಣ್ಣ ಕಾರ್ತಿಕ ಸ್ವಾಮಿ ಇರದೇ ಆ ವಿಚಿತ್ರ ರೂಪಿನ ಪಗರಣಿಗನನ್ನು ನೋಡಿ ನಕ್ಕು ದುಃಖ ಮರೆತಳು. ರಾಜ ಸಂತೋಷಗೊಂಡು ಆ ಪಗರಣಿಗನಿಗೆ ಬಹುಮಾನಕೊಟ್ಟು ಕಳಿಸಿದನು. ಅಲ್ಲಿಂದ ಮುಂದೆ ಬಾದುಬ್ಬೆ ಹಬ್ಬವೂ, ಪಗರಣದ ಆಟ ಪಾಠಗಳೂ ರೂಢಿಯಲ್ಲಿ ಬಂದವು.

ಹೀಗೆ ಯಾವತ್ತೂ ಕೆಲವೊಂದು ಸಂದರ್ಭಗಳು ಕೆಲವು ಹಬ್ಬಗಳ ಹುಟ್ಟಿಗೆ, ರೂಢಿ, ಸಂಪ್ರದಾಯ, ಆಚರಣೆಗಳಿಗೆ ಕಾರಣವಾಗುತ್ತವೆ.

ತಸ್ಕರ ಶಾಸ್ತ್ರ:

ಪ್ರಾಚೀನ ಭಾರತದಲ್ಲಿ ಕಳ್ಳತನವನ್ನು ಉಪದೇಶಿಸುವ ಒಂದು ಶಾಸ್ತ್ರವೇ ಇತ್ತು. ಅದೇ ತಸ್ಕರಶಾಸ್ತ್ರ. ಈ ಶಾಸ್ತ್ರ ಹಲವಾರು ವಿದ್ಯೆಗಳನ್ನು ಒಳಗೊಂಡಿದೆ. ಅವುಗಳಲ್ಲಿ ಕೆಲವೊಂದನ್ನು ವಡ್ಡಾರಾಧನೆಕಾರ ಉಲ್ಲೇಖಿಸುತ್ತಾನೆ. ಅದನ್ನು ಡಿ.ಎಲ್.ನರಸಿಂಹಾಚಾರ್ಯ ಟಿಪ್ಪಣಿಯಲ್ಲಿ ಹೀಗೆ ವಿವರಿಸುತ್ತಾರೆ.

ಜೃಂಭಿನಿ-ಪ್ರತ್ಯಕ್ಷ ಮತ್ತು ಮಾಯವಾಗುವ ವಿದ್ಯೆ.

ಸ್ತಂಭಿನಿ-ಗತಿ ನಿರೋಧವನ್ನು ಮಾಡುವ ವಿದ್ಯೆ

ಮೋಹಿನಿ-ಮೂರ್ಛೆಯುಂಟುಮಾಡುವ ವಿದ್ಯೆ.

ಸರ್ಷಪಿ - ಚರ್ಮರೋಗವನ್ನುಂಟು ಮಾಡಿಕೊಳ್ಳುವ ವಿದ್ಯೆ.

ತಾಳೋದ್ಘಾಟನಿ - ಬೀಗ ತೆಗೆಯಲು ಉಪಯೋಗಿಸುವ ಮಂತ್ರವಿದ್ಯೆ

ಮಂತ್ರ-ಮಂತ್ರ ಹಾಕುವದು, ಚೂರ್ಣ ಪುಡಿ ಎರಚುವುದು

ಯೋಗ-ವಂಚನೆ, ಮೋಸ ಮುಂತಾದವುಗಳು

ಘಟಿಕಾ-ಗುಳಿಗೆ

ಅಂಜನ-ಕಣ್ಣಿಗೆ ಹಚ್ಚುವ ಕಾಡಿಗೆ ಮುಂತಾದ ಲೇಪನಗಳು(ವಡ್ಡಾರಾಧನೆ ಪು-೨೫೦).

ಈ ಮುಂತಾದ ಅಂಶಗಳನ್ನು ತಸ್ಕರ ಶಾಸ್ತ್ರ ಒಳಗೊಂಡಿರುತ್ತದೆ. ಪ್ರಾಚೀನ ಭಾರತದಲ್ಲಿ ಇದನ್ನೊಂದು ಶಾಸ್ತ್ರವಾಗಿ ಕಲಿಯುವ ರೂಢಿ ಇತ್ತೆಂದು ತೋರುತ್ತದೆ. ಇವುಗಳಲ್ಲಿ ಅನೇಕ ಕಳ್ಳರು, ವಿಶೇಷ ಪರಿಣಿತಿ ಪಡೆದಿರುತ್ತಿದ್ದರು.

ತಳವಾರ ವಿದ್ಯುಚ್ಚೂರನನ್ನು ಕಳ್ಳ ಎಂದು ಸಾಬೀತು ಪಡಿಸಿದ ತಕ್ಷಣ ರಾಜ ಇವನೇ ಕಳ್ಳ ಇವನನ್ನು ದಂಡಿಸು ಎಂದು ತಳವಾರನಿಗೆ ಆಜ್ಞೆ ಮಾಡುತ್ತಾನೆ. ಅದನ್ನು ಕೇಳಿ ತಳವಾರ ಮಾಘಮಾಸದ ಕಡು ಶೀತದ ರಾತ್ರಿಯಲ್ಲಿ ಘೋರವಾದ ಮೂವತ್ತೆರಡು ದಂಡನೆಗಳಿಂದ ಕಳ್ಳನನ್ನು ದಂಡಿಸುತ್ತಾನೆ. ಅಪರಾಧಿಗಳು ತಾವು ಮಾಡಿದ ಅಪರಾಧವನ್ನು ತಾವಾಗೇ ಒಪ್ಪಿಕೊಳ್ಳುವಂತೆ ಮಾಡುವದೇ ಇಂತಹ ಕಠೋರ ಶಿಕ್ಷೆಯ ಹಿಂದಿನ ಉದ್ದೇಶ.

ತಳವಾರ ಕೊಟ್ಟ ದಂಡನೆಗಳನ್ನು ಸಹಿಸಿಕೊಂಡ ಕಳ್ಳ 'ತಾನು ಕಳ್ಳನಲ್ಲ. ತಳವಾರ ತನ್ನನ್ನು ಕುತಂತ್ರದಿಂದ ಕೊಲ್ಲುತ್ತಿದ್ದಾನೆ' ಎಂದು ಹುಯ್ಯಲಿಡುತ್ತಾನೆ. ಅದನ್ನು ನೋಡಿ ತಳವಾರನಿಗೆ ತನ್ನ ಮೇಲೆಯೇ ಸಂಶಯ ಉಂಟಾಗಿ ರಾಜನ ಬಳಿ ಹೋಗಿ, 'ಕಳ್ಳನಿಗೆ ಮೂವತ್ತೆರಡು ಬಗೆಯ ಘೋರ ಶಿಕ್ಷೆಕೊಟ್ಟು ನೋಡಿದೆ, ಇವನು ಕಳ್ಳನಲ್ಲ ತಮಗೆ ಇಷ್ಟಬಂದ ಹಾಗೆ ನನ್ನನ್ನು ದಂಡಿಸಬಹುದು' ಎನ್ನುವನು. ಅದಕ್ಕೆ ರಾಜ ತಳವಾರನನ್ನು ಶೂಲಕ್ಕೇರಿಸಬೇಕೆಂದು ಆಜ್ಞೆಮಾಡಿದನು. ತಳವಾರ ಯಾವ ತಪ್ಪನ್ನು ಮಾಡದಿದ್ದರೂ ಕಳ್ಳನನ್ನು ತಪ್ಪಾಗಿ ಗುರುತಿಸಿದ್ದಕ್ಕೆ ರಾಜ ತಳವಾರನಿಗೆ ಶಿಕ್ಷೆ ನೀಡುತ್ತಾನೆ.

ಬಡಿಗತನ:

ಬಡಗಿಗಳಿಗೆ ವಿಶ್ವಕರ್ಮರೆಂದೂ ಕರೆಯಲಾಗುತ್ತಿತ್ತು. ಗುರುದತ್ತ ಕುಮಾರನೆಂಬ ಅರಸನ ನಾಡಲ್ಲಿ ಅಪ್ರತಿಮ ಕೌಶಲವುಳ್ಳ ವಿಶ್ವಕರ್ಮ ಮತ್ತು ವಿಶ್ವಮತಿ ಎಂಬ ಬಡಗಿಗಳಿದ್ದರು. ಅವರಲ್ಲಿ ವಿಶ್ವಮತಿ ಆರು ತಿಂಗಳಲ್ಲಿ ಐನೂರು ರಥಗಳನ್ನು ತಯಾರಿಸಿ ರಾಜನಿಗೆ ಒಪ್ಪಿಸುವನು. ಆದರೆ ವಿಶ್ವಕರ್ಮ ಆರು ತಿಂಗಳಲ್ಲಿ ಒಂದೇ ರಥ, ಒಂದು ರಥದ ಗಾಲಿಯನ್ನು ಮಾತ್ರ ತಯಾರಿಸಿದನು. ಆದರೆ ಆ ಗಾಲಿ ನೆಲಮುಟ್ಟದೇ ಅಂತರಿಕ್ಷದಲ್ಲಿ ಹದಿನೈದು ದಿನ ತನಗೆ ತಾನೆ ತಿರುಗುತ್ತಿತ್ತು. ಅಂತಹ ಕೌಶಲ್ಯವುಳ್ಳ ಬಡಗಿಗಳಿದ್ದರು. ಗುರದತ್ತ ಕುಮಾರನ ಕಥೆಯಲ್ಲಿ ಇವರಿಗೋಸ್ಕರವೇ ಯುದ್ಧವಾಗುವದು ವಿಶೇಷ.

ದೇಸಿ ವೈದ್ಯ:

ದಂಡಕರಿಸಿ ಎಂಬ ಋಷಿಗಳಿಗೆ ವಾತ, ಪಿತ್ತ, ಶ್ಲೇಷ್ಮ, ಖಾಸಶ್ವಾಸ, ಜ್ವರ, ಅರುಚಿ, ವಾಂತಿ, ಅತಿಸಾರ, ಅಕ್ಷಕುಕ್ಷಿ, ವೇದನಾ ಸ್ಫೋಟಕ, ಪಿಟಕ ಶೂಲ, ಭಗಂದರ, ಕುಷ್ಠ, ಕ್ಷಯ, ಗಂಡ ಶಿರೋವೇದನೆ ಮುಂತಾದ ವ್ಯಾಧಿಗಳು ಉಂಟಾಗಿ ಅವರ ಗುರುತೇ ಸಿಗದಂತಾದರೂ ಋಷಿಗಳೊಂದಿಗೆ ಸಂಚರಿಸುತ್ತಾರೆ.

ಹಾಗೆ ಒಂದು ದಿನ ವಿಷ್ಣು ರಾಜನು ಆಳುತ್ತಿದ್ದ ದ್ವಾರಾವತಿಗೆ ಬರುತ್ತಾನೆ. ಆಗ ವಿಷ್ಣು ರಾಜನು ದಂಡಕರಿಸಿಯಾರೆಂದು ತಿಳಿದು ವ್ಯಾಧಿ ಗುಣಪಡಿಸಲು ಅವರನ್ನು ವರ್ಷ ಪೂರ್ತಿ ತನ್ನ ಅರಮನೆಯ ದೇವರ ಕೋಣೆಯಲ್ಲಿಟ್ಟು, ತನ್ನ ಅಂತಃಪುರಗಳಲ್ಲಿ ಭಿಕ್ಷೆ ಬೇಡಿ ಇರಬೇಕೆಂದು ಕೇಳಿಕೊಂಡು ಅರಮನೆಗೆ ಕರೆದೊಯ್ಯುತ್ತಾನೆ. ನಂತರ ತನ್ನ ಪ್ರಧಾನ ವೈದ್ಯ ಜಯನೆಂಬುವನನ್ನು ಕರೆಸಿ ದಂಡಕ ರಿಸಿಯ ರೋಗಗಳಿಗೆ ಔಷಧಿ ಕೊಟ್ಟು ರೋಗ ಪರಿಹರಿಸು ಎಂದು ಹೇಳುತ್ತಾನೆ. ಅದಕ್ಕೆ ಒಪ್ಪಿದ ವೈದ್ಯ ದಿವ್ಯೌಷಧಿಗಳಿಂದ ಕೂಡಿದ ಉಂಡೆಗಳನ್ನು ಹಿಟ್ಟಿನ ಮೂಲಕ ಸಾವಿರ ಅರಸಿಯರ ಮನೆಯ ಆಹಾರದ ಮೂಲಕ, ರಿಸಿಯ ದೇಹಕ್ಕೆ ಔಷಧಿ ಸೇರುವಂತೆ ಮಾಡುತ್ತಾನೆ. ಅಷ್ಟೇ ಅಲ್ಲದೆ ಊರಿನಲ್ಲಿ ಉಂಡೆ ಹಬ್ಬ ಮಾಡಿಸಿದನು. ಮಳೆಗಾಲದ ನಾಲ್ಕೂ ತಿಂಗಳು ಹೀಗೆ ಔಷಧಿಯನ್ನು ತಿನ್ನಿಸಿ ರಿಸಿಯ ರೋಗ ಹತೋಟಿಗೆ ತಂದನು.

ಹೀಗೆ ಎಂತಹ ಖಾಯಿಲೆಯಾದರೂ ಗುಣವಾಗುವಂತೆ ಔಷಧಿ ಕೊಡುವ ದೇಸಿ ವೈದ್ಯರು ಅಂದಿನ ಕಾಲದಲ್ಲಿದ್ದರು. ರಾಜರುಗಳು ಋಷಿಗಳಂತಹ ಸಾಮಾನ್ಯರನ್ನು ಪೂಜ್ಯ ದೃಷ್ಟಿಯಿಂದ ಕಂಡು ಅವರನ್ನು ರೋಗಮುಕ್ತರನ್ನಾಗಿ ಮಾಡುವ ಜವಾಬ್ದಾರಿಯನ್ನು ತಾವಾಗೇ ತೆಗೆದುಕೊಂಡು ಸಮರ್ಥವಾಗಿ ನಿಭಾಯಿಸುತ್ತಿದ್ದರು.

ಜನಪದ ಆಟಗಳು:

ಜೂಜು ಒಂದು ಜನಪದ ಆಟ. ವರಸೇನ ಜೂಜಿನಲ್ಲಿ ಸೋತಿದ್ದರಿಂದ ಮಾತಿನ ಪ್ರಕಾರ ಅಕ್ಷಧೂರ್ತ ಎನ್ನುವವನಿಗೆ ಸಾವಿರ ದೀನಾರವನ್ನು ಕೊಡಬೇಕಿತ್ತು. ಅರಸನಾಣೆ ಇಟ್ಟರೂ ಅದಕ್ಕೆ ಬೆಲೆಕೊಡದೇ ಹಣ ಕೊಡದೇ ಹಾಗೆ ಹೋಗುತ್ತಿದ್ದನು. ಹಣ ಕೇಳಲು ಅಡ್ಡಗಟ್ಟಿದರೆ ವರಸೇನನು ಅಕ್ಷಧೂರ್ತನನ್ನು ಕೊಂದುಬಿಡುತ್ತಾನೆ.

ಹೀಗೆ ಆಟವೊಂದು ಬರೀ ಆಟವಾಗಿ ಉಳಿಯದೇ ಅಪರಾಧಗಳನ್ನು ಹುಟ್ಟುಹಾಕುವ ಮಾರ್ಗವಾಗಿ ಜೂಜಾಟ ಹೆಸರುವಾಸಿಯಾಗಿದೆ. ಜೂಜಾಟಕ್ಕೆ ಬಲಿಯಾದ ಜೀವ, ಸಂಸಾರ, ಸಾಮ್ರಾಜ್ಯಗಳಿಗೆ ಲೆಕ್ಕವೇ ಇಲ್ಲ. ಜೂಜು ಮನುಷ್ಯನ ಬದುಕಿನಲ್ಲಿ ಅಫೀಮಿನಂತೆ ಅಂಟಿಕೊಂಡು ಬದುಕು, ಐಶ್ವರ್ಯ ಎಲ್ಲವನ್ನೂ ಆಹುತಿ ಪಡೆಯುತ್ತದೆ.

ಪಟ್ಟಣದ ಹೊರಗೆ ಮಕ್ಕಳು ಬಿಲ್ಲೆಯಾಟವನ್ನು ಆಡುತ್ತಿದ್ದರು ಎಂದು ವಡ್ಡಾರಾಧನೆಕಾರ ಭದ್ರಬಾಹು ಭಟ್ಟಾರರ ಕಥೆಯಲ್ಲಿ ಜನಪದ ಆಟವೊಂದನ್ನು ಹೇಳುತ್ತಾನೆ. ಬಟ್ಟಾಡು ಎಂದು ಹೇಳಿದ ಆಟವನ್ನು ಡಿ.ಎಲ್.ಎನ್‌ರವರು ಟಿಪ್ಪಣಿಯಲ್ಲಿ ಬಿಲ್ಲೆಯಾಟ ಎಂದು ಹೇಳುತ್ತಾರೆ. ಈ ಆಟದ ರೀತಿಯನ್ನು ವಡ್ಡಾರಾಧನೆಕಾರ "ಬಟ್ಟಿನ ಮೇಗೆ ಪದಿನಾಲ್ಕು ಬಟ್ಟನೊಂದೊಂದಱ ಮೇಗೋಳಿಯೊಳಿಟ್ಟಾಡುತ್ತಿರ್ಪನ್" (ವಡ್ಡಾರಾಧನೆ ಪು–೭೩)ಎಂದು ಹೇಳುತ್ತಾನೆ.

ಧರ್ಮಾಮೃತ

ನಯಸೇನನು ಧರ್ಮಾಮೃತದಲ್ಲಿ ನಿರೂಪಿಸಿರುವ ಜೀವನ ಸಂಸ್ಕೃತಿ ಅಪೂರ್ವವಾದುದು. ತನ್ನ ಸಮಕಾಲೀನ ಸಮಾಜದ ಆಗುಹೋಗುಗಳನ್ನು ನೀತಿ ನಡುವಳಿಕೆಗಳನ್ನು ಇನ್ನಿಲ್ಲದ ರೀತಿಯಲ್ಲಿ ನಯಸೇನನು ಹಿಡಿಸಿಟ್ಟಿದ್ದಾನೆ. ಕಥೆಯ ಮೂಲಕ ಧರ್ಮಪ್ರೀತಿಯನ್ನು ತುಂಬಿಕೊಡುವುದು ನಯಸೇನನ

ಕಾವ್ಯೋದ್ದೇಶವಾದರೂ ತನ್ನ ಸುತ್ತಲಿನ ಸಮಾಜದಲ್ಲಿ ವಾಸಿಸುವ ಜನರ ಸ್ವಭಾವ ಮತ್ತು ಅವರ ಜೀವನ ವಿಧಾನವನ್ನು ಬಿಡಿಸಿಟ್ಟಿರುವುದು ವಿಶಿಷ್ಟ ರೀತಿಯದು. ಧರ್ಮಾಮೃತದಲ್ಲಿ ಜನರ ಉದ್ಯೋಗ, ಊಟೋಪಚಾರ, ಅವರು ನಂಬಿರುವ ದೇವರು–ಮುಂತಾದವುಗಳು ಒಂದೇ ಕಡೆಯಲ್ಲಿ ದೊರೆಯುವುದಿಲ್ಲ. ಧರ್ಮಾಮೃತದ ತುಂಬ ಕವಿಕೊಟ್ಟಿರುವ ಸಹಸ್ರಾರು ಉಪಮೆ, ರೂಪಕಗಳ ಮುಖಾಂತರ ಅಲ್ಲಿರುವ ಜನಜೀವನವನ್ನು ಸ್ಪಷ್ಟವಾಗಿಯೇ ಅರಿಯಬಹುದಾಗಿದೆ. ಸಂಸ್ಕೃತಿಯೊಂದರ ವಿವಿಧ ಆಯಾಮಗಳನ್ನು ಒಂದೊಂದು ವಾಕ್ಯದಲ್ಲಿ ಕಟ್ಟಿಕೊಡುತ್ತ ಆ ಸಂಸ್ಕೃತಿಯ ಸಮಗ್ರದರ್ಶನವನ್ನು ಮಾಡಿಕೊಡುವ ಕೃತಿ ಧರ್ಮಾಮೃತವಲ್ಲದೆ ಬೇರೊಂದು ದೊರೆಯುವುದು ದುರ್ಲಭ.

ಉದ್ಯೋಗ:

ಧರ್ಮಾಮೃತದಲ್ಲಿ ಹಲವು ಉದ್ಯೋಗ, ಆ ಉದ್ಯೋಗಗಳನ್ನು ಕೈಗೊಂಡಿರುವ ಜನರ ರೀತಿ ನೀತಿಗಳನ್ನು ನಯಸೇನನು ದಾಖಲುಗೊಳಿಸಿದ್ದಾನೆ. ಇಲ್ಲಿಯ ಹದಿನಾಲ್ಕೂ ಕಥೆಗಳ ಒಡಲಲ್ಲಿ ಸೇರಿಕೊಂಡಿರುವ ಇವುಗಳ ವಿಷಯವನ್ನು ಈಗ ಅರಿಯಬಹುದಾಗಿದೆ. ಜೀವನಾಧಾರವೆನಿಸಿರು ಒಕ್ಕಲುತನದಿಂದಲೇ ಇದನ್ನು ಆರಂಭಿಸಬಹುದು.

ಒಕ್ಕಲುತನ: ಒಕ್ಕಲುತನಕ್ಕೆ ಮೂಲಾಧಾರವೆಂದರೆ ಮಳೆ. ಮಳೆ ನೀರಿನಿಂದ ಮತ್ತು ಮಳೆಯಿಂದ ಸಂಗ್ರಹಗೊಂಡ ಕೆರೆನೀರಿನಿಂದ ಒಕ್ಕಲುತನ ನಡೆಯುತ್ತಿತ್ತು ಎಂಬ ವಿಷಯ ವಾರಿಷೇಣ ಕುಮಾರ ಕಥೆಯಲ್ಲಿ ಬರುತ್ತದೆ. ಕೇವಲ ಮಳೆಯಾದರೆ ಪ್ರಯೋಜನವಿಲ್ಲ, ಬಿತ್ತನೆಗೆ ಯೋಗ್ಯವಾಗುವ ರೀತಿಯಲ್ಲಿ ಹೊಲವನ್ನು ಹದಮಾಡಿ ಸಜ್ಜುಗೊಳಿಸಬೇಕು. ನೇಗಿಲಿನ ಸಹಾಯದಿಂದ ನೆಲವನ್ನು ಉತ್ತಿ, ಕುಂಟೆಯ ಸಹಾಯದಿಂದ ಹರಗಿ ಭೂಮಿಯನ್ನು ಬಿತ್ತನೆಗೆ ಯೋಗ್ಯವಾಗುವ ರೀತಿಯಲ್ಲಿ ಹದಮಾಡುತ್ತಿದ್ದರು ಮತ್ತು ಭೂಮಿ ಹೆಚ್ಚು ಶಕ್ತಿಶಾಲಿಯಾಗಲು ಗೊಬ್ಬರವನ್ನು ಹಾಕುತ್ತಿದ್ದ ವಿಷಯ ವಿಷ್ಣುಕುಮಾರ, ಗುರುದತ್ತ ಭಟಾರ, ಅನಂತಮತಿ ಕಥೆಗಳಲ್ಲಿ ದೊರೆಯುತ್ತದೆ. ಬೆಳೆಯನ್ನು ಕಳ್ಳಕಾಕರಿಂದ, ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಹೊಲಗಳ ಬದುವಿನಲ್ಲಿ ಕಳ್ಳಿ ಹಚ್ಚುತ್ತಿದ್ದರು ಎಂಬುದು ಮೊದಲ ಕತೆಯಲ್ಲಿ ಬಂದಿದೆ. ಕಬ್ಬನ್ನು ಗಾಣದಲ್ಲಿ ನುರಿಸಿ ಬೆಲ್ಲ, ಸಕ್ಕರೆಯನ್ನು ತಯಾರಿಸುವ ಕ್ರಮ ಅಂದು ರೂಢಿಯಲ್ಲಿತ್ತು (ಜಿನೇಂದ್ರಭಕ್ತ, ಪ್ರಮಾಥಿಕುಮಾರರ ಕಥೆಗಳು). ನಿಷ್ಠೆಯಿಂದ ವ್ಯವಸಾಯ ಮಾಡಿದರೆ ಭೂಮಿ ಕೈಬಿಡುವುದಿಲ್ಲ. ಹಾಗೆ ಒಕ್ಕಲುತನ ಮಾಡಿ ಶ್ರೀಮಂತರಾದವರ ಉಲ್ಲೇಖ ಮತ್ತು ಹೀಗೆ ಹೆಸರು ಗಳಿಸಿದ ಶ್ರೀಮಂತರಿಗೆ ಅರಸರ ಪರಿಚಯವಿದ್ದ ಸಂಗತಿ ಅನಂತಮತಿ ಹಾಗೂ ವಿಷ್ಣು ಕುಮಾರರ ಕಥೆಗಳಲ್ಲಿ ಕಾಣಿಸಿಕೊಂಡಿದೆ.

ವ್ಯವಸಾಯ ಮಾಡುತ್ತಿದ್ದ ಕೃಷಿಕರಿಗೆ ಕಂಟಕಗಳು ಎದುರಾಗುತ್ತಿದ್ದುದನ್ನೂ ನಯಸೇನೆ ಬೇರೆ ಬೇರೆ ಕತೆಗಳಲ್ಲಿ ಹೇಳಿದ್ದಾರೆ. ಈ ಕಷ್ಟಗಳಿಗೆ ಪ್ರಕೃತಿ ವಿಕೋಪ, ಮೃಗಗಳ ಹಾವಳಿ ಏನೆಲ್ಲ ಕಾರಣವಾಗಿವೆ. ಹುಲಿಗಳು ದನಗಳ ಗುಂಪನ್ನು ಹೊಕ್ಕು ದಾಳಿ ಮಾಡುತ್ತಿದ್ದವು. ಗಾಣ ಮಾಡಿ ಸಂಗ್ರಹಿಸಿಟ್ಟ ಬೆಲ್ಲದ ಹೇರಿನಲ್ಲಿ ಇಲಿಗಳು ಓಡಾಡುತ್ತಿದ್ದವು. ಕೆಲವು ತುಡುಗುದನಗಳು, ಹಂದಿಗಳು, ಎಮ್ಮೆಗಳು, ಬಂದು ಬೆಳೆಯನ್ನು ನಾಶಮಾಡುತ್ತಿದ್ದವು. ಇದೆಲ್ಲ ಪ್ರಾಣಿಗಳ ಕಾಟವಾದರೆ ಅತಿವೃಷ್ಟಿ ಅನಾವೃಷ್ಟಿಗಳೂ ಜನರ ಬದುಕನ್ನು ತೊಂದರೆಗೆ ಸಿಲುಕಿಸುತ್ತಿದ್ದವು. ಅನೇಕಬಾರಿ ಮಳೆಯಾಗದೆ ಜನ ಆಕಾಶವನ್ನು ನೋಡುತ್ತ ಕುಳಿತುಕೊಳ್ಳುವ ಪ್ರಸಂಗ ಬರುತ್ತಿತ್ತು. ಆಗೆಲ್ಲ ಕೆರೆಗಳು ಬತ್ತಿಹೋಗಿ ಕುಡಿಯುವ ನೀರೂ ಸಿಗದಂತಹ ಪರಿಸ್ಥಿತಿ ನಿರ್ಮಾಣಗೊಳ್ಳುತ್ತಿತ್ತು. ಇನ್ನು ಕೆಲವು ಸಲ ಮಳೆ ಅತಿಯಾಗಿ ಸಂಗ್ರಹಿಸಿದ ಜೋಳದ ರಾಶಿಯನ್ನೂ ಒಟ್ಟಿದ ಬಣಮೆಗಳನ್ನೂ ಮಹಾಪೂರ ಕೊಚ್ಚಿಕೊಂಡು ಹೋಗುತ್ತಿತ್ತು.

ಸಾಮಾನ್ಯ ಒಕ್ಕಲಿಗರಿಗೆ ಅಧಿಕಾರಿಗಳೆಂದರೆ ತುಂಬ ಹೆದರಿಕೆಯುಂಟಾಗುತ್ತಿತ್ತು. ನೆಲದೆರಿಗೆ ಕೊಡುವ ಪ್ರಸಂಗದಲ್ಲಿ ಅವರು ಹೆದರಿಕೆಯಿಂದ ಬಿಕ್ಕಳಿಸುತ್ತಿದ್ದರು. ಹಾಗೇ ತಮ್ಮ ಅಸಹಾಯಕತೆಯನ್ನು ಬಿನ್ನವಿಸಿಕೊಳ್ಳುತ್ತಿದ್ದರು. ಸಾಕ್ಷಿಯಿಲ್ಲದೆ ಸಾಲಕೊಟ್ಟ ರೈತರು ಆ ಸಾಲ ತಿರುಗಿ ಬಾರದೇ ಇದ್ದಾಗ ವ್ಯಾಕುಲಗೊಂಡು ನಿಟ್ಟುಸಿರುಬಿಡುತ್ತಿದ್ದ ಉದಾಹರಣೆ ಮೊದಲನೆಯ ಕತೆಯಲ್ಲಿದೆ.

ಇದನ್ನೆಲ್ಲ ನೋಡಿದರೆ ನಯಸೇನನಿಗೆ ರೈತರ ವಿಷಯದಲ್ಲಿ ಕರುಣೆ, ಸಹಾನಾಭೂತಿಗಳಿರುವುದು ಸ್ಪಷ್ಟವಾಗುತ್ತದೆ. ಕವಿಯೊಬ್ಬನಿಗೆ ದುಡಿದು ಉಣ್ಣುವ ಶ್ರಮಿಕರ ಬಗೆಗೆ ತೋರುವ ಸಹಾನುಭೂತಿ ಕೇವಲ ಸಮಾಜಕ್ಕೆ ಪ್ರತಿಕ್ರಿಯಿಸುವ ರೀತಿಯಲ್ಲ, ಅದರಾಚೆಗೆ ಅವನ ಸುಸಂಸ್ಕೃತ ಮನಸ್ಸನ್ನೂ ಅದು ಪಡಿಮೂಡಿಸುತ್ತದೆ.

ವ್ಯಾಪಾರ: ದರ್ಶನಕ್ಕೆ ಸಂಬಂಧಿಸಿದ ವಸುಭೂತಿ ಕಥೆಯಲ್ಲಿ ಬರುವ ದಯಾಮಿತ್ರ ಶೆಟ್ಟಿಯು ವ್ಯಾಪಾರಿಯಾಗಿರುವುದರಿಂದ ವಣಿಕ ಪರಿಸರಕ್ಕೆ ಸಂಬಂಧಿಸಿದ ಅನೇಕ ವಿಷಯಗಳು ಇಲ್ಲಿವೆ. ವ್ಯಾಪಾರಿಗಳಲ್ಲಿ ರಾಜಶ್ರೇಷ್ಠಿಗಳೂ ಇದ್ದರು; ಸಾಮಾನ್ಯ ವ್ಯಾಪಾರಸ್ಥರೂ ಇದ್ದರು. ಜಾಣತನವಿಲ್ಲದೆ ವ್ಯಾಪಾರ ಮಾಡುವುದು ಅಸಾಧ್ಯವೆಂದು ಜನ ನಂಬಿದ್ದರಿಂದ ವ್ಯಾಪಾರಿಗಳಿಗೆ ಸಮಾಜದಲ್ಲಿ ಗೌರವದ ಸ್ಥಾನವಿತ್ತು. ಪರದರು ವ್ಯಾಪಾರ ಮಾಡಿ ಹಣ ಗಳಿಸುತ್ತಿದ್ದರು; ಲಾಭಮಾಡಿಕೊಳ್ಳಲಾರದ ವ್ಯಾಪಾರಿಯು ನಿರುಪಯೋಗಿಯಾದವನು ಎಂದು ಜನ ನಂಬಿದ್ದರು. ತನ್ನಲ್ಲಿ ಹಣವಿದೆಯೆಂದು ವ್ಯಾಪಾರಿಯು ಸುಮ್ಮನೆ ಕುಳಿತುಕೊಳ್ಳಬಾರದು. ನಿರಂತರ ತನ್ನನ್ನು ವ್ಯಾಪಾರದಲ್ಲಿ ತೊಡಗಿಸಿಕೊಂಡು ಧನವನ್ನು ಗಳಿಸಬೇಕೆಂಬುದು ಅವರ ಇಚ್ಛೆಯಾಗಿತ್ತು. ವ್ಯಾಪಾರಸ್ಥರ ಕಾಯಕ ನಿಷ್ಠೆ ಎಂಥದೆಂದರೆ ಇಹಪರಗಳೆರಡಕ್ಕೂ ವ್ಯಾಪಾರವೇ ಸಾಧನವೆಂದು ವ್ಯಾಪಾರಿಗಳು ಭಾವಿಸಿದ್ದರು. ಹೀಗಾಗಿ ಜೈನ ವ್ಯಾಪಾರಸ್ಥರು ಋಷಿಗಳಿಗೆ ನಮಸ್ಕರಿಸಿ ಅವರಿಗೆ ಹಲವು ಬಗೆಯ ವಸ್ತುಗಳನ್ನು ದಾನ ಮಾಡುತ್ತಿದ್ದರು. ಪರದರ ಇಂತಹ ಧರ್ಮಭಾವನೆ ಎಷ್ಟು ಗಟ್ಟಿಯಾಗಿತ್ತು ಎಂದರೆ ತಾವು ದೂರದೇಶಗಳಿಗೆ ಬಹಳ ದಿನಗಳ ಕಾಲ ವ್ಯಾಪಾರಕ್ಕೆ ಹೋಗುವುದಾದರೆ ತಮ್ಮ ಮಕ್ಕಳು ಬಂಧು ಬಾಂಧವರು ಆ ಕೆಲಸವನ್ನು ಮಾಡಬೇಕೆಂದು ಅವರನ್ನು ನಿಯೋಜಿಸುತ್ತಿದ್ದರು. ವ್ಯಾಪಾರಿಗಳು ಪ್ರತಿನಿತ್ಯ ಧರ್ಮಶ್ರವಣ ಮಾಡುವ ರೂಢಿಯಿಟ್ಟುಕೊಂಡಿದ್ದರು. ವಸುಭೂತಿ ಕಥೆಯ ಮುಖಾಂತರ ನಯಸೇನ ಕೊಡುವ ಈ ವಿವರಣೆಗಳು ವ್ಯಾಪಾರಸ್ಥರ ವ್ಯಾಪಾರ ಶ್ರದ್ಧೆಯನ್ನೂ ಅವರ ಧರ್ಮಪರ ನಡತೆಯನ್ನೂ ಈ ಕಾರಣವಾಗಿಯೇ ಸಮಾಜದಲ್ಲಿ ಅವರಿಗಿದ್ದ ಗೌರವಾದರಗಳನ್ನೂ ಹೇಳುತ್ತವೆ. ಲಲಿತಾಂಗ(ಅಂಜನಚೋರ) ನ ಕಥೆಯಲ್ಲಿ ವ್ಯಾಪಾರಿಗಳು ವ್ಯಾಪಾರಕ್ಕೆ ಹೋದಾಗ ಕಳ್ಳರದಾಳಿಗೆ ಅವರು ತುತ್ತಾಗುತ್ತಿದ್ದ ವಿಷಯವಲ್ಲದೆ ಮತ್ತೆ ನಾನಾ ಬಗೆಯ ಎಡರುತೊಡರುಗಳನ್ನು ಅವರು ಎದುರಿಸುತ್ತಿದ್ದ ವಿಷಯವಿದೆ. ಅದೇ ಕಥೆಯಲ್ಲಿ ಸೋಮಾರಿಗಳಾದ ವ್ಯಾಪಾರಿಗಳು ಕೆಲವರು ಇರುತ್ತಿದ್ದುದನ್ನೂ ಅಂಥವರ ಅಂಗಡಿಯಲ್ಲಿ ಸರಕುಗಳೇ ಇರುತ್ತಿರಲಿಲ್ಲವೆಂದೂ ನಯಸೇನ ಹೇಳುತ್ತಾನೆ.

ಕಮ್ಮಾರಿಕೆ – ಬಡಿಗತನ: ಕಮ್ಮಾರಶಾಲೆಯಲ್ಲಿ ಉಪಯೋಗಿಸಲ್ಪಡುವ ತಿದಿ, ಇಕ್ಕಳು, ಸುತ್ತಿಗೆಗಳ ವಿಷಯ ಅನಂತಮತಿ ಹಾಗೂ ಒದ್ದಾಯನ ಕಥೆಗಳಲ್ಲಿ ದೊರೆಯುತ್ತದೆ. ತಿದಿಯ ಸಹಾಯದಿಂದ ಉಂಟಾದ ಬೆಂಕಿಯಲ್ಲಿ ಕಬ್ಬಿಣವನ್ನು ಕಾಸಿ ಅದನ್ನು ಇಕ್ಕಳಿನಿಂದ ಹಿಡಿದು ಸುತ್ತಿಗೆಯಿಂದ ಬಡಿಯುತ್ತ ತಮಗೆ ಬೇಕಾದ ಆಕೃತಿಗೆ ಅದನ್ನು ಮಾರ್ಪಡಿಸುವ ಕ್ರಿಯೆ ಕಂಬಾರಶಾಲೆಯ ಚಿತ್ರವನ್ನು ಕೊಡುತ್ತದೆ. ಇದೇ ಅನಂತಮತಿಯ ಕಥೆಯಲ್ಲಿ 'ಬಡಗಿಯಂತೆ ಕೆತ್ತುವರ್' ಎಂಬ ಮಾತು ಬಂದಿದೆ. ಬಡಿಗರು ಕಟ್ಟಿಗೆಯನ್ನು ಕೆತ್ತಲು ಉಪಯೋಗಿಸುವ ಸಾಧನೆಗಳೆಂದರೆ ಉಳಿ ಮತ್ತು ಬಾಚಿ. ಅವನ್ನೇ ಈ ಕ್ರಿಯೆಯಲ್ಲಿ

ಬಳಸಿಕೊಳ್ಳಲಾಗಿದೆ. ಕಟ್ಟಿಗೆಗಳನ್ನು ಕೊರೆಯಲು ಗರಗಸವನ್ನು ಉಪಯೋಗಿಸುತ್ತಿದ್ದುದನ್ನೂ ಕವಿಯು ಸೂಚಿಸಿದ್ದಾನೆ. ವ್ಯವಸಾಯಕ್ಕೆ ಉಪಯೋಗವಾಗುವ ಬಗೆ ಬಗೆಯ ಉಪಕರಣಗಳನ್ನು ಇವರು ಮಾಡಿಕೊಡುವುದರಿಂದ ಒಕ್ಕಲಿಗರು ಇವರನ್ನು ಆಶ್ರಯಿಸಬೇಕಾಗುತ್ತದೆ; ಆದರಿಸಬೇಕಾಗುತ್ತದೆ. ಅನ್ನ ಕೊಡುವ ಒಕ್ಕಲಿಗನಿಗೆ ಇವರು ನಿರಂತರ ಸಹಾಯಕರಾಗಿ ನಿಲ್ಲುವುದರಿಂದ ಸಹಜವಾಗಿ ಕೃಷಿ ಸಂಸ್ಕೃತಿಯಲ್ಲಿ ಇವರ ಪಾತ್ರ ಹಿರಿದಾಗಿಯೇ ಇರುವುದನ್ನು ಕವಿ ಗುರುತಿಸಿದ್ದಾನೆ.

ಅಂಬಿಗರು: ಹೊಳೆಗಳಿಗೆ ಸೇತುವೆಗಳು ಇರಲಾರದ ಅಂದಿನ ಕಾಲದಲ್ಲಿ ನಾವೆ ನಡೆಸುವ ಅಂಬಿಗರ ಸಂಖ್ಯೆ ವಿಪುಲವಾಗಿಯೇ ಇತ್ತು. ನಾವೆ, ನಾವೆ ನಡೆಸುವ ಕೋಲು, ನಾವೆ ನಡೆಸುವವನ ಗುಣ – ಎಲ್ಲವನ್ನೂ ಧರ್ಮಾಮೃತದ ಕತೆಗಳಲ್ಲಿ ಹೇಳಲಾಗಿದೆ. ವಸುಭೂತಿಯ ಕತೆಯಲ್ಲಿ ದೋಣಿಯ ಮೂರು ಪ್ರಕಾರಗಳನ್ನು ಹೇಳಲಾಗಿದೆ. ಅವೆಂದರೆ ಭೈತ್ರ, ಪರುಗೋಲು ಮತ್ತು ದೋಣಿ. ಕೀಲುಗಳಿರುತ್ತಿದ್ದ ಭೈತ್ರಗಳನ್ನು ಸಮುದ್ರ ಸಂಚಾರಕ್ಕಾಗಿಯೂ ಉಳಿದೆರಡನ್ನು ನದಿ ಸಂಚಾರಗಳಿಗೂ ಬಳಸಲಾಗುತ್ತಿತ್ತಂತೆ. ವಾರಿಷೇಣ ಕುಮಾರನ ಕಥೆಯಲ್ಲಿ ಹರಿಗೋಲುಗಳನ್ನು ನಡೆಸಲು ಹನ್ನೆರಡು ಕೋಲುಗಳೂ ದೋಣಿಗಳನ್ನು ನಡೆಯಿಸಲು ಒಂದು ಕೋಲೂ ಸಾಕಾಗುತ್ತಿತ್ತಂತೆ. ಇದರಿಂದ ಹರಿಗೋಲುಗಳಿಗಿಂತ ದೋಣಿಗಳು ಚಿಕ್ಕವಾಗಿರಬೇಕು ಎಂಬ ಮಾತು ಸ್ಪಷ್ಟವಾಗುತ್ತದೆ. ರೇವತಿದೇವಿ ಕತೆಯಲ್ಲಿ ಉಲ್ಲೇಖಗೊಂಡಿರುವಂತೆ ಹರಿಗೋಲನ್ನು ಏರಿದವನು ಸಹನೆಯುಳ್ಳವನಾಗಿರಬೇಕು ಎಂಬ ಮಾತು ಬಹಳ ಮುಖ್ಯ. ಇಲ್ಲಿ 'ಏರಿದವನು' ಎಂಬುದಕ್ಕೆ ನಾವಿಕ ಅಥವಾ ಪ್ರಯಾಣಿಕ ಎರಡೂ ಅರ್ಥವನ್ನು ಸಾಧಿಸಬಹುದು. ಏಕೆಂದರೆ ನಾವೆಗೆ ಸಂಚಾರದ ಸಮಯದಲ್ಲಿ ಬಿರುಗಾಳಿ, ಅತಿಮಳೆ, ಹಿಂಸ್ರ ಜಲಚರಗಳ ದಾಳಿ – ಯಾವ ಆಪತ್ತು ಎದುರಾಗುವುದೋ ಹೇಳುವುದು ಕಷ್ಟ. ಆದ್ದರಿಂದ ಇಂಥ ಸಮಯದಲ್ಲಿ ಯಾರು ಮನಸ್ಸಿನ ಸ್ಥಿಮಿತ ಕಳೆದುಕೊಂಡರೂ ಸಂಕಷ್ಟ ಉಂಟಾಗಬಹುದು. ಇಂಥ ಸೂಕ್ಷ್ಮ ವಿಷಯಗಳನ್ನೂ ನಯಸೇನ ಬಲ್ಲವನಾಗಿ ತನ್ನ ಕಾವ್ಯದಲ್ಲಿ ಒಂದೊಂದೇ ವಾಕ್ಯದಲ್ಲಿ ಹೇಳಿ ಕಥೆಗೆ ಮರಳುತ್ತಾನೆ.

ಗಾಣಿಗರು: ಗಾಣಿಗರು ತೆಲ್ಲಿಗರೆಂದು ಕರೆಯಲ್ಪಡುತ್ತಿದ್ದರು. ಊರಿನಲ್ಲಿ ಗಾಣಿಗರು ವಾಸಿಸುವ ಓಣಿ ಪ್ರತ್ಯೇಕವಾಗಿರುತ್ತಿತ್ತು (ಲಲಿತಾಂಗನ ಕತೆ). ಗಾಣಕ್ಕೆ ಹೂಡಲು ಎತ್ತುಗಳನ್ನು ಬಳಸುತ್ತಿದ್ದರು (ರೇವತಿದೇವಿ ಕತೆ). ಗಾಣ ಹೊಡೆಯುವವರು ಬಗೆ ಬಗೆಯ ಎಣ್ಣೆ ಕಾಳುಗಳನ್ನು ಗಾಣಕ್ಕೆ ಹಾಕಿ ಎಣ್ಣೆ ತೆಗೆಯುತ್ತಿದ್ದ ವಿಷಯ ಅನಂತಮತಿ ಕತೆಯಲ್ಲಿ ಬರುತ್ತದೆ. ಹಿಂಡಿಯನ್ನು ನಂಬಿ ಎಣ್ಣೆ ಚೆಲ್ಲುವವನನ್ನು ಹೆಡ್ಡನೆಂದು ಜನ ಕರೆಯುತ್ತಿದ್ದರೆಂದು ಕವಿ ವಜ್ರಕುಮಾರ ಕತೆಯಲ್ಲಿ ಹೇಳುತ್ತಾನೆ. ಗಸಿಬೆರೆಸಿದ ಎಣ್ಣೆ ಒಳ್ಳೆಯದಲ್ಲವೆಂದು ಜನ ಅಂಥದನ್ನು ಬಳಸುತ್ತಿರಲಿಲ್ಲವೆಂಬ ಮಾಹಿತಿ ಕೊನೆಯದಾದ ಗುರುದತ್ತ ಭಟಾರರ ಕತೆಯಲ್ಲಿ ದೊರೆಯುತ್ತದೆ. ಎಣ್ಣೆಯನ್ನು ಕೊಡಗಳಲ್ಲಿ ತುಂಬಿಡುತ್ತಿದ್ದರಂತೆ (ಲಲಿತಾಂಗನ ಕತೆ).

ಇದಲ್ಲದೆ ಇನ್ನೂ ಹಲವು ವೃತ್ತಿಗಳನ್ನೂ ವೃತ್ತಿಕಾರರನ್ನೂ ನಯಸೇನ ಹೇಳಿದ್ದಾನೆ.

ಕುಂಬಾರರು ಜೇಡಿಮಣ್ಣು ತಂದು ಹದಮಾಡಿ ಮಡಿಕೆ ಮಾಡುತ್ತಿದ್ದರು.	ಅನಂತಮತಿ ಕತೆ
ಪೊನ್ನಾಭರಣ ಮಾಡುವ ಅಕ್ಕಸಾಲಿಗರಿದ್ದರು.	ಜಿನೇಂದ್ರದಾಸ ಕತೆ
ಲಲಿತಾಂಗನು ಮಾಲೆಗಾರರ ಅಂಗಡಿಸಾಲು ಹೊಕ್ಕು ಹೂಗಳನ್ನು ಸೂರೆಮಾಡಿದನು	ಲಲಿತಾಂಗ ಕತೆ
ಎಲೆಗಳನ್ನು ಮಾರಾಟ ಮಾಡುವ ತಂಬುಲಿಗ(ಎಲೆಗಾರ)ರಿದ್ದರು	ಲಲಿತಾಂಗ ಕತೆ

ದಾರಿಕಟ್ಟಿ ಬಡಿಯುವ ಬೇಡರಿದ್ದರು	ಜಿನೇಂದ್ರಭಕ್ತ ಕತೆ
ಆಕಳು ಕಾಯುವ ಗೋವಳಿಗರಿದ್ದರು.	ವಜ್ರಕುಮಾರ ಕತೆ
ಅಗಸರು ಬಟ್ಟೆ ತೊಳೆಯುತ್ತಿದ್ದರು	ಲಲಿತಾಂಗ ಕತೆ
ಟಕ್ಕೆಯ ಮಣಿ ಮಾರುವ ಮಣಿಗಾರರಿದ್ದರು	ಲಲಿತಾಂಗ ಕತೆ
ಸಿಪ್ಪಿಗರು ಬಟ್ಟೆಗಳನ್ನು ಹೊಲಿಯುತ್ತಿದ್ದರು	ಅನಂತಮತಿ ಕತೆ
ವಸ್ತ್ರಗಳನ್ನು ಮಾರುವವರು ದೂಸಿಗ(ಬಟ್ಟೆವ್ಯಾಪಾರಿ)ರೆನಿಸಿದ್ದರು	ಲಲಿತಾಂಗ ಕತೆ
ಕಾಜಿನ ಬಳೆ ಮಾಡಿ ಮಾರಾಟ ಮಾಡುವವರು ಬಳೆಗಾರರು	ಲಲಿತಾಂಗ ಕತೆ
ಮೇದರು ಬಿದಿರು ಸೀಳಿ ಬುಟ್ಟಿಗಳನ್ನು ಮಾಡುತ್ತಿದ್ದರು	ಅನಂತಮತಿ ಕತೆ
ಪೊರೆಕಾರರು ಕಟ್ಟಿಗೆ ಹೊರೆಕಟ್ಟಿ ವ್ಯಾಪಾರ ಮಾಡುತ್ತಿದ್ದರು	ಅನಂತಮತಿ ಕತೆ
ತಿಳುವಳಿಕೆಯುಳ್ಳ ಕಬ್ಬಿಲರಿದ್ದರು	ವಜ್ರಕುಮಾರ ಕತೆ
ಜನರ ಬಯಕೆ ತಿಳಿದು ಅಡುಗೆ ಮಾಡುವ ಬಾಣಿಸಿಗರಿದ್ದರು	ರೇವತಿದೇವಿಯ ಕತೆ
ಮೀನು ಹಿಡಿಯುವ ಮೀನುಗಾರರಿದ್ದರು	ಧನಕೀರ್ತಿ ಕತೆ
ಹುಲಿಬೇಟೆಗಾರರು ಹುಲಿ ಬೇಟೆಯಾಡುತ್ತಿದ್ದರು	ಪ್ರಮಾಥಿಕುಮಾರನ ಕತೆ

ವೇಶ್ಯಾವೃತ್ತಿ: ವೇಶ್ಯಾವೃತ್ತಿ ಎಷ್ಟೇ ಅಪಥ್ಯವೆಂದರೂ ಅದು ನಮ್ಮ ಸಂಸ್ಕೃತಿಯ ಒಂದು ಭಾಗವೆಂಬುದನ್ನು ನಯಸೇನ ಅರಿತಿದ್ದಾನೆ. ಹೀಗಾಗಿ ಸೂಳೆಯರ ಜೀವನ, ಸ್ವಭಾವಗಳನ್ನು ಕುರಿತಂತೆ ಧರ್ಮಾಮೃತದ ಅನೇಕ ಕತೆಗಳಲ್ಲಿ ಉಲ್ಲೇಖಗಳಿವೆ. ಸಂಗಡವೇ ಬೊಜಂಗ(ವಿಟಪುರುಷ)ರ ಪ್ರಸ್ತಾಪವೂ ಆನುಷಂಗಿಕವಾಗಿ ಬೆರೆತು ಕೊಂಡಿರುವುದು ಸಹಜವಾಗಿದೆ. 'ಸೂಳೆ ಗುಣವಿಲ್ಲದವಳು'(ಪು–೫೬, ಗದ್ಯ) ಎಂಬುದು ಅಂದಿನ ಸಮಾಜದ ಸಾರ್ವತ್ರಿಕ ತಿಳುವಳಿಕೆಯಾಗಿತ್ತು.

ದೊಡ್ಡ ದೊಡ್ಡ ಊರುಗಳಲ್ಲಿ ಸೂಳೆಯರು ವಾಸಿಸುತ್ತ ಜೀವನ ನಿರ್ವಹಣೆ ಮಾಡಿಕೊಳ್ಳುತ್ತಿದ್ದುದು ಸಾಮಾನ್ಯವಾಗಿದ್ದರೂ(ಲಲಿತಾಂಗ ಕತೆ) ಹಳ್ಳಿಗಳಲ್ಲೂ ಅವರು ವಾಸಿಸುತ್ತಿದ್ದುದಕ್ಕೆ ಉದಾಹರಣೆಗಳಿವೆ (ಗುರುದತ್ತ ಭಟಾರನ ಕತೆ). ಲಲಿತಾಂಗನು ಸೂಳೆಯ ಸಹವಾಸ ಮಾಡಿದ್ದರಿಂದ ವೇಶ್ಯೆಯ ಸ್ವಭಾವದ ಬಗೆಗೆ ಹಲವು ವಿಷಯಗಳು ಆ ಕತೆಯಲ್ಲಿ ಬರುತ್ತವೆ. ಕೆಲವು ಜನ ವೇಶ್ಯೆಯರು ಶ್ರೀಮಂತರೂ ಆಗಿದ್ದು ಬೊಜಂಗನಲ್ಲಿ ಹುಸಿಮುನಿಸು ತೋರಿಸಿ ಹಣವನ್ನು ದೋಚುತ್ತಿದ್ದರು. ಕೆಲವುಸಲ ಕೋಪಗೊಂಡವಳಂತೆ ನಟಿಸಿ ಮತ್ತೆ ಕಡೆಗಣ್ಣ ನೋಟದಲ್ಲಿ ಶೃಂಗಾರ ರಸ, ಮೆಲ್ನುಡಿಯಲ್ಲಿ ಕರುಣರಸ ಹರಿಸಿ ತಮ್ಮ ಬೇಕು ಬೇಡುಗಳನ್ನು ಈಡೇರಿಸಿಕೊಳ್ಳುತ್ತಿದ್ದರು. ಬೇರೆ ಬೇರೆ ಊರುಗಳಿಂದಲೂ ವಿಟರು ಬರುತ್ತಿದ್ದುದನ್ನು ಅದೇ ಕತೆಯಲ್ಲಿ ಹೇಳಲಾಗಿದೆ.

ಕುಂಟಣಿಯರ ವಿಷಯಕ್ಕೂ ಹಲವು ಮಾತುಗಳು ಈ ಕತೆಗಳಲ್ಲಿ ಬಂದಿವೆ. ವೇಶ್ಯೆ, ವಿಟ ಎರಡೂ ಕಡೆಗೆ ಮಾತಸಾಡಿ ವ್ಯವಹಾರವನ್ನು ಕುದುರಿಸುತ್ತಿದ್ದ ಕುಂಟಣಿಯರಿಗೆ ಹೆಚ್ಚು ಹಣ ಸುರಿಯುವ ವಿಟನು ದೊರೆತರೆ ಅವರು ಅತೀವ ಸಂತೋಷಪಡುತ್ತಿದ್ದ ವಿಷಯ ರೇವತಿದೇವಿ ಕತೆಯಲ್ಲಿ ದೊರೆಯುತ್ತದೆ.

ಕೆಲವು ಸಲ ಕುಂಟಣಿಯರನ್ನು ಹೊಗಳುವ ಬೊಜಂಗರೂ ಇದ್ದರು(ಗುರುದತ್ತ ಭಟಾರರ ಕತೆ). ಹಲವು ಬಗೆಯ ಬೊಜಂಗರೂ ಧರ್ಮಾಮೃತ ಕತೆಗಳಲ್ಲಿದ್ದಾರೆ. ವಯಸ್ಸು ಹೋದ ವಿಟರು ಸೂಳೆಯರಲ್ಲಿಗೆ ಬಂದರೆ ಅವರನ್ನು ಕಂಡ ಕೂಡಲೇ ಸೂಳೆಯರು ಮನೆಯೊಳಗೆ ಸರಿದುಬಿಡುತ್ತಿದ್ದರೆಂಬುದು ಒಡ್ಡಾಯನ ಕತೆಯಲ್ಲಿದ್ದರೆ ಕೆಟ್ಟ ಮನಸ್ಸು ಹೊಂದಿದ ವಿಟರು ಹರೆಯದವರಾಗಿದ್ದರೂ ಅವರನ್ನು ಕಂಡಕೂಡಲೇ ಸೂಳೆಯರು ಮುಖದಿರುಹುತ್ತಿದ್ದರು. ತಾನು ಬಾಣಂತಿಯಾಗಿರುವಾಗಲೂ ಕಾಟಕೊಡುತಿದ್ದ ವಿಟನ ಬಗೆಗೆ ಸೂಳೆ ಬೇಸರಪಡುತ್ತಿದ್ದಳು(ಅನಂತಮತಿ ಕತೆ). ಧಾರಾಳವಾಗಿ ಹಣಚೆಲ್ಲುತ್ತಿದ್ದ ಬೊಜಂಗರೆಂದರೆ ಸೂಳೆಯರು ಸಂತೋಷಪಡುತ್ತಿದ್ದರು(ವಿಷ್ಣುಕುಮಾರನ ಕತೆ).

ಮುದಿಸೂಳೆಯರ ಬಗೆಗೂ ಕೆಲವು ಮಾತು ಇಲ್ಲಿವೆ. ವಯಸ್ಸು ಹೋದ ಸೂಳೆ ತನ್ನ ಅಪರವಯಸ್ಸಿನಲ್ಲಿ ದುಃಖದಿಂದ ಕೂಡಿರುತ್ತಿದ್ದುದು ಧನದ ಮಹಾರಾಜನ ಕತೆಯಲ್ಲಿದೆ. ಅಂತಹವರು ವಿಟರನ್ನು ಹೇಗೆ ಆಕರ್ಷಿಸಬೇಕೆಂಬ ವಿಷಯದಲ್ಲಿ ಚಿಕ್ಕವಯಸ್ಸಿನವರಿಗೆ ತರಬೇತಿ ಕೊಡುತ್ತಿದ್ದರು(ಅನಂತಮತಿ ಕತೆ) – ಹೀಗೆ ಧರ್ಮಾಮೃತ ಕಾವ್ಯದಲ್ಲಿ ವೇಶ್ಯಾ ಜೀವನ ಹಲವು ಬಗೆಯಲ್ಲಿ ಕಾಣಿಸಿಕೊಂಡಿದ್ದರೂ ಯಾರೂ ಅವಳ ಶೋಷಿತ ಬದುಕನ್ನು ಯೋಚಿಸುವುದಿಲ್ಲ; ಮರುಕ ಪಡೆಯುವುದಂತೂ ದೂರವೇ ಉಳಿಯಿತು.

ಮನರಂಜನೆ:

ಧರ್ಮಾಮೃತದಲ್ಲಿ ವಿವರಗೊಂಡ ಹಲವು ವೃತ್ತಿ ವಿವರಣೆಗೆ ಹೋಲಿಸಿ ನೋಡಿದರೆ ಮನರಂಜನೆಯ ವಿಷಯ ಕಡಿಮೆಯೆಂದೇ ಹೇಳಬೇಕು. ಜನಸಾಮಾನ್ಯರಿಗೆ ಸಂತೋಷ ನೀಡುವ 'ಪಗರಣ'ಕ್ಕೆ ಸಂಬಂಧಿಸಿದ ಹೇಳಿಕೆಗಳು ಮಾತ್ರ ಹೆಚ್ಚಾಗಿವೆ.

ಪಗರಣ: ಕವಿರಾಜ ಮಾರ್ಗ, ವಡ್ಡಾರಾಧನೆಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಪಗರಣ ಕುರಿತಾದ ಹೇಳಿಕೆಗಳು ಧರ್ಮಾಮೃತ ಕಾವ್ಯದಲ್ಲಿಯೂ ಮುಂದುವರಿದಿವೆ. ಪಗರಣದಲ್ಲಿ ಪರಿಶಿಷ್ಟರು ಭಾಗವಹಿಸುತ್ತಿದ್ದರು. ಹೊಲೆಯರು ಬಾರಿಸುತ್ತಿದ್ದ ತಮಟೆಯ ತಾಳಕ್ಕನುಗುಣವಾಗಿ ಪಗರಣಿಗರು ಆಟವಾಡುತ್ತಿದ್ದರೆಂಬುದು, ಪಗರಣವನ್ನು ನೋಡಿ ನಗುವರೇ ಹೊರತು ಅದರ ಲಕ್ಷಣಗಳನ್ನು ಗಮನಿಸುವುದಿಲ್ಲ ಎಂಬುದು ರೇವತಿದೇವಿಯ ಕತೆಯಲ್ಲಿದೆ. ಮೂರು ದಿನದ ಪಗರಣಕ್ಕಾಗಿ ಗಡ್ಡ, ಮೀಸೆ, ತಲೆಯನ್ನು ಬೋಳಿಸಿಕೊಳ್ಳುತ್ತಿದ್ದರೆಂಬುದು ಧನಕೀರ್ತಿ ಕತೆಯಲ್ಲಿದೆ. ಪಗರಣದಲ್ಲಿ ಆನೆಯ ಚಿತ್ರದ ಬಳಕೆಯಿತ್ತು (ವಜ್ರ ಕುಮಾರ ಕತೆ). ಪಗರಣದ ವಿಷಯಕ್ಕೆ ಬಂದಿರುವ ಈ ಅಂಶಗಳನ್ನು ಕ್ರೋಢಿಕರಿಸಿ ಅದರ ಸ್ವರೂಪ ಮತ್ತು ಪ್ರಯೋಗಗಳನ್ನು ಹೀಗೆ ಊಹಿಸಿಕೊಳ್ಳಬಹುದು.

೧. ಪಗರಣವು ಜನಸಾಮಾನ್ಯರು ಆಡುವ ಆಟವಾಗಿತ್ತು. ಅದರಲ್ಲಿ ಪರಿಶಿಷ್ಟರು ತಮಟೆ ಬಾರಿಸುತ್ತಿದ್ದರು.

೨. ಆನೆಗಳ ಚಿತ್ರವುಳ್ಳ ಪರದೆಗಳನ್ನು ಪಗರಣಕ್ಕೆ ಹಿನ್ನೆಲೆಯಾಗಿ ಬಳಸುತ್ತಿದ್ದರೆಂದು ತೋರುತ್ತದೆ.

೩. ಪಗರಣದ ಪ್ರಯೋಗಕ್ಕಾಗಿ ಪುರುಷರು ಗಡ್ಡ, ಮೀಸೆಗಳನ್ನು ಬೋಳಿಸಿಕೊಳ್ಳುತ್ತಿದ್ದರೆಂಬುದರಿಂದ ಸ್ತ್ರೀಪಾತ್ರವನ್ನು ಪುರುಷರೇ ವಹಿಸುತ್ತಿದ್ದರೆಂದು ಊಹಿಸಬಹುದು.

೪. ಪಗರಣ ಆಟ ಮೂರುದಿನಗಳ ಕಾಲ ನಡೆಯುತ್ತಿತ್ತೆಂದು ತೋರುತ್ತದೆ(ಮೂರು ದಿನದ ಪಗರಣಕ್ಕೆ ಗಡ್ಡ, ಮೀಸೆ, ಬೋಳಿಸಿಕೊಳ್ಳುತ್ತಿದ್ದರು).

ನೃತ್ಯ: ಅರಸರ ಓಲಗದಲ್ಲಿ ಹಲವು ಬಗೆಯ ನೃತ್ಯಗಳು ನಡೆಯುತ್ತಿದ್ದವು ಎಂಬ ವಿಷಯ ಒಡ್ಡಾಯನ ಕತೆಯಲ್ಲಿ ಎರಡು ಬಾರಿ ಬಂದಿದೆ.

ಮಕ್ಕಳಾಟಗಳು: ಮಕ್ಕಳಾಟಗಳು ಎಲ್ಲಾ ಕಾಲದಲ್ಲಿರುವಂತೆ ನಯಸೇನನ ಕಾಲದಲ್ಲಿಯೂ ಅಸ್ತಿತ್ವದಲ್ಲಿದ್ದವು. ಅನಂತಮತಿಯನ್ನು ಮದುಮಗಳನ್ನಾಗಿ ಮಾಡಿ ಆಟವಾಡಿದ್ದು ಧರ್ಮಾಮೃತದಲ್ಲಿದೆ. ಒಂದು ದಿನ ಅನಂತಮತಿಯೂ ಅವಳೊಡನಿದ್ದ ಮಕ್ಕಳೂ ಆಟವಾಡುವ ಆಸೆಯಿಂದ ಒಂದು ಗೊಂಬೆಗೆ ದಿವ್ಯ ವಸ್ತ್ರವನ್ನು ಉಡಿಸಿ, ಕಸ್ತೂರಿ ತಿಲಕವನ್ನಿಟ್ಟು, ಬಂಗಾರದ ಓಲೆಯನ್ನು ತೊಡಿಸಿ, ಅಂದವಾದ ಹೂಮಾಲೆಯನ್ನು ಹಾಕಿ ಅದನ್ನೇ ಮದುಮಗ, ಅನಂತಮತಿಯೇ ಮದುಮಗಳೆಂದು ಭಾವಿಸಿ ಇಬ್ಬರನ್ನೂ ಮಗ್ಗಲು ಮಗ್ಗಲು ಕೂಡಿಸಿ ಮದುವೆಯಾಟವಾಡಿದರು. ಇದು ಇಂದಿಗೂ ಮಕ್ಕಳಾಡುವ ಮದುವೆಯಾಟವೇ. ಇಷ್ಟಲ್ಲದೆ ಕುಪ್ಪಕುರಿಯಾಟ(ಪ್ರಮಾಥಿಕುಮಾರನ ಕತೆ)ಚೆಂಡಿನಾಟ, ಬುಗುರಿಯಾಟ (ವಿಷ್ಣುಕುಮಾರನ ಕತೆ)–ಇವೆಲ್ಲ ಅಂದಿನ ಮಕ್ಕಳಾಡುವ ಆಟಗಳೇ ಆಗಿದ್ದವು.

ವೇಷ ಭೂಷಣ:

ನಯಸೇನ ಹೇಳುವ ವೇಷಭೂಷಣಗಳಲ್ಲಿ ಶ್ರೀಮಂತರ ಅಲಂಕಾರ ವಸ್ತುಗಳಿಗೇ ಹೆಚ್ಚಿನ ಒತ್ತುಬಿದ್ದಿದೆ. ಬಡವರು ನೂಲಿನ ಸೀರೆಗಳನ್ನು ಉಡುತ್ತಿದ್ದರೆಂದೂ ಅವುಗಳನ್ನು ಕಷ್ಟವಸ್ತ್ರಗಳೆಂದು ಕರೆಯುತ್ತಿದ್ದರೆಂದೂ ಗುರುದತ್ತ ಭಟಾರರ ಕತೆಯಲ್ಲಿ ಹೇಳಲಾಗಿದೆ. ಹೆಣ್ಣುಮಕ್ಕಳು ಕಣ್ಣಿಗೆ ಕಾಡಿಗೆ ಹಚ್ಚುತ್ತಿದ್ದರೆಂದೂ ಬಳಲ್ಮುಡಿ, ಸೋರ್ಮುಡಿ, ಪೂಮುಡಿ ಮೊದಲಾದ ನಾನಾಬಗೆಯ ಮುಡಿಗಳನ್ನು ಕಟ್ಟುತ್ತಿದ್ದರೆಂದೂ ವಜ್ರಕುಮಾರ ಕತೆಯಲ್ಲಿ ನಯಸೇನ ಹೇಳಿದ್ದಾನೆ. ಬಡವರು ನೂಲಿನ ತೊಡವುಗಳನ್ನು ತೊಡುತ್ತಿದ್ದರೆಂಬುದು ಧನದ ಮಹಾರಾಜನ ಕತೆಯಲ್ಲಿದೆ. ಬಡವರಾದವರು ತಾಳಿ, ಕಾಜಿನ ತೊಡವು ನೂಲಿನಲ್ಲಿ ಪೋಣಿಸಿದ ಮುತ್ತಿನ ಅಥವಾ ಮಣಿಯ ಸರ ಧರಿಸುತ್ತಿದ್ದರು(ವಜ್ರಕುಮಾರನ ಕತೆ). ಗಂಡಸರು ಕೂದಲು ಬಿಟ್ಟು ತುರುಬುಕಟ್ಟುತ್ತಿದ್ದುದನ್ನೂ ಮೀಸೆ ಬಿಡುತ್ತಿದ್ದರೆಂಬುದನ್ನೂ(ಲಲಿತಾಂಗನ ಕತೆ) ಹೇಳಿರುವುದನ್ನು ಬಿಟ್ಟರೆ ಅವರ ವೇಷ, ಆಭರಣಗಳನ್ನು ಕುರಿತು ಹೆಚ್ಚಿನ ಮಾತುಗಳಾವವೂ ಬರುವುದಿಲ್ಲ.

ಊಟೋಪಚಾರ:

ನಯಸೇನನು ಬೆಳುವೊಲ ನಾಡಿನ ಮುಳುಗುಂದದ ಕವಿಯಾದುದರಿಂದ ಈ ಪರಿಸರದಲ್ಲಿ ಬೆಳೆಯುತ್ತಿದ್ದ ಕಾಳುಕಡಿಯಿಂದ ಸಿದ್ಧಪಡಿಸಿದ ಆಹಾರ ವಿಷಯದ ಬಗೆಗೆ ಸಾಕಷ್ಟು ಮಾತನಾಡಿದ್ದಾನೆ. ಧರ್ಮಾಮೃತದ ೧ ರಿಂದ ೪ನೆಯ ಕತೆಗಳಲ್ಲಿ ಆಹಾರ ಪದ್ಧತಿಯ ಅನೇಕ ವಿಷಯಗಳು ಬಂದಿವೆ. ಇಲ್ಲಿಯ ಬಹಳಷ್ಟು ಆಹಾರ ಪದಾರ್ಥಗಳು ಬಡವರಿಗೆ ಸಂಬಂಧಿಸಿದವುಗಳೇ ಆಗಿವೆ. ರೊಟ್ಟಿ, ಹಿಟ್ಟು, ಅಂಬಲಿ, ಗಂಜಿ ಮುಂತಾದವುಗಳೆಲ್ಲ ಜೋಳದ ಕಾಳಿನಿಂದಲೇ ಮಾಡಿದ ಪದಾರ್ಥಗಳಾಗಿದ್ದು ಇವನ್ನು ಬಳಸುವವರು ಬಡವರೇ ಆಗಿದ್ದರು. ಹಬ್ಬಗಳಲ್ಲಿ ಹೋಳಿಗೆ, ಮಂಡಗಿ, ತರಗು, ಲಡ್ಡುಗೆ, ಚಕ್ಕುಲಿ, ಗಾರಿಗೆ, ಪೂರಿಗೆ ಇತ್ಯಾದಿ ತಿನಿಸುಗಳನ್ನು ಮಾಡುವುದು ಸಾಮಾನ್ಯವಾಗಿತ್ತು. ಊಟಮಾಡುವಾಗ ನಂಜಿಕೊಳ್ಳಲು ಬಾಡುಗಳು ಇದ್ದವು. ಅಡುಗೆ ಮಾಡುವಾಗ ಎಣ್ಣೆ, ಬೆಲ್ಲ, ಸಕ್ಕರೆ, ಉಪ್ಪು, ಇಂಗು, ಸಾಸಿವೆ, ಮೆಣಸು, ಸುಂಟಿ, ಅರಿಸಿನ ಮುಂತಾದ ವಸ್ತುಗಳನ್ನು ಬಳಸುತ್ತಿದ್ದರು. ಧನದ ಮಹಾರಾಜನ ಕತೆಯಲ್ಲಿ ಬಡವರು ನುಚ್ಚುಗೂಳನ್ನು ಉಣ್ಣುತ್ತಿದ್ದ ವಿಷಯ ಬಂದಿದ್ದರೆ ವಾರಿಷೇಣ ಕುಮಾರನ ಕತೆಯಲ್ಲಿ ಬಡವರು ಗುಗ್ಗರಿ ತಿನ್ನುತ್ತಿದ್ದ ವಿಷಯ ಬಂದಿದೆ.

ದೇಸಿ ವೈದ್ಯ: ಪೂರ್ವಕಾಲದಿಂದಲೂ ರೂಢಿಯಲ್ಲಿರುವ ದೇಸಿ ವೈದ್ಯವನ್ನು ನಯಸೇನನು ಬಲ್ಲವನಾಗಿದ್ದ. ಅಂತೆಯೇ ಧರ್ಮಾಮೃತ ಕಾವ್ಯದಲ್ಲಿ ಅಂತಹ ಅನೇಕ ಸಂಗತಿಗಳು ಉಕ್ತಗೊಂಡಿವೆ. ವಸುಭೂತಿ ಕತೆಯಲ್ಲಿ ಜನಪದರ ವೈದ್ಯಜ್ಞಾನವನ್ನು ಕುರಿತಂತೆ ಅನೇಕ ಸಂಗತಿಗಳು ಬಂದಿವೆ: ಪಿತ್ತಜ್ವರ ಬಂದವರಿಗೆ ಕುಡಿಯಲು ಕುದಿಯುವ ಹಾಲು ಕೊಡಬಾರದು. ಏಕೆಂದರೆ ಪಿತ್ತವು ಅಧಿಕವಾಗಿದ್ದಾಗ ಹೊಟ್ಟೆ ಸೇರಿದ ಹಾಲು ಕಹಿಯಾಗುತ್ತದೆ. ನಸುಗುನ್ನಿ ಮುಟ್ಟಿದರೆ ಮೈಗೆ ತುರಿಕೆಯುಂಟಾಗುತ್ತದೆ. ಮದ್ದು ಗುಣಿಕೆಯನ್ನು ತಿಂದವನಿಗೆ ಕಲ್ಲು, ಮಣ್ಣು, ಕಟ್ಟಿಗೆಗಳೆಲ್ಲ ಹಳದಿಯಾಗಿ ಕಾಣುತ್ತವೆ. ಅಷ್ಟೇ ಅಲ್ಲ ಮೈಮೇಲಿನ ಪ್ರಜ್ಞೆಯನ್ನು ಕಳೆದುಕೊಳ್ಳುತ್ತಾನೆ.

ದೇಸಿ ಮದ್ದುಗಳ ಪ್ರಯೋಗ ಸಂಬಂಧದಲ್ಲಿಯೂ ಜನಪದರಿಗೆ ಸಾಕಷ್ಟು ಜ್ಞಾನವಿದ್ದಿತೆಂಬುದನ್ನು ನಯಸೇನನು ಧರ್ಮಾಮೃತ ಕಾವ್ಯದ ಮೂಲಕ ತಿಳಿಯಪಡಿಸಿದ್ದಾನೆ. ವನಸ್ಪತಿ ಔಷಧಿಯನ್ನು ತಯಾರಿಸಲು ನಾರುಬೇರುಗಳನ್ನು ಅಗಿಯಲಾಗುತ್ತಿತ್ತು; ಇಂಥ ಸಮಯದಲ್ಲಿ ದೇಸಿ ವೈದ್ಯರು ಗಿಡಮೂಲಿಕೆಗೆ ಮಣ್ಣು ತಗುಲಿದ್ದರೆ ಬೈಯುತ್ತಿದ್ದರು ಎಂಬ ವಿಷಯಗಳೂ ವಸುಭೂತಿ ಕತೆಯಲ್ಲಿಯೇ ಬರುತ್ತವೆ. ಇಲ್ಲಿ ಉಕ್ತಗೊಂಡಿರುವ ಎರಡನೆಯ ಅಂಶವನ್ನು ನೋಡಿದರೆ ವನಸ್ಪತಿಯನ್ನು ಹುಡುಕಾಡಿ ಅಗಿದು ತರುವ ಕೆಲಸವನ್ನು ರೋಗಿಯ ಸಂಬಂಧಿಕರೋ ವೈದ್ಯನ ಸಹಾಯಕರೋ ಮಾಡುತ್ತಿದ್ದರೆಂದು ತೋರುತ್ತದೆ. ವೈದ್ಯನ ಸೂಚನೆ ಮೇರೆಗೆ ವನಸ್ಪತಿ ತರಲು ಹೋದವರು ಮಣ್ಣು ಹತ್ತಿದ ಮೂಲಿಕೆಯನ್ನು ತಂದರೆ ವೈದ್ಯನಿಂದ ಬೈಸಿಕೊಳ್ಳುತ್ತಿದ್ದರು. ಮದ್ದಿಗೆ ಅಗತ್ಯವಾದ ಬೇರನ್ನೋ ಗಡ್ಡೆಯನ್ನೋ ಸ್ವಚ್ಛ ಮಾಡಿ ವೈದ್ಯನಿಗೊಪ್ಪಿಸಿದರೆ ಮದ್ದಿನ ಗುಣಮಟ್ಟ ಒಳ್ಳೆಯದಾಗುತ್ತಿತ್ತೆಂದೂ ಅದರಿಂದ ವೈದ್ಯರಿಗೆ ಸಂತೋಷವಾಗುತ್ತಿತ್ತೆಂದೂ ಇದರ ತಾತ್ಪರ್ಯ. ವೈದ್ಯರು ಹೀಗೆ ಸಿಟ್ಟಿಗೇಳುತ್ತಿದ್ದ ಬೇರೆತರಹದ ವಿಷಯ ರೇವತಿ ಕತೆಯಲ್ಲಿಯೂ ಬಂದಿದೆ. ರೋಗಿಗಳು ವೈದ್ಯರಲ್ಲಿಗೆ ಬಂದು ತಮ್ಮ ರೋಗದ ಬಗೆಗೆ ವಿವರಿಸಿದಾಗ, ಆ ರೋಗ ಉಲ್ಬಣಾವಸ್ಥೆಗೆ ಹೋಗಿದ್ದರೆ ವೈದ್ಯರು ಸಿಟ್ಟಿಗೇಳುತ್ತಿದ್ದರು. ರೋಗಿಗಳು ಉಪಚಾರವನ್ನು ಬೇಗ ಪಡೆಯದ ವಿಳಂಬ ನೀತಿಯೇ ಈ ವೈದ್ಯರ ಸಿಟ್ಟಿಗೆ ಕಾರಣ. ಅಂದರೆ ವೈದ್ಯರು ತೋರುವ ಈ ಮುನಿಸು ರೋಗಿಯ ಹಿತವನ್ನು ಹಾರೈಸಿ ತೋರ್ಪಡಿಸುವ ಹುಸಿಮುನಿಸು. ಇದು ರೋಗಿಗಳ ಮತ್ತು ವೈದ್ಯರ ಆತ್ಮೀಯ ಸಂಬಂಧವನ್ನೇ ಅಭಿವ್ಯಕ್ತಿಸುತ್ತದೆ.

ನಯಸೇನನ ಕಾಲಕ್ಕೆ ದಂತವೈದ್ಯವೂ ಸಾಕಷ್ಟು ಮುಂದುವರಿದಿತ್ತೆಂಬುದು ವಜ್ರಕುಮಾರನ ಕತೆಯಲ್ಲಿ ಉಲ್ಲೇಖಿಸಲ್ಪಟ್ಟಿದೆ. 'ಕಟ್ಟಿದ ಪಲ್ಲಂತೆ ಮೊಜಗಣ್ಗೆ ರಂಜಿಸುವ"(ಪು-೨೭೦, ಗದ್ಯ) ಎಂಬ ಮಾತು ಈ ಕತೆಯಲ್ಲಿ ಬರುವುದರಿಂದ ಇದು ಕೃತ್ರಿಮ ಹಲ್ಲನ್ನೇ ಸೂಚಿಸುತ್ತದೆಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಇವರ ವೈದ್ಯಕೀಯ ಎಷ್ಟು ನಿಖರವಾಗಿತ್ತೆಂದರೆ ಬೋಳುದಲೆಯಲ್ಲಿ ಕೂದಲನ್ನು ಹುಟ್ಟಿಸುವ ಶಕ್ತಿ ಯಾವ ವನಸ್ಪತಿಗೂ ಇಲ್ಲ ಎಂಬುದನ್ನು ಇವರು ತಿಳಿದಿದ್ದರು(ವಾರಿಷೇಣ ಕುಮಾರನ ಕತೆ).

ಪ್ರಾಣಿ ಪ್ರಪಂಚ: ಜನಸಾಮಾನ್ಯರೊಂದಿಗೆ ಒಡನಾಟ ಹೊಂದಿದ್ದ ಎಷ್ಟೋ ಪ್ರಾಣಿ-ಪಕ್ಷಿಗಳೂ ಧರ್ಮಾಮೃತ ಕತೆಯಲ್ಲಿ ಬಂದು ಹೋಗುತ್ತವೆ.

ಎಮ್ಮೆ	ಗೂಳಿ	ಕಪಿ	ಹಂದಿ
ಕೋಣ	ಹುಲಿ	ಆನೆ	ಕೋಳಿ
ಹಸು	ಬೆಕ್ಕು	ನರಿ	ಕಾಗೆ

ಎತ್ತು	ನಾಯಿ	ಕುದುರೆ	ಮೀನು
ಕರು	ಸಿಂಹ	ಕತ್ತೆ	ನೊಣ
ಉಡು	ಇಲಿ	ಹಾವು	ಕೋಗಿಲೆ
ಜಿಂಕೆ	ಕಪ್ಪೆ		

– ನಯಸೇನನು ಕೇವಲ ಪ್ರಾಣಿಪಕ್ಷಿಗಳನ್ನು ಹೆಸರಿಸುವುದಿಲ್ಲ; ಅವುಗಳ ಗುಣ–ಸ್ವಭಾವವನ್ನೂ ಹೇಳುತ್ತಾನೆ.

ನ್ಯಾಯ ಪದ್ಧತಿ: ಜೀವನವು ಸುಸೂತ್ರವಾಗಿ ನಡೆಯಲು ಸಮಾಜ ಅಳವಡಿಸಿಕೊಂಡಿದ್ದ ನ್ಯಾಯ ಪದ್ಧತಿಯನ್ನು ಕುರಿತೂ ನಯಸೇನ ಹೇಳಿದ್ದಾನೆ. ನ್ಯಾಯ ನಿರ್ಣಯ ಸಾಮಾನ್ಯವಾಗಿ ಅರಸನಿಂದ ಮಂಡಿಸಲ್ಪಡುತ್ತಿತ್ತು. ಬ್ರಾಹ್ಮಣನಿಗೆ ವಿಶ್ವಾಸಘಾತ ಮಾಡಿದ ಅಕ್ಕಸಾಲಿಯ ಆಸ್ತಿಯನ್ನು ಕಿತ್ತುಕೊಳ್ಳುವಂತೆ ರಾಜನು ತಳವಾರನಿಗೆ ಆಜ್ಞೆ ಮಾಡಿದ ಘಟನೆ ಜಿನೇಂದ್ರದಾಸರ ಕಥೆಯಲ್ಲಿದೆ. ವರ್ತಕನೊಬ್ಬನು ತನಗೆ ಮೋಸ ಮಾಡಿದನೆಂದು ಭ್ರಮಿಸಿದ ರಾಜನು ಅವನ ಆಸ್ತಿಯನ್ನೆಲ್ಲ ಕಿತ್ತುಕೊಂಡ ವಿಷಯವೂ ಇದೇ ಕತೆಯಲ್ಲಿದೆ. ಬೆಟ್ಟದ ಮೇಲಿಂದ ಕೆಡಹುವುದು, ಹೆಂಟವೆಳೆಸುವುದು, ಇಕ್ಕುಳಿನಿಂದ ಕೈಯನ್ನು ಹಿಚುಕುವುದು-ಇವೆಲ್ಲ ಅಪರಾಧಿಯೆಂದು ಸಾಬೀತಾದವನಿಗೆ ಕೊಡುವ ಶಿಕ್ಷೆಗಳಾಗಿದ್ದವು(ವಿಷ್ಣು ಕುಮಾರ ಕತೆ, ಜಿನೇಂದ್ರದಾಸ ಕತೆ).

ಕಳ್ಳರಿಗೆ ಮತ್ತು ಹಾದರ ಮಾಡುವವರಿಗೆ ಕೊಡುವ ಶಿಕ್ಷೆಗಳು ತುಂಬಾ ಕ್ರೂರವಾಗಿದ್ದವು. ಕಳ್ಳರನ್ನು ಕೊಲ್ಲುವ ಶಿಕ್ಷೆ ನಯಸೇನನ ಕಾಲದಲ್ಲಿ ರೂಢಿಯಲ್ಲಿತ್ತು(ಅನಂತಮತಿ ಕತೆ, ವಾರಿಷೇಣಕುಮಾರನ ಕತೆ). ಪಾದರಿಗಳಿಗೆ ಕೊಡುವ ಶಿಕ್ಷೆಯಂತೂ ಇನ್ನೂ ಕ್ರೂರವಾಗಿದ್ದವು. ಹಾದರ ಮಾಡಿ ನೀತಿಗೆಟ್ಟವರನ್ನು ಬೆಂಬತ್ತಿ ಹೊಡೆಯುತ್ತಿದ್ದರು. ಪರಸತಿಗೊಲಿದು ಹಾದರ ಮಾಡಿದವನ ಆಸ್ತಿಯನ್ನೆಲ್ಲ ಕಿತ್ತುಕೊಂಡು ಅವನ ತಲೆಯನ್ನು ಕತ್ತರಿಸಿ ಹಾದರಿಯ ಕೊರಳಿಗೆ ಹಾಕಿ ಬೀದಿಗಳಲ್ಲಿ ಡಂಗುರಸಾರುತ್ತ ಹೋಗುತ್ತಿದ್ದರೆಂಬುದು ಪ್ರಮಾಥಿ ಕುಮಾರನ ಕತೆಯಲ್ಲಿದ್ದರೆ ಹಾದರ ಮಾಡಿದವಳನ್ನು ಕುರಿಯನ್ನು ಕೊಲ್ಲುವಂತೆ ಕೊಲ್ಲುತ್ತಿದ್ದರೆಂಬುದು ಜಿನೇಂದ್ರಭಕ್ತ ಕತೆಯಲ್ಲಿದೆ.

ನಯಸೇನನಿಗೆ ಪ್ರಪಂಚಜ್ಞಾನ ಅಪಾರವಾಗಿತ್ತು. ಅಂತೆಯೇ ತನ್ನ ಕಾಲದ ಸಾಮಾನ್ಯ ಬದುಕಿನ ಸಂಸ್ಕೃತಿಯ ಚಿತ್ರಣವನ್ನು ಅಗಾಧ ರೀತಿಯಲ್ಲಿ ಕಟ್ಟಿಕೊಟ್ಟಿದ್ದಾನೆ. ಉದ್ಯೋಗದಿಂದ ಹಿಡಿದು ನ್ಯಾಯಪದ್ಧತಿಯವರೆಗೆ ಚಾಚಿಕೊಂಡಿರುವ ಇಲ್ಲಿಯ ಸಂಸ್ಕೃತಿಯ ನೆಯ್ಗೆ ಧರ್ಮಾಮೃತವನ್ನು ದೇಸಿ ನೆಲೆಯಲ್ಲಿ ಅಧ್ಯಯನ ಕೈಗೊಳ್ಳುವವರಿಗೆ ಅಕ್ಷಯ ನಿಧಿಯೆನಿಸಿದೆ.

ಹರಿಶ್ಚಂದ್ರ ಕಾವ್ಯ

ಮೂಲತಃ ಹರಿಶ್ಚಂದ್ರ ಕಾವ್ಯ ಆದರ್ಶವನ್ನು ಪ್ರತಿಪಾದಿಸುವ ಕಾವ್ಯ. ಅನೃತವರಿಯದ ಹರಿಶ್ಚಂದ್ರನನ್ನು ಹೊಗಳಿ ಜನಬದುಕಬೇಕೆಂದು ತನ್ನ ಕಾವ್ಯವನ್ನು ಬರೆದೆ ಎನ್ನುವ ಮಾತನ್ನು ಕಾವ್ಯದ ಕೊನೆಯಲ್ಲಿ ರಾಂಘವಾಂಕ ಹೇಳುತ್ತಾನೆ.

ಅನೃತವಱಿಯದ ಹೊಲೆಯನಂ ನೆನೆಯೆ ಪುಣ್ಯವೆಂ
ದೆನೆ ಸೂರ್ಯಕುಲಜಕಲಿ ದಾನಿ ಸತ್ಯ ವಸಿ
ಷ್ಠನ ಶಿಷ್ಯನಧಿಕ ಶೈವಂ ಕಾಶಿಯೊಳ್ ಮೆಱೆದ ವೇದಪ್ರಮಾಣ ಪುರುಷ
ಘನ ನೃಪ ಹರಿಶ್ಚಂದ್ರನೆಂದಡಾತನ ಪೊಗಳ್ದು
ಜನ ಬದುಕಬೇಕೆಂದು ಕಾವ್ಯಮುಖದಿಂ ಪೇಳ್ದ
ನನಪೇಕ್ಷೆಯಿಂದ ಕವಿರಾಘವಾಂಕ ಮಹಾಲಿಂಗಭಕ್ತರ ಭಕ್ತನು (೧೪-೩೪)

–ಹೀಗೆ ಆದರ್ಶದ ಪ್ರತಿರೂಪದಂತಿರುವ ಹರಿಶ್ಚಂದ್ರನಿಗೆ ಪೂರಕವಾಗಿರುವ ಬೇರೆ ಪಾತ್ರಗಳೆಂದರೆ ಚಂದ್ರಮತಿ ಮತ್ತು ಲೋಹಿತಾಶ್ವರು. ಇವರು ಮೂರೂ ಜನ ಆದರ್ಶದ ಅಭಿವ್ಯಕ್ತಿಗೆ ಮೀಸಲಾಗಿರುವ ಪಾತ್ರಗಳು; ಇವೆಲ್ಲ ಆದರ್ಶದೊಂದಿಗೆ ತುಡಿಯುತ್ತವೆ. ಮೇಲೆ ಉಲ್ಲಖಿಗೊಂಡ ಪದ್ಯದಲ್ಲಿ ರಾಘವಾಂಕ ಹೇಳಿರುವಂತೆ ಕಾವ್ಯದ ಆಶಯ ಹರಿಶ್ಚಂದ್ರನ ಮುಖಾಂತರ ಸತ್ಯವನ್ನು ಬಿಂಬಿಸುವುದಾಗಿದೆ. ಕಾವ್ಯದ ಇನ್ನೊಂದು ಪ್ರಮುಖ ಪಾತ್ರ ವೆನಿಸಿರುವ ವಿಶ್ವಾಮಿತ್ರ ಹರಿಶ್ಚಂದ್ರನನ್ನು ಎಷ್ಟೇ ಕಾಡಿದಂತೆನಿಸಿದರೂ ಅವನೂ ಕೂಡ ಪರೋಕ್ಷವಾಗಿ ಹರಿಶ್ಚಂದ್ರನ ಸತ್ಯಸಂಧತೆಯನ್ನು ಪ್ರಾಮಾಣಿಕರಿಸಲು ಕೈಜೋಡಿಸಿದವನು. ಹೀಗೆ ಹರಿಶ್ಚಂದ್ರ ಕಾವ್ಯ ಪಾತ್ರ ಕೇಂದ್ರಿತ ಕಾವ್ಯ. ಹೀಗಾಗಿ ಪಾತ್ರದಾಚೆಗೆ ಸಿಗುವ ಮನುಷ್ಯ ಜೀವನವಿಲ್ಲ. ಇದು ರಾಜನ ಕಥೆಯೆಂದರೂ ಅರಮನೆಯ ಜನಜೀವನವೂ ಇಲ್ಲಿ ದೊರೆಯುವುದಿಲ್ಲ. ಇನ್ನು ಜನಸಾಮಾನ್ಯರ ಬದುಕಿನ ಎಲ್ಲಾ ಮುಖಗಳು ಇಲ್ಲಿ ದೊರೆಯುವುದಿಲ್ಲ. ಕವಿಯ ಆಶಯವನ್ನು ನೋಡಿದರೆ ಹಾಗೆ ನಿರೀಕ್ಷಿಸುವದೂ ತಪ್ಪೆನಿಸುತ್ತದೆ. ವಸ್ತುಸ್ಥಿತಿ ಹೀಗಿದ್ದರೂ ರಾಜನಿಗೆ ಸಂಬಂಧಿಸಿದಂತೆ ಬರುವ ನಗರ ಪರ್ಯಟನದಲ್ಲಿ, ಮೃಗಯಾವಿನೋದದಲ್ಲಿ ವೇಶ್ಯಾ ಜೀವನ ಮತ್ತು ಬೇಟೆಗಾರರ ವೃತ್ತಿ ಬದುಕಿನ ಕುರಿತು ವಿವರಣೆಗಳಿವೆ. ಕಾವ್ಯದಲ್ಲಿ ಇವರಿಬ್ಬರು ಮಾತ್ರ ಸಾಮಾನ್ಯ ಜನರ ಸಂಸ್ಕೃತಿಯನ್ನು ಪ್ರತಿನಿಧಿಸುತ್ತಾರೆ.

ವೇಶ್ಯಾ ಜೀವನ:

ವೇಶ್ಯಾ ಜೀವನವು ನಮ್ಮ ಸಂಸ್ಕೃತಿಯ ಒಂದು ಭಾಗವೆಂಬಂತೆ ಪ್ರಾಚೀನ ಕನ್ನಡದ ಬಹಳಷ್ಟು ಕಾವ್ಯಗಳಲ್ಲಿ ಸಾಕಷ್ಟು ವಿವರವಾಗಿಯೇ ನಿರೂಪಗೊಂಡಿದೆ. ವೇಶ್ಯೆಯರ ಸೌಂದರ್ಯ, ಅವರ ವೇಷಭೂಷಣ, ಹಾವಭಾವ, ಅವರು ವಿಟರನ್ನು ಆಹ್ವಾನಿಸುವ ರೀತಿ, ಎಲ್ಲವೂ ಕೂಲಂಕುಷವಾಗಿ ವಿವರಣೆ ಪಡೆದಿವೆ.

ಬೇಟೆಗೆ ಹೊರಡುವ ಹಿಂದಿನ ದಿನ ಪುರವ ನೋಡುವೆನೆಂದು ಹತ್ತೆಂಟು ಸಖರ ಸಹಿತ ಹೊರಟ ಹರಿಶ್ಚಂದ್ರನು ಸೂಳಿಗೇರಿಯನ್ನು ಪ್ರವೇಶಿಸುತ್ತಾನೆ. ಸೂಳಿಗೇರಿಯೆನ್ನುವುದು ಜಾಣಿನ ಜನ್ಮಭೂಮಿ, ಸಿಂಗರದ ಮಡು, ಮೋಹನದ ಬೀಡು, ಸೊಬಗಿನ ಸೀಮೆ, ಚದುರಿನ ಚಾವಡಿಯಾಗಿ ತೋರುತ್ತಿತ್ತು. ಸೂಳಿಗೇರಿಯಲ್ಲಿ ವೇಶ್ಯೆಯರು ವಾಸಿಸುವ ಭವನಗಳನ್ನು ಕವಿ ವರ್ಣಿಸುತ್ತಾನೆ.

ಉಟ್ಟ ಧವಳಾಂಬರದ ಸುಲಿಪಲ್ಲ ಮೆಯ್ಯೊಳ
ಣ್ಪೆಟ್ಟ ಗಂಧದ ಮುಡಿಯ ಮಲ್ಲಿಗೆಯ ನಗೆಮೊಗದ
ತೊಟ್ಟ ಮುತ್ತಿನ ತೊಡಿಗೆಗಳ ಬೆಳಗು ದೆಸೆಯ ಪಸರಿಸಿ ಪರ್ಬ ಬೀದಿವರಿಯೆ

ದಟ್ಟೈಸಿ ಬಳೆದ ಬೆಳುದಿಂಗಳಿಂ ಬೆಳುಮುಗಿಲ
ಮೆಟ್ಟಿರ್ದ ಚಂದ್ರಕಳೆಯೆಂದೆಂಬ ಭಾವವಳ
ವಟ್ಟ ಬಿಳಿಯುಪ್ಪರಿಗೆಯಗ್ರದೊಳು ನಿಂದೊರ್ವಸತಿ ಕಣ್ಗೆ ಸೊಗಯಿಸಿದಳು (೪-೯)

-ಹೀಗಿರುವ ವೇಶ್ಯಯರ ಚಟುವಟಿಕೆ, ವಿನೋದದ ಜೀವನವನ್ನು ಕವಿ ವಿವರಿಸುತ್ತಾನೆ. ಸೂಳಿಗೇರಿಯ ಉಪ್ಪರಿಗೆಗಳಲ್ಲೂ ಕೆಲವರು ನೆತ್ತ ಚೆದುರಂಗದಾಟಗಳನ್ನು ಆಡುತ್ತಿದ್ದರು. ಕೆಲವರು ವೀಣೆ ನುಡಿಸುವ ಅಭ್ಯಾಸದಲ್ಲಿ ತೊಡಗಿದ್ದರೆ ಇನ್ನು ಕೆಲವರು ಕಾಮಶಾಸ್ತ್ರವನ್ನೋದಿಸುತ್ತಿದ್ದರು. ಕೆಲವರು ಗೀತ, ನೃತ್ಯ, ವಾದ್ಯಗಳನ್ನ ಕಲಿಯುತ್ತಿದ್ದರು ವೇಶ್ಯಾವಿಡಂಬನೆಯ ಕಥೆ ಕೇಳುವವರೂ ಅಲ್ಲಿದ್ದರು.

ಹೀಗಿರುವ ವೇಶ್ಯೆಯರ ವೃತ್ತಿ ಒಮ್ಮೆಲೆ ಸಾಧಿಸುವಂತಹದಲ್ಲ. ವೇಶ್ಯಯರಿಗೆ ತರಬೇತಿ ಕೊಡುವ ವಯಸ್ಸಾದ ಸೂಳೆಯರಿದ್ದರು. ಮುನಿದು ಮುದ್ದಿಸು, ಜರಿದು ಕಾಲುಹಿಡಿ, ಹವಣರಿದು ಹಣದಿಂಬು, ಒಬ್ಬನಿಗೆ ಮೀಸಲಾಗಿರಬೇಡ ಎಂದು ಬಗೆ ಬಗೆಯ ರೀತಿಯಲ್ಲಿ ಇವರು ಸಣ್ಣವಯಸ್ಸಿನವರಿಗೆ ಉಪದೇಶ ಮಾಡುತ್ತಿದ್ದರು. ಇವರ ಕಲಿಕೆಯ ರೀತಿ ಹೇಗಿರುತ್ತೆಂದರೆ ಹುಲಿ ಮರಿಗೆ ಬೇಟೆಯನ್ನು ಕಲಿಸುವಂತಿತ್ತು.

ರಾಘವಾಂಕ ಕೊಡುವ ಇದುವರೆಗಿನ ವಿವರಣೆಯನ್ನು ನೋಡಿದರೆ ವೇಶ್ಯೆಯರ ಜೀವನ ಸುಖಮಯವಾಗಿಯೇ ಇತ್ತೆಂಬುದು ಮೇಲ್ನೋಟಕ್ಕೆ ಅನ್ನಿಸುವುದು ಸಹಜವಾಗಿದೆ. ಆದರೆ ಇದಿಷ್ಟೇ ಅವರ ಜೀವವಾಗಿರಲಿಲ್ಲ. ಬದುಕಿನ ಯಾವುದೋ ಒಂದು ತಿರುವಿನಲ್ಲಿ ಇಂಥ ವೃತ್ತಿಗಂಟಿಕೊಳ್ಳುವವರು ಅಸಹಾಯಕ ಬಡವರ ಮಕ್ಕಳು. ತನಗೋ ತನ್ನವರಿಗೋ ಆಸರೆಯಾಗಿರಲೆಂದು ಮೈಚಾಚಿಕೊಂಡಿರುವ ಇವರ ಜೀವನ ಒಂದು ವಯಸ್ಸಿನವರೆಗೆ ಹೊರಗಡೆಗೆ ಅಂದವಾಗಿಯೇ ಇರುತ್ತದೆ. ಇವರಲ್ಲಿಗೆ ಬರುವವರು ಇವರ ದೇಹ ಸಿರಿಯನ್ನು ಮೆಚ್ಚಿ. ವೇಶ್ಯೆಗೆ ಹಣಬೇಕು, ವಿಟನಾದವನಿಗೆ ಸುಖಬೇಕು. ವೇಶ್ಯಾ ಜೀವನದಲ್ಲಿ ತೋರುವ ಈ ಒಡಂಬಡಿಕೆಗೆ ಕಾಲಮಾನದ ಸೀಮೆಯಿದೆ. ಎಲ್ಲಿಯವರೆಗೆ ವೇಶ್ಯೆಯ ಶರೀರ ಚೆಲವು ಮಾಸುವುದಿಲ್ಲವೋ ಅಲ್ಲಿಯವರೆಗೆ ಅವಳು ಸುರಕ್ಷಿತವಾಗಿಯೇ ಇರುತ್ತಾಳೆ. ಆದರೆ ಇವಳ ವಯಸ್ಸು ಜಾರಿದ ಮೇಲೆ ತುಂಬ ಶೋಚನೀಯ ಸ್ಥಿತಿಯಲ್ಲಿ ಬದುಕಬೇಕಾಗುತ್ತದೆ. ಇಂಥ ವಯಸ್ಸು ಹೋದ ಬಡಪಾಯಿ ಸೂಳೆಯರ ಕರುಣಾಜನಕ ಸ್ಥಿತಿಯನ್ನು ರಾಘವಾಂಕ ವರ್ಣಿಸುವ ರೀತಿ ವೇಶ್ಯಾಜೀವನದ ವಿಕೃತ ರೂಪವನ್ನು ಹೇಳುತ್ತದೆ. ಅವರ ಮಾಸಿದ ಉಡುಗೆ, ನೆರೆದ ತಲೆ, ಎವೆ ಉದುರಿದ ಕಣ್ಣು, ಕೊಳೆತ ಹಾಡು ಇವೆಲ್ಲ ಮುದಿವೇಶ್ಯೆಯರ ದಯನೀಯ ಸ್ಥಿತಿಯನ್ನು ವಿವರಿಸುತ್ತವೆ.

ಮಸಿಗಪ್ಪಡವನಡಸಿ ತುಱುಬಿಟ್ಟು ನರೆದಲೆಗೆ
ಮುಸುಕಿಟ್ಟು ಬಿದ್ದ ಪೆರ್ಮೊಲೆಗಳಿಗೆ ಱವಕೆಯಂ
ಸಸಿನೆ ಬಿಗಿದೆವೆಯುದಿರ್ದ ಕಣ್ಗೆ ಕಾಡಿಗೆಯೆಚ್ಚಿ ಸದೆಸೊಪ್ಪನಣಲೊಳಡಸಿ
ಮುಸುಡುಗಾಣದ ತೆರದಿ ಹಿಂದೆ ಸೊಡರಿಟ್ಟು ನೆಱೆ
ನಸಿದ ರಾಗದಿ ಕೊಳೆತ ಹಾಡ ಬಗುಳುತ ಗಂಡು
ವೆಸರು ಸುಳಿಯಲೆ ಬಾರೆನ್ನಾಣೆಯೆಂಬ ಮುದಿಪಾಱರ್ಱಲೊಂದೆಸೆಯೊಳು
(೪-೨೮)

–ಇನ್ನೂ ಮುಂದುವರಿದು ಇವರ ಜರ್ಜರಿತ ದೇಹದ ಅವಸಾನ ರೀತಿಯನ್ನು ಕವಿ ರಾಘವಾಂಕ ಅತ್ಯಂತ ವಾಸ್ತವವಾಗಿ ಬಣ್ಣಿಸುತ್ತಾನೆ. ನೊರಜುಗಣ್ಣು, ನಳಿತ ಮೂಗು, ಎಳಲುವ ತುಟಿ, ಕುರುಟು ಹಲ್ಲು, ಕರಿಯ ಬಾಯಿ, ನಿರಿಗೆಗಟ್ಟಿದ ಗಲ್ಲ, ಮುದುಡಿದ ಮೊಲೆ, ಬಿಗಿದ ಹೊಟ್ಟೆ, ತೆರೆತೆರೆಗೊಂಡ ಒಣಗಿದ ತೊಗಲು, ನಾರುವ ಬಾಯಿ – ಇವೆಲ್ಲ ಮುಪ್ಪಾವಸ್ಥೆಗೊಂಡ ವೇಶ್ಯೆಯರ ಶರೀರದ ವಿಕಳಾವಸ್ಥೆಗಳು. ಒಂದು ಕಾಲಕ್ಕೆ ಎಲ್ಲರ ಆಕರ್ಷಣೆಯ ಕೇಂದ್ರವಾಗಿದ್ದ ಇವರ ದೇಹವೀಗ ಹೀಗೆ ವಿರೂಪಗೊಂಡಿದೆ.

ವೇಶ್ಯಾ ಜೀವನದ ಎಲ್ಲಾ ಬಗೆಯ ಒಳನೋಟಗಳನ್ನು ಇಲ್ಲಿ ರಾಘವಾಂಕ ಕೊಡುತ್ತಾನೆ. ಜಾರೆಯರು ತಮ್ಮ ಪ್ರಿಯಕರರ ಸಂಕೇತಾರ್ಥಗಳನ್ನು ಗ್ರಹಿಸಿ ಅಲ್ಲಿಗೆ ಧಾವಿಸುತ್ತಿದ್ದರು. ಹಿತ್ತಲಲಿ, ಕೊಟ್ಟಿಗೆಯ ಒತ್ತಿನಲ್ಲಿ, ಗೋಡೆಯ ಮರೆಯಲ್ಲಿ, ಸದಿಗೊಂದಿಗಳಲ್ಲಿ. ಕತ್ತಲೆಯ ಮರೆಯಲ್ಲಿ ಮುಳ್ಳು, ತೆವರು, ಕುಳಿಯೆನ್ನದೆ ಓಡಿಬಂದು ಕಾಮದಾಟಕ್ಕೆ ತೊಡಗಿಕೊಳ್ಳುತ್ತಿದ್ದರು. ಕದ್ದು ಮಾತು, ನಸುಚುಂಬನ, ಸೂಸದ ಉಸುರು, ಗಾಸಿನಡದ ಉಗುರು, ಸಡಲಿದ ಉಡುಗೆ – ಇವೆಲ್ಲ ಅವರ ಕಾಮದಾಟದ ಗುರುತುಗಳು. ಹರಿಶ್ಚಂದ್ರ ನಡೆದಿರುವಂತೆ ಅನೇಕ ಬೀದಿಗಳಲ್ಲಿ ಮದ್ಯ ಕುಡಿದು ಹೊಯ್ದಾಡುತ್ತ ಗಲಾಟೆ ಮಾಡುತ್ತಿದ್ದ ಸ್ತ್ರೀಯರನ್ನೂ ಕಂಡನು. ಮದ್ಯ ಕುಡಿದು ಕಡು ಸೊಕ್ಕಿದ ಅವರು ಸೀರೆ ಕಳೆದುಕೊಂಡು ಕಂಕುಳಲ್ಲಿ ಅವಚಿ ಹಿಡಿದು ತೊದಲುತ್ತ ನಡೆದಿದ್ದರು. ಮತ್ತೆ ಕೆಲವರು ಬೈಯ್ಯುತ್ತ, ಹಾಡುತ್ತ, ಎಡಹಿ ಬೀಳುತ್ತ ಡರ್ರನೆ ತೇಗುತ್ತ ಬೀದಿಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರು.

ವೇಶ್ಯೆಯರು ತಾವು ಗಳಿಸಿದ್ದನ್ನು ತಮ್ಮ ಮಗನಿಗೆ ಕೊಡುತ್ತಿದ್ದರೆಂಬುದನ್ನು ರಾಘವಾಂಕ ಉಲ್ಲೇಖಿಸುತ್ತಾನೆ.

> ಕಾಲಕಾಲದೊಳವರ ಕಯ್ಯವೊಡವೆಯ ತಿಂದು
> ಸೂಳೆಸೂಳೆಯ ಮಗಂಗೀವುದೇನಚ್ಚರಿಯೆ (೪–೪೫)

–ಎಂಬ ಪದ್ಯಭಾಗ ಇದನ್ನೇ ಹೇಳುತ್ತದೆ. ಗಳಿಸುವ ಉದ್ದೇಶವನ್ನಿಟ್ಟುಕೊಂಡಿರುವ ವೇಶ್ಯೆಯರು ಖೂಳ ಮೂಳ, ಮೋಟ ಮುಕ್ಕ ಯಾರಾದರೂ ಸರಿಯೆ ಅವರನ್ನು ಕಾಮನೆಂದೇ ಭಾವಿಸುತ್ತಾರೆ. ತಮಗೂ ತಮ್ಮ ಮಕ್ಕಳಿಗೂ ಹಣ ಮಾಡುವ ಉದ್ದೇಶವಿಟ್ಟುಕೊಂಡಿರುವ ವೇಶ್ಯೆಯರು ಯಾರನ್ನಾದರೂ ಆಹ್ವಾನಿಸುವ ಕರುಣಾಜನಕ ಅಸಹಾಯ ಸ್ಥಿತಿ ಅವರ ದುರಂತ ಬದುಕನ್ನೇ ಹೇಳುತ್ತದೆ. ವಿಟರಲ್ಲದೆ ಸಾತ್ವಿಕರಾರೂ ಹಣಿಕಿ ಹಾಕದ ವೇಶ್ಯೆಯರ ಬದುಕಿನ ಬೀದಿಗಳನ್ನು ಪರಿಚಯಿಸುವ ಇಲ್ಲಿಯ ವಿವರಣೆಗಳು ರಾಘವಾಂಕ ಜನಸಾಮಾನ್ಯರಿಗಾಗಿ ತುಡಿಯುವ ರೀತಿಯನ್ನು ಹೇಳುತ್ತವೆ. "ಈ ಕಾವ್ಯದ ನಾಲ್ಕನೆಯ ಸ್ಥಲ ಸಂಪೂರ್ಣವಾಗಿ ಸೂಳಿಗೇರಿಯ ವರ್ಣನೆಗೆ ಮೀಸಲಾಗಿದೆ. ಹರಭಕ್ತನ ಈ ಕಥೆಗೆ ಸೂಳಿಗೇರಿಯ ವರ್ಣನೆ ಅನಗತ್ಯವೆಂದೂ ಕಥಾನಾಯಕನನ್ನು ಇಲ್ಲಿ ಸ್ತುತಿಸುವುದರಲ್ಲಿ ಔಚಿತ್ಯವಿಲ್ಲವೆಂದೂ ಈ ಬಗ್ಗೆ ಕೆಲವು ವಿದ್ವಾಂಸರು ಆಕ್ಷೇಪಿಸಿರುವುದುಂಟು. ಆದರೆ ಜನಜೀವನದ ಒಂದು ಮುಖವನ್ನು ಚಿತ್ರಿಸುವ ಮೂಲಕ ರಾಘವಾಂಕ ನಮಗೆ ಅಂದಿನ ಸಮಾಜವನ್ನು ಅರ್ಥ ಮಾಡಿಕೊಳ್ಳಲು ಉಪಕಾರವನ್ನೇ ಮಾಡಿದ್ದಾನೆ"(ಹರಿಹರ–ರಾಘವಾಂಕ ಮತ್ತು ಜಾನಪದ).

ಬೇಟೆ–ಬೇಟೆಗಾರರು:

ಸಂಸ್ಕೃತಿಯ ಒಂದು ಅಂಗವಾಗಿರುವ ಬೇಟೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡಿರುವವರು ಜನಸಾಮಾನ್ಯರು. ಬೇಟೆಗಾರರ ಬೇಟೆಯ ಜೀವನವನ್ನು ಹರಿಶ್ಚಂದ್ರ ಕಾವ್ಯದಲ್ಲಿ ವಿವರಿಸುವ ಅವಕಾಶವನ್ನು ರಾಘವಾಂಕನು ಕಲ್ಪಿಸಿಕೊಂಡಿದ್ದಾನೆ. ಹರಿಶ್ಚಂದ್ರನನ್ನು ಅನೃತನನ್ನಾಗಿ ಮಾಡಲು

ವಿಶ್ವಾಮಿತ್ರನು ಪಣತೊಟ್ಟ ವಿಷಯ ೩ನೆಯ ಸಂಧಿಯಲ್ಲಿದೆ: ಮುಳಿದು ಮೃಗ ಸಂಕುಲಗಳನ್ನು ಹುಟ್ಟಿಸಿ ನಾಡ ಬೆಳೆಗಳನ್ನು ಕೆಡೆಸಿ ಉಂಟಾದ ಕೇಡಿಗೆ ಬೆಂಡಾದ ಜನ ಶಕ್ತಿಗುಂದಿ ಸೈರಿಸಲಾರದೆ ಅರಸನಲ್ಲಿಗೆ ಬಂದು ಹುಯ್ಯಲಿಡಲಾಗಿ ಅವರ ಕೇಳಿಕೆಗನುಸರಿಸಿ ಭೂಪಾಲನು ಬೇಟೆಗೆ ಹೊರಟರೆ ಅವನನ್ನು ತನ್ನ ಆಶ್ರಮಕ್ಕೆ ಬರುವಂತೆ ಮಾಡಿ ಅವನ ಸತ್ಯಗಿತ್ಯದ ಬಲುಹನು ನೋಡುವುದಾಗಿ ವಿಶ್ವಾಮಿತ್ರನು ನಿರ್ಧರಿಸಿದನು. (೩-೧೧)

ವಿಶ್ವಾಮಿತ್ರನೆಂದುಕೊಂಡಂತೆ ಕಾಡುವ ಮೃಗಗಳು ಸೃಷ್ಟಿಗೊಂಡವು. ಬೇಟೆಗೆ ಮುನ್ನ ಕಾಡು ಪ್ರಾಣಿಗಳಿಂದ ಜನರಿಗೊದಗಿದ ಕಷ್ಟವನ್ನು ಕವಿ ಹೇಳುತ್ತಾನೆ.

ಮೊಳೆವ ಬೀಜವನು ಕ್ರಿಮಿಕೀಟಕಂಗಳು ಸಸಿಯ
ನೆಳೆ ಹುಲ್ಲೆಗಳು ಹೊಡೆಯನೆರಳೆಗಳು ಸವಿದಂಟು
ಗಳನಾವುಗಳು ತೆನೆಗಳಂ ಗಿಳಿನವಿಲು ಕೊಂಟೆ ಮೊದಲಾದ ಖಗತತಿಗಳು
ಉಳಿದ ಬೆಳೆಯಂ ನಕುಲ ಹೆಗ್ಗಣಂಗಳು ಕಾವ
ಬಳವಂತರೆಲ್ಲರಂ ಸರ್ಪಸಂತತಿ ತಿಂದು
ತಳಪಟಂ ಮಾಡಿ ನಾಡೆಲ್ಲಮಂ ಗೋಳಿಸುತಿರ್ದುವೇವಣ್ಣಿಸುವೆನು (೩-೫೯)

–ಇಷ್ಟಲ್ಲದೆ ದಾರಿಯ ಜನರನ್ನು ಕರಡಿ ಕಾಡುಕೋಣಗಳು ಕೊಂದು ನಾಡಿನಲ್ಲಿ ಹಾಹಾಕಾರವೆದ್ದಿತು. ಇದು ಆಗೀಗ ಜನಸಾಮಾನ್ಯರು ಎದುರಿಸುವ ತೊಂದರೆಯೇ. ತಮ್ಮದೇ ಆದ ಜೀವನರೂಪಿಸಿಕೊಂಡು ಸುಖವಾಗಿ ಬದುಕಬೇಕೆನ್ನುವ ಜನರಿಗೆ ಇಂತಹ ಅಘಾತಗಳೂ ಬಂದೊದಗಿ ಗಾಸಿಪಡುವಂತಾಗುತ್ತದೆ. ಇಂತಹ ಅನಿರೀಕ್ಷಿತ ಕಷ್ಟ ನಷ್ಟಗಳೂ ಜನಸಾಮಾನ್ಯರ ಸಾಂಸ್ಕೃತಿಕ ಬದುಕಿನ ಒಂದು ಭಾಗವೇ ಆಗುತ್ತವೆ.

ಬೇಟೆಗೆ ಹೊರಟ ರಾಜನು ಮೊದಲು ಬೇಡರನ್ನು ಕರೆಯಿಸಿಕೊಳ್ಳುತ್ತಾನೆ. ಅವರ ರೂಪ ವರ್ಣನೆಯಿದು.

ಕಾರೊಡಲು ಮೇಗಡರ್ದ ಮೆಯ್ನವಿರು ಕೆಂಗಲಿಪ
ತೋರಗಣ್ ಕೆಮ್ಮೀಸೆ ಗುಜುಱು ಬಳೆದ ಕಾ
ಳೋರಗನನೇಳಿಸುವ ತೋಳ್ನಾರಿ ಹೊಡೆದೊಡೆದ ಹುಣ್ಣು ಮೇಲಣ ಕೈಮೊಡೆ
ಪೇರುರಂ ಕಿಱಿಯನಡು ಕೊಬ್ಬಿದ ಪೆಗಲುಪಿಡಿದ
ಕೂರಂಬುದೀರ್ಘ ದೀರ್ಘ ಧನುವೆರಸಿ ನೆರೆದುದು ಕಾನ
ನಾರಿಗಳೆನಿಪ್ಪ ಶಬರಾಧಿಪರು ಕರ್ಬೊಗೆಯ ಕಾಂತಿಸಭೆಯಂ ಮುಸುಕಲು(೫-೨)

– ಗುಡ್ಡ ಬೆಟ್ಟಗಳ ತುಂಬ ಅಲೆದಾಡಿ ಬಿಸಿಲಿನಲ್ಲಿ ಬೇಟೆಯಾಡುವ ಬೇಟೆಗಾರರ ಶರೀರದ ಕಪ್ಪುಬಣ್ಣ. ಪ್ರಾಣಿಗಳನ್ನು ಎದುರಿಸಿ ಹೊಡೆಯಲೆಂದಿರುವ ದಷ್ಟಪುಷ್ಟ ಅಂಗಾಂಗಗಳು ಯಥಾವತ್ತಾಗಿ ಚಿತ್ರಿತವಾಗಿವೆ ಇಲ್ಲಿ. ಮನೆ ಮಾರಿನ ಕೆಲಸ ಮಾಡಿಕೊಂಡಿರುವ ನಾಗರಿಕ ಲೋಕದವರ ಸುಕುಮಾರ ದೇಹ ಬೇರೆ. ಬೇಟೆಯಂತಹ ಶ್ರಮದ ವೃತ್ತಿಯನ್ನು ಕೈಕೊಂಡಿರುವ ಬೇಟೆಗಾರ ದೇಹ ಬೇರೆ. ಅಂತೆಯೇ ಬೇಟೆಗಾರರ ರೂಪ ವರ್ಣನೆಯಲ್ಲಿ ಸಹಜತೆಯಿದೆ.

ಬೇಟೆಗಾರರ ವೃತ್ತಿ ಸಹಚರ್ಯವಿರುವುದು ನಾಯಿಗಳೊಂದಿಗೆ. ತಮ್ಮ ಜೀವನ ಸಂಗಾತಿಗಳೆನಿಸಿರುವ ಇವುಗಳನ್ನು ಬೇಡರು ಕೇವಲ 'ನಾಯಿ' ಎಂದು ಕರೆಯುವುದಿಲ್ಲ; ಅವುಗಳಿಗೆ ಒಂದೊಂದು ಬಿರುದು ಕೊಟ್ಟು ಆ ಹೆಸರಿನೊಂದಿಗೇ ಕರೆಯುವುದು ರೂಢಿ. ಈ ಬಿರುದುಗಳೋ ಒಂದೊಂದು ದುರ್ಬಲ ಪ್ರಾಣಿಯನ್ನು ಎದುರಿಸಿ ಗೆಲುವನ್ನು ಸಾಧಿಸುವ ಹೆಸರುಗಳು ಕೆಲವಾಗಿವೆ. ಇನ್ನು ಕೆಲವು ಬಲಿಷ್ಠ ಪ್ರಾಣಿಗಳೊಂದಿಗೆ ಹೋಲಿಕೆ ಪಡೆಯುವ ಹೆಸರುಗಳಾಗಿವೆ. ಹರಿಣದಲ್ಲಣ, ಹುಲಿಬಾಕ, ಸೂಕರ ಮೃತ್ಯು, ಸಾರಂಗಮರ್ದನ ಕಾಳ್ಕೋಣ ಕಂಟಕ, ಭಲ್ಲೂಕ ಮಲ್ಲ ಎಂಬ ಬಿರುದುಗಳು ಎಷ್ಟೊಂದು ಅರ್ಥವತ್ತಾಗಿವೆ ಎಂಬುದು ಗಮನಾರ್ಹ. ಹಾಗೇ ಕರಿಸಿಂಹ, ಸಿಂಹಪ್ರಕರ ಶರಭ, ಶರಭ ಭೇರುಂಡ ಎಂಬ ಬಿರುದುಗಳೂ ಅಷ್ಟೇ ಸಶಕ್ತವಾಗಿವೆ. ನಾಯಿಗಳಿಗೆ ಇಟ್ಟಿರುವ ಬಿರುದಾವಳಿಗಳಲ್ಲಿ ವ್ಯಕ್ತವಾಗುವ ಬೇಟೆಗಾರರ ಪ್ರೀತಿ ಅನನ್ಯವಾದುದು. ದಿನವೂ ಬೇಟೆಯಾಡುತ್ತ ಕಾಡುಪ್ರಾಣಿಗಳೊಂದಿಗೆ ಸೆಣಸುವ ನಾಯಿಗಳ ಪರಾಕ್ರಮ ಬೇಡರಿಗೆ ಬಹು ಇಷ್ಟವಾದುದು. ಇವುಗಳ ಈ ಬಗೆಯ ಪರಾಕ್ರಮವೇ ತಮಗೆ ಅನ್ನ ತರುವಂತಹದು ಎಂಬ ಅರ್ಥವ್ಯಾಪ್ತಿಯ ಹಿನ್ನೆಲೆಯಲ್ಲಿ ಬೇಡರು ತಮ್ಮ ನಾಯಿಗಳಿಗೆ ಇಟ್ಟ ಹೆಸರು ಅರ್ಥಪೂರ್ಣವೆನಿಸುತ್ತದೆ. ಪ್ರಾಣಿ ಜಗತ್ತಿನೊಂದಿಗೆ ಜನಪದರು ಇಟ್ಟುಕೊಂಡಿರುವ ಪ್ರೀತಿ–ಪೂರ್ವಕ ಅವಿನಾಭಾವ ಸಂಬಂಧಕ್ಕೆ ಇಲ್ಲಿಯ ಬಿರುದುಗಳು ಸಂಕೇತವಾಗುತ್ತವೆ.

ಬೇಟೆಗಾರರು ಬೇಟೆಗೆ ಹೊರಟರೆ ಅವರಿಗೆ ಬೇಟೆಯಾಡಲು ಬಗೆ ಬಗೆಯ ಸಾಧನಗಳು ಬೇಕು. ತಡಿಕೆ, ಗಳ, ಬಲೆ, ಬಿಲ್ಲು, ಸರಳು, ನಾಯ್, ಕೊಡತಿ, ಕತ್ತಿ, ಬಡಿಕೋಲ್, ಕಲ್ಲಿ ಮುಂತಾದ ಸಾಧನಗಳು ಅವರ ವೃತ್ತಿ ಜೀವನಕ್ಕೆ ಸಹಕಾರಿಯಾಗಿವೆ. ರಾಘವಾಂಕ ಹೇಳುವ ಬಲೆಯ ವೈವಿಧ್ಯವಂತೂ ಅವನ ಜಾನಪದ ಜ್ಞಾನವನ್ನು ತಿಳಿಸಿಕೊಡುತ್ತದೆ.

ತಡಿಕೆವಲೆ	ತಟ್ಟಿವಲೆ	ಹಾಡುವಲೆ	ಬೀಸವಲೆ
ಕೊಡತಿವಲೆ	ಕೋಲುವಲೆ	ತಳ್ಳಿವಲೆ	ಬಳ್ಳಿವಲೆ
ತೊಡಕುವಲೆ	ತೋರುವಲೆ	ತೊಟ್ಟಿವಲೆ	ಗೂಟವಲೆ
ವಣ್ಣಿವಲೆ	ಕಾಲುವಲೆ	ಸಿಡಿವ ವಲೆ	ಸಿಲುಕುವಲೆ
ಹಾರುವಲೆ	ಜಾವಲೆ	ಬಡಿಗೆವಲೆ	ಬಾಚುವಲೆ
ಗಾಢವಲೆ	ಗೂಢವಲೆ	ಮಡಿಕೆವಲೆ	ಮಂದಸಿನವಲೆ

–ಎಂದೆಲ್ಲ ಹೆಸರು ಪಡೆದಿರುವ ಈ ಬಗೆ ಬಗೆಯ ಬಲೆಗಳನ್ನು ಇಂದು ಗುರುತಿಸುವುದು ಕಷ್ಟ. ಕ್ರಮೇಣ ಮರೆಯಾಗುತ್ತಿರುವ ಬೇಟೆಗಾರಿಕೆಯ ಸಂಗಡ ಬೇಟೆಗೆ ಪೂರಕವಾದ ಸಲಕರಣೆಗಳೂ ಮರೆಯಾಗುತ್ತವೆ. ಇಲ್ಲಿ ಹೆಸರುಗೊಂಡಿರುವ ಬಲೆಗಳಸ್ವರೂಪ ಮತ್ತು ಉಪಯೋಗಗಳನ್ನು ಗುರುತಿಸುವುದು ಕಷ್ಟ ಅಥವಾ ಬೇರೊಂದು ಅಧ್ಯಯನವನ್ನೇ ಇದು ಬಯಸುತ್ತದೆ.

ಬೇಡರು ಬೇಟೆಯಾಡಲು ಕಾನನದೊಳಕ್ಕೆ ಹೊಕ್ಕರೆ ಆಗುವ ಕೋಲಾಹಲ ಕಾನನವನ್ನು ತುಂಬಿಬಿಡುತ್ತದೆ. ಬೇಟೆಯಾಡುತ್ತಿರುವ ಬೇಡರ ಕೂಗಾಟವನ್ನು ಕವಿ ರಾಘವಾಂಕ ಹಿಡಿದಿಟ್ಟ ರೀತಿಯಿದು.

ಹಿಡಿ ನವಿಲವಿಜೆ ಹುಲಿಯನಟ್ಟು ಮರೆವಿಂಡ ದರಿ
ಗೆಡಹು ಕರಿಯಂ ಬಿ ಮವಿಡಿದ ಹಂದಿಗೆ ತಡವಿ
ಬಿಡು ನಾಯನೆಚ್ಚೆರಳೆಯಂ ಕಲ್ಲಲಿಕ್ಕು ಕೋಣನನು ಹೊಜಿ ಹೋಗಲೀಯದೆ
ಹೊಡೆಯುಡುವ ಮಜೆವಿಡಿದು ಕುತ್ತು ಕೋಣನ ನೊಯ್ಯ
ನಿಡು ಮೊಲನ ಮರಚು ಸಿಂಹವ ಹಲವು ಬಗೆಗೆದಜೆ
ನಡೆಗೆಡಿಸು ಹಕ್ಕಿಗಳನೆಂಬ ಬೇಡರ ಬೊಬ್ಬೆಯಿಂದಡವಿ ಘೀಳಿಟ್ಟುದು (೫-೨೩)

-ಬೇರೆ ಬೇರೆ ಮೃಗ-ಖಗಗಳನ್ನು ಬೇಟೆಯಾಡುತ್ತ ಹೊರಟಂತೆ ಅವರ ಉತ್ಸಾಹ ಚೀರಾಟಗಳು ಕಣ್ಣು - ಕಿವಿಗಳೆರಡನ್ನೂ ತುಂಬುತ್ತವೆ. ನಡೆವದನಿ, ಹರಿವದನಿ, ಕರೆವ ದನಿ, ಬಿಲ್ಲ ಜೇವೊಡೆವ ದನಿ, ಏಸುವ ದನಿ, ಬೈವದನಿ................. ಹೀಗೆಲ್ಲ ಕಾನನವನ್ನು ತುಂಬಿರುವ ದನಿಗಳ ಸ್ವಭಾವೋಕ್ತಿ ರಾಘವಾಂಕನ ಬೇಟೆ ಬದುಕಿನ ವಾಸ್ತವ ಪರಿಜ್ಞಾನವನ್ನು ದಟ್ಟವಾಗಿಯೇ ಪರಿಚಯಿಸುತ್ತದೆ. ಬೇಟೆಯ ಸಮಯದಲ್ಲಿ ತಮ್ಮಷ್ಟಕ್ಕೆ ತಾವೇ ಆವೇಶ ತುಂಬಿಕೊಳ್ಳುತ್ತ ಕೋಲಾಹಲ ನಿರ್ಮಿಸಿಕೊಳ್ಳುವ ಬಗೆ ಮನಃಶಾಸ್ತ್ರೀಯ ಹಿನ್ನೆಲೆಯಲ್ಲಿ ಅಧ್ಯಯನ ಯೋಗ್ಯವಾದುದು.

ವಿಶ್ವಾಮಿತ್ರ ಸೃಷ್ಟಿಸಿದ ಹಂದಿಯನ್ನು ಬೆನ್ನಟ್ಟಿ ಬೇಟೆಗಾರರು ಓಡಾಡುವ ಪರಿಯಂತೂ ಚಿತ್ರವತ್ತಾಗಿದೆ. ಹಂದಿಶಬರ ತಂಡದ ಮೇಲೆ ದಾಳಿಯಿಟ್ಟು ಹಿಂಸಿಸಿದ ಬಗೆ ಬೇಟೆಯ ಕಷ್ಟವನ್ನು ವಿವರಿಸುತ್ತದೆ. ಶಬರ ವೀರರ ಮೇಲೆ ಒಂದೇ ಸಮನೆ ದಾಳಿ ಮಾಡಿದ ಹಂದಿ ಸ್ವಲ್ಪ ವಿಶ್ರಮಿಸಿಕೊಂಡು ಮತ್ತೆ ಬೇಟೆಗಾರರ ಮೇಲೆ ದಾಳಿ ಮಾಡಿತು. ಬೇಟೆಗಾರರ ಹೊಟ್ಟೆಯನ್ನು ಹರಿದು ಬಿಸಿನೆತ್ತರವನ್ನು ಕುಡಿಯಿತು. ಬೆನ್ನ ಮೂಳೆಯನ್ನು ಕಡಿದು ಕರುಗಳನ್ನು ಎಳೆದಾಡಿ ತೊಡೆಯ ಮಾಂಸವನ್ನು ತಿಂದಿತು. ಮತ್ತೆ ದಣ್ಣನೆ ದಣಿದ ಮೂಗರಳಿಸಿ ಜೋರಾಗಿ ಉಸಿರೆಳೆದುಕೊಳ್ಳುತ್ತ ಹೊದರಿನ ಕಡೆಗೆ ಹೋಯಿತು. (೬-೧೫,೧೬). ಅಲ್ಲಿಯೇ ಅಡಗಿಕೊಂಡಿದ್ದ ಬೇಡನೊಬ್ಬ ಬಂದ ಹಂದೆಗೆ ಹೆದರಿ ಓಡಿದ ಪರಿ ಪ್ರಸಿದ್ಧವಾದುದು; ಬಿಟ್ಟ ತಲೆ, ಗಿಡಗಂಟೆಗೆ ತಾಕಿ ಹರಿದ ಉಡುಗೆ, ಕಾಡ ಮುಳ್ಳು ನೆಟ್ಟು ಕುಂಟುವ ಕಾಲು ತೇಕುವ ಅಳ್ಳೆಗಳೊಂದಿಗೆ ಕೆಟ್ಟೋಡಿ ಬರುತ್ತಿರುವ ಆವನನ್ನು ಕಂಡವನೊಬ್ಬ ತಡೆದು ಕೇಳಿದರೆ "ಹುಹುಹು ಹುಲಿಯಲ್ಲ ಹಂದಿ ಅಟ್ಟಿ ಬರುತ್ತಿದೆ." ಎಂದ "ಎಲ್ಲಿ ತೋರಿಸು ಎಂದು ಅವನೆಂದರೆ ಇವನು ನೀವೇ "ಅರಸಿಕೊಂಬುದು" ಎಂದ (೬-೧೭) ಹೆದರಿದ ಬೇಡನ ಸ್ಥಿತಿಯನ್ನು ಇದಕ್ಕಿಂತ ಪರಿಣಾಮಕಾರಿಯಾಗಿ ಕೊಡುವುದು ಕಷ್ಟ.

ಬೇಡರ ಬೇಟೆಯಲ್ಲಿ ಕೇವಲ ಮೃಗಗಳಿಲ್ಲ; ತರತರದ ಪಕ್ಷಿಗಳೂ ಹಲವು ಬಗೆಯ ಮೀನುಗಳೂ ಇವೆ.

ಬೇಟೆಗೊಳಗಾದ ಪಕ್ಷಿಗಳು:

ಕಾಗೆ	ನವಿಲು	ಗುಬ್ಬಿ	ಇಬ್ಬಾಯ
ಪಾರಿವಾಳ	ಕೊಂಚೆ	ಗೂಗೆ	ಗಂಟಿಗ
ಕಿರುಬ	ಗೊರವ	ಗಿಳಿ	ಹರಡೆ
ಹಸುಬ	ಹಿಸುಣ	ಹೆಬ್ಬಕ್ಕಿ	ಗಿಡುಗ

ಶಕುನಿ	ಮೂಗ	ಜಾಗರಿಗ	ಬೆಳ್ಳಕ್ಕಿ
ವಲಿಯ	ಚಿಟ್ಟಿ	ಹದ್ದು	

ಮೀನುಗಳ ವೈವಿಧ್ಯತೆ:

ಸೀಗುಡಿ	ಕುಚ್ಚು	ಹಣ್ಣಲು	ಬಸಿಗ
ಗಿರಿಲು	ಬಂಗಡೆ	ಹಾವು	ಕುಕಿಲು
ಹೆಗ್ಗರಿ	ಗಣೆ	ಮಣಿಗಣ್ಣ	ತೂತು
ತೆಂತಲು	ಸಿಸಿಲು	ಬೊಂಪು	ಸವಿವಾಯ
ಗೊದಳೆ	ಕಾಗೆಂಡೆ	ಅಯ್ಯರಗ	ದೊಂಡಿ
ಕೆಂಗರಿ	ಹರಳು	ಹಾರುವ	ಹಿರಿಯ
ಷಡುಸಕ್ಕರಿಗ	ನಿರಿಲು	ಹಂದೆಗ	ಅನೆಮೊಗ
ಬಿಳಿಚ	ಟಿಪ್ಪಲು	ಮಲಗು	ಹೆಮ್ಮಲಗು
ಬಿಳಿಯಾನೆ	ಮಳಲಿ	ಕೂಡಿಲು	ಚಕ್ರಗೆಂಡೆ
ಆವೆಗ	ನವಿಲು	ಇಳಿಯಂಬು	ಕುರಿದಲೆಗ
ಹೆಮ್ಮೀನು	ಕೆಮ್ಮೀನು	ಮುಕ್ಕಣ್ಣನಾರೆ	ನಿರಿಲು
ಕುಳಿಚು	ಸೂಜಿಗ	ನಗಲು	ಹೆಲ್ಲರ
ಬಂಕುರು	ಹಳಲೆ	ಕಪ್ಪೆಗಳೊರಲೆ	ಬೋಟೆ

ಮೀನುಗಳನ್ನು ಹಿಡಿಯಲು ಬಗೆಬಗೆಯ ದಾಳಗಳನ್ನು ಬಳಸಲಾಗುತ್ತಿತ್ತು. ಈ ದಾಳಗಳು ಪ್ರಧಾನವಾಗಿ ಇಱೆಗೂಳಿ, ಹೆಗ್ಗೂಳಿ, ಕಿಱುಗೂಳಿ – ಎಂದು ಮೂರು ಹೆಸರನ್ನು ಪಡೆದಿದ್ದವು.

ಬೇಟೆಗಾರರ ತಂಡದಲ್ಲಿ ಶಬರಿಯರೂ ಇದ್ದರು. ಬೇಟೆ ಸಂದರ್ಭದಲ್ಲಿ ಅವರ ಪಾತ್ರವೂ ಇದೆಯೆಂಬುದನ್ನು ರಾಘವಾಂಕನು ಉಲ್ಲೇಖಿಸಿದ್ದಾನೆ. ಹೀಲಿ, ತಳಿರು, ಕೇದಗೆ, ಹೂವಿನೆಸಳು, ದಂತ ಇವೇ ಮುಂತಾದವುಗಳು ಇವರ ವೇಷ, ಆಭರಣಗಳಾಗಿರುವುದನ್ನು ಪದ್ಯವೊಂದರಲ್ಲಿ ಬಣ್ಣಿಸಲಾಗಿದೆ; ಇಲ್ಲಿ ಇವರ ಹಾಡೂ ತುಂಬಿದೆ.

ಓವಿ ಹೀಲಿಯನುಟ್ಟು ತಳಿರ ಮೇಲುದನುರಕೆ
ತೀವಿ ಗುಂಜಾಭರಣಮಂ ತೊಟ್ಟು ಕೇದಗೆಯ
ಹೂವಿನೆಸಳೋಲೆಯಂ ತಿರುಪಿ ಶಿಲೆಯೊರಳಿಕ್ಕಿ ದಂತದೊನಕೆಗಳನಿತು
ಸುವ್ವಿ ನಲ್ಲನೆ ಸುವ್ವಿಸುವ್ವಿ ಕಾನನ ವಿಜಯ
ಸುವ್ವಿ ಬಲುಬಿಲುಗಯ್ಯ ಸುವ್ವಿ ಮೃಗಕುಲ ಮಥನ
ಸುವ್ವಿಯೆಂದಲ್ಲಿಯ ಪುಳಿಂದಿಯರು ಪಾಡಿಚಳೆಸಿದರು ಜಿದಿರಕ್ಕಿಗಳನು (೫–೩೩)

ಬೇಡತಿಯರು ಆಯ್ದುತಂದ ಬಿದಿರಕ್ಕಿಗಳನ್ನು ಕುದಿಸಲಾಗುತ್ತಿತ್ತು. ಸಂಗಡವೇ ಮೃಗ ಮಾಂಸವನ್ನು ಹದವಾಗಿ ಅಟ್ಟು ಅದಕ್ಕೆ ಸಂಬಾರವನ್ನು ಹಾಕಿ ತುದಿಬೆರಳಿನಿಂದ ಉಪ್ಪನ್ನು ಬೆರೆಸಲಾಗುತ್ತಿತ್ತು. ತರುವಾಯ ಬೇಡರೆಲ್ಲರೂ ದುಂಡಗೆ ಕುಳಿತುಕೊಂಡು ಊಟ ಮಾಡುತ್ತಿದ್ದರು. ನಂತರ ತಾಂಬೂಲ ಹಾಕಿಕೊಂಡು ಬೇಟೆಗೆ ಸಿದ್ಧರಾಗುತ್ತಿದ್ದರು. ಬೇಡಪಡೆಗೆ ಊಟವನ್ನು ಸಿದ್ಧಪಡಿಸುವುದಲ್ಲದೆ ಶಬರಿಯರು ಬೇಟೆಯಲ್ಲಿಯೂ ಭಾಗವಹಿಸುತ್ತಿದ್ದರು(೫-೩೪, ೩೮).

ಬೇಡ ಪಡೆಗೆ ಜೀವನಾಧಾರವಾಗಿರುವ ಅರಣ್ಯವೂ ಅವರ ಸಂಸ್ಕೃತಿಯ ಒಂದು ಭಾಗವೇ. ಬೇಡ ಪಡೆಯೊಂದಿಗೆ ಹರಿಶ್ಚಂದ್ರನು ಬೇಟೆಗೆ ಹೊರಟರೆ ಎದುರಾದ ಸಸ್ಯ ಸಂಕುಲವನ್ನು ಕವಿ ಒಂದೊಂದಾಗಿ ಹೆಸರಿಸುತ್ತಾನೆ(೫-೧೫, ೧೬).

ಜಾಲಿ	ಆಲ	ನೆಲ್ಲಿ	ಚೆನ್ನೆಲ್ಲಿ
ಕಡವಡವ	ಹಾಲೆ	ಅಂಕೋಲೆ	ದಿಂಡಗ
ತಂಡಸೆರ	ಅರಳಿ	ಬೇಲ	ವರುಟಾಳ
ಹಲಸು	ಎಲವ	ಕಿರಿನಂದಿ	ಚಂದನ
ಕಕ್ಕೆ	ಬಿಕ್ಕೆ	ತರಿಯ	ಹೂಲಿ
ಮಾಲಿನಿ	ಬನ್ನಿ	ಹೊನ್ನೆ	ಸೊಗಡಗಿಲು
ಕಿತ್ತಾಳೆ	ಹೆಬ್ಬಾಳೆ	ಔದುಂಬರ	ತುಂಬುರಿ
ತಡಸು	ಕೆಂದೆರಿ	ತೆಂಗು	ಸಂಗು
ಕೇದಿಗೆ	ಕದಳಿ	ನೆಲ್ಲಿ	ಚಿಲ್ಲ
ಬಿಲ್ವ	ರುದ್ರ	ನಡುವು	ತಂಡಸು
ತಪಸು	ತಾರಿ	ಕೆಂಗು	ತಿರುಳಿ
ತಗ್ಗಿ	ತುಗ್ಗಿಲು	ತುಂಬರ	ಬೀಡೆ
ತೊಟ್ಟಿ	ಹಾರವಾಳ	ಹುಣಸೆ	ಖರ್ಜೂರ
ಮಾವು	ಬೇವು	ಮಂದಾರ	

-ರಾಘವಾಂಕ ಕೊಡುವ ಸಸ್ಯ ಹೆಸರಿನ ಈ ಪಟ್ಟಿ ನೋಡಿದರೆ ಅವನ ಲೌಕಿಕ ಜ್ಞಾನದ ಅರಿವಾಗುತ್ತದೆ. ನಮ್ಮ ಸಂಸ್ಕೃತಿಗೆ ಅರಣ್ಯವೆಂಬುದು ಕೇವಲ ನಿರ್ಜೀವ ವಸ್ತುವಲ್ಲ. ರಾಘವಾಂಕನು ಅರಣ್ಯಕ್ಕೆ ಸ್ತ್ರೀರೂಪ ಧಾರಣೆ ಮಾಡಿ ಅವಳನ್ನು 'ವಿಪಿನ ಮಾನಿನಿ ಎಂದು ಕರೆದಿರುವುದು ಔಚಿತ್ಯಪೂರ್ಣವಾಗಿದೆ(೫-೧೩). ಅರಣ್ಯವನ್ನು ಉಳಿಸಿ ನಾಡನ್ನು ರಕ್ಷಿಸಿಕೊಳ್ಳಬೇಕೆಂಬ ನಾಗರಿಕ ಪರಿಜ್ಞಾನ ತೀರ ಹೊಸದೇನೂ ಅಲ್ಲ. ಗಿಡ ಮರಗಳನ್ನು ದೇವರೆಂದು ಭಾವಿಸಿ ಪೂರ್ವಕಾಲದಿಂದಲೂ ಪೂಜಿಸಿಕೊಂಡು ಬಂದ ಪರಂಪರೆ ಜಾನಪದ ವಲಯದಲ್ಲುಂಟು. ಗಿಡಮರಗಳಿಗೆ ಬಟ್ಟೆಸುತ್ತಿ ಅರಿಷಿಣ, ಕುಂಕುಮ ಹಚ್ಚುವುದು, ಮರಕ್ಕೆ ತೊಟ್ಟಿಲು ಕಟ್ಟುವುದು (ತೊಟ್ಟಿಲು ಮರದವ್ವ)ಇದೇ ಸಂಕೇತಾರ್ಥದಲ್ಲಿ. ಅಂತೆಯೇ ರಾಘವಾಂಕ ಸಸ್ಯ

ವಿಷಯದಲ್ಲಿ ಇಟ್ಟುಕೊಂಡಿರುವ ಪ್ರೀತಿ, ಪೂಜ್ಯತೆ, ಪರಿಜ್ಞಾನಗಳು ಗಮನಾರ್ಹವೆನಿಸುತ್ತವೆ; ಈ ನಿಟ್ಟಿನಲ್ಲಿ ಪರಿಸರ ಪ್ರೇಮಿಯಾದ ರಾಘವಾಂಕನನ್ನು ಮನಃ ಪೂರ್ವಕವಾಗಿ ಅಭಿನಂದಿಸಬೇಕಾಗುತ್ತದೆ.

ಬೇಟೆ ಸಂದರ್ಭದ ಎಲ್ಲಾ ಮುಖಗಳು, ಬೇಟೆಗಾರರ ನಡುವಳಿಕೆಗಳು ಕಾವ್ಯದ ೫ ಮತ್ತು ೬ನೆಯ ಸಂಧಿಯಲ್ಲಿ ಸಾಂದ್ರಗೊಂಡಿವೆ. ಕಾಡುವ ಕಾಡು ಮೃಗಗಳು ಅವುಗಳ ಬೆಂಬತ್ತಿ ಓಡಾಡುವ ಬೇಡರ ಧೈರ್ಯ, ಅಪರೂಪಕ್ಕೆ ತೋರುವ ಅವರ ಪುಕ್ಕಲುತನ, ಬೇಡರು ಸಂಚರಿಸುವ ಅರಣ್ಯ ಪರಿಸರ ಇವೆಲ್ಲ ಸಂಸ್ಕೃತಿಯ ಭಾಗವೆನಿಸಿರುವ ಬೇಟೆ ಬದುಕಾಗಿ ಕಾವ್ಯದಲ್ಲಿ ವಿಶದಗೊಂಡಿದೆ.

ಪರಿಶಿಷ್ಟ ಸಮುದಾಯ:

ಹರಿಶ್ಚಂದ್ರ ಕಾವ್ಯದಲ್ಲಿ ಪರಿಶಿಷ್ಟ ಸಮುದಾಯ ಸಂಸ್ಕೃತಿ ವಿಶೇಷವಾಗಿ ತೋರ್ಪಟ್ಟಿದೆ. ಹರಿಶ್ಚಂದ್ರ ಮಹಾರಾಜನು ಪರಿಶಿಷ್ಟ ಸಮುದಾಯಕ್ಕೆ ಸೇರಿದ ವೀರ ಬಾಹುಕನಲ್ಲಿ ಸೇವಕನಾಗಿ ನಿಂತಿದ್ದರಿಂದ, ಅವನು ಸುಡುಗಾಡನ್ನು ಕಾಯುವ ಪ್ರಸಂಗ ಒದಗಿದ್ದರಿಂದ ಒಟ್ಟೂ ಪರಿಸರ ಪರಿಶಿಷ್ಟ ಸಮುದಾಯದ ಚಹರೆಗಳನ್ನು ಪ್ರತಿಬಿಂಬಿಸುತ್ತದೆ.

ಹರಿಶ್ಚಂದ್ರನು ತನ್ನನ್ನು ಮಾರಿಕೊಳ್ಳಬೇಕೆಂದು ಕಾಶಿಯ ಬೀದಿಗಳಲ್ಲಿ ನಡೆಯುತ್ತಿದ್ದರೆ ಹರಿಶ್ಚಂದ್ರನ ಘೋಷಣೆ ವೀರಬಾಹುಕನ ಕಿವಿಗೆ ಬಿದ್ದಾಗ ಹರಿಶ್ಚಂದ್ರನನ್ನು ಕೊಳ್ಳಬಯಸಿದ ಸಂದರ್ಭದಲ್ಲಿ ವೀರಬಾಹುಕ ಪ್ರಕಟಗೊಳ್ಳುತ್ತಾನೆ. ಹಿಡಿದ ಸಂಬಳಿಗೋಲು, ಕಾರೊಡಲು, ಕೆಂಗಣ್ಣು ದಡದಡಿಸುವ ಅಡಿ – ಮುಂತಾದುವೆಲ್ಲ ಅವನ ಭೌತಿಕ ಚಹರೆಯನ್ನು ಹೇಳುತ್ತವೆ.

ಪಿಡಿದ ಸಂಬಳಿಗೋಲು ಕಾರೊಡಲು ಕೆಂಗಣ್ಣು
ಕುಡಿದು ಕೊಬ್ಬಿದ ಬಸುರು ದಡದಡಿಸಿ ತರಹರಿಸು
ವಡಿಯ ಕೆದಱಿದ ತಲೆಯನಡಸಿ ಸುತ್ತಿದ ಮುಪ್ಪುರಿಯ ಬಾರಿಕಡ್ಡಣಿಗೆಯ
ಬಿಡದೆ ಥಟ್ಟನೆ ತೇಗಿ ನೆರವಿಯಂ ಬಯ್ವ ಬಿಱು
ನುಡಿಯ ಕಲಿವೀರಬಾಹುಕ ಬರುತ್ತಂ ಮಾಱು
ವೊಡೆ ಕೊಂಡು ಹೊಂಗೊಡುವೆ ನಾನೆಂದುತನ ಹಡಪಿಗನಿಂದ ಕೇಳಿಸಿದನು

(೧೧–೧೭)

–ವೀರಬಾಹುಕನ ಸ್ವಭಾವ ಕಠಿಣವಾಗಿಯೇ ತೋರುತ್ತದೆ; ಅವನ ಭೌತಿಕ ದೇಹದಷ್ಟೇ ಒರಟಾದುದು ಅವನ ಮನಸ್ಸು. ತನ್ನ ಸುತ್ತಲಿನವರನ್ನು ಬಯ್ಯುವ ಬಿಱುನುಡಿಯುವ ಸ್ವಭಾವ ಶಿಷ್ಟರು ದೂರವಿರಿಸಿದ ಪರಿಸರದಿಂದ ರೂಪುಗೊಂಡದ್ದು. ಶಿಷ್ಟರ ಪಾಲಿಗೆ ಮುಟ್ಟಬಾರದವರೆನಿಸಿ ತಮ್ಮ ಬದುಕನ್ನು ಪ್ರಾಮಾಣಿಕವಾಗಿ ರೂಪಿಸಿಕೊಳ್ಳುವ ಇಂಥವರ ಸ್ವಭಾವ ವಿಶ್ಲೇಷಣೆಗೆ ಬಹಳ ತಡಕಾಡಬೇಕಾದದ್ದೇನೂ ಇಲ್ಲ. ಪರಿಶಿಷ್ಟ ಜಾತಿಯಲ್ಲಿ ಹುಟ್ಟಿದ್ದು ಇವರ ತಪ್ಪಲ್ಲ. ಆದರೂ ಸಾಮಾಜಿಕ ಅನುನಯಗಳಿಗೆ ವಂಚಿತರನ್ನಾಗಿ ಮಾಡಿ ಅಡ್ಡಗೋಡೆಗಳನ್ನು ಮೇಲವರ್ಗದವರು ನಿರ್ಮಿಸಿದ್ದು ಸಾಂಸ್ಕೃತಿಕ ವಿಭಜನೆಯಾಗಿ ತೋರುತ್ತದೆ. ಈ ವಿಭಜನೆಯೇ ಬೇರೊಂದು ಉಪ ಸಂಸ್ಕೃತಿಯನ್ನು ನಿರ್ಮಿಸುತ್ತದೆ. ಆ ಉಪ ಸಂಸ್ಕೃತಿಗೆ ತಕ್ಕ ರೀತಿಯಲ್ಲೇ ಅವರ ಜೀವನ ಕ್ರಮವೊಂದು ಏರ್ಪಡುತ್ತದೆ. ತಾವು ಅವಕಾಶ ವಂಚಿತರಾದದ್ದಷ್ಟೇ ಅಲ್ಲ ಅವಮಾನಗಳಿಗೂ ಪಕ್ಕಾಗುತ್ತ ಬಂದುದು ಪರಿಶಿಷ್ಟರ ಒಳಗುದಿಯಾಗಿ ಅದು

ಆಗೀಗ ವಿಸ್ಫೋಟಗೊಳ್ಳುತ್ತದೆ. ಹೀಗೆ ರೂಪುಗೊಳ್ಳುವ ಇವರ ಗುಣಸ್ವಭಾವಗಳು ಕಠಿಣವೂ ಪ್ರಾಮಾಣಿಕವೂ ಆಗಿ ನಿಲ್ಲುತ್ತವೆ. ಕಠಿಣ ಏಕೆಂದರೆ ತಮ್ಮನ್ನು ಕಾಣುವ ಅಸಮಾನತೆಗೆ; ಪ್ರಾಮಾಣಿಕ ಏಕೆಂದರೆ ತಾವು ಬೆಳೆಯಿಸಿಕೊಂಡ ಸ್ವಾಭಿಮಾನಕ್ಕೆ.

ಉಪಸಂಸ್ಕೃತಿಯೊಂದು ರೂಪಿಸಿಕೊಂಡ ವಿವಿಧ ಆಯಾಮಗಳನ್ನೆಲ್ಲ ಇರುವ ಹಾಗೆಯೇ ವರ್ಣಿಸಿದ್ದು ರಾಘವಾಂಕನ ಹೆಚ್ಚುಗಾರಿಕೆ. ತನ್ನ ಜಾತಿ, ವೃತ್ತಿಗಳನ್ನು ಮೊದ ಮೊದಲು ತಿರಸ್ಕರಿಸಿದ ಹರಿಶ್ಚಂದ್ರನೊಂದಿಗೆ ವೀರಬಾಹುಕ ವಾದ ಮಾಡಿದ, ತನ್ನತನವನ್ನು ಸ್ಪಷ್ಟಗೊಳಿಸಿದ ವಿಷಯವನ್ನು ಈ ಹಿಂದೆಯೇ ನೋಡಲಾಗಿದೆ. ಈಗ ಸಂಸ್ಕೃತಿಯ ಒಂದು ಭಾಗವಾಗಿರುವ ಅವರ ಜೀವನ ವಿಧಾನವನ್ನು ಈಗ ಪರಿಶೀಲಿಸಬಹುದು.

ವೀರಬಾಹುಕನು ಹರಿಶ್ಚಂದ್ರನನ್ನು ಕೊಂಡಾದ ಮೇಲೆ ತಾನು ವಾಸಿಸುವ ಹೊಲಗೇರಿಗೆ ಅವನನ್ನು ಕರೆದುಕೊಂಡು ಬಂದನು. ವೀರಬಾಹುಕನ ಓಣಿ, ಮನೆಯ ಪರಿಸರ ಹೇಗಿತ್ತು ಎಂಬುದನ್ನು ಕವಿ ಬಣ್ಣಿಸುತ್ತಾನೆ.

> ಹೊರಗೆ ಹಾಸಿದ ಹಸಿಯ ತೊಗಲ ಹೊದೆಯ ಮಾಣ
> ದೊಱಲಿ ಕೂಗಿಡುವ ನಾನಾ ಪ್ರಾಣಿ ವರ್ಗಮಂ
> ಕೊಱೆವ ಕೊಚ್ಚುವ ತಱೆವ ಮುಱೆವ ಕಾಸುವ ಕಡಿವ ಸೀಳ್ವ ಹರಡುವ ಹಿಂಡುವ
> ಹಱೆಯದೊಣಗಿಲುಗರಳ ಹಿಳಿಲ ತೋರಣದ ಚ
> ಟ್ಟಱರ ಗೋಡೆಗಳ ರಕುತದ ಹೇಸಿಕೆಯನು ನೇ
> ಸಱುಗುಲನ ಕಾಳಿಜಂ ಕಂಟಣಿಸಬೇಕೆಂದು ನೆರೆಹಿದಂ ನಿಳಯದೊಳಗೆ (೧೧-೩೦)

-ನಾನಾ ಪ್ರಾಣಿಗಳನ್ನು ಕೊರೆಯುವ ಕೊಚ್ಚುವ ತರಿಯುವ, ಮುರಿಯುವ, ಕಾಸುವ, ಕಡಿಯುವ, ಸೀಳುವ ದೃಶ್ಯ ನಿಜಕ್ಕೂ ಬೀಭತ್ಸವಾದುದು. ಹಿಂಸಾ ಮೂಲವಾದ ಇಲ್ಲಿಯ ಕ್ರಿಯೆಗಳೆಲ್ಲ ಇವರಿಗೆ ನಿತ್ಯದ ಸಹಜಕರ್ಮ. ನಮ್ಮಲ್ಲಿ ಹಿಂಸೆ, ಅಹಿಂಸೆಯ ಮಧ್ಯ ತುಂಬ ನಾಜೂಕಾದ ಎಳೆಗಳಿವೆ. ಭೌಗೋಳಿಕ ಪರಿಸರ, ಜನಾಂಗಿಕ ನಂಬಿಕೆಗಳು ಮಾತ್ರ ಹಿಂಸೆ, ಅಂಹಿಸೆಯ ಪರಿಕಲ್ಪನೆಗಳನ್ನು ಸರಿಯಾಗಿ ವ್ಯಾಖ್ಯಾನಿಸಬಲ್ಲವು. ಹಿಂಸೆ ಎನ್ನುವುದು ಕೆಲವರಿಗೆ ಅಧರ್ಮವಾಗಿ ತೋರಿದರೆ ಇನ್ನು ಕೆಲವರಿಗೆ ಅದೇ ಹಿಂಸೆ ಜೀವನ ಧರ್ಮವಾಗಿ ನಿಲ್ಲುತ್ತದೆ. ಈ ಯಾವ ಸೂಕ್ಷ್ಮಗಳನ್ನು ಜನಸಾಮಾನ್ಯರು ಬಲ್ಲವರಲ್ಲ. ಸಾವಿರಾರು ವರ್ಷಗಳಿಂದ ತಮ್ಮ ಹಿರಿಯರು ರೂಢಿಸಿಕೊಂಡು ಬಂದಿರುವ ಜೀವನ ಕ್ರಮವನ್ನು ಮುಂದಿನವರು ಒಪ್ಪಿಕೊಂಡು ಸಾಗಿಬಿಡುತ್ತಾರೆ; ಇಂಥ ಒಂದು ಸಾಂಸ್ಕೃತಿಕ ಒಪ್ಪಂದ ಅವರಿಗೆ ಜೀವನ ಮಾರ್ಗ ಮಾತ್ರ ಆಗುತ್ತದೆ. ಅಲ್ಲಿ ಹೆಚ್ಚಿನ ವಿವೇಚನೆಗೆ ಅವಕಾಶ ಇರುವುದಿಲ್ಲ.

ವೀರಬಾಹುಕ ಹರಿಶ್ಚಂದ್ರನನ್ನು ತನ್ನ ಮನೆಯೊಳಕ್ಕೆ ಕರೆತಂದ ಮೇಲೆ ಅಲ್ಲಿ ಅವನು ತೋರುವ ನಡವಳಿಕೆ ಪರಿಸರದಿಂದುದ್ಭವಿಸಿದ ಫಲಿತ ಅಷ್ಟೇ. ಮನೆಯೊಳಗೆ ಪ್ರವೇಶ ಮಾಡಿದ ವೀರಬಾಹುಕನು ಹಲವು ಬಗೆಯ ಎಲುವು ನರಗಳಿಂದ ಬಿಗಿಯಲ್ಪಟ್ಟ, ಹಸಿದೊಗಲು ಹಾಸಲ್ಪಟ್ಟ ಮಂಚದಮೇಲೆ ಓಲಗವಿತ್ತನು. ಓಲಗ ಎನ್ನುವುದು ದೊಡ್ಡವರ ವಿಷಯದಲ್ಲಿ ಬಳಸುವ ಪದ. ಇಲ್ಲಿ ನನ್ನ ಮನೆಗೆ ನಾನೇ ಒಡೆಯ ಎನ್ನುವ ಠೀವಿಯಿದೆ. ಹೀಗೆ ಮಂಚದ ಮೇಲೆ ಕುಳಿತಕೊಂಡು ವೀರಬಾಹುಕ ಮನುಷ್ಯನ ತಲೆ ಬುರುಡೆಯಲ್ಲಿ ಹಸಿಯ ಗೋಮಾಂಸವನ್ನು ತುಂಬಿಕೊಂಡು ಮದ್ಯವನ್ನು ಕುಡಿಯತೊಡಗಿದನು.

ವೀರಬಾಹುಕನ ನಡುವಳಿಕೆಯಲ್ಲಿ ಯಾವ ಸಂಕೋಚವೂ ಇಲ್ಲ. ತನ್ನ ಎದುರಿನಲ್ಲಿ ಕುಳಿತುಕೊಂಡವನು ತನ್ನ ಸೇವಕ ಎನ್ನುವ ಪರಿಧಿಯಾಚೆಗೆ ಅವನು ಯೋಚಿಸಲಾರ. ಇದು ವೀರಬಾಹುಕನ ಸ್ವಭಾವ ಮಿತಿಯೆಂದು ಕೆಲವರು ವಾದಿಸಬಹುದು. ಇದನ್ನು ಸ್ವಭಾವ ಮಿತಿಯೆನ್ನುವುದಕ್ಕಿಂತ ಅವನ ಸಂಸ್ಕೃತಿ ಅವನನ್ನು ಹಾಗೆ ರೂಪಿಸಿದೆ ಎನ್ನುವುದು ಹೆಚ್ಚು ಸೂಕ್ತ. ಯಾಕೆಂದರೆ ವಿಸ್ತೃತವಾದ ಸಂಸ್ಕೃತಿಯ ಒಡಲಲ್ಲಿರುವ ಹಲವು ಬಗೆಯ ವಿನ್ಯಾಸಗಳು ಎಲ್ಲವನ್ನೂ ನಿಯಂತ್ರಿಸುತ್ತವೆ.

ಸ್ಮಶಾನದಲ್ಲಿ ಹೆಣವನ್ನು ಸುಡುವ ಸಂದರ್ಭದಲ್ಲಿ ಸಾರ್ವಜನಿಕರು ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತಿತ್ತು. ಹರಿಶ್ಚಂದ್ರನು ವೀರಬಾಹುಕನಲ್ಲಿ ಸೇವೆಯನ್ನು ಸ್ವೀಕರಿಸಿದ ಮೇಲೆ ಸ್ಮಶಾನದ ನಿಯಮಾವಳಿಗಳನ್ನು ಬೀದಿಗಳಲ್ಲಿ ಸಾರಿಕೊಂಡು ಹೊರಟನು. ಅವನ ಹೇಳಿಕೆಯ ಪ್ರಧಾನಾಂಶಗಳನ್ನು ಹೀಗೆ ಕ್ರೋಢಿಕರಿಸಬಹುದು:

೧. ಇದು ಸುಡುಗಾಡಿನ ಅಧಿಕಾರಮುದ್ರೆಯ ಕಟ್ಟಪ್ಪಣೆ

೨. ಹೆಣದ ತಲೆಯಕ್ಕಿಯನ್ನು ಸ್ಮಶಾನ ಕಾಯುವವನಿಗೆ ಕೊಡಬೇಕು.

೩. ನೆಲದ ಬಾಡಿಗೆಯ ಹಾಗವನ್ನು ಕೊಡಬೇಕು.

೪. ಶವದುಡಿಗೆಯನ್ನು ಸ್ಮಶಾನ ಕಾಯುವವನಿಗೆ ಕೊಡಬೇಕು.

೫. ಬಾಡಿಗೆಯನ್ನು ಕೊಡದೆ ಮಿಜೆಸುಟ್ಟರೆ ತಡೆದುಶಿಕ್ಷೆಯನ್ನು ಕೊಡಲಾಗುವುದು.

ಸ್ಮಶಾನ ಕಾಯುವವನು ಸ್ಮಶಾನದಲ್ಲಿ ಸುಟ್ಟು ಕರಕಲಾಗಿ ಉಳಿದ ಕಟ್ಟಿಗೆಗಳನ್ನು ತಂದು ಜನರು ಸಿದಿಗೆಗೆ ಕಟ್ಟಿ ಬೀಸಾಡಿದ್ದ ಹಗ್ಗದಿಂದ ಅಟ್ಟವನ್ನು ನಿರ್ಮಿಸಿಕೊಂಡು ಅದರ ಮೇಲೊಂದು ಗುಡಿಸಲು ಕಟ್ಟಿಕೊಂಡು ಕಾವಲು ಕಾಯಬೇಕಾಗುತ್ತಿತ್ತು. ಹೀಗೆ ಸ್ಮಶಾನ ಕಾಯುತ್ತಿದ್ದ ಹರಿಶ್ಚಂದ್ರನು ಪಡಿಯಕ್ಕಿಯನ್ನು ತಂದು ಮಂತ್ರಿಯ ಕೈಗೆ ಕೊಟ್ಟರೆ ಅದನ್ನವನು ಎತ್ತಿಗೆ ತಿನಿಸುತ್ತಿದ್ದನು. ಆ ಎತ್ತು ಸೆಗಣಿ ಹಾಕಿದ ಮೇಲೆ ಅದರಲ್ಲಿ ಉಳಿದಿದ್ದ ಕಾಳುಗಳನ್ನು ತೊಳೆದು ತಿನ್ನುತ್ತಿದ್ದನು. ಬಹುಶಃ ಇದು ಕೇವಲ ಹರಿಶ್ಚಂದ್ರ ಕಥೆಯಲ್ಲಿ ಮಾತ್ರ ಬರುವ ಸಂಗತಿಯಲ್ಲ; ಸ್ಮಶಾನ ಕಾಯುತ್ತಿದ್ದ ಒಂದು ಕಾಲದ ಜನರ ಜೀವನ ವೃತ್ತಾಂತವೇ ಆಗಿದೆ. ಇಂಥದೊಂದು ಜೀವಂತ ಉದಾಹರಣೆಯನ್ನು ಪ್ರೊ.ಶಿವರಾಮಯ್ಯ ಅವರು ಉಲ್ಲೇಖಿಸಿದ್ದಾರೆ(ಹರಿಹರ, ರಾಘವಾಂಕ ಮತ್ತು ಜನಪದ ಪು-೪೨).

ಋಷಿ ಜೀವನ:

ವಸಿಷ್ಠ, ವಿಶ್ವಾಮಿತ್ರರಂಥ ರಾಜರ್ಷಿಗಳನ್ನು ಹೊರತುಪಡಿಸಿ ಸಾಮಾನ್ಯರನ್ನು ಋಷಿ ಜೀವನವೊಂದು ಹರಿಶ್ಚಂದ್ರ ಕಾವ್ಯದಲ್ಲಿ ದೊರೆಯುತ್ತದೆ. ಇಲ್ಲಿ ಕಾಣಿಸಿಕೊಳ್ಳುವ ಮುನಿವೃಂದಕ್ಕೆ ತನ್ನದೇ ಆದ ವಸತಿ ವ್ಯವಸ್ಥೆ, ಉಡುಗೆ ತೊಡುಗೆ ಅಶನ ವ್ಯವಸ್ಥೆ ಎಲ್ಲವೂ ಇದೆ. ಜನಸಾಮಾನ್ಯರಿಂದ ಭಿನ್ನವಾದ ಸಾಂಸ್ಕೃತಿಕ ಕುರುಹುಗಳು ಇಲ್ಲಿವೆ. ಜನಸಾಮಾನ್ಯರದು ಗ್ರಾಮೀಣ ಸಂಸ್ಕೃತಿಯಾದರೆ ಇವರದು ವನ ಸಂಸ್ಕೃತಿ.

ವಿಶ್ವಾಮಿತ್ರ ಸೃಷ್ಟಿಸಿದ ಹಂದಿಯನ್ನು ಬೆನ್ನಟ್ಟಿ ಬಂದ ಹರಿಶ್ಚಂದ್ರ ಅದು ಕಾಡಿನ ಮಧ್ಯದಲ್ಲಿ ಮರಿಯಾದಾಗ ಇನ್ನು ವಿಶ್ರಮಿಸಿಕೊಳ್ಳಬೇಕೆಂದಿರುವ ಸಂದರ್ಭದಲ್ಲಿ ಮುನಿಗಳ ಪರಿಸರ ಕಣ್ಣಿಗೆ ಬೀಳುತ್ತದೆ.

ಕಂದ ಮೂಲಂಗೀಳ್ವ ಪೊಗೊಯ್ವು ಕೃಷ್ಣಾಜಿ
ನಂ ದಳೆವ ರುದ್ರಾಕ್ಷಿಗೋವ ವಲ್ಕಲ ವಸನ
ವೃಂದಮಂ ತೊಳೆವ ಮಿಸುಪಾದಾರಮಂಬಿಗಿವ ಮೌಂಜಿಮೇಖಲೆಗಟ್ಟುವ
ಒಂದಿ ಭಸಿತವನಿಡುವ ಯಜ್ಞೋಪವೀತಮಂ
ಬಂಧಿಸುವ ಜಡೆಯ ಸುಂಕಿಸುವ ಸಮಿತಮಂತಪ್ಪ
ಹೆಂದದ ಮುನೀಶ್ವರರ ಕುಮಾರಂ ಕಂಡು ಕೈಮುಗಿದಂ ಹರಿಶ್ಚಂದ್ರನು(೬-೩೭)

-ದೊಡ್ಡವರೆಲ್ಲ ಜಪ-ತಪ-ಧ್ಯಾನಗಳಲ್ಲಿ ಮುಳುಗಿರುವಾಗ ಇತರ ದೈನಂದಿನ ಕೆಲಸಗಳಲ್ಲಿ ನಿರತರಾಗಿರುವ ಋಷಿಕುಮಾರರ ಚಿತ್ರಣವಿಲ್ಲಿದೆ. ಋಷಿ ಕುಮಾರರು ಕಂದಮೂಲಗಳನ್ನು ಕೀಳುತ್ತಾರೆ. ಅವನ್ನು ಬೇಯಿಸಿಕೊಳ್ಳಲು ಸಮಿತ್ತು ಸಂಗ್ರಹ ಮಾಡಿಕೊಳ್ಳುತ್ತಾರೆ. ಈ ಸಂಗ್ರಹ ಅಡುಗೆಗೂ ಆದೀತು; ಯಜ್ಞಕುಂಡಕೂ ಆದೀತು. ವಲ್ಕಲ ವಸನ ತೊಳೆದುಕೊಳ್ಳುವಲ್ಲಿ ಬಟ್ಟೆಗಳ ವ್ಯವಸ್ಥೆಯಿದೆ. ಹೂಗೊಯ್ವು, ಕೃಷ್ಣಾಜಿನಂದಳೆವ, ಭಸಿತವಿಡುವ, ಯಜ್ಞೋಪವೀತಗಳನ್ನು ಬಂಧಿಸುವ ಕ್ರಿಯೆಗಳಲ್ಲಿ ಪೂಜೆ ಪುನಸ್ಕಾರ ಹಾಗೂ ಧಾರ್ಮಿಕ ಕ್ರಿಯಾಚರಣೆಗಳಿವೆ.

ನಂಬಿಕೆಗಳು:

ವೇಶ್ಯೆಯರ ಮತ್ತು ಬೇಡರ ಹಾಗೂ ತಕ್ಕ ಮಟ್ಟಿಗೆ ಪರಿಶಿಷ್ಟ ವರ್ಗದವರ ಜೀವನ ಸಂಕಥನ ಹರಿಶ್ಚಂದ್ರ ಕಾವ್ಯದಲ್ಲಿ ನಿರೂಪಗೊಂಡಿದ್ದರೂ ಇತರ ಸಮುದಾಯಗಳ ವಿವರ ಕಡಿಮೆ. ಕಾವ್ಯದ ಆಶಯ ಹರಿಶ್ಚಂದ್ರನ ಸತ್ಯ ಸಂಧತೆಯನ್ನು ಎತ್ತರಕ್ಕೊಯ್ಯುಬೇಕೆಂದಿರುವುದರಿಂದ ಆ ಕಡೆಗೆಯೇ ಕವಿ ಕೇಂದ್ರ ಗಮನವಿರಿಸಿಕೊಂಡು ಮುನ್ನಡೆದಿದ್ದಾನೆ. ಹೀಗಾಗಿ ಇತರ ಸಮುದಾಯಗಳ ಆಚರಣೆ – ಸಂಪ್ರದಾಯ ಜೀವನ ವಿಧಾನಗಳನ್ನು ಅಳವಡಿಸಲು ಕಾವ್ಯದಲ್ಲಿ ಅವಕಾಶ ಸಾಧ್ಯವಾಗಿಲ್ಲ. ಆದರೂ ಕಾವ್ಯದ ೬ನೆಯ ಸಂಧಿಯಲ್ಲಿ ಸಾಮಾನ್ಯ ಜನ ಸಮುದಾಯದ ಒಂದೆರಡು ನಂಬಿಕೆಗಳು ಹರಿಶ್ಚಂದ್ರ – ಚಂದ್ರಮತಿಯರ ಮುಖಾಂತರ ಉಲ್ಲೇಖಗೊಂಡಿವೆ. ವಿಶ್ವಾಮಿತ್ರ ಸೃಷ್ಟಿಯೆನಿಸಿದ ವರಾಹ ಎಷ್ಟೇ ಪ್ರಯತ್ನಪಟ್ಟರೂ ಸಿಗದ ನಿರಾಶೆ ಒಂದು ಕಡೆ, ವಿಶ್ವಾಮಿತ್ರನ ಆಶ್ರಮ ಪ್ರವೇಶಸಿದ ಚಿಂತೆ ಒಂದು ಕಡೆ – ಆಯಾಸಗೊಂಡ ಹರಿಶ್ಚಂದ್ರ ಭೀಕರ ಕನಸುಕಂಡು ಗಾಬರಿಗೊಂಡು ಧಡಕ್ಕನೆ ಎದ್ದೇಳುತ್ತಾನೆ. ಅರಸನನ್ನು ಸಮಾಧಾನಗೊಳಿಸಲು ಚಂದ್ರಮತಿ ತೂಪರಿದು ಬಳೆಗಳಿಂದ ನಿವಾಳಿ ತೆಗೆಯುತ್ತಾಳೆ. ಸಮಾಧಾನಗೊಂಡ ಹರಿಶ್ಚಂದ್ರ ತಾನು ಕಂಡ ಕನಸನ್ನು ವಿವರಿಸಿದ. "ಘಡು ಘಡಿಸುತ ಒಬ್ಬ ಮುನಿ ಬಂದು ನಾನು ಓಲಗಗೊಡುವ ಮಣಿ ಮಂಟಪದ ಕಂಬವೆಲ್ಲವನ್ನು ಕೆಡವಿ ಹೊಂಗಳಸಗಳನ್ನು ಒಡೆದು ನನ್ನನ್ನು ಕೆಡಹಿ ಸಿಂಹಾಸನವನ್ನು ಒಯ್ವಾಗ ನನ್ನ ಎದೆಯನ್ನು ಕಾಗೆಯೊಂದು ಅಡರಿತು. ತರುವಾಯ ನಾನು ಗಿರಿಯನ್ನೇರಿ ಎಸೆವ ಮಣಿಗೃಹವನ್ನು ಹೊಕ್ಕೆನು. ಇದರ ಅಂತರಾರ್ಥವೇನು ?" ಚಂದ್ರಮತಿ ಹೇಳುತ್ತಾಳೆ ಕನಸಿನಲ್ಲಿ ತೋರಿದ ಕುಪಿತ ಮುನಿ ಕೌಶಿಕ, ಭೀತಿಯನ್ನುಂಟು ಮಾಡುವ ಅವನ ಗೊಡ್ಡಾಟದಿಂದ ನಮಗೆ ಸಂಕಟವುಂಟು. ಇದಕ್ಕೆಲ್ಲ ಹೆದರದಿದ್ದರೆ ಮುಂದೆ ಲೇಸುಂಟು. ಪರ್ವತ ತುದಿಯ ಗೃಹವನ್ನು ಹೊಕ್ಕೆನೆಂಬುದು ಮುಂಬರುವ ಮಹಾ ಅನೂನ ಪದವಿಯನ್ನು ಸೂಚಿಸುತ್ತದೆ.

ಬೀಳುವ ಕನಸುಗಳಿಗೆ ಅರ್ಥಪರಂಪರೆಯನ್ನು ಕಲ್ಪಿಸುತ್ತ ಹೋಗುವುದು ನಮ್ಮ ಜನಪದರು ಒಪ್ಪಿಕೊಂಡು ಬಂದಿರುವುದು ಜನಪದರ ನಂಬಿಗೆಯನ್ನು ಸೂಚಿಸುತ್ತದೆ. ಕನಸು ಒಂದರ್ಥದಲ್ಲಿ

ಶಕುನವೂ ಹೌದು. ಅದರ ಅರ್ಥವಿವರಣೆ, ಪರಿಣಾಮಗಳ ಸತ್ಯಾಸತ್ಯತೆ ಏನೇ ಇರಲಿ, ಇದೆಲ್ಲ ನಮ್ಮ ಜನರ ನಂಬಿಕೆಯಾಗಿ ಜನಪದ ಸಂಸ್ಕೃತಿಯಲ್ಲಿ ಬೆರೆತು ಹೋಗಿದೆ. ತೂಪಿರಿಯುವುದು, ನಿವಾಳಿ ತೆಗೆಯುವುದು – ಇವೆಲ್ಲ ದೋಷ ಪರಿಹಾರಕ್ಕಾಗಿ ರೂಢಿಸಿಕೊಂಡಿರುವ ನಂಬಿಕೆಗಳು.

ಕುಮಾರವ್ಯಾಸ ಭಾರತ

ಕುಮಾರವ್ಯಾಸ ಭಾರತದಲ್ಲಿ ಪ್ರಭುತ್ವಕ್ಕೆ ಸಂಬಂಧಿಸಿದ ಸಾಂಸ್ಕೃತಿಕ ಆಯಾಮಗಳು ಧಾರಾಳವಾಗಿ ದೊರೆಯುತ್ತವೆ. ಆದರೆ ಸಾಮಾನ್ಯ ಜನವರ್ಗಕ್ಕೆ ಸಂಬಂಧಿಸಿದ ಸಾಂಸ್ಕೃತಿಕ ವಿಷಯಗಳು ಕಡಿಮೆ. ನಾರಣಪ್ಪನ ಕಾವ್ಯೋದ್ದೇಶವನ್ನು ಅರಿತರೆ ಇದು ಸಹಜವೆನ್ನಿಸುತ್ತದೆ. ಇಲ್ಲಿಯ ಅನೇಕ ಸಾಂಸ್ಕೃತಿಕ ವಿದ್ಯಮಾನಗಳು ಅರಸು ಪರಿಸರದಲ್ಲಿಯೇ ಪ್ರಸ್ತಾಪಿಸಲ್ಪಟ್ಟರೂ ಜನಸಾಮಾನ್ಯರ ಪರೋಕ್ಷ ಅಸ್ತಿತ್ವವನ್ನು ನಾವಿಲ್ಲಿ ಗುರುತಿಸಬಹುದು. ಅರ್ಜುನನೊಡನೆ ಯುದ್ಧ ಮಾಡಲು ಸಿದ್ಧಗೊಂಡಿರುವ ಶಿವನ ಬೇಡನ ವೇಷ ಸಾಮಾನ್ಯ ಬೇಡರದೇ ಆಗಿರುತ್ತದೆ. ಕೃಷಿ ಕುರಿತು ನಾರದ ಹೇಳುವ ಮಾತು ಕೃಷಿಕರ ಅನುಭವಗಳೇ ಆಗಿವೆ. ಕೌರವ ಪಾಂಡವರು ಮಕ್ಕಳಾಗಿರುವಾಗ ಆಡುವ ಆಟಗಳೆಲ್ಲ ಸಾಮಾನ್ಯ ಮಕ್ಕಳಿಗೇ ಸಂಬಂಧಿಸಿದವುಗಳು. ಸಂಗ್ರಾಮ ಸಮಯದಲ್ಲಿ ಬಗೆ ಬಗೆಯ ಆಯುಧಗಳನ್ನು ತಯಾರಿಸುವವರು ಸಾಮಾನ್ಯ ಜನರೇ. ಇನ್ನು ಭಾವನೆಗಳ ಸ್ತರಕ್ಕೆ ಸಂಬಂಧಪಡುವ ಸಂಪ್ರದಾಯ ಆಚರಣೆಗಳು ಅನೇಕ ಸಲ ಶಿಷ್ಟ ಆವರಣದಲ್ಲಿ ನಡೆದರೂ ಅವು ಮೂಲತಃ ಜನಪದದಿಂದಲೇ ಬಂದವುಗಳು. ಇವೆಲ್ಲ ಮೂಲ ಮಹಾಭಾರತದಲ್ಲಿ ಹೇಗಿದ್ದವೋ ನಾರಣಪ್ಪ ಮಾತ್ರ ತನ್ನ ಸಮಕಾಲೀನ ಸಾಮಾನ್ಯ ಮನುಷ್ಯರ ಜಾನಪದೀಯ ಅಂಶಗಳನ್ನು ಕನ್ನಡ ಭಾರತದಲ್ಲಿ ತಂದಿದ್ದಾನೆ. ಭೌತಿಕ ಜೀವನ ಕ್ರಮದೊಂದಿಗೆ ಮನುಷ್ಯ ಬೆಳೆಯಿಸಿಕೊಂಡು ಬಂದಿರುವ ಮಾನವೀಯ ನಡುವಳಿಕೆಗಳು ಸಂಸ್ಕೃತಿಯ ಭಾಗವೇ ಆಗುತ್ತವೆ. ಈ ನಡುವಳಿಕೆಗಳು ಒಟ್ಟೂ ಜೀವನದ ಅಂತಿಮ ಪರಿಣಾಮದ ಕೆನೆಯಾಗಿ ತೋರುತ್ತವೆ. ಕುಮಾರವ್ಯಾಸ ಭಾರತದಲ್ಲಿ ಅಡಕಗೊಂಡಿರುವ ಸಾಂಸ್ಕೃತಿಕ ವಿಷಯಗಳನ್ನು ಉದ್ಯೋಗ, ಕಲೆ ಮತ್ತು ಕ್ರೀಡೆ, ಯುದ್ಧ, ಸಂಪ್ರದಾಯ – ಆಚರಣೆ, ಮಾನವೀಯತೆ ಶಿಷ್ಟಾಚಾರ ಎಂದು ಗುರುತಿಸಿಕೊಂಡು ಇಲ್ಲಿ ಮುಂದುವರಿಯಲಾಗಿದೆ.

ಉದ್ಯೋಗ:

ಮನುಷ್ಯ ಜೀವನ ನಿರ್ವಹಣೆಗೆ ಆಧಾರವಾಗಿರುವ ಉದ್ಯೋಗಗಳು ಸಾಮಾಜಿಕರ ಅಗತ್ಯಗಳಿಗನುಗುಣವಾಗಿ ಹಲವು ವಿಧವನ್ನು ಪಡೆಯುತ್ತವೆ. ಕುಮಾರವ್ಯಾಸ ಭಾರತದಲ್ಲಿ ತೋರುವ ವೃತ್ತಿಗಳು ಕೃಷಿ, ಬೇಟೆಗಾರಿಕೆ, ಪಶುಪಾಲನೆ,

ಯಾವುದೇ ಸಂಸ್ಕೃತಿಯ ಜನಸಂಖ್ಯೆಯಲ್ಲಿ ಕೃಷಿ ಬದುಕಿಗೆ ಸಂಬಂಧಪಡುವ ಜನರೇ ಅರ್ಧ ಅಥವಾ ಅರ್ಧಕ್ಕಿಂತ ಹೆಚ್ಚಿನ ಸಂಖ್ಯೆಯನ್ನು ಹೊಂದಿದವರಾಗಿರುತ್ತಾರೆ. ಮಹಾಭಾರತದ ಕಾಲದಲ್ಲಿಯೂ ಇದೇ ಅನುಪಾತ ಇದ್ದಿರಬಹುದಾದರೂ ಅಲ್ಲಿ ಪ್ರಧಾನವಾಗಿ ತೋರುವುದು ಅರಸು ಜೀವನ ಅಥವಾ ಯುದ್ಧಪರಿಸರ. ಆದರೂ ಒಂದೆರಡು ಕಡೆಗೆ ಬರುವ ಕೃಷಿ ಮತ್ತು ಕೃಷಿ ಜೀವನದ ವಿವರಣೆಯಿಂದ ಅದರ ಮಹತ್ತನ್ನು ಅರಿಯಬಹುದಾಗಿದೆ.

ಪಾಂಡವರು ಇಂದ್ರಪ್ರಸ್ಥಪುರದಲ್ಲಿ ವಾಸವಾಗಿರುವಾಗ ಒಂದು ದಿನ ಧರ್ಮರಾಯನು ಒಡ್ಡೋಲಗ ನಡೆಸುತ್ತಿರುವಂತೆ ನಾರದ ಮುನಿ ಬಂದು ಧರ್ಮರಾಜನಿಗೆ ನಾನಾಬಗೆಯ ಹಿತದ ಮಾತುಗಳನ್ನು ಹೇಳುತ್ತಾನೆ. ಅವುಗಳಲ್ಲಿ ಕೃಷಿಯ ಮಾತೂ ಇದೆ. ನಾರದ ಹೇಳುತ್ತಾನೆ:

ಕೃಷಿ ಮೊದಲು ಸರ್ವಕ್ಕೆ ಕೃಷಿಯಿಂ
ಪಸರಿಸುವುದಾ ಕೃಷಿಯನುದ್ಯೋ
ಗಿಸುವ ಜನವನು ಪಾಲಿಸುವುದಾ ಜನಪದದ ಜನದಿ
ವಸು ತೆರಳುವುದು ವಸುವಿನಿಂ ಸಾ
ಧಿಸುವಡಾವುದಸಾಧ್ಯವದರಿಂ
ಕೃಷಿ ವಿಹೀನನ ದೇಶವದು ದುರ್ದೇಶ ಕೇಳೆಂದ (ಸಭಾ–೧–೬೪)

ಬದುಕಿಗೆ ಅಗತ್ಯವಾಗಿರುವ ಕೃಷಿಯ ಶ್ರೇಷ್ಠತೆ ಇಲ್ಲಿ ನಾಲ್ಕು ಹಂತದಲ್ಲಿ ಹೇಳಲ್ಪಟ್ಟಿದೆ. ಒಂದು–ಕೃಷಿಯೇ ಸರ್ವಕ್ಕೂ ಆಧಾರವಾಗಿರುವುದರಿಂದ ಅದು ವಿಸ್ತರಿಸಿಕೊಳ್ಳಬೇಕು. ಎರಡು–ಕೃಷಿಯನ್ನು ವೃತ್ತಿಯನ್ನಾಗಿ ಮಾಡಿಕೊಂಡು ದುಡಿಯುವ ಜನವನ್ನು ಜನಪದರು ಸಂರಕ್ಷಿಸಿಕೊಂಡು ಬರಬೇಕು. ಮೂರು–ಮನುಷ್ಯನ ಹತ್ತಿರವಿರುವ ದ್ರವ್ಯ ಇಲ್ಲವಾಗಬಹುದು, ಆದರೆ ಭೂ ಸಂಪತ್ತಿನಿಂದ ಏನೆಲ್ಲ ಸಾಧಿಸಬಹುದು, ನಾಲ್ಕು–ಕೃಷಿಯಿಲ್ಲದ ದೇಶ ದುರ್ದೇಶವೆನಿಸುತ್ತದೆ. ಕೃಷಿಯೇ ಸರ್ವಕ್ಕೂ ಮುಖ್ಯವೆಂದು ಆರಂಭಗೊಂಡು ಕೊನೆಯಲ್ಲಿ ಕೃಷಿ ವಿಹೀನ ದೇಶ ತನ್ನ ವಿನಾಶವನ್ನು ತಾನೇ ತಂದುಕೊಳ್ಳುತ್ತದೆ ಎಂದು ಸಾರುವ ಈ ಪದ್ಯ ಎಲ್ಲ ಕಾಲ–ದೇಶಗಳಿಗೂ ಸಂಬಂಧಪಡುವ ಸಾರ್ವತ್ರಿಕ ಬೋಧೆಯ ವ್ಯಾಪ್ತಿಯನ್ನು ಹೊಂದಿದೆ.

'ಕೃಷಿ ಕೆಡಗು ಉಪೇಕ್ಷೆಯಲಿ' ಎಂಬ ಮಾತು ವಿದುರನೀತಿಯಲ್ಲಿ ಕಾಣಿಸಿಕೊಳ್ಳುತ್ತದೆ. ಯಾರು ಯಾರು ಯಾವ ಯಾವ ಸಂದರ್ಭದಲ್ಲಿ ಕೆಡುತ್ತಾರೆ ಎಂಬ ಸಂದರ್ಭದಲ್ಲಿ ಈ ಮಾತನ್ನು ಹೇಳಲಾಗಿದೆ. ಜನದ ಜೀವದುಸಿರಾಗಿರುವ ಕೃಷಿಯನ್ನು ಅಪೇಕ್ಷೆಪಟ್ಟು ದುಡಿದು ಸಂರಕ್ಷಿಸಿಕೊಳ್ಳಬೇಕು. ಉಪೇಕ್ಷೆಯಿಂದ ಕೃಷಿನಾಶವಾಗಿ ಉಣ್ಣುವ ಅನ್ನಕ್ಕೆ ತತ್ವಾರ ಉಂಟಾಗುತ್ತದೆ ಎಂಬ ಧ್ವನ್ಯಾರ್ಥ ಇಲ್ಲಿ ಮುಖ್ಯವಾದುದು. ರೈತರ ಜೀವನ ನಿರ್ವಹಣೆಗೆ ಆಧಾರವಾಗಿರುವ ಕೃಷಿ ಕೇವಲ ಅವರ ಜೀವನವನ್ನು ಮಾತ್ರ ಪೋಷಿಸುವುದಿಲ್ಲ. ಮನುಷ್ಯ ಕುಲವನ್ನೇ ಸಂರಕ್ಷಿಸುತ್ತದೆ.

ಕೃಷಿಯ ಉಪಕ್ರಮಗಳಿಗೆ ಸಂಬಂಧಿಸಿದ ಅನೇಕ ಪದಗಳು ಕರ್ನಾಟಕ ಭಾರತ ಕಥಾಮಂಜರಿಯಲ್ಲಿ ಅಲ್ಲಲ್ಲಿ ಕಂಡುಬರುತ್ತವೆ.

ಹೊಟ್ಟು ತೂರು (ಕರ್ಣ–೪–೧೬)
ಗೇಕು (ಭೀಷ್ಮ–೭–೧೩)
ಹೆಬ್ಬೆಳೆ ಸಾಲು (ಕರ್ಣ–೧೯–೧೯)
ಇಕ್ಷು ತೋಟ (ಸಭಾ–೧೫–೩೩)

ರಾಜಸೂಯ ಯಾಗಕ್ಕೆ ಮೊದಲು ಜರಾಸಂಧನ ಮಗಧರಾಜ್ಯದ ಮೇಲೆ ದಾಳಿ ಮಾಡಲು ಭೀಮಾರ್ಜುನರು ಕೃಷ್ಣನೊಡನೆ ಹೊರಡುತ್ತಾರೆ. ಹೀಗೆ ಬರುತ್ತಿರುವಾಗ ಮಗಧ ಮಂಡಲದ ಕೃಷಿ ಪ್ರಧಾನ ಜನಜೀವನ ಇವರ ಕಣ್ಣಿಗೆ ಬೀಳುತ್ತದೆ. ಅಲ್ಲಿಯ ಎಲ್ಲಾ ಊರುಗಳು ಸಂಧ್ವರಿತವಾಗಿದ್ದವು.

ಗೋಧನ, ಧಾನ್ಯರಾಶಿ ಸಮೃದ್ಧವಾಗಿತ್ತು. ಅಲ್ಲಿಯ ನದಿ, ಕಾಲುವೆಗಳ ಸಹಾಯದಿಂದ ತೋಟಗಳು ರಮ್ಯವಾಗಿದ್ದವು. ದ್ರಾಕ್ಷಿ ಬೆಳೆ ಮೆಳೆಯಂತೆ ಒತ್ತೊತ್ತಾಗಿತ್ತು. ಅಲ್ಲೆಲ್ಲ ಅಡಕೆ, ಮಾವು, ದಾಳಿಂಬೆ, ಹಲಸು, ನೇರಳೆ, ಮಾದಲ ವೃಕ್ಷಾವಳಿ ತುಂಬಿಕೊಂಡಿತ್ತು. ಗದ್ದೆಗಳೆಲ್ಲ ಭತ್ತದ ಬೆಳೆಗಳಿಂದ ತುಂಬಿಕೊಂಡಿದ್ದವು. ಇಲ್ಲಿ ಬಂದಿರುವ ನದಿ, ಕಾಲುವೆ, ವೃಕ್ಷಗಳೆಲ್ಲ ಕುಮಾರವ್ಯಾಸನಿಂದ ಚಿತ್ರಿತಗೊಂಡ ಕರ್ನಾಟಕದ ವನ್ಯ ಸಂಪತ್ತೇ ಆಗಿದೆ.

ಕೃಷಿಯಂತೆ ಬೇಟೆಯೂ ಗ್ರಾಮೀಣರ ಅಥವಾ ಅರಣ್ಯವಾಸಿಗಳ ಪ್ರಮುಖ ಉದ್ಯೋಗವಾಗಿದೆ. ಕುಮಾರವ್ಯಾಸಭಾರತದ ಹಲವು ಪ್ರಸಂಗಳಲ್ಲಿ ಬೇಡರ ಜೀವನವನ್ನು ವಿವರಿಸಲಾಗಿದೆ. ಬೇಡರು ತೊಡುವ ವೇಷ, ಬೇಟೆಗೆ ಹೋಗುವ ಮುಂಚೆ ಅವರು ಮಾಡಿಕೊಳ್ಳುವ ಸಿದ್ಧತೆ ಏನೆಲ್ಲವನ್ನು ಕುಮಾರವ್ಯಾಸ ಬಿಡದೆ ವರ್ಣಿಸುತ್ತಾನೆ. ವಿಶೇಷವಾಗಿ ಅರಣ್ಯ ಪರ್ವದಲ್ಲಿ ಈ ಬೇಡ ಬದುಕು ನಮಗೆ ಕಾಣಸಿಗುತ್ತದೆ.

ಬೇಡರ ವೇಷ– ಕಿರಾತಾರ್ಜುನ ಪ್ರಸಂಗದಲ್ಲಿ ಶಿವನು ತೊಡುವ ಶಬರ ವೇಷ ಹೀಗಿದೆ: ಈ ಮೊದಲು ತಲೆಯಲ್ಲಿ ಧರಿಸಿದ ಮಾಲೆಯನ್ನು ತೆಗೆದು ಹಾಕಿದನು. ಹಸುರಂಗಿಯನ್ನು ತೊಟ್ಟು ನವಿಲುಗರಿಯುಳ್ಳ ಪಾರವಿ ಬಣ್ಣದ ಚಲ್ಲಣವನ್ನು ಧರಿಸಿಕೊಂಡನು. ಜಡೆಯಲ್ಲಿರುವ ಶಶಿಮುಖವು ಮರೆಯಾಗುವಂತೆ ಎಲೆಗುಚ್ಚವನ್ನು ಇಟ್ಟುಕೊಂಡನು. ಇಷ್ಟು ವೇಷವಾದ ಮೇಲೆ ಬಿಲ್ಲು ಬಾಣಗಳನ್ನು ಕೈಗೆತ್ತಿಕೊಂಡನು(ಅರಣ್ಯ–೫–೨೮). ಹೀಗೆಯೇ ಉರಗ ಪ್ರಸಂಗದಲ್ಲಿ ಬೇಟೆಗೆ ಹೊರಟ ಭೀಮನು ಬಲೆಗಳ ವ್ಯವಸ್ಥೆಯನ್ನು ಮಾಡಿಕೊಂಡಾದ ಮೇಲೆ ಹಸುರಂಗಿಯನ್ನು ತೊಟ್ಟು ಕಾಲಿಗೆ ಎಕ್ಕವನ್ನು ಧರಿಸಿದನು(ಅರಣ್ಯ–೧೩–೧೯).

ಬೇಟೆಯ ಸಾಮಗ್ರಿ– ಶಿವನ ಪರಿವಾರದ ಶಬರರೆಲ್ಲ ಬೇಟೆಯ ಸಾಮಗ್ರಿಗಳನ್ನು ಈ ರೀತಿ ಸಜ್ಜಮಾಡಿಕೊಂಡರು: ಚಾಳಿಸಿ ಬಿಗಿಮಾಡಿದ ಬಿಲ್ಲು, ಬಡಿಕೋಲುಗಳು, ಬಂಧಿಸಿ ಹಿಡಿಯಲ್ಪಟ್ಟಿರುವ ನಾಯಿಗಳು, ಕೋಲುಬಲೆ, ಸಿಡಿಬಲೆ, ಮಿಡಿಬಲೆ, ಹೆಬ್ಬಲೆ, ಬೆಳ್ಳಾಲ ಬಲೆಗಳು, ಕಾಲುಕಣ್ಣಿ, ಮಯಣದಂಟು, ಮೇಲುಕೊಂಬು – ಹೀಗೆ ಬೇಟೆಗೆ ಅಗತ್ಯವಾದ ಸಾಮಗ್ರಿಗಳನ್ನು ಶಿವನೊಂದಿಗೆ ಬೇಟೆಗೆ ಹೊರಟ ಬೇಟೆಗಾರರು ಸಿದ್ಧಪಡಿಸಿಕೊಂಡರು (ಅರಣ್ಯ–೫–೩೩). ಜಂಬೂಫಲ ಪ್ರಸಂಗದಲ್ಲಿ ಭೀಮನೊಂದಿಗೆ ಬೇಟೆಗೆ ಹೊರಟ ಬೇಟೆಗಾರರ ಚಿತ್ರಣವಿದು: ಕೊರಳ ಹಗ್ಗಗಳನ್ನು ಎಳೆಯುವ ನಾಯಿಗಳು, ಬೀಸುಬಲೆ, ಕಾಲಕಣ್ಣಿ, ಸೂಸುಬಲೆ, ಬಿಲ್ಲುಬಾಣಗಳನ್ನು ಸಜ್ಜು ಮಾಡಿಕೊಂಡರು. ಚೆಂದವಾದ ಕುಪ್ಪಸತೊಟ್ಟು ತಲೆಗೂದಲಲ್ಲಿ ಚಿಗುರು ಸಿಕ್ಕಿಸಿಕೊಂಡು ಸಂತೋಷದಿಂದ ಬೇಟೆಗೆ ಹೊರಟರು(ಅರಣ್ಯ–೩–೯).

ಬೇಟೆಯ ಬಲೆಗಳು– ಬೆಳ್ಳಾರಬಲೆ, ಅಖಂಡ ಬಲೆ, ತಡಿಕೆ ಬಲೆ, ಗುಂಡು ಬಲೆ, ಬೀಸು ಬಲೆ, ಕಾಲುಗಣಿ, ದಂಡಿಬಲೆ, ತೊಡಕುಬಲೆ, ಹಿಂಡುಬಲೆ, ಮಯಣದಂಟಿನ ಮಂಡವಿಗೆ ಬಲೆ. (ಅರಣ್ಯ–೧೩–೨೩)

ಬೇಟೆಯ ನಾಯಿಗಳು–ಮಡಿಸಿದ ಕಿವಿ, ಮುಂಚಾಚಿದ ಎದೆ, ಹಿಡಿಯಷ್ಟಿರುವ ನಡು, ಕೊಂಕಿದ ಉಗುರು, ನಿಡಿದಾದ ಒಡಲು, ನಿರ್ಮಾಂಸದ ಜಂಘೆ, ಕೆಂಪಾದ ಕಣ್ಣು, ಸಿಡಿಲುಗಳ ಗರ್ಜನೆ, ಗಗನ ತುಡುಕುವ ಆಕಳಿಕೆ, ಜೋರಾದ ಧ್ವನಿಯ ಮಿಡುಕುಗಳಿಂದ ಕೂಡಿದ ನಾಯಿಗಳು(ಅರಣ್ಯ.–೧೩–೨೦).

ಬೇಡವೇಷದಿಂದ ಹಿಡಿದು ಬೇಟೆಯ ನಾಯಿಗಳ ವರೆಗೆ ಚಾಚಿಕೊಂಡಿರುವ ಬೇಟೆಯ ಪರಿಸರ ಆಕಾಲದ ಬೇಡ ಸಮುದಾಯದ ಪ್ರತಿ ಛಾಯೆಯಂತಿದೆ. ಅದರಲ್ಲೂ ವೈವಿಧ್ಯಮಯ ಬಲೆಯ ಶಬ್ದಸಂಕುಲ ಬೆರಗು ಹುಟ್ಟಿಸುವಂತಿದ್ದು ಇದುಕುಮಾರವ್ಯಾಸನ ಅಪಾರ ಲೌಕಿಕ ಜ್ಞಾನವನ್ನು ದೃಢಪಡಿಸುತ್ತದೆ. ಬೇಟೆಗಾರರು ಹಸಿರು ಬಣ್ಣದ ಅಂಗಿ ತೊಡುವುದು, ಪಾರವಿ ಚಲ್ಲಣ ಹಾಕಿಕೊಳ್ಳುವುದು, ತಲೆಗೂದಲಲ್ಲಿ ಚಿಗುರು ಅಥವಾ ಎಲೆಗಳನ್ನು ಸಿಕ್ಕಿಸಿಕೊಳ್ಳುವುದು – ಇವೆಲ್ಲ ತಮ್ಮ ವೇಷ ಕಾನನದ ಹಸಿರು ಬಣ್ಣದೊಂದಿಗೆ ಏಕರೂಪ ಪಡೆದುಕೊಳ್ಳಲಿ ಎಂಬುದಕ್ಕಾಗಿ ಮಾಡಿಕೊಂಡ ಕ್ರಮಗಳು; ಕಾಡು ಪ್ರಾಣಿಗಳನ್ನು ಮೋಸಗೊಳಿಸುವ ಪರಿ ಇದಾಗಿದೆ.

ವ್ಯಾಧರು ಬೇಟೆಯಾಡಿದ ಮೇಲೆ ಮಾಂಸಾಹಾರ ಸೇವಿಸಿದ್ದು ಅರಣ್ಯಪರ್ವದ ಮೂರನೆಯ ಸಂಧಿಯಲ್ಲಿ ಉಕ್ತಗೊಂಡಿದೆ. ಭೀಮಸೇನನು ವ್ಯಾಧರೊಂದಿಗೆ ಬೇಟೆಯಾಡಿದ ಮೇಲೆ ಬೇಟೆಯಲ್ಲಿ ಸಂಹರಿಸಲ್ಪಟ್ಟ ಕೆಲವು ಮೃಗಗಳನ್ನು ಬೇಡರಿಗೆ ಕೊಡಿಸಿದನು. ಅವರು ಒಣದಾದ ಗಿಡದಿಂದ ಬೆಂಕಿ ಮಾಡಿ ಮಾಂಸವನ್ನು ಸುಟ್ಟು ತರುವಾಯ ಸಂತೋಷದಿಂದ ಊಟಮಾಡಿದರು.

ಕುಮಾರವ್ಯಾಸ ಭಾರತದಲ್ಲಿ ಬೇಟೆಗೆ ಸಂಬಂಧಿಸಿದ ಅನೇಕ ದೃಶ್ಯಗಳು ಅರಣ್ಯದಲ್ಲಿ ದೊರೆಯುವಂತೆಯೇ ಊರಲ್ಲಿಯ ಪುಳಿಂದ ಕೇರಿಗಳ ವರ್ಣನೆಯೂ ಚಿತ್ರವತ್ತಾಗಿ ಬಂದಿದೆ. ಮಾರ್ಕಂಡೇಯ ಮುನಿಹೇಳಿದ ಮೌದ್ಗಲ್ಯವಂಶದ ವಿಪ್ರನೊಬ್ಬನ ಕತೆ ಈ ಹಿಂದೆ 'ಧಾರ್ಮಿಕ ನೆಲೆ'ಯಲ್ಲಿ ಪ್ರಸ್ತಾಪಗೊಂಡಿದೆ. ಅವನು ಧರ್ಮವ್ಯಾಧನನ್ನು ಹುಡುಕಿಕೊಂಡು ಪುಳಿಂದಕೇರಿಗೆ ಬಂದರೆ ಅಲ್ಲಿಯ ಮಾಂಸದಂಗಡಿಯನ್ನು ಅವನು ಕಂಡನು. ಅಲ್ಲಿ ತೋರುವ ಹರಡಿದ ನೆಣ, ಬಸೆ, ಹಾಸಿದ ತೊಗಲು, ಹರಡಿದ ಮಾಂಸಖಂಡಗಳು, ಕುರಿದಲೆಯ ಪಂಕ್ತಿ, ಚೂರಾಗಿ ಕತ್ತರಿಸಿದ ಎಲುವು, ಪೋಣಿಸಿದ ಮೀನು ಮುಂತಾಗಿರುವ ಸಾಕ್ಷಾತ್ ದೃಶ್ಯ ಕವಿಭಾಷೆಯಲ್ಲಿ ಅಭಿವ್ಯಕ್ತಗೊಂಡ ರೀತಿ ಹೀಗಿದೆ:

ಬಸೆ ನೆಣದ ಸುಂಟಿಗೆಯ ಹರಹಿದ
ಹಸಿಯ ತೊಗಲಿನ ತಳಿತ ಖಂಡದ
ಹಸರದುರುಗಲ ಕಾಳಿಜದ ಜಂಗಡೆಯ ಗಳಗೆಗಳ
ಬಸೆಯ ಹರವಿಯ ಸಾಲ ತೊರಳಿಗೆ
ಬೆಸಳಿಗೆಯ ಕುರಿದಲೆಯ ಹಂತಿಯ
ಕುಸುರಿವೆಲುವಿನ ಕೋದ ಮೀನಂಗಡಿಯಲ್ಲೈತಂದ (ಅರಣ್ಯ–೧೫–೮)

ಇದುವರೆಗೆ ವಿವರಗೊಂಡ ಪುಳಿಂದರ ಜೀವನವನ್ನು ನೋಡುತ್ತ ಬಂದಂತೆ ಕುಮಾರವ್ಯಾಸನ ಸೂಕ್ಷ್ಮಾವಲೋಕನ ಸ್ವಯಂವೇದ್ಯವಾಗುತ್ತದೆ. ವನವಾಸಿಗಳಾಗಿ ಕಷ್ಟದ ಜೀವನವನ್ನು ಸಾಗಿಸುವ ಬೇಡ ಸಮುದಾಯದ ಚಟುವಟಿಕೆಗಳನ್ನು ಕವಿ ತುಂಬ ಶ್ರದ್ಧೆಯಿಂದ ನಿರ್ವಹಿಸಿದ್ದಾನೆ. ಬೇಟೆ ಪರಿಸರದಲ್ಲಿ

ಬರುವ ಅನೇಕ ಗ್ರಾಮ್ಯಪದಗಳ ನಿಷ್ಪತ್ತಿ, ಪ್ರಾದೇಶಿಕ ಬೆಳವಣಿಗೆಗಳು ಮುಂತಾದವುಗಳು ಬೇರೊಂದು ನಿಟ್ಟಿನ ಅಧ್ಯಯನಕ್ಕೆ ಯೋಗ್ಯವಾಗುವ ವಿಷಯಗಳು.

ಪಶುಪಾಲನೆಯ ವಿಷಯವೂ ಕುಮಾರವ್ಯಾಸ ಭಾರತದಲ್ಲಿ ಕಾಣಿಸಿಕೊಂಡಿದೆ – ಇದು ಆಕಳುಗಳಿಗೆ ಸಂಬಂಧಪಟ್ಟದ್ದು. ಇಲ್ಲಿ ಆಕಳುಗಳ ಸಾಕಣೆ, ಹೈನುಗಾರಿಕೆಯಂಥ ವಿಷಯಗಳಿಲ್ಲವಾದರೂ ಆಕಳುಗಳ ಸಂಖ್ಯಾಬಾಹುಳ್ಯ, ಅವುಗಳಿರುವ ಪೂಜ್ಯತೆ ವಿರಾಟಪರ್ವದ ನಾಲ್ಕನೆಯ ಸಂಧಿಯಲ್ಲಿ ಉಕ್ತಗೊಂಡಿದೆ. ಸುಶರ್ಮನು ದಾಳಿಮಾಡಿ ತಮ್ಮ ಅರವತ್ತು ಸಾವಿರ ಗೋವುಗಳನ್ನು ಹಿಡಿದಿರುವುದನ್ನು ಭೀತಿಗೊಂಡು ಓಡಿಬಂದ ಗೋವಳನು ವಿರಾಟರಾಜನ ಮುಂದೆ ಬಿನ್ನೈಸುತ್ತಾನೆ. ಇದನ್ನೆಲ್ಲ ತಿಳಿದುಕೊಂಡ ಧರ್ಮರಾಜ ತನ್ನ ಸಹೋದರರಿಗೆ "ತುರುಗಳನ್ನು ಹಿಡಿದವರ ಬೆಂಬತ್ತಿ ಅವುಗಳನ್ನು ಬಿಡಿಸಿಕೊಂಡು ಬರಬೇಕು ತುರುಗಳ ಹುಯ್ಯಲನ್ನು ಕಿವಿಯಾರೆ ಕೇಳಿದ ಮೇಲೆ ಒಂದಿಷ್ಟು ನೀರು ಸೇವಿಸಿದರೂ ಎಣೆಯಿಲ್ಲದ ಪಾಪಕ್ಕೆ ಗುರಿಯಾಗಬೇಕಾಗುತ್ತದೆ" ಎಂದನು. ಒಂದು ಕಾಲಕ್ಕೆ ಗೋಧನವೇ ನಿಜವಾದ ಸಂಪತ್ತೆನಿಸಿತ್ತು. ಹೆಚ್ಚು ಹೆಚ್ಚು ಆಕಳುಗಳನ್ನು ಹೊಂದಿದವನ ಘನತೆ ಮೇಲೇರುತ್ತಿತ್ತು. ಆಕಳಲ್ಲಿರುವ ಪೂಜ್ಯದೃಷ್ಟಿಯೇ ಇದಕ್ಕೆಲ್ಲ ಕಾರಣವಾಗಿತ್ತು. ಸಾಮಾನ್ಯರಿಂದ ಹಿಡಿದು ರಾಜಮಹಾರಾಜರವರೆಗೂ ಅನ್ವಯಿಸುವ ಮಾತು ಇದಾಗಿತ್ತು. ವಿರಾಟ ರಾಜ ಹೊಂದಿದ ಅರವತ್ತು ಸಾವಿರ ಆಕಳುಗಳ ಸಂಖ್ಯೆ ಇದನ್ನೇ ಹೇಳುತ್ತದೆ. ಆಕಳುಗಳ ಸಂಕಟ ಕೇಳಿ ಅದನ್ನು ಪರಿಹರಿಸ ಲೆಳಸದವನು ಪಾಪಿಯಾಗುತ್ತಾನೆ ಎಂಬ ಸಾರ್ವತ್ರಿಕ ನಂಬಿಕೆ ಧರ್ಮರಾಯನ ಮುಖಾಂತರ ವ್ಯಕ್ತಗೊಂಡಿದೆ. ಇಂಥ ಆಕಳುಗಳ ಉಸ್ತುವಾರಿಯನ್ನು ನೋಡಿಕೊಳ್ಳುವವರು ಗೋಪಾಲಕರು, ಸಾಮಾನ್ಯರು.

ಗೋಪಾಲಕರ ವೇಷವನ್ನು ಕವಿ ಇದೇ ಪ್ರಸಂಗದಲ್ಲಿ ಸ್ಪಷ್ಟಪಡಿಸಿದ್ದಾನೆ. 'ಮಿಸುಪ ಕಂಬಳಿ, ಕೊಂಬು ಕಲ್ಲಿ' ಇವರ ವೇಷ ವಿಶೇಷಗಳು. ಅಂಗಿ ತೊಟ್ಟುಕೊಳ್ಳಲು, ಕಂಬಳಿ ಚಳಿ ಮಳೆ ರಕ್ಷಣೆಗೆ, ಕೊಂಬು ಹಿಂಸಾಮೃಗಗಳ ಸೂಚನೆಗೆ ಅಥವಾ ಅವುಗಳನ್ನು ಹೆದರಿಸಲು.

ವಿರಾಟ ಪರ್ವದ ೭ನೆಯ ಸಂಧಿಯ ಕೊನೆಯಲ್ಲಿ ಕೌರವನಿಗೆ ಸೋಲಾಗಿ ರಾಜಭಟರು ವಿರಾಟನ ಆಕಳುಗಳನ್ನು ಬಿಟ್ಟರು. ಗೋಪಾಲಕರು ಅವನ್ನು ಒಟ್ಟುಗೂಡಿಸಿ ಸನ್ನೆಯೊಂದಿಗೆ ಪುರದತ್ತ ನಡೆಸಿಕೊಂಡು ಬಂದರು. ಹಸುಗಳ ಕೆಚ್ಚಲು ಬಿಗಿದು ಹಾಲು ತೊರೆಯಾಗಿದೆ. ಬಾಲ ಎತ್ತಿ ಸುತ್ತಲೂ ನೋಡಿ ಬೆಚ್ಚಿ ಬಿದ್ದು ವೇಗವಾಗಿ ಓಡುತ್ತಿವೆ. ಹೊಸಬರ ನೋಟಕ್ಕೆ ಪುಟಿಯುತ್ತ ಬರುತ್ತಿದ್ದ ಈ ದನಗಳ ಹಿಂಡಿನಲ್ಲಿದ್ದ ಕೆಲವು ಕಡೆಗಂದಿಗಳು ಬಾಲದೆಡೆಗೆ ಮೂಸುವ, ಕಾಲಿನಿಂದ ನೆಲ ಕೆರೆಯುವ, ಗೂಳಿಗಳೊಂದಿಗೆ ಸ್ಪರ್ಧಿಸಿ ಕೋಡಿನಿಂದ ಉಜ್ಜುವ ದೃಶ್ಯ ಚಿತ್ರವತ್ತಾಗಿದೆ.

ಕೆಲವು ಕಡೆಗಂದಿಗಳು ಬಾಲದ
ಬಳಿಗೆ ಮೂಗಿಟ್ಟಡಿಗಡಿಗೆ ಮನ
ನಲಿದು ಮೋರೆಯನೆತ್ತಿ ಸುಕ್ಕಿಸಿ ಮತ್ತೆ ಹರಿಹರಿದು
ಮಲೆತು ಕಾಲಲಿ ನೆಲನ ಕೆರೆದ
ವ್ವಳಿಸಿ ಮತ್ತೊಂದಿದಿರುವರೆ ಬಲು
ಸಲಗನೀಡಿರಿದಾಡುತಿರ್ದುದು ಹಿಂಡು ಹಿಂಡಿನಲಿ

ಕುಮಾರವ್ಯಾಸನ ಲೋಕಜ್ಞಾನ ಎಣೆಯಿಲ್ಲದ್ದು. ಊರ ಕಡೆಗೆ ಹೊರಟ ವಿರಾಟ ಗೋವುಗಳು ತೋರುವ ಅನಿರ್ಬಂಧಿತ ಚೆಲ್ಲಾಟ ಗ್ರಾಮೀಣ ಪರಿಸರವನ್ನೇ ನಿರ್ಮಿಸುತ್ತದೆ. ಯುದ್ಧ ರೀತಿಯನ್ನು ಸಮರ್ಥವಾಗಿ ಚಿತ್ರಿಸುವ ನಾರಣಪ್ಪ ಅಷ್ಟೆ ಸಶಕ್ತವಾಗಿ ಹಳ್ಳಿ ಚಿತ್ರವನ್ನೂ ಕೊಡಬಲ್ಲ.

ಸಾಂಸ್ಕೃತಿಕ ನೆಲೆಯಲ್ಲಿ ಪ್ರಧಾನವಾಗಿ ತೋರುವ ಉದ್ಯೋಗ ವ್ಯವಸ್ಥೆ ಮೇಲ್ನೋಟಕ್ಕೆ ಭೌತಿಕವೆನ್ನಿಸಿದರೂ ಅದು ಕೇವಲ ಭೌತಿಕವಲ್ಲ. ತಮ್ಮ ತಮ್ಮ ಉದ್ಯೋಗಗಳಲ್ಲಿ ಜನತೊಡಗಿಸಿಕೊಳ್ಳುವ ನಿರಂತರತೆ ಮತ್ತು ತಾದಾತ್ಮ್ಯತೆ ಬಹುಮುಖ್ಯವಾದವುಗಳು. ಮಗಧಮಂಡಲ ದಾರಿಯಲ್ಲಿ ತೋರುವ ಪ್ರಾಕೃತಿಕ ಸೊಗಸಿನಿಂದ ಆ ಜನರ ಜೀವನೋತ್ಸಾಹವನ್ನು ನಾವು ಗುರುತಿಸಿಕೊಳ್ಳಬಹುದು. ಬೇಟೆಗಾರರ ಹುರುಪು, ಹಾಹಾಕಾರಗಳು ನಮ್ಮ ಕಣ್ಣು ಕಿವಿಗಳಿಗೆ ಗೋಚರಿಸುತ್ತವೆ. ವಿರಾಟ ನಗರದ ಕಡೆಗೆ ಸಾಗಿದ ಗೋವ್ರಜದ ಲವಲವಿಕೆ ಮನಸ್ಸು ತಾಗುತ್ತದೆ. ಜಡದಲ್ಲಿ ಚೈತನ್ಯ ತುಂಬುವ ಈ ಪರಿಯ ಕಾವ್ಯಶಕ್ತಿಯೇ ಕುಮಾರವ್ಯಾಸನನ್ನು ಮಹಾಕವಿಯಾಗಿಸಿದೆ.

ಕಲೆ – ಕ್ರೀಡೆ:

ಮನರಂಜನೆಯ ಮಾಧ್ಯಮಗಳೆನಿಸಿರುವ ಕಲೆ, ಕ್ರೀಡೆಗಳಿಗೆ ಕುಮಾರವ್ಯಾಸ ಭಾರತದಲ್ಲಿ ಅವಕಾಶ ಕಡಿಮೆ. ಪ್ರತಿಮಾವಿಧಾನದ ಮೂಲಕ ಕಾಣಿಸಿಕೊಳ್ಳುವ ಸೂತ್ರದಗೊಂಬೆಯಾಟ ಮತ್ತು ಬಾಲ್ಯದಲ್ಲಿ ಕೌರವ ಪಾಂಡವರಾಡುವ ಮಕ್ಕಳಾಟಗಳು ಮಾತ್ರ ಇಲ್ಲಿ ನಿರೂಪಗೊಂಡಿವೆ.

ಕನ್ನಡ ಭಾರತದಲ್ಲಿ ಸೂತ್ರದ ಗೊಂಬೆಯಾಟದ ಪ್ರಸ್ತಾಪ ಎರಡು ಕಡೆ ಬಂದಿದೆ. ಶಿಶುಪಾಲ ಸಂಹಾರಕ್ಕೆ ಮೊದಲು ಕೂಡಿದ ಸಭೆಗೆ ಕೃಷ್ಣಶಕ್ತಿಯನ್ನು ಭೀಷ್ಮ ಹೇಳುವ ಸಂದರ್ಭದಲ್ಲಿ ಸೂತ್ರದಗೊಂಬೆಯಾಟವನ್ನು ಒಂದು ಪ್ರತಿಮೆಯಾಗಿ ಬಳಸುತ್ತಾನೆ.

> ಹಾಹೆಗಳು ಹೊಯ್ದಾಡವೇ ನಿ
> ರ್ವಾಹ ಸೂತ್ರದ ಕುಣಿಕೆಗಾರನ
> ಗಾಹಿನಲಿ ತಜ್ಜಗದ ಜೀವದ ಸುಕೃತ ದುಷ್ಕೃತವ
> ಓಹರಿಕೆಯಲಿ ತಂದು ಭವದಲಿ
> ಸೋಹಿಸುಳಿಸುವನೀ ಚರಾಚರ
> ಜೋಹವಿದು ನಿಜ ಲೀಲೆಯೇ ಹರಿಗೆಂದನಾ ಭೀಷ್ಮ (ಸಭಾ–೯–೯)

ಕುರುಕ್ಷೇತ್ರ ರಣಾಂಗಣದಲ್ಲಿ ಅರ್ಜುನನು ಭೀಷ್ಮನನ್ನು ನಾನು ಕೊಲ್ಲಲಾರೆ ಎಂದು ಹಿಂಜರಿದ ಹೊತ್ತಿನಲ್ಲಿ ಕೃಷ್ಣನು ಸೂತ್ರಗೊಂಬೆಯಾಟದ ಉದಾಹರಣೆ ಕೊಟ್ಟು ಅರ್ಜುನನನ್ನು ಯುದ್ಧಕ್ಕೆ ಅಣಿಗೊಳಿಸುತ್ತಾನೆ.

> ಯಂತ್ರ–ಮಿಡಿದರೆ ಕಾದಿ ಬೀಳ್ವವು
> ಯಂತ್ರಮಯ ಹಾಹೆಗಳು ವಧೆಯಾ
> ಯಂತ್ರಿಗೋ ಹಾಹೆಗಳಿಗೊ ಹೇಳಾರ ನೆಮ್ಮುವದು (ಭೀಷ್ಮ–೮–೩೧)

ಇಲ್ಲಿ ಎರಡೂ ಪದ್ಯಗಳಲ್ಲಿ ಉಕ್ತಗೊಂಡಿರುವ ಸೂತ್ರ ಗೊಂಬೆಯಾಟದ ಮೂಲಾಂಶಗಳು ಮುಖ್ಯವೆನಿಸುತ್ತವೆ. ಹಾಹೆ ಎಂದರೆ ಗೊಂಬೆ, ಆಟಕ್ಕೆ ಬೇಕಾಗುವ ಮುಖ್ಯ ಸಾಧನ. ಸೂತ್ರ–ಗೊಂಬೆಗಳಿಗೆ ಮತ್ತು ಗೊಂಬೆಯಾಡಿಸುವವ ಎರಡರ ಮಧ್ಯವರ್ತಿಯಾದುದು. ಯಂತ್ರ – ಗೊಂಬೆಗಳಿಗೆ ದಾರಕಟ್ಟಿ ಅದನ್ನು ಕೈ–ಬೆರಳಿಗೆ ಸಿಕ್ಕಿಸಿಕೊಂಡು ಗೊಂಬೆಯಾಡುವಂತೆ ಮಾಡಿರುವ ವ್ಯವಸ್ಥೆ. ಕುಣಿಕೆಗಾರ ಅಥವಾ ಯಂತ್ರಿ ಗೊಂಬೆಯಾಟ ಆಡಿಸುವವನು. ಸೂತ್ರದ ಗೊಂಬೆಯಾಟಕ್ಕೆ ಸಂಬಂಧಪಡುವ ಪಾರಿಭಾಷಿಕ ಶಬ್ದ ಮತ್ತು ಆಟದ ಪ್ರಕ್ರಿಯೆಗಳನ್ನು ನೋಡಿದರೆ ಆಗಿನ – ಈಗಲೂ ಅಸ್ತಿತ್ವದಲ್ಲಿರುವ – ಕಾಲದಲ್ಲಿ ಜಾನಪದದ ಒಂದು ಬಯಲಾಟ ಪ್ರಕಾರವಾಗಿ ಬೆಳೆದು ಬಂದಿದ್ದ ಸೂತ್ರದ ಗೊಂಬೆಯಾಟವನ್ನು ಕುಮಾರವ್ಯಾಸ ಬಲ್ಲವನಾಗಿದ್ದನೆಂಬುದಿಲ್ಲಿ ಸ್ಪಷ್ಟವಾಗುತ್ತದೆ.

ಶ್ರೀಕೃಷ್ಣ ಪರಮಾತ್ಮನು ಸರ್ವಶಕ್ತ; ಗೊಂಬೆಯಾಟದಲ್ಲಿ ಪರದೆಯ ಹಿಂದಿದ್ದ (ಓಹರಿಕೆಯಲ್ಲಿ) ಮನುಷ್ಯರೆಂಬ ಗೊಂಬೆಗಳನ್ನು ಭವದಲ್ಲಿ ನಿಲ್ಲಿಸಿ ಅವರವರ ಸುಕೃತ ದುಷ್ಕೃತಗಳಿಗೆ ತಕ್ಕಂತೆ ಕುಣಿಸುತ್ತಾನೆ. ಹರಿಗೆ ಇದೊಂದು ಲೀಲೆಯೇ ಆಗಿದೆಯೆಂಬುದು ಮೊದಲನೆಯ ಪದ್ಯದ ತಾತ್ಪರ್ಯವಾದರೆ ಸೂತ್ರಧಾರನು ಮಿಡಿದರೆ ಕಾಯಿಗಳು ಅಂದರೆ ಜೀವರುಗಳು ಬಿದ್ದು ಮರಣ ಹೊಂದುತ್ತಾರೆ. ಇದು ಯಾರನ್ನು ಅವಲಂಬಿಸಿದೆ? ಆಟವಾಡಿಸುವ ದೇವರಿಗೆ ಸಂಬಂಧಿಸಿದ್ದೇ ಅಥವಾ ಅವನ ಇಚ್ಛೆಯನುಸಾರ ಕುಣಿವ ಗೊಂಬೆಗೆ ಸಂಬಂಧಿಸಿದ್ದೇ ಎಂಬುದು ಪ್ರಶ್ನಾರ್ಥಕ ರೂಪದ ಎರಡನೆಯ ಪದ್ಯದ ತಾತ್ಪರ್ಯ. ಬಗೆಹರಿಯದ ಈ ಸಮಸ್ಯೆಯನ್ನು ಕವಿ ನಮ್ಮ ಮುಂದಿಡುತ್ತಾನೆ. ಒಂದು ರೀತಿಯಿಂದ ಇದೆಲ್ಲ ಆಧ್ಯಾತ್ಮ ಜಿಜ್ಞಾಸೆಗೆ ಸೇರಿರುವ ವಿಷಯ. ಇಂತಹ ಗಹನ ವಿಷಯವನ್ನು ಸೂತ್ರದಗೊಂಬೆಯಾಟಕ್ಕೆ ಅನ್ವಯಿಸಿಕೊಂಡು ವಿಷಯವನ್ನು ಸರಳಗೊಳಿಸಿದ್ದಾನೆ ಕವಿ. ಕುಮಾರವ್ಯಾಸನಂಥ ಶಿಷ್ಟಕವಿಯಷ್ಟೇ ಅಲ್ಲ ಜಾನಪದ ಲೋಕದ ಅನೇಕ ಸಾಮಾನ್ಯ ಕಲಾವಿದರೂ ಕೂಡ ಇದನ್ನು ಸಾದ್ಯಂತವೆನಿಸುವ ರೀತಿಯಲ್ಲಿ ವಿವರಿಸಬಲ್ಲರು.

ಕೌರವ ಪಾಂಡವರು ಮಕ್ಕಳಾಗಿದ್ದಾಗ ಆಡುವ ಆಟಗಳ ಉಲ್ಲೇಖ ಆದಿಪರ್ವದ ಆರಂಭದಲ್ಲಿ ಎರಡು ಪದ್ಯಗಳ ಮೂಲಕ ದೊರೆಯುತ್ತದೆ.

ಆಳಿನೇರಿಕೆ ಹಿಡಿಗವಡೆ ಗುರಿ
ಯಾಳು ಚೆಂಡಿನ ಹೊಣಕೆ ಚಿಣಿ ಕೋ
ಲಾಳು ಗೊತ್ತಿನ ದಂಡೆಯೆನೆ ನಾನಾವಿನೋದದಲಿ (ಆದಿ–೬–೧)

ಗುಡುಗು ಗುತ್ತಿನ ಚೆಂಡು ಗುಮ್ಮನ
ಬಡಿವ ಕತ್ತಲೆ ಗುದ್ದುಗಂಬದ
ಗಡಣೆ ಕಣ್ಮುಚ್ಚಸಗವರಿ ಹರಿಹಲಗೆ ನಿಡುಗವಣೆ
ಕೆಡಹು ಕುಟ್ಟಿಗನಾದಿಯಾದವ
ಗಡ ವಿನೋದದಲಾಡಿದರು ಪಂ
ಗಡದಲೈವರು ನೂರ್ವರಿವರಿತ್ತಂಡವೊಂದಾಗಿ (ಆದಿ–೬–೨)

ಇಲ್ಲಿ ಪ್ರಸ್ತುತಗೊಂಡಿರುವ ಆಟಗಳೆಲ್ಲ ಅರಸು ಮಕ್ಕಳಿಗೆ ಸಂಬಂಧಿಸಿ ಬಂದಿದ್ದರೂ ಇವು ಜಾನಪದ ಮೂಲವನ್ನೇ ಪಡೆದುಕೊಂಡಿವೆ. ಇಲ್ಲಿರುವ ಆಟಗಳ ಪದ ಸ್ವರೂಪದ ಪರಿಶೀಲನೆಯಿಂದಲೇ ಇವು ಜನಪದ ಆಟಗಳೆಂದು ಧಾರಾಳವಾಗಿ ಹೇಳಬಹುದು. ಶಕ್ತಕವಿಯಾದವನು ತನ್ನ ಪರಿಸರದಲ್ಲಿರುವ ಜಾನಪದ ಲೋಕವನ್ನು ಅಲಕ್ಷಿಸಲಾರ. ತನಗೆ ಅನುವಾಗುವ ರೀತಿಯಲ್ಲಿ ಜಾನಪದದ ಹಲವು ಮುಖಗಳನ್ನು ತನ್ನ ಕಾವ್ಯದ ಒಡಲಿಗೆ ತುಂಬುತ್ತಾನೆ. ಕುಮಾರವ್ಯಾಸನು ಸಮಕಾಲೀನ ಜಾನಪದ ಕ್ಷೇತ್ರದ ಅನೇಕ ವಿಷಯಗಳನ್ನು ತನ್ನ ಕಾವ್ಯಕ್ಕೆ ಸೇರಿಸಿಕೊಂಡಂತೆ ಗ್ರಾಮೀಣ ಮಕ್ಕಳು ಆಡುವ ಆಟಗಳನ್ನೂ ಕಥೆಗೆ ಹೊಂದಿಕೆಯಾಗುವ ರೀತಿಯಲ್ಲಿ ಅಳವಡಿಸಿಕೊಂಡಿದ್ದಾನೆ. ತನ್ಮೂಲಕ ಕುಮಾರವ್ಯಾಸನ ದೇಸಿ ಪ್ರೀತಿಯನ್ನು ಧಾರಾಳವಾಗಿ ಗುರುತಿಸಬಹುದು.

ಎಲ್ಲ ಆಟಗಳಂತೆ ಜನಪದ ಆಟಗಳು ಎರಡು ತಂಡಗಳಲ್ಲೇ ಮುಂದುವರಿಯುತ್ತವೆ. ಇಲ್ಲಿಯ ಎರಡು ತಂಡಗಳೆಂದರೆ ಕೌರವರು-ಪಾಂಡವರು. ಅವರ ಮಧ್ಯ ನಡೆಯುವ ಎಲ್ಲ ಆಟಗಳು ಸಾಕಷ್ಟು ಹುರುಡಿನಿಂದಲೇ ನಡೆಯುತ್ತವೆ. ಆಟಕ್ಕೆ ತಕ್ಕಂತೆ ಇಲ್ಲಿಯ ಬಾಲಕರೆಲ್ಲ ದೇಸಿ ಮನಸ್ಸನ್ನೇ ಪಡೆದುಕೊಂಡಿದ್ದಾರೆ.

ಯುದ್ಧವ್ಯವಸ್ಥೆ:

ಯುದ್ಧವ್ಯವಸ್ಥೆ ಪ್ರಭುತ್ವದ ಆಡಳಿತ ವ್ಯವಸ್ಥೆಯ ಒಂದು ಭಾಗವಾಗಿದ್ದರೂ ಇಲ್ಲಿ ಕೆಲಸ ಮಾಡುವವರು ಸಾಮಾನ್ಯ ಜನವರ್ಗದವರು. ಕುಮಾರವ್ಯಾಸ ಭಾರತದಲ್ಲಿ ಕೃಷಿಯಂತೆ, ಬೇಟೆಗಾರಿಕೆಯಂತೆ ಸಾಮಾನ್ಯ ಕುಟುಂಬಗಳ ಸೈನಿಕರು ಯುದ್ಧ ವ್ಯವಸ್ಥೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಯೋಧರಾಗಿ, ರಥಿಕರಾಗಿ, ಆಯುಧ ತಯಾರಿಕರಾಗಿ, ವೈದ್ಯರಾಗಿ ಕೆಲಸ ಮಾಡುತ್ತಾರೆ. ಇದೆಲ್ಲ ಸಂಸ್ಕೃತಿಯ ಒಂದು ಭಾಗವೆಂಬಂತೆಯೇ ಇದೆ. ಇವರ ಕುಟುಂಬ ನಿರ್ವಹಣೆಗೆ ನಿಗದಿತ ವೇತನವೂ ಇರಬಹುದು. ಬೇರೆಬೇರೆ ಸಂದರ್ಭಗಳಲ್ಲಿ ಘಟಿಸಿದ ಯುದ್ಧಗಳ ವಿವರಣೆ ಗದುಗಿನ ಭಾರತದಲ್ಲಿದೆ. ರಾಜಸೂಯ ಯಾಗ ಸಂದರ್ಭದಲ್ಲಿ ಪಾಂಡವರು ದಿಗ್ವಿಜಯ ಉದ್ದೇಶದಿಂದ ಬೇರೆ ಬೇರೆ ಪ್ರದೇಶಗಳ ಮೇಲೆ ಯುದ್ಧಸಾರುತ್ತಾರೆ. ಖಾಂಡವ ದಹನದ ಪ್ರಸಂಗದಲ್ಲಿ ಅರ್ಜುನನು ಇಂದ್ರನೊಂದಿಗೆ ಯುದ್ಧ ಮಾಡುತ್ತಾನೆ. ತೀರ್ಥಯಾತ್ರೆ ಕೈಕೊಂಡ ಸಂದರ್ಭದಲ್ಲಿ ಶಿವನೊಂದಿಗೆ ಹೋರಾಡುವ ಪ್ರಸಂಗ ಅರ್ಜುನನಿಗೆ ಪ್ರಾಪ್ತವಾಗುತ್ತದೆ. ಹದಿನೆಂಟು ದಿನಗಳ ಕಾಲ ಕುರುಕ್ಷೇತ್ರ ರಣಾಂಗಣದಲ್ಲಿ ನಡೆದ ಯುದ್ಧ ಮಹಾಭಾರತದ ಯುದ್ಧಗಳಲ್ಲೇ ಪ್ರಮುಖವಾದುದು, ಭೀಕರವಾದುದು. ಸಮರವು ಸಂಸ್ಕೃತಿಯ ಭಾಗವೆನ್ನುವ ಮಟ್ಟಿಗೆ ಯುದ್ಧದ ವ್ಯಾಪ್ತಿಯಿದೆ, ತಾದಾತ್ಮ್ಯತೆಯಿದೆ. ಗದುಗಿನ ಭಾರತದ ದ್ವಿತೀಯ ಭಾಗ ಕುರುಕ್ಷೇತ್ರ ಯುದ್ಧದಿಂದಲೇ ತುಂಬಿದ್ದು ಈ ಭಾಗದ ೬ ರಿಂದ ೧೦ರ ವರೆಗಿನ ಐದೂ ಪರ್ವಗಳು ಯುದ್ಧಪಂಚಕಗಳೆನ್ನಿಸಿವೆ. ಯುದ್ಧದಲ್ಲಿ ಭಾಗವಹಿಸುವ ಸೈನಿಕರ ವೈಯಕ್ತಿಕ ಜೀವನಕ್ಕಿಂತ ಮುಖ್ಯವಾಗಿರುವುದು ಅವರು ಯುದ್ಧ ವ್ಯವಸ್ಥೆಯಲ್ಲಿ ಭಾಗವಹಿಸುವ ರೀತಿ. ಈಗಾಗಲೇ ರಾಜಪ್ರಭುತ್ವದ ನೆಲೆಯಲ್ಲಿ ಸೈನಿಕರ ಅಸ್ತಿತ್ವವನ್ನು ಕುರಿತು ಮಾತನಾಡಲಾಗಿದೆ. ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಸೈನಿಕರೂ ಒಳಗೊಂಡಂತೆ ಇಡೀ ವ್ಯವಸ್ಥೆಯ ಕೆಲವು ಅಂಶಗಳನ್ನಿಲ್ಲಿ ಅವಲೋಕಿಸಬಹುದು.

ಯುದ್ಧಕ್ಕೆ ನಿರಂತರತೆ ಇರುವುದಿಲ್ಲವಾದರೂ ಯುದ್ಧದ ಪೂರ್ವಸಿದ್ಧತೆ ನಿರಂತರ ಪ್ರಕ್ರಿಯೆ. ಯುದ್ಧದಲ್ಲಿ ಉಪಯೋಗಿಸಲ್ಪಡುವ ಬಿಲ್ಲು, ಬಾಣ, ಕವಚ, ರಥಾದಿಗಳೆಲ್ಲ ಭವಿಷತ್ತಿನಲ್ಲಿ ಘಟಿಸಬಹುದಾದ ಯುದ್ಧಕ್ಕೂ ಬೇಕು; ಯುದ್ಧ ಪೂರ್ವದ ತಾಲೀಮಿಗೂ ಬೇಕು. ಇವುಗಳ ತಯಾರಿಕಾ ಘಟಕದ

ಜನವರ್ಗವೊಂದು ನೇಪಥ್ಯದಲ್ಲಿಯೇ ಕೆಲಸ ಮಾಡುತ್ತದೆ. ಆಯುಧಗಳ ವೈವಿಧ್ಯತೆಯನ್ನು ನೋಡಿದರೇನೇ ಇವರ ಶ್ರಮ ಮತ್ತು ಕೌಶಲ್ಯ ಅರ್ಥವಾಗುತ್ತದೆ.

ದ್ರೋಣಪರ್ವದ ೯ನೆಯ ಸಂಧಿಯ ಆರಂಭದಲ್ಲಿ ಫಲುಗುಣನು ಆಯುಧ ಶಾಲೆಯನ್ನು ಪ್ರವೇಶಿಸಿ ಹಲವು ಬಗೆಯ ಆಯುಧಗಳನ್ನು ತೆಗೆದು ಜೋಡಿಸಿ ಇಡಿಸಿದನು. ನಿಶಿತ ಬಾಣಗಳು, ಚಾಪ, ಕೃಪಾಣ, ಪರಶು, ತ್ರಿಶೂಲ, ಮುದ್ಗರ, ಚಕ್ರ, ಸಲ್ಲೆಹ, ಶಕ್ತಿ, ತೋಮರ ಸವಗ, ಮೊಚ್ಚಯ, ಜೋಡು, ಸೀಸಕ ಮುಂತಾದ ಆಯುಧಗಳೂ ಎದೆಯ ಕವಚ, ತೋಳ ಬಾಹುಲಿಕೆಗಳೂ ಇಲ್ಲಿ ಹೆಸರಿಸಲ್ಪಟ್ಟಿವೆ (ದ್ರೋಣ–೯–೧). ಹೀಗೆಯೇ ಎಣಿಸಲಾರದ ಬಂಡಿಗಳೊಂದಿಗೆ ದ್ರೋಣ ಕೂಡಿಸಿದ ಶಸ್ತ್ರ ಸಂಚಯ ಹೀಗಿದೆ: ಹಕ್ಕರಿಕೆ, ಸೀಸಕ ಜೋಡು, ರೆಂಚೆ, ಮಣಿಮಯದ ಮೋಹಳ, ಹಿರಿಯುಬ್ಬಣ, ಸಬಳ, ಶೂಲ, ಸುರಗಿ, ಕಣೆ. ಕವಚಗಳೂ ಇಲ್ಲಿ ಸಂಗ್ರಹಿಸಲ್ಪಟ್ಟಿವೆ(ದ್ರೋಣ–೧೫–೧೯). ಅರ್ಜುನ ಮತ್ತು ದ್ರೋಣರು ಕೂಡಿಸಿದ ಆಯುಧಗಳನ್ನು ನೋಡಿದರೆ ಸೀಸಕ ಮತ್ತು ಜೋಡು ಎರಡೇ ಆಯುಧಗಳು ಪುನರಾವರ್ತನೆಗೊಂಡಿವೆ. ಇದರಿಂದ ಯೋಧರು ಬಳಸುತ್ತಿದ್ದ ಆಯುಧಗಳ ವೈವಿಧ್ಯತೆ ಮತ್ತು ವಿಪುಲತೆ ಎರಡೂ ಸ್ಪಷ್ಟವಾಗುತ್ತವೆ. ಇವು ಹಲವು ಬಗೆಯ ಶಸ್ತ್ರಾಸ್ತ್ರಗಳಾದರೆ ಅವುಗಳಲ್ಲಿರುವ ಬಾಣಗಳ ವೈವಿಧ್ಯತೆಯೇ ದಂಗುಬಡಿಸುವಂತಹದು. ಕರ್ಣಪರ್ವದಲ್ಲಿ ಭೀಮನ ಸಾರಥಿ ಯುದ್ಧ ಮಾಡಿ ಉಳಿದಿರುವ ಬಾಣಗಳ ಅಂಕಿ–ಸಂಖ್ಯೆಯನ್ನು ಒಪ್ಪಿಸುವಾಗ ಹಲವು ಬಗೆಯ ಬಾಣಗಳ ಹೆಸರುಗಳು ಉಲ್ಲೇಖಗೊಂಡಿವೆ: ಬಲು ಸರಳು, ಬೋಳೆಯಂಬು, ಅರ್ಧಚಂದ್ರಶರ, ಉಳಿಯಂಬು, ಕಣಗಿಲ ಸರಳು, ನಾರಾಚಿ, ಮುಗುಳಂಬು, ಕವಲುಗಣೆ, ಮುಮ್ಮೊನೆ ನಾಳಿಯಂಬು(ಕರ್ಣ–೧೮–೨೧,೨೨).

ಸೇನೆಯ ಸಮರೋತ್ಸಾಹ ಹೆಚ್ಚುವುದೇ ಘೋಷವಾದ್ಯಗಳ ರವದಿಂದ. ಭೀಷ್ಮನು ಸೇನಾಪತ್ಯ ವಹಿಸಿದ ಮೂರನೆಯ ದಿನ ಎರಡೂ ಸೈನ್ಯಗಳು ತಮ್ಮ ತಮ್ಮ ಸೈನ್ಯವನ್ನು ಹುರುದುಂಬಿಸಲು ಸೂಳುಸೂಳಾಗಿ ಅಳ್ಳಿರಿಯುವ ನಿಸ್ಸಾಳಗಳ ಸಮೂಹ ತಂಬಟದ ಕೊಂಬಿನ ಬಲುದನಿ, ಕಹಳೆಗಳ ಮೊಳಗು ಮೊಗ್ಗುಗಳ ಕಳಕಳ – ಇವೆಲ್ಲವುಗಳಿಂದ ದೆಸೆ ದೆಸೆಗಳು ಸೀಳಿ ಹೋದಂತಾಯಿತು. ರಣಾಂಗಣದಲ್ಲಿ ಮೊಳಗುವ ಈ ಘೋಷವಾದ್ಯಗಳೆಲ್ಲ ಜಾನಪದ ಮಧ್ಯದಿಂದಲೇ ಬಂದವುಗಳಾಗಿವೆ (ಭೀಷ್ಮ–೬–೯).

ಸೂತರು ಸಜ್ಜುಗೊಳಿಸಿದ ರಥವರ್ಣನೆಯೂ ಈ ಯುದ್ಧ ಕೋಲಾಹಲದಲ್ಲಿ ಒಂದೆಡೆ ಕಣ್ಣಿಗೆ ಬೀಳುತ್ತದೆ. ಯುದ್ಧ ನಾಯಕರು ಯುದ್ಧಕ್ಕಾಗಿ ರಥಹೂಡಿಕೊಂಡು ಬರಬೇಕೆಂದು ಕೈಬೀಸಿ ಕರೆದಾಗ ಸೂತರು ರಥವನ್ನು ಸಿದ್ಧಗೊಳಿಸಿ ಹೂಡಿಕೊಂಡು ಬರುವ ದೃಶ್ಯವಿದು – ಕುದುರೆಗಳಿಗೆ ನೊಗ ಹೇರಿದ ಕೂಡಲೇ ಅವು ಹುರುಪುಗೊಂಡು ಕುಣಿದವು. ಕುಸುರಿನ ಬಟ್ಟೆಯ ಧ್ವಜಗಳನ್ನು ರಥಕ್ಕೆ ಕಟ್ಟಿದರು. ರಥದ ಮುಮ್ಮೊನೆಯ ಶೂಲಗಳು ಹೊಳೆಯುವಂತೆ ತಿಕ್ಕಿದರು. ಕೀಲಚ್ಚುಗಳನ್ನು ಜೋಡಿಸಿಯಾದ ಮೇಲೆ ರಥದ ಒಡಲಲ್ಲಿ ಅಸ್ತ್ರಗಳನ್ನು ತುಂಬಿದರು. ಕುದುರೆಗಳ ಖುರಪುಟಕ್ಕೆ ವಜ್ರಾಂಗಿಯನ್ನು ತೊಡಿಸಿದರು. ರಥಕ್ಕೆ ಅಂಟಿಸಿದ ಹೊಂಗಂಟೆಗಳು ಶೋಭಿಸಿ ರಥದ ಚೀತ್ಕೃತಿ – ಜಯ ಜಯಕಾರಗಳು ದಿಕ್ಕುಗಳನ್ನು ತುಂಬುತ್ತಿರಲು ಮೊದಲು ಸೂತರೂ ತರುವಾಯ ರಥಿಕರೂ ರಥವನ್ನೇರಿದರು(ಭೀಷ್ಮ–೪–೯೪–೯೫). ಸಾಮಾನ್ಯ ವರ್ಗದಿಂದ ಬಂದಿರುವ ಸೂತರಿಂದ ಸಂಗ್ರಾಮಕ್ಕೊದಗುವ ಸಹಾಯ ಹಸ್ತ ಬಹಳ ದೊಡ್ಡದು. ರಥದ ಉಸ್ತುವಾರಿಯನ್ನು ವಹಿಸುವ ಅಥವಾ ರಥವನ್ನು ಮುನ್ನಡಿಸುವ ಇವನ ಸಹಾಯ. ಚಾಕಚಕ್ಯತೆಗಳೇ ಅನೇಕ ವೇಳೆ ರಥಿಕನ ಜಯಕ್ಕೆ ಕಾರಣವಾಗುತ್ತವೆ.

ಯುದ್ಧ ಮಾಡುವ ಯೋಧರು ಒಂದೇ ಬಗೆಯಾಗಿಲ್ಲ ಅವರವರ ಅಸ್ತ್ರ ಕೆಲಸಗಳನ್ನವಲಂಬಿಸಿಕೊಂಡು ಹಲವು ಹೆಸರಿನಿಂದ ಕರೆಯಲ್ಪಡುತ್ತಾರೆ. ಸುರಗಿ ಕಾಳಗದವರು, ಖಡ್ಗಾಯುಧರು, ಅಶ್ವಾರೋಹಿಗಳು, ಬಿಲ್ಲಾಳುಗಳೆಂದು ಮುಂತಾಗಿ ಹೆಸರುಗೊಳ್ಳುವ ಇವರಿಗೆ ಬೇರೆ ಬೇರೆ ಕರ್ತವ್ಯಗಳಿರುವಂತೆ ಬೇರೆ ಬೇರೆ ವೇಷ ಭೂಷಣಗಳಿವೆ. ಹುಲಿಯ ತೊಗಲಿನ ವಸ್ತ್ರಧರಿಸಿ ಬಿಲ್ಲು ಬಾಣ ಬತ್ತಳಿಕೆಗಳನ್ನು ಹೊಂದಿರುವ ಬಿಲ್ಲಾಳು ಒಬ್ಬನ ಚಿತ್ರವಿದು.

ಪುಲಿದೊಗಲು ಸೀಸಕದ ಕಿಗ್ಗ

ಟ್ಟೊಲೆವ ಸುರಗಿಯ ಕಾಂಚನದೊಳರೆ

ಬಲಿದ ಬಿಲ್ಲಿಂ ಬಿಗಿದ ತಿರುವಿನ ಬೆರಳ ಕೋಲುಗಳ

ಬಲಿದ ಮುಂಗೈ ಹೊಡೆಯ ಬಿರುದಿನೊ

ಳುಲಿವ ಘಂಟಿಯ – ಬೆನ್ನಲೆವ ಬ

ತ್ತಳಿಕೆಯಗಳಲೈದಿತ್ತು ಬಿಲ್ಲಾಳುಭಯ ಸೇನೆಯಲ್ಲಿ (ಭೀಷ್ಮ–೪–೧೨)

ಕುಮಾರವ್ಯಾಸನ ಕಾವ್ಯ ಪರಿಜ್ಞಾನವೆಂಥದೆಂದರೆ ಕೇವಲ ಕಾದುವವರನ್ನು ವರ್ಣಿಸುವುದಿಲ್ಲ. ಅವರು ಕಾದುವ ಕೌಶಲ ವಿನ್ಯಾಸವನ್ನೂ ನಮ್ಮ ಕಣ್ಣೆದುರು ಹಿಡಿಯುತ್ತಾನೆ. ಚೌಪಟ ಮಲ್ಲರು ಕಾಳಗ ಮಾಡಿದ ರೀತಿಯಿದು; ನೆಲದ ಮೇಲೆ ಅಬ್ಬರಿಸಿ ಮುಂದುವರಿಯುತ್ತ ಮುಂಬರಿಯುತ್ತಿರುವ ವೈರಿಗೆ ಮತ್ತೆ ಮತ್ತೆ ಏಟುಕೊಟ್ಟು ಕರೆಕರೆದು ಮೂದಲಿಸುತ್ತ ಉರವಣಿಸಿ ಹೊಯ್ದಾಡಿದರು. ಮೈಮೇಲೆ ಗಾಯ ಮೂಡಿಸಿ ಸೀಸಕ ಕಡಿದು ಬೀಳಿಸಿದರು; ಕೊಂದು ಮುಂದುವರಿದರು, ಮಿಂಚಿನಂತೆ ಹೊಳೆಯತ್ತ ಯಮನಂತೆ ಕಾಳಗ ಮಾಡಿದರು. (ಭೀಷ್ಮ–೪–೪೪,೪೫)

ಕುರುಕ್ಷೇತ್ರ ಯುದ್ಧದಲ್ಲಿ ಭಾಗವಹಿಸಿ ಉತ್ಸಾಹಿಸಿದ ಹೋರಾಡಿದ, ದಣಿದ, ಮಡಿದ ಅನೇಕ ಗಜತುರಗಗಳ ವರ್ಣನೆಯೂ ಕನ್ನಡ ಭಾರತದಲ್ಲಿದೆ. ಅರ್ಜುನನು ಕೌರವನೊಂದಿಗೆ ಯುದ್ಧಕ್ಕೆ ತೊಡಗಿದ ಸಂದರ್ಭದಲ್ಲಿ ಕುದುರೆಗಳು ವಿಪರೀತ ದಣಿದ ಅಪರೂಪದ ಪದ್ಯವೊಂದು ಕುಮಾರವ್ಯಾಸ ಭಾರತದಲ್ಲಿದೆ. ದಣಿದ ಕುದುರೆಗಳು ಕಡಿವಾಣ ಕಾರಿದವು, ಲದ್ದಿಹಾಕಿದವು, ಕಟುವಾಯಲ್ಲಿ ನೊರೆ, ಮೈಯಲ್ಲಿ ಬೆವರು.

ಕಡಿಯಣವ ಕಾರಿದವು ಕಂದವ

ನಡಿಗಡಿಗೆ ಹಾಯ್ಕಿದವು ಸುತ್ತಿದ

ಕುಡಿನೊರೆಯಕಟುವಾಯ ಲೋಳೆಯ ನಿಮಿರ್ದ ಮೈಲುಳಿಯ

ತಡಿನೆನೆದ ಬಲುಬೆಮರ ಘುಡು ಘುಡು

ಘುಡಿಪ ನಾಸಾಶ್ವಾಸ ಲಹರಿಯ

ಕಡುಮನದ ರಥತುರಗ ಮಿಕ್ಕವು ಸರಳ ಸೂಠಿಯಲಿ (ದ್ರೋಣ–೧೦–೨೪)

ಮಹಾಕಾವ್ಯದ ಆಶಯ ಹೊತ್ತ ಕವಿ ಯೋಜಿತ ಕಾವ್ಯ ಪರಿಸರದ ಎಲ್ಲಾ ಮುಖಗಳ ಅನುಭವ ಹೊಂದಿರುತ್ತಾನೆ. ಕೇವಲ ಮನುಷ್ಯರಷ್ಟೇ ಅಲ್ಲ ಪ್ರಕೃತಿ, ಪ್ರಾಣಿಸಂಕುಲದ ನೋಟ, ಭಾವಗಳೆಲ್ಲ ಕವಿಯ

ತೆಕ್ಕೆಗೆ ಬರುತ್ತವೆ. ದಣಿದ ಕುದುರೆಗಳ ಭೌತಿಕ, ಭಾವನಾತ್ಮಕ ವಿಶೇಷಗಳನ್ನು ಕವಿಯಿಲ್ಲಿ ಹೇಳುತ್ತ ತನ್ನ ದೇಶಿ ಸಂಸ್ಕೃತಿ ಪ್ರೇಮವನ್ನು ಶ್ರುತಪಡಿಸಿದ್ದಾನೆ.

ಜನಪದ ಸಂಸ್ಕೃತಿಯ ಒಂದು ಭಾಗವಾಗಿರುವ ದೇಸಿ ವೈದ್ಯರನ್ನೂ ದೇಸಿ ವೈದ್ಯ ವಿದ್ಯೆಯನ್ನೂ ಕುಮಾರವ್ಯಾಸ ಗುರುತಿಸಿದ್ದಾನೆ. ಯುದ್ಧದಲ್ಲಿ ಗಾಯವಡೆವ ಮನುಷ್ಯರಿಗೆ, ಗಜ, ತುರುಗಗಳಿಗೆ ನಾಟಿ ಔಷಧದ ಮುಖಾಂತರ ಉಪಚರಿಸುವ ವೈದ್ಯತಂಡ ಯುದ್ಧಭೂಮಿಯಲ್ಲಿ ನಿರಂತರ ತನ್ನ ಕೆಲಸಮಾಡುತ್ತದೆ. ಇಂಥ ಉಪಚಾರದ ವಿಷಯದಲ್ಲಿ ನಿಷ್ಣಾತರಾದವರು ಜನಸಾಮಾನ್ಯರೇ ಎಂದು ಬೇರೆ ಹೇಳಬೇಕಾಗಿಲ್ಲ. ಕುರುಕ್ಷೇತ್ರದಲ್ಲಿ ಕಾದುವ ಎರಡೂ ಬಲಗಳ ಅಪಾರ ಪ್ರಮಾಣದ ಅಂಕಿ ಸಂಖ್ಯೆಯನ್ನು ನೋಡಿದರೆ ಈ ವೈದ್ಯ ತಂಡದವರು ಅಧಿಕ ಸಂಖ್ಯೆಯಲ್ಲಿಯೇ ಇರಬೇಕು ಮತ್ತು ಈ ವಿದ್ಯೆ ಇವರಿಗೆ ಕುಲಕಸಬಾಗಿ ನಿಂತಿರಲೂ ಸಾಕು. ಯುದ್ಧದಲ್ಲಿ ಕಾದು ಗಾಯಹೊಂದಿದ ವೀರಭಟರನ್ನು ಇವರು ಉಪಚರಿಸುವ ರೀತಿಯಿದು: ಮೈಯೆಲ್ಲ ಗಾಯವಾಗಿ ಉಂಟಾದ ರಂಧ್ರಗಳಿಗೆ ವನಸ್ಪತಿಯ ಔಷಧವನ್ನ ತುಂಬುತ್ತಿದ್ದರು. ಮೈಗಂಡಿಯಲ್ಲಿ ರಕ್ತವನ್ನು ಶೋಧಿಸುತ್ತಿದ್ದರು. ಮೈಗೆ ಹಳೆಯ ತುಪ್ಪ ಲೇಪಿಸಿ ಇರಿದ ಗಾಯದೊಳಗಡೆಯಲ್ಲಿ ಎಣ್ಣೆಯನ್ನು ಹಾಕುತ್ತಿದ್ದರು. ಬಾಯಲ್ಲಿ ಮಂತ್ರೋದಕ ಹಾಕಿದ ಮೇಲೆ ಹೊರಬಂದ ಕರುಳನ್ನು ಹೊಟ್ಟೆಯೊಳಕ್ಕೆ ಹಾಕಿ ಮುಚ್ಚಿ ಮಂತ್ರಿಸಿ ಔಷಧಿಯನ್ನು ಹಚ್ಚಿದರು (ಭೀಷ್ಮ-೫-೪೧). ಯುದ್ಧಭೂಮಿಯಲ್ಲಿ ಕುದುರೆಗಳು ಗಾಯಗೊಂಡಾಗ ನಡೆಯುತ್ತಿದ್ದ ದೇಸಿ ಉಪಚಾರವೂ ವಿಶಿಷ್ಟವಾದುದು. ಕುದುರೆಗಳ ಹರಿದ ಕೊರಳುಗಳನ್ನು ಬಿಗಿದು ಎದೆಯಲ್ಲಿ ಮುರಿದಿದ್ದ ಬಾಣಗಳನ್ನು ಕಿತ್ತು ತೆಗೆದರು. ಹೊರಬಂದಿದ್ದ ಕರುಳನ್ನು ಹೊಟ್ಟೆಗೆ ನೂಕಿ ಹೊಲಿದು ಮದ್ದು ಲೇಪಿಸಿದರು. ಮೂಗಿಗೇರಿಸುವ ಔಷಧಿಯನ್ನು ಬೆಚ್ಚಗೆ ಮಾಡಿ ಮೂಗಿನೊಳಕ್ಕೆ ತೂರಿಸಿ ವಾಜಿಗಳ ವೇದನೆಯನ್ನು ಸಂತೈಸಿದರು. (ಭೀಷ್ಮ-೫-೩೯). ಆನೆಗಳ ಶರೀರವನ್ನು ಹೊಕ್ಕಿದ ಭರ್ಚಿಗಳನ್ನು ಮುರಿಯದಂತೆ ಕಿತ್ತು ಮದ್ದನಿಕ್ಕಿ ಮಾಡುತ್ತಿದ್ದ ಆನೆಗಳ ಉಪಚಾರ ಇನ್ನೂ ವಿಶಿಷ್ಟವಾದುದು.

ಒಡಲಿನೊಳು ಮುರಿದಿದ್ದ ಸಬಳದ
ನುಡಿಯಲೀಯದೆ ಕೀಳ್ವ ಮದ್ದನು
ಗಿಡಿವ ಜೇವಣಿಗೆಯೊಳು ಸಪ್ರಾಣಿಸುವ ದುರ್ವ್ರಣವ
ತೊಡೆದು ಕಟ್ಟುವ ಹಸ್ತಿ ವೈದ್ಯರ
ಗಡಣವುಭಯದೊಳೆಸದವು... (ಭೀಷ್ಮ-೫-೪೦)

- ಇಲ್ಲಿ ಬರುವ ಎಲ್ಲಾ ಬಗೆಯ ಜನಪದ ವೈದ್ಯ ವಿಸ್ತಾರವನ್ನು ನೋಡಿದರೆ ದೇಸಿ ಉಪಚಾರ ಪರಂಪರಾಗತ ಬಳವಳಿಯಾಗಿ ತೋರುತ್ತದೆ. ಔಷಧ ಉಪಚಾರದಲ್ಲಿ ಇವರ ಆತ್ಮ ವಿಶ್ವಾಸ ಒಡೆದು ತೋರುತ್ತದೆ. ಉಪಚಾರದಲ್ಲಿ ವೈದ್ಯರು ಬಳಸುತ್ತಿದ್ದ ಎಲ್ಲಾ ಸಸ್ಯಗಳ ಹೆಸರು ಇಲ್ಲಿಲ್ಲವಾದರೂ ಅವುಗಳ ವೈವಿಧ್ಯತೆಯನ್ನು ನಾವು ಕಲ್ಪಿಸಿಕೊಳ್ಳಬಹುದು. ಪೂರ್ವಕಾಲದಿಂದಲೂ ಜನಸಾಮಾನ್ಯರಿಂದ ಹರಿದುಬಂದಿರುವ ನಾಟಿ ಔಷಧಿ ಪದ್ಧತಿ ಅನೇಕ ಗ್ರಂಥಗಳಲ್ಲಿ ಪ್ರತಿಫಲಿಸುತ್ತ ಬಂದಿದೆ. ಇದು ಜನಪದರು ನಮ್ಮ ಸಂಸ್ಕೃತಿಗೆ ಸಲ್ಲಿಸಿರುವ ದೊಡ್ಡ ಕೊಡುಗೆಯಾಗಿದೆ. ಇಂಥ ಕಾವ್ಯಗಳಲ್ಲಿ ತೋರುವ ದೇಶಿ ವೈದ್ಯ ಪದ್ಧತಿಗಳನ್ನು ದಾಖಲಿಸುವ, ನಾಟಿ ಔಷಧಿಗಳನ್ನು ಸಂಗ್ರಹಿಸುವ ಕೆಲಸ ಕ್ಷಿಪ್ರವಾಗಿ ನಡೆಯಬೇಕಾಗಿದೆ.

ಸಂಪ್ರದಾಯ – ಆಚರಣೆಗಳು:

ಕನ್ನಡ ಭಾರತದ ಆಯಾ ಸಂದರ್ಭಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಅನೇಕ ಸಂಪ್ರದಾಯ ಆಚರಣೆಗಳ ಹಿಂದಿರುವ ಮೂಲ ಮನಸ್ಸು ಸಾಮಾನ್ಯ ಮನುಷ್ಯರದ್ದೇ. ಸಾಮಾಜಿಕ ಕೌಟುಂಬಿಕ ಪರಿಸರದಲ್ಲಿ ಸಂಪ್ರದಾಯಗಳು ತುಂಬಾ ಇರುತ್ತವೆಯಾದರೂ ಇಲ್ಲಿ ಅವಕ್ಕೆ ಅವಕಾಶ ಕಡಿಮೆ. ವೀರ ಪ್ರಧಾನವಾಗಿರುವ ಕಾವ್ಯಕ್ಕೆಇದು ಸಹಜವಾದ ವಿಷಯವಾಗಿದೆ. ಕಾವ್ಯದಲ್ಲಿ ಬಂದಿರುವ ಸಂಪ್ರದಾಯ ಆಚರಣೆಗಳನ್ನು ಮದುವೆ ಸಂಪ್ರದಾಯ, ಆರತಿ ಎತ್ತುವುದು, ನಿವಾಳಿಕೆ, ವೀಳ್ಯೆಯ ಸಂಬಂಧಿ, ಶಕುನಗಳು, ಬಲಿ ಸಂಪ್ರದಾಯ ಎಂದು ವರ್ಗೀಕರಿಸಿಕೊಂಡು ಇಲ್ಲಿ ಮುಂದುವರಿಯಲಾಗಿದೆ.

ಮದುವೆ ಸಂಪ್ರದಾಯ: ಮದುವೆಗೆ ಸಂಬಂಧಿಸಿದ ಆಚರಣೆಗಳು ಇಲ್ಲಿ ಒಂದೇ ಸಂದರ್ಭದಲ್ಲಿ ತೋರುತ್ತವೆ. ದ್ರುಪದ ರಾಜನು ಮಗಳು ದ್ರೌಪದಿಯನ್ನು ಪಾಂಡವರಿಗೆ ಧಾರೆಯೆರೆದು ಕೊಡುವ ಮಂಗಲ ಕಾರ್ಯದಲ್ಲಿ ರೂಢಿಯಲ್ಲಿರುವ ಕೆಲವು ಆಚರಣೆಗಳು ಇಲ್ಲಿ ಉಕ್ತಗೊಂಡಿವೆ. ಮೆಟ್ಟಕ್ಕಿಗಳನ್ನು ಮೆಟ್ಟುವುದು, ಜೀರಿಗೆ ಬೆಲ್ಲ ಸೂಸುವುದು, ಧಾರೆಯೆರೆದು ಕೊಡುವುದು – ಇವೇ ಆ ಆಚರಣೆಗಳು.

ಸಾರಿದನು ಮೆಟ್ಟಕ್ಕಿಗಳ ಗುಡ
ಜೀರಿಗೆಗಳೊದಗಿದವು ಲಗ್ನ ವಿ
ಹಾರದಾಶೀರ್ವಾದದಾಯತ ರವದ ರಭಸದಲಿ
ಧಾರೆಯೆರೆದನು ದ್ರುಪದ ಪಾಂಡುಕು
ಮಾರರಿಗೆ ನಿಜ ಸುತೆಯನತಿ ವಿ
ಸ್ತಾರಿಸಿತು ವೈವಾಹ ರಚನೆ ವಿಶಾಲ ವಿಭವದಲಿ (ಆದಿ-೧೬-೬೫)

– ಉಲ್ಲೇಖಗೊಂಡಿರುವ ಈ ಆಚರಣೆಗಳು ಇಂದಿಗೂ ರೂಢಿಯಲ್ಲಿವೆ.

ಆರತಿ: ಮಂಗಲ ಮಹೋತ್ಸವಗಳಲ್ಲಿ ಬರುವ ಆರಿತಿಯೆತ್ತುವ ಸಂಪ್ರದಾಯದಲ್ಲಿ ಪ್ರಸ್ತಾಪಗೊಳ್ಳುವ ಆರತಿಗಳು ಹಲವು ಬಗೆಯಾಗಿವೆ. ಉಪ್ಪಾರತಿ, ಮಂಗಳಾರತಿಗಳು ಪ್ರಧಾನವಾಗಿ ತೋರುತ್ತವೆ. ವಿಶೇಷವೆಂದರೆ ಕುಮಾರವ್ಯಾಸ ಭಾರತದಲ್ಲಿ ಆರತಿಯೆತ್ತುವ ಪ್ರಸಂಗ ಯುದ್ಧ ಸಂದರ್ಭದಲ್ಲಿಯೇ ಹೆಚ್ಚು. ಇಲ್ಲಿಯ ಎಲ್ಲ ಪ್ರಸಂಗಗಳಲ್ಲಿ ಆರತಿಯೆತ್ತುವವರು ಹೆಣ್ಣುಮಕ್ಕಳೇ. ಭೀಷ್ಮನ ಪಟ್ಟಾಭಿಷೇಕ ಸಂದರ್ಭದಲ್ಲಿ ಆರತಿಯನ್ನೆತ್ತಿ ಉಪ್ಪಾರತಿಯನ್ನು ಸೂಸಲಾಯಿತು(ಭೀಷ್ಮ-೧-೩೨). ವಿರಾಟನಗರಿಯ ಮೇಲೆ ಮುತ್ತಿಗೆ ಹೊರಟ ಕೌರವನಿಗೆ ಉಪ್ಪಾರತಿ ಸೂಸಿದರು(ವಿರಾಟ-೪-೨೮). ಇಲ್ಲಿಯ ಎರಡೂ ಸಂದರ್ಭಗಳನ್ನು ನೋಡಿದರೆ ಉಪ್ಪಾರತಿಯ ವಿಷಯದಲ್ಲಿ 'ಸೂಸು' ಎಂದ ಶಬ್ದ ಬಂದಿದೆ. ಬಹುಶಃ ಮೊದಲು ಆರತಿ ಮಾಡಿ ತರುವಾಯ ಉಪ್ಪನ್ನು ಸೂಸುವ ಕ್ರಮಕ್ಕೆ ಉಪ್ಪಾರತಿ ಅನ್ನುತ್ತಿದ್ದಿರಬೇಕು. ರಾಜಸೂಯ ಯಜ್ಞಕ್ಕೆ ಮೊದಲು ಭೀಮ, ಅರ್ಜುನ, ನಕಲು, ಸಹದೇವರು ನಾಲ್ಕೂ ದಿಕ್ಕಿಗೆ ದ್ವಿಗ್ವಿಜಯಕ್ಕೆ ಹೊರಟಾಗ ದ್ರೌಪದಿಯು ನಾಲ್ವರಿಗೂ ಮಂಗಳಾರತಿಯನ್ನು ಎತ್ತಿದಳು(ಸಭಾ-೩-೧೩). ಪಾಂಡವರು ಇಂದ್ರಪ್ರಸ್ಥಪುರಕ್ಕೆ ಹೊರಡುವ ಮುನ್ನ ರಾಣಿವಾಸದ ನಿಳಯದಲ್ಲಿ ಮಂಗಳಾರತಿ ಕೈಕೊಳ್ಳಲಾಯಿತು (ಆದಿ-೧೮-೭).

ನಿವಾಳಿಕೆ: ದೃಷ್ಟಿ ಪರಿಹಾರಕ್ಕಾಗಿ ಬರುವ ನಿವಾಳಿಕೆ ಹಲವು ಬಗೆಯಾಗಿವೆ. ನಿವಾಳಿಕೆ ಒಂದು ಆಚರಣೆಯೂ ಹೌದು, ನಂಬಿಕೆಯೂ ಹೌದು. ಅನ್ನದ ನಿವಾಳಿ, ರೊಟ್ಟಿಯ ನಿವಾಳಿ – ಹೀಗೆ ಬೇರೆ ಬೇರೆ ಪ್ರಕಾರಗಳಿವೆ. ಕುಮಾರವ್ಯಾಸ ಭಾರತದಲ್ಲಿ ವಿಶೇಷ ನಿವಾಳಿಕೆಯೊಂದು ತೆಗೆಯಲ್ಪಟ್ಟಿದೆ. ಭೀಮ ಮಗುವಾಗಿದ್ದಾಗ ಒಮ್ಮೆ ಪರ್ವತಾಗ್ರದಲ್ಲಿ ಕುಂತಿಯ ತೊಡೆಯ ಮೇಲಿದ್ದವನು ಜಾರಿ ಭೂಮಿಯ ಮೇಲೆ ಬಿದ್ದರೆ ಕೆಳಗಿನ ಬಂಡೆ ಪುಡಿಪುಡಿಯಾಯಿತಂತೆ. ಆಗ ಕುಂತಿ ತೂಪಿರಿದು ದೂಳಿನಿಂದ ನಿವಾಳಿಸಿದಳು.

ಶಿಶುವ ತೂಪಿರಿದಳು ನಿವಾಳಿಸಿ

ಬಿಸುಟು ರಜವನು ಮಂತ್ರ ರಕ್ಷಾ

ಪ್ರಸರವನು ಮುನಿಗಳಲಿ ಮಾಡಿಸಿದಳು ಕುಮಾರಂಗೆ (ಆದಿ–೪–೫೮)

ವೀಳೆಯ: ಕನ್ನಡ ಭಾರತದಲ್ಲಿ ವೀಳೆಯ ಸಂಕೇತಾರ್ಥದಲ್ಲಿಯೂ ಬಂದಿದೆ, ವಾಚ್ಯಾರ್ಥದಲ್ಲಿಯೂ ಬಂದಿದೆ. ಈ ಕಾವ್ಯದ ಬಹುತೇಕ ಕಡೆಗಳಲ್ಲಿ ವೀಳೆಯವು ಯುದ್ಧಾಹ್ವಾನವನ್ನು ಒಪ್ಪಿಕೊಳ್ಳುವ ಸಂಕೇತಾರ್ಥದಲ್ಲಿಯೇ ಬಳಕೆಯಾಗಿವೆ. ತನ್ನ ನಾಲ್ಕೂ ಜನ ತಮ್ಮಂದಿರು ದಿಗ್ವಿಜಯಕ್ಕೆ ಹೊರಟಾಗ ಧರ್ಮರಾಜನು ಅವರಿಗೆ ವೀಳೆಯವನ್ನು ಕೊಟ್ಟನು(ಸಭಾ–೩–೧೩). ಊಟವಾದ ಮೇಲೆ ಕೆಲಸದಲ್ಲಿ ಹುರುಪುಗೊಳ್ಳಲು, ಮನಸ್ಸು ಬೇಸರಗೊಂಡಾಗ ಚೈತನ್ಯಭರಿಸಿಕೊಳ್ಳಲು ವೀಳೆಯವನ್ನು ಹಾಕಿಕೊಳ್ಳುವುದುಂಟು. ಯುದ್ಧದಲ್ಲಿ ನೊಂದವರನ್ನು ಕಂಡ ಅರ್ಜುನ ಬೇಸರಗೊಂಡು ಕರ್ಪೂರ ವೀಳೆಯನ್ನು ಹಾಕಿಕೊಂಡ ಪ್ರಸಂಗವಿದೆ (ಕರ್ಣ–೨೪–೨೪). ಇಂಥದೇ ವಾಚ್ಯಾರ್ಥದ ವೀಳೆಯ ಬಳಕೆ ಗದಾಪರ್ವದಲ್ಲಿಯೂ ಉಂಟು. ಭೀಮ ಕೌರವರಿಬ್ಬರಿಗೂ ಯುದ್ಧನಡೆಯುತ್ತಿರುವಂತೆ ಶ್ರಮ ಪರಿಹಾರಕ್ಕಾಗಿ ಕರ್ಪೂರ ತಾಂಬೂಲವನ್ನು ಅಡಿಗಡಿಗೆ ಹಾಕಿಕೊಳ್ಳುತ್ತಿದ್ದರು(ಗದಾ–೭–೭).

ಶಕುನಗಳು: ಜನಪದರ ಮುಗ್ಧ ನಂಬಿಕೆಗಳಾದ ಶಕುನಗಳು ಕುಮಾರವ್ಯಾಸ ಭಾರತದಲ್ಲಿ ಹಲವೆಡೆ ಬಂದಿವೆ. ಭವಿಷ್ಯವನ್ನು ಒಳ್ಳೆಯದಾಗಿಸುವ ಭರವಸೆಯನ್ನುಂಟು ಮಾಡುವ, ಮನಸ್ಸಿಗೆ ಸಮಾಧಾನ ನೀಡುವ ಶುಭ ಶಕುನಗಳಿರುವಂತೆ ಕೆಟ್ಟ ಭವಿಷ್ಯವನ್ನು ಸೂಚಿಸುವ, ಭಯವನ್ನುಂಟುಮಾಡುವ ದುಶ್ಯಕುನಗಳೂ ಇಲ್ಲಿವೆ. ಎರಡನೆಯ ವರ್ಗದ ಶಕುನಗಳೇ ಇಲ್ಲಿ ಅಧಿಕವಾಗಿವೆ. ದ್ರೌಪದಿಯ ಸ್ವಯಂವರಕ್ಕೆಂದು ದ್ರುಪದ ರಾಜನ ಪಟ್ಟಣಕ್ಕೆ ಅಭಿಮುಖರಾಗಿ ಪಾಂಡವರು ನಡೆಯುತ್ತಿದ್ದರೆ ಅವರಿಗೆ ಶುಭಶಕುನಳೆನಿಸಿದ ಕಳಸ ಕನ್ನಡಿ ಹಿಡಿದ ಯವತಿ, ಖಗಮೃಗಗಳ ಸುಸ್ವರ, ಸುಗಂಧಾನಿಲ ದಾರಿಯಲ್ಲಿ ಎದುರಾದವು(ಆದಿ–೧೧–೨೨). ದುರ್ಯೋಧನ ಹುಟ್ಟಿದಾಗ ಉಂಟಾದ ಅಪಶಕುನಗಳು ಭೂಮಿನಡುಗಿತು, ಧೂಮಕೇತುಗಳು ಎಲ್ಲಾ ಕಡೆಗಳಲ್ಲಿ ತೋರಿದವು. ನಗರದಲ್ಲಿ ನರಿಗಳು ಒದರಿದವು (ಆದಿ–೪–೫೦). ಜೂಜಿಗೆಂದು ಪಾಂಡವರು ಇಂದ್ರಪ್ರಸ್ಥದಿಂದ ಹಸ್ತಿನಾವತಿಗೆ ಹೊರಟರೆ ಕೊಕ್ಕರೆ, ಕರಿಹಕ್ಕಿ ಮುಂತಾದ ಪಕ್ಷಿಗಳು ತಾರಸ್ವರದಲ್ಲಿ ಕೂಗಿದವು. ನರಿಗಳು ಒದರಿದವು, ಮೊಲಗಳು ಅಡ್ಡ ಬಂದವು. ಆನೆಗಳು ಘೀಳಿಟ್ಟು ಕೆಳಬಿದ್ದವು. ರಥಕ್ಕೆ ಹೂಡಿದ ಕುದುರೆಗಳು ಮುಗ್ಗರಿಸಿದವು(ಸಭಾ೧೩–೨).

ಬಲಿಪದ್ಧತಿ: ಭವಿಷ್ಯದಲ್ಲಿ ಶುಭ ಕಾರ್ಯಗಳನ್ನು ನೆರವೇರಿಸುವ ಮುನ್ನ ಜರುಗಿಸುವ ಬಲಿ ಪದ್ಧತಿ ಮಹಾಭಾರತದ ಕಾಲಕ್ಕೂ ಇತ್ತು. ಪ್ರಾಣಿಗಳ ವಧೆ ಮಾಡಿ ಭೂತಗಳನ್ನು ಸಂತೃಪ್ತಗೊಳಿಸುವ ರೂಢಿಯನ್ನು ಕುಮಾರವ್ಯಾಸ ಬೇರೆ ಬೇರೆ ಪ್ರಸಂಗಗಳಲ್ಲಿ ಹೇಳಿದ್ದಾನೆ. ದ್ರೋಣಾಚಾರ್ಯನು ಗುರುವಾಗಿ ಅರಸು ಮಕ್ಕಳಿಗೆ ವಿದ್ಯೆಯನ್ನು ಕಲಿಸುವುದೆಂದಾದ ಮೇಲೆ ಸಾವಿರ ಕುರಿಗಳನ್ನು ಬಲಿಕೊಟ್ಟು ಚಂಡಿಕೆಯನ್ನು ಪೂಜಿಸಿ ಗರಡಿ ಮನೆಯನ್ನು ಪ್ರವೇಶಿಸಿದರು(ಆದಿ–೬–೪೦). ಧರ್ಮವಿದ್ಯಾ

ಪ್ರದರ್ಶನಕ್ಕೆ ಮೊದಲು ಕುರಿ ಕೋಣಗಳ ಹಿಂಡನ್ನು ಬಲಿಕೊಟ್ಟು ಭೂತ ತುಷ್ಟಿ ಮಾಡಲಾಯಿತು(ಆದಿ-೭-೧೯).

ಮಾನವೀಯತೆ ಮತ್ತು ಶಿಷ್ಟಾಚಾರಗಳು: ಒಳ್ಳೆಯ ಸಂಸ್ಕೃತಿಯ ಹೆಗ್ಗುರುತೆನಿಸಿದ ಮಾನವೀಯತೆ ಮತ್ತು ಶಿಷ್ಟಾಚಾರಗಳು ಮಹಾಭಾರತದ ತುಂಬ ಹರಡಿಕೊಂಡಿವೆ. ಪ್ರಸ್ತುತ ಜನ ಸಾಮಾನ್ಯರಲ್ಲಿ ವಿಸ್ತರಿಸಿಕೊಂಡಿರುವ ಮಾನವೀಯ ಗುಣಗಳಿಗೆ ಸಂಬಂಧಪಡುವ ಒಂದೆರಡು ಉದಾಹರಣೆಗಳನ್ನಿಲ್ಲಿ ನೋಡಬಹುದು.

ಭೀಷ್ಮನು ಶರಾಘಾತಕ್ಕೆ ಒಳಗಾಗಿ ರಣರಂಗದಲ್ಲಿ ಒರಗಿದ ಪ್ರಸಂಗ. ಅವರು ಭೂಮಿಯ ಮೇಲೆ ಒರಗಿದ್ದನ್ನು ನೋಡಿದ ಸಾಮಾನ್ಯ ಜನ ಮರುಗಿ ಗೋಳಾಡಿದ್ದು ಅವರ ಅಂತಃಕರಣವನ್ನು ಸ್ಪಷ್ಟಪಡಿಸುತ್ತದೆ. ಹಡಪಿಗರು, ಚಾಮರದವರು, ಸತ್ತಿಗೆಯವರೆಲ್ಲ ತಮ್ಮನ್ನು ಸಲುಹಿದ ಭೀಷ್ಮರಿಗೊದಗಿದ ಗತಿಯನ್ನು ಕಂಡು ಮುಮ್ಮಲ ಮರುಗುತ್ತಾರೆ ಇದಕ್ಕೆ ಕಾರಣರಾದ ಪಾಂಡವರನ್ನು ಬೈಯ್ಯುತ್ತಾರೆ.

ಒರಲಿ ಕಡೆದರು ಹಡಪಿಗರು ಸೀ
ಗುರಿಯವರು ಸತ್ತಿಗೆಯವರು ತ
ನ್ನರಮನೆಯ ವಿಶ್ವಾಸಿಗಳು ಬಿಲುಸರಳ ನೀಡುವರು
ಗುರುವಲಾ ಮುತ್ತಯ್ಯ ನಮ್ಮನು
ಹೊರೆದ ತಂದೆಗೆ ತಪ್ಪಿದರು ಕಡು
ನರಕಿಗಳು ಪಾಂಡವರು ಸುಡುಸುಡೆನುತ ಹೊರಳಿದರು (ಭೀಷ್ಮ-೧೦-೧೨)

- ಸಾಮಾನ್ಯರು ವ್ಯಕ್ತಪಡಿಸುವ ಈ ದುಃಖಕ್ಕೆ ಎರಡು ಕಾರಣಗಳುಂಟು. ಮೊದಲನೆಯದಾಗಿ ಭೀಷ್ಮ ಪಾಂಡವರಿಗೆ ಮುತ್ತಯ್ಯನಾಗಬೇಕು. ಅದನ್ನವರು ಪರಿಗಣಿಸದೆ ಭೀಷ್ಮನನ್ನು ಹಿಂಸಿಸಿದರು. ಎರಡನೆಯದಾಗಿ ಭೀಷ್ಮ ತಮ್ಮನ್ನು ಪೊರೆದವರು, ತಮ್ಮ ಜೀವನಕ್ಕೆ ಆಧಾರವಾಗಿದ್ದವರು ಅಂಥವರಿಗೆ ಈ ಗತಿ ಬಂದಿತು ಎಂಬುದು ಅವರ ಅಳಲು. ತಮಗೊದಗಿದ ದುಃಖವನ್ನು ಇವರು ಅಭಿವ್ಯಕ್ತಿಸಿರುವುದಕ್ಕಿಂತ ಇಲ್ಲಿ ಪ್ರಧಾನವಾಗಿ ತೋರುವುದು ಪಾಂಡವರನ್ನು ಕುರಿತಾಗಿ ಅವರು ವ್ಯಕ್ತಪಡಿಸುವ ಕೋಪ. ಸಾಮಾನ್ಯವಾಗಿ ಎಲ್ಲರಿಗೂ ಧರ್ಮ ನಿಷ್ಠರಾಗಿ ತೋರುವ ಪಾಂಡವರು ಇವರ ಕಣ್ಣಲ್ಲಿ ಕಡು ನರಕಿಗಳಾಗಿ ತೋರುತ್ತಾರೆ. ಉಳಿದವರಿಗೆ ಪಾಂಡವರು ಉತ್ತಮರಾಗಿರಬಹುದು; ಆದರೆ ಭೀಷ್ಮನನ್ನು ಪಾಂಡವರು ನಡೆಸಿಕೊಂಡ ರೀತಿ ಅವರನ್ನು ವಿಶ್ಲೇಷಿಸುವಂತೆ ಮಾಡುತ್ತದೆ. ಜನಸಾಮಾನ್ಯರಿಗೂ ಒಂದು ಧರ್ಮದೃಷ್ಟಿ ಇರುವುದನ್ನು ಇದು ಸಾಬೀತುಪಡಿಸುತ್ತದೆ; ಇದು ಮಾನವೀಯತೆಯ ತಿರುಳಾಗಿ ತೋರುತ್ತದೆ.

ದ್ರೌಪದಿಯ ಅಕ್ಷಯಾಂಬರ ಪ್ರಸಂಗವಂತೂ ಜನಸಾಮಾನ್ಯರ ಮಾನವೀಯತೆಯನ್ನು ಇನ್ನೂ ನಿಖರವಾಗಿಸುತ್ತದೆ. ಪಾಂಡವರು ದ್ರೌಪದಿಯನ್ನು ಜೂಜಿನಲ್ಲಿ ಸೋತ ಮೇಲೆ ದುರ್ಯೋಧನ ಅವಳನ್ನು ಸಭೆಗೆ ಕರೆತರಲು ಅಪ್ಪಣಿಸಿದ. ತರುವಾಯ ನಡೆದ ಘಟನಾವಳಿಗಳಲ್ಲಿ ಜನಸಾಮಾನ್ಯರು ನಡೆದುಕೊಂಡ ರೀತಿ, ತೋರಿದ ಮಾನವೀಯತೆಗಳು ಅವರ ಸುಸಂಸ್ಕೃತ ಮನಸ್ಸನ್ನು ಹೇಳುತ್ತವೆ. ಧರ್ಮನು ಜೂಜಿನಲ್ಲಿ ದ್ರೌಪದಿಯನ್ನು ಪಣವೊಡ್ಡಿ ಸೋತಪ್ರಸಂಗದಲ್ಲಿ ಮೋಸದ ಜೂಜನ್ನೂ ದುರ್ಯೋಧನನ ರೀತಿಯನ್ನೂ ಅಲ್ಲಗಳೆದು ವಿದುರ ಪ್ರತಿಭಟಿಸಿದ ರೀತಿಯನ್ನು ಈ ಹಿಂದೆಯೇ ನೋಡಲಾಗಿದೆ. ಈಗ ಪ್ರಾತಿಕಾಮಿಕ ಮತ್ತು ದ್ರೌಪದಿಯ ದಾಸಿಯರು ನಡೆದುಕೊಂಡ ರೀತಿಯನ್ನು ನೋಡಬಹುದು. ದುರ್ಯೋಧನನ

ಅಪ್ಪಣೆಯಂತೆ ದ್ರೌಪದಿಯನ್ನು ಕರೆತರಲು ಅವಳ ಅಂತಃಪುರಕ್ಕೆ ಬಂದ ಪ್ರಾತಿಕಾಮಿಕ ಅಭಿವ್ಯಕ್ತಿಸಿದ ಭಾಷೆ ನಡತೆಗಳೇ ಅವನ ಸುಸಂಸ್ಕೃತ ವ್ಯಕ್ತಿತ್ವವನ್ನು ಹೇಳುತ್ತವೆ. ಪಾಂಚಾಲನಂದನೆಯ ಸಮೀಪಕ್ಕೆ ಹೋಗಲು ಅಂಜಿ ದೂರನಿಂತು ಜೋಡಿಸಿದ ಕೈಯನ್ನು ಎತ್ತಿ ಬಿನ್ನವಿಸಿಕೊಂಡನು. "ತಾಯೆ ಬಿನ್ನಹ ಇಂದು ರಾಯನು ಜೂಜಿನಲ್ಲಿ ನಿಮ್ಮನ್ನು ಸಹಿತವಾಗಿ ಸೋತನು" ಎಂದು ಹೇಳುವ ಪ್ರಾತಿಕಾಮಿಕನ 'ತಾಯೇ' ಎಂಬ ಮೊದಲ ಸಂಬೋಧನೆಯಲ್ಲಿಯೇ ಅವನ ಸಂಸ್ಕೃತಿ ಸುವ್ಯಕ್ತವಾಗುತ್ತದೆ. ಅವನು ಪಾಂಚಾಲಿಯೆದುರು ಬಂದಾಗ ತೋರಿಸುವ ವಿನಯವೂ ಅವನ ಒಳ್ಳೆಯ ಸಂಸ್ಕೃತಿಯನ್ನೇ ಅಭಿವ್ಯಕ್ತಿಸುತ್ತದೆ.

ಪ್ರಾತಿಕಾಮಿಕನೊಂದಿಗೆ ದ್ರೌಪದಿ ಹೋಗದಿದ್ದಾಗ ಕೌರವ ದುಶ್ಯಾಸನನನ್ನು ಕಳಿಸುತ್ತಾನೆ. ದಟ್ಟೈಸಿಕೊಂಡು ದ್ರೌಪದಿಯ ಅಂತಃಪುರಕ್ಕೆ ಬಂದ ದುಶ್ಯಾಸನನ ರೀತಿಯೇ ದುಶ್ಯಾಸನ ಮತ್ತು ಪ್ರಾತಿ ಕಾಮಿಕರ ಅಂತರವನ್ನು ಹೇಳುತ್ತದೆ. ದುಶ್ಯಾಸನನ ಭಾಷೆಯೂ ಅಷ್ಟೆ ಒರಟಾಗಿವೆ. "ನೀಚ ಪಾಂಡವರು ನಿನ್ನನ್ನು ಸೋತಿದ್ದಾರೆ. ಅಲ್ಲಿಗೆ ಬಂದು ನಿನ್ನ ಮುಖವನ್ನು ತೋರಿಸು" ಎಂದು ಅವಳ ಶ್ರೀಮುಡಿಗೆ ಕೈಹಾಕಿದನು, ದ್ರೌಪದಿಯ ಸುತ್ತಲಿದ್ದ ದಾಸಿಪರಿವಾರದವರು ಇವನನ್ನು ಅಡ್ಡಗಟ್ಟಿ ನಿಂತು ಪ್ರತಿಭಟಿಸಿದರು. ಇವನು ಅವರನ್ನು ಮೆಟ್ಟಿ ಎಳೆದುಕೊಂಡು ಹೊರಟನು. ಗಣಿಕೆಯ ಮೇಳದ ಕೆಳದಿಯತ್ತ ಹಾಹಾಕಾರ ಇಮ್ಮಡಿಸಿತು. ಅವನನ್ನು ಹಿಂಬಾಲಿಸಿ ಬಂದ ದ್ರೌಪದಿಯ ಪರಿವಾರದ ದುಃಖ ಆತಂಕಗಳು ದ್ವಿಗುಣಗೊಂಡವು.

ಹಡಪಗಿತಿಯರು ಸೀಗುರಿಯ ಕ
ನ್ನಡಿಯವರು ಮೇಳದ ವಿನೋದದ
ನುಡಿನಗೆಯ ಸಖಿಯರು ಪಸಾಯ್ತೆಯರಾಪ್ತ ದಾಸಿಯರು
ಒಡನೆ ಬಂದರು ಕಂಬನಿಯ ಬಿಡು
ಮುಡಿಯ ಹಾಹಾರವದ ರಭಸದ
ನಡೆಯಲಖಿಲ ವಿಳಾಸಿನಿಯರು ಸಹಸ್ರ ಸಂಖ್ಯೆಯಲಿ (ಸಭಾ-೧೪-೬೯)

ದ್ರೌಪದಿ ಅನೇಕ ಹಿರಿಯರಲ್ಲಿ, ಪ್ರಾಜ್ಞರೆನ್ನಿಸಿಕೊಂಡವರಲ್ಲಿ ತನ್ನನ್ನು ಈ ಸಂಕಟದಿಂದ ಪಾರು ಮಾಡಿರೆಂದು ಬೇಡಿಕೊಂಡಳು. ಅಲ್ಲಿರುವ ಯಾರಿಗೂ ಇದು ಅಸಾಧ್ಯದ ಮಾತಾಗಿತ್ತು. ದ್ರೌಪದಿಯ ಅಂತಃಪುರದಲ್ಲಿ ಕಾವಲಿನವರು, ದಾಸಿಯರು ದುಶ್ಯಾಸನನನ್ನು ತಡೆದರು. ಆಮಟ್ಟಿಗೆ ಅವರ ಧೈರ್ಯದ ನಿಲುವನ್ನು ಮೆಚ್ಚಬೇಕಾದದ್ದೇ. ರಾಜಪ್ರಭುತ್ತ ಎಷ್ಟೇ ಪ್ರಬಲವಾಗಿದ್ದರೂ ಅದಕ್ಕೂ ಒಂದು ಮಿತಿಯಿದೆ. ಪ್ರಭುತ್ವಕ್ಕೆ ಅಧೀನಗೊಂಡಿದ್ದರೂ ಜನಪದರು ಹೆಣ್ಣಿನ ಅವಮಾನವನ್ನು ಸಹಿಸಲಾರರು. ದುಶ್ಯಾಸನನ ಈ ದುರ್ನಡತೆಯನ್ನು ಕಾವಲಿನವರು ತಡೆಯುತ್ತಾರೆ, ದ್ರುಪದೆಯ ಪರಿವಾರದವರು ತಡೆಯುತ್ತಾರೆ ಎಂದರೆ ಅವರು ಬೆಳೆಯಿಸಿಕೊಂಡು ಬಂದಿರುವ ಸಂಸ್ಕಾರವನ್ನು ಆದರಿಸಬೇಕಾಗುತ್ತದೆ. ಗಂಡಂದಿರಾದವರು ದ್ರೌಪದಿಗಾಗಿರುವ ಅವಮಾನವನ್ನು ತಡೆದುಕೊಂಡಿರುವುದಕ್ಕೆ ಅನ್ಯ ಕಾರಣಗಳಿರಬಹುದು. ಆದರೆ ಅಂತಃಪುರದಲ್ಲಿ ಸೇವೆ ಮಾಡಿಕೊಂಡಿರುವ ಈ ಸಾಮಾನ್ಯ ಜನರ ಅತ್ಯಂತ ಸಹಜವಾಗಿರುವ ಸ್ವಭಾವ ಮಾನವೀಯವೆನ್ನಿಸುತ್ತದೆ. ರಾಜಪ್ರಭುತ್ವಕ್ಕೂ ಪ್ರತಿರೋಧವೊಡ್ಡಿ ಮನುಷ್ಯತ್ವವನ್ನು ಮೆರೆಯುವಲ್ಲಿ ಇದು ಇನ್ನೂ ಮಹತ್ವದ್ದೆನಿಸುತ್ತದೆ. ಇವರೇನು ಪ್ರತಿಭಟಿಸಿದರೂ ದ್ರೌಪದಿಯನ್ನು ಅಪಮಾನಿಸಿ ಪ್ರಭುತ್ವವೇ ಗೆದ್ದಿರುವಲ್ಲಿ ಮನುಷ್ಯತ್ವ ವಿಡಂಬನೆಗೊಳಪಟ್ಟಿರುವುದು ಮಗ್ಗುಲಲ್ಲಿಯೇ ಇದೆ.

ಅಧ್ಯಾಯ – ೭

ಸಮಾರೋಪ

ಸಮಾರೋಪ

'ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಾಮಾನ್ಯ ಮನುಷ್ಯ' ಎಂಬ ಶೀರ್ಷಿಕೆಯನ್ನು ಒಪ್ಪಿಕೊಂಡ ಮೇಲೆ ನಾನು ಓದುತ್ತ ಹೋದಂತೆ ನನ್ನ ಅಧ್ಯಯನದ ಅನುಭವಗಳು ವಿಸ್ತೃತಗೊಂಡಿವೆ. ಒಂದರ್ಥದಲ್ಲಿ ಅಲ್ಲಿದ್ದ ತಾಕಲಾಟಗಳನ್ನು ಒಂದು ಹದಕ್ಕೆ ತಂದು ವಿಷಯವನ್ನು ನಿರೂಪಿಸಿದ ಸಮಾಧಾನ ನನ್ನದಾಗಿದೆ. ಒಂದು ರೀತಿಯಲ್ಲಿ ಒಂದು ಸೂತ್ರಕ್ಕೆ ಅಳವಟ್ಟ ತಿಳುವಳಿಕೆಗಳೇ ಪ್ರಬಂಧದ ಫಲಿತಗಳೂ ಆಗಿವೆ.

ಪ್ರಾಚೀನ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಅಳವಟ್ಟ ಎರಡು ಪ್ರಧಾನ ಅಂಶಗಳೆಂದರೆ ಪ್ರಭುತ್ವ ಮತ್ತು ಧರ್ಮ. ನಮ್ಮ ಪ್ರಾಚೀನ ಕವಿಗಳು ಸಾಹಿತ್ಯವನ್ನು ಲೌಕಿಕ–ಅಲೌಕಿಕವೆಂದು ವಿಭಜಿಸಿದರು. ಬಹಳಷ್ಟು ಕವಿಗಳು ಲೌಕಿಕ ವಿಭಾಗಕ್ಕಾಗಿ ರಾಜರ ಕತೆಗಳನ್ನು ಆಯ್ದುಕೊಂಡರೇ ಹೊರತು ಜನಸಾಮಾನ್ಯರ ಕತೆಗಳನ್ನಲ್ಲ. ಇನ್ನು ಅಲೌಕಿಕ ಕಾವ್ಯಗಳಲ್ಲಿ ಧರ್ಮದ ಜಿಜ್ಞಾಸೆಯೇ ವಿಶೇಷವಾಗಿ ಪರಿಗಣಿಸಲ್ಪಟ್ಟು ಅಲ್ಲಿಯೂ ಜನಸಾಮಾನ್ಯರ ಜೀವನ ಪಾರ್ಶ್ವಕ್ಕೆ ಉಳಿದು ಬಿಟ್ಟಿತು.

ಪ್ರಸ್ತುತ ಅಧ್ಯಯನಕ್ಕೆ ಒಳಪಟ್ಟ ವಡ್ಡಾರಾಧನೆ, ಧರ್ಮಾಮೃತ, ಹರಿಶ್ಚಂದ್ರ ಕಾವ್ಯ, ಕುಮಾರವ್ಯಾಸ ಭಾರತ – ನಾಲ್ಕು ಕೃತಿಗಳು ಪ್ರಾತಿನಿಧಿಕವಾದವುಗಳು. ಪ್ರಾಚೀನ ಕನ್ನಡ ಸಾಹಿತ್ಯ – ಶರಣ ಸಾಹಿತ್ಯವನ್ನು ಹೊರತು ಪಡಿಸಿ – ಸಾಮಾಜಿಕ ನೆಲೆಯಲ್ಲಿ ಮಾತನಾಡಿದ್ದು ಕಡಿಮೆ. ಇಂಥ ಪರಿಸರದಲ್ಲಿ ಸಾಮಾನ್ಯ ಮನುಷ್ಯ ದೊರೆಯುವುದು ದುರ್ಲಭ. ಅಧ್ಯಯನದಲ್ಲಿ ಪ್ರಾತಿನಿಧಿಕ ಕೃತಿಗಳ ಆಶಯಗಳನ್ನು ಮೊಟ್ಟ ಮೊದಲು ಗುರುತಿಸಿಕೊಂಡು ಮುಂದುವರಿಯಲಾಗಿದೆ. ಪ್ರಸ್ತುತ ಕೃತಿಗಳ ಕಾವ್ಯೋದ್ದೇಶವನ್ನು ನೋಡಿದರೇನೇ ಜನಸಾಮಾನ್ಯರು ಮುನ್ನೆಲೆಗೆ ಯಾಕೆ ಬರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಇದುವರೆಗಿನ ಕನ್ನಡ ಸಾಹಿತ್ಯ ಅಧ್ಯಯನದಲ್ಲಿ 'ಸಾಮಾನ್ಯ ಮನುಷ್ಯ' ಪರಿಕಲ್ಪನೆ ಇಷ್ಟು ವಿಸ್ತೃತವಾಗಿ ಚರ್ಚೆಗೊಂಡದ್ದು ಇದೇ ಮೊದಲ ಬಾರಿ.

ಮುಖ್ಯವಾಗಿ ಇದುವರೆಗೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಲಕ್ಷ್ಯಕ್ಕೊಳಗಾದ ಸಾಮಾನ್ಯ ಮನುಷ್ಯನನ್ನು ಈ ಪ್ರಬಂಧದ ಮೂಲಕ ಮುನ್ನೆಲೆಗೆ ತರಲಾಗಿದೆ.

ಇದುವರೆಗಿನ ನಮ್ಮ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಬಹಳಷ್ಟು ಪ್ರಸ್ತಾಪಿಸಲ್ಪಟ್ಟಿರುವ ವಿಷಯಗಳೆಂದರೆ ಪುರಾಣ ಕತೆಗಳು ಮತ್ತು ಮತೀಯ ವಿಚಾರಗಳು. ಪುರಾಣಾವಲಂಬಿತ ಕೃತಿಗಳಲ್ಲಿ ಪ್ರಭುತ್ವವೇ ಅಧಿಕವಾಗಿ ವಿಜೃಂಭಣೆಗೊಂಡು ಈ ವಿಜೃಂಭಣೆಗೆ ತಳಹದಿಯಾಗಿದ್ದ ಸಾಮಾನ್ಯ ಮನುಷ್ಯ ನೇಪಥ್ಯದಲ್ಲಿಯೇ ಉಳಿದ. ಮತೀಯವೆನಿಸುವ ಅಲೌಕಿಕ ಕಾವ್ಯಗಳಲ್ಲಿ ಸಂಪ್ರದಾಯನಿಷ್ಠ ಮತಾಚರಣೆಗಳೇ ಅಧಿಕವಾಗಿ ವಿಸ್ತರಿಸಿಕೊಂಡು ಇಲ್ಲಿಯೂ ಸಾಮಾನ್ಯ ಮನುಷ್ಯ ಕಾಣಸಿಗುವುದು ಅಪರೂಪವಾಯಿತು. ಈ ಎರಡೂ ಅಂಶಗಳನ್ನು ಪ್ರಾತಿನಿಧಿಕ ಕಾವ್ಯಗಳ ಮೂಲಕ ಇಲ್ಲಿ ಚರ್ಚಿಸಿರುವುದರಿಂದ ಸಾಮಾನ್ಯನ ವ್ಯಕ್ತಿತ್ವಕ್ಕೊಂದು ಸಮಗ್ರತೆ ಈ ಪ್ರಬಂಧದ ಮೂಲಕ ದೊರೆತಂತಾಗಿದೆ.

'ಕುಮಾರವ್ಯಾಸ ಭಾರತ' ರಾಜ ಪ್ರಭುತ್ವದ ಕಾವ್ಯ. ಹೀಗಾಗಿ ಪ್ರಭುತ್ವದ ಎಳೆಗಳು ಇಲ್ಲಿ ದಟ್ಟವಾಗಿಯೇ ನೇದುಕೊಂಡಿರುವುದನ್ನು ಗುರುತಿಸಲಾಗಿದೆ. ಪ್ರಭುತ್ವದ ಮೇಲಾಟದಲ್ಲಿ ಜನಸಾಮಾನ್ಯರ ಅಸ್ತಿತ್ವ ಹೇಗೆ ಗೌಣಗೊಂಡಿತು ಎಂಬುದನ್ನು ವಿಶದೀಕರಿಸಲಾಗಿದೆ. ಸಾಮಾನ್ಯ ಸಮೂಹದಿಂದ ಬಂದ ಸೈನಿಕರು ಪಟ್ಟಪಾಡು ಮಹಾಭಾರತ ಯುದ್ಧದಲ್ಲಿ ವಿಸ್ತೃತವಾಗಿವೇ ತೋರಿದೆ. ಯುದ್ಧಾನಂತರದ ಘೋರ ಪರಿಣಾಮಗಳು ಕಾವ್ಯದ ಕೊನೆಕೊನೆಯಲ್ಲಿ ಪರಿಣಾಮಕಾರಿಯಾಗಿ ನಿರೂಪಗೊಂಡಿವೆ. ಕುಮಾರವ್ಯಾಸ

ಕಾವ್ಯದ ಆಶಯಕ್ಕನುಗುಣವಾಗಿ ಕಾವ್ಯದ ತುಂಬ ಕೌರವ – ಪಾಂಡವರ ಕಥೆಯೇ ವಿಜೃಂಭಿಸಿದೆ. ಆದರೆ ಕೊನೆಯ ಗದಾಪರ್ವಕ್ಕೆ ಬರುವ ಹೊತ್ತಿಗೆ ಯುದ್ಧ ಕವಿಯನ್ನು ಘಾಸಿಗೊಳಿಸಿದೆ. ೧೮ ಅಕ್ಷೋಹಿಣಿ ಸೈನ್ಯದಲ್ಲಿ ಬದುಕಿ ಉಳಿದವರು ಕೆಲವರು ಮಾತ್ರ. ಉದ್ದಕ್ಕೂ ಪ್ರತಿಷ್ಠೆಗೆ ಬಿದ್ದ ಪ್ರಭುತ್ವ ಸಾಧಿಸಿದ್ದೇನು ? ಎಂಬುದು ಕೊನೆಯಲ್ಲಿ ಕವಿಯನ್ನು ಕಾಡಿದೆ. ಅಂತೆಯೇ ಇಲ್ಲಿ ಕೇಳಿ ಬರುವ ಅನಾಥಗೊಂಡ ಸೈನಿಕರ ಕುಟುಂಬಗಳ ಆಕ್ರಂದನ ಯುದ್ಧ ವಿಷಯದ ಒಂದು ಎಚ್ಚರಿಕೆಯೆನ್ನುವುದನ್ನು ಕುಮಾರವ್ಯಾಸ ಕಾವ್ಯದಲ್ಲಿ ಮೊದಲ ಬಾರಿಗೆ ಗುರುತಿಸಲಾಗಿದೆ. ತನ್ಮೂಲಕ ನಾರಣಪ್ಪ ಸಾಮಾನ್ಯ ಸಾಮಾಜಿಕರನ್ನು ಗುರುತಿಸಿದ್ದನ್ನು ಅನುಲಕ್ಷಿಸಲಾಗಿದೆ.

ಹಾಗೆಯೇ ಮಾನವೀಯ ಚಿಂತನೆಗಳನ್ನೂ ಸಾಂಸ್ಕೃತಿಕ ನೆಲೆಯಲ್ಲಿ ಸಮೀಕ್ಷಿಸಲಾಗಿದೆ. ಸಾಮಾನ್ಯ ಜನ ತಮ್ಮ ಸೀಮಿತದಲ್ಲಿ ಹೇಗೆ ಪ್ರಭುತ್ವವನ್ನು ಪ್ರತಿಭಟಿಸಬಲ್ಲರು ಎಂಬುದನ್ನು 'ಅಕ್ಷಯಾಂಬರ' ಪ್ರಸಂಗದಲ್ಲಿ ದಾಸಿಯರ ಪ್ರತಿರೋಧದ ಮೂಲಕ ಗುರುತಿಸಲಾಗಿದೆ.

'ಹರಿಶ್ಚಂದ್ರ ಕಾವ್ಯ'ದ ಉದ್ದೇಶ ಸತ್ಯದ ಮಹತಿಯನ್ನು ಪ್ರತಿಷ್ಠಾಪಿಸುವುದು. ರಾಘವಾಂಕನು ಈ ಉದ್ದೇಶವನ್ನು ಹರಿಶ್ಚಂದ್ರ – ಚಂದ್ರಮತಿಯರ ಮೂಲಕ ಈಡೇರಿಸಿಕೊಂಡಿದ್ದಾನೆ. ಹರಿಶ್ಚಂದ್ರ ಕಾವ್ಯದ ವಿಶೇಷತೆಯಿರುವುದು ಸಾಮಾಜಿಕ ಅಸಮತೋಲಗಳನ್ನು ಎತ್ತಿಕೊಂಡು ಚರ್ಚಿಸುವುದರಲ್ಲಿ. ಹರಿಶ್ಚಂದ್ರ ಕಾವ್ಯ ಶರಣಾಂದೋಲನದ ತರುವಾಯ ಬಂದದ್ದು. ಕಾಲಮಾನದ ದೃಷ್ಟಿಯಿಂದ ಈ ಆಂದೋಲನಕ್ಕೆ ತೀರ ಸಮೀಪದಲ್ಲಿದ್ದವನು ರಾಘವಾಂಕ. ಹೀಗಾಗಿ ಸಾಮಾಜಿಕ ನ್ಯಾಯಕ್ಕಾಗಿ ತಹತಹಿಸಿದ ಶರಣ ವಿಚಾರಗಳು ರಾಘವಾಂಕನನ್ನು ನೇರವಾಗಿ ತಟ್ಟಿವೆ. ಹರಿಶ್ಚಂದ್ರ ಕಾವ್ಯದಲ್ಲಿ ಬಂದಿರುವ ಹರಿಶ್ಚಂದ್ರ, ಹೊಲತಿಯರ ವಾದ ವಿವಾದವನ್ನು ಸಾಮಾಜಿಕ ನೆಲೆಯಲ್ಲಿ ಪ್ರಧಾನವಾಗಿ ಗುರುತಿಸಲಾಗಿದೆ. ಹರಿಶ್ಚಂದ್ರ ತನ್ನನ್ನು ಮಾರಿಕೊಳ್ಳುವ ಸಂದರ್ಭದಲ್ಲಿ ತಾಳಿದ ಕೀಳರಿಮೆ ಮತ್ತು ವೀರಬಾಹುಕನೊಡನೆ ತೋರಿದ ಮತ ಪ್ರತಿಷ್ಠೆಗಳ ಹಿಂದಿರುವ ತರತಮ ಭಾವವನ್ನು ಚರ್ಚೆಗೆ ಒಳಪಡಿಸಲಾಗಿದೆ.

ಹರಿಶ್ಚಂದ್ರ ಕಾವ್ಯ ಒಬ್ಬ ಮಹಾರಾಜನ ಕತೆಯಾದರೂ ಪ್ರಭುತ್ವದ ಅಂಶಗಳು ತುಂಬ ಕಡಿಮೆ. ಆದರೂ ಹರಿಶ್ಚಂದ್ರ ಪ್ರಜೆಗಳೊಂದಿಗೆ ಇರಿಸಿಕೊಂಡಿರುವ ಸಂಬಂಧ, ಅರಸನಾದರೂ ಅವನು ಪಟ್ಟ ಪಾಡು ಎಲ್ಲವನ್ನೂ ಹೇಳಲಾಗಿದೆ.

ಕುಮಾರವ್ಯಾಸ ಭಾರತದಲ್ಲಿ ತೋರುವ ಕೃಷಿ, ಪಶುಪಾಲನೆ, ಬೇಟೆಗಳನ್ನು ಸಾಂಸ್ಕೃತಿಕ ನೆಲೆಯಲ್ಲಿ ವಿವರಿಸಲಾಗಿದೆ. ಬೇಟೆ ವಿವರಣೆಗೆ ಕಾವ್ಯದಲ್ಲಿ ಹೆಚ್ಚಿನ ಆಸ್ಪದ ದೊರೆತಿರುವುದು ಸ್ಪಷ್ಟವಾಗಿದೆ. ಹೀಗೆಯೇ ಹರಿಶ್ಚಂದ್ರ ಕಾವ್ಯದಲ್ಲಿಯೂ ಬೇಟೆ ವಿಷಯ ಹೆಚ್ಚು ಪ್ರಸ್ತಾಪಿಸಲ್ಪಟ್ಟಿರುವುದನ್ನು ಗಮನಿಸಲಾಗಿದೆ. ಇಬ್ಬರೂ ಬೇಟೆ ವಿಷಯವನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಇವರಿಬ್ಬರ ಕಾಲದಲ್ಲಿ ಬೇಟೆ ಪ್ರಧಾನ ಉದ್ಯೋಗವಾಗಿರಬೇಕು. ಆದರೆ ಕೃಷಿ ಮತ್ತು ಕೃಷಿಕರ ಬದುಕನ್ನು ಇಬ್ಬರೂ ಅಷ್ಟಾಗಿ ಪ್ರಸ್ತಾಪಗೊಳಿಸದಿರುವುದಕ್ಕೆ ಕಾರಣ ತಿಳಿಯುವುದಿಲ್ಲ.

ವಡ್ಡಾರಾಧನೆ ಮತ್ತು ಧರ್ಮಾಮೃತಗಳಲ್ಲಿ ಧರ್ಮವೇ ಪ್ರಧಾನ ವೇದಿಕೆಯಲ್ಲಿ ಕಾಣಿಸಿಕೊಂಡಿರುವುದು ಸಹಜವಾಗಿದೆ. ಇದನ್ನು ಪುಷ್ಟೀಕರಿಸುವಂತೆ ಎರಡೂ ಕಾವ್ಯಗಳಲ್ಲಿ ಜೈನ ಧರ್ಮದ ತಿರುಳನ್ನು ಸಾಮಾನ್ಯರು ಗ್ರಹಿಸುವ ರೀತಿ ಮತ್ತು ಈ ಧರ್ಮದ ಆಚರಣೆಗಳಿಗೆ ಜನಸಾಮಾನ್ಯರು ಸ್ಪಂದಿಸಿರುವ ಬಗೆ ಎರಡೂ ಮುಖ್ಯವೆನಿಸಿವೆ. ಜೈನಧರ್ಮದ ಶಿಷ್ಟಪದ ನಿಲುವುಗಳೇನೇ ಇರಲಿ ಜನ ಸಾಮಾನ್ಯರು ಇಲ್ಲಿ ಧರ್ಮದ ಸರಳ ಗುಣಗಳಿಗೆ ಒಲಿದಿದ್ದಾರೆ. ಮುಖ್ಯವಾಗಿ ಅಹಿಂಸೆ ಮತ್ತು

ಭವಾವಳಿಗಳಲ್ಲಿ ಜನಸಾಮಾನ್ಯರು ಇಟ್ಟುಕೊಂಡಿರುವ ನಂಬುಗೆ ಎರಡೂ ಕೃತಿಗಳಲ್ಲಿ ಒಡೆದು ತೋರುವ ಸಮಾನ ಅಂಶಗಳಾಗಿವೆ. ಮೋಕ್ಷಾಪೇಕ್ಷೆ ಜೈನಧರ್ಮದ ತಿರುಳಾಗಿರುವಂತೆ ಅದಕ್ಕೆ ಅನಿವಾರ್ಯವಾದ ಸನ್ನಡತೆಯ ಬೋಧೆ ಕತೆಗಳ ಕಥಾಸಂವಿಧಾನದಲ್ಲಿಯೇ ದೊರೆಯುತ್ತದೆ. ಇಲ್ಲಿಯ ಬಹುತೇಕ ಪಾತ್ರಗಳು ಪಾಪಭೀರುಗಳಾಗಿದ್ದು ತಮ್ಮ ತಮ್ಮ ಕೌಟುಂಬಿಕ, ಸಾಮಾಜಿಕ ಚೌಕಟ್ಟಿನೊಳಗಿದ್ದುಕೊಂಡೇ ಧರ್ಮ ಸಾಧನೆಗೆ ತುಡಿಯುತ್ತವೆ. ಎರಡೂ ಕೃತಿಗಳ ಮೂಲ ಆಶಯ ಧರ್ಮ ಜಾಗೃತಿಯೇ ಆಗಿದ್ದರೂ ಇಲ್ಲಿಯ ಜನವರ್ಗದ ಗುಣಧರ್ಮ, ವೃತ್ತಿಗಳು ವಿಭಿನ್ನವಾಗಿದ್ದು ಅವು ಇಡಿಯಾಗಿ ಸಮಾಜದ ಎಲ್ಲಾ ಮುಖಗಳ ದರ್ಶನ ಮಾಡಿಕೊಡುವಲ್ಲಿ ಸಫಲವಾಗಿರುವುದನ್ನು ಸಮೀಕ್ಷಿಸಲಾಗಿದೆ.

ಹೀಗೆ ರಾಜಪ್ರಭುತ್ವ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ನೆಲೆಗಳಲ್ಲಿ ಚಾಚಿಕೊಂಡಿರುವ ಸಾಮಾನ್ಯ ಜನಜೀವನವನ್ನು ನಾಲ್ಕು ಕೃತಿಗಳ ಮೂಲಕ ಇಲ್ಲಿ ಗುರುತಿಸಲಾಗಿದೆ; ತನ್ಮೂಲಕ ಪ್ರಸ್ತುತ ಪ್ರಬಂಧದಲ್ಲಿ ಸಾಮಾನ್ಯ ಮನುಷ್ಯನ ಪರಿಕಲ್ಪನೆಯ ಅಧ್ಯಯನ ವೃತ್ತ ಪೂರ್ಣಗೊಂಡಿದೆಯೆಂದು ಭಾವಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧದ ವಿಷಯವನ್ನು ಆಧುನಿಕಕ್ಕೆ ಪ್ರಸ್ತುತಗೊಳಿಸುವ ನಿಟ್ಟಿನಲ್ಲಿಯೂ ಗಮನ ಹರಿಸುವುದು ಉಚಿತವೆನಿಸುತ್ತದೆ. ಆಧುನಿಕ ಸಮಾಜ ಮತ್ತು ಆ ಸಮಾಜವನ್ನು ಪ್ರತಿಫಲಿಸುವ ಸಾಹಿತ್ಯ ಎರಡನ್ನೂ ಪರಿಗಣಿಸಿ ಕೆಲವು ಮಾತುಗಳನ್ನು ಹೇಳಬಹುದಾಗಿದೆ.

ರಾಜಪ್ರಭುತ್ವದ ಲೋಪದೋಷಗಳು ವಸಾಹತು ಸಂದರ್ಭಕ್ಕೆ ಬರುವ ಹೊತ್ತಿಗೆ ಅಂಗೈರೇಖೆಯಷ್ಟು ಸ್ಪಷ್ಟವಾಗಿದ್ದವು. ಬ್ರಿಟಿಷ್ ಆಳ್ವಿಕೆಯೂ ಸೇರಿದಂತೆ ಹಿಂದೆಲ್ಲ ರಾಜಸತ್ತೆಯಡಿಯಲ್ಲಿ ಸಾಮಾನ್ಯ ಜನವರ್ಗ ಪಟ್ಟ ಹಿಂಸೆ, ಮೂಕರೋದನಗಳನ್ನು ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ವಸಾಹತು ಪರಿಸರವೇ ಸಹಾಯಕವಾಯಿತು. ಪಾಶ್ಚಾತ್ಯರಿಂದ ದೊರೆತ ಶಿಕ್ಷಣ, ವೈಚಾರಿಕ ತಿಳುವಳಿಕೆಗಳು ಜನಸಾಮಾನ್ಯರಿಗೆ ನೆರವಾದವು.

ರಾಜಪ್ರಭುತ್ವದಲ್ಲಿ ಎಷ್ಟೇ ಒಳ್ಳೆಯ ರಾಜನಿದ್ದರೂ ಜನಸಾಮಾನ್ಯರು ಗೌಣವಾಗಿರುವುದು ಇತಿಹಾಸದುದ್ದಕ್ಕೂ ಕಂಡುಬರುವ ಸತ್ಯ. ಅಂತೆಯೇ ಪ್ರಜಾಪ್ರಭುತ್ವ ಒಂದು ಮಾದರಿಯಂತೆ ನಮ್ಮನ್ನು ಆಕರ್ಷಿಸಿ ನಮ್ಮ ದೇಶದ ಆಡಳಿತಕ್ಕೆ ಅನ್ವಯ ಮಾಡಿಕೊಳ್ಳಲಾಯಿತು. ಆದರೂ ಸಾವಿರಾರು ವರ್ಷಗಳಿಂದ ಪ್ರತಿಷ್ಠಿತರ ಮನಸ್ಸನ್ನಾಳಿದ ಸಾಂಪ್ರದಾಯಿಕ ಗುಣಗಳು ಬೇಗ ಬದಲಾಗುವ ಸ್ಥಿತಿಯಲ್ಲಿರಲಿಲ್ಲ. ಅಂತೆಯೇ ಅಂಬೇಡ್ಕರ್, ಶಾಹುಮಹಾರಾಜ, ಗಾಂಧೀಜಿಯಂಥವರು ಮನುಷ್ಯ ವರ್ಗದ ಸಮಾನ ಪಾತಳಿಗೆ ಹಂಬಲಿಸಿ ವಿಧಾಯಕ ಯೋಜನೆಗಳೊಂದಿಗೆ ಹೋರಾಡಬೇಕಾಯಿತು. ಕರ್ನಾಟಕ ರಾಜ್ಯಕ್ಕೆ ದೇವರಾಜ ಅರಸ, ಹಾವನೂರರಂಥವರ ಕೊಡುಗೆ ಜನಸಾಮಾನ್ಯರ ವಿಷಯದಲ್ಲಿ ದೊಡ್ಡದಾಗಿಯೇ ಇದೆ. ಬಡವರಿಗೆ, ಹಿಂದುಳಿದವರಿಗೆ ದೊರೆತ ಸಂವಿಧಾನಾತ್ಮಕ ಅವಕಾಶಗಳು ಅವರನ್ನೆಷ್ಟೋ ಆರ್ಥಿಕವಾಗಿ ಮುಂಚೂಣಿಗೆ ತಂದಿವೆ.

ಈಗ ಜನರಲ್ಲಿ ತಿಳುವಳಿಕೆ, ಜಾಗೃತಿ ಎರಡೂ ಮೂಡಿವೆ. ಮದುವೆ ಮುಂಜಿವೆಗಳಲ್ಲಿ ಸಹಪಂಕ್ತಿಭೋಜನ ಸಾಮಾನ್ಯವಾಗಿದೆ. ಎಲ್ಲ ವರ್ಣದ ಮಕ್ಕಳೂ ಒಂದೇ ಸೂರಿನಡಿ ವಿದ್ಯೆ ಕಲಿಯುತ್ತಿದ್ದಾರೆ. ವಾಹನ, ಕಛೇರಿಗಳಲ್ಲಿ ಸ್ಪೃಶ್ಯ ಅಸ್ಪೃಶ್ಯವೆನ್ನುವ ಭೇದವಿಲ್ಲ. ಜನಪದ ಕಲಾವಿದರನ್ನು ಸರಕಾರ ಗುರುತಿಸಿ ಆದರಿಸುತ್ತಿದೆ. ಸಮುದಾಯದ ಜಾಗೃತಿ ಸಮ್ಮೇಳನಗಳು ಇತ್ತೀಚಿನ ಬೆಳವಣಿಗೆಗಳು.

ಅವೆಲ್ಲ ತಮಗಾಗಿರುವ ಅನ್ಯಾಯವನ್ನು ಬಹಿರಂಗವಾಗಿಯೇ ಪ್ರತಿಭಟಿಸಿ ಸಾಮಾಜಿಕ ನ್ಯಾಯಕ್ಕಾಗಿ ಹಂಬಲಿಸುತ್ತಿವೆ.

ಇಂದು ಜೀವವನ್ನು ಪಣಕ್ಕಿಟ್ಟು ಹೋರಾಡುವ ಸೈನಿಕರನ್ನು ಉಚ್ಚ ರೀತಿಯಲ್ಲಿ ಗೌರವಿಸಲಾಗುತ್ತಿದೆ. ಕುರುಕ್ಷೇತ್ರ ಯುದ್ಧ ನಮಗೊಂದು ಪಾಠ. ಅಲ್ಲಿಯ ಅನಾಹುತಗಳನ್ನು ನೋಡಿದರೆ ಜನ ಸಾಮಾನ್ಯರನ್ನು ಬಲಿತೆಗೆದುಕೊಳ್ಳುವ ಯುದ್ಧ ಯಾಕೆ ಬೇಕು ಅನ್ನಿಸುತ್ತದೆ. ಆದರೆ ಸ್ವಾತ್ಮ ರಕ್ಷಣೆಗೆ ಅದು ಅನಿವಾರ್ಯವೂ ಆಗಿದೆ.

ವಸಾಹತು ಸಂದರ್ಭ ಕನ್ನಡ ಸಾಹಿತ್ಯದ ಪಾಲಿಗೆ ಪಾಠ, ತಿಳುವಳಿಕೆ ಎರಡೂ ಆಗಿ ಹೊಸ ರೂಪ ಪಡೆಯಿತು. ಚೋಮನ ದುಡಿ, ಭಾರತೀಪುರ, ವಂಶವೃಕ್ಷದಂಥ ಕಾದಂಬರಿಗಳು ವರ್ಗ-ವರ್ಣಗಳನ್ನು ಬಯಲಿಗೆ ತಂದು ಸಾಮಾಜಿಕ ವಿಷಮತೆಗಳನ್ನು ಚರ್ಚಿಸಿದವು. ಬಂಡಾಯ, ದಲಿತ ಸಾಹಿತ್ಯ ನಿರ್ಮಿತಿಗಳು ಹೊಸ ಭರವಸೆಯನ್ನು ಮೂಡಿಸಿವೆ. ೧೨ನೆಯ ಶತಮಾನದ ವಚನ ಸಾಹಿತ್ಯದ ನಂತರ ಕಾವ್ಯ, ಕಥೆ, ಕಾದಂಬರಿಗಳ ಮುಖಾಂತರ ಅಂಥದೇ ಸಾಹಿತ್ಯವನ್ನು ಹೊಸಗನ್ನಡ ಕಾಲ ವಿಪುಲವಾಗಿಯೇ ಸೃಷ್ಟಿಸುತ್ತಿದೆ.

ನಮ್ಮೆದುರಿನಲ್ಲೀಗ ಸಾಹಿತ್ಯ ಜಾಗೃತಿಯಿದೆ; ರಾಜಕೀಯ ಸಂಕಲ್ಪವಿದೆ. ಇವೆಲ್ಲ ಇದ್ದರೂ ಜಾತಿ, ಅಧಿಕಾರ, ಹಣ ಬಲಗಳು ವ್ಯವಸ್ಥೆಯನ್ನು ಆಳುತ್ತಿವೆ. ಸಾಮಾನ್ಯರು ಪ್ರಮುಖ ವಾಹಿನಿಗೆ ಬರಲು ಪ್ರಧಾನವಾಗಿ ರಾಜಕೀಯ ಸಂಕಲ್ಪವೇ ಬೇಕೆನಿಸುತ್ತದೆ. ಆದರೆ ರಾಜಕೀಯ ಸಂಕಲ್ಪ ಮಾತ್ರ ಮನುಷ್ಯನನ್ನು ಪೂರ್ಣ ಬದಲಿಸಲಾರದು. ನಮ್ಮೊಳಗಿನ ಮನಸ್ಸು ಬದಲಾಗಬೇಕು. ಇಂಥದೊಂದು ಧನಾತ್ಮಕ ಪ್ರಕ್ರಿಯೆಯಲ್ಲಿ ಸಾಹಿತ್ಯವೊಂದು ಪೂರಕ ಸಾಮಗ್ರಿಯಾಗಬಲ್ಲದು.

'ಸಾಮಾನ್ಯ ಮನುಷ್ಯ' ಪರಿಕಲ್ಪನೆಯನ್ನಿಟ್ಟುಕೊಂಡ ಈ ರೀತಿಯ ಅಧ್ಯಯನ ಕನ್ನಡ ಸಾಹಿತ್ಯದಲ್ಲಿ ಹೊಸದಾದುದು. ಅಧ್ಯಯನ ಸಂದರ್ಭದಲ್ಲಿ ವಿಷಯದ ವಿಸ್ತಾರವನ್ನು ನಾನು ಗಮನಿಸಿದಂತೆ ಇನ್ನೂ ಅನೇಕ ಅಧ್ಯಯನಗಳಿಗೆ ಇಲ್ಲಿ ಅವಕಾಶವಿದೆ. ಆಧುನಿಕ ಕನ್ನಡ ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ, ಕನ್ನಡ ಸಾಹಿತ್ಯದಲ್ಲಿ ಪ್ರಭುತ್ವ ಮತ್ತು ಸಾಮಾನ್ಯ ಮನುಷ್ಯ, ಕನ್ನಡ ಸಾಹಿತ್ಯದಲ್ಲಿ ಧರ್ಮ ಮತ್ತು ಸಾಮಾನ್ಯ ಮನುಷ್ಯ, ಕನ್ನಡ ಸಾಹಿತ್ಯದಲ್ಲಿ ಯುದ್ಧ ಮತ್ತು ಸಾಮಾನ್ಯ ಮನುಷ್ಯ - ಹೀಗೆ ಇನ್ನೂ ಅನೇಕ ಅಧ್ಯಯನಗಳಿಗೆ ನನ್ನ ಅಧ್ಯಯನ ದಿಕ್ಸೂಚಿಯಾಗಲಿದೆ ಎಂದು ಭಾವಿಸಲಾಗಿದೆ.

ಅನುಬಂಧಗಳು

ಅನುಬಂಧ – ೧

ಪ್ರಾಥಮಿಕ ಆಕರಗಳು

೧. ಶಿವಕೋಟ್ಯಾಚಾರ್ಯ ವಿರಚಿತ ವಡ್ಡಾರಾಧನೆ(೧೯೭೦)
ಸಂ. ಡಾ.ಡಿ.ಎಲ್. ನರಸಿಂಹಾಚಾರ್
ಪ್ರ. ಶಾರದಾ ಮಂದಿರ, ರಾಮಯ್ಯರ್ ರಸ್ತೆ,
ಮೈಸೂರು – ೪.

೨. ನಯಸೇನ ಸಂಪುಟ – ಧರ್ಮಾಮೃತ (೨೦೦೬)
ಸಂ. ಡಾ.ಎಸ್.ಪಿ. ಪಾಟೀಲ
ಪ್ರ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ,

೩. ರಾಘವಾಂಕ ವಿರಚಿತ ಹರಿಶ್ಚಂದ್ರ ಕಾವ್ಯ (೧೯೮೫)
ಸಂ. ವಾಯ್. ನಾಗೇಶಶಾಸ್ತ್ರಿಗಳು
ಎಂ.ಜಿ. ವೆಂಕಟೇಶಯ್ಯನವರು
ಪ್ರ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು – ೨.

೪. ಕುಮಾರವ್ಯಾಸ ಮಹಾಕವಿಯ ಕರ್ನಾಟ ಭಾರತ ಕಥಾ ಮಂಜರಿ(೧೯೭೪)
ಸಂ. ಕುವೆಂಪು
ಮಾಸ್ತಿ ವೆಂಕಟೇಶ್ ಅಯ್ಯಂಗಾರ್
ಪ್ರ. ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ
ಮೈಸೂರು.

ಅನುಬಂಧ – ೨

ಪೂರಕ ಆಕರಗಳು

೧. ಕನ್ನಡ ಮಹಾಭಾರತ ಉದ್ಯೋಗ ಪರ್ವ ಸಂಗ್ರಹ (೨೦೦೮)
ಸಂ. ತ.ಸು. ಶಾಮರಾಯ
ಪ್ರ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ
ಮೈಸೂರು – ೨.

೨. ಕನ್ನಡ ಸಾಹಿತ್ಯದಲ್ಲಿ ಕರ್ಣ (೧೯೯೯)
ಡಾ. ವ್ಹಿ.ಎಸ್. ಮಾಳಿ
ಪ್ರ. ಸಿರಿಗನ್ನಡ ಪ್ರಕಾಶನ
ಹಾರೂಗೇರಿ.

೩. ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು (೧೯೯೩)
ಪ್ರ. ಸಂ. ಬರಗೂರು ರಾಮಚಂದ್ರಪ್ಪ
ಪ್ರ. ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು – ೨.

೪. ಕನ್ನಡ ಸಾಹಿತ್ಯದಲ್ಲಿ ಮನುಷ್ಯನ ಪರಿಕಲ್ಪನೆ (೧೯೯೩)
ಪ್ರ. ಸಂ. ಬರಗೂರು ರಾಮಚಂದ್ರಪ್ಪ
ಪ್ರ. ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು – ೨.

೫. ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ (೧೯೯೩)
ಪ್ರ. ಸಂ. ಬರಗೂರು ರಾಮಚಂದ್ರಪ್ಪ
ಪ್ರ. ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು – ೨.

೬. ಕರ್ಣಾಟಕ ಭಾರತ ಕಥಾಮಂಜರಿ – ಗದ್ಯಾನುವಾದ (೨೦೦೭)
ಎಲ್. ಗುಂಡಪ್ಪ
ಹೇಮಂತ ಸಾಹಿತ್ಯ
ರಾಜಾಜಿನಗರ ಬೆಂಗಳೂರು – ೧೦.

೭. ಕಾವ್ಯ ವಿಹಾರ
ಕುವೆಂಪು
ಪ್ರ. ಉದಯ ರವಿ ಪ್ರಕಾಶನ
ಮೈಸೂರು.

೮. ಕುಮಾರವ್ಯಾಸ (೧೯೩೯)
ಎಸ್. ವ್ಹಿ. ರಂಗಣ್ಣ
ಪ್ರ. ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ
ಮೈಸೂರು.

೯. ಕುಮಾರವ್ಯಾಸನ ಕನ್ನಡ ಭಾರತ ೨೦೦೪
ಸಂ. ಶ್ಯಾಮಸುಂದರ ಬಿದರಕುಂದಿ
ಪ್ರ. ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಬೆಂಗಳೂರು – ೦೨.

೧೦. ಕುಮಾರವ್ಯಾಸ ಪ್ರಶಸ್ತಿ (೨೦೧೩)
ಪ್ರ. ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು – ೧೮.

೧೧. ಕುಮಾರವ್ಯಾಸ ಮತ್ತು ಜಾನಪದ (೧೯೯೭)
ಪ್ರೊ. ಎಮ್.ಆರ್. ಲಕ್ಷ್ಮೀದೇವಿ
ಪ್ರ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು.

೧೨. ಧರ್ಮಾಮೃತ : ಸಾಂಸ್ಕೃತಿಕ ಮುಖಾಮುಖಿ (೨೦೦೮)
ಸಂ. ಡಾ. ಬಿ.ಎಂ. ಪುಟ್ಟಯ್ಯ
ಪ್ರ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ.

೧೩. ನಯಸೇನ ಮತ್ತು ಅವನ ಕೃತಿಗಳು (೧೯೭೮)
ಡಾ. ಬಿ.ವ್ಹಿ. ಮಲ್ಲಾಪುರ
ಪ್ರ. ಕನ್ನಡ ಅಧ್ಯಯನ ಪೀಠ
ಕನ್ನಡ ಪುಸ್ತಕ ನಿರ್ದೇಶನಾಲಯ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ – ೩.

೧೪. ನಯಸೇನ ವಿರಚಿತ ಧರ್ಮಾಮೃತಂ (೧೯೭೭)
ಗದ್ಯಾನುವಾದ : ಕೆ. ವೆಂಕಟರಾಮಪ್ಪ
ಪ್ರ. ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು – ೧೮

೧೫. ಪುರಾಣನಾಮ ಚೂಡಾಮಣಿ (೧೯೭೭)
ಬೆನಗಲ್ ರಾಮರಾವ್, ಪಾನ್ಯಂ ಸುಂದರಶಾಸ್ತ್ರಿ
ಪ್ರ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ
ಮೈಸೂರು.

೧೬. ಪ್ರಾಚೀನ ಭಾರತದಲ್ಲಿ ಶೂದ್ರರು (೨೦೦೯)
ಮೂಲ : ಆರ್.ಎಸ್. ಶರ್ಮಾ
ಅನು : ಡಾ. ಜಿ. ಶ್ರೀನಿವಾಸಮೂರ್ತಿ
ಡಾ. ಆರ್. ಶೋಭಾ
ಡಾ. ಎಸ್. ಗುರುದತ್ತ
ಡಾ. ಜಿ. ರಾಮಕೃಷ್ಣ
ಪ್ರ. ನವಕರ್ನಾಟಕ ಪ್ರಕಾಶನ

೧೭. ಭಾರತೀಯ ಸಂಸ್ಕೃತಿ ದರ್ಶನ (೧೯೭೨)
ಸಂ. ಅನಕೃ
ಪ್ರ. ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ
ಬೆಂಗಳೂರು.

೧೮. ಮಹಾ ಕವಿ ರಾಘವಾಂಕ (೧೯೬೮)
ಡಾ. ಆರ್.ಸಿ. ಹಿರೇಮಠ
ಪ್ರ. ಶಾರದಾ ಮಂದಿರ ರಾಮಯ್ಯರ್ ರಸ್ತೆ,
ಮೈಸೂರು – ೪.

೧೯. ರಾಘವಾಂಕನ ಹರಿಶ್ಚಂದ್ರ ಚರಿತೆ – ಗದ್ಯಾನುವಾದ (೨೦೧೦)
ಅನು: ಎನ್. ರಂಗನಾಥ ಶರ್ಮಾ
ಪ್ರ. ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು – ೧೮.

೨೦. ವಚನ ಭಾರತ (೧೯೭೧)
ಎ.ಆರ್. ಕೃಷ್ಣಶಾಸ್ತ್ರೀ
ಪ್ರ. ಶಾರದಾ ಮಂದಿರ
ಮೈಸೂರು – ೪.

೨೧. ವಡ್ಡಾರಾಧನೆ ಕಥಾಲೋಕ (೧೯೭೧)
ಎಲ್. ಆರ್. ಅನಂತರಾಮಯ್ಯ
ಪ್ರ. ಡಿ.ವ್ಹಿ.ಕೆ. ಮೂರ್ತಿ
ಮೈಸೂರು.

೨೨. ವಡ್ಡಾರಾಧನೆ ಜಾನಪದೀಯ ಅಧ್ಯಯನ (೨೦೦೯)
ಡಾ.ವ್ಹಿ.ಎಲ್. ಪಾಟೀಲ
ಪ್ರ. ಕೀರ್ತಿ ಪ್ರಕಾಶನ ಧಾರವಾಡ–೦೩.

೨೩. ವಡ್ಡಾರಾಧನೆ ಮತ್ತು ಜಾನಪದ (೧೯೯೭)
ಡಾ. ಹಂಪ ನಾಗರಾಜಯ್ಯ
ಪ್ರ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು.

೨೪. ವೇದಗಳಲ್ಲಿ ಜನಸಾಮಾನ್ಯರು (೨೦೦೯)
ಬಿ.ವ್ಹಿ. ವೀರಭದ್ರಪ್ಪ
ಪ್ರ. ನವಕರ್ನಾಟಕ ಪ್ರಕಾಶನ.

೨೫. ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ (೧೯೭೭)
ಸಂ. ಜಿ.ಎಸ್. ಶಿವರುದ್ರಪ್ಪ
ಪ್ರ. ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು.

೨೬. ಹದಿನೆಂಟು ಜಾತಿಗಳು (೨೦೧೧)
ವಿಜಯಶ್ರೀ ಇಟ್ಟಣ್ಣವರ
ಪ್ರ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ
ಹಂಪಿ.

೨೭. ಹರಿಶ್ಚಂದ್ರ ಕಾವ್ಯ ಸಂಗ್ರಹ (೧೯೩೮)
ಸಂ. ಟಿ.ಎಸ್. ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರೀ,
ಪ್ರ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.

೨೮. ಹರಿಹರ – ರಾಘವಾಂಕ ಮತ್ತು ಜಾನಪದ
ಪ್ರೊ. ಶಿವರಾಮಯ್ಯ
ಪ್ರ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು – ೨.